ಕರ್ಮವೀರ



ದೀಪಾವಳಿ ಸಂಚಿಕೆ
೧೯೫೦

-IDEAL-


ದಿ ತ್ರಿಲೋಕ ಸ್ಟೀಲ ಟ್ರಂಕ ವರ್ಕ್ಸ

ಮುಖ್ಯ ಕಚೇರಿ:
೨೨, ಬೇಕರ ಸ್ಟ್ರೀಟ
ಮದ್ರಾಸ
ತಂತಿ: "ತ್ರಿಲೋಕವರ್"
ಫೋನ: "೪೭೨೨"




ಶಾಖಾ ಕಚೇರಿ:
ಬಂದರ, ಮಂಗಳೂರ
(ದಕ್ಷಿಣ ಕನ್ನಡ)

ಭದ್ರವಾದ ಉಕ್ಕಿನ ಟ್ರಂಕು ಇತ್ಯಾದಿಗಳ ತಯಾರಕರು







ತಾಳಿಕೆಯಲ್ಲಿ ಮಿಗಿಲಾದ ವಿಶ್ವಾಸಾರ್ಹವಾದ ಶ್ರೇಷ್ಠ ತಯಾರಿಕೆಗಳು

ಶಿವಪೂರ ಬ್ರದರ್ಸ

ಪುಸ್ತಕ ಮತ್ತು ಸ್ಟೇಶನರಿ ವ್ಯಾಪಾರಿಗಳು

ಧಾರವಾಡ

ನಮ್ಮಲ್ಲಿ ಕೆಳಗೆ ಕಾಣಿಸಿದ ಎಲ್ಲ ಪುಸ್ತಕಗಳೂ ದೊರೆಯುತ್ತವೆ. ಎಲ್ಲ ಪುಸ್ತಕಗಳಿಗೂ ಆರ್ಡರ ಕೊಟ್ಟಲ್ಲಿ ವ್ಹಿ. ಪಿ. ಫ್ರೀ.

೧ ಸಾಹಿತ್ಯಾಂಕ (ನಮ್ಮ ಮುಖ್ಯ ಮಾರಾಟಿಕೆಯಲ್ಲಿ)
೨ ಪ್ರಾಂತವಾದ (,,)
೩ ಪ್ರಾಣಾಂಜಲಿ (,,)
೪ ಹರಿದ ಸೆರಗು
೫ ಕನ್ನಡ ತಾಯ್ನೋಟ
೬ ಬ್ರಹ್ಮಚರ್ಯವೇ ಜೀವನ
೭ ನನ್ನ ಸ್ವಾಮಿ
೮ ಅಖಂಡ ಕರ್ನಾಟಕ
೯ ರಾಜಾ ರಾಣಿ ದೇಖೋ
೧೦ ರಾಮಣ್ಣ ಮಾಸ್ತರ
೧೧ ಕಾಮಾಕ್ಷಿ
೧೨ ಹಾಲಾಹಲ
೧೩ ಕರ್ನಾಟಕ ಸಮರ ಭೇರಿ (ಅಚ್ಚಿನಲ್ಲಿ)

ಇನ್ನೂ ಅನೇಕ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಪತ್ರವ್ಯವಹಾರ ಮಾಡಿರಿ. ೨೫% ಅಡ್ವಾನ್ಸ ಕಳಿಸಬೇಕು.

ತಮಗೆ ಅತ್ಯುತ್ತಮವಾದ
ಫ್ಯಾನ್ಸಿ ಮತ್ತು ಖಾತ್ರಿಲಾಯಕ

ಜವಳಿ ಬೇಕಾದಲ್ಲಿ

ನಮ್ಮಲ್ಲಿ ಬಂದು ಖಾತ್ರಿ ಮಾಡಿಕೊಳ್ಳಿರಿ

ಇದೀಗ ತರಿಸಿದ ಬನಾರಸ ಭರಜರಿ ಪೀತಾಂಬರವ ಬ್ಲಾವುಜ ಪೀಸಗಳು ಇವಲ್ಲದೆ ಪ್ರಿಂಟ-ವಾಯಿಲ ಪತ್ತಲಗಳು ಎಲ್ಲ ತರಹದ ಶೀರಿ ಖಣಗಳು ಯೋಗ್ಯ ಬೆಲೆಗೆ ಸಿಗುತ್ತವೆ.

ಕೇಶವಸಾ ಹಬೀಬ
ಮತ್ತು
ಸ್ವಾಮೀಸಾ ಮ್ಹೇರವಾಡೆ
ಜವಳೀ ವ್ಯಾಪಾರಿಗಳು
ಬೆಳಗಾಂವಗಲ್ಲಿ .... ಹುಬ್ಬಳ್ಳಿ

ಶುಭ ದೀಪಾವಳಿಗೆ ಶುಭ್ರದಂತಾವಳಿಗಳು

ಥೈಮೋನೀಮ





INDIA LABORATORIES
BANGALORE

ಹಲ್ಲುಪುಡಿ
ಮತ್ತು
ದಂತಮಂಜನ



" ಕರ್ನಾಟಕ ವೈಭವ ಪ್ರಕಾಶ "

ಅಖಿಲ ಕರ್ನಾಟಕ

ಡೈರೆಕ್ಟರಿ

ಯ ಪ್ರಕಾಶಕರ ಶುಭಾಶಯಗಳೊಡನೆ

" ಕರ್ಮವೀರ " ದ ಓದುಗರಿಗೆ

ದೀಪಾವಳಿಯ

ಅಭಿನಂದನೆಗಳು

ಕರ್ನಾಟಕದ ಸಕಲ ಉದ್ಯೋಗಸ್ಥರ ಪತ್ರೆಯನ್ನು ವರ್ಗೀಕರಿಸಿ ಈ ಡೈರೆಕ್ಟರಿಯಲ್ಲಿ ಸೇರಿಸಲಿದ್ದು, ನಿಮ್ಮ ವಿವರಗಳನ್ನು ಕಳಿಸಿಕೊಡಬೇಕಾಗಿ ಕೋರಲಾಗಿದೆ. ಈ ಬಗ್ಗೆ ಯಾವದೇ ಕಾರಣದಿಂದ ಹಣ ತೆರಬೇಕಾಗಿಲ್ಲ.


ಪ್ರಕಾಶಕರು :

DIXIT PRINTING PRESS LTD., DAVANGERE CITY

ದೀಕ್ಷಿತ ಪ್ರಿಂಟಿಂಗ ಪ್ರೆಸ್, ದಾವಣಗೆರೆ ಸಿಟಿ

INDEX TO ADVERTISERS

ಪರಿವಿಡಿ



ನಮ್ಮ ಎಲ್ಲ
ಗ್ರಾಹಕರಿಗೂ
ಹಿತೈಷಿಗಳಿಗೂ
ದೀಪಾವಳಿಯ
卐 ಶುಭ 卐
ಆಕಾಂಕ್ಷೆಗಳು

ಒಂದೇ ವರುಷದಲ್ಲಿ ಅಪೂರ್ವ ಜನಾನುರಾಗ ಪಡೆದಿರುವ

ಶ್ರೀಕೃಷ್ಣ ಭವನ - ಹುಬ್ಬಳ್ಳಿ


ತಾರಿನ ಪತ್ತೆ: "ಭವನ"

ಆದರ್ಶ ಲಾಜಿಂಗ
ಬೋರ್ಡಿಂಗ್ ಹೌಸ್

MACHINE TOOLS

Quality LATHES *for*

IMMEDIATE DELIVERY



CENTRE LATHES

SHIMOGA No. 1 S. S. & S. C. $9\frac{1}{4}$ Centre × 6′ gap bed capacities 36″ admits between centre $18\frac{1}{2}''$ swing over bed $30\frac{1}{2}''$ swing over gap. Spindle nose thread size $2\frac{15}{16}''$ dia threads per inch on the spindle 6. Spindle speeds R. P. M. 22 to 430 H. P. required 1·5.

SHIMOGA No. 2 S. S. & S. C. $9\frac{1}{4}''$ Centre × 8′–10″ gap bed capacities: 60″ admits between centre $18\frac{1}{2}''$ swing over bed $30\frac{1}{2}''$ swing over gap. Spindle nose thread size $2\frac{15}{16}''$ dia threads per inch on the spindle 6. Spindle speeds R. P. M. 22 to 430 H.P. required 1·5.

Can Supply Both Belt & Electric Drive.

THE MYSORE KIRLOSKAR LTD.

HARIHAR (MYSORE STATE)

Distributors: **M/s. BATLIBOI & Co.**

FORBUS STREET, FORT, ***BOMBAY***



ಪ್ರಣಯ-ಕೋಪ

—ಚಿತ್ರಕಾರರು : ನಾರಾಯಣ ಸಂಗಮ

ಸಂಸ್ಥಾಪಕರು : ರಂ. ರಾ. ದಿವಾಕರ ★ ದೀಪಾವಳಿ ಸಂಚಿಕೆ ೧೯೫೦ ★ ಸಂಪಾದಕರು : ಹ. ರಾ. ಪುರೋಹಿತ

ನಮ್ಮ ನುಡಿ

ಸ್ವಾತಂತ್ರ್ಯದ ಮೂರನೆಯ ದೀಪಾವಳಿಯ ಸಂದರ್ಭದಲ್ಲಿ ಓದುಗರೆಲ್ಲರಿಗೂ ಇದೋ ನಮ್ಮ ಶುಭಾಶಯಗಳು! ಮತ್ತು ಇದೋ ನಮ್ಮ ದೀವಳಿಗೆಯ ಪ್ರೀತಿಯ ಕಾಣಿಕೆ.

'ಕರ್ಮವೀರ' ಕೊಡುತ್ತಿರುವ ಮೂರನೆಯ ದೀಪಾವಳಿ ಸಂಚಿಕೆಯಿದು. ಇಂಥ ಸಂಚಿಕೆಗಳನ್ನು ಹೊರಡಿಸುವಲ್ಲಿ ಕೈಪಳಗಿದಂತೆ, ಅನುಭವ ಹೆಚ್ಚಿದಂತೆ ಓದುಗರಿಗೆ ಹೆಚ್ಚು ಹೆಚ್ಚು ಸಂತೋಷವನ್ನು ಒದಗಿಸುವ ನಮ್ಮ ಸಾಮರ್ಥ್ಯವೂ ಹೆಚ್ಚುವದೆಂಬ ನಮ್ಮ ನಂಬಿಕೆಗೆ ಈ ಸಂಚಿಕೆಯು ಪ್ರಮಾಣವನ್ನೊದಗಿಸಿದೆಯೆಂದು ನಂಬಿದ್ದೇವೆ. ನಮ್ಮ ದೀಪಾವಳಿ ಸಂಚಿಕೆಗಳ ಅಂತರ್-ಬಾಹ್ಯ ಸೌಂದರ್ಯಗಳು ಉತ್ತರೋತ್ತರ ಅಭಿವೃದ್ಧಿ ಹೊಂದುತ್ತ ಬಂದು ಈ ಸಂಚಿಕೆ ಹಿಂದಿನ ಎರಡಕ್ಕಿಂತಲೂ ಆಕರ್ಷಕವಾಗಿ, ಪರಿಪುಷ್ಟವಾಗಿ ಓದುಗರ ಕೈಸೇರುತ್ತಿದೆ. ಓದುಗರ ಬೆಂಬಲ ಯಥಾವತ್ತಾಗಿ ಸಿಕ್ಕುತ್ತ ನಡೆದಂತೆ ಮುಂದಿನ ಬಾರಿ ಇದಕ್ಕೂ ಮಿಗಿಲಾದ ಉಡುಗರೆಯನ್ನು ಕೊಡುವ ಭರವಸೆಯನ್ನೀಯುತ್ತೇವೆ.

★

ನಮ್ಮ ನಾಡಿನ ಸ್ಥಿತಿ ಸಮಾಧಾನಕರವಾಗಿದೆಯೆಂದು ಹೇಳಬರುವುದಿಲ್ಲ. ಉಳಿದ ಸಮಸ್ಯೆಗಳೊಡನೆ ಅನ್ನ ಬಟ್ಟೆಗಳ ಕೊರತೆಯೂ ಬಾಧಿಸುತ್ತಿದೆ. ತನ್ಮೂಲಕ ಈಚಿಗಿನ ದೀಪಾವಳಿಗಳು ಕೆಲ ವರ್ಷ ಹಿಂದಿನವುಗಳಷ್ಟು ಭೋಗವಿಲಾಸಕ್ಕೆ ಎಡೆಗೊಟ್ಟಿಲ್ಲವೆಂಬುದು ನಿಜ. ಧರ್ಮಾವಿರುದ್ಧವಾದ ಮಿತಭೋಗಗಳು ಸಂಸಾರಿಗಳಿಗೆ ನಿಷಿದ್ಧವಲ್ಲವೆಂಬುದೂ ನಿಜ. ಆದರೆ ದೇಶದ ಪರಿಸ್ಥಿತಿಯನ್ನು ಮನಗಂಡು, ಭವಿಷ್ಯತ್ತಿನಲ್ಲಿ ವಿಶ್ವಾಸವಿಟ್ಟು, ಈ ಕಂಟಕದಿಂದ ಪಾರಾಗಲು ದೇಶಕ್ಕೆ ನೆರವಾಗುವುದು ನಮ್ಮೆಲ್ಲರ ಕರ್ತವ್ಯ. ಜನ್ಮಾಂತರದ ಸುಖಕ್ಕಾಗಿ ಈಗ ತ್ಯಾಗ ಮಾಡುವ ಪರಂಪರೆಯುಳ್ಳ ಈ ದೇಶಕ್ಕೆ ಇನ್ನು ಕೆಲಕಾಲದನಂತರ—ಪ್ರಯತ್ನವೊಂದಿದ್ದರೆ— ಲಭ್ಯವಾಗುವ ಸುಖಕ್ಕಾಗಿ ಈಗ ತೊಂದರೆಗಳನ್ನು ಸಹಿಸುವುದು ಅಸಾಧ್ಯವೇ?

ಮೇಲಾಗಿ ಸುಖವೆಂದರೆ ಕೇವಲ ಭಕ್ಷ್ಯ ಭೋಜ್ಯ ವಸ್ತ್ರಾಭರಣಗಳಿಂದ ಮಾತ್ರ ಲಭ್ಯವಾಗುವ ವಸ್ತುವಲ್ಲ. ಮನಸ್ಸು ಸಂತೋಷಗೊಂಡಿದ್ದರೆ ಜೀವಧಾರಣದ ಪೂರ್ತಿ ಉಳಿದ ದೈಹಿಕ ಉಪಚಾರಗಳು ದೊರೆತರೂ ಏನೂ ಕುಂದೆನಿಸುವುದಿಲ್ಲ. ಆ ಬಗೆಯ ಮನೋರಂಜನೆಗೆ ಸಾಧನವಾಗಿ ಈ ಸಂಚಿಕೆ ಉಳಿದೆಲ್ಲ ಕೊರತೆಗಳನ್ನು ಮರೆಸುವಂತಾಗಲಿ!

★

ಇನ್ನುಳಿದುದು ಧನ್ಯವಾದ ಸಮರ್ಪಣೆಯ ಕಾರ್ಯವೊಂದೇ. ಈ ಸಂಚಿಕೆಗಾಗಿ ಲೇಖಗಳನ್ನೂ ಚಿತ್ರಗಳನ್ನೂ ಒದಗಿಸಿದ ಲೇಖಕರನ್ನು ಮತ್ತು ಕಲಾವಿದರನ್ನು ಮೊದಲು ಅಭಿನಂದಿಸುತ್ತೇವೆ. ಹಾಗೆಯೇ ನಾವೇ ಬರೆದು ತರಿಸಿಕೊಂಡ ಹಾಗು ಲೇಖಕರು ಸ್ವತಃ ಕಳಿಸಿದ ಅನೇಕ ಉತ್ತಮ ಲೇಖಗಳೂ ಕವಿತೆಗಳೂ ಚಿತ್ರಗಳೂ ಸ್ಥಳಾಭಾವದಿಂದ, ಪುಟ ಹೆಚ್ಚಿಸಿದ್ದರೂ ಉಳಿದು ಹೋದುದಕ್ಕಾಗಿ ನಾವು ಆ ಎಲ್ಲ ಮಹನೀಯರ ಕ್ಷಮೆ ಕೇಳುತ್ತೇವೆ. ಅದೇ ಪ್ರಕಾರ ಈ ಸಂಚಿಕೆಯಲ್ಲಿ ಜಾಹಿರಾತುಗಳನ್ನಿತ್ತ ಮಹನೀಯರಿಗೂ ಪಡಿಯಚ್ಚುಗಳನ್ನೊದಗಿಸಿದ ಧಾರವಾಡದ ಶ್ರೀನಿವಾಸ ಕಂಪನಿ, ಹುಬ್ಬಳ್ಳಿಯ ಐಡಿಯಲ್ ಫೋಟೋ ಝಿಂಕೊ ವರ್ಕ್ಸ್, ಮುಂಬಯಿಯ ವಾಗಳೆ ಕಂಪನಿ ಇವರಿಗೂ ಇದನ್ನು ಸರ್ವಾಂಗಸುಂದರವಾಗಿ ಮಾಡಲು ಹಗಲಿರುಳು ದುಡಿದ ನಮ್ಮ ಸಹಕಾರಿಗಳಿಗೂ ಮುದ್ರಣ ಹಾಗು ಇತರ ಶಾಖೆಗಳ ಕಾರ್ಯಕರ್ತರಿಗೂ ನಮ್ಮ ಧನ್ಯವಾದಗಳು ಸಲ್ಲಬೇಕಾಗಿವೆ.

ಮುಂದಿನ ದೀಪಾವಳಿಯೊಳಗೆ ದೇಶದಲ್ಲಿ ಸುಭಿಕ್ಷೆ ಹೆಚ್ಚಿ ಇನ್ನೂ ಹೆಚ್ಚಿನ ಸಂತೋಷದೊಡನೆ ಓದುಗರನ್ನು ಸಮೀಪಿಸಲು ಅವಕಾಶವಾಗಲೆಂದು ಹಾರೈಸುತ್ತೇವೆ.

ಮಿಂಚುಹುಳ

೧

ಬೇಸಗೆ ಬೆಚ್ಚನೆ ಬೇಯುತಿದೆ,
ಕೃತ್ತಿಕೆ ಕೆಚ್ಚನೆ ಕಾಯುತಿದೆ;
ಬಿಸಿಲ ಬೇಗೆ ಹಗಲೊಲೆಯಲ್ಲಿ,
ಮುಗಿಲಿನ ಹೊಗೆ ಕತ್ತಲೆಯಲ್ಲಿ.
ಗದರುವ ಗುಡುಗು,
ಮಿಂಚಿನ ಮುಡುಗು—
ಬರಿದೀ ಬೆಡಗು.
ಮರದಲಿ ಶಕುನದ ಕರ್ಕರೆಯೊ!
ಕೆಸರಲಿ ಕಪ್ಪೆಯ ಗೋಗರೆಯೊ!

೨

ಹರೆದುದೆನ್ನ ಹಗಲಂತಿಂತು,
ಇನ್ನಿತ್ತಲೆ ಕತ್ತಲೆ ಬಂತು—
ಮುಗುಳದ ಮೊಗಗಳ ಕಣ್ಣೆನಸು,
ಸಂದ ಸೊಲ್ಲುಗಳ ಕಿವಿಗನಸು!
ನೆನವಿನ ದಾವರ,
ಹೃದಯದ ಕಾವರ
ಹಿಸುಕಿದ ಗಾವರ
ದಿಂದ ಮನಂ ನಿಟ್ಟುಸುಬಂತೆ,
ಚಿಟ್ಟನಲ್ಲಿ ಚೀರುವ ಚಿಂತೆ!

೩

ಮನೆಯ ಮಗ್ಗುಲಲಿ ಮಾಮರದಿ
ಮಿಟಮಿಟಕುವ ಮಿರುಸಾಸಿರದಿ
ಮಿಂಚುಹುಳಂಗಳ ದೀವಳಿಯೇಂ!
ಹಣತೆಯ ಹಬ್ಬದ ಹಾವಳಿಯೇಂ!
ನೆರೆಯುವವೊಮ್ಮಿಗೆ
ತೆರೆಯುವವೊಮ್ಮಿಗೆ,
ಮರೆಯುವವೊಮ್ಮಿಗೆ;
ಬೆರೆವಲಿ ಹಿರಿವಲಿ ಬೇರಿಲ್ಲ—
ನಮಗೆ ಮಾತ್ರವಂತೇಕಲ್ಲ?

೪

ತಮುಗೊದವಿದ ತಂಬೆಳಕನ್ನ
ಹಚ್ಚನೆದೆಗೆ ಹಚ್ಚಿಸಿ, ನಿನ್ನ
ನೇಮದಿನಾನಂದದ ನೋಂಪಂ
ನಿನಗಾಂತಿವು, ಶಾಂತಿಯ ಸೊಂಪಂ
ಮೆರೆಯಿಸುವನ್ನ
ನಿನ್ನಯ ಮುನ್ನ
ಹುಳು ತನತನ್ನ
ಬತ್ತಿಯನೆತ್ತಿತು ಬತ್ತುವರಂ,
ತನ್ನಯ ಹೊತ್ತಿಗೆ ಹೊತ್ತುವರಂ.

೫

ಈ ಮಿಣುಕುಣಿತದ ರಂಗದಲಿ
ನೀನಿಹೆ ಮಂಗಲ ಸಂಗದಲಿ!
ಮೌನದ ಮಿನುಗಿಂದಿವು ನಿನ್ನ
ಸನ್ನಿಸಿದುವೆ ಸನ್ನಿಧಿಯನ್ನ?
ಈ ಹುಳದಂತೆ
ನಿನ್ನಯ ಮುಂತೆ
ನಾ ನಿಲುವಂತೆ
ದಕ್ಕಿಸು ನನ್ನೆದೆಗಕ್ಕರೆಯಾ
ಬಿಸುಪಿಲ್ಲದ ಮಿಸುಪನ್ನೆರೆಯಾ!

—ಗೋವಿಂದ ಪೈ

ನನ್ನ ದೀಪಾವಳಿ*

ನನ್ನ ಮನೆದೇಗುಲದಿ ನಿಂತ ನಂದಾದೀಪ
ಬೆಂಕಿಯದು ಎನ್ನಬೇಡಿ;
ನನ್ನಾತ್ಮಕಾಸಾರದಿಂದೆದ್ದ ಅರವಿಂದ
ಬೆಳಗುವುದು ಬಂದು ನೋಡಿ!

೨

ನನ್ನ ರಾಷ್ಟ್ರದ ಒಂದು ಸಣ್ಣ ಮಾದರಿಯೆಂದು
ನನ್ನ ಮನೆಗೆಂಬೆ ನಾನು!
ನನ್ನ ಮನೆನಡುಗಂಬ ನಾಡವರ ಪ್ರತಿಬಿಂಬ
ನನ್ನವನು ಪುಣ್ಯಭಾನು!

೩

ನನ್ನ ಸಾಮಾಜಿಕರ ಪ್ರತಿನಿಧಿಯೆ ನನ್ನ ವರ,
ಸೌಂದರ್ಯದೊಂದು ಮಾಟ,
ನನ್ನ ಮನೆಯರವಿಂದ ತಿಳಿವೆಳರನೆಸಳಿಂದ
ಬೀರುವುದೆ ಚೆಂದನೋಟ!

೪

ನಲ್ಲನೆಂಬೀ ನನ್ನ ದೀಪರೂಪದ ರನ್ನ
ವಿಶ್ವನಾಗರಿಕನಾಗಿ,
ಪೊಲ್ಲಮೆಯ ಕತ್ತಲೆಯ ಸುಟ್ಟು ಬೆಳಗುತ್ತಿರಲು
ಉರಿದೀಪವೇತಕಾಗಿ?

೫

ದೀಪಾವಳಿಯ ಹಬ್ಬ ನಾಡಿಗೊಂದೇ ರಾತ್ರಿ;
ಉರಿದಾರುವಂಥ ಹಣತಿ—
ನನಗೇಕೆ, ನಿತ್ಯವೂ ಆರದುರಿಸದೆ ಉರಿವ
ಮನೆದೀಪವಿರಲು, ಗೆಳತಿ?

—ಬಿ. ಎಚ್. ಶ್ರೀಧರ

* ಮುಖಪತ್ರದ ಚಿತ್ರನೋಡಿರಿ.

ಮಾನವನನ್ನು ಆಧ್ಯಾತ್ಮಿಕತೆಯತ್ತ ಒಯ್ಯುವ ಪ್ರೇರಕ ಶಕ್ತಿಗಳಾವುವು? ಅಧ್ಯಾತ್ಮದಲ್ಲಿ ಗುರುವಿನ ಸ್ಥಾನಮಾನಗಳೇನು, ಅವಶ್ಯಕತೆಯೆಷ್ಟರಮಟ್ಟಿಗೆ ಇದೆ ಎಂಬ ಮುಂತಾದ ವಿಷಯಗಳನ್ನು ಸೋದಾಹರಣವಾಗಿ ಈ ಭಾಷಣದಲ್ಲಿ ವಿವೇಚಿಸಲಾಗಿದೆ.

ಕರ್ನಾಟಕದ ಅನುಭಾವ ಮಾರ್ಗಗಳು

ಡಾ. ಆರ್. ಡಿ. ರಾನಡೆ, ಅಲಹಾಬಾದ



ಮನುಷ್ಯನನ್ನು ಅಧ್ಯಾತ್ಮದೆಡೆಗೆ ಎಳೆಯುವ ಪ್ರೇರಕ ಶಕ್ತಿಗಳು ಯಾವುವು? ಅಧ್ಯಾತ್ಮದಲ್ಲಿ ಗುರುವಿನ ಅಗತ್ಯ, ಅವನ ಕಾರ್ಯ, ಹಾಗೂ ಅವನ ಮಹತ್ವವೇನು? ಈ ಎರಡೇ ವಿಷಯಗಳನ್ನು ಚರ್ಚಿಸುವೆನು. ಈ ವಿಷಯ ವಿವೇಚನೆಗೆ ನಾನು ಕೆಲ ಪದ್ಯಗಳನ್ನು ಆಯ್ದು ಕೊಂಡಿರುವೆನು. ಅವುಗಳಲ್ಲಿ ಕಾಡಸಿದ್ಧನ ಪದ್ಯವೂ ಇದೆ. ನನ್ನ ಆಧ್ಯಾತ್ಮಿಕ ಗುರುವಿನ ಗುರುವಾದ ನಿಂಬರಗಿ ಮಹಾರಾಜರು ಈ ಕಾಡಸಿದ್ಧನ ಪರಂಪರೆಯವರೇ.

ಕಂಡಿರೆನೋ ಮಹಾಕಾರಣ ಬ್ರಹ್ಮನ ।
ಕಂಡು ಉಂಡಂಥ ಮಹಾ ಜ್ಞಾನಿಗಳಿರಾ ॥

ಮೊಳಕೆಯಿಲ್ಲದ ಬೀಜವ ಬಿತ್ತಿ ।
ಅಳತೆ ಇಲ್ಲದೆ ರಾಶಿಯನೆ ಮಾಡಿ ॥
ಒಳತಂದು ಮನೆ ತುಂಬಿ ಹೆಚ್ಚುಳಿದ ಧಾನ್ಯವ
ಅಳತಿಲೇ ಮಾರಿರೋ ಮಹಾ ಜ್ಞಾನಿಗಳಿರಾ ॥೧॥

ಕಾವು ಇಲ್ಲದ ಕೊಡಲಿಯ ಪಿಡಿದು ।
ಮೂಡಲ ದಿಕ್ಕಿನೊಳು ಮಹಾ ಬೇರು ಕಡಿದು ॥
ಒಂದೇ ಹೊಡೆತಕ್ಕೆ ಮೂರು ತುಣುಕು ।
ಮಾಡಿ ಚೆಲ್ಲಿರೋ ಮಹಾ ಜ್ಞಾನಿಗಳಿರಾ ॥ ೨ ॥

ಮೂರು ಬಟ್ಟಿನ ಅಳತೆಯ ಮೇಲೆ ।
ಆರು ಬೆಟ್ಟಗಳು ಅಡಗಿದವಲ್ಲೆ ॥
ಮೀರಿದ ಉನ್ಮನಿ ಕೊನೆಯ ಬಾಗಿಲವ ।
ತೆರೆದು ನೋಡಿರೊ ಮಹಾ ಜ್ಞಾನಿಗಳಿರಾ ॥ ೩ ॥

ನಾಲಿಗೆಯಿಲ್ಲದ ಗಂಟೆಯ ನುಡಿಸಿ ।
ನಾದಶಬ್ದವ ಹಿಡಿದು ನಿಲ್ಲಿಸಿ ॥
ಒಡೆಯ ಶ್ರೀ ಕಾಡಸಿದ್ಧನ ಕೂಡಿ ।
ಕಾಣಬಾರದನೆಲ್ಲ ಕಂಡೆ ॥ ೪ ॥

ಕಾಡಸಿದ್ಧನು ಪರಬ್ರಹ್ಮನನ್ನು ಅರಿತಿರುವೆವೆಂದು ಹೇಳುವವರಿಗೆ ಒಂದು ಆಹ್ವಾನವನ್ನೇ ಮಾಡಿರುವನೆಂಬದು ಈ ಪದ್ಯದಿಂದ ನಿಮಗೆ ತಿಳಿಯದಿರದು. 'ಪರಬ್ರಹ್ಮನನ್ನು ಕಂಡಿದ್ದರೆ ನೀವು ಅದರ ಆನಂದವನ್ನು ಪಡೆದಿರಲೇಬೇಕು, ನೀವು ಕಂಡಿರದಿದ್ದರೆ ನಿಮಗೆ ಆನಂದವಾಗದು' ಎಂಬುದೇ ಇದರ ತಾತ್ಪರ್ಯ. ದೇವರ ಸಾಕ್ಷಾತ್ಕಾರದ ಲಕ್ಷಣಗಳೇನು? ಅದರಿಂದ ಯಾವ ಸಮಸ್ಯೆಗಳು ಬಿಡುವವು? ಇಂಥ ಅಧ್ಯಾತ್ಮಜ್ಞಾನದ ಜಿಜ್ಞಾಸುವೇ ಅಧ್ಯಾತ್ಮದ ಪ್ರಥಮಪ್ರೇರಕ ಶಕ್ತಿಯು. ಹಿಂದೀ ಭಾಷೆಯ ಓರ್ವ ಶ್ರೇಷ್ಠಸಂತರು '**ಹೈ ಕೋಯಿ ಸಂತ ಸಹಜ ಸುಖ ಉಪಜೆ ಜಾಕೆ ಜಪತಪ ದೇವು ದರಾಜ**' ಎಂದು ಕೇಳಿರುವರು. ಕಾಡಸಿದ್ಧನ ಶಿಷ್ಯನಾದರೂ ಇವೇ ಮಾತುಗಳನ್ನು ದೇವರನ್ನು ಯಾರಾದರೂ ಕಂಡಿರುವಿರಾ? ಕಂಡಿದ್ದರೆ ಅವರು ಕನಿಷ್ಠ ಪಕ್ಷಕ್ಕೆ ಈ ಪ್ರಶ್ನೆಗಳಿಗೆ ಉತ್ತರಗಳನ್ನಾದರೂ ಹೇಳಲಿ ಎಂದು ಕೇಳಿರುವನು. ಮೊಳಕೆ ಒಡೆಯದೆ ಅಪಾರವಾದ ಫಲಗಳನ್ನು ಕೊಡುವಂಥ ಅದೃಶ್ಯವಾದ ಬೀಜವನ್ನು ಕಂಡಿರುವಿರಾ? ಇಂಥ ಬೀಜದಿಂದ ಬಂದ ಅಪರಿಮಿತ ಬೆಳೆಯನ್ನು ನಿಮ್ಮ ಕಣಜದಲ್ಲಿಟ್ಟು ಈಗಿನ ಸೀದಾಪದ್ಧತಿಯಂತೆ ಪ್ರಮಾಣಬದ್ಧವಾಗಿ ಹಂಚಿರಿ ಎಂದು ಅವನು ಹೇಳಿರುವನು. ಅವನ್ನು ಹುಡುಕುತ್ತ ಬಂದವರಿಗೆಲ್ಲ ಅದನ್ನು ಬೇಡಿದಷ್ಟು ಕೊಡಲಾಗದು. ಅದನ್ನು ಕೊಡುವಾಗ

ಒಂದು ಬಗೆಯ ನಿಯಂತ್ರಣ ಅಗತ್ಯ. ಹಾಗಿದ್ದರೆ ಮಾತ್ರ ಅದು ಫಲಪ್ರದವಾಗುವದು. ಇದು ಈ ಪದ್ಯದಲ್ಲಿಯ ಮೊದಲನೆಯ ವಿಷಯ.

ನಿಮ್ಮ ಕೈಯಿಂದಲೇ .ಉಪಯೋಗಿಸಿ ಒಂದೇ ಕಡಿತಕ್ಕೆ ಜೀವನದ ಬೇರುಗಳನ್ನು ಮೂರು ತುಂಡು ಮಾಡುವಂಥ ಕಾವು ಇಲ್ಲದ ಕೊಡಲಿಯನ್ನು ಕಂಡಿರುವಿರಾ? ಇದರ ಅರ್ಥವೆಂದರೆ ಈ ಜಗತ್ತಿನ ಸೃಷ್ಟಿಗೆ ಕಾರಣವಾದ ಪ್ರಕೃತಿಯ ಬೇರುಗಳನ್ನು ಪುರುಷನು ತನ್ನ ಕೈ ಎಂಬ ಕೊಡಲಿಯಿಂದ ಕಡಿದು ಸತ್ವ, ರಜ, ತಮ ಎಂಬ ಮೂರು ತುಂಡುಗಳನ್ನು ಮಾಡಿದ್ದು ಆ ಮೂರು ಗುಣಗಳಿಂದಲೇ ಜಗತ್ತಿನ ಚಕ್ರದ ಗತಿ ಸಾಗಿದೆ ಎಂಬುದು ಈ ಪದ್ಯದಲ್ಲಿಯ ಎರಡನೆಯ ಮಹತ್ವದ ಮಾತು.

ಮೂರು ಬೆರಳಿನ ಅಂತರದಮೇಲೆ ಆರು ಪರ್ವತಗಳು ಅಡಗಿವೆ. ಈ ಮೂರು ಬೆರಳುಗಳೆಂದರೇನು? ಈ ಪರ್ವತಗಳಾವವು? ಎಂಬುದು ಮೂರನೆಯ ವಿಷಯ. ನಾಸಿಕದ ಮೇಲಿನ ತುದಿಯಿಂದ ಕೆಳಗಿನ ತುದಿಯ ವರೆಗಿನ ಅಂತರವು ಮೂರು ಬೆರಳಿನ ಅಂತರವಾಗಿದೆ. ಆರು ಪರ್ವತಗಳೆಂದರೆ ಷಡ್ವೈರಿಗಳು. ಈ ಷಡ್ವೈರಿಗಳೆಂಬ ಪರ್ವತಗಳನ್ನು ಹತ್ತಿ ಮುಂದೆ ಸಾಗಿ ಉನ್ಮನಿದ್ವಾರವನ್ನು ತೆರೆಯಬೇಕು. ಈ ಉನ್ಮನಿ ದ್ವಾರತೆರೆದರೆ ನಿಮಗೆ ಸಾಮಾನ್ಯ ಜನರಿಗೆ ಅಗಮ್ಯವಾದುದು ಗೋಚರವಾಗುವದು. ಅಲ್ಲದೆ ದೇವರು ನುಡಿದ ಶಬ್ದಗಳ ನಾದವು ಕೇಳಿ ಬರುವದು. ಈ ನಾದವು ದೇವರು ನಿಮಗೆ ತಿಳಿಸುವ ಸಂದೇಶವಾಗಿರುವದು. ಕಾಡಸಿದ್ಧನ ಶಿಷ್ಯನು ಈ ಪದ್ಯದಲ್ಲಿ ಈ ನಾಲಿಗೆ ಇಲ್ಲದ ಗಂಟೆಯ ಶಬ್ದವನ್ನು ಕೇಳಿರುವದಾಗಿ ಹೇಳಿರುವನು. ಇದು ಶಂಕರಾಚಾರ್ಯರು ಹೇಳುವ 'ಅನಾಹತನಾದ'ವೇ ಆಗಿದೆ. ಈ 'ಅನಾಹತನಾದ'ಕ್ಕೆ ಕನ್ನಡ, ಹಿಂದಿ, ಮರಾಠಿ ಮತ್ತು ಇತರ ಭಾಷೆಯ ಅನುಭಾವಸಾಹಿತ್ಯದಲ್ಲಿ ಮಹತ್ವದ ಸ್ಥಾನವಿದೆ. ಕಾಡಸಿದ್ಧನು ಈ ಮೊದಲು ಎಂದೂ ನೋಡದ ದೃಶ್ಯಗಳನ್ನು ಮನಸ್ಸಿನಲ್ಲಿ ಯೋಚಿಸಿದೊಡನೆ ನೋಡುವ ಅನುಭವ ಪಡೆದಿರುವದಾಗಿಯೂ ಈ ಪದ್ಯದಲ್ಲಿ ಹೇಳಿರುವನು.

ಇನ್ನು ಪುರಂದರದಾಸರ ಕೆಳಗಿನ ಪದ್ಯವನ್ನು ನೋಡುವಾ.

ಬೈಲಿಗೆ ಬೈಲಾಯಿತು ಬೈಲೊಳಗೆ ॥

ಸೂತ್ರದ ಬೊಂಬೆಯ ಮಾಡಿ ಹರಿಸೂತ್ರದಿಂದ ಕುಣಿಸ್ಯಾಡಿ ।
ಸೂತ್ರ ಕಡಿಯಿತು ಬೊಂಬೆ ಮುರಿಯಿತು ಆಟ ನಿಂತಿತು ಕೇಳೊ
ಮನುಜಾ ॥ ೧ ॥

ಚಂದಾಗಿ ಜ್ಯೋತಿಯು ಬೆಳಗಿ ಎಣ್ಣೆಯ ಬತ್ತಿಯ ಹಾಕಿ ।
ಎಣ್ಣೆ ಮುಗಿಯಿತು ಬತ್ತಿ ಕಡಿಯಿತು ಕತ್ತಲಾಯಿತು ಕೇಳೊ
ಮನುಜಾ ॥ ೨ ॥

ನೆಂಟರಿಷ್ಟರು ಕೂಡಿ ಅವರು ಸಂತೆಗೋಸ್ಕರವಾಗಿ ।
ಸಂತೆ ಮುಗಿಯಿತು ಚಿಂತೆ ಹತ್ತಿತು ಭ್ರಾಂತಿಯಾಯಿತು ಕೇಳೊ
ಮನುಜಾ ॥ ೩ ॥

ಬಾಲೆ ಒಬ್ಬಳು ಕೂಡಿ ಅವಳು ನೀರಿಗೋಸ್ಕರ ಪೋಗಿ ।
ನೀರು ತುಂಬಿತು ಕಾಲು ಜಾರಿತು ಕೊಡವು ಒಡೆಯಿತು ಕೇಳೊ
ಮನುಜಾ ॥ ೪ ॥

ಪರಿ ಪರಿ ವಿಧದಲಿ ನಾನು ಪರಮಾತ್ಮನ ಸ್ತುತಿಯ ಮಾಡಿ ।
ಪರಮ ಮೂರುತಿ ಪುರಂದರ ವಿಠಲನೇ ಕರುಣಿಸು ಪಾಲಿಸು
ಪರಮದಯಾಳೊ ॥ ೫ ॥

ಪುರಂದರದಾಸರು ಭಕ್ತಿಮಾರ್ಗದಾಸರೆಂದು ನಿಮಗೆಲ್ಲ ಗೊತ್ತಿದೆ ಅವರು ದೇವ-ಭಕ್ತರಲ್ಲಿ ನಿಕಟವಾದ ಸಂಬಂಧವಿರಬೇಕೆಂದು ಪ್ರತಿಪಾದಿಸುವ ಹರಿದಾಸ ಕವಿಗಳು. ಆದರೂ ಅವರ ಕೆಲವು ಪದ್ಯಗಳಲ್ಲಿ ಅವರು ಈ ಜಗತ್ತು ನಶ್ವರವಾದುದು ಎಂದು ಒತ್ತಿ ಹೇಳಿದ್ದುಂಟು. ಜೀವನವು ಅಸ್ಥಿರವಾದುದು ಎಂದು ಅವರು ಹೇಳುವರಲ್ಲದೆ ಇದರ ಅಸ್ಥಿರ-ನಶ್ವರಸ್ವರೂಪವನ್ನು ಕಂಡು ಶಾಶ್ವತವಾಗಿರುವ ತತ್ವದ ಬಗ್ಗೆ ವಿಚಾರಮಾಡಲು ಪ್ರೇರೇಪಿಸುವರು. ನಾನು ಆರಿಸಿದ ಅವರ ಪದ್ಯವು **'ಬೈಲಿಗೆ ಬೈಲಾಯಿತೋ ಬೈಲೊಳಗೆ'** ಎಂಬುದು. ತತ್ವಜ್ಞಾನವನ್ನು ಅಭ್ಯಾಸಮಾಡುವವರು ಬೈಲು ಮತ್ತು ನಿರ್ಬಯಲು ಇವುಗಳಲ್ಲಿಯ ಸಂಬಂಧವನ್ನು ಅರಿತಿರಬಹುದು. ಕನ್ನಡ ಸಾಹಿತ್ಯದಲ್ಲಿ ಈ ಸಂಬಂಧವನ್ನು ಒಳ್ಳೇ ಮಾರ್ಮಿಕವಾಗಿ 'ಬೈಲಿಗೆ ಬೈಲಾ ನಿರ್ಬಯಲಾ' ಈ ಶಬ್ದಗಳಿಂದ ವ್ಯಕ್ತಮಾಡಲಾಗಿದೆ. ತತ್ವಜ್ಞಾನದ ಭಾಷೆಯಲ್ಲಿ ಹೇಳುವದಾದರೆ ಬೈಲು ಎಂದರೆ (spaceless) ಆಕಾಶ. ಸ್ಥಳವನ್ನು ಆಕ್ರಮಿಸದಂಥ ವಿಚಾರದ ಕಲ್ಪನೆಯನ್ನು ಕೊಡಲು ಬೈಲು ಈ ಶಬ್ದವನ್ನು ಯೋಜಿಸಲಾಗಿದೆ. ಬೈಲು ಶಬ್ದದಿಂದಲೇ ಈ ಕಲ್ಪನೆ ಬರುವಾಗ ನಿರ್ಬಯಲು ಶಬ್ದಕ್ಕೆ ಯಾವ ಅರ್ಥವಿದೆ? ಇದನ್ನು ಮುಂದೆ ಇನ್ನೊಂದು ಸಂದರ್ಭದಲ್ಲಿ ತಿಳಿಸುವೆನು. ಈಗ ಅಧ್ಯಾತ್ಮದ ಪ್ರೇರಕ ಶಕ್ತಿಗಳಾವವು ಎಂಬುದರ ಬಗ್ಗೆ ಮಾತ್ರ ಹೇಳಲಿರುವೆನು. ಮೊದಲನೇ ಪ್ರೇರಕಶಕ್ತಿ ತತ್ವಜ್ಞಾನದ ಜಿಜ್ಞಾಸೆ ಎಂಬುದು ಕಾಡಸಿದ್ಧನ ಪದ್ಯದಿಂದ ಕಂಡುಬರುವದು. ಎರಡನೇ ಪ್ರೇರಕಶಕ್ತಿ ಎಂದರೆ ಪುರಂದರದಾಸರು ಹೇಳುವಂತೆ ಈ ಜಗತ್ತಿನಲ್ಲಿ ಕಂಡುಬರುವ ನಶ್ವರತೆಯೇ ಆಗಿದೆ. ಪುರಂದರದಾಸರು ಈ ವಿಚಾರವನ್ನು ತಿಳಿಸಿಕೊಡಲು ಯಾವ ಉದಾಹರಣೆಗಳನ್ನು ಕೊಟ್ಟರುವರು ನೋಡುವಾ. ಒಂದನೇ ಉದಾಹರಣೆ ಎಂದರೆ ಓರ್ವ ಬಾಲಿಕೆಯು ನೀರು ತರಲು ಬಾವಿಗೆ ಹೋಗುವಳು. ನೀರು ತುಂಬಿಕೊಂಡು ಮರಳಿ ಬರುವಾಗ ಕಾಲು ಜಾರುವದು, ಕೊಡವು ಒಡೆಯುವದು. ಎರಡನೇ ಉದಾಹರಣೆ ಎಂದರೆ ಮಕ್ಕಳು ಗೊಂಬೆಯನ್ನು ಮಾಡುವವು. ಅದನ್ನು 'ಹರಿಸೂತ್ರ'ದ ಆಧಾರದಿಂದ ಕುಣಿಸಹತ್ತುವವು. ಈ ಹರಿಸೂತ್ರವು ನಮ್ಮ ಅಂತರ್ಯಾಮಿಯಾಗಿರುವ ದೈವೀ ಶಕ್ತಿ. "ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ" ಎಂಬಂತೆ ಅಥವಾ ಉಪನಿಷತ್ತಿನ ಶಬ್ದಗಳಲ್ಲಿ "ಸೂತ್ರ, ಅಂತರ್ಯಾಮಿ" ಎಂದು ಹೇಳಬಹುದು. ದೇವರು ನಮ್ಮೆಲ್ಲರ ಅಂತರ್ಯಾಮಿಯಾಗಿದ್ದು ಗೊಂಬೆಗಳಂತೆ ನಮ್ಮನ್ನು ಕುಣಿಸುವನು. ನಾವು ಅವನ ಪ್ರೇರಣೆಯಂತೆ ಸೂತ್ರದ ಗೊಂಬೆಗಳಂತೆ ಕುಣಿಯುವೆವು. ಸೂತ್ರವು ಹರಿದಾಗ ಗೊಂಬೆಗಳು ನೆಲಕ್ಕೆ ಬಿದ್ದು ತುಂಡುತುಂಡಾಗುವವು. ಮೂರನೆ ಉದಾಹರಣೆ ಒಂದು ಜಾತ್ರೆಯದಾಗಿದೆ. ಜನರು ಒಳ್ಳೇ ಸಂಭ್ರಮದಿಂದ ಜಾತ್ರೆಗೆ ಹೋಗುವರು. ಅಲ್ಲಿ ಸಂತೋಷದಿಂದ ಅಡ್ಡಾಡುವಂತೆ ತೋರುವದು. ಆದರೆ ಮರಳಿ ಮನೆಗೆ ಹೊರಟಾಗ ಚಿಂತೆಯು ಅವರನ್ನು ಆವರಿಸುವದು. ನಾಲ್ಕನೆ ಉದಾಹರಣೆಯಲ್ಲಿ ದೀಪವು ಎಣ್ಣೆತೀರುವ ವರೆಗೆ ಉರಿಯುವದು. ಬತ್ತಿ ತೀರುವದು. ಅಥವಾ ಎಣ್ಣೆ ತೀರುವದು. ಆಗ ದೀಪವು ಶಾಂತವಾಗಿ ಎಲ್ಲೆಡೆಯಲ್ಲಿಯೂ ಕತ್ತಲೆ ವ್ಯಾಪಿಸುವದು ಎಂದು ಹೇಳಲಾಗಿದೆ. ನಮ್ಮ ಜೀವನ ಹೀಗೆಯೇ ಸಾಗಿದೆ. ನಮ್ಮನ್ನು ಕುಣಿಸುವ ಸೂತ್ರಧಾರನಾದ ದೇವರು ಸೂತ್ರವನ್ನು ಬೇಕಾದಾಗ ತಕ್ಕೊಳ್ಳಬಹುದು.

ಪುರಂದರದಾಸರು ಈ ಮಾತುಗಳನ್ನು ಹೇಳಿ "ದೇವಾ ನಾನು ಎಂಥ ಪರಿಸ್ಥಿತಿಯಲ್ಲಿಯೇ ಇರಲಿ. ನಿನಗೆ ನನ್ನ ಪ್ರಾರ್ಥನೆ ಸಲ್ಲಿಸುವದು ನನ್ನ ಕರ್ತವ್ಯ. ನನಗೆ ನಿನ್ನ ಆಶೀರ್ವಾದ ಕಳಿಸಿ ನನ್ನನ್ನು ಎಂಥ ಪರಿಸ್ಥಿತಿಯಲ್ಲಿದ್ದರೂ ರಕ್ಷಿಸುವದು ನಿನ್ನ ಹೊಣೆ'' ಎಂದು ಹೇಳಿರುವರು. ಜೀವನವು ಅಶಾಶ್ವತವಾದುದರಿಂದ ನಾವು ಅಧ್ಯಾತ್ಮಕ್ಕೆ ಹೆಚ್ಚು ಲಕ್ಷ್ಯ ಹಾಕಬೇಕೆಂದು ಈ ಪದ್ಯವು ಬೋಧಿಸುವದು.

ಈ ವರೆಗೆ ಅಧ್ಯಾತ್ಮದ ಎರಡು ಪ್ರೇರಕಶಕ್ತಿಗಳನ್ನು ಹೇಳಿದೆ. ಮೂರನೇ ಪ್ರೇರಕ ಶಕ್ತಿ ಎಂದರೆ ಜೀವನದಲ್ಲಿ ಬರುವ ದುಃಖಗಳು. ಇದನ್ನು ಸ್ಪಷ್ಟೀಕರಿಸಲು ನಾನು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಶಿಷ್ಯರೊಬ್ಬರು ರಚಿಸಿದ ಪದ್ಯವನ್ನು ಆರಿಸಿರುವೆನು.

ಕಾಯೊ ಗುರುರಾಯಾ ಕರುಣಿಸಿ ॥
ಕಾಯೊ ಭವಕೆ ಉಪಾಯವನೀಯೊ
ಆಯಾಸದಿ ಬಲು ಬಾಯಾರಿಹೆ ನಾ
ಜೀಯನು ನೀಯೆನಗೆ ಪಾರಗಾಣಿಸದಿರೆ
ತಾಯ್ ಭೂಮಿಗೆ ಹೊರೆಯಾಗುವೆ ನಾ ॥ ೧ ॥

ಒಡಲಿನ ತಾಪಕೆ ಮಡದಿಯ ಮೋಹಕೆ
ಪುಡಿಪುಡಿಯಾಗುವ ಗತಿಯೇನಿದು ಗುರು
ಒಡೆಯ ವ್ಯಾಸಪ್ರಭು ತಡಮಾಡದೆ ನಿನ್ನ
ಅಡಿದಾವರೆಗಳನಿಡು ಸೇವೆಯ ಕೊಡು ॥ ೨ ॥

ರಾಗಾದಿಗಳುಪಭೋಗಿಸಿ ಪರಿಪರಿ
ರೋಗಾದಿಗಳಿಗಾಗರ ಈ ತನು
ಆಗಲು ಹೋಗಲು ಬೇಗ ಒಲಿದು ಅನು-
ರಾಗದಿ ನೋಡೈ ರಾಘವೇಂದ್ರನೆ ॥ ೩ ॥

ಕೊಡುಗೈ ದೊರೆ ನೀ ಕಡುಪಾಪಿಯು ನಾ
ಕಡೆಹಾಯಿಸು ಭವನುಡುವಿನೊಳೆನ್ನನು
ನಡನಡಗುತ ಬಾಯ್ ಬಿಡುವೆನು ನೀರೊಳು
ಕಡೆಹಾಯಿಸು ನೀ ಪಾಲ್ಗಡಲೊಡೆಯನೆ ॥ ೪ ॥

ಶರಣಾಗತ ಸಂತರ ಸುರತರುವೆ
ನೆರೆ ನೆನೆಯುವರಿಗೆ ವರ ದೊರೆಯೆ
ಹರಿ ವಿಠಲೇಶನೆ ಕರುಣಾಭರಣಾ
ಪರಿಪಾಲಿಸು ಭವಶರಧಿಯ ತಾರಿಸಿ ॥ ೫ ॥

ಈ ಪದ್ಯವನ್ನು ರಚಿಸಿದವರು ಈಗಲೂ ಜೀವಿಸಿರುವರು. ಅವರು ರಚಿಸಿದ ಪದ್ಯವು ನಿಜವಾಗಿಯೂ ಬಹಳ ಉತ್ತಮ ತರಗತಿಯದಾಗಿದೆ. ಕೇವಲ ಪ್ರಾಚೀನವಾದುದಕ್ಕೆ ಮಾತ್ರ ಬೆಲೆಕೊಡುವವನು ನಾನಲ್ಲ. ಈಗಿನವರು ನಮ್ಮ ತಲೆತೂಗುವಂತೆ ಪದ್ಯ ರಚಿಸಿದರೆ ಅದನ್ನು ನಾವು ಮೆಚ್ಚಬೇಕು. ಅಂಥ ಪದ್ಯ ಬರೆದವರ ಬುದ್ಧಿಮತ್ತೆಯನ್ನೂ ಗೌರವಿಸಬೇಕು.

ನಮ್ಮ ಜೀವನದಲ್ಲಿ ಬರುವ ದುಃಖಗಳನ್ನು ಯಾವ ರೀತಿಯಲ್ಲಿ ಸಮಾಧಾನದಿಂದ ಸಹಿಸಿಕೊಳ್ಳಬಹುದೆಂಬುದನ್ನು ಈ ಪದ್ಯದಲ್ಲಿ ಹೇಳಲಾಗಿದೆ. ಮಾನಸಶಾಸ್ತ್ರಜ್ಞರ ಅಭಿಪ್ರಾಯದಂತೆ ಮನುಷ್ಯನನ್ನು ದುಃಖಕ್ಕೆ ಈಡುಮಾಡುವುದು ಹಸಿವೆ ಮತ್ತು ಕಾಮ ಈ ಎರಡೇ ಪ್ರವೃತ್ತಿಗಳೆಂದು ಹೇಳಲಾಗುವದು. ಈ ಪದ್ಯದಲ್ಲಿ ಈ ಎರಡೂ ವೃತ್ತಿಗಳು ತನ್ನನ್ನು ದುಃಖದ ತಿರುಗಣಿಮಡುವಿಗೆ ನೂಕಿವೆ, ಇದರಿಂದ ಪಾರಾಗಲು ದಾರಿ ತೋರದು ಎಂದು ಕವಿಯು ಹೇಳಿರುವನು. ಎರಡನೆಯದಾಗಿ ನಾನಾಬಗೆಯ ವಿಷಯೋಪಭೋಗದಲ್ಲಿ ಆಸಕ್ತಿ ವಹಿಸಿದ ಕಾರಣದಿಂದ ಈ ದೇಹವು ರೋಗಾದಿಗಳ ಬೀಡಾಗಿದೆ ಎಂದು ಹೇಳಿರುವನು. ಮೂರನೆಯದಾಗಿ ಸಂಸಾರ ಸಾಗರದಲ್ಲಿ ಈಸಲಾರದೆ ದಣಿದು ಮುಳುಗಿಹೋಗುವ ಪ್ರಸಂಗದಲ್ಲಿ ಉಸುರಾಡಿಸಲು ಧಡಪಡಿಸಿದೆ. ಆಗ ದೇವರೆಂಬ ಸುರತರುವು ಸಂಸಾರಸಾಗರದಲ್ಲಿ ಮುಳುಗದಂತೆ ರಕ್ಷಿಸಿತು ಎಂದು ಕವಿಯು ಹೇಳಿರುವನು. ದೇವನೇ ಈ ಸಂಸಾರ ಸಾಗರದಿಂದ ನನ್ನನ್ನು ರಕ್ಷಿಸು. ನಿನ್ನಲ್ಲಿ ಭಕ್ತಿಯುಳ್ಳವನಾಗಿರುವದು ನನ್ನ ಕರ್ತವ್ಯ. ನನ್ನನ್ನು ರಕ್ಷಿಸುವದು ನಿನ್ನ ಕರ್ತವ್ಯ, ಎಂದು ಕವಿಯು ಕೊನೆಗೆ ಹೇಳುವನು.

ಅಧ್ಯಾತ್ಮಕ್ಕೆ ಪ್ರೇರಕವಾದ ನಾಲ್ಕನೇ ಕಾರಣವನ್ನು ಶಿರಸಂಗಿಯ ಬಲಭೀಮಯೋಗಿ ಎಂಬವರು ಬರೆದ "ಹಾವುಕಚ್ಚಿ-ತಮ್ಮಾ'' ಎಂಬ ಪದ್ಯದಿಂದ ತಿಳಿಸಲಿರುವೆನು. ಈ ಪದ್ಯವು ನಮ್ಮ ಭಾಗದಲ್ಲಿ ಬಹಳ ಪ್ರಸಿದ್ಧವಾದದ್ದು. ವಿಷಯವೆಂಬ ಸರ್ಪವು ಕಚ್ಚಿದರೆ ಅದರ ವಿಷವನ್ನು ಎಂತು ನಿವಾರಿಸಿಕೊಳ್ಳಬೇಕೆಂಬುದನ್ನು ಕವಿಯು ಪದ್ಯದಲ್ಲಿ ಬಹಳ ಸುಂದರವಾಗಿ ವರ್ಣಿಸಿರುವನು. ಪತಂಜಲಿಯ ಕಾಲದಿಂದಲೂ ಬೆಳೆದುಬಂದ ಅನುಭಾವಸಾಹಿತ್ಯದ ಅರ್ಥವನ್ನು ಅರಿತುಕೊಳ್ಳುವ ಜಿಜ್ಞಾಸುಗಳಿಗೆ ಅಥವಾ ಅಧ್ಯಾತ್ಮ ಗುರುವಿನಿಂದ ಉಪದೇಶಪಡೆಯುವವರಿಗೆ ಮನುಷ್ಯನಲ್ಲಿ ಅಧಾತ್ಮ ದೃಷ್ಟಿಯ ವಿಕಾಸವಾದಂತೆ ಈ ಸರ್ಪದ ಏರಾಟ ತಗ್ಗುವದೆಂಬದು ತಿಳಿದ ವಿಷಯ. ಸರ್ಪವು ನಾಶವಾಗುವದಿಲ್ಲ. ಅದು ಅಲ್ಲಿಯೇ ಇದ್ದರೂ ಅದು ಒಂದು ಬದಿಗೆ ಸರಿದು ಉಳಿಯುವದು. ಹೀಗೆ ಸರ್ಪವು ಬದಿಗೆ ಸರಿಯುವದರಿಂದ ತೆರವಾದ ಸ್ಥಳವನ್ನು ಅಧ್ಯಾತ್ಮ ತತ್ವವು ಆವರಿಸುವದು.

ಹಾವು ಕಚ್ಚಿತಮ್ಮಾ । ದಾರಿಗೆ ತಿಳಿಯದಿದರ ಮಹಿಮಾ ॥ ಪ ॥
ಹಾವಿನ ವಿಷವು ಎನಗೆ ಏರಿತಮ್ಮಾ
ದೇವರ ಕರುಣೆಯಿಂದ ನಾನು ಉಳಿದೆನಮ್ಮಾ ॥ ಅ. ಪ. ॥

ಮೀರಿದ ಹಾವಮ್ಮಾ! ಮೂರು ಲೋಕ ನುಂಗಿತಮ್ಮಾ।
ಬ್ಯಾಸರಿಲ್ಲದೆ ಮಾಡ್ಯಾನ ಬ್ರಹ್ಮಾ! ನೆನಪಾದರೆ ಮೈ ಅಂಬುದು ಜುಮ್ಮಾ ॥ ೧ ॥

ಮೂರು ಮೊಳದ ಹುತ್ತು । ಒಂಬತ್ತು ರಂಧ್ರಗಳಲಿ ಅಡಗಿತ್ತು ।
ಯಾವ ರಂಧ್ರಗಳಲಿ ಹಾವು ಸೇರಿತು । ಒಳಗಿನ ಗೊರಲಿ ಎತ್ತ ಹೋಯಿತು ॥ ೨ ॥

ಬಾಲ ಮೇಲಕ್ಕೆತ್ತಿ । ಭೋರೆಂಬ ಶಬ್ದ ನುಡಿತೈತಿ ।
ಮಣಿಪುರದ ಕಮಲದಲ್ಲಿ ಮಲಗಿಕೊಂಡೈತಿ
ಬೆಲೆಯಿಲ್ಲದ ರತ್ನ ಅದರ ಹೆಡೆಯೊಳೈತಿ ॥ ೩ ॥

ಗೊಲ್ಲನ ಹುಡುಕಮ್ಮಾ! ಗೊಲ್ಲನ ಮಂತ್ರವ ಹೇಳುವ ಪ್ರಣವ!
ಗೊಲ್ಲನ ಮಂತ್ರಕೆ ಅಂಜುವದು ಹಾವಾ।
ವಿಷದ ಕೋಳವಿ ತೊಳೆದು ಹೋದಿತೊ ಕರ್ಮಾ ॥ ೪ ॥

ಸಣ್ಣ ಗೊರಲಿ ಬಂತು । ಹಾವಿನ ಹುತ್ತು ಸಹಿತ ತಿಂತು ।
ಯಾವ ಸ್ಥಾನದಲ್ಲಿ ಆ ಗೊರಲಿತ್ತೊ । ಮೂಲ ಪ್ರಣವ ಬಲ್ಲವಗೆ ಗೊತ್ತು ॥ ೫ ॥

ಗೊರಲಿ ಹಾವಿಗೆ ನುಂಗಿ । ಧರೆಯೊಳು ಮೆರೆಯುವ ಶಿರಸಂಗಿ ।
ಧರೆಗೆ ಶ್ರೀ ಗುರು ಬಲಭೀಮ ಯೋಗಿ
ಆತನ ಚರಣಕ್ಕೆರಗಿದರೆ ಸ್ವರ್ಗಕ್ಕೆ ಸಾಗಿ ॥ ೬ ॥

ಈ ಪದ್ಯದಲ್ಲಿ ಬಲಭೀಮಯೋಗಿಯು, ಇಂದ್ರಿಯಗಳು ಪೂರ್ತಿಯಾಗಿ ನನ್ನನ್ನು ತಮ್ಮ ಗುಲಾಮನನ್ನಾಗಿ ಮಾಡಿರುವವು.

ಇಂದ್ರಿಯ ಶಬ್ದದ ಉಚ್ಚಾರಣ ಮಾತ್ರದಿಂದ ವಿಷಯೋಪ ಭೋಗದ ಸಂಬಂಧದ ಮಾತು, ಅದರ ಕಲ್ಪನೆ, ಅದರ ದೃಶ್ಯ ಇವು ಗಳಿಂದ ನನ್ನಲ್ಲಿ ನಡುಗು ಹುಟ್ಟುವದು. ಈ ದೇಹವು ನವರಂಧ್ರ ಗಳಿರುವ ಒಂದು ಹುತ್ತಿನಂತಿರುವದು, ಎಂದು ಕವಿಯು ದೇಹ ವನ್ನು ಹುತ್ತಿಗೆ ಹೋಲಿಸಿರುವನು. ಸದ್ದಿಲ್ಲದೆ ಹುತ್ತಿನಲ್ಲಿ ಸೇರಿ ಕೊಳ್ಳುವದು ಹಾವಿನ ಸ್ವಭಾವ. ದೇಹವೆಂಬ ಹುತ್ತಿಗೆ ನವರಂಧ್ರ ಗಳಿರುವದರಿಂದ ಅದರಲ್ಲಿ ಯಾವದರ ಮೂಲಕ ಈ ಇಂದ್ರಿಯ ಸರ್ಪವು ಮಾನವಶರೀರದಲ್ಲಿ ಪ್ರವೇಶಮಾಡುವದೆಂದು ಹೇಳುವದು ಕಷ್ಟ, ಎಂದು ಅಭಿಪ್ರಾಯಪಟ್ಟಿರುವನು.

ಈ ಪದ್ಯಕ್ಕೆ ಹೋಲುವಂಥ ವಿಚಾರಗಳು ಒಬ್ಬ ಸುಪ್ರಸಿದ್ಧ ಗ್ರೀಕ ದಾರ್ಶನಿಕನ ಸಿದ್ಧಾಂತದಲ್ಲಿ ಕಂಡುಬರುತ್ತಿರುವವು. ಆ ದಾರ್ಶ ನಿಕನ ಅಭಿಪ್ರಾಯ: ಸತ್ಯತತ್ವವು ಒಂದು ದೊಡ್ಡ ವರ್ತುಲವಿದ್ದಂ ತಿದ್ದು ಎರಡು ತತ್ವಗಳು—ಒಂದು ವರ್ತುಲದ ಒಳಗೆ ಮತ್ತೊಂದು ಹೊರಗೆ—ತಮ್ಮ ಕಾರ್ಯವನ್ನು ನಡೆಸಿರುತ್ತವೆ. ಆ ತತ್ವಗಳೆಂ ದರೆ ಪ್ರೇಮ ಮತ್ತು ದ್ವೇಷ. ಪ್ರೇಮ ಪ್ರವೇಶವಾದರೆ ದ್ವೇಷವನ್ನು ಹೊಡೆದೋಡಿಸುತ್ತದೆ. ದ್ವೇಷದ ಪ್ರವೇಶವಾದರೆ ಅದು ಪ್ರೇಮ ವನ್ನು ಹೊರದೂಡುತ್ತದೆ. ಹಾಗೆಯೇ ಇಂದ್ರಿಯಪ್ರಾಬಲ್ಯವಾ ದಾಗ ಗೊರಲಿಯು ಅಲ್ಲಿ ಹೋಗಲಾರದು. ಈ ಇಂದ್ರಿಯ ಸರ್ಪವು ಹುತ್ತಿನಲ್ಲಿ ಸೇರಿದಾಗ ಅದು ಗೊರಲಿಯನ್ನು ಹೊರಗೆ ಹಾಕುತ್ತದೆ. ಅರ್ಥಾತ್ ಮನುಷ್ಯನು ಇಂದ್ರಿಯವಶನಾದಾಗ ಆಧ್ಯಾತ್ಮಿಕ ಶಕ್ತಿಯನ್ನು ಕಳೆದುಕೊಳ್ಳುವನು. ಹಾಗಾದರೆ ಅವನ ಕರ್ತವ್ಯವೇನು? ಮಾಂತ್ರಿಕನ ಬಳಿಗೆ ಹೋಗುವದು ಅವನ ಕರ್ತವ್ಯ. ಮಾಂತ್ರಿಕನೆಂದರೆ ಯಾರ ಮಂತ್ರಶಕ್ತಿಯಿಂದ ಆ ಸರ್ಪವು ಹೆದರಿ ಓಡಿಹೋಗಬಲ್ಲದೋ ಅಂತಹ ಗುರು. ಇಂಥ ಗುರುವು ಪೂರ್ವ ಸುಕೃತದಿಂದ, ಯದೃಚ್ಛೆಯಿಂದ, ದೊರೆತರೆ ಆತನ ಮಂತ್ರದಿಂದ ಆ ಸರ್ಪವನ್ನು ಹೊರದೂಡಲು ಸಮರ್ಥರಾಗು ವೆವು. ವಿವಿಧ ಜ್ಞಾನೇಂದ್ರಿಯಗಳ ಮೂಲಕ ಈ ಇಂದ್ರಿಯ ಸರ್ಪವು ನಮ್ಮಲ್ಲಿ ಸೇರಬಹುದು. ಆದುದರಿಂದ ಅದು ಯಾಕೆ ಪ್ರವೇಶಿಸಲಿಚ್ಛಿಸುವದೆಂಬದನ್ನು ತಿಳಿಯುವದೆಂತು ? ಆದುದರಿಂದ ಗೊರಲಿಯು ಪ್ರವೇಶಿಸಿ ಅಲ್ಲಿ ಭದ್ರವಾಗಿ ಮನೆಮಾಡಿಕೊಂಡ ನಂತರವೇ ಮುಮುಕ್ಷುವು ತನ್ನ ಆಧ್ಯಾತ್ಮಿಕ ಜೀವನ, ಅನ್ವೇ ಷಣ ಇವುಗಳನ್ನು ಪ್ರಾರಂಭಿಸುವನು. ಆದರೆ ಈ ಗೊರಲಿಯು ಹೊರದೂಡಲ್ಪಟ್ಟಾಗ ಎಲ್ಲಿ ಹೊಗಿತ್ತು, ಅದು ಪುನಃ ಮರಳಿ ಹೇಗೆ ಬಂತು? ಎಂದು ಕವಿಯು ಬಹಳ ಮಾರ್ಮಿಕವಾಗಿ ಪ್ರಶ್ನೆಮಾಡು ತ್ತಾನೆ. ಮಾಂತ್ರಿಕನಿಗೆ ಗೊತ್ತಿರಬಹುದು ಅಥವಾ ಗೊತ್ತಿರಲಿಕ್ಕಿಲ್ಲ. ಆಧ್ಯಾತ್ಮಿಕ ತತ್ವವು ಧರ್ಮಗುರುವಿನ ಅಳವು ಮೀರಿದ್ದಲ್ಲ. ನಾಸದೀಯ ಸೂಕ್ತವು ಹೇಳುವಂತೆ "ಸ ವಾ ವೇದ ಯದಿ ವಾ ನ ವೇದ."ಈ ಗೊರ ಲಿಯು ಎಲ್ಲಿಂದ ಬಂದಿತೆಂಬುದನ್ನು ಮಾಂತ್ರಿಕನು ಅರಿಯನು. ಅದು ಪ್ರವೇಶಿಸಿದ ನಂತರ ಸರ್ಪವನ್ನೂ ಹುತ್ತನ್ನೂ ನಾಶ ಮಾಡುವದು ಎಂದು ಕವಿಯು ಹೇಳಿರುವನು.

ಇದು ವರೆಗೆ ಅಧ್ಯಾತ್ಮ ಜೀವನದ ಪ್ರೇರಕ ಶಕ್ತಿಗಳನ್ನು ವಿವ ರಿಸಿದೆನು. ಇವಿಷ್ಟೇ ಪ್ರೇರಕ ಶಕ್ತಿಗಳೆಂದು ಭಾವಿಸಲಾಗದು. ಅನುಭಾವದಲ್ಲಿ ಗುರುವಿನ ಮಹತ್ವವೇನು ? ಇದನ್ನು ವಿವರಿಸುವ ಶ್ರೀ ಸರ್ಪಭೂಷಣರ ಈ ಕೆಳಗಿನ ಪದ್ಯವನ್ನು ವಿವರಿಸುವೆನು.

ಗುರುದೇವ ನೀ ಮಾಡಿದುಪಕೃತಿಯನು ನಾನು ।
ಮರೆಯನು ಎಂದಿಗೂ ಇಹದೊಳು ॥

ಪೊಡವಿಯೊಳು-ಅಖಿಲ ವೇದಾಗಮ ಶಾಸ್ತ್ರಗಳ
ಬಿಡದೇ ಸಾಧಿಸಿದ ವಾದಿಗಳೆಲ್ಲ ॥
ಹೊಡೆದಾಡಿ ಕಾಣದ ಪರತತ್ವವನು ನೀನು
ತಂದೆನ್ನ ಕರಕ್ಕೆ ಕೊಟ್ಟದರಿಂದ ॥ ೧ ॥
ಕಂದ ಮೂಲಗಳ ಸೇವಿಸಿ ವಾಯುಗಳನೊತ್ತಿ
ಬಂಧಿಸಿ ಪಂಚಾಗ್ನಿ ಮಧ್ಯದಲಿ ॥
ನಿಂದು ಯೋಗಿಗಳ ನೋಡದ ಪರಬ್ರಹ್ಮ
ತಂದೆನ್ನ ಕಣ್ಣಿಗೆ ತೋರಿದರಿಂದ ॥ ೨ ॥
ತರಳ ಎನ್ನಯ ಮೇಲೆ ದಯಹುಟ್ಟಿ ಶಿವನೆ
ಶ್ರೀ ಗುರುಸಿದ್ಧನೆಂಬ ನಾಮವನಾಂತು ॥
ಗುರು ರೂಪದಿಂದೆನ್ನ ಬೋಧಿಸಿ ತನ್ನೊಳು
ಬೆರಸುತ್ತ ಮೋಕ್ಷವಿತ್ತುದರಿಂದ ॥ ೩ ॥

ಗುರುವು ಮಾಡಿದ ಉಪಕಾರವನ್ನು ಎಷ್ಟೆಂದು ವರ್ಣಿ ಸಲು ಕೂಡ ತಾನು ಅಸಮರ್ಥನೆಂದು ಕವಿಯು ಈ ಪದ್ಯದಲ್ಲಿ ಹೇಳಿರುವನು. ಎರಡನೇ ವಿಷಯವೆಂದರೆ ಶಾಸ್ತ್ರಗಳನ್ನು ಕಲಿತವರು ತಮ್ಮತಮ್ಮಲ್ಲಿ ವಾದವಿವಾದ ಮಾಡುತ್ತಲಿರುವರು. ವೇದಾಗಮ ಗಳನ್ನು ಅರಿತವರು ಕೂಡಾ ಕಾಣದ ಪರತತ್ವವನ್ನು ಕರುಣೆ ಯಿಂದ ನೀನು ನನ್ನ ಕರದಲ್ಲಿರಿಸಿದೆ, ಎಂದು ಹೇಳಿರುವನು.

ಕಂದಮೂಲಗಳನ್ನು ತಿಂದು ಯೋಗಿಗಳಾಗಿ ಜೀವಿಸುವ ವರಿಗೆ ಗೋಚರವಾಗದ ಪರತತ್ವವನ್ನು ನನಗೆ ತೋರಿದ್ದರಿಂದ ನನಗೆ ಅದರ ಸ್ವರೂಪನ್ನೇ ನಾನು ಎಲ್ಲೆಲ್ಲಿಯೂ ಕಾಣುವಂತೆ ಗುರುದೇವನೇ ನೀನು ಮಾಡಿರುವಿ. ಆದುದರಿಂದ ನಿನ್ನ ಉಪಕಾರ ಅಪರಿಮಿತವಾದುದು. ಇಂಥ ಉಪಕಾರ ಮಾಡುವ ನೀನು ಯಾರು ? ಆ ಪರಮಾತ್ಮನಲ್ಲದೆ ನೀನು ಬೇರೆ ಯಾರೂ ಅಲ್ಲ. ಗುರುರೂಪ ಧರಿಸಿ ಬಂದ ಪರಮಾತ್ಮನೇ ನೀನು. ಎಂದು ಕವಿಯು ಹೇಳಿ ಗುರು ಮತ್ತು ಪರಮಾತ್ಮನು ಒಂದೆಂಬ ತತ್ವವನ್ನು ಹೇಳುವನು. ಇದು ಗುರು—ದೇವ ಭಾವನೆಯ ಒಂದು ರೀತಿ. ಗುರುವು ಸತ್ಯತತ್ವದ ದರ್ಶನ ಮಾಡಿಸಿದ್ದಲ್ಲದೆ ಪರಮಾತ್ಮನ ನೇರ ವಾದ ಸಂಬಂಧವೂ ಗುರುಕೃಪೆಯಿಂದ ಸಾಧಿಸುವದು.

(ಪ್ರಸಿದ್ಧ ಅಧ್ಯಾತ್ಮ ಜೀವಿಗಳೂ ಅಲಹಾಬಾದ ವಿಶ್ವವಿದ್ಯಾಲಯದ ತತ್ವಜ್ಞಾನದ ಪ್ರಾಧ್ಯಾಪಕರೂ ಆಗಿರುವ ಡಾ. ಆರ್. ಡಿ. ರಾನಡೆಯವರು ಇದೇ ಅಗಸ್ಟ ೨೮ ನೆಯ ದಿನಾಂಕ ಕರ್ನಾಟಕ ವಿಶ್ವವಿದ್ಯಾಲಯದ ಪರವಾಗಿ ಅನುಭಾವ ಮಾರ್ಗದ ಸಂಬಂಧದಲ್ಲಿ ಮಾಡಿದ ಮೊದಲನೆಯ ಭಾಷಣದ ಮುಖ್ಯಾಂಶವನ್ನು ಇಲ್ಲಿ ಕೊಡಲಾಗಿದೆ. ಧಾರವಾಡ ಆಕಾಶ ವಾಣಿಯವರು ಈ ಭಾಷಣವನ್ನು ಮರುಪ್ರಸಾರ ಮಾಡಿದ್ದು ಅದರ ನಕಲನ್ನು ಒದಗಿಸಿದ್ದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳು.)



ಶ್ರೀ ವಾದಿರಾಜ ತೀರ್ಥರ ಕವಿತಾಚಾತುರ್ಯ

ಲೇಖಕರು: ವಿದ್ಯಾಭೂಷಣ ಡಾ. ಬಿ. ಎನ್. ಕೃಷ್ಣಮೂರ್ತಿ, ಎಂ. ಎ., ಪಿಎಚ್. ಡಿ., ಕುಮಟಾ

ಕರ್ನಾಟಕದ ಪ್ರಸಿದ್ಧ ದರ್ಶನಾಚಾರ್ಯರಾದ ಶ್ರೀ ಮಧ್ವಾಚಾರ್ಯರ ಮತವನ್ನು ದೇಶದಲ್ಲಿ ಸಾರ್ವತ್ರಿಕವಾಗಿ ಪ್ರಚಾರ ಮಾಡಿದ್ದರ ಹೆಚ್ಚಿನ ಶ್ರೇಯಸ್ಸು ಉಡುಪಿಯ ಶ್ರೀ ವಾದಿರಾಜ ಸ್ವಾಮಿಗಳಿಗೇ ಸಲ್ಲಬೇಕು. ಅವರಿಗೆ "ರಾಜರು", "ಸೋದೆಯ ರಾಜರು" ಎಂದೂ ಕರೆಯುವುದುಂಟು.

ಇವರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಹೂವಿನಕರೆ ಎಂಬ ಹಳ್ಳಿಯಲ್ಲಿ ಬಹುಶಃ ಕ್ರಿ. ಶ. ೧೪೮೦ ರಲ್ಲಿ ಹುಟ್ಟಿದರು. ಇವರ ಕೆಲವು ಗ್ರಂಥಗಳ ಆಂತರಿಕ ಸೂಚನೆಗಳಿಂದ ಇವರು ಸ್ಮಾರ್ತಕುಲದಲ್ಲಿ ಜನಿಸಿದರೆಂದು ಕಾಣುತ್ತದೆ.

ರಾಜರು ಮಧ್ವಾಚಾರ್ಯರ ತಮ್ಮನಾದ ವಿಷ್ಣುತೀರ್ಥರ ಪರಂಪರೆಯ ವಾಗೀಶತೀರ್ಥರ ಶಿಷ್ಯರು. ವಾಗೀಶರ ವೃಂದಾವನವು ಉಡುಪಿಯ ಕೃಷ್ಣಮಠದ ಹಿಂಭಾಗದಲ್ಲಿದೆ.

ಇವರು ವಿಷ್ಣುತೀರ್ಥರಂತೆಯೇ ಮಹಾತಪಸ್ವಿಗಳು, ಯೋಗಿಶ್ರೇಷ್ಠರು. ಇವರ ವಾಗ್ವೈದಗ್ಧ್ಯ ಅಪಾರವಾಗಿತ್ತು. ಇವರ ಶೈಲಿಯಲ್ಲಿ ಅನ್ಯಾದೃಶವಾದ ಉತ್ಸಾಹ, ಲಾವಣ್ಯ, ಲಾಲಿತ್ಯ, ಚಮತ್ಕಾರಗಳು ತುಂಬಿವೆ. ಶಾಸ್ತ್ರಾರ್ಥವನ್ನು ಸಾಮಾನ್ಯ ಲೌಕಿಕ ನ್ಯಾಯಗಳಿಂದ ಪ್ರತಿಪಾದಿಸಿ ಜನರಿಗೆ ಹೃದ್ಗತಮಾಡಿಕೊಡುವ ಅಪೂರ್ವ ಶಕ್ತಿ ಇವರಲ್ಲಿತ್ತು. ಇದು ಇವರ 'ಯುಕ್ತಿಮಲ್ಲಿಕಾ' ಎಂಬ ವೇದಾಂತ ಗ್ರಂಥವನ್ನು ನೋಡಿದರೆ ಸ್ಪಷ್ಟವಾದೀತು. ಇವರ ಶೈಲಿಯ ಸೊಬಗನ್ನು 'ಸವಿನೋದಂ ಸಾಟ್ಟಹಾಸಂ ಸಸ್ಮಿತಂ ಸುಂದರಾನ್ವಿತಂ' ಎಂದು ವರ್ಣಿಸಲಾಗಿದೆ.

ರಾಜರು ಸದುಪದೇಶಾತ್ಮಕ ಗ್ರಂಥಗಳನ್ನು ರಚಿಸುವುದರ ಮೂಲಕ ದ್ವೈತಮತವನ್ನು ದೇಶದಲ್ಲಿ ರೂಢಿಸಿ, ನೂತನ ಶಿಷ್ಯಕೋಟಿಯನ್ನು ಬೆಳೆಸಿ, ಉಡುಪಿಯ ಅಷ್ಟಮಠಗಳನ್ನು ಹೊಸ ಬಗೆಯಿಂದ ಬದಲಾವಣೆ ಮಾಡಿ, ಅವುಗಳಿಗೆ ಲೌಕಿಕ ಸಂಪತ್ತಿಗಳನ್ನು ಒದಗಿಸಿಕೊಟ್ಟು ಈಗ ನಡೆಯುವ ಪರ್ಯಾಯಕ್ರಮದಲ್ಲಿ ವ್ಯವಸ್ಥಾಪಿಸಿ ತಮ್ಮ ಮತಕ್ಕೆ ಮಾನ್ಯತೆಯನ್ನೂ ಸಮೂಹಕ್ಕೆ ಸಂಘಟನೆಯನ್ನೂ ಸಾಧಿಸಿದರು.

ರಾಜರು ತಪೋವಿದ್ಯಾವಿರಕ್ತ್ಯಾದಿ ಸದ್ಗುಣಗಳಿಂದ ರಾಜಾಶ್ರಯವನ್ನೂ ಪಡೆದರು. ಇವರ ಪ್ರಭಾವವನ್ನರಿತೇ ಕೆಳದಿಯ ಅರಸಪ್ಪ ನಾಯಕನು ಅವರ ವಾಸಕ್ಕಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸೋದೆ ಎಂಬ ಗ್ರಾಮದಲ್ಲಿ ಮಠ ಕಟ್ಟಿಸಿಕೊಟ್ಟು ಭೂದಾನಾದಿಗಳನ್ನು ಮಾಡಿದನು. ಅನಂತರ ರಾಜರು ಅಲ್ಲಿ ತ್ರಿವಿಕ್ರಮ ದೇವಾಲಯವನ್ನು ನಿರ್ಮಿಸಿ ಕ್ರಿ. ಶ. ೧೬೦೦ ರಲ್ಲಿ ಪಂಚವೃಂದಾವನವನ್ನು ಪ್ರವೇಶಿಸಿದರು. ಇವರ ಮಹಿಮೆಯ ದೆಸೆಯಿಂದ ಜನರು ಇವರನ್ನು ಮಧ್ವಾಚಾರ್ಯರ ಅಪರಾವತಾರವೆಂದೂ ಋಜುಗಣದವರೆಂದೂ ಭಾವಿಸುತ್ತಾರೆ.

ವೇದಾಂತಿಗಳಾದರೂ ರಾಜರು ಸರಸಕವಿಗಳಾಗಿದ್ದರು. ಕೆಲ ಮನೋಹರ ಪದ್ಯಗಳನ್ನು ಬರೆದು ದಾಸ ಸಾಹಿತ್ಯಕ್ಕೂ ಇವರು ಸೇವೆ ಸಲ್ಲಿಸಿದರು. ಇಷ್ಟದೇವರಾದ ಹಯವದನನ ಮುದ್ರಿಕೆ ಇವರ ಪದಗಳಿಗಿದೆ.

ಸಂಸ್ಕೃತ ಭಾಷೆಯಲ್ಲಿ ಇವರ ಪಾಂಡಿತ್ಯ ಅದ್ವಿತೀಯವಾದುದು. ಕವಿಸಮಯದಲ್ಲಿಲ್ಲದ ಹೊಸತನಗಳನ್ನು ಇವರ ಕಾವ್ಯದ ರಸಧಾರೆಯಲ್ಲಿ ಕಾಣಬಹುದು. ರುಕ್ಮಿಣೀಶ ವಿಜಯ, ತೀರ್ಥ ಪ್ರಬಂಧ, ಅಶ್ವಧಾಟಿ ಮೊದಲಾದ ಕಾವ್ಯಗಳನ್ನು ರಾಜರು ರಚಿಸಿದ್ದಾರೆ. ಅಶ್ವಧಾಟೀ ಸ್ತೋತ್ರವನ್ನು ಗಟ್ಟಿಯಾಗಿ ಒಟ್ಟನಿಂದ ಸಾಮೂಹಿಕವಾಗಿ ಹೇಳಿದರೆ ಅಶ್ವಖುರಪುಟಗಳ ಕ್ರಮಿಕವಾದ ಸದ್ದಿನಂತೆಯೇ ಕೇಳಿಸುವುದು!

'ತೀರ್ಥಪ್ರಬಂಧ'ದಲ್ಲಿ ಎಷ್ಟೋ ರಸಭರಿತ ಉತ್ಪ್ರೇಕ್ಷೆಗಳೂ ಚತುರೋಕ್ತಿಗಳೂ ಅಲಂಕಾರಗಳೂ ತುಂಬಿರುವುವು. ಅದು ಚಿಕ್ಕ ಗ್ರಂಥವಾದರೂ ನೂತನ ಸರಣಿಯಿಂದ ರಚಿಸಲ್ಪಟ್ಟಿದೆ. ಆಧುನಿಕ ಮಾದರಿಯ ಯಾತ್ರಾವರ್ಣನೆಯ ಸಂಸ್ಕೃತ ಖಂಡಕಾವ್ಯ ಇದೊಂದೇ. 'ವಿಶ್ವಗುಣಾದರ್ಶ ಚಂಪು' ಒಂದು ರೀತಿಯಲ್ಲಿ ಇದನ್ನು ಹೋಲುತ್ತದೆ.

ಕಾಳಿದಾಸನು ಮೇಘದೂತದಲ್ಲಿ ಉತ್ತರ ಭಾರತದ ಸ್ಥಳಗಳ ವರ್ಣನೆಮಾಡಿದ್ದಾನೆ. ತಮಿಳಿನ ಕೆಲ ಸ್ತೋತ್ರಗಳಲ್ಲಿ ದಕ್ಷಿಣದ ಶೈವ ಕ್ಷೇತ್ರಗಳ ವರ್ಣನೆ ಮಾತ್ರವಿದೆ. ಆದರೆ ಶ್ರೀ ವಾದಿರಾಜರ ಈ ಸ್ತೋತ್ರದಲ್ಲಿ ಉತ್ತರ—ದಕ್ಷಿಣ, ಶೈವ—ವೈಷ್ಣವ ಭೇದವಿಲ್ಲದೆ ಎಲ್ಲ ಪುಣ್ಯತೀರ್ಥಗಳ ವರ್ಣನೆಯೂ ಬಂದಿದೆ.

ಕೆಲವು ಸ್ಥಳಗಳ ವರ್ಣನೆಯಲ್ಲಿ ಅಲ್ಲಿಯ ಐತಿಹ್ಯಗಳನ್ನು ಚಮತ್ಕಾರವಾಗಿ ಸೇರಿಸಲಾಗಿದೆ. ಯತೀಶ್ವರರಾದರೂ ರಾಜರು ಸ್ವದೇಶಾಭಿಮಾನಿಗಳು ಎಂಬುದಕ್ಕೆ ಇವರು ಬರೆದ ಶೃಂಗಾರರಸನಿರ್ಭರವಾದ ಪರಶುರಾಮ ಕ್ಷೇತ್ರವರ್ಣನೆಯ ಪದ್ಯವನ್ನು ನೋಡಿದರೆ ಗೊತ್ತಾಗುವುದು.

> ಕರ್ಣೇ ಪದನ್ಯಸ್ತರುಚೀ ರಿರಂಸು
> ರ್ವಾರಾಶಿವಸ್ತ್ರಂ ಜಘನಾದ್ಧಿ ಯಸ್ಯಾಃ
> ಅಮೂಮುಚದ್ಬಾಣಕರೇಣ ಭೂಮೇಃ
> ಶ್ರೀಭಾರ್ಗವಃ ಸಾ ಜಯತಿಕ್ಷಿತಿರ್ನಃ ॥

ಈ ಶ್ಲೋಕದಲ್ಲಿ ಪರಶುರಾಮನು ಗೋಕರ್ಣ ಕ್ಷೇತ್ರದಲ್ಲಿ ನಿಂತು ಬಾಣಪ್ರಯೋಗಮಾಡಿ ಸಹ್ಯಾದ್ರಿಯ ಪ್ರತ್ಯಂತ ಪ್ರದೇಶದಿಂದ (ಭೂಮಿಯ) ಸಮುದ್ರ ವಸನವನ್ನು ದೂರಮಾಡಿ ಪರಶುರಾಮ ಕ್ಷೇತ್ರವನ್ನು ನಿರ್ಮಿಸಿದ ವೃತ್ತಾಂತವನ್ನು ಸಮಾಸೋಕ್ತಿಯಿಂದ ಶೃಂಗಾರ ನಾಯಕನೊಬ್ಬನು ತನ್ನ ಪ್ರಿಯೆಯೊಡನೆ ರಮಿಸುವುದಕ್ಕಾಗಿ ಆಕೆಯ ಕಿವಿಯಲ್ಲಿ ಇಂಪಾದ ಮಾತುಗಳನ್ನಾಡಿ ಅವಳನ್ನು ಕ್ರಮಶಃ ಉಪಸರ್ಪಿಸುವುದಕ್ಕೆ ಅನ್ವಯಿಸಿ ಹೇಳಿದ್ದು ಬಹು ಸುಂದರವಾಗಿ ತೋರುವುದು.

ಉಡುಪಿಯ ಶ್ರೀ ಕೃಷ್ಣನು ಬಲಗೈಯಲ್ಲಿ ಕಡೆಗೋಲನ್ನೂ ಎಡಗೈಯಲ್ಲಿ ಹಗ್ಗವನ್ನೂ ಹಿಡಿದು ನಿಂತಿರುವ ದೃಶ್ಯವನ್ನು ಉಗ್ರ ಸಂಸಾರಾಬ್ಧಿಯಲ್ಲಿ ಸಿಲುಕಿ ನರಳುವ ನರರಿಗೆ ಅಭಯವಿತ್ತು ಅವರಿಗೆ ಆ ಕಡಲಿಂದ ಕಡೆದು ತೆಗೆದ ಮೋಕ್ಷಸುಖವನ್ನು ಕೊಡುವೆನೆಂಬ ಉದಾರ ಸಂದೇಶ ಕೊಡುವುದೆಂದು ರಾಜರು ವರ್ಣಿಸಿದ್ದಾರೆ.

ಪಾಜಕ ಕ್ಷೇತ್ರದ ಹತ್ತಿರದ ವಿಶ್ವನಾಥ ಕ್ಷೇತ್ರದಲ್ಲಿರುವ ಶಿವಾಲಯವನ್ನು ವರ್ಣಿಸುವ ಶ್ಲೋಕಗಳಲ್ಲಿ ತುಂಬಿರುವ ಪ್ರಾಸಾನುಪ್ರಾಸಗಳು ಅತಿ ಸುಂದರವಾಗಿವೆ; ಅರ್ಥ ಸರ್ವಾದರಣೀಯವಾಗಿದೆ.

ವಿಶ್ವಪಾವನೆಯಾದ ಗಂಗೆಯನ್ನು ವರ್ಣಿಸುವಾಗ ಸ್ವಯಂ ಪೂತಾತ್ಮರಾದ ಯತಿವರರು, "ಸತ್ಯಲೋಕದಿಂದ ಹೊರಟು ಭೂಲೋಕ ಪರ್ಯಂತ ಬಹುದೂರ ಪ್ರಯಾಣ ಮಾಡುತ್ತ ನಡುನಡುವೆ ಅಭೇದ್ಯ ಪರ್ವತಗಳನ್ನು ಭೇದಿಸಿಕೊಂಡು ಪ್ರವಹಿಸುವ ನಿನಗೆ ನಾನೊಬ್ಬ ಬಹು ದೂರಸ್ಥನಾದೆನೇ? ಎಷ್ಟೋ ಮಹಾಪಾಪಗಳನ್ನು ಪ್ರಕ್ಷಾಲಿಸುವ ನಿನಗೆ ನನ್ನ ಸ್ವಲ್ಪ ಪಾಪವನ್ನು ತೊಳೆಯುವುದು ಹೆಚ್ಚಿನ ಭಾರವೆನಿಸೀತೇ?' ಎಂದು ಕರುಣವನ್ನು ಉಕ್ಕಿಸುವಂತೆ ಪ್ರಾರ್ಥಿಸಿದ್ದಾರೆ.

ಗಯಾ ಪಂಪಾಕ್ಷೇತ್ರಗಳನ್ನೂ ವಾದಿರಾಜರು ಇದೇ ಮೇರೆಗೆ ಸೊಗಸಾಗಿ ಬಣ್ಣಿಸಿದ್ದಾರೆ.

ಚೋಳಮಂಡಲದಲ್ಲಿರುವ ಕಾಂಚೀಪುರದ ವರ್ಣನೆಯು ಬಹು ಸೊಗಸಾಗಿರುವುದು:

ರಮ್ಯೋ ವರದರಾಜೋಽಯಂ ರಸಿಕಾಗ್ರೇಸರೋ ಧ್ರುವಂ
ಕಥಮಾತ್ಮವಧೂಶ್ಲಾಘ್ಯಕಾಂಚೀದೇಶೇ ನ ಚೇದ್ವಸೇತ್ ||

ಕಾಂಚೀ ವರದರಾಜ ದೇವನು ಉತ್ತಮ ರಸಿಕನಾಗಿರಬೇಕು! ಇಲ್ಲದಿದ್ದರೆ ತನ್ನ ಪತ್ನಿಯಾದ ಭೂದೇವಿಗೆ ಶ್ಲಾಘ್ಯವಾದ (ಅವಳ ಉಡಿ ಪ್ರದೇಶದೋಪಾದಿಯಲ್ಲಿರುವ) "ಕಾಂಚಿ" ಮಂಡಲದಲ್ಲಿಯೇ ಸದಾ ಆಸಕ್ತನಾಗಿರಲು ಕಾರಣವೇನು? ಎಂಬ ಉತ್ಪ್ರೇಕ್ಷೆ ಬಹು ರಸವತ್ತಾಗಿದೆಯಲ್ಲವೇ?

ಆ ಕಾಂಚೀ ನಗರದಲ್ಲಿಯೇ ಇರುವ ಶಿವಕ್ಷೇತ್ರವಾದ ಏಕಾಮ್ರನಾಥನ ವರ್ಣನೆಯು ಮತ್ತೂ ಸೊಬಗಿನದು:

ಕಂತುಶರವ್ಯಶರಾಕ್ರಾಂತಸ್ವಾಂತಂ ಮತ್ವೇವ ಪಾರ್ವತೀ
ಆಮ್ರಮೂಲೇ ಸ್ಥಿತಂ ಶಂಭುಮಾಲಿಂಗ್ಯಾಸ್ತೇ ಶುಚಿಸ್ಮಿತಾ ||

ಕಾಂಚೀ ಏಕಾಮ್ರನಾಥ ಲಿಂಗವು ಒಂದು ಮಾವಿನ ಮರದ ಬುಡದಲ್ಲಿರುವದು. ಆಮ್ರವು ಕಾಮೋದ್ದೀಪಕವಾದಮನ್ಮಥಶರವಾದ್ದರಿಂದ ತನ್ನ ಪತಿಯು ಅದರಿಂದ ಪೀಡಿತನೆಂದೆಣಿಸಿ ಅವನ ಮದನತಾಪ ಪರಿಹಾರಾರ್ಥವಾಗಿ ಪಾರ್ವತಿಯು ಅವನನ್ನು ಸ್ವಯಂ ಗಾಢಾಲಿಂಗನ ಮಾಡಿಕೊಂಡಿರುವಳು ಎಂದು ಕಾರಣೋತ್ಪ್ರೇಕ್ಷೆ:- ಕಾಂಚೀಲಿಂಗದ ಮಧ್ಯಭಾಗವು ಗೌರ್ಯಾಲಿಂಗನದಿಂದ ಸಂಕುಚಿತವಾಗಿರುವುದೆಂದು ಇತಿಹಾಸ.

ಕವಿರಾಜರ ಐತಿಹಾಸಿಕ ತತ್ವದೃಷ್ಟಿಯನ್ನು ವ್ಯಕ್ತಪಡಿಸಲು ಕಾವೇರೀವರ್ಣನರೂಪವಾದ

ಮೋಕ್ಷದಾನಕ್ಷಮಾಃ ಸಂತಿ ಸರಿತಃ ತತ್ರ ತತ್ರ ಹಿ |
ಕಾವೇರೀ ಚೋಳಭೂಮಾತಾಭುಕ್ತಿಮುಕ್ತಿಕರೀ ನೃಣಾಂ |

ಎಂಬ ಒಂದೇ ಶ್ಲೋಕವು ಸಾಕು. ಕಾವೇರೀ ನದಿಯು ಕರ್ನಾಟಕ ದೇಶದಲ್ಲಿ ಉದ್ಭವಿಸಿದರೂ ಕೃಷಿಕರ್ಮದಲ್ಲಿ ಮೈಸೂರು ಸೀಮೆಗೆ ಉಪಯುಕ್ತಳಲ್ಲ. ಈ ಮಹಾನದಿಯ ಪರಿಪೂರ್ಣ ಪ್ರಯೋಜನವನ್ನು ಚೋಳದೇಶವೇ (ತಮಿಳು ನಾಡು) ಪಡೆದಿರುವುದು. ಘೋರರೇಶನ್ ಕಾಲದ ಈಗಲೂ ಸಮೃದ್ಧ ಜಿಲ್ಲೆಯೆಂದು ಗಣನಾರ್ಹವಾದ ತಂಜಾವೂರು ತಿರುಚಿನಾಪಳ್ಳಿ ಜಿಲ್ಲೆಗಳನ್ನು ಒಳಗೊಂಡು "ಶೋಳ ಒಳನಾಡು ಶೋರುಡೈತ್ತು" ಎಂದು ತಮಿಳು ನಾಡಿನ ಕವಿಶ್ರೇಷ್ಠಳಾದ ಅವ್ವಯ್ಯಾರಳಿಂದ ಹೊಗಳಲ್ಪಟ್ಟ ಚೋಳದೇಶದ ಸಸ್ಯಸಮೃದ್ಧಿಗೆ ಕಾರಣಳಾದ ಕಾವೇರೀ ನದಿಯ ಮಹತ್ವವನ್ನು ಇದಕ್ಕಿಂತಲೂ ಅನ್ವರ್ಥವಾಗಿ ವರ್ಣಿಸಲು ಸಾಧ್ಯವಿಲ್ಲ.

ಕನ್ನಡನಾಡಿನ ಭಾಗ್ಯಕುಮಾರರಾದ ಶ್ರೀ ವಾದಿರಾಜರ ಕೃತಿಗಳ ಈ ಅಲ್ಪಪರಿಚಯದಿಂದ ಆಕೃಷ್ಟರಾಗಿ ಸಾಹಿತಿಗಳು ಇವರನ್ನು ಇನ್ನಾದರೂ ಅರಿತು ಇವರ ಕೃತಿಗಳ ರಸಾಸ್ವಾದವನ್ನು ಪೂರ್ಣವಾಗಿ ಮಾಡಲಿ. ವಿಶ್ವವಿದ್ಯಾಲಯಾದಿಗಳಲ್ಲಿ ಕನ್ನಡನಾಡಿನ ಸಂಸ್ಕೃತ ಕವಿಸಾರ್ವಭೌಮರ ಕೃತಿಗಳೂ ಕನ್ನಡ ಯುವತಿ-ಯುವಕರ ಪರಿಜ್ಞಾನಕ್ಕೆ ಬರುವ ಹಾಗೆ ಅಧಿಕಾರಿಗಳು ಏರ್ಪಡಿಸಲೆಂದು ಹೃತ್ಪೂರ್ವಕ ಹಾರೈಸುವೆ.



ಕಲಾಕೌಶಲ್ಯದಿಂದ ಮೆರೆಯುವ
ಸಿದ್ಧೇಶ್ವರ ಕಂಪನಿಯ
ಉಕ್ಕಿನ ತಿಜೋರಿ, ಕಪಾಟ, ಕ್ಯಾಶ-ಬಾಕ್ಸ
ಮತ್ತು ಕೀಲಿಗಳಿಗಾಗಿ
ಇಂದೇ ಬರೆಯಿರಿ:—
ಸಿದ್ಧೇಶ್ವರ ಮತ್ತು ಕಂಪನಿ
ಹೆಡ್ ಆಫೀಸ ಮತ್ತು ಕಾರಖಾನೆ, ಹುಬ್ಬಳ್ಳಿ
ಶಾಖೆಗಳು:- ಹೈದರಾಬಾದ (ಡೆಕ್ಕನ್), ಕೊಲ್ಹಾಪುರ.
ಏಜೆನ್ಸಿ:- ದಾವಣಗೇರಿ

ಪೂರ್ವ ಕಾಲದಿಂದಲೂ ಕಾಶ್ಮೀರವು ಭಾರತದ ಒಂದು ಅವಿಭಾಜ್ಯ ಅಂಗವಾಗಿಯೇ ಇದೆ. ಪಾಕಿಸ್ತಾನಿಗಳ ದಾಳಿ ಮತ್ತು ಸಂ. ರಾ. ಸಂಘದ ಗಾಳಿಕೋಳಿತನದ ನೀತಿಯಿಂದ ಈ ಮಾತನ್ನು ಮರೆಮಾಚಲಳವಲ್ಲ. ಕಾಶ್ಮೀರದ ರಾಜರೂ ಪ್ರಜಾಪ್ರತಿನಿಧಿಗಳೂ ಸೇರಿಯೆ ಭಾರತದಲ್ಲಿ ಕಾಶ್ಮೀರವನ್ನು ಸೇರ್ಪಡೆಗೊಳಿಸಿದ್ದಾರೆ. ಕಾಶ್ಮೀರ ನಮ್ಮನ್ನೇ ನಂಬಿದೆ. ನಾವು ಈ ನಂಬಿಕೆಯನ್ನು ಸಾರ್ಥಕಗೊಳಿಸಬೇಕು.

"ನಯಾ ಕಶ್ಮೀರ್"



ಲೇಖಕರು: **ಶ್ರೀ. ರಂಗನಾಥ ದಿವಾಕರ**

ಭಾರತ ಸರಕಾರದ ಸುದ್ದಿ—ಆಕಾಶವಾಣಿ ಮಂತ್ರಿಗಳು

ಇದೇ ಮೊನ್ನೆ ನಾನು ಸುಮಾರು ಹತ್ತು ದಿವಸದ ಪ್ರವಾಸವನ್ನು ಕಾಶ್ಮೀರದಲ್ಲಿ ಮುಗಿಸಿದೆನು; ಅಕ್ಟೋಬರ ೧೮ ರಿಂದ ೨೫ರ ವರೆಗೆ ಏನಿಲ್ಲೆಂದರೂ ಸುಮಾರು ೮೦೦ ಮೈಲಿನ ಪ್ರವಾಸ ಮಾಡಿರಲಿಕ್ಕೆ ಸಾಕು. ದುರ್ದೈವದಿಂದ ಈಚೆಗೆ ನಿಸರ್ಗದ ಪ್ರಕೋಪದ ಮೂಲಕ ಮಳೆ ಹೆಚ್ಚಾಗಿ ಜೆಹಲಮ್ ನದಿಯು ತನ್ನ ಇತ್ತಡಿಗಳನ್ನು ಮೀರಿ ಹಲವೆಡೆಗೆ ಅವನ್ನು ಒಡೆದು ಹರಿದು ಲಕ್ಷಾಂತರ ರೂಪಾಯಿಯ ಹಾನಿ ಮಾಡಿದೆ. ಎಷ್ಟೊ ಸಣ್ಣಪುಟ್ಟ ಪೂಲುಗಳು ಹರಿದು ಹೋಗಿವೆ. ಹಲವೆಡೆಗೆ ದಾರಿ ಕೆಟ್ಟುಹೋಗಿದೆ. ಬಿದ್ದ ಮನೆಗಳ ಹಾಗೂ ಮುಳುಗಿದ ಹೊಲಗಳ ಲೆಕ್ಕವಿಲ್ಲ. ಹೀಗಿದ್ದರೂ ಜನ, ಸರಕಾರ ಇಬ್ಬರೂ ಅಷ್ಟೇ ಧೈರ್ಯದಿಂದ ಹಾಗೂ ಉತ್ಸಾಹದಿಂದ ಎಲ್ಲವನ್ನು ಸುಧಾರಿಸಲು ಹಗಲಿರುಳು ಪ್ರಯತ್ನಿಸುತ್ತಿದ್ದಾರೆ.

ಎಂಟು ಹತ್ತು ದಿನದ ಅವಧಿಯಲ್ಲಿ ನಾನು ೫೦೦೦ ಅಡಿ ಎತ್ತರಿರುವ ವಿಶಾಲವಾದ ಕೊಳ್ಳವನ್ನು ಮೊದಲು ಮಾಡಿ ೧೨೦೦೦ ಅಡಿ ಎತ್ತರಿರುವ ಜೋಝಿಲಾ, ಗುರೇಜ ಮುಂತಾದ ಹಿಮಾಲಯದ ಉತ್ತುಂಗ ಭಾಗಗಳ ವರೆಗೆ ಸಂಚಾರ ಮಾಡಿದೆನು. ಸುಂದರ ಸುಗಂಧಿ ಕೇಶರವನ್ನು ಬೆಳೆಯುವ ಮಿದುವು ಭೂಮಿಯಿಂದ ಪ್ರಾರಂಭಿಸಿ ವಜ್ರಪ್ರಾಯ ಕಠಿಣವಾದ ಬಂಡೆಗಲ್ಲಿನ ಹಿಮಾಚಲದ ಶಿಖರಗಳ ವರೆಗೆ ಮುಟ್ಟಿದೆನು. ದಿನಾಲು ಎಂಟಾಣೆ ಪಡೆಯುವ ಕೂಲಿಕಾರನನ್ನು ಮೊದಲುಮಾಡಿ ಕಾಶ್ಮೀರದ ಮುಖ್ಯಮಂತ್ರಿಯಾದ ಶೇಖ ಅಬ್ದುಲ್ಲಾ ಹಾಗು ಮಹಾರಾಜರಾದ ಕರಣಸಿಂಗ ಇವರೆಲ್ಲರನ್ನು ಸಂದರ್ಶಿಸಿದೆನು. ನ್ಯಾಶನಲ್ ಕಾನ್ಫರನ್ಸಿನ ಕಾರ್ಯಕರ್ತರು, ಅವರ ಕಚೇರಿಗಳು ಇವುಗಳೊಡನೆ ನನಗೆ ಗಾಢವಾದ ಸಂಬಂಧ ಬಂದಿತು. ಹತ್ತು ಮನೆಗಳಿದ್ದ ಹಳ್ಳಿಗಳನ್ನು ಸಹ ನಾನು ಸುತ್ತಿದೆನು. ಅದೇ ರೀತಿ ಸುಮಾರು ೨ ಲಕ್ಷದಷ್ಟು ಜನರಿರುವ ಶ್ರೀನಗರವನ್ನೂ ಸುತ್ತಿದೆನು. ಕನಿಷ್ಠ ೨೦ ಸಭೆಗಳಲ್ಲಿ ನಾನು ಮಾತನಾಡಿದೆನು. ಹಲವು ಸಭೆಗಳಲ್ಲಿ ೫೦-೬೦ ಜನರಿದ್ದರೆ ಹಲವುಗಳಲ್ಲಿ ೨-೩ ಸಾವಿರದ ವರೆಗೆ ಜನರಿದ್ದರು.

ಈ ನನ್ನ ಪ್ರವಾಸದಲ್ಲಿ ನಾನು ನೋಡಿದ ಎಲ್ಲ ಮಾತುಗಳನ್ನಾಗಲಿ, ನನಗೆ ಬಂದ ಎಲ್ಲ ಅನುಭವಗಳನ್ನಾಗಲಿ ವಿವರವಾಗಿ ಇಲ್ಲಿ ಹೇಳುವದು ಸಾಧ್ಯವಿಲ್ಲ. ಆದರೆ ಸದ್ಯಕ್ಕೆ ಉದ್ಭವಿಸಿದ್ದ ಹಾಗೂ ಎಲ್ಲರ ಕಣ್ಣೆದುರಿರುವ ಕಾಶ್ಮೀರ ಸಮಸ್ಯೆಯ ದೃಷ್ಟಿಯಿಂದ ನಾಲ್ಕು ಮಾತುಗಳನ್ನು ಇಲ್ಲಿ ಬರೆಯಲಿಚ್ಛಿಸುವೆ.

ಮೊದಲನೇ ಮಾತೆಂದರೆ ಹಿಂದುಸ್ತಾನ ಹಾಗೂ ಕಾಶ್ಮೀರಗಳಲ್ಲಿಯ ಗಾಢವಾದ ಹಾಗು ಅತ್ಯಂತ ಪ್ರಾಚೀನವಾದ ಸಂಬಂಧ. ಇಲ್ಲಿನ ಅನೇಕ ಸ್ಥಾನಗಳ ಹೆಸರುಗಳನ್ನು ಕೇಳಿದರೆ ಈ ವಿಷಯವು ಸ್ಪಷ್ಟವಾಗುವುದು. ಕಾಶ್ಮೀರದ ಮುಖ್ಯಪಟ್ಟಣವಾದ ಶ್ರೀನಗರವು ಅಶೋಕ ಮಹಾರಾಜನಿಂದ ಕಟ್ಟಲ್ಪಟ್ಟಿತು. ಹಾಗೂ ಅದು ಮುಂದೆ ೬೦೦ ವರ್ಷಗಳ ನಂತರ ಸ್ವಲ್ಪ ದೂರ ಸ್ಥಳಾಂತರಿಸಲ್ಪಟ್ಟಿತು. ಈಗಿನ ಪಟ್ಟಣದ ಹತ್ತಿರವೆ ಶಂಕರಾಚಾರ್ಯ ಪರ್ವತ ಎಂಬುದು ಇರುವದು. ಮೇಲೆ ಶಂಕರಾಚಾರ್ಯರ ಗುಡಿ ಇದ್ದು, ಶಂಕರಾಚಾರ್ಯರು ಅಲ್ಲಿ ಒಂದು ತಿಂಗಳ ವರೆಗೆ ವಾಸಿಸಿ, ಬೌದ್ಧ ಭಿಕ್ಷುಗಳನ್ನು ಸೋಲಿಸಿ ಹೋದರು ಎಂಬ ಐತಿಹ್ಯವಿದೆ. ಇದಲ್ಲದೆ ಅನಂತನಾಗ, ಖಿರಭವಾನಿ, ಶಾಲಿಮಾರ್, ಬಂದೀಪೋರ, ಅಮರನಾಥ ಮುಂತಾದ ಅನೇಕ ಸ್ಥಳಗಳ ಹೆಸರುಗಳು, ಅದೇ ರೀತಿ ಪರ್ವತಶಿಖರಗಳ ಹೆಸರುಗಳು, ಕಿಶನಗಂಗಾ, ದೂಧಗಂಗಾ ಮುಂತಾದ ನದಿಗಳ ಹೆಸರುಗಳು, ಇವೆಲ್ಲ ಇದೇ ಮಾತನ್ನು ಸಿದ್ಧಪಡಿಸುವವು.

ಈಗ ಒಂದು ಚಿಕ್ಕ ಹಳ್ಳಿಗೆ ಹೋದರೂ ಚಿಕ್ಕವರು, ದೊಡ್ಡವರು ನಮಗೆ " ಜಯಹಿಂದ '' ಎಂಬ ಅಭಿವಂದನೆಯನ್ನು ಕೊಡುವರು. ಅದರೊಡನೆ " ಜಯ ನಯಾ ಕಶ್ಮೀರ್ '' ಎಂಬ ಜಯಕಾರವನ್ನೂ ಹೇಳುವರು. ಇದಲ್ಲದೆ ನ್ಯಾಶನಲ್ ಕಾನ್ಫರನ್ಸ (ಕಾಶ್ಮೀರ ಕಾಂಗ್ರೆಸ್), ಪಂಡಿತ ಜವಾಹರಲಾಲ, ಶೇಖ ಅಬ್ದುಲ್ಲಾ ಇವರ ಹೆಸರಿನಿಂದ ಸಭೆ ಮುಂತಾದವುಗಳಲ್ಲಿ ದೊಡ್ಡ ಜಯಕಾರಗಳು ನಡೆಯುವವು. ಒಂದು ರೀತಿ ನೋಡಿದರೆ ಈ ಜಯಕಾರಗಳಲ್ಲಿಯೇ ಅವರ ಧ್ಯೇಯಗಳು, ವಿಚಾರಗಳು, ಆಕಾಂಕ್ಷೆಗಳು ಅಡಕವಾಗಿವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಕಾಂಗ್ರೆಸ್ಸಿನಂತೆಯೇ ಅಲ್ಲಿಯ ನ್ಯಾಶನಲ್ ಕಾನ್ಫರನ್ಸು ಮೊಟ್ಟಮೊದಲಿನಿಂದಲೂ ರಾಷ್ಟ್ರೀಯ ವೃತ್ತಿಯಿಂದ ಸ್ವಾತಂತ್ರ್ಯ ಹೋರಾಟ ನಡೆಸುತ್ತ

ಬಂದಿರುವದು. ಈಗ ರಾಜ್ಯಾಧಿಕಾರವು ನ್ಯಾಶನಲ್ ಕಾನ್ಫರನ್ಸಿನ ಮುಖಂಡರ ಕೈಯಲ್ಲಿಯೇ ಇರುವದು. ಮಹಾರಾಜರು ಭಾರತದ ಹಲವು ರಾಜರಂತೆಯೇ ಕೇವಲ ನಾಮಮಾತ್ರಕ್ಕೆ ಇರುವರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. "ಜಯಹಿಂದ" ಹಾಗೂ ಜವಾಹರ ಲಾಲರ ಜಯಕಾರ ಇವು ಅಲ್ಲಿಯ ಜನತೆಯ ಜವಾಹರಪ್ರೇಮ ವನ್ನೂ ಹಿಂದುಸ್ತಾನದ ಬಗ್ಗೆ ಇದ್ದ ಸ್ನೇಹವನ್ನೂ ವ್ಯಕ್ತಪಡಿಸು ವವು. ಅದೇ ರೀತಿ "ಜಯ ನಯಾ ಕಶ್ಮೀರ್" ಎಂಬುದು ಅವರ ಭಾವೀ ಆಕಾಂಕ್ಷೆಗಳನ್ನು ವ್ಯಕ್ತಪಡಿಸುವದು.

ಪೂರ್ಣವಾದ ಪ್ರಜಾತಂತ್ರ ರಾಜ್ಯಪದ್ಧತಿಯನ್ನು ಅಲ್ಲಿ ಪ್ರಸ್ಥಾಪಿಸಬೇಕು; ಎಲ್ಲ ಶ್ರಮಜೀವಿಗಳ ದರ್ಜೆ ಹೆಚ್ಚಿಸಬೇಕು; ಜಾತಿ ಪಂಥ, ಧರ್ಮನಿರಪೇಕ್ಷವಾದ ರಾಜ್ಯಕಾರಭಾರವು ಪ್ರಸ್ಥಾಪಿತ ವಾಗಬೇಕು; ಇದೇ ಈ 'ನಯಾ ಕಶ್ಮೀರ್' ಜಯಕಾರದ ಅರ್ಥವು.

೧೯೪೭ರ ಅಕ್ಟೋಬರ ತಿಂಗಳ ೨೭ನೇ ತಾರೀಖಿನ ದಿವಸ ಮೊಟ್ಟಮೊದಲು ಗಡಿಯ ಮೇಲಿರುವ ಕಾಡುಜನರು ಪಾಕಿಸ್ತಾನ ಜನರ ಪ್ರೇರಣೆ ಹಾಗೂ ಸಹಾಯದಿಂದ ಈ ಪ್ರದೇಶಗಳ ಮೇಲೆ ದಾಳಿಯನ್ನಿಟ್ಟರು. ಮುಂದೆ ಜನೆವರಿಯಲ್ಲಿ ಪ್ರತ್ಯಕ್ಷ ಪಾಕಿಸ್ತಾನದ ಸೈನ್ಯವೆ ದಾಳಿಯಲ್ಲಿ ಭಾಗವಹಿಸಿತು. ಈ ಮಾತನ್ನು ಈಗ ಸಂಯುಕ್ತ ರಾಷ್ಟ್ರಸಂಘದ ಮಧ್ಯಸ್ಥರಾದ ಡಿಕ್ಸನ್ ಸಾಹೇಬರು ಸ್ಪಷ್ಟವಾಗಿ ಇವೆರಡೂ "ಆಕ್ರಮಣಗಳು" ಎಂದು ಸಾರಿದ್ದಾರೆ. ಆ ಸಂದರ್ಭದಲ್ಲಿಯೇ ಕಾಶ್ಮೀರ ಸರಕಾರ ಹಾಗೂ ಕಾಶ್ಮೀರ ಜನತೆಯ ಏಕಮೇವ ಪ್ರತಿನಿಧಿಯಾದ ನ್ಯಾಶನಲ್ ಕಾನ್ಫರನ್ಸ ದವರು ಹಿಂದುಸ್ತಾನ ಸರಕಾರಕ್ಕೆ ಮೊರೆ ಇಟ್ಟರು. ಕೂಡಲೆ ಹಿಂದುಸ್ತಾನ ಸರಕಾರದವರು ಕಾಶ್ಮೀರ ಸಂಸ್ಥಾನವನ್ನು ಹಿಂದುಸ್ತಾನಕ್ಕೆ ಸೇರ್ಪಡೆ ಮಾಡಿಕೊಂಡು ತಮ್ಮ ಸೈನ್ಯಪಡೆಯನ್ನು ಕಾಶ್ಮೀರದ ಸಂರಕ್ಷಣೆಗಾಗಿ ಕಳಿಸಿದರು. ಅಷ್ಟರಲ್ಲಿ ಆಕ್ರಮಣ ಕಾರರು ಶ್ರೀನಗರದ ತೀರ ಸಮೀಪಕ್ಕೆ ಅಂದರೆ ಮೂರು ಮೈಲಿನಷ್ಟು ಸಮೀಪ ಬಂದು ತಲುಪಿದ್ದರು. ಅಂದಿನಿಂದ ಈ ವರೆಗೆ ಹಿಂದುಸ್ತಾನದ ಸೈನಿಕರು ಅಲ್ಲಿ ತಮ್ಮ ಶೌರ್ಯ, ವೀರ್ಯದಿಂದ ಎಲ್ಲರನ್ನು ಬೆರಗುಗೊಳಿಸಿದ್ದಾರೆ. ಜೋಝಿಲಾ ಯುದ್ಧದಲ್ಲಿ ನಮ್ಮ ಸೈನಿಕರು ಟ್ಯಾಂಕುಗಳನ್ನು ೧೨೦೦೦ ಅಡಿ ಎತ್ತರಕ್ಕೆ ಒಯ್ದುದು ಯುದ್ಧಗಳ ಇತಿಹಾಸದಲ್ಲಿಯೆ ಅದ್ವಿತೀಯವಾದ ಸಂಗತಿ. ಸಂಯುಕ್ತ ರಾಷ್ಟ್ರಸಂಘದ ಪರವಾಗಿ ಅಲ್ಲಿಗೆ ಬಂದ ನಿರೀಕ್ಷಕರು ಈ ಸಂಗತಿಯನ್ನು ನೋಡಿ, ಕೇಳಿ ಈಗ್ಯೂ ಬೆರಳು ಕಚ್ಚುವರು. ಅದೇ ರೀತಿ ಲೇ ಎಂಬಲ್ಲಿಗೆ ವಿಮಾನ ಮಾರ್ಗವಾಗಿ ಹೋಗುವಾಗ ಕನಿಷ್ಠ ೧೭೦೦೦ ಅಡಿಯಷ್ಟು ಮೇಲೆ ಹೋಗಬೇಕಾಗುವದು. ಸಾಮಾನ್ಯವಾಗಿ ಅಷ್ಟು ಎತ್ತರ ಹೋಗಬೇಕಾದರೆ ಆಕ್ಸಿಜನ್ ವ್ಯವಸ್ಥೆ ಇಲ್ಲದೆ ಯಾರೂ ಹೋಗುವದಿಲ್ಲ. ಆದರೆ ನಮ್ಮ ಶೂರ ವೈಮಾನಿಕರು ಸಾಕಷ್ಟು ಸೈನ್ಯ, ಸಾಮುಗ್ರಿ ಮುಂತಾದವುಗಳನ್ನೆಲ್ಲ ಆಕ್ಸಿಜನ್ನಿನ ಯಾವ ವ್ಯವಸ್ಥೆಯಿಲ್ಲದೆ ಲೇಕ್ಕೆ ಒಯ್ದು ಮುಟ್ಟಿಸಿದರು. ಈಗ ಲೇ ಎಂಬಲ್ಲಿ ಇರುವ ವಿಮಾನನಿಲ್ದಾಣವು ಜಗತ್ತಿನಲ್ಲಿ ಎಲ್ಲಕ್ಕೂ ಎತ್ತರವಾದ ನಿಲ್ದಾಣವಿರುವದು. ಅದೇ ರೀತಿ ಗುರೋಜಕ್ಕೆ ಹೋಗಬೇಕಾದರೆ ರಾಜಧಾನಿ ಎಂಬ ಹಿಮಾಲಯದ ಒಂದು ಶಿಖರವನ್ನು ದಾಟಬೇಕಾಗುವದು. ಅದು ೧೧೫೪೭ ಅಡಿ ಎತ್ತರವಿದೆ. ಜಗತ್ತಿನಲ್ಲಿ ಎಲ್ಲಕ್ಕೂ ಉಚ್ಚ ಸ್ಥಾನದಲ್ಲಿದ್ದ ಮೋಟರದಾರಿಯದು.


ಅದಲ್ಲದೆ ಕಾಶ್ಮೀರ ಜನತೆಯ ಸೇವೆಯನ್ನು ಪರೋಪರಿಯಿಂದ ಮಾಡಿ ಭಾರತೀಯ ಸೈನಿಕರು ಅವರಿಗೆ ಅತ್ಯಂತ ಪ್ರಿಯರಾಗಿದ್ದಾರೆ. ಆದುದರಿಂದಲೇ ಇಡಿ ಕಾಶ್ಮೀರ ಕೊಳ್ಳದಲ್ಲಿ ಹಿಂದುಸ್ತಾನದ ಬಗ್ಗೆ, ಹಿಂದುಸ್ತಾನದ ಮುಖಂಡರ ಬಗ್ಗೆ ಹಾಗು ಹಿಂದೀ ಸೈನಿಕರ ಬಗ್ಗೆ ಒಂದು ಬಗೆಯ ಪ್ರೇಮಾದರಗಳ ಭಾವನೆ ನೆಲೆಗೊಂಡಿದೆ. ನ್ಯಾಶನಲ್ ಕಾನ್ಫರನ್ಸಿನ ಮುಖಂಡರೆ ಈಗ ಅಲ್ಲಿಯ ರಾಜ್ಯಸೂತ್ರಗಳನ್ನು ವಹಿಸಿದ್ದರಿಂದ ಹಾಗು ನ್ಯಾಶನಲ್ ಕಾನ್ಫರನ್ಸಿನ ಧ್ಯೇಯವು ನಮ್ಮ ರಾಷ್ಟ್ರೀಯ ಮಹಾಸಭೆಯ ಧ್ಯೇಯದಂತೆಯೇ ಇದ್ದುದರಿಂದ ಹಿಂದುಸ್ತಾನ ಮತ್ತು ಕಾಶ್ಮೀರದ ಈಗಿನ ಮೈತ್ರಿಯು ಕೊನೆಯ ವರೆಗೂ ಉಳಿಯಲು ಯಾವ ಆತಂಕವೂ ಇರಲರಿಯದು.

ಆದರೆ ಕಾಶ್ಮೀರ ಸಮಸ್ಯೆಯು ಸಂಯುಕ್ತರಾಷ್ಟ್ರಸಂಘದ ಎದುರಿಗೆ ಹೋಗಿರುವದರಿಂದ ಮತ್ತು ಪಾಕಿಸ್ತಾನವು ಕಾಶ್ಮೀರವನ್ನು ಬಲಾತ್ಕಾರದಿಂದ ಕೈವಶಪಡಿಸಿಕೊಳ್ಳಬೇಕೆಂಬ ಪ್ರಯತ್ನಮಾಡಬಹುದಾದುದರಿಂದ ಕಾಶ್ಮೀರ ಪ್ರಶ್ನೆಗೆ ವಿಶೇಷ ಒಂದು ಮಹತ್ತ್ವದ ಸ್ವರೂಪವು ಬಂದಿದೆ. ಈ ವಿಷಯವನ್ನು ಬಗೆಹರಿಸುವ ಕೆಲಸದಲ್ಲಿ ನಾವು ಹಿಂದೀಯರು ವಿಶೇಷ ಎಚ್ಚರದಿಂದ ಪ್ರಯತ್ನಿಸಬೇಕಾಗಿದೆ.

ಹಲವರು ಈ ಪ್ರಶ್ನೆಯತ್ತ ದುರ್ಲಕ್ಷ ಮಾಡುವರು. ಆದರೆ ಹಿಂದುಸ್ತಾನದ ಯಾವನೇ ನಾಗರಿಕನು ಈ ಪ್ರಶ್ನೆಯತ್ತ ದುರ್ಲಕ್ಷ ಮಾಡುವುದೆಂದರೆ ದೊಡ್ಡ ತಪ್ಪು. ಹಿಂದುಸ್ತಾನದ ಯಾವದೇ ಭಾಗದಲ್ಲಿ ನಾವು ಇರುತ್ತಿದ್ದರೂ ನಮ್ಮ ಗಡಿಯ ಮೇಲೆ ಏನು ನಡೆದಿದೆ, ಅದರ ಪರಿಸ್ಥಿತಿ ಏನಿದೆ ಎಂಬುದನ್ನು ನಾವು ನಿರೀಕ್ಷಿಸುತ್ತಿರುವುದು ಅವಶ್ಯ. ಯಾಕಂದರೆ ಅಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ ಅದರ ಪರಿಣಾಮವು ಇಡಿ ದೇಶದ ಮೇಲೆ ಆಗಿಯೇ ತೀರುವದು. ಆದುದರಿಂದ ಎಲ್ಲ ನಾಗರಿಕರು ಈ ಪ್ರಶ್ನೆಯತ್ತ ಲಕ್ಷಕೊಡುವದು ಅತ್ಯಾವಶ್ಯಕವಿರುವದು.

ಈ ವಿಷಯದಲ್ಲಿ ಮೊದಲನೆ ಮಾತೆಂದರೆ ಹಿಂದುಸ್ತಾನ ಹಾಗು ಕಾಶ್ಮೀರ ಇವುಗಳಲ್ಲಿರುವ ಪುರಾತನ ಸಂಬಂಧ; ಈಗ ಮೊನ್ನೆ ಕಾಶ್ಮೀರದ ಮೇಲೆ ಕ್ರೂರ ಆಕ್ರಮಣವಾದಾಗ ಹಿಂದೀಯರಿಗೂ ಕಾಶ್ಮೀರಿಗಳಿಗೂ ಆದ ಹೊಸ ಮೈತ್ರಿ; ಕಾಶ್ಮೀರದಲ್ಲಿ ಬಹುಸಂಖ್ಯಾಕರು ಮುಸಲ್ಮಾನರಿದ್ದರೂ ಅವರು ಈಗ ಏಕಕಂಠದಿಂದ ಹಿಂದುಸ್ತಾನದೊಡನೆಯೆ ನಾವು ಇರುವೆವು ಎಂದು ಸಾರುತಿರುವ ಸಂಗತಿ. ಈ ಎಲ್ಲ ಸಂಗತಿಗಳನ್ನು ಲಕ್ಷಕ್ಕೆ ತಂದರೆ ನಾವು ಕಾಶ್ಮೀರ ಜನರ ಕೈಬಿಡುವದಾಗಲಿ ಅಥವಾ ಅವರ ಸುಖ-ದುಃಖಗಳತ್ತ ದುರ್ಲಕ್ಷ ಮಾಡುವದಾಗಲಿ ತಪ್ಪಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಈಗ ಸುಮಾರು ಮೂರು ವರ್ಷ ನಮ್ಮ ಸೈನಿಕರು ಮಾಡಿದ ಅಪಾರ ತ್ಯಾಗ, ತೋರಿಸಿದ ಅಪರಿಮಿತ ಶೌರ್ಯ, ಈಗ ಅವರು ಮಾಡುತ್ತಿರುವ ಸಾಹಸ ಇವೆಲ್ಲ ಈ ಸಂಬಂಧದಲ್ಲಿ ಅತ್ಯಂತ ಗಣ್ಯವಾದವುಗಳಿರುವವು. ಸಂಯುಕ್ತ ರಾಷ್ಟ್ರ ಸಂಘವು ಏನೇ ಹೇಳಿದರೂ ಪಾಕಿಸ್ತಾನದವರು ಯಾವ ಆಶೆ-ಆಕಾಂಕ್ಷೆಗಳನ್ನು ಕಟ್ಟಿಕೊಂಡು ಕುಳಿತಿದ್ದರೂ ಭಾರತವಾಸಿಗಳು ಹಾಗೂ ಕಾಶ್ಮೀರಿ ಜನತೆಯು ನ್ಯಾಯವಾದುದನ್ನು, ಪರಸ್ಪರರಿಗೆ ಹಿತಾವಹವಾದುದನ್ನು ಮಾಡುವದು ಅತ್ಯವಶ್ಯವಿರುವದು.

ಸಾಹುಕಾರರ ಮಗುವಿಗೆ ಅನ್ನಪ್ರಾಶನ ಸಮಾರಂಭ ಮಾಡಿಸಲು ಬಂದ ಮಹಾಶಯರಿಗಾಗಿ ಅತಿಥಿ ಅಭ್ಯಾಗತರು ಕಾದದ್ದೇ ಕಾದದ್ದು. ಅವರು ತಲೆ ದೋರಲೇ ಇಲ್ಲ. ಆದರೆ ಅವರು ದಾರಿ ತಪ್ಪಿ ಬೇರೆ ರಸ್ತೆ ಹಿಡಿದು ಬೇರೆ ಮನೆಗೆ ಹೋಗಿ ಬೇರೆ ಮಗುವಿಗೆ ಅನ್ನಪ್ರಾಶನ ಮಾಡಿಸಿ ಬೇರೆ ಭಾಷಣವನ್ನು ಕೂಡ ಬಿಗಿದುಬಿಟ್ಟರು !



ನಾ. ಕಸ್ತೂರಿ ಹೇಳಿದ್ದು-

★ ಅಂತೂ, ಆಯಿತು !

ಕಾದು ಕಾದು ಕಾವಡಗಿತು. ಹೂಮಾಲೆ ಬಾಡಿತು. ಚಹದ ಬಟ್ಟಲುಗಳು ಆರಿದುವು. ಒಳಗಿನ ಕೋಣೆಯಲ್ಲಿ ಹಾಸಿದ್ದ ಜಮಖಾನೆಯ ಮೇಲೆ ಧೂಳು ಇಳಿಯಿತು; ಹಜಾರದಲ್ಲಿ ನಿಂತು ಬೀದಿಯ ಮತ್ತು ತುದಿಯ ಅಂಚಿನ ಕಡೆ ಕತ್ತು ನೀಡಿನೀಡಿ ನೋಡಿ ನಿರಾಶೆ ಅಡರಿ ತೋಳಿನ ವರೆಗೂ ನೋವು ಹರಡಿತು. ಮಾವಿನ ಸೊಪ್ಪಿನ ತೋರಣ ಜೋತುಬಿತ್ತು.

ಕಂಬ ಹಿಡಿದುಕೊಳ್ಳದೆ ನಿಲ್ಲಲು ಸಾಧ್ಯವಾಗಲಿಲ್ಲ; ಕೋಲೂರದೆ ಏಳಲು ತ್ರಾಸ. ಕೂತವರಿಗೆಲ್ಲ ನಿದ್ದೆ ಹತ್ತಿತು. ನಿಂತವರಿಗೆಲ್ಲ ಆಕಳಿಕೆ ಬಂತು. ಮೊದಮೊದಲು ಉತ್ಸಾಹದಿಂದ ಹರಟೆ ಹೊಡೆದವರಿಗೆಲ್ಲ ಸಂಭಾಷಣೆಗೆ ವಿಷಯವೇ ಇಲ್ಲವಾಯಿತು. ಕಂಟ್ರೋಲಿನಿಂದ ಕೊರಿಯಾ ವರೆಗೂ ಅನೀಮಿಯಾದಿಂದ ಕ್ಷ-ಕಿರಣದ ವರೆಗೂ ಅವರು ಆಡಿ ಮುಗಿಸಿದ್ದರು. ನಾಲಗೆಯ ನೀರು ಬತ್ತಿ ಗಂಟಲಿಗೆ ಕೆರೆತ ಹತ್ತಿ ಎದೆಗೆ ನೋವು ಮೂಡಿ ಕಿವಿ ಮಂದವಾಯಿತು. ಒಬ್ಬರನ್ನೊಬ್ಬರು ಮಾತನಾಡಿಸಿದರೆ, ಕೋಪ ಕೆರಳುವುದು; ಒಬ್ಬರನ್ನೊಬ್ಬರು ಕರೆದರೆ, ಕೆಂಡವಾಗುವರು.

ಆ ಕೋಣೆಯ ಸುತ್ತ, ಗೋಡೆಗಳಿಗೊರಗಿ, ಆಹ್ವಾನಿತ ಮಹನೀಯರು ನಾವು ಮೂವತ್ತು ನಲವತ್ತು ನತದೃಷ್ಟರು, ಕಣ್ಣು ಕೆಂಚಗೆ ಮಾಡಿಕೊಂಡು, ಕುಳಿತಿದ್ದೆವು. ಆಗಲೇ ನಾವು ಅಲ್ಲಿದ್ದ ಪಟಗಳನ್ನೆಲ್ಲ ಹತ್ತಾರು ಬಾರಿ ನೋಡಿ ಮುಗಿಸಿದ್ದೆವು. ಮನೆ ಮಾಲೀಕರ ಮೊದಲ ಹೆಂಡತಿ, ಅವರ ಆರು ಮಕ್ಕಳು, ಅವರ ಅತ್ತೆ ಮಾವಂದಿರು, ಅವರ ಇಷ್ಟ ದೇವತೆಗಳು ಇವರ ಪರಿಚಯ ನಮಗಾಯಿತು, ಪಟಗಳ ಮುಖೇನ. ಮಾಲೀಕರು, ಪಾಪ, ನಮ್ಮ ಬೇಸರಿಕೆಯನ್ನು ಪರಿಹಾರಮಾಡಲು, ನಮ್ಮ ಹಿಂದೆಯೇ ಬಂದು ಆ ಪಟಗಳ ನಾಯಕ-ನಾಯಕಿಯರ ಪೂರ್ವೋತ್ತರಗಳನ್ನೆಲ್ಲ ಒಂದೂ ಬಿಡದೆ ವಿವರಿಸಿದರು. ಅನಂತರ, ನಾವು ಆ ಕೋಣೆಯಲ್ಲಿದ್ದ ಅಲಂಕಾರಿಕ ಪದಾರ್ಥಗಳ ಇತಿಹಾಸ, ಅವುಗಳ ಬೆಲೆ, ಅವು ದೊರೆಯುವ ಸ್ಥಳ, ಅವು ತಯಾರಾದ ರೀತಿ ಇವುಗಳನ್ನೂ ವಿಚಾರಿಸಿ ತಿಳಿದುಕೊಂಡೆವು.

ಕಡೆಗೆ ತಲೆಸಿಡಿತ ತಡೆಯಲಾರದೆ, ಗೋಡೆಯನ್ನಾಶ್ರಯಿಸಿ ನಿತ್ರಾಣರಾಗಿ ಬಿದ್ದುಕೊಂಡೆವು. ಕೂರಲಾರೆವು, ಹೊರಕ್ಕೆ ತೂರಲಾರೆವು. ಉಭಯಸಂಕಟದಲ್ಲಿ ತೊಳಲಿದೆವು. ಮನೆಯವರ ಸ್ನೇಹಕ್ಕೆ ಪಾತ್ರರಾದ ದಿನವನ್ನೇ ಶಪಿಸುತ್ತ ನರಳಿದೆವು. “ ಇಷ್ಟು ಹೊತ್ತಾದ ಮೇಲೆ, ಅವರು ಬರುವ ಹಾಗೆ ತೋರುವುದಿಲ್ಲ; ನಾವಿನ್ನು ಹೊರಡುತ್ತೇವೆ, ಕ್ಷಮಿಸಿ, ” ಎಂದು ಆಗಲೇ ನಾವು ಆತನಿಗೆ ಹನ್ನೆರಡು ಬಾರಿ ಹೇಳಿ ತಲೆ ತಪ್ಪಿಸಿಕೊಳ್ಳಲು ಯತ್ನಿಸಿದ್ದೆವು. ಆದರೆ, ಆತ ಒಪ್ಪಲಿಲ್ಲ. ನಮ್ಮ ಪ್ರಾರಬ್ಧ ತಪ್ಪಲಿಲ್ಲ. ಮುಖ್ಯ ಅತಿಥಿ, ಮಾನ್ಯ ಮಹನೀಯ ಶ್ರೀ....ರು ಯಾಕೋ ಏನೊ, ತಾವು ಮಾತು ಕೊಟ್ಟದ್ದಂತೆ, ಸತ್ಕಾರಸಮಾರಂಭಕ್ಕೆ ಗೊತ್ತುಮಾಡಿದ ವೇಳೆಗೆ, ಬರಲೇ ಇಲ್ಲ.

ರಾತ್ರಿ ರೈಲುಹತ್ತಿ ಬೆಳಗ್ಗಿನ ಜಾವ ಊರಿಗೆ ಬರುತ್ತಾರೆ, ಇಳಿದ ಕೂಡಲೇ ಎಂಟು ಮೈಲು ಆಚೆ ಹಳ್ಳಿಯೊಂದರಲ್ಲಿ ಉಪಾಹಾರ, ಹಾರ-ತುರಾಯಿ ಸ್ವೀಕರಿಸಿ ದಾರಿ ಉದ್ದಕ್ಕೂ ಪುಟ್ಟ ಪುಟ್ಟ ಸಭಾ ಮೆರವಣಿಗೆ ಚಹೋಪಚಾರ ತೀರಿಸಿ ಒಂಬತ್ತು ಗಂಟೆಗೆ ಸರಿಯಾಗಿ ನಾವು ಕುಳಿತು ಕೊಳೆಯುತ್ತಿದ್ದ ಸಾಹುಕಾರ್....ರವರ ಸೌಧಕ್ಕೆ ಬರುತ್ತಾರೆ, ಎಂದು ಜನಜನಿತವಾಗಿತ್ತು. ಅತಿಥಿ ಮಹಾಶಯರ ಅವಗಾಹನೆಗೂ ಕಾಲಪರಿಮಿತಿ ತಿಳಿದಿರಬೇಕು. ಅವರ ಸ್ವಹಸ್ತದಿಂದಲೇ ಪತ್ರವೂ ಬಂದಿತ್ತು. ಅದನ್ನು ನಮಗೆಲ್ಲ ಸಾಹುಕಾರರು ಆಗಲೇ ಆರು ಬಾರಿ ತೋರಿಸಿ ತಳಮಳವನ್ನು ಶಮನಮಾಡಿದ್ದರು.

ಸಾಹುಕಾರರ ಮನೆಯಲ್ಲಿ ಅಂದು ಅವರ ಎಂಟನೆಯ ಅಪತ್ಯ, ಆರನೆಯ ಮಗನಿಗೆ ಅನ್ನ ಪ್ರಾಶನ ಮಹೋತ್ಸವ...ಯಾವ ಉಪಾಯ ಹುಡುಕಿದರೆ, ಮಾನ್ಯ ಮಹನೀಯರು ತಮ್ಮ ಮನೆಗೆ ಬರುವರು, ಎಂಬುದು ಸಾಹುಕಾರರಿಗೆ ತಿಳಿಯದೆ ? ಅನ್ನದ ಅಭಾವ, ಅನ್ನದ ಉತ್ಪತ್ತಿ, ಅನ್ನದ ಶೇಖರಣೆ, ಅನ್ನಮಯ ಕೋಶ, ಅನ್ನವೂ ಕಂದ ಮೂಲವೂ ಎಂಬ ಭಾಷಣಗಳಿಗೆ ಆಗಂತುಕ ಭಾಷಣಕಾರರು ಹೆಸರುವಾಸಿ. ಕಂದ ಮೂಲ ತಿಂದು ಅನ್ನ ಉಳಿಸಬೇಕಾದ ಅಗತ್ಯ

ವನ್ನು ಕುರಿತು ಅವರು, ತಮ್ಮ ಕಂದ ಅನ್ನ ತಿನ್ನಲು ಮೊದಲು ಮಾಡುವ ಸುದಿನವೇ, ಘೋಷಿಸಲಿ, ಎಂದು ನಿಶ್ಚಯಿಸಿದರು. ಗಾಳ ಹಾಕಿದರು; ಮೀನು ಅವನ್ನು ನುಂಗಿತು; ಆಹ್ವಾನಕ್ಕೆ ಮನ್ನಣೆ ದೊರೆಯಿತು; ನನ್ನಂಥ ಪಶುಗಳನ್ನು ಕರೆದು ಕೂರಿಸಿದರು. ಆದರೆ, ಆದರೆ....ಹಸಿವಿನಿಂದ ನಮಗೆ ಕೋಪ ಉಕ್ಕಿದ್ದು ಹಾಗಿರಲಿ, ಏನೂ ಅರಿಯದ ಆ ಕಂದನೂ ಕಿಟೋ ಎಂದು ಕಿರಿಚಲು ಪ್ರಾರಂಭಿಸಿ ಆಗಲೇ ಒಂದೂವರೆ ಗಂಟೆಯಾಗಿತ್ತು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದರೂ ಅವೆರಡೂ ಜಾರಿ ಬಾಯೊಳಗೆ ಬೀಳದೆ ಇದ್ದರೆ ಏನು ಪ್ರಯೋಜನ ? ಎಂದು ಸಾಹುಕಾರರು ಕೊರಗಿದರು. ಐವತ್ತು-ಅರುವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ತಾನು ಹೊಸದಾಗಿ ಕಟ್ಟಿಸಿದ ಅಮೇರಿಕನ್ ನಮೂನೆ ಮನೆ, ಅದರ ಹೆಸರು ಸ್ವರ್ಣಕುಟಿ, ಅಲ್ಲಿ ಗೃಹಪ್ರವೇಶದ ಮಾರನೆಯ ದಿನ ಜನಿಸಿದ ಮಗ, ಅವನಿಗೆ ಅನ್ನೋದಕ ಪ್ರದೇಯ, ಅದಕ್ಕೆ ಅಧ್ಯಕ್ಷರು ಪ್ರಖ್ಯಾತ ಪುರುಷಸಿಂಹ— ಇಷ್ಟು ವೈಭವವನ್ನೂ ಪಡೆದ ಸಾಹುಕಾರರು ತುದಿಗಾಲಲ್ಲಿ ನಿಂತು ಬೀದಿತುದಿಯನ್ನೇ ನೋಡಿದ್ದರಲ್ಲಿ ಆಶ್ಚರ್ಯವೇನಿದೆ?

ನಾನೇ ಆ ದಿನ ಆ ಮನೆಗೆ ಮೊತ್ತಮೊದಲನೆಯ ಹೋಗಂತುಕ; ಏಳೂವರೆ ಗಂಟೆಗೇ ಹೋಗಿದ್ದೆ. ಆಗಿನ್ನೂ ಜಮುಖಾನೆ ಜಾಡಿಸುವ ಸಮಯ; ಬರಲು ಬೀಸುವ ಲಗ್ನ, ಹೂವಿನ ಕುಂಡಗಳನ್ನೆಲ್ಲ ಅತ್ತಿತ್ತ ಹೊತ್ತು ತಿರುಗುವ ಮುಹೂರ್ತ, ಮನೆಯಲ್ಲಿ ಸಂಭ್ರಮವೊ ಸಂಭ್ರಮ. ಒಂಬತ್ತು ಗಂಟೆಗೆ ಸರಿಯಾಗಿ ಬರ್ರ್ತೇನೆಂದು ಹೇಳಿದ್ದರೂ ಒಂದು ವೇಳೆ ಎಂಟಕ್ಕೇನೇ ಆಗಮಿಸಿದರೆ ಏನು ಮಾಡುವುದು? ಮಹಾಜನರ ಪಂಥವನ್ನು ಬಲ್ಲವರು ಯಾರು? ಅವರ ಚರ್ಯೆ ಎಲ್ಲ ಆಶ್ಚರ್ಯ. ಅವರಿಗೆ ಕಟ್ಟುನಿಟ್ಟುಗಳನ್ನೂ ಇತಿ-ಮಿತಿಗಳನ್ನೂ ವಿಧಿಸಲು ಯಾರಿಗೆ ಹಕ್ಕು? ಅವರು ಗಾಳಿಯಂತೆ ಸ್ವತಂತ್ರರು, ಆಕಾಶದಂತೆ ವ್ಯಾಪಿಗಳು, ಬೆಂಕಿಯಂತೆ ನಾಲಗೆ ಚಾಚುವವರು, ನೀರಿನಂತೆ ನುಗ್ಗಬಲ್ಲವರು, ನೆಲದಂತೆ ಕಂಪಿಸುವವರು. ಆದ್ದರಿಂದ, ಸಾಹುಕಾರ ಅಳಿಯಂದಿರೂ ಮನೆ ಆಳುಗಳೂ ಅಡಾಉಡಿಯಿಂದ ಓಡಾಡಿ, ಎಂಟರೊಳಗೆ ಎಲ್ಲವನ್ನೂ ಸಿದ್ಧಮಾಡಿದರು.

ಅವರು ಬಂದಿಳಿದ ಕೂಡಲೇ, ಮೊದಲನೆಯ ಅಳಿಯ, ಬೀದಿಗೆ ಧಾವಿಸಿ, ಕಾರಿನ ಬಾಗಿಲು ತೆರೆಯಬೇಕು, ಎರಡನೆಯ ಅಳಿಯ ಆತನಿಗೆ ಕೈಕೊಟ್ಟು ಕೆಳಕ್ಕಿಳಿಸಬೇಕು, ಮೂರನೆಯ ಮೆಟ್ಟಿಲು ಹತ್ತುತ್ತಲೂ ಸಾಹುಕಾರರು ಕಿರುನಗೆ ಬೀರಿ (ಅದೆಷ್ಟು ಕಿರಿದಾಗಿರಬೇಕು, ಎಷ್ಟು ಹಿರಿದಾಗಿರಬೇಕು ಎಂದು ಅವರು ಕನ್ನಡಿಯೆದುರು ಪರೀಕ್ಷಿಸಿ ನಿರ್ಧರಿಸಿದ್ದರು) ಕೈಮುಗಿಯಬೇಕು, ಅವರ ಹಿಂದೆ, ಒಂದೂವರೆ ಹೆಜ್ಜೆ ಹಿಂದೆ, ಅವರ ಧರ್ಮಪತ್ನಿ ತಲೆತಗ್ಗಿಸಿ ನಿಂತು ಮೆಲ್ಲದನಿಯಲ್ಲಿ ಬನ್ನಿ ಎನ್ನಬೇಕು, ನಾವೆಲ್ಲ ಕೂತಲ್ಲೇ ಕೂತಿರಬೇಕು ಹೊಸಲು ದಾಟುತ್ತಲೂ ಸ್ತೋತ್ರಗಾನವನ್ನೂ ಪೆಟ್ಟಿಗೆಯೊತಿ ಸಂಗೀತದ ಮಾಸ್ತರು 'ಪಕ್ಕದ ಕೋಣೆ'ಯಿಂದ ಹಾಡಬೇಕು. (ಅಶ್ರುತಗಾನಂ ಶ್ರುತಗಾನಕಿಂತ ಒಳ್ಳೆಯದೆಂದು ಹಿರಿಯರು ಹೇಳಿದ್ದರೂ ಅದೃಷ್ಟಗಾನ ದೃಷ್ಟಗಾನಕಿಂತ ಉತ್ತಮವೆಂದು ಸಾಹುಕಾರರು ನಿಶ್ಚಯಿಸಿದ್ದರು). ಅತಿಥಿಗಳು ಒಳಗೆ ಬಂದಾಗ ನಾವೇಳಬೇಕು, ಅವರು ಕೂತಾಗ ಗಾನ ನಿಲ್ಲಬೇಕು, ಅವರು ಭಾಷಣ ಮಾಡುವಾಗ ನಾವು ಆಕಳಿಸಬಾರದು, ಇತ್ಯಾದಿ ಎಲ್ಲ ಬಗೆಯ ವ್ಯವಸ್ಥೆಗಳನ್ನೂ ಎಲ್ಲರಿಗೂ ತಿಳಿಸಿದ್ದಾಗಿತ್ತು.

ಎಂಟು ಗಂಟೆಯಿಂದ, ನಾವು ನಲವತ್ತು-ಐವತ್ತು ಜನ ಕಾಯುವುದಕ್ಕೆ ಪ್ರಾರಂಭ. ಎಂಟೂವರೆಗೆ ನಮ್ಮ ಕಣ್ಣ ಗುಡ್ಡೆಗಳಿಗೆ ನೋವು ಹತ್ತಿತು. ಎಂಟೂಮುಕ್ಕಾಲಾಗುತ್ತಲೂ ಎಲ್ಲರೂ ಅಂಗಿ, ರುಮಾಲು ಸರಿಪಡಿಸಿ ಸಿದ್ಧರಾದರು. ಒಂಭತ್ತಾಯಿತು ! ಒಂಬತ್ತು ಹತ್ತು. ಮಾನ್ಯ ಅತಿಥಿಗಳ ಮುಖವೇ ಇಲ್ಲ. ಭೂಂ ಭೂಂ ಎಂದು ಗರ್ಜಿಸಿ ಧಾವಿಸುವ ಕಾರುಗಳನ್ನೆಲ್ಲ, ಕಿವಿ ನೆಟ್ಟಗೆಮಾಡಿ, ನಾವು ಆಲಿಸಿದೆವು. ಅವರ ಕಾರಿನ ಹಾರ್ನಿಗಿರುವ ಗಂಭೀರ ಧ್ವನಿ, ಕಂಠೀರವ, ಗದರಿಕೆ, ಆತ್ಮಾವಲಂಬನದ ಕುರುಹು, ಬೀದಿಯನ್ನೇ ಭೇದಿಸುವ ಎದೆಗಾರಿಕೆ ಯಾವ ನಾದದಲ್ಲೂ ಕೇಳಿ ಬರಲಿಲ್ಲ. ಕೆಲವು ಹಾರ್ನುಗಳಲ್ಲಿ ದೈನ್ಯ, ಕೃಪಣತೆ; ಕೆಲವದರಲ್ಲಿ ಕಲಾಕುಶಲತೆ ನಯ ನಾಜೂಕು; ಕೆಲವು ಹಾರ್ನುಗಳಲ್ಲಿ ದುರಹಂಕಾರ, ಮದ, ಹೊಸದಾಗಿ ಗಳಿಸಿದ ಗಂಟಿನ ಪ್ರತಿಧ್ವನಿ—ಇವು ಇದ್ದವೇ ಹೊರತು ನಾವು ನಿರೀಕ್ಷಿಸಿದ ಸತ್ಕುಲಪ್ರಸೂತ ಸಹಜ ಶ್ರೀಮಂತ ಸ್ವಾಭಿಮಾನಪೂರಿತ ದೊಡ್ಡತನದ ಹೂಂಕಾರ ಇರಲಿಲ್ಲ. ಒಂಬತ್ತುವರೆಯಾಗುತ್ತಲೂ ಸಾಹುಕಾರರ ಒಬ್ಬ ಅಳಿಯ ಅತಿಥಿಗಳನ್ನು ಹುಡುಕಿತರಲು ಹೊರಬಿದ್ದ. ಹತ್ತುಗಂಟೆಗೆ ಆಗಂತುಕರಲ್ಲಿ ಹಲಕೆಲವರು, ನಾವೂ ಹೋಗಿ ಅವರು ಎಲ್ಲಿ ಎಂದು ಪತ್ತೆಹಚ್ಚಿ ಕರೆತರುತ್ತೇವೆ ಎಂದು ನೆಪಹೇಳಿ ಹೊರಟುಹೋದರು.

ತಲೆಯ ಮೇಲಿನ ಗಡಿಯಾರ ಹನ್ನೊಂದು ಹೊಡೆದಾಗ, ನನ್ನ ತಲೆ ಬುರುಡೆಗೆ ಠಣ್ ಠಣ್ ಎಂದು ಯಾರೋ ಹನ್ನೊಂದು ಮೊಳೆಗಳನ್ನು ಹೊಡೆದ ಹಾಗಾಯಿತು. ಅಷ್ಟು ಸಿಡಿತ. ಕೂಡಲೇ ನಾನೆದ್ದೆ. " ಮನೆಯಲ್ಲಿ ಕೂಸಿಗೆ ಮೈ ಸ್ವಸ್ಥವಿಲ್ಲ; ಬೇಗ ಹಿಂತಿರುಗಬಹುದಲ್ಲಾ, ಎಂದು ಯೋಚಿಸಿ ಬೆಳಿಗ್ಗೆ ನಿಮ್ಮಲ್ಲಿಗೆ ಬಂದೆ .... ಅವಳು ಎಷ್ಟು ಪೇಚಾಡುತ್ತಿದಾಳೋ ಏನೋ," ಎಂದು ರಾಗ ತೆಗೆದೆ. ಮುಖವನ್ನು ಆದಷ್ಟು ಉದ್ದ ಮಾಡಿದೆ. ಅಳುವುದೊಂದುಳಿದಿತ್ತು. " ಆಗಲಿ, ಹೋಗಿ ಬನ್ನಿ " ಎಂದರು. "ಇನ್ನು ಬರುವುದುಂಟೆ ?" ಎಂದು ಮನದಲ್ಲೇ ನಿಶ್ಚಯಿಸಿ ನಾನು ಕಂಬಿಕಿತ್ತೆ.

ನಮ್ಮ ಬೀದಿತುಂಬ ಜನ ಕಿಕ್ಕಿರಿದಿದ್ದರು. ಬೈಸಕಲ್ಲನ್ನು ಯಾರೋ ಯಾರ ಮೈಮೇಲಾದರೂ ಹಾಯಿಸಿರಬೇಕೆಂದುಕೊಂಡೆ. ಆದರೆ, ಗುಂಪಿನ ಮಧ್ಯ ಯಾರೂ ತಾನು ಮಾಡಿದ್ದೇ ಸರಿ ಎಂದು ವಾದಿಸುತ್ತಿರಲಿಲ್ಲ; ಅವನ ಸುತ್ತ ಯಾರೂ ಮುಷ್ಟಿ ಬಿಗಿದು ಕಾಲು ಕೆರೆಯುತ್ತಿರಲಿಲ್ಲ. ನನ್ನ ಮನೆ ಮುಂದೆಯೇ ಯಾವುದೋ ಅನಾಹುತ ನಡೆದಂತಿತ್ತು. ಜನ ದಟ್ಟವಾಗಿ ನಿಂತಿದ್ದನ್ನು ನೋಡಿದಾಗ ಕೂಸಿನ ವಿಷಯವಾಗಿ ಚಿಂತೆ ಹೆಚ್ಚಿತು. ಋಣಾನುಬಂಧ, ಯಾವ ಗಳಿಗೆಯೋ ಏನೋ, ಅಂದುಕೊಂಡೆ. ಉದ್ದುದ್ದನೆಯ ಹೆಜ್ಜೆ ಹಾಕಿ ಮಂದಿಯೊಳಗಿಂದ ತೂರಿ ನನ್ನ ಜಗುಲಿಗೆ ಹಾರಿದೆ.

ಅಲ್ಲಿ ಕಂಡ ದೃಶ್ಯವನ್ನು ನೋಡಿದಾಗ, ನನ್ನ ಕಣ್ಣಿಗೆ ಮಂಜು ಕಟ್ಟಿತು. ನನ್ನಾಕೆ ಕೂಸನ್ನು ಕೊಂಕುಳಲ್ಲಿರಿಸಿಕೊಂಡು, ಅದಕ್ಕೆ ಅನ್ನ ತಿನ್ನಿಸುತ್ತಿದ್ದಳು. ಅವಳ ಸುತ್ತ ನಿಂತಿದ್ದ ಹತ್ತಾರು ಜನ ಸದ್ಗೃಹಸ್ಥರೂ ಸದ್ಗೃಹಿಣಿಯರೂ ಜೈಕಾರ ಮಾಡುತ್ತಿದ್ದರು. ಬಲ ಭಾಗದ ಪೀಠದಲ್ಲಿ ಒಬ್ಬರು ಗಂಭೀರ ವ್ಯಕ್ತಿಗಳು ಕುಳಿತು

ನೀರು ಕುಡಿಯುತ್ತಾ ಬೆವರೊರಸಿಕೊಳ್ಳುತ್ತಿದ್ದರು. ಅವರ ಅಕ್ಕಪಕ್ಕದಲ್ಲಿ ಸಾಹುಕಾರರ ಅಳಿಯನೂ ಆ ಅಮೇರಿಕನ್ ಮನೆಯಿಂದ ಹೊರಟಿದ್ದ ಮಂದಿ ಕೆಲವರೂ ನಿಂತು ಹಲ್ಲು ಕಿರಿಯುತ್ತಿದ್ದರು.

ನನ್ನ ತಲೆ ಗಿರ್ರನೆ ತಿರುಗಿತು, ನನ್ನ ಮನೆಯಲ್ಲಿ ನನಗೆ ತಿಳಿಯದೆ ನಾನಿಲ್ಲದಿರುವಾಗ ಸಭೆಯೇ ? ಸಮಾರಂಭವೇ ? ನನ್ನ ಕೂಸು ಅನ್ನ ತಿನ್ನುವುದಕ್ಕೆ ಇಷ್ಟೊಂದು ಸಾಕ್ಷಿಗಳೇ ? ಕೂಗಾಟವೆ? ಜೈಕಾರವೆ ? ದಿನವೂ ಅರ್ಧ ಪಾವಿನಷ್ಟು ಕತ್ತರಿಸುವ ಆ ಭಂಡ ಕುಮಾರನಿಗೆ ಇಂದೇಕೆ ಈ ಮಾನ್ಯ ಪದವಿ ?

ನನಗೊಂದೂ ಅರ್ಥವಾಗಲಿಲ್ಲ. ನನ್ನ ಬರವನ್ನು ಅಲ್ಲಿ ಯಾರೂ ಗಮನಿಸಿದಂತೆ ತೋರಲಿಲ್ಲ. ಗಟ್ಟಿಯಾಗಿ ಕಿರಿಚೇ ಬಿಡೋಣ ಎನ್ನಿಸಿತು. ಆದರೆ, ನನ್ನ ಗಂಟಲೇಳಲಿಲ್ಲ. ನಾಲಗೆಗೆ ತಣಿವಿರಲಿಲ್ಲ. ಸರಸರನೆ ಆ ಅಳಿಯನ ಹತ್ತಿರಕ್ಕೆ ಸರಿದೆ. ನನ್ನನ್ನು ಗುರುತಿಸಿದ ಕೂಡಲೇ ಆತ ನನ್ನನ್ನು ಪಕ್ಕದ ಕೋಣೆಗೆ ಕರೆದುಕೊಂಡು ಹೋಗಿ ಬಾಗಿಲು ಹಾಕಿದ.

" ಮಾಸ್ತರೇ ! ನೀವು ಈಗ ಮಾತಾಡಲೇಕೂಡದು. ಆದದ್ದಾಗಿ ಹೋಯಿತು. ಅದನ್ನು ಕುರಿತು ಚಿಂತಿಸಿ ಫಲವಿಲ್ಲ. ನಾನು ಪತ್ರಿಕಾ ಪ್ರತಿನಿಧಿಗಳಿಗೆಲ್ಲ ಹೇಳಿ ಸರಿಪಡಿಸಿದ್ದೇನೆ..... ನೀವು ಕೊಂಚ ಹೊತ್ತು ಈ ಕೋಣೆಯಲ್ಲೇ ತೆಪ್ಪಗೆ ಮಲಗಿರಿ, ಬಾಗಿಲು ಹಾಕಿರುತ್ತೇನೆ. ಸಮಾರಂಭ ಇನ್ನೇನು ಮುಗಿಯುತ್ತಾ ಬಂತು" ಎಂದ. ನನ್ನನ್ನು ಹಿಡಿದು ಹಿಂದಕ್ಕೆ ದಬ್ಬಿ, ಮಂಚದ ಮೇಲೆ ಬೀಳಿಸಿ, ಹೊರಕ್ಕೆ ಹಾರಿ ಬಾಗಿಲು ಹಾಕಿ, ಆಚೆ ಕಡೆ ಭದ್ರಪಡಿಸಿದ.

ನನ್ನ ಕೋಣೆಯಲ್ಲೇ ನನ್ನನ್ನು ಬಂಧಿಸಿದ; ನನ್ನ ಮನೆಯಲ್ಲೇ ನಾನು ಪರದೇಶಿ ! ಲೋಕವೇ ತಲೆ ಕೆಳಗಾದಹಾಗಾಯಿತು, ನನಗೆ. ಉಳಿದವರೆಲ್ಲರಿಗೂ ಹುಚ್ಚೆ ? ಅಥವಾ, ನನಗೆ ಹುಚ್ಚೆ ? ಎಂಬ ಭ್ರಮೆ ನನ್ನನ್ನು ಹಿಡಿಸಿತು. ಕಣ್ಣು ಮುಚ್ಚಿಕೊಂಡು ಮಲಗಿದ್ದೆ; ತಲೆ ಬುರುಡೆಯನ್ನು ಎರಡು ಕೈಗಳಿಂದಲೂ ಅದುಮಿ ಹಿಡಿದೆ ; ದೇವರ ನಾಮವನ್ನು ಜಪಿಸುತ್ತಿದ್ದೆ.

ಎಂಟು ಹತ್ತು ನಿಮಿಷಗಳಲ್ಲಿ ಸದ್ದಡಗಿತು. ಗದ್ದಲ ನಿಂತಿತು. ಅಳಿಯ ಬಾಗಿಲು ತೆರೆದ. ನನ್ನ ಮನೆ ನನ್ನದಾಯಿತು. ಊದುಬತ್ತಿಯ ಪರಿಮಳ, ಹೂಮಾಲೆಯ ಕಂಪು, ಮಂದಿಯ ಮಿಶ್ರ ನಾತ ನನ್ನ ಮೂಗನ್ನು ತಾಕಿತು. ನನ್ನಾಕೆ ನಗುತ್ತ ಅತ್ತಕಡೆ ಕೋಣೆಯ ಬಾಗಿಲಲ್ಲಿ ನಿಂತಿದ್ದಳು. ಆದರೆ, ನನ್ನನ್ನು ಮಾತನಾಡಿಸಿದ್ದು ಅವಳಲ್ಲ, ಸಾಹುಕಾರರ ಅಳಿಯ–ನಮಗೆಲ್ಲ ಚಿರಪರಿಚಿತರಾದ ಅಮೆರಿಕನ್ ಮನೆಅಳಿಯ.

" ಮಾಸ್ತರೇ ! ನಗಿರಿ, ನಗಿರಿ, ಕೊಂಚ ! " ಎಂದರು. ನಾನು ನಗಲಿಲ್ಲ. ಕಣ್ಣುರುಳಿಸಿದೆ; ಅರಳಿಸಲಿಲ್ಲ. " ಅಲ್ರಿ ! ಇಲ್ಲಿ

ಈ ದೀಪಾವಳಿ ಮತ್ತು ಹೊಸ ವರ್ಷವು

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ ಸುಖಪ್ರದವಾಗಲಿ.

★ ★ ★ ★ ★



ರಾಜ ವೈದ್ಯ ಗುಣೆ ಅವರ

ಶಾಹು ಆಯುರ್ವೇಷಧಿ ಕಾರಖಾನೆ ಲಿ.

ಕೊಲ್ಹಾಪೂರ

ಹುಡುಗಿ ಸುಸ್ತಾಗಿದ್ದಾಳೆ?



ಹೂಪ್‌ಸ್ನ್ಯಾಕ್

ನಾಯಿಕೆಮ್ಮಿನಿಂದರಕ್ಷಿಸಿತು

ಎಲ್ಲಾ ವಿಧವಾದ ಕೆಮ್ಮನ್ನೂ, ವಿಶೇಷವಾಗಿ ನಾಯಿ ಕೆಮ್ಮನ್ನೂ ನಿವಾರಿಸಲು " ಹೂಪ್‌ಸ್ನ್ಯಾಕ್ " ಅತ್ಯುತ್ತಮವಾದುದೆಂದು ಪರಿಗಣಿಸಲ್ಪಟ್ಟಿದೆ. ಶಕ್ತಿವರ್ಧಕ ವನಸ್ಪತಿಯಿಂದೊಡಗೂಡಿದ "ಹೂಪ್‌ಸಾಕ್" ಶ್ವಾಶನಾಳಕ್ಕೆ ನಿಶ್ಚಿತವಾದ ಉಪಶಮನಕಾರಿ. ನಾಯಿಕೆಮ್ಮು ಬಂದ ಸಮಯದಲ್ಲಿ ಮಕ್ಕಳು ಏನೇ ಊಟಮಾಡಿದ್ದರೂ ವಾಂತಿಯಾಗುವದನ್ನು ನಿಲ್ಲಿಸುತ್ತದೆ. ರೋಗ ಬಾರದಂತೆ ತಡೆಗಟ್ಟುವ ಸಾಮರ್ಥ್ಯವನ್ನು ಕೊಡುತ್ತದೆ.



ಹೂಪ್‌ಸ್ನ್ಯಾಕ್

ಶಾಹು ಆಯುರ್ವೇಷಧಿ ಕಾರ್ಖಾನೆ ಲಿ. ಕೊಲ್ಹಾಪೂರ

B. C. PUBLICITY

S.A.K. LTD. K/5

ನಿಮ್ಮ ಮನೆಯಲ್ಲಿ ನಡೆದ ಸೋಜಿಗ ನೆನೆದರೆ, ಎಂಥವನಿಗೂ ನಗು ಬರುವುದು. ನೀವೇಕ್ರಿ ಹೀಗೆ ಕಹಿ ಎಣ್ಣೆ ಮುಖ ಮಾಡಿಕೊಂಡು ಕೂತಿದೀರಿ?'' ಎಂದರು. ನನ್ನ ಮೋರೆಗೆ ಕಹಿ ಎಣ್ಣೆ ಒಂದು ಗುಟುಕು ಹೆಚ್ಚು ಬಿತ್ತು.

" ಏನಾಯ್ತು, ಗೊತ್ತೆ ? " ಎಂದರು. "ಇಲ್ಲ'' ಎಂದು ಮೆಲ್ಲ ನುಸುರಿದೆ. '' ನಮ್ಮ ಮನೆಗೆ ಬಂದು ನಮ್ಮ ಮಾವನವರ ಮೊಮ್ಮಗನಿಗೆ ಅನ್ನಪ್ರಾಶನ ಮಾಡಿಸಬೇಕಾಗಿದ್ದ ಮಹನೀಯರು ನಿಮ್ಮ ಮನೆಗೆ ಬಂದರು, ಕಣ್ರಿ ! ಅವರ ಕಾರೋಡಿಸುವ ಪುಣ್ಯಾತ್ಮ ಅಪ್ಪಿ ತಪ್ಪಿ ಈ ಬೀದಿಗೆ ನುಗ್ಗಿಬಿಟ್ಟ. ಅವರದು ಒಂದು ಹಟವಂತೆ, ಮುಂದಕ್ಕೆ ಹೋದ ಕಾರನ್ನು ಹಿಂದಕ್ಕೆ ಓಡಿಸುವುದಿಲ್ಲ ಅಂತ. ಆದ್ದರಿಂದ ಈ ಬೀದಿಯಲ್ಲಿ ಇದ್ದದ್ದರಲ್ಲಿ ದೊಡ್ಡ ಮನೆ ಯಾವುದು, ಯಾರ ಮನೆಯಲ್ಲಿ ಅನ್ನ ತಿಂಬುವ ಕೂಸಿದೆ, ಎಂದು ವಿಚಾರಿಸಿ ನಿಮ್ಮ ಮನೆಗೆ ನುಗ್ಗಿದರು. ಸದ್ಯಃ, ಆಗ ನಾನು ಅವರನ್ನು ಹುಡುಕಿಕೊಂಡು ಇಲ್ಲಿಗೆ ಬಂದೆ. 'ಆ ಕೂಸಲ್ಲದಿದ್ದರೆ, ಈ ಕೂಸಾಯಿತು, ನನಗೇನು, ಅನ್ನದ ಮೇಲಿನ ಭಾಷಣ ಮುಖ್ಯ ಅದು ಪತ್ರಿಕೇಲಿ ಬರೋದು ಮುಖ್ಯ. ಹೊತ್ತಾಯಿತು, ಬೇಗ ಮುಗಿಸಿ. ಮಂದಿ ಸೇರಿಸಿ ಮಗುವನ್ನು ಕರೆತನ್ನಿ,' ಎಂದು ಅರ್ಭಟಿಸಿದರು.

" ನಾನು ಅಕ್ಕಪಕ್ಕದವರಿಗೆ ಹೇಳಿ ಕಳುಹಿಸಿದೆ, ನಿಮ್ಮಾಕೆಗೆ ಹೇಳಿದೆ; ಮಗು ಚನ್ನಾಗಿ ಗಬಗಬ ಅನ್ನ ತಿಂದಿತು. ಆದರೆ.... ಮಹಾರಾಯನ ಭಾಷಣ ಮಾತ್ರ ಕೊಂಚ ತಿರುಗಮುರುಗ ಆಗಿ ಇವತ್ತು ಸಂಜೆ ಇನ್ನೊಂದೂರಲ್ಲಿ ಅವರು ಒಂದು ಆಸ್ಪತ್ರೆ ತೆರೆಯುವರಂತೆ, ಅಲ್ಲಿ ಕೊಡಬೇಕಾಗಿದ್ದ ಭಾಷಣದ ಪ್ರತಿಯನ್ನು ಅವರ ಕಾರ್ಯದರ್ಶಿ ಅವರ ಕೈಗೆ ಅದಲುಬದಲು ಮಾಡಿ ಕೊಟ್ಟುಬಿಟ್ಟಿದ್ದ ! ಉದ್ದಕ್ಕೂ ರೋಗಗಳ ಹೆಸರುಗಳನ್ನೇ ಹೇಳಿ ಅಮಂಗಳದ ಸುರಿಮಳೆ ಕರೆದರು. ಯಾರೂ ತುಟಿ ಪಿಳಕೆನ್ನಲಿಲ್ಲ, ಅನ್ನಿ. ಆದರೆ ಅರ್ಧಾ ಭಾಷಣವಾಗುತ್ತಲೂ ಅವರಿಗೇ ಜ್ಞಾನೋದಯವಾಯಿತು. ''ಕ್ಷಮಿಸಿ ! ಸಾಹುಕಾರರೇ ! '' ಎನ್ನುತ್ತ ಅವರು ಕುಕ್ಕರಿಸಿ ನೀರು ಕುಡಿಯುವ ಹೊತ್ತಿಗೆ, ನೀವು ಕಾಣಿಸಿಕೊಂಡಿರಿ. ನೀವು ಕೂಗಿಕೊಂಡರೆ, ಇನ್ನು ಎಲ್ಲಿ ಅವರ ಚಿತ್ತ ಭ್ರಮೆ ವಿಷಮಿಸುತ್ತದೋ ಎಂದು ಊಹಿಸಿ ನಾನು ನಿಮ್ಮನ್ನು ಕೋಣೆಗೆ ಸಾಗಿಸಿದೆ'' ಎಂದರು.

"ಪತ್ರಿಕೆಗಳಲ್ಲಿ ಮಾತ್ರ ಅವರು ನಮ್ಮ ಮನೆಗೇ ಬಂದಿದ್ದ ಹಾಗೂ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನೆರವೇರಿಸಿದಂತೆಯೂ ಅನ್ನಾಭಾವದ ಮೇಲೆ ಭಾಷಣ ಮಾಡಿದಂತೆಯೂ ಪ್ರಕಟನೆಗೆ ಏರ್ಪಾಟು ಮಾಡಿದೇನೆ'' ಎಂದರು.

ಆಗ, ನಾವು ಮೂವರೂ ಒಟ್ಟಿಗೆ ನಕ್ಕೆವು. ಆ ನಗುವಿನ ಹಿಂದೆ ಅತ್ತಿಂದಿತ್ತ, ಇತ್ತಿಂದತ್ತ, ಪರದಾಡುತ್ತ ಓಡಾಡುವ ಮಾನ್ಯ ಮಹನೀಯರೆಂದೆನಿಸಿಕೊಳ್ಳುವ ಈ ವಿಚಿತ್ರ ಪ್ರಾಣಿಗಳ ಮೇಲಿನ ಅನುಕಂಪೆಯೂ ತುಸು ಇತ್ತು, ಎನ್ನಿ.

ಆಗ---?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗರಿಸುವಾಗ, ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಿಸಬಲ್ಲ—

ಜೀವನದ ಬೆಂಗೋಲಿನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೇ ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ-

ವಿಮೆ ಇಳಿಸಿರಿ.

ದಿ ಕೆನರಾ ಮ್ಯುಚುವಲ್ ಎಶ್ಯೂರೆನ್ಸ್

ಕಂಪೆನಿ, ಲಿಮಿಟೆಡ್., ಉಡುಪಿ, ದ. ಭಾರತ

The Canara Mutual Assurance Co. Ltd., Udipi, *South India*

ದಕ್ಷಿಣ ಮತ್ತು ಆಗ್ನೇಯ ಏಶಿಯದ ಸಮಸ್ಯೆ

ಲೇಖಕರು :— ಶ್ರೀ ಆರ್. ವೆಂಕಟೇಶಮೂರ್ತಿ ಎಂ. ಎ.

ಭಾರತೀಯರಾದ ನಮಗೆ ನಮ್ಮ ನೆರೆಹೊರೆಯ ಆಗ್ನೇಯ ಏಶಿಯದ ಆಗುಹೋಗುಗಳು ಮಹತ್ವದವಾಗಿವೆ. ರಾಜಕೀಯ ಸ್ಥಿತ್ಯಂತರಗಳ ಹೊಸಲಲ್ಲಿರುವ ಈ ದೇಶಗಳ ಆರ್ಥಿಕ ದುಃಸ್ಥಿತಿ ಕಮ್ಯುನಿಜಮಿನ ವಿಸ್ತರಣಕ್ಕೆ ಅನುಕೂಲವನ್ನು ಒದಗಿಸಿದೆ. ಈ ಭೂಭಾಗದ ಸಮಸ್ಯೆಯ ಸ್ವರೂಪವನ್ನೂ ಈಚೆಗೆ ಅದರ ನಿವಾರಣೆಗೆ ನಡೆದ ಪ್ರಯತ್ನಗಳನ್ನೂ ಕುರಿತು ಮುಂಬಯಿಯ "ಕಾಮರ್ಸ್" ಪತ್ರಿಕೆಯ ಸಂಪಾದಕರಾದ ಶ್ರೀ. ಆರ್. ವಿ. ಮೂರ್ತಿಯವರು ತಯಾರಿಸಿದ ಸುದೀರ್ಘ ವರದಿಯ ಸಾರಾಂಶವನ್ನು ಇಲ್ಲಿ ಸಂಗ್ರಹಿಸಿದೆ.

ಯಾವ ದೃಷ್ಟಿಕೋನದಿಂದ ನೋಡಿದರೂ ಆಗ್ನೇಯ ಏಶಿಯದ ದೇಶಗಳ ಆರ್ಥಿಕ ಪರಿಸ್ಥಿತಿಯಲ್ಲಿ ಸರ್ವಸಾಧಾರಣವಾದ ಅನೇಕ ಲಕ್ಷಣಗಳಿವೆ; ಅವು ಎದುರಿಸಬೇಕಾದ ಸಮಸ್ಯೆಗಳೂ ಸದೃಶವಾಗಿವೆ ಎಂದು ಕಂಡುಬರುತ್ತದೆ. ಈ ಸಮಸ್ಯೆಗಳು ಆಗ್ನೇಯ ಏಶಿಯದ ದೇಶಗಳಿಗೆ ವಿಶಿಷ್ಟವಾದವುಗಳು; ಇಂಥ ಸಮಸ್ಯೆಗಳು ಉದ್ಯಮ ಪ್ರಧಾನವಾದ ಪಾಶ್ಚಾತ್ಯ ಲೋಕದಲ್ಲಿ ಎಲ್ಲೂ ಕಾಣಿಸವು.

ಎರಡನೆಯ ಜಾಗತಿಕ ಯುದ್ಧದ ಪರಿಣಾಮವಾಗಿ ಚೀನ, ಭಾರತ, ಇಂಡೋನೇಶಿಯ, ಬ್ರಹ್ಮದೇಶ, ಸಿಂಹಳ ಮತ್ತು ಫಿಲಿಪೈನ್ಸುಗಳು ಮಹತ್ವದ ಪ್ರದೇಶಗಳೆಂದು ಪ್ರಾಮುಖ್ಯ ಪಡೆದವು. ಆಗ್ನೇಯ ಏಶಿಯ ಎಂಬುದರಲ್ಲಿ ಅಡಕವಾಗುವ ರಾಜ್ಯಗಳೆಂದರೆ ಆರು: ಬ್ರಹ್ಮದೇಶ, ಥೈಲೆಂಡ್, ಇಂಡೋಚೀನ, ಇಂಡೋನೇಶಿಯ, ಮಲಯ, ಫಿಲಿಪೈನ್ ದ್ವೀಪಸ್ತೋಮ. ಫ್ರೆಂಚ ಇಂಡೋಚೀನದ ಸರಕಾರಕ್ಕಿನ್ನೂ ಮನ್ನಣೆ ದೊರೆತಿಲ್ಲ, ಅದು ಹೋಚಿಮಿನ್ನರೊಡನೆ ಹೊಡೆದಾಡುತ್ತಿದೆ. ಮಲಯ ಜಪಾನುಗಳು ವಿದೇಶೀಯರ ಪ್ರಭುತ್ವಕ್ಕೆ ಬಗ್ಗಿ ನಡೆಯಬೇಕಾಗಿದೆ. ಇಂಡೋನೇಶಿಯ ಮತ್ತು ಬ್ರಹ್ಮದೇಶಗಳ ಸರಕಾರಗಳು ಭಗೀರಥಪ್ರಯತ್ನ ನಡೆಸಿದರೂ ಆಂತರಿಕ ಕ್ಷೋಭೆಯನ್ನು ತಣಿಸಿ ಪರಿಸ್ಥಿತಿಯನ್ನು ಹದಕ್ಕೆ ತಂದುಕೊಳ್ಳಲು ಸಮರ್ಥವಾಗಲಿಲ್ಲ. ಇಂಡೋನೇಶಿಯದಲ್ಲಿ ಉದಯವಾಗುತ್ತಿರುವ ಕಮ್ಯುನಿಸ್ಟ ಚಳವಳಿ ಭಯಾನಕವಾಗಿದೆ.

ಪಾಶ್ಚಾತರ ಸಾಮ್ರಾಜ್ಯ ಲೋಭದ ವಿರುದ್ಧವಾಗಿ ಏಶಿಯನ್ನರು ಹೂಡಿದ ಕ್ರಾಂತಿ ಬಹಳ ಮಟ್ಟಿಗೆ ಜಯಪ್ರದವಾಯಿತೆನ್ನಬೇಕು. ಆದರೆ ಈ ಕ್ರಾಂತಿಯು ಯಾವ ಆರ್ಥಿಕ ರೂಪವನ್ನು ತಾಳೀತು ಎಂದು ಹೇಳುವುದು ಕಷ್ಟ. ಒಂದಲ್ಲ ಒಂದು ಮಟ್ಟದ ಸಮಾಜವಾದ(ಸೋಶೆಲಿಜಂ) ಇಲ್ಲಿ ನೆಲೆನಿಲ್ಲುವುದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸೋವಿಯಟ್ ರಶಿಯದ ಅತಿಸಾಮ್ಯವಾದವೋ ಅಥವಾ ನೆಲದ ಗುಣಕ್ಕನುಗುಣವಾದ ಹೊಸ ಬಗೆಯ ಸರ್ವಪ್ರಶಂಸನೀಯವೆನಿಸುವ ಸಾಮ್ಯನೀತಿಯೋ — ಯಾವುದು ತಳವೂರೀತೆಂದು ಊಹಿಸುವುದು ದುಷ್ಕರವಾಗಿದೆ.

ಆಗ್ನೇಯ ಏಶಿಯದಲ್ಲಿ ಯಾವ ವಿಧದ ಆರ್ಥಿಕ ಪರಿಶೀಲನವನ್ನು ಮಾಡಹೊರಟರೂ ಅಲ್ಲಿಯ ದೇಶಗಳ ಕುಲ, ಭಾಷೆ, ಸಂಸ್ಕೃತಿ, ಮತ್ತು ರಾಜಕೀಯ, ಸಾಮಾಜಿಕ, ಆರ್ಥಿಕ ವಿಚಾರಪ್ರಣಾಲಿಗಳು ಒಂದೇ ವರ್ಗಕ್ಕೆ ಸೇರಲಾರವು ಎಂದು ಕಂಡುಬರುತ್ತದೆ. ಆರ್ಥಿಕ ಉನ್ನತಿ ಕೂಡ ಅವುಗಳಲ್ಲಿ ಒಮ್ಮಟ್ಟದಲ್ಲಿಲ್ಲ. ಇಷ್ಟಾದರೂ ಈ ವೈವಿಧ್ಯದ ನಡುವೆ ಒಂದು ತರದ ಸಾದೃಶ್ಯ, ಸಾಮರಸ್ಯ ಅಲ್ಲಿದೆ. ಇಡಿ ಆಗ್ನೇಯ ಏಶಿಯದ ಸಾಮಾನ್ಯ ಲಕ್ಷಣಗಳೆಂದರೆ; ಅಕ್ಕಿಯೇ ಪ್ರಧಾನವಾದ ಅದರ ಅರ್ಥನೀತಿ, ಖನಿಜ ಸಂಪತ್ತು, ಬಹುಸಂಖ್ಯರ ಅತ್ಯಂತ ಕೆಳತರದ ಜೀವನ ಮಟ್ಟ ಮುಂತಾದವು. ಅಡ್ಡಬರುವ ಸಂಗತಿಗಳೆಂದರೆ, ಕೃಷಿಕರ ಬಹುಸಂಖ್ಯೆ, ಉದ್ಯಮಸಂಪತ್ತಿನ ಅನಭಿವೃದ್ಧಿ, ಅತ್ಯಲ್ಪ ಉತ್ಪಾದಕತೆ ಮತ್ತು ಇರುವ ಸಂಪತ್ತಿನ ಪ್ರಮಾಣಕ್ಕೆ ಮೀರಿದಷ್ಟು ಜನಸಂಖ್ಯೆ ಬೆಳೆಯುತ್ತಿರುವುದು. ಈ ವಿಘ್ನಗಳ ಪರಿಣಾಮವಾಗಿ ಅಲ್ಲಿ ದಟ್ಟದಾರಿದ್ರ್ಯ ನೆಲೆಸಿದೆ. ೧೯ ನೆಯ ಮತ್ತು ೨೦ ನೆಯ ಶತಮಾನಗಳಲ್ಲಿ ಇಲ್ಲಿ ಸಂವರ್ಧಿಸಲಾದ ಐಶ್ವರ್ಯವು ಕೆಲವೇ ಪಾಶ್ಚಾತ್ಯ ದೇಶಗಳಲ್ಲಿ ತುಂಬಿಕೊಂಡಿದೆ. ಆಗ್ನೇಯ ಏಶಿಯದ ದೇಶಗಳಲ್ಲಿ ಅದರ ಅತ್ಯಲ್ಪಾಂಶ ಮಾತ್ರ ಉಳಿಯುವಂತಾಗಿದೆ.

ಆಗ್ನೇಯ ಏಶಿಯದ ಅತಿ ಮುಖ್ಯ ಉದ್ಯೋಗ ಕೃಷಿ. ಗೌಣೋದ್ಯೋಗ ಯಾವುದೂ ಇಲ್ಲದೆ ಕೇವಲ ಮುಖ್ಯೋದ್ಯೋಗದಲ್ಲೇ ಉಳಿದಿರುವುದು ಅಲ್ಲಿಯ ಎಲ್ಲ ದೇಶಗಳಲ್ಲೂ ಕಂಡುಬರುವ ಸ್ಥಿತಿ. ಇನ್ನು ಆ ಮುಖ್ಯೋದ್ಯೋಗವಾದ ಒಕ್ಕಲುತನವಾದರೂ ನೆಟ್ಟಗಿದೆಯೇ ? ಅದೂ ಇಲ್ಲ. ಕೇವಲ ನಿಸರ್ಗ ಕೃಪೆಯ ಆಕಸ್ಮಿಕ ಅನುಕೂಲವನ್ನು ಅವಲಂಬಿಸಿ ಸ್ವಂತ ಅವಶ್ಯಕತೆಯ ದೃಷ್ಟಿಗೆ ವಿಮುಖವಾಗಿ ಕೇವಲ ನಿರ್ಯಾತ ದೃಷ್ಟಿಯಿಂದ ಕೆಲ ಬಗೆಯ ಬೆಳೆಗಳನ್ನು ಮಾತ್ರ ಬೆಳೆಯುವುದರಿಂದ ಅಲ್ಲಿಯ ಕೃಷಿ ಬಹಳ ಅಸಮರ್ಪಕವಾಗಿ ಸಾಗುತ್ತಿದೆ. ಆ ದೇಶಗಳ ನಿರ್ಯಾತಸಾಮಗ್ರಿಗಳ ಬೆಲೆ ಇದ್ದ ಹಾಗೇ ಇದೆ, ಆಯಾತ ಸಾಮಗ್ರಿಗಳ ಬೆಲೆ ಮನಸ್ವಿಯಾಗಿ ಏರಿ ಗಗನಚುಂಬಿಯಾಗಿದೆ. ಕೃತಕ ರಬ್ಬರ್ ಮತ್ತು ರೇಶಿಮೆಗಳು ಸಿದ್ಧವಾಗಿ ಪೇಟೆಯಲ್ಲಿ ಬರಲಾರಂಭಿಸಿದ ಮೇಲೆ ಇಲ್ಲಿನ ನೈಸರ್ಗಿಕವಾದ ರಬ್ಬರ್, ರೇಶಿಮೆ ಮುಂತಾದ ಸಾಮಾನುಗಳ ಮಾರಾಟ ಇಳಿದುಹೋಯಿತು. ಇತ್ತಿತ್ತಲಾಗಿ ಆಂತರಿಕ ತೊಂದರೆಗಳ ದೆಸೆಯಿಂದ ಕೃಷಿಫಲ ಕೂಡ ಮೊದಲಿನಷ್ಟಾಗದಾಗಿದೆ. ಇದರಿಂದ ಆ ದೇಶಗಳ ಆಯಾತಶಕ್ತಿ ಕುಂದಿ, ಜೀವನ ಮಟ್ಟ ಪಾತಾಳಾಭಿಮುಖವಾಗಿದೆ. ಬ್ರಹ್ಮದೇಶ, ಮಲಯ, ಫ್ರೆಂಚ ಇಂಡೋಚೀನ ಮತ್ತು ಇಂಡೋನೇಶಿಯಗಳ ನಿರ್ಯಾತ ಶಕ್ತಿ ಕುಂದಿದ್ದು ಹೀಗೆಯೇ.

ಪ್ರಾಮಾಣಿಕ ಮತ್ತು ಮನಃಪೂರ್ವಕ
ಸೇವೆಯೇ ನಮ್ಮ ಗುರಿ

ದಿ
ಬ್ಯಾಂಕ ಆಫ್ ಕರ್ನಾಟಕ
ಲಿಮಿಟೆಡ್

ಹೆಡ್ ಆಫೀಸ : ಹುಬ್ಬಳ್ಳಿ

ಅಧಿಕೃತ ಬಂಡವಲು .. ರೂ. ೧೦,೦೦,೦೦೦
ತೆತ್ತ ಬಂಡವಲು .. ರೂ. ೫,೧೫,೪೦೦
ವಸೂಲಾದ ಬಂಡವಲು. ರೂ. ೪,೮೦,೮೫೦

ಶಾಖೆಗಳು:– ಶಹಾಪೂರ, ಜಮಖಂಡಿ, ಬನ್ನಟ್ಟಿ, ಕುಂದಗೋಳ, ಸವಣೂರ.

‘ ಕುಬೇರ ’
ಕ್ಯಾಶ ಸರ್ಟಿಫಿಕೇಟುಗಳು

ರೂ. ೧೦, ೫೦, ೧೦೦ ಮತ್ತು ೧೦೦೦ ರೂಪಾಯಿಗಳಲ್ಲಿ ದೊರೆಯುವವು. ಮೂರು ವರ್ಷಗಳು ಮುಗಿದ ನಂತರ ಮೂಲ ಗಂಟಿನಲ್ಲಿ ನೂರಕ್ಕೆ ೪ ರಂತೆ ಬಡ್ಡಿ ಸೇರಿಸಿ ಹಣ ತಿರುಗಿ ಕೊಡಲಾಗುವದು.

ಅವಧಿಗೆ ಮೊದಲೂ ಹಣ ಪಡೆಯಬಹುದು. ಸಂಪೂರ್ಣ ವಿವರಗಳಿಗಾಗಿ ಹೆಡ್ ಆಫೀಸಿಗೆ ಅಥವಾ ಶಾಖೆಗಳಿಗೆ ಬರೆಯಿರಿ. ಇಲ್ಲವೆ ಸಮಕ್ಷಮ ಭೆಟ್ಟಿಯಾಗಿರಿ.

ಇರುವ ಜೀವನಾಧಾಯಕ ಉದ್ಯೋಗಗಳಲ್ಲಿ ಸ್ಪರ್ಧಿಸುವವರ ಸಂಖ್ಯೆ ಏರುವದು ಮತ್ತು ಆಂತರಿಕ ಅವ್ಯವಸ್ಥೆ ಇವುಗಳಿಂದ ಉತ್ಪಾದನೆ ಹಿಂದೆಬಿದ್ದು, ಜ್ಯೇಷ್ಠಾಲಕ್ಷ್ಮಿಯು ತನ್ನ ಶನಿಪಾದವನ್ನು ಆ ದೇಶಗಳಲ್ಲಿ ಸ್ಥಿರವಾಗಿ ನೆಲೆನಿಲ್ಲಿಸುವಂತಾಗಿದೆ. ದೇಶದಲ್ಲಿ ಪ್ರತಿಯೊಬ್ಬರಿಗೆ ದೊರೆಯುವ ಆಹಾರ ಹೊಟ್ಟೆಹೊರೆದುಕೊಳ್ಳಲು ಬೇಕಾಗುವದಕ್ಕಿಂತ ಎಲ್ಲೊ ಸ್ವಲ್ಪ ಹೆಚ್ಚು, ಅಷ್ಟೇ; ಕೆಲವು ವೇಳೆ ಹೊಟ್ಟೆಗೂ ಸಾಲದಂತಾಗುವದು ಉಂಟು. ಸದ್ಯಃ ಇದಕ್ಕಿಂತ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡಬೇಕೆಂದರೆ ವಿದ್ಯುತ್ತು ಮುಂತಾದ ಶಕ್ತಿಯ ಆಕರವೊಂದೂ ಇಲ್ಲ. ಇನ್ನು ಮುಂದಾದರೂ ಉತ್ಪಾದನೆ ಹೆಚ್ಚಿಸಬಹುದ್ದೋ ಹೇಗೆಂದರೆ ಗಳಿಕೆಯಲ್ಲಿ ಉಳಿಕೆಗವಕಾಶವಿಲ್ಲದುದರಿಂದ ಬಂಡವಾಳ ಕೂಡದೆ ಅದು ಅಶಕ್ಯವಾಗುವದು! ಬೇರೆ ಮಾತಿನಲ್ಲಿ ಹೇಳುವದಾದರೆ, ಜನಸಂಖ್ಯಾಭಿವೃದ್ಧಿಯ ಪ್ರಮಾಣವನ್ನು ಉತ್ಪಾದನವೃದ್ಧಿಯ ಪ್ರಮಾಣವು ಮೀರಿಸಿದಲ್ಲದೆ ಉಳಿಕೆಯ ಪ್ರಮಾಣ ಏರದು, ಬಂಡವಾಳ ಕೂಡದು, ವೈಯಕ್ತಿಕ ಉತ್ಪಾದನಶಕ್ತಿ ಹೆಚ್ಚದು ಎನ್ನಬೇಕಾಗುವದು.

ಜನಸಂಖ್ಯೆಯ ಅಭಿವೃದ್ಧಿಗೂ ನಿರುದ್ಯೋಗಸಮಸ್ಯೆಗೂ ನಿಕಟ ಸಂಬಂಧವಿದೆ. ನಿರ್ಯಾತ ವ್ಯಾಪಾರ ಕುಂದಿ ಇದ್ದಬಿದ್ದ ಉದ್ಯಮ ಕ್ಷೇತ್ರದಲ್ಲಿಯೂ ನಿರುದ್ಯೋಗ ಹೆಚ್ಚಿದಾಗ ಹೊಟ್ಟೆಗಾಗಿ ಕೃಷಿಗೆ ಶರಣುಹೋಗುವವರು ಹೆಚ್ಚುವರು. ಇದರಿಂದ ತೋರಿಕೆಗೆ ನಿರುದ್ಯೋಗ ಕಡಿಮೆಯಾದಂತೆನಿಸಿದರೂ ಕೃಷಿಕ್ಷೇತ್ರದಲ್ಲಿ ಪ್ರಚ್ಛನ್ನ ನಿರುದ್ಯೋಗ ಬೆಳೆಯುವದು. ಕೃಷಿಕ್ಷೇತ್ರದಲ್ಲಿ ಹೀಗೆ ಹೆಚ್ಚುವ ಅರ್ಧ-ನಿರುದ್ಯೋಗವೇ ಆಗ್ನೇಯ ಏಶಿಯದ ದೊಡ್ಡ ಸಮಸ್ಯೆ. ಕಚ್ಚಾ ಸಾಮುಗ್ರಿಗಳ ನಿರ್ಯಾತವನ್ನೇ ಜೀವನಕ್ಕಾಗಿ ಅವಲಂಬಿಸಿದ ಆಗ್ನೇಯ ಏಶಿಯದ ದೇಶಗಳಲ್ಲಿ, ಆ ಕಚ್ಚಾ ಸಾಮುಗ್ರಿಗಳನ್ನು ಆಯಾತ ಮಾಡುವ ದೇಶದ ಆರ್ಥಿಕ ಸ್ಥಿತಿಯಲ್ಲಿ ಮುಗ್ಗಟ್ಟು ತಲೆದೋರಿದೊಡನೆ, ಚಕ್ರವೃತ್ತಿಯ ನಿರುದ್ಯೋಗವು ಉಂಟಾಗಿ ಆಯಾತಶಕ್ತಿಯನ್ನು ಕುಂದಿಸಿಬಿಡುವುದು. ಇದರಿಂದ ಜೀವನ ಮಟ್ಟ ತೀರ ನಿಕೃಷ್ಟ ಸ್ಥಿತಿಗಿಳಿದು ಅದು ಪುನಃ ಉತ್ಪಾದಕ ಶಕ್ತಿಯನ್ನು ಕುಂದಿಸುವುದು. ಹೀಗೆ ಹೊರದೇಶಗಳಿಂದ ಬಂದ ನಿರುದ್ಯೋಗವು ಉದ್ಯಮಪ್ರಧಾನ ದೇಶಗಳಲ್ಲಿನ ಆರ್ಥಿಕ ಮುಗ್ಗಟ್ಟಿಗಿಂತಲೂ ಭಯಂಕರವಾಗಿರುವದು. ಈ ರೀತಿಯಾಗಿ ಹೊರಗಿನ ಬೇಡಿಕೆಯ ಅವಲಂಬನದಿಂದ ಈ ದೇಶಗಳನ್ನು ತಪ್ಪಿಸಲು ಹಾಗು ಪ್ರಕಟ ಮತ್ತು ಪ್ರಚ್ಛನ್ನ ನಿರುದ್ಯೋಗವನ್ನು ನಿವಾರಿಸಲು ಉತ್ಪಾದನೆಯನ್ನು ಯೋಜನಾಬದ್ಧವಾಗಿ ವೈವಿಧ್ಯಪೂರ್ಣ ಉದ್ಯೋಗಗಳ ಮೂಲಕ ಸಂಘಟಿಸುವದು ಮುಖ್ಯ ಉಪಾಯ. ಅದೇ ಆ ದೇಶಗಳ ಅವಸರದ ಗುರಿಯಾಗಿರಬೇಕು.

ಕಳೆದ ಕೆಲಕಾಲದಿಂದ ಜಗತ್ತಿನ ರಾಷ್ಟ್ರಗಳ (ರಶಿಯದ ಕೂಡ) ಲಕ್ಷ್ಯವು ಆಗ್ನೇಯ ಏಶಿಯದ ಮೇಲೆ ಬಿದ್ದಿದೆ. ಈಗ ಅದು ಕಮ್ಯುನಿಸ್ಟರ ಪ್ರಭಾವವಲಯದ ಹೊರಗೇ ಇದೆ. ಒಂದು ಕಡೆ ರಶಿಯವು ಅಲ್ಲಿ ತನ್ನ ಪ್ರಭಾವ ಹೆಚ್ಚಬೇಕೆಂದು ಬಯಸಿದರೆ ಪಾಶ್ಚಾತ್ಯರು ಇನ್ನೊಂದು ಕಡೆ ತಮ್ಮದೇ ಹೆಚ್ಚಬೇಕೆನ್ನುತ್ತಾರೆ. ಐತಿಹಾಸಿಕ, ಸಮರನೈತಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಆ ಭೂಭಾಗ ಸ್ವತಂತ್ರವಾಗಿ ಉಳಿಯಬೇಕೆಂದು ಪಾಶ್ಚಾತ್ಯರ ಮತ; ಆದರ ಒಳ

ಗುಟ್ಟೆಂದರೆ, ಪಾಶ್ಚಾತ್ಯರ ಸುಖಸಮೃದ್ಧಿಗೆ ಅಲ್ಲಿಯ ಅಸಿದ್ಧ ವಸ್ತುಗಳು ಸದಾ ಸುಲಭಗ್ರಾಹ್ಯ ಸ್ಥಿತಿಯಲ್ಲಿರುವುದು ಅವಶ್ಯ. ಕೆಲ ಕಾಮನ್‌ವೆಲ್ತ್ ರಾಷ್ಟ್ರಗಳ ಗಡಿಗಳಲ್ಲಿರುವುದರಿಂದ ಆಗ್ನೇಯ ಏಶಿಯದ ದೇಶಗಳು ಸ್ವತಂತ್ರವಾಗಿರಬೇಕೆಂಬುದು ಅವುಗಳ ಬಯಕೆ. ಆ ಭಾಗವು ಹಿಂದೀ ಮಹಾಸಾಗರದ ಹೆಬ್ಬಾಗಿಲು, ನೈಋತ್ಯ ಶಾಂತಸಾಗರ ವಲಯದ ಗಡಿ ಎನಿಸಿದೆ. ಬ್ರಿಟನ್ನಿಗೋ, ತನ್ನ ಔಪನಿವೇಶಿಕ ಹೊಣೆಗಳಿಗಾಗಿ ಆಗ್ನೇಯ ಏಶಿಯ ಸ್ವತಂತ್ರವಾಗಿರುವುದು ಅಪೇಕ್ಷಣೀಯ.

ಆಗ್ನೇಯ ಏಶಿಯದ ಬಗ್ಗೆ ಕೂಡಿದ ಮೊದಲನೆಯ ಸಭೆ ಎಂದರೆ ೧೯೫೦ ರ ಜನೆವರಿಯಲ್ಲಿ ನಡೆದ ಕೋಲಂಬೋ ಪರಿಷತ್ತು. ಕಾಮನವೆಲ್ತಿನ ವಿದೇಶ ಮಂತ್ರಿಗಳು ಅಲ್ಲಿ ಮೊದಲ ಬಾರಿಗೆ ಆಗ್ನೇಯ ಏಶಿಯದ ಒತ್ತಿ ಬರುವ ಸಮಸ್ಯೆಗಳನ್ನು ಪರಿಹರಿಸಲು ತಲೆಕೆರೆದುಕೊಂಡರು. ಈ ಸಭೆ ತಕ್ಕಮಟ್ಟಿಗೆ ಜಯಪ್ರದವಾಯಿತೆಂಬುದು ಸಂತೋಷಕರ. ರಾಜಕೀಯ ಮತ್ತು ಸಮರನೈತಿಕ ಸಮಸ್ಯೆಗಳನ್ನು ಆರ್ಥಿಕ ಸಮಸ್ಯೆಯಿಂದ ಪ್ರತ್ಯೇಕಿಸಿ ಇಡಲು ಶಕ್ಯವಿಲ್ಲ; ಮತ್ತು ಕಮ್ಯುನಿಸ್ಟರ ಆಕ್ರಮಣದಿಂದ ಏಶಿಯವನ್ನು ಉಳಿಸಬೇಕಾದರೆ ಏಶಿಯನ್ನರ ಸಂರಕ್ಷಣಾವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ಬಲಪಡಿಸಬೇಕೋ ಅಷ್ಟೇ ಮಟ್ಟಿಗೆ ಆರ್ಥಿಕ ಉನ್ನತಿಯನ್ನು ಸಾಧಿಸಬೇಕು ಎಂಬ ಅಂಶವನ್ನು ಪರಿಷತ್ತು ಒಮ್ಮತದಿಂದ ಮಾನ್ಯ ಮಾಡಿದ್ದು ಅತ್ಯಂತ ಮಹತ್ವದ ಸಂಗತಿ. ಆಸ್ಟ್ರೇಲಿಯದ ಪ್ರತಿನಿಧಿ ಶ್ರೀ ಸ್ಪೆಂಡರರು ಪ್ರತಿಯೊಂದು ಸದಸ್ಯರಾಷ್ಟ್ರವೂ ಯಥಾಶಕ್ತಿ ಸಹಾಯ ಸಲ್ಲಿಸುವ ಒಂದು ಪರಸ್ಪರ ಸಹಾಯಕ ಪದ್ಧತಿಯನ್ನು ಅಮಲಿನಲ್ಲಿ ತಂದರೆ ಸರ್ವರ ಸಂಪದ್ಬಲವನ್ನೂ ಏಕತ್ರ ಸಂಗ್ರಹಿಸಿದಂತಾಗುವುದು ಎಂದು ತಮ್ಮ ಯೋಜನೆಯನ್ನು ಪರಿಷತ್ತಿನ ಮುಂದಿಟ್ಟರು. ಸಿಂಹಳ ಸೂಚಿಸಿದಂತೆ ಈ ಯೋಜನೆಯ ವಿಸ್ತೃತ ರೂಪವನ್ನು ಪರಿಷತ್ತು ಪರಿಗ್ರಹಿಸಿತಲ್ಲದೆ ಅದನ್ನು ಅಮಲಿನಲ್ಲಿ ತರಲು ಒಂದು ಸ್ಥಾಯಿಯಾದ ವಿಚಾರವಿನಿಮಯ ಸಮಿತಿಯನ್ನು ಸ್ಥಾಪಿಸಬೇಕೆಂದೂ ಒಪ್ಪಿತು.

ಕೋಲಂಬೋ ಪರಿಷತ್ತಿನ ಬಳಿಕ ಜಗತ್ಕಾರ್ಯಗಳ ಚಲನವು ತೀವ್ರ ವೇಗವನ್ನು ಹಿಡಿಯಿತು. ಇಂಡೋಚೀನದಲ್ಲಿ ರಾಜಕೀಯ ಪರಿಸ್ಥಿತಿ ಅಧೋಗತಿಗಿಳಿದಿದೆ. ಹುಕ್ಬಾಲ ಹಾಪ್ಸರು ಫಿಲಿಪ್ಪೈನ್ ದ್ವೀಪಸ್ತೋಮದಲ್ಲಿ ಸಾಕ್ಷಾತ್ತಾಗಿ ಸಶಸ್ತ್ರ ಪ್ರತಿಭಟನೆಗೆ ಆರಂಭಿಸಿದ್ದಾರೆ. ಫೆಡರೇಶನ್ ಪಕ್ಷೀಯರ ಮತ್ತು ರಿಪಬ್ಲಿಕನ್ನರ ನಡುವೆ ಉಂಟಾದ ಕಲಹ ಇಂಡೋನೇಶಿಯದಲ್ಲೀಗ ಉಗ್ರರೂಪ ತಾಳುತ್ತಿದೆ. ಇಷ್ಟೆಲ್ಲ ನಡೆದಿರುವಾಗ ಕಳೆದ ಮೇ ತಿಂಗಳಲ್ಲಿ ಸಿಡ್ನಿಯಲ್ಲಿ ಪರಿಷತ್ತು ನಡೆದುದು ಬಹಳ ಅರ್ಥಗರ್ಭಿತವೆನಿಸಿತು. ಏಶಿಯಕ್ಕಷ್ಟೇ ಅಲ್ಲ, ಇಡಿ ಜಗತ್ತಿಗೇ ಅದು ಮಹತ್ವದ್ದೆನಿಸಿತು. ಸಿಡ್ನಿ ಪರಿಷತ್ತು ಕೊಲಂಬೋವಿನಲ್ಲಾದ ಮಾತುಕತೆಯ ಪರಿಣಾಮವೆ. ಸಿಡ್ನಿಯ ಪರಿಷತ್ತಿನಲ್ಲಿ ಒಂದು ಸೂತ್ರವನ್ನು ರಚಿಸಲಾಯಿತು. ಅದರ ಪ್ರಕಾರ ತಾಂತ್ರಿಕ ಸಹಾಯ ನೀಡುವ ಒಂದು ತ್ರೈವಾರ್ಷಿಕ ಯೋಜನೆ ಸಿದ್ಧಮಾಡಬೇಕೆಂದಾಯಿತು. ಅದಕ್ಕೊಂದು ಕೇಂದ್ರ ಕಚೇರಿ ಇರಬೇಕೆಂದು ತೀರ್ಮಾನಿಸಲಾಯಿತು. ಒಟ್ಟು ೪೦ ಲಕ್ಷ ಪೌಂಡುಗಳನ್ನು ಆ ಬಗ್ಗೆ ವೆಚ್ಚಮಾಡಬೇಕೆಂದು ನಿರ್ಧರಿಸಲಾಯಿತು.

ಕಾಮನ್ವೆಲ್ತಿನ ವಿಚಾರವಿನಿಮಯ ಸಮಿತಿಯ ಸಲಹೆಯ ಪ್ರಕಾರ ಆಗ್ನೇಯ ಏಶಿಯದ ಇತರ ದೇಶಗಳ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಬೇಕೆಂದೊಪ್ಪಲಾಯಿತು. ಸಹಾಯ ನಿರೀಕ್ಷಣೆಯಲ್ಲಿರುವ ಪ್ರತಿಯೊಂದು ನಾಡೂ ೧೯೫೦ ನೆಯ ಸೆಪ್ಟಂಬರ್ ಒಂದನೆಯ ತಾರೀಖಿನ ಹೊತ್ತಿಗೆ ವ್ಯವಹಾರ್ಯವೂ ಸಾಂಗೋಪಾಂಗವೂ ಆದ ಒಂದು ಹೇಳಿಕೆಯನ್ನು ತನ್ನ ಆರ್ಥಿಕ ಪರಿಸ್ಥಿತಿಯ ಮೇಲೆಯೂ ಅಭಿವರ್ಧನ ಕಾರ್ಯಕ್ರಮಗಳ ಮೇಲೆಯೂ ಸಿದ್ಧಮಾಡಿ ಅದೇ ಮಾಸಾಂತ್ಯದೊಳಗೆ ಆ ಅಭಿವರ್ಧನ ಕಾರ್ಯಕ್ರಮ ವಿವೇಚಿಸಲು ಕೂಡುವ ಕಾಮನ್ವೆಲ್ತ ಸರಕಾರಗಳ ಸಭೆಯ ಮುಂದಿಡಬೇಕು ಎಂದು ಅರಿಕೆ ಮಾಡಿಕೊಳ್ಳಲಾಯಿತು. ಇನ್ನೊಂದು ಶಿಫಾರಸ್ಸೆಂದರೆ, ಅಭಿವೃದ್ಧಿ ಕಾರ್ಯವು ಕ್ರಮಿಕಗತಿಯಲ್ಲಿ ಆರು ವರ್ಷಗಳಲ್ಲಿ ಮುಗಿಯುವ ಒಂದು ದೀರ್ಘಕಾಲಿಕ ಯೋಜನೆಯಂತೆ ನಡೆಯಬೇಕು ಎಂಬುದು.

ಅದೇ ಮೇರೆಗೆ ಕಾಮನ್ವೆಲ್ತಿನ ದೇಶಗಳು ನಿಯತ ದಿನಾಂಕದೊಳಗೆ ತಮ್ಮ ಯೋಜನೆಗಳನ್ನು ಒಪ್ಪಿಸಿದವು. ಕಾಮನ್ವೆಲ್ತಿನ ವಿಚಾರವಿನಿಮಯ ಸಮಿತಿಯು ಸೆಪ್ಟಂಬರ್ ೨೫ರಲ್ಲಿ ಸೇರಿತು. ಆಗ ಕೊರಿಯದ ಯುದ್ಧದ ಬೇಗೆ ಹಬ್ಬಿತ್ತು! ಆಗ ನಡೆದ ಚರ್ಚೆ



Stockist :- NEBRO Agencies

C/o House of Commerse, 257/c, Budhwar, Poona. 2.

ಯಲ್ಲಿ ಕಾಮನ್ವೆಲ್ತಿನ ಹೊರಗಣ ರಾಷ್ಟ್ರಗಳ ಪ್ರತಿನಿಧಿಗಳೂ ಭಾಗವಹಿಸಿದರು. ಬ್ರಹ್ಮದೇಶ, ಥೈಲೆಂಡ್, ಇಂಡೋನೇಶಿಯ ಮತ್ತು ಇಂಡೋಚೀನಗಳೇ ಆ ಹೊರಗಣ ರಾಷ್ಟ್ರಗಳು. ಆರು ವರ್ಷಗಳ ವರೆಗೆ ನಡೆಸಬೇಕಾದ ಅಭಿವರ್ಧನಯೋಜನೆಯ ವಿವರಗಳನ್ನೊಳಗೊಂಡ ಕರಡು ವರದಿಯೊಂದು ಸಿದ್ಧವಾಯಿತು. ಯೋಜನಾರಂಭವು ನಾಳಿನ ಜುಲೈ ೧ಲ ರಿಂದ. ಅದು ಸಿಂಹಳ, ಭಾರತ, ಪಾಕಿಸ್ತಾನ, ಮಲಯ, ಸಿಂಗಪುರ, ಉತ್ತರ ಬೋರ್ನಿಯೋ ಮತ್ತು ಸಾರವಾಕುಗಳಿಗೆ ಅನ್ವಯಿಸುತ್ತದೆ.

ಮೇಲೆ ಹೇಳಿದ ಯೋಜನೆಯ ಅಧಿಕೃತ ವಿವರಗಳು ಲಭ್ಯವಾಗಿಲ್ಲ. ಪರಿಷತ್ತಿನ ಕೊನೆಯಲ್ಲಿ ಪ್ರಕಟಿಸಲಾದ ಹೇಳಿಕೆಯಿಂದ ಕಾರ್ಯಕ್ರಮಗಳನ್ನು ಬಹಳ ಎಚ್ಚರಿಕೆಯಿಂದ, ಪರಿಹಾರವನ್ನು ಆರು ವರ್ಷಗಳಲ್ಲಿ ಕಾರ್ಯಗತ ಮಾಡುವ ಬುದ್ಧಿಯಿಂದ, ಸದ್ಯದ ಸ್ಥಿತಿಗತಿಗಳನ್ನು ಗಂಭೀರವಾಗಿ ಅಭ್ಯಸಿಸಿ, ಆಯಾ ದೇಶಗಳ ಕನಿಷ್ಠಾವಧಿಕವಾದ ಅತಿ ಮುಖ್ಯಾಂಶಗಳ ಅಭಿವೃದ್ಧಿಯ ದೃಷ್ಟಿಯಿಂದ ಸಿದ್ಧಗೊಳಿಸಲಾಗಿದೆಯೆಂದೂ ಅವು ಶೀಘ್ರಗತಿಯಿಂದ ಹೆಚ್ಚುತ್ತಿರುವ ಜನಸಂಖ್ಯೆಯ ಸಮಸ್ಯೆಯನ್ನೂ ಜೀವನ ಮಟ್ಟಗಳ ಸುಧಾರಣೆಯ ಪ್ರಶ್ನೆಯನ್ನೂ ೧೯೦ ಕೋಟಿ ಪೌಂಡುಗಳ ವೆಚ್ಚದಿಂದ ಬಗೆಹರಿಸಲು ಸಮರ್ಥವಾಗುವುವೆಂದೂ ತಿಳಿಯುತ್ತದೆ. ಆ ಕಾರ್ಯಕ್ರಮಗಳು ಹೆಚ್ಚಾಗಿ ಕೃಷಿಫಲವನ್ನು ಹೆಚ್ಚಿಸುವ ಮತ್ತು ಸಂಪರ್ಕ ಸಾಧನೆಗಳನ್ನು ವಿಸ್ತರಿಸುವ ಕಾರ್ಯವನ್ನು ಮುಖ್ಯವೆಂದಿಟ್ಟುಕೊಂಡಿದ್ದರೂ ಔದ್ಯಮಿಕ ಅಭಿವೃದ್ಧಿಯ ಮತ್ತು ಅರ್ಥನೀತಿಯ ವೈವಿಧ್ಯೀಕರಣದ ಕಾರ್ಯಗಳನ್ನೂ ಸೇರಿಸಿಕೊಂಡಿವೆ.

ಮೇಲಿನ ಅನಭಿವೃದ್ಧ ಮತ್ತು ಅರ್ಧಾಭಿವೃದ್ಧ ಪ್ರದೇಶಗಳಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಅವಕ್ಕೆ ಹಣದ ಮತ್ತು ತಾಂತ್ರಿಕ ಸಹಾಯವನ್ನು ನೀಡುವುದು ಅವಶ್ಯವೆಂದು ಕಾಮನ್ವೆಲ್ತಿನ ಮಂತ್ರಿಗಳು ಗಣಿಸಿದ್ದಾರೆ. ವಿದೇಶೀಯ ಸಹಾಯವನ್ನು ತೆಗೆದುಕೊಂಡಲ್ಲಿ ಭಾರತವೊಂದಕ್ಕೆ ಸುಮಾರು ೮೦೦ ಕೋಟಿಯಷ್ಟು ರೂಪಾಯಿಗಳು ಬೇಕಾಗಿವೆ ಎಂದು ತಿಳಿಯುತ್ತದೆ. ಇಡಿ ವಿಭಾಗದಲ್ಲಿ ಕನಿಷ್ಠಾವಧಿಕ ಜೀವನ ಮಟ್ಟವನ್ನು ಸಾಧಿಸಬೇಕಾದರೂ ಒಟ್ಟಿಗೆ ಬೇಕಾಗುವ ಹಣದ ಅಗಾಧತೆಯನ್ನು ಯಾರಾದರೂ ಇದರಿಂದ ಸುಲಭವಾಗಿ ಊಹಿಸಬಹುದು. ಈ ಸಹಾಯಧನವೆಲ್ಲ ಎಲ್ಲಿಂದ ಬರಬೇಕು? ಖಾಸಗಿ ಬಂಡವಾಳಗಾರರಿಂದ ಅದು ಬರಬೇಕು ಅಥವಾ ಯುರೋಪಿಗೆ ಅಮೇರಿಕ ಮಾಡಿಕೊಟ್ಟ ಮಾರ್ಶಲ್ ಯೋಜನೆಯಂಥ ಯೋಜನೆಯ ಮೂಲಕ ಬರಬೇಕು, ಅಷ್ಟೆ. ಇದರ ಮೇಲೆ, ಅಂತಾರಾಷ್ಟ್ರೀಯ ಬ್ಯಾಂಕು ಮತ್ತು ಇತರ ಸಂ. ರಾ. ಸಂಘದ ಏಜೆನ್ಸಿಗಳು ಕೆಲ ಮಟ್ಟಿಗೆ ಸಹಾಯಧನ ಕೊಡಬಹುದು. ಖಾಸಗಿ ಬಂಡವಾಳಗಾರರು ಹಣ ತೊಡಗಿಸುವ ಸಂಭವ ಬಹಳ ಕಡಿಮೆ. ಏಕೆಂದರೆ, ಸದ್ಯಃ ಅಂತಾರಾಷ್ಟ್ರೀಯ ಪರಿಸ್ಥಿತಿ ಬಹಳ ಬಿಗುಮಾನದಲ್ಲಿದೆ. ಒಂದೇ ಒಂದು ಆಕರವೆಂದರೆ ಅಮೇರಿಕ. ಆಗ್ನೇಯ ಏಶಿಯದಂಥ ಹತಭಾಗ್ಯ ಭೂಭಾಗದ ನೆರವಿಗೆ ಅದು

रजिष्टर नंबर ११४३२९

ಪಟೇಲ ಸ್ಪೇಶಲ್

प्रो. माधवलाल एम. पटेल



प्रो. माधवलाल एम. पटेल

ಪ್ರೊ. ಮಾಧವಲಾಲ ಎಂ. ಪಟೇಲ

ನಮ್ಮ ಸುಪ್ರಸಿದ್ಧ ಉಂಚಿ ತಂಬಾಕದಿಂದ ತಯಾರಿಸಿದ ಪುಣೇದ ಸುಪ್ರಸಿದ್ಧ ಪಟೇಲ ಸ್ಪೇಶಲ್ ಬೀಡಿಗಳನ್ನೇ ಸೇದಿ ಆನಂದ ಹೊಂದಿರಿ.

ಎಲ್ಲ ಕಡೆಗಳಲ್ಲಿಯೂ ಸಿಗುವವು.

ನಮ್ಮ ಎಲ್ಲ ಗ್ರಾಹಕರಿಗೂ
ದೀಪಾವಳಿಯು ಮಂಗಲದಾಯಕವಾಗಲಿ.

ಪಟೇಲ ಬೀಡಿ ವರ್ಕ್ಸ ಪುಣೆ

ಶಾಖೆ: ಸೊಲ್ಲಾಪೂರ, ಹೆಡ್ ಆಫೀಸ: ವೇತಾಳಪೇಟ ೫೫೨. ಪುಣೆ

"ಪ್ರೇಮಾ" ಅಡಿಕೆ ಪುಡಿಗೆ

ಮನಸೋತವನು ಬೇರೊಂದನ್ನು
ಮೆಚ್ಚುವುದಿಲ್ಲ !

ಇದೇ ಗುರುತಿನ

ಚೀಟಯಲ್ಲೇ

ದೊರೆಯುವುದು.



ಪ್ರೇಮಾ "ದಿಲ್ ಖುಶ್" ಮತ್ತು ಪ್ರೇಮಾ "ಮೈಸೂರು ಸುಗಂಧ ಅಡಿಕೆ ಪುಡಿ"ಗಳಿಗೆ ರುಚಿಯಲ್ಲಿ ಸಮಾನವಾದುದು ಇನ್ನೊಂದಿಲ್ಲ ಉತ್ತಮ ತರದ ಮಸಾಲೆಗಳ ಮಿಶ್ರಣದಿಂದ ಶುದ್ಧ ಮೈಸೂರು ಅಡಿಕೆಯಿಂದ ತಯಾರಿಸಿದ ಈ ಅಡಿಕೆ ಪುಡಿಗಳು ಸುವಾಸಿತವಾಗಿಯೂ ಆರೋಗ್ಯಕರವಾಗಿಯೂ ಇವೆ. ಚಿಕ್ಕ ಚೀಟಗಳಲ್ಲಿಯೂ ಸಮಾರಂಭಗಳಲ್ಲಿ ಉಪಯೋಗಿಸುವ ಸಲುವಾಗಿ ಟಿನ್ನುಗಳಲ್ಲಿ ಖುಲ್ಲಾ ಆಗಿಯೂ ಸಿಗುತ್ತವೆ. ಒಮ್ಮೆ ರುಚಿ ನೋಡಿ ತಿಳಿಯಿರಿ.

ದಿ ಅಲಾಯ್ಡ ಇಂಡಸ್ಟ್ರೀಜ,
ಧಾರವಾಡ

ಎಷ್ಟರ ಮಟ್ಟಿಗೆ ಮುಂಬಂದೀತೆಂಬುದನ್ನು ಕಾದು ನೋಡಬೇಕಾಗಿದೆ.

ಕಾಮನ್ವೆಲ್ತ್ ಪ್ರದೇಶದ ಹೊರಗಡೆಯ ಸಹಾಯಾಕರಗಳ ಬಗ್ಗೆ ಲಂಡನ್ ಸಭೆ ಏನು ಹೇಳಿತೆಂಬುದು ನಮಗೆ ಗೊತ್ತಿಲ್ಲ. ಆದರೆ ಅಧ್ಯಕ್ಷ ಟ್ರೂಮನ್ನರ ವಿಶೇಷ-ಸಲಹೆಗಾರನಾದ ಶ್ರೀ ಗ್ರೇಯು ಕರಡು ವರದಿಯಲ್ಲಿ ಒಂದು ಆಶಾಕಿರಣ ಕಂಡುಬರುತ್ತದೆ. ಆ ವರದಿಯನ್ನು ಜಾಗತಿಕ ಡಾಲರ್ ನ್ಯೂನತೆಯ ವಿಷಯವಾಗಿ ಅಧ್ಯಕ್ಷ ಟ್ರೂಮನ್ನರ ವಿನಂತಿಯ ಮೇರೆಗೆ ಆತನು ಸಿದ್ಧಗೊಳಿಸಿದ್ದು. ಭಾರತ ಮತ್ತು ಇತರ ಏಶಿಯದ ದೇಶಗಳಿಗೆ ನೇರವಾಗಿ ಡಾಲರ್ ಗ್ರಾಂಟುಗಳನ್ನು ಕೊಡಲು ಆ ವರದಿಯಲ್ಲಿ ಗ್ರೇ ಶಿಫಾರಸ್ಸು ಮಾಡಿದ್ದಾನೆ. ಆಯಾತ ನಿರ್ಯಾತ ಬ್ಯಾಂಕು, ಜಾಗತಿಕ ಬ್ಯಾಂಕು ಮುಂತಾದವು ಮೇಲ್ಕಾಣಿಸಿದ ದೇಶಗಳಿಗೆ ಕೊಡುತ್ತಿರುವ ೧೫ ಕೋಟಿ ಡಾಲರಿನ ವಾರ್ಷಿಕ ಸಾಲವನ್ನು ೫೦ ರಿಂದ ೮೦ ಕೋಟಿಯವರೆಗೆ ಏರಿಸಬೇಕೆಂದು ಅದರಲ್ಲಿ ಅರಿಕೆ ಮಾಡಿಕೊಳ್ಳಲಾಗಿದೆ. ಜೊತೆಗೆ, ಅಮೇರಿಕವು ಪ್ರತಿವರ್ಷವೂ ೨೦ ರಿಂದ ೪೨ ಕೋಟಿ ಡಾಲರ್ ವರೆಗೆ ಆ ದೇಶಗಳಿಗೆ ನೇರವಾದ ಗ್ರಾಂಟನ್ನು ಕೊಡಬೇಕೆಂದೂ ವರದಿ ಹೇಳಿದೆ. ಕಾಮನ್ವೆಲ್ತ್ ಪರಿಷತ್ತು ಹೇಳದೆ ಬಿಟ್ಟ ಒಂದೇ ಒಂದು ಅಂಶವೆಂದರೆ, ದಾತೃಗಳಿಗೂ ಪ್ರತಿಗೃಹೀತೃಗಳಿಗೂ ಇರಬೇಕಾದ ಸಂಬಂಧ ಎಂತಹದು ಎಂಬುದು.

ಧನಸಹಾಯದ ಬಗ್ಗೆ ಇಷ್ಟು. ಇನ್ನು ತಾಂತ್ರಿಕ ಸಹಾಯವನ್ನು ತೆಗೆದುಕೊಂಡರೆ ಕಾಮನ್ವೆಲ್ತ್ ಪರಿಷತ್ತು ತಾಂತ್ರಿಕ ಸಹಕಾರವನ್ನು ಸಾಧಿಸಲೋಸುಗ ಕರಡು ಸಂವಿಧಾನವೊಂದನ್ನು ಸ್ವೀಕರಿಸಬೇಕೆಂದು ಸಂಬಂಧಪಟ್ಟ ಸರಕಾರಗಳಿಗೆ ಸೂಚಿಸಲು ನಿರ್ಧರಿಸಿದೆ. ಆ ಸಂವಿಧಾನದಂತೆ ಒಂದು ತಾಂತ್ರಿಕ ಸಹಾಯ ಸಮಿತಿ ರಚಿತವಾಗುವುದು; ಅದು ಮನುಷ್ಯಶಕ್ತಿಯ ಕೊರತೆಯನ್ನು ನೀಗಿಸುವ ಯೋಜನೆಗಳನ್ನು ಸಿದ್ಧಗೊಳಿಸುವದು. ಆ ಸಮಿತಿಯು ತಾಂತ್ರಿಕ ಸಹಾಯಮಂಡಲವೊಂದರ 'ಮೂಲಕ ಕಾರ್ಯ ಮಾಡುವುದು. ಆ ಮಂಡಲ ಕೋಲಂಬೋವಿನಲ್ಲಿರುವದು. ಏಳು ಕಾಮನ್ವೆಲ್ತ್ ರಾಷ್ಟ್ರಗಳು ಆಗಲೇ ೮೦ ಲಕ್ಷ ಪೌಂಡುಗಳನ್ನು ಆ ಬಗ್ಗೆ ಕೊಡಲು ಒಪ್ಪಿವೆ. ಮುಂದಿನ ಮೂರು ವರ್ಷಗಳ ಕಾರ್ಯಕ್ಕೆ ಅದು ಸಾಕಾಗುವುದು. ಸಂ. ರಾ. ಸಂಘದ ತಾಂತ್ರಿಕ ಸಹಾಯದ ಕಾರ್ಯಕ್ರಮವೂ ಈಗ ಸಿದ್ಧವಾಗುತ್ತಿದೆ. ಜೊತೆಗೆ, ಅಮೇರಿಕದ "ಚತುರ್ಥಾಂಶ" ದ ಸಹಾಯಯೋಜನೆ ಮತ್ತು ಆಗಲೇ ಅದು ಆಗ್ನೇಯ ಏಶಿಯದ ತಾಂತ್ರಿಕ ಸಹಾಯಕ್ಕೆಂದು ವರ್ಷವೊಂದಕ್ಕೆ ಖರ್ಚುಮಾಡುತ್ತಿರುವಂತೆ ೯॥ ಕೋಟಿ ಡಾಲರು ಇವೆಲ್ಲವನ್ನೂ ಸಹಯೋಗಕ್ಕೆ ತಂದುಕೊಂಡರೆ ಕೆಲ ಮಟ್ಟಿಗೆ ಫಲಪ್ರದವಾದ ಕಾರ್ಯಗಳು ನಡೆದಾವು. ಅಂಥ ಒಂದು ಸಹಯೋಗವನ್ನು ಸಾಧಿಸುವ ಸೂಚನೆ ಆಗಲೇ ಬಂದಿದೆಯೆಂಬುದು ಸಂತೋಷಕರವಾದ ಸುದ್ದಿ. ಅಮೇರಿಕದ ಅಧಿಕಾರಿಗಳು ಕಾಮನ್ವೆಲ್ತಿನ ಈ ಷಡ್ವಾರ್ಷಿಕ ಯೋಜನೆಗೆ ಬೆಂಬಲವಾಗಿ ತಮ್ಮ ಚತುರ್ಥಾಂಶ ಯೋಜನೆಯನ್ನು ಜಾರಿಗೆ ತರಲು ಗಂಭೀರವಾಗಿ ವಿಚಾರ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಒಂದು ವೇಳೆ ಕೆಲ ಅನಿವಾರ್ಯ ಕಾರಣಗಳಿಗಾಗಿ ಈ ಯೋಜನೆಗಳೆಲ್ಲವನ್ನೂ ಪರಸ್ಪರ ತಳಿಕೆ ಹಾಕಲು ಸಾಧ್ಯವಾಗದಿದ್ದಲ್ಲಿ ಒಂದರಮೇಲೊಂದು ಪ್ರತಿಕಕ್ಷಿಯಾಗಿ ಬೀಳದಂತಾದರೂ ಮಾಡಿ ಕೊನೆಯ ಪಕ್ಷ ಅವು ಪರಸ್ಪರ ಹೊಂದಿಕೆಯಿಂದ ಕೆಲಸಮಾಡುವಂತೆ ನೋಡಿಕೊಳ್ಳಲಾದೀತೆಂದು ಆಶಿಸಲಾಗಿದೆ.

ಪರಿಷತ್ತು ಸಾಧಿಸಿದ್ದೇನೆಂಬುದನ್ನು ಕೊನೆಯದಾಗಿ ನಿರ್ಧರಿಸುವಲ್ಲಿ ನಮಗೊಂದು ಪ್ರಶ್ನೆ ಎದುರಾಗುತ್ತದೆ: ಖೈಬರಿನಿಂದ ಮಲಕ್ಕಾ ಜಲಸಂಧಿಯ ವರೆಗಿನ ಜನರ ಸಂಕಷ್ಟಪರಿಹಾರಕ್ಕಾಗಿ ಏನಾದರೂ ಒಂದು ಅನತರಿಸಿತೇ? ಸಿದ್ಧವಾಯಿತೆ? ಎಂಬುದೇ ಆ ಪ್ರಶ್ನೆ. ಈ ಪ್ರಶ್ನೆಯ ಉತ್ತರವು ಅದರ ಉದ್ದೇಶವನ್ನು ಯಾರು ಯಾರು ಹೇಗೆ ಹೇಗೆ ಅರ್ಥಯಿಸುವರೆಂಬುದರ ಮೇಲೆ ನಿಂತಿದೆ. ಸದ್ಯದಲ್ಲೆ ಮೂರ್ತರೂಪದ, ಗಣ್ಯಪರಿಮಾಣದ ಮತ್ತು ದೂರ ಪರಿಣಾಮದ ಆರ್ಥಿಕ ಪರಿಹಾರವನ್ನು ಆಗ್ನೇಯ ಏಶಿಯಕ್ಕೆ ಅಥವಾ ಅಷ್ಟೇ ಏಕೆ, ಇಡಿ ದಕ್ಷಿಣ ಏಶಿಯಕ್ಕೆ ಒದಗಿಸುವದೆಂದಾದರೆ ಪರಿಷತ್ತು ಬಹಳ ಯಶಸ್ವಿಯಾಯಿತೆಂದು ಹೇಳಬೇಕು. ಹಾಗಲ್ಲದೆ, ಅದರ ಉದ್ದೇಶವು ಕೇವಲ ರಾಜಕೀಯವೆಂದೆಣಿಸಿದರೆ, ಕಮ್ಯುನಿಜಮ್ಮಿನ ವಿರುದ್ಧವಾಗಿ ಒಕ್ಕಟ್ಟಿನಿಂದ ಹೋರಾಟಕ್ಕೆ ನಿಲ್ಲುವುದೆಂದಾದರೆ, ಪರಿಣಾಮವು ಸಂಪೂರ್ಣ ಅಪ್ರಯೋಜಕ, ವಿಫಲ ಎಂದೆನ್ನಬೇಕಾಗುತ್ತದೆ. ಅಂಥ ವಿಫಲತೆಗೆ ಫ್ರೆಂಚ್ ಇಂಡೋಚೀನದಲ್ಲಿ ಹೋಚಿಮಿನ್ನರ ಸೈನ್ಯ ಸಾಧಿಸಿದ ಪ್ರಗತಿ ಮತ್ತು ತಿಬೇಟಿನ ಮೇಲೆ ಚೀನ ಮಾಡಿದ ದಾಳಿ ಆಗಲೇ ಸಾಕ್ಷಿಗಳಾಗಿವೆ. ಈ ಎರಡೂ ಅಲ್ಲದೆ ಉದ್ದೇಶವು ಮೂರನೆಯದೆಂದುಕೊಂಡರೆ, ಅನುಕೂಲ ಪರಿಸ್ಥಿತಿಯಲ್ಲಿ ಏಶಿಯ ಮತ್ತು ದೂರಪ್ರಾಚ್ಯಗಳ ಅರ್ಥ ಸಮಿತಿ ಮುಂತಾದ ಏಜನ್ಸಿಗಳ ಕಾರ್ಯಗಳಿಗೆ ಅನುಬಂಧವಾದೀತೆಂಬ ಗ್ರಹಿಕೆಯಿಂದ ತಾಂತ್ರಿಕ ಕಾರ್ಯಶಕ್ತಿಗಳನ್ನು ಒಂದುಗೂಡಿಸುವ ಬಗ್ಗೆ ಕೆಲ ವ್ಯವಹಾರ್ಯ ಕ್ರಮಗಳನ್ನು ಕೈಗೊಳ್ಳುವದೆಂದಾದರೆ, ಪರಿಷತ್ತು ತಕ್ಕಮಟ್ಟಿಗೆ ಕಾರ್ಯಸಾಧನೆಯನ್ನು ಮಾಡಿತು, ಕೃತಕೃತ್ಯವಾಯಿತು ಎಂದೆನ್ನಬಹುದು.


ನೀವು ಧನವಂತರಾಗಬೇಕಲ್ಲವೇ ಹಾಗಾದರೆ –

ಧನಲಕ್ಷ್ಮೀ ತಿಜೋರಿಯನ್ನೇ

ಕೊಂಡು ಧನವಂತರಾಗಿರಿ !

ನಮ್ಮಲ್ಲಿ ಸ್ಟೀಲ ತಿಜೋರಿ, ಕಪಾಟು ಕ್ಯಾಶ್ ಬಾಕ್ಸಗಳು ಒಳ್ಳೇ ನವೀನ ಮಾದರಿಯಲ್ಲಿ ಯೋಗ್ಯ ಬೆಲೆಗೆ ಸಿಗುತ್ತವೆ. ಒಮ್ಮೆ ಸಂದರ್ಶಿಸಿರಿ.

ಈ ದೀಪಾವಳಿಯು ನಮ್ಮ ಗ್ರಾಹಕರಿಗೂ ಹಿತಚಿಂತಕರಿಗೂ ಸುಖಕರವಾಗಲಿ




ಶ್ರೀ ಧನಲಕ್ಷ್ಮೀ ತಿಜೋರಿ ಕಂಪನಿ

ಪ್ರೊಪ್ರಾಯಿಟರ: ಜಿ. ಎನ್. ಪಂಚಾಳ

ಸ್ಟೇಶನ್ ರೋಡ............................ಹುಬ್ಬಳ್ಳಿ

ಸ್ವ-ರಾಜ್ಯದಿಂದ ಸು-ರಾಜ್ಯಕ್ಕೆ



ನಾವೀಗ ಮೂರು ವರ್ಷಗಳ ಸ್ವರಾಜ್ಯವನ್ನು ಅನುಭವಿಸಿದ್ದೇವೆ. ಆದರೆ ಸ್ವರಾಜ್ಯದಿಂದ ನಮ್ಮ ದುಃಖದುಮ್ಮಾನಗಳು ಮುಗಿಯುವುವೆಂಬ ಆಸೆಯೀಗ ಬಹುಮಟ್ಟಿಗೆ ನಿರಸನಹೊಂದಿದೆ. ಸ್ವರಾಜ್ಯದಿಂದ ಸುರಾಜ್ಯಕ್ಕೆ ಮುಟ್ಟುವ ದಾರಿ ಕಂಟಕಮಯವಾದುದೆಂಬ ಅರಿವು ನಮಗೆ ಬರತೊಡಗಿದೆ. ನಮ್ಮ ಸರಕಾರಗಳು ಜನಕಲ್ಯಾಣದ ಹಂಬಲದಿಂದಲೇ ಆದರೂ ಕೆಲ ದೊಡ್ಡ ತಪ್ಪುಗಳನ್ನು ಮಾಡಿವೆ. ಸುರಾಜ್ಯದ ಹಾದಿ ಹಾರುವ ಹಾದಿಯಲ್ಲ, ಕಷ್ಟಪಟ್ಟು ನಡೆಯುವ ಹಾದಿಯೆಂದು ನಾವು ಅರಿತಷ್ಟು ಬೇಗ ನಮ್ಮ ಧ್ಯೇಯಸಾಧನೆಯಾಗುವದು.

ಲೇಖಕರು: **ಶ್ರೀ ಮೋಹರೆ ಹನುಮಂತರಾಯರು**

ನಮ್ಮ ದೇಶಕ್ಕೆ ಸ್ವರಾಜ್ಯವು ಸಿಕ್ಕು ಮೂರು ವರ್ಷಗಳು ಸಂದುಹೋದವು. ಕಾಂಗ್ರೆಸ್ ಸಂಸ್ಥೆಯು ಅರುವತ್ತು ವರ್ಷಗಳ ವರೆಗೆ ಹೋರಾಡಿ ತನ್ನ ಅಂತಿಮ ಗುರಿಯಾದ ಸ್ವಾತಂತ್ರ್ಯವನ್ನು ಅಥವಾ ಸ್ವರಾಜ್ಯವನ್ನು ಗಳಿಸಿತು. ಆದರೆ ಸ್ವರಾಜ್ಯದ ಅಂತಿಮ ಗುರಿಯು 'ಸುರಾಜ್ಯ' ಅಥವಾ 'ರಾಮರಾಜ್ಯ'ವೆಂದು ಹೇಳಬಹುದು. ಮಹಾತ್ಮಾ ಗಾಂಧಿಯವರು ಈ ಮಾತನ್ನು ಪದೇ ಪದೇ ಹೇಳುತ್ತಿದ್ದರು. ಆ ಗುರಿಯನ್ನು ನಾವು ಇನ್ನೂ ಮುಟ್ಟಿಲ್ಲ. ಅದನ್ನು ಸಾಧಿಸಬೇಕಾದರೆ ಕಾಂಗ್ರೆಸ್ ಸಂಸ್ಥೆಯಾಗಲಿ ಸದ್ಯಕ್ಕೆ ರಾಜ್ಯಸೂತ್ರಗಳನ್ನು ವಹಿಸಿದ ಮುಂದಾಳುಗಳಾಗಲಿ ತಮ್ಮ ರೀತಿನೀತಿಗಳನ್ನೂ ಧೋರಣೆಯನ್ನೂ ಬದಲಾಯಿಸಬೇಕಲ್ಲದೆ ಲೋಪದೋಷಗಳನ್ನು ಆತ್ಮನಿರೀಕ್ಷಣಬುದ್ಧಿಯಿಂದ ಕಂಡುಹಿಡಿದು ತಿದ್ದಿಕೊಳ್ಳಬೇಕು. ಪರಕೀಯರನ್ನು ಹೊರದೂಡುವ ಸಲುವಾಗಿ ಹೂಡಿದ ಸತ್ಯಾಗ್ರಹವೇ ಮೊದಲಾದ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ನುರಿತ ಜನರಿಗೆ ರಾಜ್ಯದಾಡಳಿತೆಯ ಸೂತ್ರಗಳನ್ನು ನಡೆಸುವ ಪ್ರಸಂಗ ಬಂದದ್ದರಿಂದ ಅವರು ಮುಗ್ಗರಿಸಹತ್ತಿದರು. ಕಳೆದ ಅನೇಕ ಶತಮಾನಗಳಿಂದ ರಾಜ್ಯಶಕಟದ ಸಂಪರ್ಕಕ್ಕೆ ಭಾರತೀಯರು ಎರವಾಗಿದ್ದರು. ಇದಲ್ಲದೆ ದೇಶವಿಭಜನೆಯಂತಹ ಅಸಾಮಾನ್ಯ ಆಪತ್ತಿಯನ್ನು ಅವರು ಎದುರಿಸಬೇಕಾಯಿತು. ಹೀಗಾಗಿ ಸ್ವಾತಂತ್ರ್ಯದ ಮುಖ್ಯ ಉದ್ದೇಶವಾದ 'ಸರ್ವೇ ಜನಾಃ ಸುಖಿನೋ ಭವಂತು'—ಸರ್ವ ಜನರಿಗೂ ಸುಖವಾಗಲಿ—ಎಂಬ ತತ್ವವು' ಕೈಗೂಡಿರುವುದಿಲ್ಲ. ಇದಕ್ಕೆ ಅನಿರೀಕ್ಷಿತ ದೈವಿಕ ಸಂಕಟ ಕುತ್ತುಗಳಿಗೆ ನಾವು ತುತ್ತಾದುದೂ ಕಾರಣವೆಂಬುದನ್ನು ಮರೆಯುವಹಾಗಿಲ್ಲ. ಆದರೆ ರಾಜ್ಯಸೂತ್ರಗಳನ್ನು ವಹಿಸಿದ ನಮ್ಮ ಮುಂದಾಳುಗಳು ರಾಷ್ಟ್ರೋದ್ಧಾರವನ್ನು ಬೇಗನೇ ಮಾಡಬೇಕೆಂಬ ಹಂಬಲಕ್ಕೆ ಬಲಿಬೀಳದೆ ಕಿಂಚಿತ್ ಮಂದಗತಿಯಿಂದ ಸಾಗಿದ್ದರೆ ಅನೇಕ ತಪ್ಪುತಡೆಗಳನ್ನೂ ಅವುಗಳಿಂದಾಗುತ್ತಿರುವ ದುಷ್ಪರಿಣಾಮಗಳನ್ನೂ ತಪ್ಪಿಸಿ ಜನತೆಗೆ ಹೆಚ್ಚಿನ ಸೌಖ್ಯವನ್ನೊದಗಿಸಬಹುದಾಗಿತ್ತೆಂದು ಖಂಡಿತವಾಗಿ ಹೇಳಬಹುದು. ಕಳೆದ ಮೂರು ವರ್ಷಗಳ ರಾಜ್ಯಾಡಳಿತೆಯನ್ನು ಇಲ್ಲಿ ವಿಮರ್ಶಿಸುವ ಉದ್ದೇಶವು ರಾಷ್ಟ್ರವನ್ನು ಎಚ್ಚರಿಸಿ ಆಡಳಿತೆಗಾರರಿಗೆ ಯೋಗ್ಯ ಮಾರ್ಗವನ್ನು ತೋರಿಸುವದು ಮಾತ್ರ, ಛಿದ್ರಾನ್ವೇಷಣದ ಹೊರತು ಉದ್ದೇಶದಿಂದ ನಾವು ಪ್ರೇರಿತರಾಗಿಲ್ಲೆಂಬುದನ್ನು ಯಾರೂ ಮರೆಯತಕ್ಕದ್ದಲ್ಲ.


ಸಕಾಲಕ್ಕೆ ಸದುಪದೇಶವನ್ನು ಕೊಟ್ಟು ರಾಷ್ಟ್ರವನ್ನು ಸನ್ಮಾರ್ಗಕ್ಕೆ ಹಚ್ಚುತ್ತಿದ್ದ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಕಣ್ಮರೆಯಾದದ್ದರಿಂದ ಸದ್ಯದ ರಾಜಕೀಯ ಮುಂದಾಳುಗಳ ಮುನ್ನೋಟಕ್ಕೆ ಕಗ್ಗತ್ತಲೆಯು ಕವಿಯಿತು. ದಾರಿಯು ಕಾಣದಂತಾಯಿತು. ಇದಲ್ಲದೆ ಸ್ವರಾಜ್ಯಪ್ರಾಪ್ತಿಯ ನಂತರ ಕಾಂಗ್ರೆಸ್ಸು ಅಧಿಕಾರಾರೂಢವಾದ ಮೇಲೆ ಸಾಮಾನ್ಯ ಕಾಂಗ್ರೆಸ್ಸಿಗರಲ್ಲಿ ದಂಭ ಅಹಂಕಾರಾದಿಗಳು ಬೆಳೆದುಬಂದವು. ಇಂತಹ ಸಮಯದಲ್ಲಿ ಈ ಜನರನ್ನು ನಿಯಂತ್ರಿಸುವ ಮಹಾಶಕ್ತಿಯು ಬೇಕಾಗಿತ್ತು. ವ್ಯಕ್ತಿಗಳಿಗೆ ಯಶಸ್ಸಿನ ಉನ್ಮಾದದಿಂದ ಗರ್ವ ಬರುವಂತೆ ರಾಷ್ಟ್ರಕ್ಕೂ ಸಂಸ್ಥೆಗಳಿಗೂ ಅಂತಹ ಗರ್ವ ಬರುವದುಂಟು. ಆ ಗರ್ವವನ್ನು ಪರಿಹಾರ ಮಾಡದಿದ್ದರೆ ಆ ವ್ಯಕ್ತಿಯ ಅಥವಾ ಸಂಸ್ಥೆಯ ಅವನತಿಯಾಗುತ್ತದೆ. ಅರ್ಜುನ, ನಾರದಾದಿಗಳ ಗರ್ವಭಂಗ ಮಾಡಿದ ಉದಾಹರಣೆಗಳು ನಮ್ಮ ಪುರಾಣಗಳಲ್ಲುಂಟು. ಮಹಾಭಾರತ ಯುದ್ಧವು ಮುಗಿದು, ದುರ್ಯೋಧನಾದಿಗಳ ಸಂಹಾರವಾದ ಮೇಲೆ ಭೂಭಾರವು ಇಳಿದು ನಿನ್ನ ಅವತಾರ ಕಾರ್ಯವು ಮುಗಿದದ್ದರಿಂದ ನೀನು ವೈಕುಂಠಕ್ಕೆ ತೆರಳಬೇಕೆಂದು ಉದ್ಧವನು ಶ್ರೀಕೃಷ್ಣ ಪರಮಾತ್ಮನಿಗೆ ಕೇಳಿಕೊಂಡಾಗ ಶ್ರೀಕೃಷ್ಣನು ಉತ್ತರಕೊಟ್ಟದ್ದೇನಂದರೆ:— "ಯದಸಂಹೃತ್ಯ ದೃಪ್ತಾನಾಂ ಯದೂನಾಂ ವಿಪುಲಂ ಕುಲಂ। ಗಂತಾಽಸ್ಮ್ಯನೇನ ಲೋಕೋಽಯಂ ಉಲ್ಬಣೇನ ವಿನಂಕ್ಷ್ಯತಿ ॥" ಉನ್ಮತ್ತರಾದ ಅಸಂಖ್ಯ ಯಾದವರನ್ನು ಸಂಹಾರ ಮಾಡದೆ ನಾನು ಹೋದರೆ ಈ ಲೋಕವು ಅವರ ಉಲ್ಬಣದಿಂದ ನಾಶವಾಗುತ್ತದೆ. ಈ ಸೂಕ್ಷ್ಮ ವಿಚಾರವನ್ನು ಕಂಡುಹಿಡಿದು ಕಾಂಗ್ರೆಸ್ಸನ್ನು ವಿಸರ್ಜಿಸಿ ಅದರಲ್ಲಿ ಸೇರಿಕೊಂಡ ಕೊಳೆಯನ್ನು ನಾಶಪಡಿಸಬೇಕೆಂದು ಗಾಂಧೀಜಿ ಯೋಚಿಸಿದ್ದರು.

ರಾಜ್ಯಭಾರವನ್ನು ವಹಿಸುವ ಸಮಯ ಬಂದ ಕೂಡಲೆ ನಮ್ಮ ಮುಂದಾಳುಗಳು ತಮ್ಮ ಧೋರಣೆಯನ್ನು ಹೊಸ ಪರಿಸ್ಥಿತಿಗೆ ಅನುಗುಣವಾಗುವಂತೆ ಬದಲಾಯಿಸಬೇಕಾಗಿತ್ತು. ಬ್ರಿಟಿಶ್ ಸರ

ಕಾರದಗೂಡ ಹೋರಾಡಬೇಕಾಗುವದೆಂಬ ಕಲ್ಪನೆಯಿಂದ ನಡೆಸಿದ ಚುನಾವಣೆಯಲ್ಲಿ ಆರಿಸಿಬಂದ ಶಾಸನ ಸಭೆಗಳ ಸದಸ್ಯರಲ್ಲಿ ರಾಜ್ಯದಾಡಳತೆಯಂತಹ ಗುರುತರವಾದ ಹೊಣೆಯನ್ನು ಹೊರಲು ಅನೇಕರು ಅಯೋಗ್ಯರೆಂದು ಹೇಳದಿದ್ದರೂ ಅಸಮರ್ಥರಿದ್ದರೆಂದು ಹೇಳಬಹುದು. ಕಟ್ಟಿಗೆ ಕೆತ್ತುವ ಬಡಿಗನಿಗೆ ಬಂಗಾರದಲ್ಲಿ ಕೆತ್ತಿಗೆ ಕೆಲಸವನ್ನು ಮಾಡಲು ಹೇಳಿದಂತೆ ಶಾಸನ ಸಭೆಗಳ ಸದಸ್ಯರ ಅವಸ್ಥೆಯಾಯ್ತು. ಆದ್ದರಿಂದ ಕೂಡಲೇ ಶಾಸನ ಸಭೆಗಳನ್ನು ವಿಸರ್ಜಿಸಿ ಹೊಸ ಚುನಾವಣೆಗಳ ಮೂಲಕ ರಾಜ್ಯದಾಡಳತೆಯನ್ನು ನಡೆಸಲು ಯೋಗ್ಯರಾದ ಜನರನ್ನು ಶಾಸನ ಸಭೆಗಳಲ್ಲಿ ಸೇರಿಸಬೇಕಾಗಿತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನೇಕರಿಗೆ ಶಾಸನ ಸಭೆಗಳ ಸದಸ್ಯತ್ವವನ್ನುಳಿದು ಬೇರೆ ಬಗೆಯ ಸಂಭಾವನೆಗಳನ್ನು ಕೊಡಬಹುದಾಗಿತ್ತು. ಹಿಂದೆ ಕಷ್ಟಪಟ್ಟದ್ದರ ಪ್ರತಿಫಲವಿದೆಂಬ ವಿಚಾರವು ಸಾಮಾನ್ಯ ಕಾಂಗ್ರೆಸ್ಸಿಗರಲ್ಲಿ ಬೇರೂರಿತು. ಇದುವರೆಗೆ ಅವರಲ್ಲಿದ್ದ ಉಚ್ಚ ಭಾವನೆಗಳೂ ತ್ಯಾಗಬುದ್ಧಿಯೂ ಮಾಯವಾಗಿ ಅಧಿಕಾರಲಾಲಸೆ, ಸ್ವಾರ್ಥ, ಮೊದಲಾದ ಅವಗುಣಗಳು ಹೆಚ್ಚಿದವು.

ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ, ಜನತೆಯನ್ನು ಹುರಿವದುಂಬಿಸುವ ಕಾಲಕ್ಕೆ ಕಾಂಗ್ರೆಸ್ಸು ಸ್ವರ್ಗವನ್ನೇ ಭೂಲೋಕಕ್ಕೆ ತರುತ್ತೇನೆಂದು ವಚನಕೊಟ್ಟದ್ದು ನಿಜ. ಅಂತಹ ವಚನಗಳನ್ನು ಪಾಲಿಸುವದು ಯಾರಿಂದಲೂ ಸಾಧ್ಯವಿಲ್ಲ. ಎಲ್ಲವನ್ನೂ ವ್ಯಾವಹಾರಿಕ ಮತ್ತು ವಾಸ್ತವದೃಷ್ಟಿಯಿಂದ ವಿಚಾರ ಮಾಡತಕ್ಕದ್ದು. ನಾಲ್ಕಾಣೆ ಬೆಲೆಬಾಳುವ ಕೋಳಿಯನ್ನು ಕಳೆದುಕೊಂಡ ಓರ್ವ ಮುಲ್ಲಾನು ತನ್ನ ಕೋಳಿಯು ಸಿಕ್ಕರೆ ಬಂಗಾರದ ಕೋಳಿಯನ್ನು ಮಾಡಿ ಅಲ್ಲಾನಿಗೆ ಸಮರ್ಪಿಸುತ್ತೇನೆಂದು ಹರಕೆ ಹೊತ್ತನಂತೆ. ಇದು ಸಾಧ್ಯವೇ? ರಾಷ್ಟ್ರಕ್ಕೊದಗಿದ ಆಪತ್ಕಾಲದಲ್ಲಿ ಅದರ ನಿವಾರಣೆ ಹೇಗೆ ಮಾಡಬೇಕೆಂಬದರ ಬಗ್ಗೆ ಮಾತ್ರ ಎಲ್ಲರೂ ವಿಚಾರ ಮಾಡತಕ್ಕದ್ದು. ಪ್ರಾಂತಿಕ ಸರಕಾರಗಳಾಗಲಿ ಕೇಂದ್ರ ಸರಕಾರವಾಗಲಿ ತಮ್ಮ ಧ್ಯೇಯವನ್ನು ನಿಚ್ಚಳವಾಗಿ ಮುಂದಿಟ್ಟುಕೊಂಡು ಅದನ್ನು ಸಾಧಿಸಲು ಪ್ರಯತ್ನಿಸಬೇಕು. ಜಗತ್ತನ್ನೇ ಉದ್ಧಾರಮಾಡಲು ಹೋಗಿ ಒಂದೇ ಕಾಲಕ್ಕೆ ಸಾರಾಸಾರ ವಿಚಾರವಿಲ್ಲದೆ ಅನೇಕ ಕಾಯದೆಗಳನ್ನು ಯಂತ್ರದಲ್ಲಿ ಹಾಕಿ ತೆಗೆದಂತೆ ತೆಗೆದರೆ ಪ್ರಜೆಗಳ ಹಿತ ಎಂದೂ ಸಾಧಿಸದು. ಅನೇಕ ಸುಧಾರಣೆಗಳನ್ನು ಕಾಯದೆಯ ಬಲದಿಂದ ಮಾಡಲು ಯತ್ನಿಸುವದು ತೀರ ತಪ್ಪು. ಯಾವದೊಂದು ಕಾಯದೆಯನ್ನು ಮಾಡುವಾಗ ಅದು ಯಾವ ವರ್ಗಕ್ಕೆ ಅನ್ವಯಿಸುತ್ತದೆ, ಅದರ ಹಿತಾಹಿತಗಳ ವಿಚಾರವೇನು? ಅದರಿಂದ ಸಮಾಜಕ್ಕೆ ಹಾನಿಯಿದೆಯೆ? ಇವೇ ಮೊದಲಾದ ವಿಷಯಗಳನ್ನು ಸೂಕ್ಷ್ಮವಾಗಿಯೂ ಕೂಲಂಕಷವಾಗಿಯೂ ವಿಚಾರಮಾಡಿ ಲೋಕಾಭಿಪ್ರಾಯದ ಬೆಂಬಲ ಪಡೆದುಕೊಂಡು ಮುಂದೆ ಸಾಗತಕ್ಕದ್ದು. ಇಂತಹ ಮಾರ್ಗವನ್ನು ಬಿಟ್ಟು ತಲೆಯಲ್ಲಿ ಯಾವುದೊಂದು ವಿಚಾರವು ಮಿಂಚಿದ ಕೂಡಲೇ ಕಾಯದೆಗಳನ್ನು ಮಾಡಹೋದರೆ ಅನರ್ಥವುಂಟಾಗುವುದು. ಎಲ್ಲೆಡೆಯಲ್ಲಿಯೂ ಅಸಂತೋಷ ಪ್ರಸರಿಸಿದೆ. ಆಡಳತೆಯಲ್ಲಿ ಶೈಥಿಲ್ಯವುಂಟಾಗಿದೆ. ದುಷ್ಟನಿಗ್ರಹ ಶಿಷ್ಟಪರಿಪಾಲನೆಯೇ ರಾಜ್ಯಕರ್ತರ ಮುಖ್ಯ ಗುರಿಯಾಗಿರತಕ್ಕದ್ದು. ತದ್ವಿರುದ್ಧವಾಗಿ ಈಗ ಎಲ್ಲೆಡೆಯಲ್ಲಿ ದುಷ್ಟರ ಪ್ರಾಬಲ್ಯವು ಹೆಚ್ಚಾಗಿದೆ. ಹಳ್ಳಿಗಳನ್ನು ಸುಧಾರಿಸಬೇಕೆಂದು ಸರಕಾರವು ಹಾತೊರೆಯುತ್ತಿದ್ದರೂ ಅಲ್ಲಿಯ ಜೀವನವು ಕೆಟ್ಟುಹೋಗಿದೆ. ಸಜ್ಜನರು ಹಳ್ಳಿಗಳಲ್ಲಿ ಬಾಳುವೆ ಮಾಡುವುದು ಕಠಿಣವಾಗಿದೆ. ಆದ್ದರಿಂದಲೇ ಅಸಂಖ್ಯಾಕ ಜನರು ಹಳ್ಳಿಗಳಿಂದ ಪಟ್ಟಣಗಳಿಗೆ ಬರಹತ್ತಿದ್ದಾರೆ. ಮಧ್ಯಮ ವರ್ಗವೇ ರಾಷ್ಟ್ರದ ಮೂಲಾಧಾರವು. ಆ ವರ್ಗವೇ ರಾಷ್ಟ್ರದ ಸಂಸ್ಕೃತಿಯನ್ನು ಸಂರಕ್ಷಿಸುತ್ತದೆ. ನೈತಿಕ ಜೀವನಕ್ಕೆ ಅದೇ ಆಧಾರ ಸ್ತಂಭವು. ಅಂತಹ ಮಧ್ಯಮ ವರ್ಗವು ಈಗ ಅತ್ಯಂತ ಕಷ್ಟಕ್ಕೊಳ

ದೀರ್ಘ ಕಾಲದ ಸೇವೆಯಿಂದ
ಜನತೆಯ ಮನ್ನಣೆ ಪಡೆದ
ಮಿತ್ರ ಸಮಾಜ, ಹುಬ್ಬಳ್ಳಿ
ಸವಿಯಾದ ಊಟ, ತಿಂಡಿ ತಿನಿಸುಗಳು,
ಉಳಿದುಕೊಳ್ಳಲು ಯೋಗ್ಯ ಕೋಣೆಗಳು
ನಮ್ಮ ಗ್ರಾಹಕ-ವೃಂದಕ್ಕೆ
ದೀಪಾವಳಿಯ ಅಭಿನಂದನೆಗಳು

H.O.G.
ಇಮಾನಿ
ಕೋಲ್ಡ ಸ್ಟಾರ್ಟ
ಕ್ರೂಡ ಆಯಿಲ್
ಡೀಜೆಲ್
ಎಂಜಿನುಗಳು

೫, ೬, ೮, ಮತ್ತು ೯ ಹಾರ್ಸಪಾವರ ಪ್ರತಿಯುನಿಟ್ಟಿಗೆ ೫೫೦
ರೆವ್ಹಲೂಶನ್ ೧೨, ೧೪, ಹಾರ್ಸಪಾವರ ಆರ್. ಪಿ. ಎಂ. ೪೯೦
ದಕ್ಷಿಣ ಭಾರತದ ಮುಖ್ಯ ಏಜಂಟರು
ದಿ ಯುನಿವರ್ಸಲ್ ಏಜೆನ್ಸಿ
ಇಚಲಕರಂಜಿ
ಶೋ ರೂಮುಗಳು:- ಸೊಲ್ಲಾಪೂರ ಮತ್ತು ಕೊಲ್ಹಾಪೂರ

ಗಾಗಿದೆ. ಆಡಳಿತೆಗಾರರ ಈಗಿನ ಧೋರಣದಿಂದ ಆ ವರ್ಗವು ಸಾವಕಾಶವಾಗಿ ನಾಮಶೇಷವಾಗಹತ್ತಿದೆ. ಕಮ್ಯುನಿಸ್ಟರನ್ನು ತಡೆಯುವ ಶಕ್ತಿಯು ಯಾರಲ್ಲಿಯಾದರೂ ಇದ್ದರೆ ಅದು ಮಧ್ಯಮ ವರ್ಗದಲ್ಲಿರುತ್ತದೆ. ನಮ್ಮ ದೇಶದ ಭಾವೀ ಸಮಾಜರಚನೆಯು ಯಾವ ಪ್ರಕಾರದ್ದಿರಬೇಕೆಂಬದರ ಬಗ್ಗೆ ನಿಚ್ಚಳವಾದ ಧೋರಣೆಯ ಅಭಾವವೇ ಗೊಂದಲಕ್ಕೆ ಕಾರಣವಾಗಿದೆ.

ಆಡಳಿತೆಯ ಕ್ಷೇತ್ರದಲ್ಲಿ ಯಾವ ಸುಧಾರಣೆಯೂ ಇಲ್ಲ. ಲಂಚಗುಳಿತನವು ಎಂದಿನಂತೆ ಸಾಗಿದೆ. ಅಪಾರ ಶೈಥಿಲ್ಯವುಂಟಾಗಿದೆ. ಬ್ರಿಟಿಶರ ಕಾಲದಲ್ಲಿದ್ದ ಅಚ್ಚುಕಟ್ಟುತನವಾಗಲಿ ಶಿಸ್ತಾಗಲಿ ಸಂಪೂರ್ಣ ಅಳಿದುಹೋಗಿವೆ. ಪ್ರಜಾಪ್ರಭುತ್ವದ ತಪ್ಪುಕಲ್ಪನೆಗಳು ಎಲ್ಲೆಡೆಯಲ್ಲಿಯೂ ಹರಡಿಕೊಂಡಿವೆ. ಅನೇಕ ಮಂತ್ರಿಗಳು ಅವರವರ ಯೋಗ್ಯತೆಯನ್ನನುಲಕ್ಷಿಸಿ ಆರಿಸಲ್ಪಟ್ಟಿಲ್ಲ. ಅವರಿಗೆ ರಾಜ್ಯದಾಡಳಿತೆಯ ಕಲೆಯು ಗೊತ್ತಿಲ್ಲ. ಕೆಲವರು ಆ ಕಲೆಯನ್ನು ಎಂದೂ ಕಲಿಯಲು ಸಾಧ್ಯವಿಲ್ಲ. ಅವರ ಕೈಕೆಳಗಿನ ನೌಕರರು ಅವರಿಗಿಂತ ಎಷ್ಟೋ ಪಾಲು ಬುದ್ಧಿಶಾಲಿಗಳೂ ಯೋಗ್ಯತೆಯುಳ್ಳವರೂ ಇದ್ದಾರೆ. ಆದ್ದರಿಂದ ಆಡಳಿತೆಯು ಅಸ್ತವ್ಯಸ್ತ ರೀತಿಯಿಂದ ಸಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣ ಮುಗಿಸದಿದ್ದವನಿಗೆ ಎಂ. ಎ. ಪರೀಕ್ಷೆಯನ್ನು ಪಾಸಾದ ಹೆಣ್ಣನ್ನು ಮದುವೆ ಮಾಡಿದಂತೆ ಕೆಲವು ಮಂತ್ರಿಗಳ ಅವಸ್ಥೆಯಾಗಿದೆ. ಇಂತಹ ಮಂತ್ರಿಗಳಿಂದ ರಾಜ್ಯದಾಡಳಿತೆಯು ಸುಸೂತ್ರವಾಗಿ ಸಾಗುವದೆಂತು? ಜನತೆಯಲ್ಲಿ ಸರಕಾರದ ಬಗ್ಗೆ ಆದರ, ಭಯ, ವಿಧೇಯತೆ ಮೊದಲಾದವುಗಳು ಇಲ್ಲದಂತಾಗಿವೆ. ದಂಡನೀತಿಯು ರಾಜ್ಯಾಂಗದ ಒಂದು ಪ್ರಬಲವಾದ ಅಂಗವು. ಅದು ಮೊದಲಿನ ಸ್ಥಾನವನ್ನು ಕಳೆದುಕೊಂಡಿದೆ. "ಅದಂಡ್ಯಾನ್ ದಂಡಯನ್ ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ । ಅಯಶೋ ಮಹದಾಪ್ನೋತಿ ನರಕಂ ಚೈವ ಗಚ್ಛತಿ ॥" ದಂಡಿಸತಕ್ಕವರನ್ನು ದಂಡಿಸದೆ ದಂಡಿಸಕೂಡದವರನ್ನು ದಂಡಿಸುವ ರಾಜನು ಅಪಕೀರ್ತಿಗೀಡಾಗುವನಲ್ಲದೆ ನರಕಕ್ಕೆ ಹೋಗುವನೆಂದು ರಾಜನೀತಿ ಶಾಸ್ತ್ರದಲ್ಲಿ ಹೇಳಿದೆ. ಈ ಮಾತಿನ ಅರಿವು ನಮ್ಮ ಆಡಳಿತೆಗಾರರಿಗೆ ಸಾಕಷ್ಟಿಲ್ಲ. ರಾಜ್ಯದಾಡಳಿತೆಯ ಕೀಲುಗಳನ್ನು ಹೇಗೆ ಬಲಪಡಿಸಬೇಕು; ಮತ್ತು ಯಾರಗೂಡ ಮಂತ್ರಾಲೋಚನೆ ನಡೆಸಬೇಕು ಮೊದಲಾದ ವಿಚಾರಗಳಲ್ಲಿ ನಮ್ಮ ಸರಕಾರವು ಅಷ್ಟೊಂದು ಜಾಣತನವನ್ನು ತೋರಿಸಿಲ್ಲ. ಯಾರ ಬೆಂಬಲದಿಂದ ಕಾಂಗ್ರೆಸ್ಸು ಸ್ವರಾಜ್ಯವನ್ನು ಸಂಪಾದಿಸಲು ಸಮರ್ಥವಾಯಿತೋ ಅಂತಹ ಜನರು ಕಣ್ಣೀರು ಹಾಕುತ್ತಾರೆ. ಕೃತಜ್ಞತೆಯನ್ನು ತೋರಿಸುವದರ ಬದಲು ಕೃತಘ್ನತೆಯನ್ನು ತೋರಿಸದಿದ್ದರೂ ಸಾಕಾಗಿತ್ತು. ಮಂತ್ರಿಗಳಾಗಲಿ ಅವರ ಅಧಿಕಾರಿಗಳಾಗಲಿ ಹೇಳುತ್ತಿರುವ ಮಾತುಗಳಲ್ಲಿ ಜನತೆಯ ನಂಬುಗೆಯು ಕಡಿಮೆಯಾಗಹತ್ತಿದೆ. ಈ ಪರಿಸ್ಥಿತಿಯು ನಿರ್ಮಾಣವಾಗಲು ಆಡಳಿತೆಗಾರರೇ ಕಾರಣರಾಗಿದ್ದಾರೆಂದು ನಾವು ಹೇಳುವದಿಲ್ಲ. ಜನರಲ್ಲಿಯಾದರೂ ಅನೇಕ ದೋಷಗಳಿವೆ. ಆದರೆ ಈ ಪರಿಸ್ಥಿತಿಯ ಪರಿಣಾಮುಗಳು ರಾಷ್ಟ್ರದ ಉತ್ಕರ್ಷೆಗೆ ಅನುಕೂಲವಾಗಿಲ್ಲವೆಂಬುದು ನಿಶ್ಚಯ. ತಪ್ಪು ಯಾರದೇ ಆಗಿದ್ದರೂ ಪರಿಸ್ಥಿತಿಯನ್ನು ಬದಲಾಯಿಸುವ ಹೊಣೆಯು ಆಡಳಿತೆಗಾರರ ಮೇಲಿದೆ. ಜನರು ಏನೇ ಹೇಳಲಿ ನಾವು ಮನಸ್ಸಿಗೆ ಬಂದಂತೆ ನಡೆಯೋಣ ಎಂಬ

ಕೊಲ್ಹಾಪುರದಲ್ಲಿ ಕಬ್ಬಿಣದ ಸಾಮಾನುಗಳ
ಲೋಕಪ್ರಿಯವಾದ ಹಾಗೂ ಪ್ರಸಿದ್ಧ
ಕಾರಖಾನೆಯಾದ


ಪಾಟೋಳೆ ಜಾಧವ ಮತ್ತು ಕಂಪನಿ

ಲಕ್ಷ್ಮೀಪುರಿ, ಕೊಲ್ಹಾಪೂರ
(ಸ್ಥಾಪನೆ: ೧೯೩೬)
ಇವರ

ಭಾರತದ ರೋಲಿಂಗ
ಶಟರ್ಸ

ನಿಮ್ಮ ಇಮಾರತಿಗಳಿಗೆ ಕೂಡಿಸಿ ಇಮಾರತಿಯ
ಶೋಭೆಯನ್ನು ಹಾಗೂ ಸುರಕ್ಷಿತತೆಯನ್ನು
ಹೆಚ್ಚಿಸಿರಿ

★ ಸಕಲರಿಗೂ ದೀಪಾವಳಿಯು ★
ಸುಖವನ್ನೀಯಲಿ



ವೃತ್ತಿಯು ಸರಿಯಾದದ್ದಲ್ಲ. ಶ್ರೀರಾಮನು ಲೋಕಾರಾಧನೆಯ ಸಲುವಾಗಿ "ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿ ವಾ ಜಾನಕೀ ಮಪಿ" ಸೀತೆಯನ್ನು ಕೂಡ ಪರಿತ್ಯಾಗ ಮಾಡಿದನು.

ಆರ್ಥಿಕ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಕೂಡ ಸದ್ಯದ ಸರಕಾರವು ಅಷ್ಟೊಂದು ಯಶಸ್ವಿಯಾಗಿಲ್ಲ. ಅಲ್ಲಿಯೂ ಅನಿಶ್ಚಿತ ಧೋರಣೆಯೂ ವ್ಯವಹಾರಚತುರತೆಯ ಅಭಾವವೂ ಪ್ರತಿಯೊಂದಕ್ಕೆ ಅನವಶ್ಯವಾಗಿ ದುಡುಕುವದೂ ಅಪಯಶಸ್ಸಿಗೆ ಕಾರಣವಾಗಿವೆ. ಸರಕಾರವೇ ಎಲ್ಲ ಉದ್ದಿಮೆಗಳನ್ನೂ ಕಾರಖಾನೆಗಳನ್ನೂ ನಡೆಸಬೇಕೆಂಬ ಸಿದ್ಧಾಂತವು ನಮ್ಮ ದೇಶದಲ್ಲಿ ಯಶಸ್ವಿಯಾಗುವದಿಲ್ಲ. ಜನತೆಯ ಮನೋವೃತ್ತಿಯನ್ನು ಅಭ್ಯಾಸ ಮಾಡದೆ ಕಂಡದ್ದಕ್ಕೆ ಕೈಹಾಕುವದರಿಂದ ಸರಕಾರವು ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿವೆ. ದೇಶದ ಸಂರಕ್ಷಣೆಗೆ ಪ್ರತಿವರ್ಷ ಏನಿಲ್ಲೆಂದರೂ ೧೫೦–೨೦೦ ಕೋಟಿ ರೂಪಾಯಿಗಳು ಬೇಕು. ಜನತೆಯ ಕಲ್ಯಾಣ ಮಾಡುವ ಭ್ರಮೆಯಿಂದ ಅನೇಕ ಯೋಜನೆಗಳನ್ನು ಕೈಕೊಂಡು ಹಣವನ್ನು ವ್ಯರ್ಥವಾಗಿ ಹಾಳು ಮಾಡುತ್ತಿರುವದು ಕಂಡುಬಂದಿದೆ. ಯೋಜನೆಗಳನ್ನು ಸಿದ್ಧಗೊಳಿಸಲಿಕ್ಕೆ ಬೇಕಾದಷ್ಟು ಅನುಕೂಲವಿದೆ. ಆದರೆ ಅವುಗಳನ್ನು ಕೃತಿಯಲ್ಲಿ ತರುವದೆಂತು? ಹಣವನ್ನು ಎಲ್ಲಿಂದ ತರಬೇಕು? ಈ ವಿಚಾರಗಳನ್ನು ಆಲೋಚಿಸುವ ಗೋಜಿಗೆ ಯಾರೂ ಹೋದಂತಿಲ್ಲ.

ಮೂರು ವರ್ಷದ ಆಳಿಕೆಯು ಸಂಪೂರ್ಣ ಅಯಶಸ್ವಿಯಾಗಿದೆಂದು ಹೇಳಲಾಗದು. ಹೆಚ್ಚು ಯಶಸ್ವಿಯಾಗಿ ಮಾಡಲು ಸಾಧ್ಯವಿತ್ತು ಮತ್ತು ಸಾಧ್ಯವಿದೆ. ಮೊನ್ನೆ ಗುಜರಾತದ ಪ್ರವಾಸದಲ್ಲಿ ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಪ್ರಸಾದರು ಹೇಳಿದಂತೆ ಸ್ವರಾಜ್ಯ ಸಿಕ್ಕರೂ ಸುರಾಜ್ಯ ಸಿಕ್ಕಿಲ್ಲ. ಅದಕ್ಕಾಗಿ ಹೆಣಗಾಡುವದು ಅತ್ಯಂತ ಅವಶ್ಯವಿದೆ. ಮೇಲೆ ಕಾಣಿಸಿದ ಎಲ್ಲ ದೋಷಗಳನ್ನು ತಿದ್ದಿಕೊಂಡು 'ರಾಜಾ ಕಾಲಸ್ಯ ಕಾರಣಂ' ಎಂಬ ಉಕ್ತಿಯನ್ನು ಲಕ್ಷದಲ್ಲಿಟ್ಟುಕೊಂಡು ನಮ್ಮ ಮುಂದಾಳುಗಳು ಮುಂದೆ ಸಾಗಬೇಕು. ಸ್ವಾರ್ಥವೂ ಅಧಿಕಾರಲಾಲಸೆಯೂ ನಮ್ಮ ರಾಷ್ಟ್ರದ ಭವಿಷ್ಯತ್ತನ್ನು ಕೆಡಿಸದಂತೆ ಸಕಲರೂ ಎಚ್ಚರಪಡಬೇಕಾಗಿದೆ. ನಮ್ಮ ಸುರಾಜ್ಯದ ಕಲ್ಪನೆಯನ್ನು ಕರ್ಣಾಟಕವಿಚೂತವನಚೈತ್ರನೆಂದು ಬಿರುದುಪಡೆದ ಲಕ್ಷ್ಮೀಶನು ಧರ್ಮರಾಜನ ಆಳಿಕೆಯನ್ನು ಬಣ್ಣಿಸುವಾಗ ಹೀಗೆ ಹೇಳಿದ್ದಾನೆ.

ಬಳಿಕ ನೃಪವರ ಯುಧಿಷ್ಠಿರನಾಳ್ವ ದೇಶದೊಳ್ ।
ಕಳವು ಕೊಲೆ ಪಾದರಂ ಪುಸಿ ನುಸುಳು ವೈರಮು- ।
ಟ್ಟುಳಿ ತೋಹು ಬೆದರು ಬೆಜ್ಜರ ಕಷ್ಟನಿಷ್ಠುರಂ ಗಜರು ಗಾವಳಿ ವಿವಾದ ॥
ಮುಳಿಸು ಪೊಲೆಗೆಲಸು ಮೊರೆ ಸೆರೆ ಕೃತಕ ಕಾರ್ಪಣ್ಯ ।
ಮುಳಿವು ಪಳಿವನ್ಯಾಯ ಮರೆಮೋಸವಾಸಿ ತ- ।
ಲ್ಲಳ ತಡೆ ವಿಯೋಗಮುಲಸಿಕೆ ಕರ್ಕಶಂಗಳಿವು ಮೊಳೆದೋರವೇವೇಳ್ವೆನು ॥

ನೀತಿ ಚತುರತೆ ಕೀರ್ತಿ ಕಲ್ಯಾಣ ಭೋಗ ಸಂ ।
ಪ್ರೀತಿ ಪರಹಿತ ವಿನಯ ಶುಭ ವಿಭವ ವಿಜಯ ವಿ ।
ಖ್ಯಾತಿ ಕಲೆ ಸೌಭಾಗ್ಯವಾರೋಗ್ಯ ಸೌಖ್ಯಮುನ್ನತ ಸತ್ಯ ನಿತ್ಯಶಕ್ತಿ ॥
ಜಾತಿಧರ್ಮಾಚಾರನಿಷ್ಠೆ ದೈವಜ್ಞತೆ ವಿ ।
ಭೂತಿ ಶಮ ದಮ ದಾನ ದಾಕ್ಷಿಣ್ಯವೆಂಬಿವು ಮ ।
ಹಾತಿಶಯಮೆನೆ ಪೆರ್ಚಿತಾ ಯುಧಿಷ್ಠಿರ ನರೇಶ್ವರನಾಳ್ವ ಭೂತಳದೊಳು ॥

ತ್ವರೆ ಮಾಡಿರಿ!] [ಇಂದೇ ಬರೆಯಿರಿ!!

ಮುಲ್ಕೀ ವಿದ್ಯಾರ್ಥಿಗಳಿಗೆ ಸುಸಂಧಿ

ಮುಲ್ಕೀ ಪರೀಕ್ಷೆಯನ್ನು ಪಾಸಾಗಲು ಊರುಗೋಲಾದ ವಿದ್ಯಾರ್ಥಿ ಮತ್ತು ಶಿಕ್ಷಕರಿಂದ ಮನ್ನಣೆ ಪಡೆದ ಕೆಳಗಿನ ಪುಸ್ತಕಗಳನ್ನು

ಇಂದೇ ಸಂಗ್ರಹಿಸಿರಿ

ನೂತನ ಪ್ರಶ್ನೋತ್ತರಮಾಲೆ

೧- ಇತಿಹಾಸ ೧-೦-೦ ೩. ಭೂಮಿತಿ ೧-೦-೦
೨ ಭೂಗೋಲ ೧-೦-೦ ೪. ಭಾಷಾಭ್ಯಾಸ ಕೈಪಿಡಿ ೧-೦-೦

ನೂತನ ಕಿಸೆಯ ಕೈಪಿಡಿ ಮಾಲೆ

೧. ಆರೋಗ್ಯ ಶಾಸ್ತ್ರ ೦-೬-೦ ೨. ಶಾಸ್ತ್ರೀವಿಷಯ ೦-೬-೦
೧. ಸಚಿತ್ರ ಆರೋಗ್ಯ ೨. ಸಾ. ವಿಜ್ಞಾನ
ಶಾಸ್ತ್ರ ೦-೧೨-೦ ಸಾರ ೦-೫-೦


ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಬಗೆಯ ಹಿಂದೀ ಇಂಗ್ಲೀಷ ಕನ್ನಡ ಬುಕ್ಕುಗಳೂ ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಆಕಳವಾಡಿ ಬುಕ್ಕಡಿಪೋ ವಿಜಯ ರೋಡ ಧಾರವಾಡ

ದೀಪಾವಳಿಯಲ್ಲಿ ಅಭ್ಯಂಗಸ್ನಾನಕ್ಕಾಗಿ

ಕೀಳ್ತರಗತಿಯ ಸಾಬೂನನ್ನು ಉಪಯೋಗಿಸದೆ ನಿಮ್ಮ ಚರ್ಮಕ್ಕೆ ಕಾಂತಿಯನ್ನೀಯುವ ಹಾಗೂ ಸೌಮ್ಯ ಸುಗಂಧವುಳ್ಳ ಕೆಳಗೆ ಕಾಣಿಸಿದವುಗಳಲ್ಲಿ ನಿಮಗೆ ಬೇಕಾದ್ದನ್ನು ತಕ್ಕೊಳ್ಳಿರಿ—

ಕಾಮಿನಿಯಾಸ್ಯಾಂಡಲ್ (ರಜಿ.)
ಕಾಮಿನಿಯಾ ವ್ಹಾಯಿಟ ರೋಜ (ರಜಿ.)
ಕಾಮಿನಿಯಾಲವ್ಹೆಂಡರ (ರಜಿ.)
ಕಾಮನಿಯಾ ಖಸ (ರಜಿ.)
ದಿಲಬಹಾರ ಸೋಪ (ರಜಿ.)




ಉಪಯೋಗಕ್ಕೆ ಉತ್ತಮವಾದದ್ದು. ಹಾಗೂ ಒಳ್ಳೇ ಬುರುಗು ಬರುವಂಥವು ಮತ್ತು ಮನಸ್ಸಿಗೆ ಸಮಾಧಾನ ಕೊಡತಕ್ಕವು.

ಎಲ್ಲ ಕಡೆಗೂ ಸಿಗುವವು.

ಆ್ಯಂಗ್ಲೋ ಇಂಡಿಯನ್ ಡ್ರಗ್ ಮತ್ತು ಕೆ. ಕಂ.
ಮುಂಬಯಿ ೨.

ಇಬ್ಬರು ಕಲಾವಿದರು

ಈ ಸಲದ ನಮ್ಮ ಮುಖಪತ್ರದ ಮೇಲಿನ ಚಿತ್ರದ ಸೌಂದರ್ಯ ಓದುಗರನ್ನು ಮೋಹಿಸದೆ ಇರಲಾರದು. ಈ ಚಿತ್ರವನ್ನು ಬರೆದವರಾರು ? ಎಂಬ ಕುತೂಹಲವೂ ಅವರನ್ನು ಕೆರಳಿಸಿರಬಹುದು. ಅವರೂ ಕನ್ನಡಿಗರೇ, ಎಂದು ಕೇಳಿ ಹೆಮ್ಮೆಯೂ ಆನಂದವೂ ಆಗದಿರದು.



ಶ್ರೀ. ಎಂ. ವಿ. ಮಿಣಜಗಿ, ಎ. ಎಂ. ಜಿ. ಡಿ. (ಆರ್ಟ), ಎ. ಆರ್.ಸಿ.ಎ. (ಲಂಡನ್) ಇವರು ವಿಲಾಯತಿಯಲ್ಲಿ ಚಿತ್ರಕಲೆಯನ್ನಭ್ಯಸಿಸಿ ಉತ್ತಮ ವರ್ಗದಲ್ಲಿ ಉತ್ತೀರ್ಣರಾಗಿ ಬಂದವರಾದರೂ ನಿರಾಡಂಬರ, ನಿರಹಂಕಾರ, ಸರಳ ಮನುಷ್ಯರು. ಹುಬ್ಬಳ್ಳಿಯ ಸರಾಫ ಗಟ್ಟಿಯಲ್ಲಿರುವ ಅವರ ಕಲಾಮಂದಿರದಲ್ಲಿ ನೀವು ಪ್ರವೇಶಿಸಿದರೆ ಗೌರವರ್ಣದ ತುಂಬುಮೈಯ ವ್ಯಕ್ತಿಯೊಂದು ನಿಮ್ಮನ್ನು ನಗುಮೊಗದಿಂದ ಸ್ವಾಗತಿಸುವುದು. ಅವರೇ ಶ್ರೀ ಮಿಣಜಗಿ. ಸವಿಯಾದ, ಆದರೂ-ಅಥವಾ ಅದಕ್ಕಾಗಿಯೆ-ಮಿತವಾದ ಮಾತುಗಳಿಂದ ನಿಮ್ಮೊಡನೆ ಅವರು ಸಂಭಾಷಿಸುತ್ತಾರೆ.

ಚಿತ್ರಕಲೆಯಲ್ಲಿ ಮಿಣಜಗಿಯವರು 'ವಾಸ್ತವವಾದಿ'ಗಳು. ಅವರ ಚಿತ್ರಗಳಲ್ಲಿ ಜೀವನಕ್ಕೆ ದೂರವಾಗಿರುವುದು ಕಾಣುವುದಿಲ್ಲ.

ಮುಂಬಯಿಯ ಜೆ. ಜೆ. ಸ್ಕೂಲ ಆಫ್ ಆರ್ಟ ಲಂಡನ್ನಿನ ರಾಯಲ್ ಕಾಲೇಜ ಆಫ್ ಆರ್ಟ್ಸಗಳಲ್ಲಿ ಚಿತ್ರಕಲಾಶಿಕ್ಷಣ ಪಡೆದ ಶ್ರೀ ಮಿಣಜಗಿಯವರು, ರಾಯಲ್ ಕಾಲೇಜಿನ ಅಸೋಸಿಯೇಟ್ ಪದವಿಯನ್ನು ಪಡೆದ ಮೊದಲನೆ ಮುಂಬಯಿಪ್ರಾಂತೀಯರು (೧೯೩೧). ಹೊಸದಿಲ್ಲಿಯ ಸೆಕ್ರೆಟೇರಿಯಟ್ ಭವನದಲ್ಲಿ ಭಿತ್ತಿಚಿತ್ರಗಳನ್ನೂ ದಿ. ಮಾಲವೀಯ, ಸರ್ ವಿಶ್ವೇಶ್ವರಯ್ಯ, ಶ್ರೀ. ಕಂಬಳಿ ಮೊದಲಾದ ಮತ್ತು ಈಚೆಗೆ ಮಹಾತ್ಮ ಗಾಂಧಿ, ನೆಹರು, ಸುಭಾಷ ಬೋಸ್ ಮೊದಲಾದ ಪ್ರಸಿದ್ಧರ ಭಾವಚಿತ್ರಗಳನ್ನೂ ಅನೇಕ ಭಾರತೀಯ ರಾಗ-ರಾಗಿಣಿಗಳ ಚಿತ್ರರೂಪಗಳನ್ನೂ ಬರೆದ ಉತ್ತಮ ಕಲಾವಿದರಿವರು. ಲಂಡನ್ನಿನಲ್ಲಿ ೧೯೩೦-೩೧ರಲ್ಲಿ ಭಾರತ ಭವನ, ಇಂಪೀರಿಯಲ್ ಗ್ಯಾಲರಿ ಮತ್ತು ರಾಯಲ್ ಕಾಲೇಜ ಆಫ್ ಆರ್ಟ್‌ನಲ್ಲಿಯೂ ಭಾರತದಲ್ಲಿ ಮುಂಬಯಿ, ಮದ್ರಾಸ್, ಸಿಮ್ಲಾ ಮೊದಲಾದೆಡೆಗಳಲ್ಲಿ ನಡೆದ ಪ್ರದರ್ಶನಗಳಲ್ಲಿಯೂ ಇವರ ಅನೇಕ ಚಿತ್ರಗಳು ಪ್ರದರ್ಶಿಸಲ್ಪಟ್ಟಿವೆ.

ಶ್ರೀ ಮಿಣಜಗಿಯವರ ಕಲೆಗೆ ಕನ್ನಡಿಗರ ಪ್ರೋತ್ಸಾಹ ಧಾರಾಳವಾಗಿ ದೊರೆಯಲಿ !

'ಶಾಂತಿನಿಕೇತನ'ವನ್ನು ಸ್ಥಾಪಿಸಿ, ನಡೆಸಿ ದಿವಂತಗ ಕವೀಂದ್ರ ರವೀಂದ್ರನಾಥರು ಭಾರತದ ನಾನಾ ಪ್ರಾಂತಗಳಿಂದ ಲಲಿತಕಲಾಭ್ಯಾಸಿಗಳನ್ನು ಆಕರ್ಷಿಸಿ, ಅವರಲ್ಲಿ ಕಲಾಸ್ಫೂರ್ತಿಯನ್ನು ತುಂಬಿಬಿಟ್ಟರು. **ಶ್ರೀ ನಾರಾಯಣ ಸಂಗಮರು** ಶಾಂತಿನಿಕೇತನದಲ್ಲಿ ಕವೀಂದ್ರರ ಸನ್ನಿಧಿಯಲ್ಲಿ ಲಲಿತಕಲೆಗಳ ಅಭ್ಯಾಸ ಮಾಡಿ ವಿಶ್ವಭಾರತಿ ವಿದ್ಯಾಲಯದ ಬಿ. ಎ. ಪದವಿ ಗಳಿಸಿ ಕರ್ನಾಟಕಕ್ಕೆ ಮರಳಿದವರು.



ಈ ಸಂಚಿಕೆಯೊಳಗಡೆ ಕಾಣುವ 'ಪ್ರಣಯ ಕೋಪ'ದ ತ್ರಿವರ್ಣ ಚಿತ್ರ ಅವರ ಕೃತಿ. ಬಾದಾಮಿಯ ಒಂದು ಮೂರ್ತಿಶಿಲ್ಪವನ್ನನುಸರಿಸಿ ಇದನ್ನವರು ರಚಿಸಿದ್ದರೂ ಅದರಲ್ಲಿರುವ ವರ್ಣಮೇಲ, ರೇಖಾವಿನ್ಯಾಸ ಇವು ಶ್ರೀ ಸಂಗಮರದೇ ಕೌಶಲ. ಶಾಂತಿನಿಕೇತನದ ಚಿತ್ರಕಲಾನಿಪುಣ ಶ್ರೀ ನಂದಲಾಲ ವಸುಗಳ ಕೈಯಲ್ಲಿ ಪಳಗಿದ ಶ್ರೀ ಸಂಗಮರು, ಶ್ರೀ ವಸುಗಳು ಎತ್ತಿಹಿಡಿದ ಭಾರತೀಯ ಆದರ್ಶವಾದಿ ಪರಂಪರೆಯ ಅನುಯಾಯಿಗಳು. ಇಲ್ಲಿ ಮುದ್ರಿತವಾಗಿರುವ ರೇಖಾ ಚಿತ್ರ, ಶ್ರೀ ಸಂಗಮರನ್ನು ಅವರ ಗುರುಗಳು ಪೆನ್ಸಿಲಿನಿಂದ ಬರಿ ಒಂದು ಕಾರ್ಡಿನ ತುಣುಕಿನಲ್ಲಿ ಕೆಲವೇ ಗೆರೆಗಳಿಂದ ಪ್ರತಿಬಿಂಬಿಸಿದ್ದು.

ಶ್ರೀ ಸಂಗಮರದು ನಾನಾ ಕಲಾವಿಧಗಳಲ್ಲಿ ಪಳಗಿದ ಕೈ. ಅವರು ಗುರುದೇವ ಠಾಕೂರರ ಅನೇಕ ಕವಿತೆಗಳನ್ನೂ ಇತರರ ಹಲ ಕೃತಿಗಳನ್ನೂ ಕನ್ನಡಕ್ಕೆ ಅನುವಾದಿಸಿರುವರಲ್ಲದೆ ಸ್ವತಂತ್ರ ಕೃತಿಗಳನ್ನೂ ರಚಿಸಿದ್ದಾರೆ. ರಟ್ಟಿನ ಕೆಲಸ, ಟೆಕ್ಸ್‌ಟೈಲ್ ಡಿಜೈನ್ ಮೊದಲಾದ ಇನ್ನೂ ಅನೇಕ ಉಪಯುಕ್ತ ಕಲೆಗಳೂ ಶ್ರೀ ಸಂಗಮರಿಗೆ ಹಸ್ತಗತವಾಗಿವೆ. ಅವರ ಅನೇಕ ವರ್ಣಚಿತ್ರಗಳು ಹಲವೆಡೆ ಪ್ರದರ್ಶಿಸಲ್ಪಟ್ಟಿದ್ದು ಸಿಂಹಳದಲ್ಲಿ ನಡೆದ ಒಂದು ಪ್ರದರ್ಶನದಲ್ಲಿ ಕಲಾವಿಮರ್ಶಕರಿಂದ ತುಂಬ ಪ್ರಶಂಸೆಗೆ ಪಾತ್ರವಾಗಿದ್ದವು. ಶ್ರೀ. ಸಂಗಮರು ಕೆಲಕಾಲ ನಮ್ಮ ಸಂಪಾದಕಮಂಡಲದಲ್ಲೂ ದುಡಿದವರು.

ಶ್ರೀ ಸಂಗಮರು ಈಚೆಗೆ ವಿಶೇಷವಾಗಿ ಚಿತ್ರಗಳನ್ನು ಬರೆಯುತ್ತಿಲ್ಲ. ಕರ್ನಾಟಕದಲ್ಲಿ ಲಲಿತಕಲೆಗಳಿಗಿರುವ ಪುರಸ್ಕಾರಾಭಾವವೂ ಇದಕ್ಕೊಂದು ಕಾರಣವಾಗಿರಬಹುದು. ಜೀವನಕ್ಕಾಗಿ ಅಧ್ಯಾಪಕ ವೃತ್ತಿಯನ್ನನುಸರಿಸಿರುವ ವಿನಯಸಂಪನ್ನ ಮೃದುಭಾಷಿ ರಸಿಕ ಕಲಾವಿದರಾದ ಇವರು ಪುನಃ ಕುಂಚವನ್ನೆತ್ತಿಕೊಂಡು ಕರ್ನಾಟಕದ ಹೆಸರನ್ನು ಮೆರೆಸಲೆಂದು ಹಾರೈಸೋಣ.



ಶ್ರೀ ಬದರೀಶ ಪಂಚಾಯತನ

ಇದು ನಿಮಗೆ ಗೊತ್ತೆ ?

ಮಳೆ ಬಂದರೂ ಬೆಳೆ ಬರುವದಿಲ್ಲ.

ಅದಕ್ಕೆ ವಿಶಿಷ್ಟ ತರದ

ಗೊಬ್ಬರಗಳು ಬೇಕು.

ನಮ್ಮಲ್ಲಿ

ಭತ್ತ, ಗೋದಿ, ಜೋಳ, ಹತ್ತಿ, ಕಬ್ಬು, ಕಾಫಿ, ದ್ರಾಕ್ಷಿ, ಬಾಳೆ, ತೆಂಗು ಮುಂತಾದ ಎಲ್ಲ ಬೆಳೆಗಳಿಗೂ ಹಾಗೂ ಹಣ್ಣು ಹಂಪಲಗಳ ತೋಟಕ್ಕೂ ಬೇಕಾಗುವ, ಶಾಸ್ತ್ರೀಯ ರೀತಿಯಲ್ಲಿ ತಯಾರಿಸಿದ ಎಲ್ಲ ತರದ ಗೊಬ್ಬರಗಳು ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ಕೂಡಲೆ ವಿಚಾರಿಸಿರಿ:

ದಿ ಡೆಕ್ಕನ್ ಫರ್ಟಿಲಾಯಝರ್ಸ

ಅ್ಯಂಡ

ಇಂಡಸ್ಟ್ರೀಜ ಲಿಮಿಟೆಡ್

ಕೊಪ್ಪೀಕರ ರೋಡ .... ಹುಬ್ಬಳ್ಳಿ

ಲೇಖಕರು:
ಶ್ರೀ ಕೋಟ ಶಿವರಾಮ ಕಾರಂತರು

ನಮ್ಮ ಜಾನಪದ ಕಲೆಗಳು ಮತ್ತು ಅವುಗಳ ರಕ್ಷಣೆ



ರಾಜಾಶ್ರಯದಲ್ಲಿ ಮಾರ್ಗಕಲೆಗಳು ಬೆಳೆದರೆ ಜನಾಶ್ರಯದಲ್ಲೇ ದೇಸಿ ಅಥವಾ ಜಾನಪದ ಕಲೆಗಳು ಬೆಳೆಯುತ್ತವೆ. ಆದರೆ ಜನ-ಜೀವನದಲ್ಲಿ ಹಾಸುಹೊಕ್ಕಾಗಿರುವುದು ಜಾನಪದ ಕಲೆಯೇ; ಮಾರ್ಗಕ್ಕೂ ಅದೇ ಜನ್ಮದಾತ. ಅದರ ರಕ್ಷಣೆಯಾಗದಿದ್ದರೆ ಮಾರ್ಗ ಅಥವಾ ಶಾಸ್ತ್ರೀಯ ಕಲೆಗೆ ಬೇರಿಲ್ಲದಂತಾಗುತ್ತದೆ; ಅದರ ಕೃತಕತೆ ಪರಿಪೂರ್ಣವಾಗುತ್ತದೆ. ಆದ್ದರಿಂದ ಜಾನಪದ ಕಲೆಗಳು ಬಾಳಬೇಕು. ಆದರೆ ಅವು ಬಾಳಬೇಕಾದರೆ ಬರಿ ಬಾಯ್ಮಾತಿನ ಬೆಂಬಲ ಸಾಲದು-ಅದರ ಸ್ವರೂಪವನ್ನರಿತು ದುಡಿಯಬೇಕು.

ಜೀವನದ ಪ್ರತಿಯೊಂದು ಬಗೆಯಲ್ಲೂ ನಮ್ಮ ಬದುಕಿಗೆ ನೆರವಾಗುವ ಸವಿ ಸೊಗಸುಗಳನ್ನು ನಾವು ಉಳಿಸಿಕೊಳ್ಳಬೇಕು, ಕಾಯಬೇಕು, ಬೆಳಸಿಕೊಂಡು ಹೋಗಬೇಕು ಎಂಬ ಬಯಕೆ ಇದ್ದೇ ಇರುತ್ತದೆ. ಸಂಪತ್ತನ್ನು ಕಾಯುವಷ್ಟೆ, ಸ್ವಾತಂತ್ರ್ಯವನ್ನು ಕಾಯುವಷ್ಟೆ ಪರಿಶ್ರಮದ ಕೆಲಸ ಇದು. ದೇಶದ ಹಿರಿಮೆ, ಸುಖಗಳು ಅದರ ಆರ್ಥಿಕ ಮತ್ತು ರಾಜಕೀಯ ಜೀವನಗಳನ್ನು ಹೊಂದಿಕೊಂಡಷ್ಟೆ ಧಾರ್ಮಿಕ ಮತ್ತು ಕಲಾಮಯ ಜೀವನಗಳನ್ನು ಹೊಂದಿಕೊಂಡಿವೆ. ಸಾಮಾನ್ಯವಾಗಿ—ಸರಕಾರಗಳಿಗೆ, ಅದೂ ಬಡತನ, ಯುದ್ಧಗಳನ್ನು ಇದಿರಿಸುತ್ತಿರುವ ಸರಕಾರಗಳಿಗೆ, ಕೊನೆಯ ಎರಡು ಪ್ರಶ್ನೆಗಳು ಮಹತ್ವದ್ದಾಗಿ ಕಾಣಿಸದೆ ಇರುವದುಂಟು. ನಮ್ಮದು ಲೌಕಿಕ ಸರಕಾರವಾದುದರಿಂದ, ಧಾರ್ಮಿಕ ವಿಚಾರಗಳಲ್ಲಿ ಅದು ಕೈಹಾಕುವಂತಿಲ್ಲ. ಹಾಗಿರುತ್ತ ಕಲೆಗಳ ಪಾಡೇನು?—ಎಂಬ ಪ್ರಶ್ನೆಯು ಬರುತ್ತದೆ. ಅನುಕೂಲ ವಾತಾವರಣವಿದ್ದಲ್ಲಿ, ವ್ಯಕ್ತಿಸ್ವಾತಂತ್ರ್ಯವಿದ್ದಲ್ಲಿ, ಕಲಾವಿದರು ತಮ್ಮ ಕೆಲಸ ಸಾಗಿಸಿಕೊಂಡು ಹೋಗುತ್ತಾರೆ. ಅವುಗಳ ವರ್ಚಸ್ಸು ಜನಜೀವನದ ಮೇಲೆ ಬೀಳುತ್ತದೆ. ಕಲಾವಿದ ತೇಜಸ್ವಿಯೂ ಪ್ರತಿಭಾಶಾಲಿಯೂ ಆಗಿದ್ದರೆ, ಕಾಲದ ಪ್ರತಿಭಟನೆಯನ್ನು ಸಹ ತಡೆದು, ಜಡ ಆವರಣವನ್ನು ಸಹ ಗೆದ್ದು ಬಾಳಿ ಬದುಕುವುದುಂಟು. ಸಾಕಷ್ಟು ಜನರ ಪ್ರೇರಣೆ, ಪ್ರೋತ್ಸಾಹಗಳಿಲ್ಲದೆಯೂ ಆತ ತನ್ನ ಕೆಲಸ ಸಾಗಿಸಿಕೊಂಡು ಹೋಗುವುದುಂಟು. ಕಾಲ ಆ ಮೇಲೆ ಅವನನ್ನು ಗುರುತಿಸುತ್ತದೆ, ಮನ್ನಿಸುತ್ತದೆ. ಆದರೆ ಅದೇ ಮಾತನ್ನು ಜಾನಪದ ಕಲೆಗಳ ವಿಚಾರದಲ್ಲಿ ಹೇಳಲು ಬರುವಂತಿಲ್ಲ. ಇಲ್ಲಿ ವ್ಯಕ್ತಿವೈಶಿಷ್ಟ್ಯ, ಪ್ರಭಾವಗಳು ಬಲವಾಗಿರುವುದಿಲ್ಲ. ಇದು ಜನಸಾಮಾನ್ಯರ ಮಾತಾದುದರಿಂದ ಅವರ ಕಲೆಗಳು ಬದುಕಿ ಉಳಿಯುವುದಕ್ಕೆ ಒಟ್ಟು ಜನತೆಯ ಬೆಂಬಲ ಬೇಕೇಬೇಕಾಗುತ್ತದೆ. ಒಟ್ಟು ಜನತೆಯಲ್ಲೇ ಆ ಲಾಲಸೆ ಇರಬೇಕಾಗುತ್ತದೆ. ಅದಿಲ್ಲದೇ ಹೋದರೆ ಅವರಲ್ಲಿ ಪರಂಪರೆಯಿಂದ ಬಂದಿರುವ ಸಂಗೀತ, ಚಿತ್ರ, ನೃತ್ಯ, ನಾಟಕ ಮೊದಲಾದುವುಗಳೆಲ್ಲ ಅಳಿದು ಹೋಗುತ್ತವೆ. ಇವುಗಳನ್ನು ಕೆಲವೊಂದು ಗುಂಪಾಗಲಿ, ಕೆಲವೊಂದು ಜನರಾಗಲಿ ಪ್ರತ್ಯಕ್ಷವಾಗಿ ತಡೆದು ಹಿಡಿಯತ್ತಾರೆಂದಲ್ಲ. ಪರೋಕ್ಷವಾದ ಔದಾಸೀನ್ಯ ಆ ಕೆಲಸ ಮಾಡುತ್ತದೆ. ಇಲ್ಲದೆ ಹೋದರೆ ಜನರ ಒಲವು ವಿದೇಶಿಯವಾದ ಚಿತ್ರ, ನೃತ್ಯ, ನಾಟಕ, ಗೀತ ಮೊದಲಾದವುಗಳಿಗೆ ಮನತೆತ್ತಲ್ಲಿ ದೇಶೀಯ ಕಲೆಗಳು ತನ್ನಂತೆ ಮೂಲೆಗುಂಪಾಗುತ್ತವೆ.

ಅದರಿಂದೇನು ನಷ್ಟ? ಕೆಲವೊಂದು ಕಲೆಗಳು ಹೋದರೆ ಬೇರೆ ಕೆಲವು ಬರುತ್ತವಲ್ಲ? - ಎನ್ನಬಹುದು ನೀವು. ದೇಶೀಯ ಮತ್ತು ವಿದೇಶೀಯವೆಂಬ ಆವರಣದ ಮೇರೆಯನ್ನು ಕಲೆಯ ರಾಜ್ಯಕ್ಕೆ ಹಾಕಬೇಕೇಕೆ?-ಎಂದೂ ವಾದಿಸುವ ಜನಗಳು ಇದ್ದಾರೆ. ಕಲೆ, ಸಂಸ್ಕೃತಿಗೆ ಸಂಬಂಧಿಸಿದ ಮಾತು. ಅದು ಕೃತಕ ಆವರಣದಲ್ಲಿ ಬದುಕಲಾರದು. 'ಸಂಸ್ಕೃತಿ' ಎಂಬುದು ಪರಂಪರೆಯಿಂದ ಬೆಳೆಯುವ ಜೀವನದ ಬಗೆಯಾದುದರಿಂದ, ಕಾಲದೇಶಗಳ ಕಟ್ಟುನಿಟ್ಟು ಅದಕ್ಕೆ ಬಂದೇ ಬರುತ್ತದೆ. ಅದು ತನ್ನ ಆವರಣದಲ್ಲಿ ದೀರ್ಘ ಅವಧಿಯಲ್ಲಿ ಬೆಳೆದು ರೂಪುಗೊಳ್ಳಬೇಕಾದ ವಸ್ತು. ಆ ಆವರಣವೇ ಅದಕ್ಕೆ ಉಸಿರು, ನೀರು. ಅದು ಬೆಳೆದು ಜೀವನಕ್ಕೆ ಉಪಯೋಗಕಾರಿಯಾಗಲು ಅದು ದೇಶೀಯವೆನಿಸುವಷ್ಟು ನಮ್ಮದೇ ಆಗಿರ

ಬೇಕಾಗುತ್ತದೆ; ನಮ್ಮ ಜೀವನವನ್ನು ಹೊಂದಿಕೊಂಡು ಹುಟ್ಟಿದ್ದೂ ಬೆಳೆದದ್ದೂ ಆಗಿರಬೇಕಾಗುತ್ತದೆ. ಜೀವನ ಹೊರಗಿನ ಪ್ರಭಾವಗಳಿಗೆ ಗುರಿಯಾಗುವಂತೆ, ಜಾನಪದ ಕಲೆಗಳೂ ಗುರಿಯಾಗುತ್ತವೆ. ಆದರೂ ಹೊರಗಿನ ಸೆಳೆವುಗಳ ಪ್ರಭಾವ ಅವುಗಳ ಮೇಲೆ ಉಂಟಾಗಲು ದೀರ್ಘಕಾಲ ಹಿಡಿಯುತ್ತದೆ. ಜನ, ಆ ಪ್ರಭಾವವನ್ನು ತಮ್ಮದಾಗಿ ಮಾಡಿಕೊಂಡು ಬದುಕತೊಡಗಿ ಅದು ಅವರ ಸಂಪ್ರದಾಯದ ಒಂದು ಅಂಗವಾದ ಮೇಲೆ, 'ವಿದೇಶೀಯ'ವೆಂಬ ಹೆಸರನ್ನು ಕಳೆದುಕೊಳ್ಳುತ್ತದೆ. ದೇಶೀಯ ಕಲೆಗಳು, ಅನ್ನುವಾಗ ಈ ಅರ್ಥದಿಂದಲೇ ನಾವು ಕಾಣಬೇಕಾಗುತ್ತದೆ.

ಜನಜೀವನದಲ್ಲಿ ಇಂದು ನಮ್ಮ ಪಾಲಿಗೆ ಉಳಿದಿರುವ ಕಲೆಗಳು ಹಲವಿವೆ. ನಮ್ಮ ಕರ್ಣಾಟಕದ ಒಂದೇ ಕ್ಷೇತ್ರವನ್ನು ಉದಾಹರಿಸಹೋದರೂ ಇಲ್ಲಿನ ಜನರ ಬಾಳಿಗೆ ಸೊಗಸನ್ನು ಕೊಡುತ್ತಿರುವ ಹಲವಾರು ಕಲೆಗಳನ್ನು ಹೆಸರಿಸಬಹುದು. 'ಜನಪದ' 'ಜನಜೀವನ' ಎನ್ನುವುದನ್ನು ನಾವು ಬಹು ಮಂದಿಯ ಬಾಳಿಗೆ ಸಂಬಂಧಿಸಿದ ವಿಚಾರದಲ್ಲಿ ಅನ್ನುತ್ತೇವೆ. ಬಹು ಮಂದಿಯ ಸಂತೋಷ, ಸುಖದುಃಖಗಳು—ಅವುಗಳ ಆಳತೆ, ತೂಕ, ಸೂಕ್ಷ್ಮತೆ ಏನೇ ಇರಲಿ–ಅವನ್ನು ಹೇಳುವ, ಪ್ರಕಟಿಸುವ ಸಾಧನಗಳು ಜಾನಪದ ಕಲೆಗಳೆನಿಸುತ್ತವೆ. ಒಬ್ಬೊಬ್ಬರೇ ಸೇರಿ ಬಹುಮಂದಿ ಆಗುತ್ತಾರೆ. ಆ ಒಬ್ಬೊಬ್ಬ ಅಸಾಧಾರಣ ಮೇಧಾವಿಯೋ, ಇಲ್ಲವೆ ಪ್ರತಿಭಾವಂತನೋ ಆಗಿರದೆಹೋದರೂ ಸಾಮಾನ್ಯ ವ್ಯಕ್ತಿಯಿಂದಲೂ ಸಾಮಾನ್ಯ ಜೀವನದ ಸುಖ ಸೊಗಸುಗಳು ಉಳಿಯುತ್ತವೆ. ನಮ್ಮಲ್ಲಿನ ಬಯಲಾಟಗಳನ್ನು, ಜಾನಪದ ಕುಣಿತಗಳನ್ನು, ಲಾವಣಿ ಹಾಡುಗಳನ್ನು ನಾವು ಆನ್ಯರ ಗೀತ ನೃತ್ಯಗಳ ಒಡನಾಗಲಿ, ನಮ್ಮಲ್ಲಿಯೇ ಬೆಳೆದುಬಂದ ಮಾರ್ಗಪದ್ಧತಿಯ ವಿವಿಧ ಕಲೆಗಳೊಡನಾಗಲಿ, ಹೋಲಿಸಬೇಕಾದ ಕಾರಣವಿಲ್ಲ. ಅವುಗಳ ಮಟ್ಟವೇ ಬೇರೆ, ಇವುಗಳ ಮಟ್ಟವೇ ಬೇರೆ. ಮಾರ್ಗ ಶೈಲಿಗಳನ್ನು ಮೆಚ್ಚುವವರು, ತಿಳಿಯುವವರು, ಅದರಿಂದ ಆನಂದಿಸುವವರು ಸಂಖ್ಯೆಯಲ್ಲಿ ಕಡಿಮೆ; ಜಾನಪದ ಶೈಲಿಗಳ ಪರಿಚಯ ಬಹುಜನಕ್ಕಿರುವಂಥದು. ಹೀಗೆ ಇರಲು, ಆ ಶೈಲಿಗಳು ಸುಲಭವೂ ಸರಳವೂ ಮೂಲಭೂತ ಶಕ್ತಿಯುಳ್ಳವೂ ಆಗಿರುವುದೇ ಕಾರಣ. ಮಾರ್ಗಸಂಪ್ರದಾಯಗಳಲ್ಲಿ ಕ್ಲಿಷ್ಟವಾದ ಶಾಸ್ತ್ರ ಬೆಳೆದುಕೊಂಡು ಬಂದಿದೆ. ಸಾಲದುದಕ್ಕೆ ಶಾಸ್ತ್ರವನ್ನೇ ಕಲೆಯನ್ನಾಗಿ ತಿಳಿಯುವ ರೂಢಿಯೂ ನಮ್ಮ ದೇಶದಲ್ಲಿ ಹೆಚ್ಚುತ್ತಿದೆ. ಹಾಗಿಲ್ಲದೆ ಹೋದರೂ ಸಾಕಷ್ಟು ಶಾಸ್ತ್ರಪರಿಚಯವಿಲ್ಲದ ವ್ಯಕ್ತಿ, ಅಂಥ ಕಲೆಗಳನ್ನು ತಿಳಿಯಲಾರ. ಆದುದರಿಂದ ಜನಪದಕ್ಕೆ ಅದು ದೂರವಾಗಿರುವ ಬದುಕು. ಜನಪದದ ಮನಸ್ಸಿನ ಮಟ್ಟ ಕಡಿಮೆಯದು–ಎಂದು ನಾವು ಅನ್ನಬಹುದಾದರೂ ಆ ಮನಸ್ಸಿಗೆ ತನ್ನದಾದ ಸುಖದುಃಖಗಳನ್ನು ಅನುಭವಿಸುವ ಮತ್ತು ವ್ಯಕ್ತಮಾಡುವ ಹಕ್ಕೂ ಬೇಕು, ಸಾಧನವೂ ಬೇಕು, ಅನುಕೂಲತೆಗಳೂ ಬೇಕು.

ಇಂಥ ಹಕ್ಕು, ಅನುಕೂಲತೆಗಳನ್ನು ಕಿತ್ತೆಸೆಯುವವರಾರು? ಎಂಬ ಮಾತು ಬರುತ್ತದೆ. ಪ್ರತ್ಯಕ್ಷವಾಗಿ ಯಾರೂ ಆ ಕೆಲಸ ಮಾಡುತ್ತಲಿಲ್ಲ. ಆದರೆ ಎಲ್ಲಿ ಎಲ್ಲಿ ಕಲಾವಿದರ ಗುಂಪು ಬೇರೆ ಬೇರೆಯಾಗಿ ತಮ್ಮ ಪ್ರತಿಷ್ಠೆ ಕಾಯ್ದುಕೊಳ್ಳುವ ಸಲುವಾಗಿ, ಕೃತಕ ಇಲ್ಲವೆ ಮಿತ ಆವರಣವನ್ನು ಕಲ್ಪಿಸಿಕೊಂಡು, ಮೆಚ್ಚುಗೆಯ ಕ್ಷೇತ್ರ ನಿರ್ಮಿಸಲು ಹೊರಡುತ್ತದೋ, ಅಲ್ಲಿ ಅಲ್ಲಿ ಈ ಕೆಲಸ ನಡೆದೇ ನಡೆಯುತ್ತದೆ. ಸಾಹಿತ್ಯದ ಪಾಡು ಹೀಗಾಯಿತು. ಅರಮನೆಗಳ ಆವರಣದಲ್ಲಿ, ಪಾಂಡಿತ್ಯದ ಕ್ಷೇತ್ರಗಳಲ್ಲಿ ಕೃತಕವಾಗಿ ಬೆಳೆದ ಉದ್ಯಾನದ ಗಿಡಗಳಂತೆ ಅವು ಬೇರೆಯೇ ಒಂದು ಜಾತಿ ಎನಿಸಿಕೊಂಡಿವೆ. ಸಂಗೀತವೂ ಹಾಗಾಯಿತು. ನೃತ್ಯವೂ ಹಾಗಾಗಿದೆ. ಅವುಗಳಲ್ಲಿ ದಿನದಿನ ಬೆಳೆಯುತ್ತಿರುವ ಶಾಸ್ತ್ರಸಾಧನಗಳು ಜನಜೀವನದ ಬದುಕಿನಿಂದ ದೂರವಾಗಿ ಬಂದಿವೆ. ಎಷ್ಟೋ ಶತಮಾನಗಳಿಂದ ನಮ್ಮ ದೇಶದಲ್ಲಿ ಪಂಡಿತ ಪಾಮರರಲ್ಲಿ ಅಂತರವನ್ನು ಹೆಚ್ಚಿಸುವ ಪ್ರಯತ್ನ ನಡೆದಿದೆ, ಹೊರತು ಕಡಿಮೆ ಮಾಡುವ ಪ್ರಯತ್ನವಿಲ್ಲ. (ಅಂದರೆ ಪಂಡಿತರನ್ನು ಪಾಮರರ ಮಟ್ಟಕ್ಕೆ ತಗ್ಗಿಸುವುದೆಂದಲ್ಲ). ಅಂತೆಯೇ ಮಾರ್ಗ ಮತ್ತು ದೇಸೀ ಪದ್ಧತಿಗಳ ನಡುವಣ ದೂರವು ಹೆಚ್ಚಿತು. ರಾಜರ, ಶ್ರೀಮಂತರ ಪ್ರತ್ಯಕ್ಷ ಪ್ರೋತ್ಸಾಹಗಳಿಂದ 'ಮಾರ್ಗ' ಪದ್ಧತಿಯೇ ಪದ್ಧತಿ, ಅದೇ ಕಲೆ, ಹೊರತು ಜಾನಪದ ಕಲೆಗಳು ಕಲೆಗಳಲ್ಲ ಎನಿಸಿವೆ. ದೇಸಿ ಸಾಹಿತ್ಯ, ದೇಸಿ ನೃತ್ಯ, ದೇಸಿ ಗೀತ ತುಚ್ಛೀಕಾರಕ್ಕೂ ಗುರಿಯಾದುವು. ಜನರ ಸ್ವಭಾವ, ತಿಳಿದು ಅನುಕರಿಸುವುದಕ್ಕಿಂತ ತಿಳಿಯದೆ ಅನುಕರಿಸುವುದೇ ಹೆಚ್ಚು. ರಾಜರ ಮನ್ನಣೆ ಯಾವುದಕ್ಕೆ ದೊರೆಯುತ್ತದೋ ಅದು 'ಹಿರಿದು'– ಎಂಬ ಭಾವನೆ ತಿಳಿಯದ ಜನಕ್ಕೆ ಉಂಟಾಗುತ್ತದೆ. ತಮಗೆ ತಿಳಿಯದೆ ಹೋದರೂ ಆ ಬಗೆಯ ಕಲೆಗಳನ್ನು ಅವರೂ ಪ್ರೋತ್ಸಾಹಿಸುತ್ತಾರೆ, ತಿಳಿದವರಂತೆ ನಟಿಸುತ್ತಾರೆ. ತಮ್ಮದನ್ನು, ತಿಳಿಯಬಹುದಾದದ್ದನ್ನು, ತಮ್ಮ ಜೀವನಕ್ಕೆ ಇನ್ನೂ ಹೆಚ್ಚು ನೆರವಾಗಬಹುದಾದದ್ದನ್ನು 'ಕಡಿಮೆ' ಎಂದು ತಿಳಿಯತೊಡಗುತ್ತಾರೆ. ಅದರ ಪ್ರತಿಫಲ 'ಇತೋ ಭ್ರಷ್ಟಸ್ತತೋ ಭ್ರಷ್ಟಃ'– ಇಂದಿನ ಜಾನಪದ ಕಲೆಗಳು ಈ ಸ್ಥಿತಿಯಲ್ಲಿವೆ.

ಇಂದಿನ ಜನಗಳಲ್ಲಿ ವಿದ್ಯೆ ಹೆಚ್ಚಲಿ, ಹೆಚ್ಚದಿರಲಿ, ಓದುಬರಹ ಹೆಚ್ಚುತ್ತಿದೆ. ಓದು ಬರಹವೇ ವಿದ್ಯೆ– ಎಂಬ ಭ್ರಮೆ ಉಂಟಾಗಿದೆ. ತಿಳಿವಳಿಕೆ ಹೆಚ್ಚಿಸಿಕೊಳ್ಳುವುದಕ್ಕೆ, ಜೀವನದ ಅರಿವು ಪಡೆಯುವುದಕ್ಕೆ ನೆರವಾಗುವ, ಸಾಧನವಾಗುವ ಬದಲು ವಿದ್ಯೆ–ಜೀವನದ ದಾರಿ ಅಂದರೆ, ಹೊಟ್ಟೆಯ ಪಾಡಿನ ದಾರಿ ತೋರಿಸುವ ಸಾಧನವಾಗಿದೆ. ಆದುದರಿಂದ ವಿದ್ಯಾವಂತರೆನಿಸುವವರು ತಾವು ಬಲ್ಲವರೆಂಬ ಸೋಗು ಹಾಕಿಕೊಂಡರೂ ಕಲೆಗಳಿಗೂ ಜೀವನಕ್ಕೂ ಇರುವ ನಿಕಟ ಸಂಬಂಧವನ್ನು ಅರಿತವರಾಗಿಲ್ಲ. ಅರಿಯುವ ಆವಶ್ಯಕತೆಯೂ ಅವರಿಗೆ ಕಾಣಿಸುತ್ತಲಿಲ್ಲ. 'Arts College'ಗಳಲ್ಲಿ ಪರೀಕ್ಷೆ ಪಡೆದು ಹೊರಬೀಳುವ ನೂರು ವಿದ್ಯಾರ್ಥಿಗಳಲ್ಲಿ ಒಬ್ಬನಿಗಾದರೂ ಕಲೆ, ಸಾಹಿತ್ಯ ಎಂಬುದು ತಿಳಿದಿದೆಯೋ ಇಲ್ಲವೋ! ಆತ ತಾನೇ ಕಲಾವಿದನಾಗುವ ಪ್ರಯತ್ನ ಮಾಡಲಾರ; ಇತ್ತ ಕಲೆಯ ಕೃತಿಗಳನ್ನು ತಿಳಿಯುವಷ್ಟು ಜ್ಞಾನವೂ ಅವನಿಗೆ ಉಂಟಾಗುತ್ತಿದೆ ಎಂಬ ಧೈರ್ಯ ನನಗಿಲ್ಲ. ಇಂಥವರ ಬಾಳಿನಲ್ಲಿ ಮಾರ್ಗ, ಸಾಂಪ್ರದಾಯಿಕ ಕಲೆಗಳು ಉಳಿಯುವುದು, ಬೆಳೆಯುವದು ಅಷ್ಟರಲ್ಲೇ ಇದೆ. ಆದರೆ ಇಂಥ ಜನರ ಸಂಖ್ಯೆ ಬೆಳೆಯುತ್ತಿರುವಲ್ಲಿ, ಅವರನ್ನು ತಮ್ಮ ಆದರ್ಶವಾಗಿರಿಸಿಕೊಳ್ಳುವ ಜನಸಾಮಾನ್ಯರು ಮಾತ್ರ, ತಮ್ಮ ಕಲೆಗಳನ್ನು ಅನಾದರಿಸುವ ಸ್ಥಿತಿ ಬಂದೊದಗುತ್ತದೆ. ಓದು ಬರಹ ತಿಳಿದ ವ್ಯಕ್ತಿ ಜಾನಪದ ಗೀತಕ್ಕೆ ಮುಖ ತಿರುಗಿಸಿ, ಸಿನೆಮಾ ಸಂಗೀತ ಕಿರಿಚುತ್ತಾನೆ. ತಮ್ಮ ಹಿರಿಯರು ಕುಣಿಯುವ ಗುಂಪಿನ

ನೃತ್ಯಗಳಲ್ಲಿ ಓದು ಬಲ್ಲವ ಭಾಗಿಯಾಗುವುದು ಗೌರವಕ್ಕೆ ಕಡಿಮೆಯೆಂದು ತಿಳಿಯುತ್ತಾನೆ. ಹಳ್ಳಿಗಳಲ್ಲೂ ಇಂದು ಬಯಲಾಟ, ಪಾರಿಜಾತದ ಆಟ, ತೊಗಲುಗೊಂಬೆ ಆಟ, ಕಿಳ್ಳಿಕೇತನ ಆಟ ಮೊದಲಾದುವು ನಮ್ಮ ಜೀವನದ ಅನಾಗರಿಕ ಭಾಗಗಳು–ಎನಿಸುವಷ್ಟು ತಾತ್ಸಾರವನ್ನು ನಮ್ಮ ವಿದ್ಯಾವಂತ ತೋರಿಸುತ್ತಾನೆ. ಹೀಗಾದುದರಿಂದ, ಹಲವೊಂದು ಜಾನಪದ ಕಲಾವಿದರು ತಮ್ಮ ಉದ್ಯೋಗ ಕಳೆದುಕೊಂಡಿದ್ದಾರೆ. ಉದ್ಯೋಗ ಕಳೆದುಕೊಂಡಂತೆಯೇ ಜಾನಪದ ಕಲೆಗಳಿಂದ ದೊರೆಯುವ ಸುಖವನ್ನೂ ಕಳೆದುಕೊಂಡಿದ್ದಾರೆ. ಇಂದು ಶುದ್ಧ ಯಕ್ಷಗಾನ ಶೈಲಿಯ ಸಂಗೀತ ಕೇಳಲು, ಅರಸಿದರೂ ನಾಲ್ವರು ಹಾಡುಗಾರರು ಸಿಗುವುದು ಕಷ್ಟ. ಪರಂಪರೆಯ ಶೈಲಿಯಿಂದ ವೇಷ ವರ್ಣಿಕೆಗಳನ್ನು ಧರಿಸಿ ಕುಣಿಯಬಲ್ಲ ಯಕ್ಷಗಾನ ನರ್ತಕರೂ ದುರ್ಲಭವಾಗುತ್ತಿದ್ದಾರೆ. ಲಾವಣಿ ಕೇಳುವ ರಸಿಕರೂ ತೊಗಲುಗೊಂಬೆಯ ಆಟ ನೋಡುವ ರಸಿಕರೂ ಅಷ್ಟೇ ವಿರಳವಾಗುತ್ತಿದ್ದಾರೆ. ಮದುವೆ ಮನೆಗಳಲ್ಲಿ ಕೇಳಿಸುತ್ತಿದ್ದ ಜಾನಪದ ಗೀತ ಶೈಲಿ, ಬಹುಮಟ್ಟಿಗೆ ಮಾಯವಾಗಿದೆ. ಈ ಎಲ್ಲ ಕಲೆಗಳು ತುಂಬಿಸಿಕೊಡುತ್ತಿದ್ದ ನಮ್ಮ ಜೀವನದ ಸುಖ ಸಂತಸಗಳನ್ನು ಬೇರಾವ ಬಗೆಯಿಂದ ನಾವು ಪೂರೈಸಿಕೊಡಲು ಶಕ್ತರು? ವರ್ಷಕ್ಕೊಮ್ಮೆ ಹತ್ತೆಂಟು ಹಳ್ಳಿಗಳಿಗೆ ಬಂದು ಹೋಗುವ ಸಂಚಾರಿ ಟಾಕೀ ಮಂದಿರಗಳು ಈ ಕೆಲಸ ಮಾಡಬಲ್ಲುವೇ? ಅಥವಾ ಮೂರೇ ರೂಪಾಯಿಗೆ ದೊರೆಯುವ ಗ್ರಾಮಫೋನ್ ಪ್ಲೇಟು ಈ ಕೆಲಸ ಮಾಡಬಲ್ಲುದೆ? ಇಂದು ವಿದ್ಯಾವಂತರೆನಿಸುವವರ ಆದರಣೆಗೆ ಪಾತ್ರವಾದ ಈ ಸಾಧನಗಳಲ್ಲಿ ಕಲೆಯ ಲಕ್ಷಣಗಳಾದರೂ ಉಳಿದುಕೊಂಡಿದ್ದರೆ, ಆಗ ಹಳೆಯ ಸೀರೆ ಹೋಗಿ ಹೊಸ ಸೀರೆ ಬಂತೆಂಬ ಸಮಾಧಾನವನ್ನಾದರೂ ತಾಳಬಹುದು. ನಿಜಕ್ಕೂ ಕಲೆಯ ಲಕ್ಷಣಗಳನ್ನು ಕಳೆದುಕೊಂಡು ಬೇರಾವುದೋ ಕೃತಕ ಬೆಡಗಿನಿಂದ ಮೆರೆವ ಈ ಸಾಧನಗಳು. ಸೊಳ್ಳೆ ಪರದೆಯೊಂದು ಮೈ ಮುಚ್ಚುವ ಕೆಲಸ ಎಷ್ಟು ಮಾಡುಬಲ್ಲುದೋ ಅಷ್ಟೇ ಅಲ್ಪ ಕೆಲಸವನ್ನು, ಜೀವನ ತುಂಬಿಸುವುದರಲ್ಲಿ ಮಾಡುತ್ತವೆ.

ಜಾನಪದ ಕಲೆಗಳಲ್ಲಿ ಪ್ರಬಲವಾಗಿರತಕ್ಕ ಶಕ್ತಿಗಳು ಸರಳವಾದುವು, ಶಾಸ್ತ್ರವಿಸ್ಮೃತಿ ಇಲ್ಲದವು. ಇಲ್ಲದೇ ಹೋದರೂ ಅಲ್ಲಿನ ನೃತ್ಯ, ಗೀತ, ಸಾಧನಗಳೆಲ್ಲ ತರಂಗಬದ್ಧವಾಗಿ, ನಮ್ಮ ಮೂಲಭೂತ (elemental) ಭಾವಾವೇಶಗಳಿಗೆ ರೂಪುಕೊಟ್ಟು ಪ್ರಕಟಿಸಬಲ್ಲುವು. ಮುಂದೆ ಶಾಸ್ತ್ರ ಎಷ್ಟೇ ಬೆಳೆಯಲಿ, ಆ ಶಾಸ್ತ್ರಗಳು ಈ ಮೂಲಭೂತ ಲಕ್ಷಣಗಳನ್ನು ಕೂಡಿಕೊಳ್ಳದಷ್ಟು ಕಾಲ ತಮ್ಮ ಉದ್ದೇಶ ನಿರ್ವಹಿಸಲಾರವು. ವ್ಯಕ್ತಿಯ ಮನೋಭಾವ ಒಬ್ಬನಿಂದ ಇನ್ನೊಬ್ಬನಿಗೆ ಬೇರೆಯಾಗಿರುತ್ತದೆ, ವೈವಿಧ್ಯ ಉಳ್ಳದ್ದಾಗಿರುತ್ತದೆ ನಿಜ. ಈ ವೈವಿಧ್ಯ ಎಷ್ಟೆಷ್ಟು ಹೆಚ್ಚಾಗಿರುತ್ತದೋ, ಅದನ್ನು ತೋರಿಸುವ ವಿಧಾನವೂ ಅಷ್ಟಷ್ಟು ಭಿನ್ನವಾಗಿಯೂ ಇರಬಹುದಾಗುತ್ತದೆ. ಆದರೆ ಅವನ್ನು ಭಿನ್ನವಾಗಿ ತೋರಿಸಬೇಕೆಂಬ ಉದ್ದೇಶದಿಂದಲೇ ಬೆಳೆಯಿಸಿದವುಗಳಾಗಬಾರದು. ವ್ಯಕ್ತಿಯ ಭಾವ ಪ್ರೇರಣೆಯ ಬಲವಂತದಿಂದ ಅವು ಆ ಭಿನ್ನತೆಯನ್ನು ತಾಳಿದವುಗಳಾಗಿರಬೇಕು. ನಮ್ಮ 'ಮಾರ್ಗ' ಪದ್ಧತಿಯ ಕಲೆಗಳಲ್ಲಿ ಕಾಣುವ 'ಭಿನ್ನತೆ'ಯ ನೂರಾರು ವಿಲಾಸಗಳು ಈ 'ವ್ಯಕ್ತಿಮನಸ್ಸಿನ ಭಿನ್ನ ಭಾವದಿಂದಲೇ ಪ್ರೇರಿತವಾದುವು—ಎನ್ನುವ ಧೈರ್ಯ ನನಗಂತೂ ಇಲ್ಲ. ಅವುಗಳಲ್ಲಿ ಬಹು ಅಂಶ ವೈವಿಧ್ಯ ತೋರುವುದಕ್ಕಾಗಿಯೇ ಹುಟ್ಟಿಸಿದ ಚಮತ್ಕಾರಿಕೆಗಳಾಗಿ ಕಾಣಿಸುತ್ತವೆ. ಚಮತ್ಕಾರ, ಕಲೆಗೆ ಸಂಬಂಧಿಸಿದ ಲಕ್ಷಣವಲ್ಲ. ಗೀತ, ನೃತ್ಯ ವಿಧಾನಗಳು ಮೂಲಭೂತವಾದ ಭಾವಪ್ರದರ್ಶನಶಕ್ತಿಗಳ ಈ ಮೂಲ ಪ್ರೇರಣೆಗಳನ್ನು 'ಮರೆಯಿಸದೆ' ಅವುಗಳ ಅಂಗವಾಗಿಯೇ, ಪೂರಕವಾಗಿಯೇ—ನಿರ್ಮಾಣವಾಗಬೇಕು. ಅಂಥಾ ಕಲಾವಿದನೊಬ್ಬ ಹಾಡಿದಲ್ಲಿ, ಚಿತ್ರ ಬರೆದಲ್ಲಿ ಕುಣಿದಲ್ಲಿ ಅವನು ಕೊಡುವ ಮೂಲ ಪ್ರೇರಣೆಗೆ ಬಹುಜನ ತಲೆದೂಗುತ್ತಾರೆ. ಅವರಲ್ಲಿ ಕೆಲವರು ಅವನ ವ್ಯಕ್ತಿವೈಶಿಷ್ಟ್ಯವನ್ನು ತಿಳಿಯಲು ಅರ್ಹತೆ ಪಡೆಯುತ್ತಾರೆ. ಹೀಗಿರಬೇಕೇ ಹೊರತು ವೈಶಿಷ್ಟ್ಯ ಭಿನ್ನತೆಗಳ ವಿವಿಧ ವಿಲಾಸಗಳಲ್ಲಿ, ಗೀತ, ನೃತ್ಯ ಮೊದಲಾದುವುಗಳು ತಮ್ಮ ಮೂಲ ಪ್ರೇರಕ ಶಕ್ತಿಗಳು ಸಂಪೂರ್ಣ ಮರೆಯಾಗುವಷ್ಟು ಶಾಸ್ತ್ರವಿಲಾಸವನ್ನು ತೋರಿದರೆ, ಆಗ ಅವನ್ನು ಕಲೆಗಳು ಎನ್ನುವದು ಕಷ್ಟವಾಗುತ್ತದೆ. ವ್ಯಕ್ತಿಯ ಮನಸ್ಸು ವಿಸ್ತಾರಗೊಳ್ಳದೆಯೆ ವೈಶಿಷ್ಟ್ಯ ಬೆಳೆದು ಕೆಲಸ ಮಾಡಲಾರದು. ವೈಶಿಷ್ಟ್ಯಗಳನ್ನೇ ಬೆಳೆಯಿಸಿ, ಜಡವಾಗಿ ಅನುಕರಿಸಿದಲ್ಲಿ, ದೊಡ್ಡ ಶಾಸ್ತ್ರಪರಿಚಯ ತೋರಿಸಬಹುದಾದರೂ–ದೊಡ್ಡ ಕಲೆ ತೋರಿಸಲು ಸಾಧ್ಯವಿಲ್ಲ.

ದೊಡ್ಡ ಕಲೆನಿರ್ಮಾಣವಾಗುವುದಕ್ಕೆ ಅದು ಬೇರೂರಿದ ಕ್ಷೇತ್ರವೂ ಹೀರಿ, ಸಂಗ್ರಹಿಸಿ, ಅರಗಿಸಿಕೊಂಡ ಸಾರವೂ ಜಾನಪದದಿಂದಲೇ ಬಂದುವಾಗಿರಬೇಕು. ಪ್ರಭಾವಶಾಲಿಯಾದ ಕಲಾವಿದನಾದರೂ ಅವನ ಜೀವನದ ಪ್ರೇರಣೆ—ಅವನು ಹುಟ್ಟಿ ಬೆಳೆದ ಆವರಣದಿಂದಲೇ ಬರಬೇಕು. ಆ ಪ್ರೇರಣೆ ಸ್ಥೂಲ ರೂಪದಲ್ಲಾದರೂ ಹತ್ತು ಜನರ ಸಂಸಾರದಲ್ಲಿ ಹಾಯ್ದು ಬಂದುದಾಗಿರಬೇಕು. ಬೆಳೆದು ಬಂದ ಕಲೆಗೂ ಬೆಳೆಯದ ಜಾನಪದ ಕಲೆಗೂ ನಾವು 'ಸ್ಥೂಲ', 'ಸೂಕ್ಷ್ಮತೆ'ಗಳಲ್ಲಿ ವ್ಯತ್ಯಾಸ ಕಾಣಬಹುದಾದರೂ ಪರಸ್ಪರ ಹೊಂದಿಕೆಯುಳ್ಳವುಗಳೇ ಅವು.

ಜನಪದದ ಸರಳ ಕಲೆಗಳಲ್ಲಿ ಕೃತಕ ಶೈಲಿಯ ಹಾವಳಿ ಕಡಿಮೆ. ಜನರು ದುಃಖ, ಸಂತೋಷ, ರೌದ್ರಗಳಿಂದ ತುಂಬಿರುವಾಗ ಕುಣಿದರೆ, ಹಾಡಿದರೆ, ಪ್ರೇರಣೆ ಕೊಟ್ಟ ರಸಗಳನ್ನು ಪ್ರದರ್ಶಿಸಲು ಅರಿವಿಲ್ಲದೆಯೇ ಧುಮುಕುತ್ತಾರೆ. ಆಗ ಸಹಜವಾದ ಭಾವನೆಯ ಒತ್ತಡ ಅವರ ಕಲೆಗಳಲ್ಲೂ ಕಾಣುತ್ತದೆ. ನಮ್ಮಲ್ಲಿ ಪ್ರಚಾರದಲ್ಲಿರುವ ಹೊಲೆಯರ ಕುಣಿತ, ಕೋಲಾಟದ ಕುಣಿತ, ಲಮಾಣಿ ಕುಣಿತ ಮೊದಲಾದ ಯಾವದೊಂದು ಕುಣಿತ ಕಂಡರೂ ಕೆಲವೇ ಪದಗತಿಗಳಿಂದ, ಕೆಲವೇ ಅಂಗವಿನ್ಯಾಸಗಳಿಂದ–ಬಹು ಜೀವಗಳ ಸುಖ, ಸಂತಸ, ರೌದ್ರಗಳು ಹೊರಹೊಮ್ಮುವುದನ್ನು ಕಾಣುತ್ತೇವೆ. ಶೋಭಾನೆ ಹಾಡುಗಳಲ್ಲಿ, ನಾಟಿ ನಡುವ ಹಾಡುಗಳಲ್ಲಿ, ಹುಣ್ಣಿಮೆ ಹೋಳಿಗಳ ಹಾಡುಗಳಲ್ಲಿ, ಬಹು ಜನಗಳ ದುಃಖ ಸಂತೋಷ ಉಕ್ಕುಗಳಿಗೆ ತಕ್ಕ ಮುಖ ಗೀತರೂಪದಲ್ಲಿ ಜರುತ್ತದೆ. ಅವುಗಳಿಂದಲೇ ಹುಟ್ಟಿ ನಮ್ಮ ಎಲ್ಲ ಮಾರ್ಗ ಪದ್ಧತಿಯ ಕಲೆಗಳು ಬೆಳೆದು ಬಂದವು. ಉಳಿದ ಕಲೆಗಳು 'ಮಾರ್ಗ' ಪದ್ಧತಿಯ ಬೇರೆಯೇ ಬಿಡಾರ ಮಾಡಿಕೊಂಡು ಬೆಳೆದಂತೆ, ನಮ್ಮ ಬಯಲಾಟಗಳು ಬೆಳೆಯಲಿಲ್ಲ. ಅರಸರ ಪೋಷಣೆಗಾಗಿ ಬಾಯ್ಬಿಡದೆ, ಜನಗಳ ಪೋಷಣೆಯಲ್ಲೇ ಅವು ಬೆಳೆದು ಬಂದರೂ ಜನಜೀವನದ ಈ ಕಲೆ ತನ್ನ ಕ್ಷೇತ್ರವನ್ನು ಬಿಡದೆಯೆ, ವ್ಯಕ್ತಿವೈಶಿಷ್ಟ್ಯ, ಪ್ರತಿಭೆಗಳಿಗೆ ಅನುಕೂಲವಾಗಿ, ಹೇಗೆ ವಿಶಾಲಿಸಿ, ಮೈ ತುಂಬಿಕೊಳ್ಳಬಹುದು ಎಂದು ತೋರಿಸುವಷ್ಟೇ ಶಕ್ತವಾಗಿದೆ.

ಯಕ್ಷಗಾನ ಸಂಗೀತ, ಅದರ ಕುಣಿತ, ಅದರ ನಾಟಕ ರೀತಿ—ಇವು ಈ ನಾಡಕ್ಕೆ ಹಿರಿಯ ಸಾಕ್ಷಿಗಳು. ಇಷ್ಟೇ ಅರ್ಥಬದ್ಧವಾದ ಇನ್ನೊಂದು ನೃತ್ಯವಿಧಾನ ಡಮರು ನೃತ್ಯ(ಡಕ್ಕೆ ಬಲಿ). ದೆವ್ವ–ಪರ ಇಲ್ಲವೆ ದೈವ-ಪರ ಹಾಡುಗಳನ್ನು ಹಾಡುತ್ತ, ಹಾಡುಗಳ ಸಾಹಿತ್ಯದ ಅಂಶವನ್ನು ನೆನೆದುಕೊಂಡು, ಭಾವಾವಿಷ್ಟನಾಗಿ ಒಬ್ಬ ನರ್ತಕ, ಒಂದು ಡಮರನ್ನು ಕೈಯಲ್ಲಿ ಹಿಡಿದು, ತಾಳ ಹಾಕುತ್ತ ಕುಣಿಯುವ ಈ ವಿಧಾನ ಅತಿ ಉಚ್ಚವಾದ ನೃತ್ಯವಿಧಾನವಾಗಿದೆ. ನಮ್ಮ ಮಾರ್ಗ ಪದ್ಧತಿಯ ಯಾವ ನೃತ್ಯಗಳಿಗೂ ಕಡಿಮೆಯಲ್ಲದ ಶಕ್ತಿ, ವಿಲಾಸ, ವೈಖರಿಗಳನ್ನು ತೋರಿಸಬಲ್ಲ ಯೋಗ್ಯತೆಯನ್ನು ಇದು ಪಡೆದಿದೆ. ದೆವ್ವದ ಪೂಜೆಯಲ್ಲಿ ನಂಬಿಕೆಯಿಲ್ಲದ ವ್ಯಕ್ತಿಯೂ ಅದನ್ನು ನೋಡಿ ಸಂತೋಷಪಡಬಹುದಾದ ಹಿರಿಮೆ ಅದರಲ್ಲಿದೆ.

ಕಲೆಯನ್ನು ಬೆಳೆಯಿಸುವವನು ಪ್ರಧಾನವಾಗಿ ತಿಳಿದಿರಬೇಕಾದ ವಿಚಾರವೆಂದರೆ-ಕಲೆ ವ್ಯಕ್ತವಾಗುವ ಸಾಧನಕ್ಕೂ ಅದನ್ನು ಪ್ರೇರಿಸುವ ಭಾವನೆಗೂ ಇರಬೇಕಾದ ನಿಕಟ ಸಂಬಂಧ. ಭಾವವನ್ನು ಬಿಟ್ಟ ಸಾಧನವಿಲ್ಲ, ಕಲೆಯಿಲ್ಲ. ಈ ದೃಷ್ಟಿಯಿಂದ ನಮ್ಮ ಕಲೆಗಳನ್ನು ಪ್ರೀತಿಸುವ ಯಾವೊಬ್ಬನೂ ನಮ್ಮ ಕಲೆಗಳಿಗೆ ಆವರಣವಾಗಿರುವ ಯಾವತ್ತು ಜಾನಪದ ಕಲೆಗಳನ್ನೂ ಉಳಿಸಿಕೊಳ್ಳುವುದು, ಪರಿಶೀಲಿಸುವುದು ಅನಿವಾರ್ಯವಾದ ಸಂಗತಿ. ಜನ ಬಿಟ್ಟರೂ ಕಲೆ ಉಳಿಯಲಾರದು. ಆ ಜನ ಮೂಲತಃ ಜಾನಪದ. ಜಾನಪದವನ್ನು ಎತ್ತಲ್ಬಯಸುವವನು ಸಹ ಜಾನಪದವನ್ನು ಅರಿಯಬೇಕಾಗುತ್ತದೆ. ಜನ ಜೀವನವನ್ನರಿಯದೆ ಉದ್ಧಾರದ ಹಾದಿಯಿಲ್ಲ. ಈ ದೃಷ್ಟಿಯಿಂದ ನಮ್ಮ ಕಲೆಗಳ ರಕ್ಷಣೆ ನಮಗೆ ಅತ್ಯವಶ್ಯವಾಗುತ್ತದೆ. ಜನಜೀವನದ ಭಾವಾನುಭವಗಳ ಪ್ರತೀಕ ಜಾನಪದ ಕಲೆಗಳು–ಎಂಬುದರಿಂದ ಅವುಗಳಲ್ಲಿನ ಶಕ್ತಿಗಳ ಪರಿಚಯವನ್ನು ನಮ್ಮ ಜನ ಮಾಡಿಕೊಳ್ಳಬೇಕು. ಅವು ನಿಸ್ಸಾರವಾದುವೂ ಅಲ್ಲ; ಹೇಯವಾಯವೂ ಅಲ್ಲ. ಕಾಲಕ್ಕೆ ತಕ್ಕಂತೆ ಪ್ರಗತಿ ಹೊಂದದೆ ಹೋಗಿರಬಹುದಾದರೂ ಇನ್ನೂ ಜಡವಾಗಿಲ್ಲ, ವ್ಯರ್ಥವಾಗಿಲ್ಲ. ಅವನ್ನು ಉಳಿಸುವುದು, ಬೆಳಸುವುದು ಸಾಧ್ಯದ ಸಂಗತಿ. ಬೆಳೆಸಬೇಕಾದದ್ದೂ ನಮ್ಮ ಕರ್ತವ್ಯ.

ಹಾಗೆ ಅವನ್ನು ಬೆಳಸಬೇಕಾದರೆ ನಾವು ಪ್ರತ್ಯೇಕವಾಗಿ ಬೆಳೆಯಿಸಿಕೊಂಡು ಬಂದ ಮಾರ್ಗ ಪದ್ಧತಿಯ ಕಲೆಗಳ ಪರಿಚಯ ಪಡೆಯುವಂತೆಯೇ ಶ್ರಮವಹಿಸಿ, ಇವುಗಳ ಪರಿಚಯವನ್ನು ಪಡೆದುಕೊಳ್ಳಬೇಕು. ಅವುಗಳಿಗಿರುವ ಮಿತಿಯನ್ನು ತಿಳಿಯುವಂತೆಯೇ, ಇವುಗಳಿಗಿರುವ ಮಿತಿಯನ್ನೂ ತಿಳಿಯಬೇಕು. ಜಾನಪದ ಕಲೆಗಳನ್ನು ನಮ್ಮ ವಿದ್ಯಾಸಂಸ್ಥೆಗಳಲ್ಲಿ ಅಭ್ಯಾಸದ ಅಂಗವಾಗಿಯೂ ಮಾಡಬೇಕು. ಅವನ್ನು ನಮ್ಮ ನಿತ್ಯಜೀವನದ ಹಬ್ಬ ಹುಣ್ಣಿಮೆಗಳಲ್ಲಿ ಬಳಸಬೇಕು. ನಾವು ಅವಕ್ಕೆ ಆಶ್ರಯದಾತರೆಂಬ ಸೋಗು ಹಾಕಿಕೊಂಡಲ್ಲಿ ಅವು ಬೆಳೆಯುವಂತಿಲ್ಲ. ನಮ್ಮ ಜೀವನಕ್ಕೆ ಅದು ಬೇಕೆಂಬ ಪ್ರೀತಿಯಿಂದ ಜನರೊಡನೆ ಬೆರೆತು ಒಂದಾಗಿ, ಬೆಳೆಸುವ ಸಾಧನ ಅದು.

ಇವನ್ನೆಲ್ಲ ನಿತ್ಯ ಜೀವನದಲ್ಲಿ ಬಳಸುವಂತೆ, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಅವುಗಳ ಪರಿಚಯ, ಸಂಗ್ರಹ, ಸಂಶೋಧನೆಗಳಿಗೆ ಬೇಕಾಗುವ ಏರ್ಪಾಟೂ ಆಗಬೇಕು. ಜಾನಪದ ಕಲೆಗಳಿಗೂ ಮನುಷ್ಯ ಶಾಸ್ತ್ರ (Anthropology) ಯಂಥ ಶಾಸ್ತ್ರಕ್ಕೂ ನಿಕಟ ಸಂಬಂಧವನ್ನು ನಾವು ಕಾಣಬಹುದು. ಅವುಗಳ ಸಂಗ್ರಹದಿಂದ, ಶಾಸ್ತ್ರೀಯ ಅಭ್ಯಾಸದಿಂದ, ವಿಮರ್ಶೆಗಳಿಂದ ನಮ್ಮ ಇಂದಿನ ಬದುಕಿಗೆ ಬೇಕಾಗುವ ಯಾವತ್ತೂ ಏರ್ಪಾಟುಗಳನ್ನೂ ಸುಧಾರಣೆಗಳನ್ನೂ ನಾವು ಮಾಡುವುದು ಸಾಧ್ಯ, ಹೊಸಯುಗಕ್ಕೆ ಅನ್ವಯಿಸುವ ಬಾಲೆ, ರಿವ್ಯೂ, ಕೆಲಿಸ್ತನಿಕ್ಸ್, ಸಾಮುದಾಯಿಕ ಗೀತ, ವಿವಿಧ ರೀತಿಯ ನಾಟಕ –ಇಂಥವೆಲ್ಲ ಯೋಜನೆಗಳಲ್ಲೂ– ಈ ಅಭ್ಯಾಸ ಸಹಾಯಿಕವಾದೀತು. ಧ್ವನಿಸಂಗ್ರಹ, ಚಿತ್ರಸಂಗ್ರಹ, ಚಲಚ್ಚಿತ್ರಸಂಗ್ರಹಗಳು ಸುಲಭಸಾಧ್ಯವಾಗಿರುವ ಈಗಿನ ದಿನಗಳಲ್ಲಿ– ನಮ್ಮ ಜಾನಪದ ಕಲೆಗಳನ್ನು ಉಳಿಸಿಕೊಂಡು ಹೋಗುವುದು ಕಷ್ಟದ ಕೆಲಸವಲ್ಲ. ಮುಖ್ಯವಾಗಿ ವಿದ್ಯಾಪ್ರಸಾರ, ವಿದ್ಯಾಭಿವೃದ್ಧಿ–ಎಂದರೆ ಬದುಕಿನ ತಿಳಿವು ಸೊಗಸುಗಳನ್ನು ಹೆಚ್ಚಿಸಿಕೊಂಡು ಹೋಗತಕ್ಕುದು– ಎಂಬ ಅಭಿಪ್ರಾಯ ನಮ್ಮಲ್ಲಿ ಬಂದರೆ, ಆಗ ಮಾತ್ರ ಈ ಕೆಲಸ ಸುಲಭವಾಗುತ್ತದೆ. ಈ ಕೆಲಸಕ್ಕೆ ಬಂದಿರುವ ಮುಖ್ಯ ಅಡಚಣೆ ಎಂದರೆ ವಿದ್ಯಾಭ್ಯಾಸಕ್ಕೂ ಹೊಟ್ಟೆಯ ಪಾಡಿಗೂ ನಾವು ಹೆಚ್ಚಾಗಿ ಗಂಟುಹಾಕಿಕೊಟ್ಟಿರುವ ತಪ್ಪು ಕಲ್ಪನೆ. ಆ ಕಲ್ಪನೆ ಅಳಿಯದೆ ನಮ್ಮ ಬದುಕು ಬದಲಾಗುವುದಿಲ್ಲ. ನಮ್ಮ ಸರಕಾರಗಳು ಜನಜೀವನದ ಸೊಗಸನ್ನು ಕಾಯಲು ಶಕ್ತವಾಗುವುದಿಲ್ಲ.

ಮಾಯಾದೇವಿ

ಬದುಕು ಮಾಯೆಯುಡಿಗೆ ಗಂಟು
ಬಿಡಿಸಲಾರ ಒಬ್ಬನೂ
ಗೆಳೆಯ ನಡೆ
ಅವಳ ಕಡೆ
ಹಾರಿಸಿ ಕುಡಿ ಹುಬ್ಬನು !

— ವಿಜಯ

ಸಾಮುದ್ರಿಕ

ಜೋಯಿಸನ ಪತಿಯೆದುರು ಕರೆದಳು
ಅವನ — ಕಲಿತ — ಮನೋರಮೆ
ಪತಿಯ ಅಂಗೈಗೆರೆಯ ತಿಳಿದು
ತನ್ನ ದುರ್ಭಾಗ್ಯವನು ಹಳಿದು
ಮರುದಿನವೆ ತೆಗೆಯಿಸಿದಳಾತನ
ಇಡಿಇಡೀ ಜೀವನವಿಮೆ !


— ವಿಜಯ

ಹರಿಹಂಚಾದ ನಾಡನ್ನು ಒಂದುಗೂಡಿಸುವ ಕನಸು ತತ್ಕಾಲಕ್ಕೆ ನನಸಾಗದಂತೆ ವಿಘ್ನವೊದಗಿದೆ. ಆದರೆ ಮೈಸೂರು ಮತ್ತು ಉಳಿದ ಕರ್ನಾಟಕಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಸಹಕಾರದಿಂದ ಸಾಧಿಸಬಹುದಾದದ್ದು ಬಹಳ ಇದೆ.

ಮೈಸೂರು ಮತ್ತು ಉಳಿದ ಕರ್ನಾಟಕ

ಶ್ರೀ **ಕೆ. ಟಿ. ಭಾಷ್ಯಂ** ಬಿ. ಎ., ಬಿ. ಎಲ್.
ಮೈಸೂರು ಸರಕಾರದ ನ್ಯಾಯಾಂಗ ಮತ್ತು ಕಾರ್ಮಿಕ ಶಾಖೆಯ ಮಂತ್ರಿಗಳು

ಕನ್ನಡ ನಾಡು ಹಿಂದೆ ಬಹಳ ವಿಸ್ತಾರವಾಗಿಯೂ ವಿಶೇಷ ಪ್ರಬಲವಾಗಿಯೂ ಇದ್ದ ಪ್ರದೇಶ. ರಾಷ್ಟ್ರಕೂಟ ಪ್ರಭುವಾಗಿದ್ದ ನೃಪತುಂಗನು ಕಾವೇರಿಯಿಂದ ಗೋದಾವರಿಯ ವರೆಗೂ ಕನ್ನಡ ನಾಡು ವಿಸ್ತರಿಸಿದ್ದುದಾಗಿ ವರ್ಣಿಸಿದ್ದಾನೆ. ಅವನ ವರ್ಣನೆಯು ಮನೋಹರವಾಗಿದೆ. ಅಲ್ಲದೆ, ಅದು ಕನ್ನಡಿಗರಲ್ಲೆಲ್ಲ ಜನಜನಿತವಾಗಿ ಸುಪ್ರಸಿದ್ಧವಾಗಿದೆ. ನೃಪತುಂಗನ ಕಾಲದಲ್ಲಿ ಕನ್ನಡ ನಾಡಿನ ವಿಸ್ತೀರ್ಣವನ್ನು ಸ್ಮರಿಸಿಕೊಂಡರೆ, ಈಗ ಕೂಡ, ನಮ್ಮ ಮನಸ್ಸಿಗೆ ಹೆಮ್ಮೆಯುಂಟಾಗುತ್ತದೆ. ಒಡನೆಯೇ ಖೇದವೂ ಆಗುತ್ತದೆ; ಏಕೆಂದರೆ ಕನ್ನಡ ನಾಡಿನ ವಿಸ್ತೀರ್ಣವು ಈಗ ಬಹಳ ಕಡಮೆಯಾಗಿದೆ. ಅದನ್ನು ಕುರಿತು ಯೋಚಿಸಿದರೆ ನಮ್ಮ ಮನಸ್ಸಿಗೆ ಖೇದವಾಗುವುದು ಸಹಜವಾಗಿಯೇ ಇದೆ. ಕನ್ನಡ ನಾಡು ಹಿಂದೆ ವಿಸ್ತೀರ್ಣದಲ್ಲಿ ಅತ್ಯಧಿಕವಾಗಿದ್ದುದರ ಜೊತೆಗೆ ಅದರ ಪ್ರಭಾವವೂ ಅಮಿತವಾಗಿಯೇ ಇದ್ದಿತು. ಅದರ ಖ್ಯಾತಿಯು ಕನ್ಯಾಕುಮಾರಿಯಿಂದ ಹಿಡಿದು ಕಾಶ್ಮೀರದ ವರೆಗೂ ಸಮಗ್ರ ಭರತಖಂಡದಲ್ಲಿಯೂ ವ್ಯಾಪಿಸಿದ್ದಿತು. ಆ ವಿಷಯವು ಈಗಲೂ ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತದೆ. ಅನೇಕ ವಿಚಾರಗಳಲ್ಲಿ ಇತರ ಭಾಗಗಳವರು ಕನ್ನಡಿಗರನ್ನೇ ಮಾದರಿಯಾಗಿಟ್ಟುಕೊಂಡು ಅವರ ಮೇಲ್ಪಂಕ್ತಿಯನ್ನೇ ಅನುಸರಿಸುತ್ತಿದ್ದರು. ಕನ್ನಡಿಗರ ಕಲಾಪ್ರೇಮವೂ ಪಾಂಡಿತ್ಯವೂ ನಯವಿನಯಗಳೂ ಅವರೆಲ್ಲರಿಗೂ ಅಚ್ಚುಮೆಚ್ಚಾಗಿದ್ದವು.



ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮುಂತಾದ ಅನೇಕ ಮನೆತನಗಳೂ ಚಕ್ರವರ್ತಿಗಳೂ ಕನ್ನಡ ನಾಡಿನಲ್ಲಿ ಪ್ರಭುತ್ವಮಾಡಿ, ನಾಡಿನ ಅಭ್ಯುದಯವನ್ನು ಸಾಧಿಸಿದರು. ಚಾಲುಕ್ಯರ ಪುಲಿಕೇಶಿಯಂತೂ ಉತ್ತರಾಪಥ ಸಮ್ರಾಟನೆನಿಸಿದ್ದ ಹರ್ಷವರ್ಧನನನ್ನು ಕೂಡ ಯುದ್ಧದಲ್ಲಿ ಸೋಲಿಸಿದನು. ಅದು ಕನ್ನಡಿಗರೆಲ್ಲರೂ ನೆನಪಿನಲ್ಲಿಡಬೇಕಾದ ಸಂಗತಿ. ದಕ್ಷಿಣಾಪಥ ಚಕ್ರೇಶ್ವರನೆಂಬ ಖ್ಯಾತಿಯನ್ನು ಪಡೆದಿದ್ದ ಪುಲಿಕೇಶಿಯ ಕಾಲದಲ್ಲಿ ಕನ್ನಡನಾಡಿನ ಕಲೆಗಳೂ ಕಸಬು ಕೈವಾಡಗಳೂ ವ್ಯಾಪಾರ ವಾಣಿಜ್ಯಗಳೂ ವಿಶೇಷವಾಗಿ ವೃದ್ಧಿ ಹೊಂದಿದವು. ಸಮ್ರಾಟ್ ಪುಲಿಕೇಶಿಯ ಖ್ಯಾತಿಯು ಪಾರ್ಸಿಸ್ಥಾನದ ವರೆಗೂ ಹರಡಿ, ಪಾರ್ಸಿಸ್ಥಾನದ ರಾಯಭಾರಿಯು ಪುಲಿಕೇಶಿಯನ್ನು ಸಂದರ್ಶಿಸಿದ ಸನ್ನಿವೇಶದ ನಯನಮನೋಹರವಾದ ಚಿತ್ರವು ಅಜಂತ ಗುಹೆಯಲ್ಲಿ ಈಗಲೂ ಶೋಭಿಸುತ್ತಿದೆ. ಪುಲಿಕೇಶಿಯಿಂದ ದೊರೆತ ಕಲಾಪ್ರೋತ್ಸಾಹವಂತೂ ಅಷ್ಟಿಷ್ಟಲ್ಲ. ರಾಷ್ಟ್ರಕೂಟರ ಕಾಲಕ್ಕೆ ಕನ್ನಡ ಸಾಹಿತ್ಯವು ಮಹಾನದಿಯಾಗುವ ಸೂಚನೆಗಳು ಆಗಲೇ ತಲೆದೋರಿದ್ದವು. ನೃಪತುಂಗನಿಂದ ರಚಿತವಾಗಿರುವ "ಕವಿರಾಜಮಾರ್ಗ"ವನ್ನು ಓದಿದರೆ, ಈ ಅಂಶವು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಲ್ಲದೆ, ಆಗಿನ ಕನ್ನಡಿಗರ ಸಂಸ್ಕೃತಿ ಚಿತ್ರವೂ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅನೇಕ ಕವಿಗಳ ಹೆಸರುಗಳನ್ನು ಆ ಗ್ರಂಥಗಳಲ್ಲಿ ಕಾಣಬಹುದು. ಅವರ ಗ್ರಂಥಗಳು ನಮಗೆ ಸಿಕ್ಕದಿರುವುದು ವಿಷಾದಕರ. ಅವರೆಲ್ಲರೂ ರಚಿಸಿದ ಕಾವ್ಯಗಳೇ ಕನ್ನಡದ ಆದಿಕವಿ ಪಂಪನೇ ಮುಂತಾದ ಮಹಾಕವಿಗಳಿಗೆ ಪ್ರಚೋದಕವಾಗಿ ಪರಿಣಮಿಸಿರಬೇಕೆಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಹೊಯ್ಸಳರ ಕಾಲದಲ್ಲಿ ವಾಸ್ತುಶಿಲ್ಪ ಮುಂತಾದ ಕಲೆಗಳು ವಿಶೇಷವಾಗಿ ವೃದ್ಧಿಹೊಂದಿದವು. ಅವರು ಕಟ್ಟಿಸಿದ ಬೇಲೂರು, ಹಳೇಬೀಡು, ಸೋಮನಾಥಪುರದ ದೇವಾಲಯಗಳೇ ಮುಂತಾದ ಕಟ್ಟಡಗಳು ಕೆತ್ತನೆಯ ಕೆಲಸದ ಮಾದರಿಗಳೆನಿಸಿದ ಕಲಾ ಭಂಡಾರಗಳಂತಿವೆ. ಅವುಗಳನ್ನು ನೋಡಿ ಸ್ವದೇಶೀಯರೂ ವಿದೇಶೀಯರೂ ಮುಗ್ಧರಾಗಿದ್ದಾರೆ. ವಿಜಯನಗರ ಸಾಮ್ರಾಜ್ಯಕಾಲದಲ್ಲಂತೂ ಕನ್ನಡನಾಡಿನ ಅಭ್ಯುದಯ ಸಾಧನೆಯು ಸರ್ವತೋಮುಖವಾಗಿ ಮುಂದುವರಿಯಿತು. ಸಾಹಿತ್ಯಕ್ಕೂ ಇತರ ಲಲಿತ ಕಲೆಗಳಿಗೂ ಕೈಗಾರಿಕೆ ವಾಣಿಜ್ಯಗಳಿಗೂ ಕುಶಲಕಲೆಗಳಿಗೂ ಅಮಿತವಾದ ಪ್ರೋತ್ಸಾಹ ದೊರೆಯಿತು. ಕನ್ನಡನಾಡು ಕುಬೇರನ ಕಣಜವೆಂದು ತೋರುವ ಮಟ್ಟಿಗೆ ಸಂಪದಭಿವೃದ್ಧಿಯಾಯಿತು. ವಿಜಯನಗರದ ರಾಜ್ಯಭಾರ ಕ್ರಮವನ್ನು ರಾಣಾ ಪ್ರತಾಪಸಿಂಹನೂ ಛತ್ರಪತಿ ಶಿವಾಜಿಯೂ ಮುಂದೆ ತಮ್ಮ ತಮ್ಮ ಕಾಲದಲ್ಲಿ ಅನುಸರಿಸಿದರು.

ಇದು ಕನ್ನಡನಾಡಿನ ಕೀರ್ತಿಕಲಶ. ಇದು, ಮೈಸೂರು ಕನ್ನಡಿಗರು, ಇತರ ಕನ್ನಡಿಗರು—ಎಂಬ ಭೇದವಿಲ್ಲದೆ ಸಮಸ್ತ

ಕನ್ನಡಿಗರೂ ಹೆಮ್ಮೆಪಡಬೇಕಾದ ಸಂಗತಿ. ವೈಭವ ವಿಚಕ್ಷಣೆಗಳೇ ಮುಂತಾದವುಗಳಿಗಾಗಿ ಮತ್ತು ಸರ್ವತೋಮುಖವಾದ ಅಭಿವೃದ್ಧಿ ಸಾಧನೆಗಾಗಿ ವಿಜಯನಗರ ಸಾಮ್ರಾಜ್ಯವು ಸುಪ್ರಸಿದ್ಧವಾಗಿದ್ದಿತು. ಆ ಕಾಲದ ವಿಪುಲ ಸಂಪತ್ತನ್ನೂ ಧಾನ್ಯ ಸಮೃದ್ಧಿಯನ್ನೂ ಫಲಪುಷ್ಪ ರಾಶಿಗಳನ್ನೂ ವ್ಯಾಪಾರ ವೈಖರಿಯನ್ನೂ ಕಂಡು ವಿದೇಶೀಯ ಪ್ರವಾಸಿಗಳು ಕೂಡ ಆಶ್ಚರ್ಯದಿಂದ ಬೆರಗಾಗುತ್ತಿದ್ದರು. ಪೋರ್ತುಗಾಲ್ ಪ್ರವಾಸಿಯೊಬ್ಬನು ವಿಜಯನಗರದ ಅಂಗಡಿಗಳಲ್ಲಿದ್ದ ಫಲಪುಷ್ಪ ರಾಶಿಗಳನ್ನೂ ಧಾನ್ಯಗಳ ರಾಶಿಗಳನ್ನೂ ನೋಡಿ ವಿಸ್ಮಿತನಾದನಂತೆ. ಪ್ರತಿದಿನವೂ ಅಷ್ಟು ಭಾರಿ ಪ್ರಮಾಣದಲ್ಲಿ ಅವು ಒದಗಬೇಕಾದರೆ, ವಿಜಯನಗರದವರು ಯಾವುದೋ ಪಿಶಾಚಿಯನ್ನು ಸ್ವಾಧೀನಪಡಿಸಿಕೊಂಡು ಅದರ ಸಹಾಯದಿಂದ ಅವುಗಳನ್ನು ಪಡೆಯುತ್ತಿದ್ದಂತೆ ಅವನಿಗೆ ತೋರಿತಂತೆ. ಸಂಗೀತ, ಸಾಹಿತ್ಯ, ಶಿಲ್ಪಕಲೆ, ಗಣಿಗಳ ಕೆಲಸ ಮುಂತಾದ ಹಲವು ವೃತ್ತಿಗಳು, ಕುಶಲಕಲೆಗಳು ಮುಂತಾದವುಗಳಿಗೆಲ್ಲಾ ವಿಜಯನಗರದ ಸಮ್ರಾಟರುಗಳಿಂದ ಅತ್ಯಂತ ಪ್ರೋತ್ಸಾಹ ದೊರೆತು, ವ್ಯಾಪಾರ ವಾಣಿಜ್ಯಗಳು ವೃದ್ಧಿ ಹೊಂದಿದವು. ಕನ್ನಡ ಸಾಮ್ರಾಜ್ಯದ ವಿಸ್ತೀರ್ಣವು ಹೆಚ್ಚುವುದಕ್ಕೂ ವಿಜಯನಗರದ ಸಮ್ರಾಟರುಗಳ ದಿಗ್ವಿಜಯದಿಂದ ಸಹಾಯವಾಯಿತು.

ಕಾಲಕ್ರಮದಲ್ಲಿ ಕನ್ನಡ ನಾಡು ಛಿದ್ರಛಿದ್ರವಾಗಿ ಒಡೆದುಹೋಗಿ ಹತ್ತಾರು ಆಡಳಿತಗಳಿಗೆ ಹಂಚಿಹೋಯಿತು. ಮೊದಲಿನ ಪುರೋಭಿವೃದ್ಧಿ ಸಾಧನೆಗೆ ಅದರಿಂದ ಅಡ್ಡಿಯುಂಟಾಯಿತು. ಕನ್ನಡ ನಾಡು ಈಚಿನ ವರೆಗೂ ಹತ್ತೊಂಬತ್ತು ಆಡಳಿತಗಳಿಗೆ ಸೇರಿದ್ದುದು ಸಮಸ್ತರಿಗೂ ತಿಳಿದ ಸಂಗತಿ. ವಿಜಯನಗರ ಸಾಮ್ರಾಜ್ಯವು ಗತಿಸಿಹೋದ ಮೇಲೆ ಅದರ ಸತ್ಸಂಪ್ರದಾಯಗಳನ್ನೆಲ್ಲ ಸುರಕ್ಷಿತವಾಗಿ ಉಳಿಸಿ, ಅವು ಮೈಸೂರಿನ ಅರಮನೆಯಲ್ಲಿ ನಡೆದು ಬರುವಂತೆ ವ್ಯವಸ್ಥೆ ಮಾಡಿದ ಕೀರ್ತಿಯು ರಾಜ ಒಡೆಯರೇ ಮುಂತಾದ ಮಹಾರಾಜರುಗಳಿಗೆ ಸೇರಿದುದಾಗಿದೆ. ಅವರುಗಳು ವಿಜಯನಗರದ ಒಂದು ಸಣ್ಣ ಪ್ರತೀಕದಂತೆ ಮೈಸೂರನ್ನು ರೂಪಿಸಿ ಯಶಸ್ವಿಯಾಗಿ ರಾಜ್ಯಭಾರ ಮಾಡಿದರು. ಭಾರತದಲ್ಲಿ ಬ್ರಿಟಿಷರ ಆಡಳಿತವು ನೆಲಸಿದ ಮೇಲೆ ಕೂಡ, ಅವರ ಆಡಳಿತದಲ್ಲಿದ್ದ ಪ್ರಾಂತಗಳಿಗಿಂತಲೂ ಮೈಸೂರು ಸಂಸ್ಥಾನವು ಅನೇಕ ವಿಚಾರಗಳಲ್ಲಿ ಮುನ್ನಡೆಯನ್ನು ಸಾಧಿಸಿ ಮಾದರಿ ಸಂಸ್ಥಾನವೆಂಬ ಖ್ಯಾತಿಯನ್ನು ಪಡೆಯಿತು. ಇದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಉದಾಹರಣೆಗಾಗಿ ಇಲ್ಲಿ ಒಂದೆರಡನ್ನು ಸೂಚಿಸಬಹುದಾಗಿದೆ. ಬ್ರಿಟಿಷರ ಆಡಳಿತದಲ್ಲಿದ್ದ ಪ್ರದೇಶದಲ್ಲಿ ಲಾರ್ಡ್ ಡಾಲ್‌ಹೌಸಿಯು ಗವರ್ನರ್-ಜನರಲ್ ಪದವಿಗೆ ಬಂದ ಮೇಲೆ, ಅಂಚೆ ವ್ಯವಸ್ಥೆ ನಡೆಯಿತು. ಮೈಸೂರು ಸಂಸ್ಥಾನದಲ್ಲಿ ಆ ಕಾಲಕ್ಕಿಂತ ಸುಮಾರು ಒಂದೂವರೆ ಶತಮಾನದಷ್ಟು ಮುಂಚಿತವಾಗಿಯೇ ಚಿಕ್ಕದೇವರಾಜ ಒಡೆಯರವರು ಅಂಚೆಯ ವ್ಯವಸ್ಥೆಯನ್ನು ಮಾಡಿದ್ದರು. ಬ್ರಿಟಿಷರ ಆಡಳಿತದಲ್ಲಿದ್ದ ಪ್ರಾಂತಗಳಲ್ಲಿ ಪ್ರಜಾಸತ್ತಾತ್ಮಕ ಪ್ರಭುತ್ವದ ಕಡೆಗೆ ಜನರ ಮನಸ್ಸು ತಿರುಗಿ ಕಾಂಗ್ರೆಸ್ ಮಹಾಸಭೆಯು ಏರ್ಪಡುವುದಕ್ಕಿಂತ ಮೊದಲೇ ಮೈಸೂರು ಸಂಸ್ಥಾನದಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರು ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಬ್ರಿಟಿಷರ ಆಡಳಿತಕ್ಕೊಳಪಟ್ಟಿದ್ದ ಪ್ರದೇಶಗಳಲ್ಲಿ ಯಾವ ಪ್ರಾಂತದ ಸರಕಾರದವರಾಗಲಿ ಸ್ತ್ರೀವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಮುಂಚಿತವಾಗಿಯೇ, ಮೈಸೂರು ಸಂಸ್ಥಾನದಲ್ಲಿ ಮಹಿಳೆಯರಿಗಾಗಿ ವಿದ್ಯಾಸಂಸ್ಥೆಗಳು ಏರ್ಪಟ್ಟಿದ್ದುವು. ಬ್ರಿಟಿಷರ ಆಡಳಿತಕ್ಕೊಳಪಟ್ಟಿದ್ದ ಬಂಗಾಲ, ಮುಂಬಯಿ, ಮದರಾಸು ಮುಂತಾದ ಪ್ರಾಂತಗಳಲ್ಲಿ ಯಾವುದೊಂದರಲ್ಲಾಗಲಿ ವಿದ್ಯುಚ್ಛಕ್ತಿ ಉತ್ಪತ್ತಿಯ ಯೋಜನೆಯು ನಡೆಯುವುದಕ್ಕೆ ಬಹುಕಾಲ ಮುಂಚಿತವಾಗಿಯೇ ಮೈಸೂರು ಸರಕಾರದವರು ಶಿವನಸಮುದ್ರದ ವಿದ್ಯುಚ್ಛಕ್ತಿ ಯೋಜನೆಗೆ ಗಮನ ಕೊಟ್ಟು ಅದನ್ನು ಜಾರಿಯಲ್ಲಿ ತಂದರು. ಬ್ರಿಟಿಷರ ಆಡಳಿತಕ್ಕೊಳಪಟ್ಟಿದ್ದ ಯಾವ ಪ್ರಾಂತದವರೂ ಖಾದಿ ಕೈಗಾರಿಕೆಗೆ ಪ್ರೋತ್ಸಾಹ ಕೊಡದೆ ಪ್ರತಿಯೊಂದು ಸರಕಾರದವರೂ ಖಾದೀ ವಿರೋಧಿಗಳಾಗಿದ್ದ ಕಾಲದಲ್ಲಿ ಮೈಸೂರು ಸರಕಾರದವರು ಬದನವಾಳದ ಖಾದಿ ಕೇಂದ್ರವನ್ನು ಸ್ಥಾಪಿಸಿದರು. ಇವು, ಮಾದರಿ ಸಂಸ್ಥಾನವೆನಿಸಿ ಖ್ಯಾತಿಯನ್ನು ಪಡೆದಿರುವ ಮೈಸೂರಿನ ಖ್ಯಾತಿಗೆ ಕಾರಣವಾದ ಕೆಲವು ಸಂಗತಿಗಳು.

ಕನ್ನಡ ನಾಡು ಅನೇಕ ಸರಕಾರಗಳ ಆಡಳಿತಕ್ಕೆ ಸೇರಿ ಹಂಚಿಹೋಗಿದ್ದುದು ತಪ್ಪಿ ಒಮ್ಮುಖವಾಗಿ ಆಡಳಿತ ನಡೆಯುವಂತೆ ಮಾಡುವುದಕ್ಕಾಗಿ ಅದನ್ನು ಒಟ್ಟುಗೂಡಿಸಬೇಕೆಂಬ ಏಕೀಕರಣ ಚಳವಳಿಯು ಈಗ್ಗೆ ಅನೇಕ ವರ್ಷಗಳ ಹಿಂದೆ ಪ್ರಾರಂಭವಾಯಿತು. ಈಚೆಗೆ ಭಾರತಕ್ಕೆ ಸ್ವಾತಂತ್ರ್ಯವು ಲಭಿಸಿದ ಮೇಲಂತೂ ಕನ್ನಡ ನಾಡಿನ ನಾನಾ ಭಾಗಗಳನ್ನು ಒಂದೇ ಆಡಳಿತಕ್ಕೆ ಸೇರಿಸಿ ಏಕೀಕರಣ ನಡೆಯಬೇಕೆಂಬ ಆಕಾಂಕ್ಷೆಯು ಅನೇಕ ಮಂದಿ ಕನ್ನಡಿಗರ ಹೃದಯವನ್ನು ಮಿಡಿಯುತ್ತಿದೆ. ಭಾಷಾನುಗುಣವಾಗಿ ಪ್ರಾಂತ ನಿರ್ಮಾಣವಾಗಬೇಕೆಂದು ಆಂಧ್ರರೇ ಮುಂತಾದವರೂ ಬಯಸುತ್ತಿದ್ದಾರೆ. ಕೇಂದ್ರ ಸರಕಾರದವರು ಭಾಷಾನುಗುಣವಾಗಿ ಪ್ರಾಂತ ರಚನೆ ಮಾಡುವ ವಿಚಾರದಲ್ಲಿ ವರದಿಯನ್ನೊಪ್ಪಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆದರೆ, ಸದ್ಯದಲ್ಲಿ ಅದಕ್ಕೆ ಅನುಕೂಲ ಪರಿಸ್ಥಿತಿಯಿಲ್ಲವೆಂದು ತೀರ್ಮಾನಿಸಿ ಕೇಂದ್ರ ಸರಕಾರದವರು ಅದನ್ನು ಮುಂದೆ ಹಾಕಬೇಕಾಯಿತು. ನಿರ್ವಾಹವಿಲ್ಲದೆ ಅವರು ಆ ರೀತಿ ಮಾಡಿದರು.

ಆದಾಗ್ಯೂ ಮೈಸೂರು ಸಂಸ್ಥಾನದವರಾಗಲಿ ಅಥವಾ ಕನ್ನಡ ನಾಡಿನ ಇತರ ಭಾಗಗಳವರಾಗಲಿ ಅದಕ್ಕಾಗಿ ಎದೆಗುಂದಬೇಕಾಗಿಲ್ಲ. ರಾಜಕೀಯವಾಗಿ ಕನ್ನಡ ನಾಡಿನ ಏಕೀಕರಣ ನಡೆಯುವುದಕ್ಕಿಂತ ಮುಂಚಿತವಾಗಿ ಇತರ ಕಾರ್ಯ ಕ್ಷೇತ್ರಗಳಲ್ಲಿ ನೆರವೇರಿಸಬೇಕಾದ ಕೆಲಸಗಳು ಯಥೇಷ್ಟವಾಗಿವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಸೂಚಿಸುತ್ತೇನೆ. ಮೈಸೂರು ಕನ್ನಡಿಗರೂ ಇತರ ಕನ್ನಡಿಗರೂ ಒಟ್ಟುಗೂಡಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿ ಒಟ್ಟು ಕನ್ನಡ ನಾಡಿನ ಸಂಪತ್ತನ್ನು ವೃದ್ಧಿಗೊಳಿಸಬಹುದಾಗಿದೆ; ವಿದ್ಯಾಭ್ಯಾಸ ಸಂಬಂಧವಾಗಿ ಒಟ್ಟು ಕನ್ನಡ ನಾಡಿನ ಪುರೋಭಿವೃದ್ಧಿ ಸಾಧನೆಯ ದೃಷ್ಟಿಯಿಂದ ಅನೇಕ ಸುಧಾರಣೆಗಳನ್ನು ನಡೆಯಿಸಬಹುದಾಗಿದೆ. ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯು ಹೇರಳವಾಗಿ ಉತ್ಪತ್ತಿಯಾಗುತ್ತಿದೆ. ಅದನ್ನು ಉಪಯೋಗಿಸಿ, ಕನ್ನಡ ನಾಡಿನ ಇತರ ಭಾಗಗಳಲ್ಲಿ ದೊರೆಯುವ ಅದರುಗಳಿಂದ ನಾನಾ ಲೋಹಗಳನ್ನು ತೆಗೆದು ಲಾಭ ಹೊಂದಬಹುದಾಗಿದೆ. ಮೈಸೂರಿನ ವಿದ್ಯುಚ್ಛಕ್ತಿಯ ಸಹಾಯದಿಂದ ಕನ್ನಡ ನಾಡಿನ ಇತರ ಭಾಗಗಳಲ್ಲಿ ನಾನಾ

ಕೈಗಾರಿಕೆಗಳನ್ನು ನಡೆಯಿಸಬಹುದಾಗಿದೆ; ಅಲ್ಲದೆ ನೀರಾವರಿ "ಪಂಪು"ಗಳನ್ನು ಹಾಕಿಸಿ ವ್ಯವಸಾಯವನ್ನು ಉತ್ತಮಗೊಳಿಸಬಹುದಾಗಿದೆ. ಅಖಿಲ ಕನ್ನಡ ನಾಡಿನವರೂ ಸಹೋದರ ವಾತ್ಸಲ್ಯದಿಂದ ವರ್ತಿಸಿ, ಸಂಪದಭಿವೃದ್ಧಿಯನ್ನೂ ಜ್ಞಾನಾಭಿವೃದ್ಧಿಯನ್ನೂ ಸಾಧಿಸಿ, ಕನ್ನಡ ತಾಯಿಗೆ ಅಖಂಡ ಸೇವೆಯನ್ನು ಸಮರ್ಪಿಸಿ, ತನ್ಮೂಲಕ ಭಾರತ ಮಾತೆಯೂ ನಲಿಯುವಂತೆ ಮಾಡಿ ಧನ್ಯರಾಗಬಹುದಾಗಿದೆಯಲ್ಲದೆ ಕನ್ನಡ ನಾಡಿನ ಏಕೀಕರಣವನ್ನೂ ಸಾಧಿಸಬಹುದಾಗಿದೆ.

ಆಕಾಶಬುಟ್ಟಿ

೧

ಹೊಗೆ ತುಂಬಿ
ನಗೆ ತುಂಬಿ
ಬಣ್ಣಬಣ್ಣದ ನವಿರು ಕಾಗದದ ಬುಟ್ಟಿಯಲಿ
ಜೀವ ತುಂಬಿ,
ದೂರ ಹಾರುವದೆಂಬ ಭರವಸೆಯ ನಂಬಿ,
ನಮ್ಮ ಹಿರಿಯಾಸೆಗಳ ಉರಿವ ಕಕ್ಕಡವಿಟ್ಟು
ಉತ್ಸಾಹ ಸಾಹಸಕೆ ರೂಪುಗೊಟ್ಟು
ಮೇಲುನಾಡಿಗೆ ತೇಲಬಿಟ್ಟೆವಿದೊ ಚೈತನ್ಯದಾಕಾಶ ಬುಟ್ಟಿ!
ಏರುವದೊ ಇಳಿಯುವದೊ
ಗಾಳಿಯಾಘಾತದಲಿ ಜೋಲಿ ಹೊಡೆದುರುಳುವದೊ
ಮೈಸುಟ್ಟುಕೊಳ್ಳುವದೊ
ಕಾಣಲಾರದ ಕೊಳ್ಳದಾಳದಲಿ ಬೀಳುವದೊ
ಆರು ಕಂಡಿಹರಿದನು ?
ತಿಳಿಯಲಾರದ ಹದನು;
ಆದರೂ ಆದರೂ ಹಾರಿಸಿದೆವಿದನು
ಹುಡುಗತನದುತ್ಸಾಹ ಕೊನೆಬಲ್ಲುದೇನು ?

೨

ಆಕಾಶದ ಪ್ರಕಾಶದಲಿ ಎದೆಯ ತೆರೆದು
ಇಳೆಯ ಬಾಳಿನ ಹಂಗುನೂಲು ಹರಿದು
ಮೇಲೆ ತೇಲಾಡುವುದ ಕಣ್ಣಾರೆ ಕಂಡು
ನನ್ನ ಬಗೆಯಾಶೆಗಳು ರೆಕ್ಕೆಗೊಂಡು
ಅಂಧಂತಮಸ್ಸಿನಲು ಬೆಳಕನುಂಡು
ಮುಗಿಲಲ್ಲಿ ಬಿತ್ತಿರುವ ಮುತ್ತುಗಳ ಬೆಳೆಯ
ಹಾಲುಗಾಳನು ಬಯಸಿ ಹಾರುತಿವೆ ಗೆಳೆಯ !

ಅದೊ, ನೋಡು ನೋಡು
ಚಿಕ್ಕೆ ಗುರಿ ಬೆಂಬತ್ತಿ
ಸಾಗಿರುವ ಕಿರುದೀಪಕಾವ ಕೇಡು ?
ಇಳೆಯ ಬಾಳರಳಿ ಬಂಗಾರ ಬರಣಿಯು ತೇಲಿ
ಬೆಳ್ಳಿಚಿಕ್ಕೆಗೆ ತೆಕ್ಕೆ ಹಾಕಿಹುದು ನೋಡು !
ಬೆಳಕು ಬೆಳಕಿಗೆ ಮುತ್ತು ಕೊಟ್ಟಹುದು ಆ ಪ್ರೀತಿ
ಸೌರಭವೆ ತೋಳಬಂದಿ,
ಸೌಂದರ್ಯದಾನಂದವಿಲ್ಲಿ ಬಂದಿ!

೩

ದೀನಮಾನವರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ದಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು !
ನೋಡಿದೆಯೆ ಕವಿಯೆ ?
ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ ?
ಆತ್ಮಬಲದೆದುರು ಮೇಣುಳಿದ ಬಲವೆ ?

ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದಿಪನಂಗೊಂಡು
ಬಾಳದ್ವೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು.

— ಚೆನ್ನವೀರ ಕಣವಿ

ಕ್ಷೌರಕ್ಕೆ ಹೋದ ಮುತ್ತಣ್ಣನಿಗೆ ಕ್ಷೌರಕ್ಕಿಂತ ಸಲೂನಿನವನು ಹೊದಿಸಿದ ಬಟ್ಟೆ ಅಮೂಲ್ಯವಾಗಿ ಕಂಡಿತು. ಓಟ ಕಿತ್ತ; ಒಂದೂ ಮುಕ್ಕಾಲು ರೂಪಾಯಿ ಬೆಲೆಯ ಬಟ್ಟೆಗೆ ಮೂರು ರೂಪಾಯಿ ಕೊಟ್ಟರೂ ಮುತ್ತಣ್ಣನಿಗೆ ಲಾಭವೇ ಆಗಲು ಕಾರಣವೆಂದರೆ

ವಸ್ತ್ರಕ್ಷಾಮ

ಬರೆದವರು : ಶ್ರೀ. ಗೊರೂರು ರಾಮಸ್ವಾಮಿ ಐಯಂಗಾರ್
'ನಮ್ಮೂರಿನ ರಸಿಕರು' ಇತ್ಯಾದಿಗಳ ಕರ್ತರು

ನಮ್ಮ ಊರ ಮುತ್ತಣ್ಣ ಒಂದು ಸಲ ಮೈಸೂರಿಗೆ ಹೋಗಿದ್ದ. ಅದು ಈಗ ಆರು ವರುಷಗಳ ಅಂದರೆ ಎರಡನೆಯ ಮಹಾ ಯುದ್ಧದ ಕಾಲದ ಮಾತು. ನಮ್ಮೂರಿನಲ್ಲಿ ಹಜಾಮರು ಸಿಕ್ಕುವುದು ಯಾವಾಗಲೂ ಕಷ್ಟವಾದುದರಿಂದ, ಮುತ್ತಣ್ಣ ಕರ್‍ರಗೆ ಪೊದೆಯ ಹಾಗೆ ಗಡ್ಡ ಮೀಸೆ ಬೆಳೆಸಿದ್ದ. ಯುದ್ಧಕಾಲವಾದುದರಿಂದಲೂ ಕಂಟ್ರೋಲಿನವರು ನಿಯಮಿಸಿದ್ದ ವ್ಯಾಪಾರಿಗಳೆಲ್ಲ ಕಾಳಸಂತೆಯ ಬೆಲೆಯಲ್ಲಿ ಮಾರುತ್ತಿದ್ದುದರಿಂದಲೂ ಮುತ್ತಣ್ಣನಿಗೆ ಬಹು ದಿನಗಳಿಂದ ಬಟ್ಟೆ ಸಿಕ್ಕಿರಲಿಲ್ಲ. ಹಾಸಿಗೆಗೆ ಹಾಕುವ ಹಚ್ಚಡ ದುಪಟಿಗಳಿರಲಿ, ಹೊರಗೆ ತಿರುಗುವಾಗ ಮಾನ ಬರುವಂತೆ ಲಕ್ಷಣವಾಗಿ ಕಾಣುವ ಒಂದು ಪಂಚೆ ಸಹ ಅವನಲ್ಲಿ ಇರಲಿಲ್ಲ. ಅವನು ಉಟ್ಟಿದ್ದ ಪಂಚೆ ಅಲ್ಲಲ್ಲಿ ಹರಿದಿತ್ತು; ಆದರೆ ಹಳ್ಳಿಯಾದ ನಮ್ಮ ಊರಿನಲ್ಲಿ ಮುತ್ತಣ್ಣ ಅದನ್ನು ಲಕ್ಷ್ಯ ಮಾಡಿರಲಿಲ್ಲ. ಬೇರೆ ಪಂಚೆ ಇಲ್ಲದುದರಿಂದ ಅವನು ಅದನ್ನೇ ಉಟ್ಟುಕೊಂಡು ಮೈಸೂರಿಗೆ ಬಂದಿದ್ದನು. ಮೈಸೂರಿನಲ್ಲಿ ಅವನಿಗೆ ಪರಿಚಿತರಾದವರು ಯಾರೂ ಇರಲಿಲ್ಲ. ತನಗೆ ಯಾರೂ ಗುರುತಿಲ್ಲದೆಡೆ ತಾನು ಹೇಗಿದ್ದರೇನೆಂಬುದು ಮುತ್ತಣ್ಣನ ಅಭಿಪ್ರಾಯವಾಗಿತ್ತು. ತನ್ನ ಊರಿನಲ್ಲಿ ತಾನು ತನ್ನ ಯೋಗ್ಯತೆಗೆ ಅನುಸಾರವಾದ ಉಡುಪು ಹಾಕಿಕೊಳ್ಳಬೇಕು. "ಊರಲಿ ರಂಗ; ಪರಊರಲಿ ಮಂಗ!" ಸಿಕ್ಕಿದರೆ ಒಂದು ಪಂಚೆಯನ್ನು ಮೈಸೂರಿನಲ್ಲಿಯೇ ಕೊಳ್ಳಬೇಕೆಂಬುದು ಮುತ್ತಣ್ಣನ ಗುರಿಯಾಗಿತ್ತು. "ನಮ್ಮ ಊರಿನಲ್ಲಿಯೂ ಬ್ಲಾಕ್‌ಮಾರ್ಕೆಟ್, ಮೈಸೂರಿನಲ್ಲಿಯೂ ಬ್ಲಾಕ್‌ಮಾರ್ಕೆಟ್. ಎರಡು ರೂಪಾಯಿ ಹೆಚ್ಚಾದರೂ ಆಯಿತು," ಎಂದುಕೊಂಡು ಮುತ್ತಣ್ಣ ವಿದ್ಯುತ್‌ದೀಪ ಕಡಮೆಯಾಗಿದ್ದ ಗಲ್ಲಿಯಲ್ಲಿದ್ದ ಕಂಟ್ರೋಲ್ ಬಟ್ಟೆ ಅಂಗಡಿಯಲ್ಲಿ ಆ ಸಾಯಂಕಾಲ ಪ್ರಯತ್ನಿಸಿದ್ದ. ಸಾಮಾನ್ಯವಾಗಿ ಹಳ್ಳಿಯವರಿಗೆ ಹಾಗೆ ಹೆಚ್ಚು ಬೆಲೆಗೆ ಮಾರುತ್ತಿದ್ದ ಆ ಕಂಟ್ರೋಲ್ ವ್ಯಾಪಾರಿ, ಮುತ್ತಣ್ಣನ ಅತಿ ಬೆಳೆದ ಗಡ್ಡವನ್ನೂ ಅತಿ ಹರಿದಿದ್ದ ಪಂಚೆಯನ್ನೂ ನೋಡಿ, "ಇವನು ಹಳ್ಳಿಯವನಲ್ಲ. ಗುಪ್ತ ಪೋಲೀಸಿನವನಾಗಿರಬೇಕು. ಇವನ ವೇಷ ಹಳ್ಳಿಯವನದಕ್ಕಿಂತ ಹೆಚ್ಚು ಒರಟಾಗಿದೆ. ಆದುದರಿಂದ ಇದು ಕೃತಕ. ಇವನಿಗೆ ಹೆಚ್ಚು ಬೆಲೆಗೆ ಒಂದು ಪಂಚೆಯನ್ನು ಮಾರಿದರೆ ಅನಂತರ ಇವನ ಕೈಯಿಂದ ತಪ್ಪಿಸಿಕೊಳ್ಳಲು ಇವನಿಗೆ ನೂರು ಪಂಚೆಗಳ ಲಂಚ ಕೊಡಬೇಕಾಗುತ್ತೆ" ಎಂದುಕೊಂಡು ಪಂಚೆ ಇಲ್ಲವೇ ಇಲ್ಲವೆಂದನು.

ಮೈಸೂರನ್ನು ತಲುಪಿದ ರಾತ್ರಿಯೇ ಮುತ್ತಣ್ಣನಿಗೆ ಈ ಅನುಭವವುಂಟಾಯಿತು. ಆದುದರಿಂದ ತನಗೆ ಪಂಚೆ ಸಿಕ್ಕುವುದಿಲ್ಲವೆಂಬುದನ್ನಂತೂ ಅವನು ಖಂಡಿತ ಮಾಡಿಕೊಂಡನು. ಕತ್ತಿನ ಹತ್ತರ ಹರಿದಿದ್ದ ಬನಿಯನ್ನನ್ನೇ ಆ ರಾತ್ರಿ ಒಗೆದು ಮಾರನೆಯ ಬೆಳಿಗ್ಗೆಗೆ ಸಿದ್ಧಮಾಡಿಟ್ಟನು. ಬಟ್ಟೆ ಅಂಗಡಿಯಲ್ಲಿ ಪಂಚೆ ಸಿಕ್ಕದಿದ್ದರೂ ಮೈಸೂರಿನಲ್ಲಿ ಕ್ಷೌರದ ಅಂಗಡಿಗಳಿಗೆ ಕೊರತೆ ಇರಲಿಲ್ಲ. ಬೆಳಿಗ್ಗೆ ಎದ್ದವನೇ ಮುತ್ತಣ್ಣ "ಈ ಅನಿಷ್ಟದ ಗಡ್ಡ ಬೋಳಿಸೋಣ. ಸ್ವಲ್ಪವಾದರೂ ಮುಖ ನೋಡುವಂತಾಗಲಿ" ಎಂದು ದೊಡ್ಡ ಪೇಟೆಯಲ್ಲಿದ್ದ ಒಂದು ಭಾರಿ "ಶೇವಿಂಗ್ ಸೆಲೂನ್"ಗೆ ಹೋದನು.

ಸೆಲೂನಿನ ಬಾಗಿಲನ್ನು ಆಗ ತಾನೇ ಅಂಗಡಿಯವನು ತೆರೆದು ಬಾಗಿಲಲ್ಲಿ ನಿಂತಿದ್ದ. ಸೆಲೂನಿಗೆ ಹೆಚ್ಚಾಗಿ ಹೋಗಿ ಮುತ್ತಣ್ಣನಿಗೆ ಅಭ್ಯಾಸವಿರಲಿಲ್ಲ. ಆದರೂ ಅವನು ಒಂದು ಬಗೆಯ ಉದ್ಧಟತನದಿಂದ "ಕ್ಷೌರ ಮಾಡ್ತೀಯೇನಯ್ಯಾ?" ಎಂದ. ಅಂಗಡಿಯವನು ಮುತ್ತಣ್ಣನ ಗಡಸು ಧ್ವನಿಯನ್ನು ಕೇಳಿ, ಅವನ ಮುಖವನ್ನು ಕುರಿತು ನೋಡಿದ. ಕ್ಷೌರಕ "ಆಗಲಿ ಬನ್ನಿ" ಎಂದು ಉತ್ಸಾಹವನ್ನೇ ತೋರಿಸಲಿಲ್ಲ. ಮುತ್ತಣ್ಣನ ಹತ್ತಿರ ಕ್ಷೌರದ ಮಜೂರಿ ಇಲ್ಲವೆಂದೇ ಅವನ ಭಾವನೆ. ಹಳ್ಳಿಯ ಹಜಾಮನೂ ಹೀಗೆಯೇ. ದುಡ್ಡನ್ನು ಕಂಡ ಹೊರತು ಗಡ್ಡಕ್ಕೆ ನೀರು ತಗಲಿಸುವುದಿಲ್ಲ. ಇದನ್ನು ತಿಳಿದ ಮುತ್ತಣ್ಣ ಜೇಬಿಗೆ ಕೈಹಾಕಿ ಒಂದು ರೂಪಾಯಿಯನ್ನು ತೆಗೆದು ಅದನ್ನು ತಾನೇ ನೋಡಿಕೊಂಡಂತೆ ಮಾಡಿದರೂ ಅಂಗಡಿಯವನ ದೃಷ್ಟಿ ಅದರ ಮೇಲೆ ಬಿದ್ದ ನಂತರವೇ ರೂಪಾಯಿಯನ್ನು ಮತ್ತೆ ಜೇಬಿಗೆ ಇಳಿಯಬಿಟ್ಟ. ಅಂಗಡಿಯವನು "ಒಳಕ್ಕೆ ನಡೆಯಿರಿ. ನಿಮಗೆ ಏನು ಮಾಡಲಿ?" ಎಂದು ಕೇಳಿದ. ಮುತ್ತಣ್ಣ ಯಾವತ್ತಿನಂತೆ "ಪೂರ್ಣ ಕ್ಷೌರ" ಎಂದ. ಅಂಗಡಿಯವನು ಆರಾಣೆ ಎಂದ. ಮುತ್ತಣ್ಣ "ಸರಿ" ಎಂದು ಹೋಗಿ ಕುರ್ಚಿಯ ಮೇಲೆ ಕುಳಿತ.

ಅದು ದೊಡ್ಡ ಪೇಟೆಯ ಒಂದು ದೊಡ್ಡ ಶೇವಿಂಗ್ ಸೆಲೂನ್. ಅಂಗಡಿಯ ಯಜಮಾನ ಅಂಗಡಿಯ ಮುಂದಿದ್ದ ನಲ್ಲಿಯಲ್ಲಿ ಮುಖ ತೊಳೆಯಲು ಹೋದ. ಕುರ್ಚಿಯ ಮೇಲೆ ಸುಖವಾಗಿ ಕುಳಿತುಕೊಂಡು ಮುತ್ತಣ್ಣ, ಕಣ್ಣುಗಳನ್ನು ಅಂಗಡಿಯಲ್ಲಿದ್ದ ಪದಾರ್ಥಗಳ ಮೇಲೆ ತಿರುಗಿಸಿದ. ಮುತ್ತಣ್ಣನಿಗೆ ಕ್ಷೌರದ ಅಂಗಡಿ ಒಂದು ದೊಡ್ಡ ಅಲಂಕಾರಗೃಹವಾಗಿ ತೋರಿತು. ಒಂದು ಮುರುಕಲು ಡಬ್ಬದ ಪೆಟ್ಟಿಗೆಯಲ್ಲಿ ನಿತ್ಯ ಐವತ್ತು ಜನರ ಗಡ್ಡವನ್ನು ಹೆರೆಯುವ ಹಿಡಿಸವೆದ ಮೊಂಡುಕತ್ತಿಯ ನಮ್ಮೂರ ಹಜಾಮ, ಅವನ ಮಡಿದುಕೊಂಡ ಬಾಯಿಯ ನೀರಿನ ತೂತು, ಬಟ್ಟಲು, ಅವನು ನೀರನ್ನು ಗಡ್ಡಕ್ಕೆ ಕೈಯಿಂದ ಸವರುವಾಗ ಗಡ್ಡದ ಮೇಲೂ ಕೆನ್ನೆಯ ಮೇಲೂ ಮೂಗಿನ ಮೇಲೂ ಅವನ ಉಗುರಿನ ಗಾಯಗಳು, ಕತ್ತಿ

ಯನ್ನು ಅವನು ತನ್ನ ಕಜ್ಜಿ ಮೈಗೂ ಕೈಕಾಲುಗಳಿಗೂ ತಿಕ್ಕಿಕೊಂಡು ಅದರ ಜತೆಯಲ್ಲಿ ತನ್ನ ರೋಗವನ್ನೆಲ್ಲ ನಮ್ಮ ಮೈಗೆ ಅಂಟಿಸುವುದು, ಮೊಂಡುಕತ್ತಿಯಿಂದ ನಮ್ಮ ತಲೆಯ ಮೇಲೆ ಮಾರಿ ಜಾತ್ರೆ — ನಮ್ಮ ಊರಿನಲ್ಲಿ ಹಜಾಮನ ಈ ನರಕವನ್ನನುಭವಿಸಿದ್ದ ಮುತ್ತಣ್ಣನಿಗೆ ತಾನು ಕುಳಿತಿದ್ದ ಶೇವಿಂಗ್ ಸೆಲೂನ್ ಮನೋಹರ ಹರ್ಮ್ಯವಾಗಿ ತೋರಿತು. ಅಂಗಡಿಯಲ್ಲಿಯಂತೆ ಜೋಡಿಸಿರುವ ಆ ಸಾಬೂನು ರಾಶಿಗಳು, ಫೇಸ್‌ಪೌಡರು, ಸ್ನೋ ಡಬ್ಬಿಗಳು, ಯಾವೆಡೆ ನೋಡಿದರೂ ಆಳಾಳುದ್ದದ ನಿಲುಗನ್ನಡಿಗಳು, ನೀರನ್ನು ಝುರ್ರನೆ ಬಿಡುವ ಆ ಕೊಳವೆಯ ಸೀಸೆ, ಮೃದುವಾದ ಬ್ರಷ್, ಆಕರ್ಷಕವಾದ ಕುರ್ಚಿ ಮೇಜುಗಳು; ಆದರೆ ಮುತ್ತಣ್ಣನಿಗೆ ಎಲ್ಲಕ್ಕಿಂತ ಹೆಚ್ಚಾಗಿ ಹಿತವಾಗಿ ಕಂಡುದು ಗಾಜಿನ ಬೀರುಗಳೊಳಗೆ ಬೆಣ್ಣೆಯಂತೆ, ಮೃದುವಾದ ತುಪ್ಪಳದಂತೆ ಸಾಲುಸಾಲಾಗಿ ಜೋಡಿಸಿಟ್ಟದ್ದ ಇಸ್ತ್ರಿಮಾಡಿದ್ದ ಅಸಂಖ್ಯಾತ ಕ್ಷೌರದ ವಸ್ತ್ರಗಳು. ಬಟ್ಟೆಯ ಕಂಟ್ರೋಲ್ ಕಾಳಸಂತೆಯ ದೆಸೆಯಿಂದ ಮೈ ಮುಚ್ಚುವಷ್ಟು ಬಟ್ಟೆ ಕೂಡ ದೊರೆಯದಿದ್ದ ಮುತ್ತಣ್ಣನಿಗೆ ಆ ಶೇವಿಂಗ್ ಸೆಲೂನ್ ಒಂದು ಸಣ್ಣ ಬಟ್ಟೆ ಅಂಗಡಿಯಾಗಿಯೇ ತೋರಿತು. ಮುತ್ತಣ್ಣ ಉಳಿದ ಕನ್ನಡಿ ಸೋಪುಗಳನ್ನೆಲ್ಲ ಮರೆತು ಆಸೆಯಿಂದ "ಇಲ್ಲಿ ಎಷ್ಟು ಚೌಕಗಳು, ದುಪಟಿಗಳು ಇರಬಹುದು? ಇವುಗಳ ಕಂಟ್ರೋಲ್ ಬೆಲೆ ಎಷ್ಟಾಗಬಹುದು? ಕಾಳಸಂತೆ ಬೆಲೆ ಎಷ್ಟಾಗಬಹುದು? ಇಷ್ಟು ಬಟ್ಟೆ ಸಿಕ್ಕಿದರೆ ನಾನು ಎಷ್ಟು ದಿವಸ ಕಂಟ್ರೋಲಿನವರ ಅಪ್ಪನಾಗಿ ಅವರ ಹಂಗಿಲ್ಲದೆ ಜೀವಿಸಬಹುದು?" ಈ ಸುಖಸ್ವಪ್ನಗಳಲ್ಲಿ ಗಾಳಿಗೋಪುರವನ್ನು ಕಟ್ಟುತ್ತಾ ಸುಖವಾಗಿ ಮೃದುವಾದ ಕುರ್ಚಿಯ ಮೇಲೆ ಕುಳಿತಿದ್ದನು.

ಆ ವೇಳೆಗೆ ಅಂಗಡಿಯವನು ಮುಖ ತೊಳೆದುಕೊಂಡು ಬಂದು ಎದುರಿಗಿದ್ದ ದೇವರ ಪಟಕ್ಕೆ ಕೈ ಮುಗಿದು, ಬೀರುವನ್ನು ತೆಗೆದು ಅಗಸನಿಂದ ಬಂದಿದ್ದ ಇಸ್ತ್ರಿ ಮಾಡಿದ್ದ ಒಂದು ಹೊಸ ದುಪಟಿಯನ್ನು ತೆಗೆದು ಮುತ್ತಣ್ಣನಿಗೆ ಕತ್ತಿನವರೆಗೆ ಹೊದಿಸಿ, ಅದರ ತುದಿಗಳನ್ನೆಲ್ಲ ಹಿಂದಕ್ಕೆ ಸಿಕ್ಕಿಸಿದನು. ಅನಂತರ ಮುತ್ತಣ್ಣನ ಡೋರ್ ಮ್ಯಾಟ್ (Door Mat) ನಂತಿದ್ದ ಗಡ್ಡಕ್ಕೆ ಚನ್ನಾಗಿ ನೊರೆ ನೊರೆಯಾಗಿ ಸಾಬೂನನ್ನು ಹಾಕಿ "ಸ್ವಲ್ಪ ನೆನೆಯಲಿ ಬಂದೆ" ಎಂದು ಹೇಳಿ ಮಗ್ಗುಲಲ್ಲಿದ್ದ ಹೋಟಲಿಗೆ ಕಾಫಿ ಕುಡಿಯಲು ಹೋದನು. ಅವನು ಅರ್ಧ ಮುಕ್ಕಾಲು ಕಾಫಿ ಕುಡಿದು ಜೇಬಿನಿಂದ ಒಂದು ಬೀಡಿಯನ್ನು ತೆಗೆದು ಹೊತ್ತಿಸಿಕೊಳ್ಳುತ್ತಿರುವಾಗ ಮುತ್ತಣ್ಣನಿಗೆ ಇದಕ್ಕಿದ್ದಂತೆ ಒಂದು ಯೋಚನೆ ಹೊಳೆಯಿತು. ಮುತ್ತಣ್ಣ ಕುರ್ಚಿಯಿಂದ ಎದ್ದವನೇ ನೆಟ್ಟನೆ ಬಾಗಿಲಿಗೆ ಬಂದು ಆಚೆ ಈಚೆ ನೋಡಿ ಹೊದ್ದಿದ್ದ ದುಪಟಿಯೊಂದಿಗೆ ಬೀದಿಯಲ್ಲಿ ಓಡತೊಡಗಿದನು. ಅವನನ್ನು ನೋಡಿ ಅಂಗಡಿಯವನು ಲೋಟದಲ್ಲಿ ಉಳಿದಿದ್ದ ಕಾಫಿಯನ್ನು ಅಲ್ಲಿಯೇ ಬಿಟ್ಟು ಬೀಡಿಯನ್ನು ಒಗೆದು ಅವನ ಹಿಂದೆ ಓಡತೊಡಗಿದನು. ಪ್ರಾರಂಭದಲ್ಲಿ ಕ್ಷೌರಕನು ಬೇಗ ಬೇಗ ಹತ್ತರ ಹತ್ತಿರಕ್ಕೆ ಬರುತ್ತಿದ್ದುದನ್ನು ಕಂಡು ಮುತ್ತಣ್ಣನು "ಅಯ್ಯಯ್ಯಪ್ಪ ಹೊಡಿಯೋಕೆ ಬರ್‍ತಾನಲ್ಲಪ್ಪ" ಎಂದು ಕಿರಿಚಿದನು. ಬೀದಿಯಲ್ಲಿ ಹೋಗುತ್ತಿದ್ದ ನಾಲ್ಕಾರು ಜನ ಅವನಿಗೂ ಹಜಾಮನಿಗೂ ಮಧ್ಯೆ ಬಂದು "ಬೇಡ, ಬೇಡ ಬಿಡು. ಹೋಗಲಿ ಪಾಪ" ಎಂದು ಹಜಾಮನನ್ನು ಹಿಡಿದು ತಬ್ಬಿ ಅಲ್ಲಾಡದಂತೆ ನಿಲ್ಲಿಸಿಬಿಟ್ಟರು. ಮುಂದಲಗಳಿಗೆಯಲ್ಲಿ ಅಲ್ಲಿ ನೂರಾರು ಜನರ ಗುಂಪು ಸೇರಿತು. ಹಜಾಮನನ್ನು ಹಿಂದಕ್ಕೆ ತಳ್ಳಿಕೊಂಡು ಹೋಗಿ ಅವನ ಅಂಗಡಿಯ ಕುರ್ಚಿಯ ಮೇಲೆ ಅವನನ್ನು ಕೂರಿಸಿ, ಅವನು ಏದುತ್ತಿದ್ದುದರಿಂದ ಗುಂಪಿನಲ್ಲಿದ್ದವರು ಅವನ "ಗಲ್ಲ" ದಿಂದಲೆ ದುಡ್ಡು ತೆಗೆದು ಅವನಿಗೆ ಕಾಫಿ ಕುಡಿಸಿದರು. ಜೋರಾಗಿ ಓಡಿದ್ದುದರಿಂದ ಹಜಾಮನಿಗೆ ಮಾತನಾಡುವುದಕ್ಕೆ ಸಹ ಉಸಿರು ಇರಲಿಲ್ಲ. ಅವನು ಸುಧಾರಿಸಿಕೊಂಡು ನಿಧಾನವಾಗಿ ತನ್ನ ಕತೆಯನ್ನು ಹೇಳಿದಾಗ ಸುತ್ತು ನೆರೆದಿದ್ದವರು ಬಿದ್ದು ಬಿದ್ದು ನಕ್ಕರು. ಆ ವೇಳೆಗೆ ಮುತ್ತಣ್ಣ ಮನೆ ಸೇರಿ ಎಷ್ಟೋ ಹೊತ್ತಾಗಿತ್ತು.

ನಾಲ್ಕು ದಿನಗಳ ನಂತರ ಮುತ್ತಣ್ಣ ನಮ್ಮೂರಿಗೆ ಬಂದು ಶೇವಿಂಗ ಸಲೂನಿನ ದುಪಟಿಯನ್ನು ನಮ್ಮ ಊರಿನ ಕಂಟ್ರೋಲ್ ವ್ಯಾಪಾರಿಗಳಿಗೆ ತೋರಿಸಿದಾಗ ಅವರು ಅದರ ಬೆಲೆ ಮೂರು ರೂಪಾಯಿ ಎಂದರು. ಮರುದಿನ ಮುತ್ತಣ್ಣ ಮಾಡರ್ನ್ ಶೇವಿಂಗ್ ಸಲೂನ್ ಹೆಸರಿಗೆ ಮೂರು ರೂಪಾಯಿ ಮನಿಆರ್ಡರ್ ಮಾಡಿ "ನಾನು ನಿಮ್ಮ ಅಂಗಡಿಯಿಂದ ಹೊರಟಾಗ ನಿಮ್ಮ ದುಪಟಿ ನನ್ನ ಹೆಗಲಿನ ಮೇಲೆಯೇ ಉಳಿದಿತ್ತು. ಅದರ ಬೆಲೆ" ಎಂದು ಬರೆದನು. ಅಂಗಡಿಯವನಿಗೆ ಮನಿಆರ್ಡರ್ ತಲಪಿ ಅದರ ರಸೀದಿಯ ಜತೆಯಲ್ಲಿ ಮುತ್ತಣ್ಣನಿಗೆ ಈ ಕಾಗದ ಬಂತು. "ಸ್ವಾಮೀ ನಿಮ್ಮ ಮನಿಆರ್ಡರ್ ಬಂತು– ನಾನು ಮೂರು ವರುಷಗಳ ಕೆಳಗೆ ಒಂದೂ ಮುಕ್ಕಾಲು ರೂಪಾಯಿ ಕೊಟ್ಟಿದ್ದ ದುಪಟಿಗೆ ನೀವು ಈಗ ಮೂರು ರೂಪಾಯಿ ಕಳುಹಿಸಿದುದರಿಂದ ನನಗೆ ದುಡ್ಡಿನ ದೃಷ್ಟಿಯಿಂದ ಲಾಭವೇ ಆಯಿತು. ಆದರೆ ಮತ್ತೆ ಮೈಸೂರಿಗೆ ಬಂದಾಗ, ಮರೆತಾದರೂ ನನ್ನ ಸಲೂನಿಗೆ ಎಲ್ಲಿಯಾದರೂ ತಲೆ ಹಾಕೀರಿ! ಹಾಕಿದರೆ ನಿಮ್ಮ ಕಿವಿಯನ್ನೋ ಮೂಗನ್ನೋ ಇಲ್ಲಿ ಬಿಟ್ಟು ಹೋಗಬೇಕಾದೀತು. ಎಚ್ಚರಿಕೆ!"

ಮುತ್ತಣ್ಣ ಆ ದುಪಟಿಯನ್ನು ಇನ್ನೂ ಇಟ್ಟುಕೊಂಡಿದ್ದಾನೆ.

ನೀವು

ಧಾರವಾಡಕ್ಕೆ ಬರಬೇಕಾಗಿದೆಯೇ?

ಹಾಗಾದರೆ ಸಂದರ್ಶಿಸಲು ಮರೆಯದಿರಿ

ಧಾರವಾಡ ಗೆಸ್ಟ ಹೌಸ

ಶ್ರೇಷ್ಠ ತರಗತಿಯ

ಬೋರ್ಡಿಂಗ ಮತ್ತು ಲಾಜಿಂಗ ಹೌಸ

ಅಚ್ಚುಕಟ್ಟಾದ ಊಟದ ಮತ್ತು ಉಳಿದುಕೊಳ್ಳುವ ವ್ಯವಸ್ಥೆ.

ದೀಪಾವಳಿಯು

ಸರ್ವರಿಗೂ ಸುಖಪ್ರದವಾಗಲಿ!

ಮಂತ್ರವಾಣಿ

(ವೇದಕಾಲದ ಒಂದು ರೂಪಕ)

❋

ಪಾತ್ರಗಳು

ತೆರೆಯ ಮುಂದೆ :

೧ ಮನು : ಆರ್ಯಜನಾಂಗದ ಧುರೀಣ.
೨ : ಆತನ ಪುರೋಹಿತ.
೩ ಆಕುಲಿ : ಆರ್ಯರಿಗೆ ದ್ರೋಹಿಯಾಗಿ ಆರ್ಯವಿರೋಧಿ ಅಸುರರನ್ನು ಕೂಡಿದ ಬ್ರಾಹ್ಮಣ.
೪ ಅಸುರನಾಯಕ

ತೆರೆಯ ಹಿಂದೆ :

೧ ವೃಷಭ ರಾಜ : ಮನುವಿನ ಎತ್ತು.
೨ ಮನಾವಿ : ಮನುವಿನ ಧರ್ಮಪತ್ನಿ.

❋

ಒಂದನೆಯ ದೃಶ್ಯ

ಭವ್ಯವಾದ ಒಂದು ಆಶ್ರಮ. ಅದರ ಮಧ್ಯದಲ್ಲಿ ವಿಶಾಲವಾದ ಒಂದು ಮಂಟಪ. ಮಂಟಪದ ಒಂದು ಮೂಲೆಯಲ್ಲಿ ದರ್ಭೆಯ ಕಟ್ಟುಗಳನ್ನು ಮತ್ತು ಮಣ್ಣಿನ ಚಿಕ್ಕದೊಡ್ಡ ಪಾತ್ರೆಗಳನ್ನು ಓರಣವಾಗಿ ಇರಿಸಿದ್ದಾರೆ. ಇನ್ನೊಂದು ಮೂಲೆಯಲ್ಲಿ ಜವೆಗೋದಿಯ ಹಿಟ್ಟಿನ ಚೀಲಗಳು, ತುಪ್ಪದ ಪಾತ್ರೆಗಳು ಮತ್ತು ಗೂಟದಂತಹ ಮರದ ಕಂಬಗಳನ್ನು (ಯೂಪಗಳನ್ನು) ಒಟ್ಟಿದ್ದಾರೆ. ಮತ್ತೊಂದು ಕಡೆಯಲ್ಲಿ ಸೋಮಬಳ್ಳಿಯ ಹೊರೆಗಳನ್ನು ಮತ್ತು ಅರಳಿ ಕಟ್ಟಿಗೆಯ ಕಟ್ಟುಗಳನ್ನು ಶೇಖರಿಸಿದ್ದಾರೆ.

ಮಂಟಪದ ನಡುವೆ ಸಾಧಾರಣ ಒಂದು ಅಡಿ ಎತ್ತರದ ಜಗಲಿ. ಅದರ ಮಧ್ಯಭಾಗದಲ್ಲಿ ವರ್ತುಲ, ಅರ್ಧವರ್ತುಲ ಮುಂತಾದ ಕುಂಡಗಳನ್ನು ರಚಿಸಿದ್ದು, ಅವುಗಳಲ್ಲಿ ನಿಗಿನಿಗಿಯಾದ ಕೆಂಡವು ಜ್ವಲಿಸುತ್ತಲಿದೆ. ಇದೀಗ ಆಜಾನುಬಾಹು, ತೇಜಸ್ವಿ ಪುರುಷನೊಬ್ಬನು ಪ್ರಸನ್ನ ಗಭೀರ ಮುದ್ರೆಯಿಂದ ಮಂತ್ರಗಳನ್ನು ಪಠಿಸುತ್ತ ಮೆಲ್ಲನೆ ಅಗ್ನಿಕುಂಡಗಳ ಹತ್ತಿರಕ್ಕೆ ಬರುವನು. ಆತನ ಎತ್ತರ ಸುಮಾರು ಏಳಡಿ; ಹುರಿಕಟ್ಟಿನ ಮೈ; ಅಂಗಗಳು ಸ್ಥೂಲವಲ್ಲದಿದ್ದರೂ ಕೃಶವಾಗಿಲ್ಲ. ಸರಳವಾದ ಮೂಗು; ಕಾಂತಿ ತುಂಬಿದ ಕಣ್ಣುಗಳು. ತಲೆಯ ಮೇಲೆ ಜಟಾಭಾರ. ಬಳಿದುಕೊಂಡ ಭಸ್ಮದ ಬಿಳಿಯ ಬಟ್ಟೆಗಳು ಮೈಮೇಲೆ ಎದ್ದು ಕಾಣುತ್ತಿವೆ. ದಪ್ಪನೆಯ ಯಜ್ಞೋಪವೀತವು ಎಡಭುಜದ ಮೇಲಿಂದ ಕೆಳಗೆ ಬಲಪಕ್ಕೆಯ ಕಡೆಗೆ ಹಾಯ್ದು ಹೋಗಿದೆ. ಸೊಂಟಕ್ಕೆ ಗಂಡು ಎರಳೆಯ ಚರ್ಮವು ಕಟ್ಟಿದೆ. ಅಂತಹ ಇನ್ನೊಂದು ತೊಗಲು ಬೆನ್ನಿಗೆ ಸುತ್ತಿದೆ. ಕೈಯಲ್ಲಿ ಉದ್ದನೆಯ ದರ್ಭೆಯ ಕಡ್ಡಿಗಳು ಒಪ್ಪುತ್ತಲಿವೆ. ಈತನು ಮನು.

ಅಗ್ನಿಯ ಬಳಿ ಬಂದ ಈತನು ದರ್ಭಾಸನದ ಮೇಲೆ ಕುಳಿತುಕೊಳ್ಳುವನು. ಭಕ್ತಿಭಾವನೆಯಿಂದ ಅಗ್ನಿದೇವನನ್ನು ವಂದಿಸಿ, ಗಂಧ, ಪುಷ್ಪ, ಅಕ್ಷತೆ, ಮೊದಲಾದ ಮಂಗಲ ದ್ರವ್ಯಗಳಿಂದ ಪೂಜೆಯನ್ನು ಸಲ್ಲಿಸುವನು. ಬಳಿಕ ಸ್ವಲ್ಪ ಹೊತ್ತು ಧ್ಯಾನಮಗ್ನನಾಗುವನು. ಆ ಮೇಲೆ ಈ ಮುಂದು ವಿವರಿಸಿದ ಮಂತ್ರಗಳನ್ನು ಗಟ್ಟಿಯಾಗಿ ಉಚ್ಚರಿಸುತ್ತ ಅಗ್ನಿ ಪ್ರದಕ್ಷಿಣೆ ಮಾಡುವನು.

ಮುನ್ನುಡಿ

ಈ ರೂಪಕದ ಮೂಲವಸ್ತು ಶತಪಥ ಬ್ರಾಹ್ಮಣದಲ್ಲಿಯ ಒಂದು ಐತಿಹ್ಯ. ಕೆಲವು ಸಾಲುಗಳಲ್ಲಿ ರೂಪುಗೊಂಡ ಆ ಕಥೆ ಇಲ್ಲಿ ಹಲವು ದೃಶ್ಯಗಳಲ್ಲಿ ಚಿತ್ರಿತವಾಗಿದೆ. ರೂಪಕಕ್ಕೆ ಅನುಕೂಲವಾಗುವಂತೆ ಕೆಲವು ಮಾರ್ಪಾಟಗಳನ್ನು ಮಾಡಿಕೊಂಡಿದ್ದರೂ ಕಥೆಯ ಹೃದಯವು ವಿಕೃತವಾಗಿಲ್ಲ. ಆ ಪ್ರಾಚೀನ ಕಾಲದ ಧಾರ್ಮಿಕ ಸಾಮಾಜಿಕ ನಂಬುಗೆಗಳ ಒಂದು ಚಿಕ್ಕ ಪ್ರತೀಕವೇ ಈ ಕಥೆ ಎಂದು ಹೇಳಬಹುದು.

★

ಲೇಖಕ : **ದೇಸಾಯಿ ಪಾಂಡುರಂಗರಾಯರು**

ಹತ್ತು ನೂರಾ ಮೊಗದ
ಹತ್ತು ನೂರಾ ಎವೆಯ।
ಹತ್ತು ನೂರಾ ಅಡಿಯ
ಪುರುಷನವನು ॥

ಎತ್ತಲೂ ಭೂಮಿಯನು
ಸುತ್ತಿ ತಾ ವಿಶ್ವಾತ್ಮ।
ಹತ್ತು ಅಂಗುಲ ಮೀರಿ
ಮೇಲೆ ನಿಂತಹನು ॥

ಹಿಂದುವಾ ಪುರುಷನೇ
ಮುಂದುವಾ ಪುರುಷನೇ।
ಎಲ್ಲವೂ ಪುರುಷನೇ
ಬಲ್ಲಿದಾ ವಿಶ್ವಾತ್ಮ ॥

ಯಜ್ಞದಿಂ ಪುರುಷನನು ಪೂಜಿಪರು ಸುರರು
ಯಜ್ಞದಲೆ ನಿಂತಿಹರು ಸ್ಥಾವರರು ಚಾರರು।
ಯಜ್ಞವೇ ಪರಸತ್ಯ ಯಜ್ಞವೇ ಆನಂದ
ಯಜ್ಞವೇ ಜೀವಿಗಳ ಜೀವನವು ಹೇ ಕಂದ ॥

ಪೂಜಿಸುವೆ ಅಗ್ನಿಯನು ಯಜ್ಞನಾಯಕನನ್ನು
ರಾಜಿಸುವ ಸಖನನ್ನು ಯಜ್ಞವಾಹಕನನ್ನು।
ತರಿದು ನೋವನು ಜಗನ ಪೊರೆಯುತಿಹ ಮಹಿಮನನು
ಪರಿಪರಿಯ ಹಿತಗಳನು ತರುತಿರುವ ದೇವನನು ॥

ಮನು (ತನ್ಮಯನಾಗಿ) : ಯಜ್ಞ, ಯಜ್ಞ, ಯಜ್ಞ! ಯಜ್ಞದಿಂದಲೇ ಸಮಸ್ತ ಪ್ರಪಂಚವು. ಈ ಲೋಕವು ಸೃಷ್ಟಿಯಾದುದು ಯಜ್ಞದಿಂದ. ಈ ಲೋಕವು ಬಾಳಿರುವುದು ಯಜ್ಞದಿಂದ. ಯಜ್ಞಪುರುಷನ ಪ್ರಸಾದವನ್ನು ಪಡೆಯುವುದೇ ನಮ್ಮ ಜೀವನದ ಗುರಿ.

(ಸ್ವಲ್ಪ ಎಚ್ಚತ್ತವನಂತೆ) ಇನ್ನು ಇದೀಗ ಯಜ್ಞವನ್ನು ಪ್ರಾರಂಭಿಸುವ. ಪುರೋಹಿತರು ಎಲ್ಲಿ?

(ಗಟ್ಟಿದನಿಯಿಂದ) ಪುರೋಹಿತರೆ! ಇಂದಿನ ಯಜ್ಞದ ಸಲಕರಣೆಗಳೆಲ್ಲವು ಸಿದ್ಧವಾಗಿವೆಯಷ್ಟೆ? ಇದೀಗ ಯಜ್ಞವನ್ನು ಪ್ರಾರಂಭಿಸಲು ತಡವೇಕೆ?

[ಅತ್ತಿತ್ತ ನೋಡುವಾಗ ಪುರೋಹಿತನು ಕಾಣುವುದಿಲ್ಲ.]

(ಅದೇ ದನಿಯಲ್ಲಿ) ಎಲ, ಇದೇನು! ನಮ್ಮ ಪುರೋಹಿತರೆಲ್ಲಿ? ಆರ್ಯ ಪುರೋಹಿತರೇ! ಓ ನಮ್ಮ ಆರ್ಯ ಪುರೋಹಿತರೆ! ಎಲ್ಲಿಯೂ ಕಾಣೆವಲ್ಲ ಅವರನ್ನು !

[ದನಿಯನ್ನು ಕುಗ್ಗಿಸುತ್ತ ಸ್ವಲ್ಪ ವಿರಸವಾದಂತೆ ತೋರುತ್ತ ಜಪ ಮಾಡುವ ರೀತಿಯಿಂದ "ಪುರೋಹಿತರೆ, ಪುರೋಹಿತರೆ," ಎಂದು ೫-೬ ಸಲ ಕೆಳದನಿಯಿಂದ ಕೂಗಿಕೊಳ್ಳುವನು. ಕೆಲ ನಿಮಿಷಗಳು ಕಳೆಯಲು ಪುರೋಹಿತನು ಆವಸರವಾಗಿ ಬಂದು ಹತ್ತಿರ ನಿಲ್ಲುವನು. ಮನು ಅವರನ್ನು ನೋಡಿ ಹಿಗ್ಗುವನು.]

(ಸಂತೋಷದ ಉಬ್ಬಿನಿಂದ) ಬಂದುಬಿಟ್ಟಿರಾ, ಆರ್ಯಪುರೋಹಿತರೆ! ಇನ್ನು ತಡವೇಕೆ? ಇಂದಿನ ಯಜ್ಞವನ್ನು ಪ್ರಾರಂಭಿಸಬಹುದಷ್ಟೆ?

[ಪುರೋಹಿತನು ಕೆಲ ನಿಮಿಷ ಮೌನವಾಗಿ ನಿಲ್ಲುವನು. ಬಳಿಕ—]

ಪುರೋಹಿತ (ತಡವರಿಸುವ ದನಿಯಿಂದ) : ಪ್ರಾರಂಭಿಸಬಹುದು ಯಜಮಾನರೇ ! ಆದರೆ —

ಮನು : 'ಆದರೆ' ಏನು ಆರ್ಯರೆ! ಅನುಮಾನವೇಕೆ?

ಪುರೋ : ಅಂ— ಏನೂ ಇಲ್ಲ; ಅಂ—; ಎಲ್ಲ ಸಲಕರಣೆ ಸಿದ್ಧವಾಗಿಯೇ ಇದೆ. (ಅತ್ತಿತ್ತ ಕತ್ತನ್ನು ತಿರುಹುತ್ತ) ಈ ದರ್ಭೆಯ ರಾಶಿ; ಆ ಸೋಮಬಳ್ಳಿಯ ಹೊರೆಗಳು! ಆದರೆ ಯಜ್ಞಕ್ಕೆ ಆವಶ್ಯಕವಾದ ಮುಖ್ಯ ವಸ್ತು ಮಾತ್ರ—

ಮನು: ಮುಖ್ಯ ವಸ್ತು ಮಾತ್ರ— ಅಂ! ಏನದು? ಅದು ಇನ್ನೂ ದೊರೆತಿಲ್ಲವೆಂದು ನಿಮ್ಮ ಅಭಿಪ್ರಾಯವೆ?

ಪುರೋ (ಹೆದರುತ್ತ) : ಅಂ— ಅಂ- ಅಹುದು ಯಜಮಾನರೇ! ಅದು ಮಾತ್ರ ಇನ್ನೂ ದೊರೆತಿಲ್ಲವೆಂದು ಅತಿ ವಿಷಾದದಿಂದ ತಿಳಿಸಬೇಕಾದ ದುರ್ಭಾಗ್ಯವು ನನ್ನ ಪಾಲಿಗೆ ಬಂದಿದೆ.

ಮನು (ಸ್ವಲ್ಪ ರೇಗಿದಂತೆ) : 'ಏನೂ ಚಿಂತೆ ಬೇಡ. ಅದನ್ನೆಲ್ಲ ನಾನು ನೋಡಿಕೊಳ್ಳುತ್ತೇನೆ' ಎಂದು ನೀವು ನನಗೆ ನಂಬಿಕೆಯನ್ನು ಕೊಡಲಿಲ್ಲವೆ? ಹೀಗಿದ್ದೂ—

ಪುರೋ: ನಿಜ, ನಿಜ. ಆದರೆ ಮಾಡುವುದೇನು? ಅದು ದೊರೆಯಬೇಕಷ್ಟೆ? ಕಳೆದ ದಿನವೆಲ್ಲ ಅದೇ ಕೆಲಸದಲ್ಲಿ ತೊಡಗಿದ್ದೆನು. ಇಂದು ತಡವಾಗಲಿಕ್ಕೂ ಇದುವೇ ಕಾರಣ. ಎಷ್ಟೊಂದು ಹುಡುಕಿದೆನು! ಎಲ್ಲೆಲ್ಲಿಯೋ ಸುತ್ತಿದೆನು! ಎಲ್ಲವು ವ್ಯರ್ಥವಾಯಿತು.

ಮನು: ಏನು! ಒಂದು ಯಜ್ಞಪಶುವನ್ನು ದೊರಕಿಸಲಿಕ್ಕೆ ಆಗಲಿಲ್ಲವೆ?

ಪುರೋ (ದುಃಖದ ದನಿಯಿಂದ): ಇಲ್ಲ ಆರ್ಯರೆ! ಹೀಗೆ ಎಂದೂ ಆಗಿರಲಿಲ್ಲ. ಹೋತುಗಳೆನ್ನಿರಿ, ಹಕ್ಕಿಗಳೆನ್ನಿರಿ, ಹಸುವೆನ್ನಿರಿ, ಏನಾದರೊಂದು ಆಗಾಗ ದೊರೆಯುತ್ತಲೇ ಇದ್ದಿತು. ಇಂತಹ ಅಭಾವವು ಒಂದು ಸಲವೂ ಉಂಟಾಗಿರಲಿಲ್ಲ.

ಮನು (ಕೆಲ ನಿಮಿಷ ಯೋಚನೆಯಲ್ಲಿ ಮುಳುಗಿ ಮೌನವಾಗಿದ್ದು, ಆ ಮೇಲೆ ಮಾತಿಗೆ ಮನವೆಳಸಿ ಏರುವ ದನಿಯಿಂದ) : ಯಜ್ಞ, ಯಜ್ಞ! ಯಜ್ಞಕ್ಕೆ ತಡೆಯುಂಟಾಗಕೂಡದು. ನನ್ನ ಜೀವದಲ್ಲಿ ಜೀವವಿರುವ ವರೆಗೆ ಯಜ್ಞಸಂಸ್ಥೆಯನ್ನು ನಾನು ಕಾಪಾಡಿಕೊಂಡು ಹೋಗಲೇಬೇಕು. ಇದಕ್ಕಾಗಿ ನನ್ನ ಸರ್ವಸ್ವವನ್ನು ಹೋಮಿಸಲು ಸಿದ್ಧನು. ಕೊನೆಗೆ ನನ್ನ ಪ್ರಾಣಗಳ ಬಲಿದಾನ ಮಾಡೇನು! ಪುರೋಹಿತರೆ, ಇತ್ತ ನೋಡಿರಿ. ಇನ್ನೊಮ್ಮೆ ಹೀಗೇ ಸುತ್ತಿಕೊಂಡು ಹೋಗಿ ಎಲ್ಲಿಯಾದರೂ ಒಂದು ತಕ್ಕ ಪ್ರಾಣಿಯನ್ನು ದೊರಕಿಸಿಕೊಂಡು ಬನ್ನಿ. ಅದು ವರೆಗೆ ನಾನು ಇಲ್ಲಿಯೆ ಕಾದಿರುವೆ. ಇಂದಿನ ಯಜ್ಞ ಸಂಕಲ್ಪವು ಸಫಲವಾಗಲೇಬೇಕು.

[ಪುರೋಹಿತನಿಗೆ ಇಷ್ಟವಿಲ್ಲ. ಆದರೂ ನಿರುಪಾಯವಾಗಿ ಹೊರಟು ಹೋಗುವನು. ಮನು ಅಗ್ನಿಯ ಮುಂದೆ ಕುಳಿತುಕೊಂಡು ಆಳವಾದ ಆಲೋಚನೆಯಲ್ಲಿ ಮಗ್ನನಾಗುವನು. 'ಯಜ್ಞ, ಯಜ್ಞ, ಯಜ್ಞ' ಎಂದು ಜಪ ಮಾಡುವನು. ಯಜ್ಞಪುರುಷ ಮತ್ತು ಅಗ್ನಿಯನ್ನು ಕುರಿತು ಮಂತ್ರಗಳನ್ನು ಪಠಿಸುವನು. ಸುಮಾರು ಒಂದು ಗಂಟೆಯಷ್ಟು ಹೊತ್ತು ಕಳೆದಿರಬಹುದು. ಅಷ್ಟರಲ್ಲಿ ಹಿಂದೆ ಯಾರೋ ಬರುತ್ತಿರುವ ಸುಳಿವು ಗೊತ್ತಾಗುವುದು.]

ಮನು (ಹಿಂದಿರುಗಿ ನೋಡದೆ, ಇನ್ನೂ ತನ್ಮಯತೆಯಲ್ಲಿ) : ಪುರೋಹಿತರೆ, ಎಷ್ಟು ಬೇಗ ಬಂದುಬಿಟ್ಟಿರಿ, ನೀವು! ಹೋದ ಕೆಲಸವು ಹಣ್ಣು ತಾನೆ?

[ಬರುವವನು ಮಾತನಾಡದೆ ಹತ್ತಿರಕ್ಕೆ ಬರಲು, ಮನು ಅತನನ್ನು ದಿಟ್ಟಿಸಿ ನೋಡುವನು. ಆತನು ಪುರೋಹಿತನಲ್ಲ ಎಂಬುದನ್ನು ಲಕ್ಷಿಸಿ ಖಿನ್ನನಾಗುವನು. ಮತ್ತೆ ಮುಖವೆತ್ತಿ ಆಶ್ಚರ್ಯಮುದ್ರೆಯಿಂದ ಆತನನ್ನು ನೋಡಿ ಮಾತನಾಡಿಸುವನು.]

ಯಾರಯ್ಯ ನೀವು? ಹೊಸಬರಾಗಿ ಕಾಣುತ್ತೀರಿ. ನಮ್ಮ ಪುರೋಹಿತರೇ ಬಂದುಬಿಟ್ಟರೆಂದು ಬಗೆದಿದ್ದೆನು. ಈ ಯಜ್ಞಸಮಯದಲ್ಲಿ ಆಗಂತುಕರಾಗಿ ಬಂದವರು ಯಾರಯ್ಯ ನೀವು? ಬನ್ನಿ.

ಬಂದವನು: ಆಗಂತುಕನಲ್ಲ ಸ್ವಾಮೀ, ನಾನು! ತಮ್ಮೀ ಯಜ್ಞಸಮಯದಲ್ಲಿ ಬರಲಿಕ್ಕೆ ಅರ್ಹನೆಂದೇ ಬರುವ ಧೈರ್ಯವನ್ನು ಮಾಡಿದ್ದೇನೆ.

ಮನು (ತಲೆಯಲ್ಲಾಡಿಸುತ್ತ) : ತಮ್ಮ ಮಾತಿನ ಅಭಿಪ್ರಾಯವಾಗಲಿಲ್ಲ ನನಗೆ!

ಬಂದವ: ಗೂಢವೇನಿದೆ ಅದರಲ್ಲಿ? ಸ್ವಾಮೀ, ತಾವು ತಮ್ಮ ಆರ್ಯ ಪುರೋಹಿತರಿಗಾಗಿ ದಾರಿ ಕಾಯುತ್ತಿರುವಿರಷ್ಟೆ? ಅವರ ಸ್ಥಳದಲ್ಲಿ ನನ್ನನ್ನು ಇರಿಸಿಕೊಳ್ಳಬಹುದು.

ಮನು (ದುಡುಕಿನಿಂದ) : ಏನು, ಏನು? ಹೀಗೆ ಹೇಳುತ್ತೀರಿ! ನಮ್ಮ ಆರ್ಯ ಪುರೋಹಿತರೆಲ್ಲಿ? ಅವರಿಗೆ ಪ್ರತಿಯಾಗಿ ನೀವು ಇಲ್ಲಿಗೆ ಬಂದು, ಹೀಗೆ ಹೇಳಿಕೊಳ್ಳುವ ಸಂದರ್ಭವೇನು?

ಬಂದವ: ಬಲವಾದ ಸಂದರ್ಭವು ಬಂದಿದೆ. ಬೇರೆ ವಿಧಿ ಇಲ್ಲ.

ಮನು (ಹುಬ್ಬು ಗಂಟಿಕ್ಕಿ) : ಇದೇನು ವಿಚಿತ್ರ? ನಮ್ಮ ಆರ್ಯ ಪುರೋಹಿತರಿಗೆ ಏನಾಯಿತು?

ಬಂದವ: ಹೊಟ್ಟೆನೋವು, ಸ್ವಾಮೀ! ಬಲು ಕ್ರೂರವಾದ ಹೊಟ್ಟೆ ನೋವಿನಿಂದ ಬಳಲುತ್ತ ಬಿದ್ದಿದ್ದಾರೆ ಈ ಪಾಳೆಯದ ಆಚೆಯ ತುದಿಯಲ್ಲಿ. ತಮ್ಮ ಯಜ್ಞಕ್ಕಾಗಿ ಪಶುವನ್ನು ದೊರಕಿಸಲೇ ಬೇಕು ಎಂದು ಅವರು ಪಟ್ಟ ಪಾಡು ಯಜ್ಞಪುರುಷನಿಗೇ ಗೊತ್ತು. ಈ ದೇಹಕಷ್ಟವು, ಮನಸ್ತಾಪವು ಅವರನ್ನು ಬಾಧಿಸುತ್ತಲಿದೆ. ಈ ಸಂಗತಿಯನ್ನು ತಮಗೆ ಅರಿಕೆ ಮಾಡಿ, ತಮ್ಮ ಕಾರ್ಯವನ್ನು ಮುಂದುವರಿಸುವ ಉದ್ದೇಶದಿಂದ ಅವರು ನನ್ನನ್ನು ತಮ್ಮಲ್ಲಿಗೆ ಕಳುಹಿರುವರು. ಹಾಗೆ ನೋಡಿದರೆ ನಾನು ತಮಗೆ ಹೊರಗಿನವನು ಅಲ್ಲ!

ಮನು (ನಿಟ್ಟುಸಿರು ಬಿಡುತ್ತ) : ಅಯ್ಯೋ! ಪಾಪ, ಹೀಗಾಯಿತೆ ? ಯಜ್ಞಪುರುಷನ ಚಿತ್ತ. ತಾವು ಯಾರು ಹಾಗಾದರೆ ?

ಬಂದವ: ತಮ್ಮ ಆರ್ಯ ಪುರೋಹಿತರು ನನ್ನ ಸೋದರತ್ತೆಯ ಚಿಕ್ಕಮ್ಮನ ಅಳಿಯಂದಿರು— ಅಂದರೆ ಹಿರಿಯ ಮಗಳ ಯಜಮಾನರು. ನಾನು ದೂರ ಪ್ರದೇಶದಲ್ಲಿ ಇರುವೆನು. ಬಹು ದಿನಗಳಾದುವು. ನನ್ನ ಆಪ್ತನನ್ನು ಕಂಡು ಹೋಗಬೇಕೆಂದು ನಿನ್ನೆ ಸಾಯಂಕಾಲ ತಾನೆ ಇಲ್ಲಿಗೆ ಬಂದೆನು. ಅಷ್ಟರಲ್ಲಿ ಈ ದುರ್ಘಟನೆ!

ಮನು (ಮೊದಲು ದುಃಖ, ಬಳಿಕ ಸಂತೋಷದಿಂದ) : ಅಯ್ಯೋ! ಓಹೋ! ಹೀಗೆಯೇ ಸಮಾಚಾರ? ತಾವು ಬಂದುದು ಬಹಳ ಚೆನ್ನಾಯಿತು. ನಮ್ಮ ಆರ್ಯಪುರೋಹಿತರ ಆಪ್ತರಾದ ನೀವು ನಿಜವಾಗಿ ಹೊರಗಿನವರಲ್ಲ.

ಬಂದವ: ನಿಸ್ಸಂದೇಹವಾಗಿ, ಆರ್ಯರೆ!

ಮನು: ತಮ್ಮ ಹೆಸರೇನು?

ಬಂದವ: ಆಕುಲಿ.

ಮನು (ಹುಬ್ಬು ಗಂಟಿಕ್ಕಿ ಸಂತಪ್ತಮುದ್ರೆಯಿಂದ) : ಏನು! ಆಕುಲಿ? ನಮ್ಮ ಜನಾಂಗದ ಶತ್ರುಗಳು, ಅಸುರರು— ಸುರರ ವೈರಿಗಳು, ವೇದಬಾಹಿರರು, ಯಜ್ಞನಿಂದಕರು, ಅಗ್ನಿದೂಷಕರು, ವಿಧಿಶೂನ್ಯರು, ಕರ್ಮಹೀನರು. ಇಂತಹ ಅಸುರರ ಪೌರೋಹಿತ್ಯವನ್ನು ಮಾಡುತ್ತಿರುವ ಒಬ್ಬ ಅಧಮ ಬ್ರಾಹ್ಮಣನಿದ್ದಾನೆ!

ಆಕುಲಿ (ಬೆಚ್ಚಿ ಬಿದ್ದು; ಆದರೆ ಅದನ್ನು ಹೊರಗೆ ತೋರಗೊಡದೆ, ದನಿಯನ್ನು ಎಳೆಯುತ್ತ) : ಆ ಅಧಮನ ಹೆಸರೂ ಆಕುಲಿ. ಸ್ವಾಮೀ, ಹೆಸರು ಒಂದಾದ ಮಾತ್ರಕ್ಕೆ ಮನುಷ್ಯರು ಒಂದೇ? ತಾವು ಹೇಳುವ ಆ ದ್ರೋಹಿಯನ್ನು ನಾನು ಬಲ್ಲೆನು. ಒಬ್ಬನೇಕೆ? ಅವರು ಇಬ್ಬರು; ಕಿಲಾತ ಮತ್ತು ಆಕುಲಿ ಎಂಬ ಸೋದರರು. ಬ್ರಾಹ್ಮಣಜಾತಿಗೆ ಕಲಂಕ ತಂದವರು; ಧನದ ಮತ್ತು ಮಾನದ ಆಸೆಯಿಂದ ಆ ದುಷ್ಟ ಅಸುರರಿಗೆ ಪುರೋಹಿತರಾಗಿ ಇದ್ದುಕೊಂಡು ಬಗೆಬಗೆಯ ಹೇಯ ಕೃತಿಗಳನ್ನು ಮಾಡುತ್ತಿರುವರು. ಇಂತಹ ಆ ಚಾಂಡಾಲನ ಹೆಸರೂ ನನ್ನ ಹೆಸರೂ ಒಂದೇ ಆಗಿದ್ದುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ಆದರೆ ಮಾಡುವುದೇನು? ಹಿರಿಯರು ವೈದಿಕ ವಿಧಿಯಿಂದ ನಾಮಕರಣ ಮಾಡಿ ಹೇಳುತ್ತ ಬಂದಿರುವ ನಾಮಧೇಯವನ್ನು ಇದ್ದಕ್ಕಿದ್ದ ಹಾಗೆ ಕಿತ್ತು ಬಿಸುಡಲು ಆಗುತ್ತದೆಯೇ, ಆರ್ಯರೆ?

ಮನು (ಸಮಾಧಾನಗೊಂಡು): ಛೀ ! ಸಾಧ್ಯವಲ್ಲ; ಯುಕ್ತವೂ ಅಲ್ಲ. ಹೀಗೆ ವೃಥಾ ಸಂದೇಹಗೊಂಡುದಕ್ಕೆ ಕ್ಷಮಿಸಬೇಕು ಆರ್ಯ ಆಕುಲಿಗಳೇ !

ಆಕುಲಿ (ನಟ್ಟ ಬೀಜವು ಮೊಳೆತುದನ್ನು ಕಂಡು ಸಂತೋಷಪಡುವವನಂತೆ) : ಪರವಾ ಇಲ್ಲ, ಆರ್ಯರೆ ! ನಾನು ಹೊಸಬನು; ಹೆಸರೋ ಅಂತಹದು. ಸಂದೇಹಕ್ಕೆ ಅವಕಾಶವುಂಟಾದುದು ಸಹಜ. ಅದನ್ನು ಮರೆತು ಬಿಡಿ.

ಮನು : ತಮ್ಮ ಗೋತ್ರ ?

ಆಕುಲಿ (ತನ್ನಲ್ಲಿ): ಮುದುಕನ ಸಂದೇಹವು ಇನ್ನೂ ಪೂರ್ತಿಯಾಗಿ ತೊಲಗಿಲ್ಲ. ಆಗಲಿ, ನೋಡಿಕೊಳ್ಳುವೆ. (ಪ್ರಕಟವಾಗಿ) ಆಂಗಿರಸ.

ಮನು (ಸಂತೋಷದಿಂದ): ಆಂಗಿರಸ ! ಭಲಾ, ಚೆನ್ನು. ಆಂಗಿರಸ ಋಷಿಗಳು ಯಜ್ಞಕರ್ಮದಲ್ಲಿ ಧುರೀಣರು. ಅವರ ಕುಲದವರು ತಾವು !

ಆಕುಲಿ (ಗೆದ್ದವನಂತೆ) : ಸಂದೇಹವೇನು ? ನಮ್ಮ ಮಹಾಪೂರ್ವಜರು ನೆರವೇರಿಸಿದ ಯಜ್ಞಕ್ರಿಯೆಗಳ ಅದ್ಭುತ ಕಥೆಗಳು ಉಭಯ ಲೋಕಗಳಲ್ಲಿ ವಿಶ್ರುತವಾಗಿವೆ.

ಮನು : ನಿಜ, ನಿಜ. ಹಾಗಾದರೆ ತಮಗಾದರೂ ಯಜ್ಞಕ್ರಿಯೆಗಳಲ್ಲಿ ತುಂಬ ಪರಿಶ್ರಮವು ಇದ್ದಿರಬೇಕು.

ಆಕುಲಿ : ಸಾಕಷ್ಟು. ಅಂತೆಯೇ ತಮ್ಮಾ ಆರ್ಯ ಪುರೋಹಿತರು ನನ್ನನ್ನು ತಮ್ಮ ಕಾರ್ಯಕ್ಕೆ ನಿಯೋಜಿಸಿರುವರು.

ಮನು : ಬಹು ಸ್ವಾರಸ್ಯವಾಯಿತು. ಹಾಗಾದರೆ ಅವರು ದೇಹಾರೋಗ್ಯ ಪಡೆಯುವವರೆಗೆ ತಾವು ನನ್ನಲ್ಲಿ ಇದ್ದುಕೊಂಡು ನನ್ನ ಯಜ್ಞವಿಧಿಗಳನ್ನು ನೆರವೇರಿಸುವಂತಹರಾಗಿರಿ.

ಆಕುಲಿ : ಆಗಬಹುದು, ಆರ್ಯರೆ !

ಮನು : ಸರಿ, ಹಾಗಾದರೆ ಇಂದಿನ ಯಜ್ಞದ ವಿಷಯವೇನು ? ಅದನ್ನು ನೀವು ನೆರವೇರಿಸಬಲ್ಲಿರಾ ?

ಆಕುಲಿ : ಧಾರಾಳವಾಗಿ.

ಮನು (ಹಿಗ್ಗಿನಿಂದ) : ಹಾಗಾದರೆ ನೀವು ಒಂದು ಯಜ್ಞಪಶುವನ್ನು ಈಗಾಗಲೆ ದೊರಕಿಸಿರಬಹುದು.

ಆಕುಲಿ : ಹಾಂ, ಹಾಂ, ದೊರಕಿಸಿದಂತೆಯೆ.

ಮನು : ಅಂತೆ ಏಕೆ ? ಎಲ್ಲಿದೆ ? ಬೇಗ ತೆಗೆದುಕೊಂಡು ಬನ್ನಿ.

ಆಕುಲಿ : ದೂರವಿಲ್ಲ. ಆಚೆಗೆ ತಮ್ಮ ಆಶ್ರಮದ ಆ ಬದಿಗೆ ನಿಂತಿದೆ.

ಮನು (ಅವಸರವಾಗಿ) : ಇತ್ತ ಎತ್ತಿಕೊಂಡು ಬನ್ನಿ ಅದನ್ನು. ಯಜ್ಞಪುರುಷನಿಗೆ ಜಯವಾಗಲಿ! ಇಂದು ಸಂಕಲ್ಪಿಸಿದ ಯಜ್ಞವು ನೆರವೇರುವುದು. (' ಯಜ್ಞದಲಿ ನಿಂತಿಹುದು

ವಿಶ್ವವಿದು ಸಂತತವು' 'ಯಜ್ಞವೇ ಪರಸತ್ಯ-' ಎಂದು ಗುಣುಗುಟ್ಟುತ್ತ ನಲಿದಾಡುವನು.)

ಆಕುಲಿ (ಕೈಜೋಡಿಸಿ, ತಡವರಿಸುತ್ತ) : ಆರ್ಯರೆ ! ಪಶುವೇನೋ ಸಿದ್ಧವಿದೆ. ಆ—ದ—ರೆ ಈ ವಿಚಾರವಾಗಿ ಯೋಚಿಸ ಬೇಕಾದ ಒಂದು ಅಂಶವಿದೆ.

ಮನು (ಸಾಶಂಕನಾಗಿ) : ಅದೇನು ಮತ್ತೆ ?

ಆಕುಲಿ (ಅದೇ ವಿಧವಾಗಿ) : ಇದಾದರೂ ತಮ್ಮ ಆರ್ಯ ಪುರೋಹಿತರೇ ತಮಗೆ ಅರಿಕೆ ಮಾಡಲು ನನಗೆ ಹೇಳಿದುದು.

ಮನು (ಅದೇ ವೃತ್ತಿಯಲ್ಲಿ) : ದುಂಡುಸುತ್ತೇಕೆ? ಏನೆಂಬುದನ್ನು ನಿರ್ದಿಷ್ಟವಾಗಿ ಹೇಳಿಬಿಡಿ.

ಆಕುಲಿ : ದಿನದಿನಕ್ಕೆ ಪಶುಗಳ ಅಭಾವವು ಹೆಚ್ಚುತ್ತಲಿದೆ. ಎಷ್ಟೊಂದು ಪ್ರಯತ್ನಿಸಿದರೂ ಪಶುಗಳು ದೊರೆಯವು. ತಮ್ಮ ಯಜ್ಞದ ವ್ರತವೇನೋ ನಿಲ್ಲಕೂಡದು. ಅದಕ್ಕಾಗಿ ತಮ್ಮ ವೃಷಭರಾಜನನ್ನು ಈ ಯಜ್ಞಕಾರ್ಯಕ್ಕೆ—

[ಆಚೆಯ ಬದಿಯಲ್ಲಿ ' ಘುಡುರ್ ' ಎಂದು ಎತ್ತಿನ ಕೂಗು.]

ಮನು (ಚಂಚಲನಾಗಿ) : ಏನು, ಏನು ? ಅದನ್ನು ಈ ಯಜ್ಞ ಕಾರ್ಯಕ್ಕೆ ಬಲಿ ಕೊಡಬೇಕು ಎಂದು ತಮ್ಮ ಅಭಿಪ್ರಾಯವಷ್ಟೆ ?

ಆಕುಲಿ (ಕೃತ್ರಿಮ ದನಿಯಿಂದ) : ನನ್ನದಲ್ಲ ಸ್ವಾಮೀ ! ಹೊಟ್ಟೆ ನೋವಿನಿಂದ ನರಳುತ್ತ ಬಿದ್ದಿರುವ ತಮ್ಮ ಆರ್ಯ ಪುರೋಹಿತರ ಅಭಿಪ್ರಾಯ ಕ್ಷಮಿಸಿ.

ಮನು (ಕಠೋರವಾಗಿ) : ಅಯ್ಯೋ ! ಆ ವೃಷಭರಾಜನ ಯೋಗ್ಯತೆ ನಿಮಗೆ ಚೆನ್ನಾಗಿ ತಿಳಿದಿಲ್ಲ. ಅಂತೆಯೇ ಇಂತಹ ಸಲ್ಲದ ಆಲೋಚನೆಗಳು !

ಆಕುಲಿ (ಕುಟಿಲತನದಿಂದ) : ತಿಳಿಯದೇ ಏನು, ಮಹಾಸ್ವಾಮಿ?

ಮನು (ಅದೇ ಪರಿಯಲ್ಲಿ) : ನನ್ನ ಯಜ್ಞಮಂಟಪದ ಆಧಾರ ಸ್ತಂಭವೇ ಆ ವೃಷಭರಾಜ !

ಆಕುಲಿ (ಅದೇ ಪರಿಯಲ್ಲಿ) : ಪೂರ್ಣ ಸತ್ಯ. ಯಜ್ಞಕ್ಕೆ ನಿತ್ಯವೂ ಬೇಕಾಗುವ ಸಾಮಗ್ರಿಯನ್ನು-ದರ್ಭೆ, ಸಮಿಧೆ, ಸೋಮಬಳ್ಳಿ, ಇವುಗಳ ಹೊರೆಗಳನ್ನು-ಹೊತ್ತು ತರುವುದು ಈ ಎತ್ತು. ಇದರ ಮೂಲಕವೇ ತಮ್ಮ ಯಜ್ಞಕ್ರಿಯೆಗಳೆಲ್ಲ ಸರಾಗವಾಗಿ ಸಾಗುತ್ತಿವೆ.

[ಆಚೆಯ ಬದಿಯಿಂದ ಘುಡುರ್ ಎಂಬ ಘೋರವಾದ ಶಬ್ದ!]

ಮನು (ಗಂಭೀರ ಮುದ್ರೆಯಿಂದ) : ಇದಲ್ಲದೆ ನನ್ನ ಮಹಾ ಯಜ್ಞಗಳಿಗೆ ನಿತ್ಯಸಹಾಯಕನೂ ಚಿರಸಾಕ್ಷಿಯೂ ಆದ ಈ ವೃಷಭರಾಜನಲ್ಲಿ ಯಜ್ಞಪುರುಷನ ಅನುಗ್ರಹದಿಂದ ಒಂದು ಅದ್ಭುತ ಶಕ್ತಿ ಮನೆಮಾಡಿಕೊಂಡಿದೆ.

ಆಕುಲಿ (ಅದೇ ಗಂಭೀರ ರೀತಿಯಲ್ಲಿ) : ಗೊತ್ತು, ಅದು ನನಗೆ ಗೊತ್ತು. ಅಂತರ್ಗತವಾದ ಆ ಶಕ್ತಿಯ ಬಲದಿಂದ ಇದರ ವಾಣಿಯಲ್ಲಿ ವಿಲಕ್ಷಣವಾದ ದೈವಿಕ ಸಾಮರ್ಥ್ಯವು ಸ್ಫುರಿಸುತ್ತಲಿದೆ. ಇದರ ಹುಂಕಾರವನ್ನು ಕೇಳಿದ ಮಾತ್ರದಿಂದ ಅಸುರರು ನಾಶಹೊಂದುತ್ತಿರುವರು. ಘುಡುರ್ ಎಂದು ಇದು ಒಮ್ಮೆ ಗುಡುಗು ಹಾಕಿದರೆ ಸಾಕು. ಆ ಗರ್ಜನೆಯ ಅಲೆಗಳು ವಾಯುಮಂಡಲದಲ್ಲಿ ಬೆರೆತು ಅಸುರರ ಕರ್ಣರಂಧ್ರಗಳಲ್ಲಿ ಹೋಗುವುವು. ಮರುಕ್ಷಣದಲ್ಲಿ ಅವರ ಪ್ರಾಣಗಳು ಪಟಪಟನೆ ಹಾರಿ ಹೋಗುವುವು. ಈ ವೃಷಭರಾಜನ ಒಂದೊಂದು ಡುರಕಿಯಿಂದ ಅಸುರರ ಊರುಗಳು ಉಧ್ವಸ್ತವಾಗುತ್ತಿರುವುವು. ಇದರಿಂದಾಗಿ ಅಸುರಜನಾಂಗದಲ್ಲಿ ಒಂದೇ ಹಾಹಾಕಾರವು ಉಂಟಾಗಿದೆ !

[ಹಿಂಬದಿಯಲ್ಲಿ ' ಘುಡುರ್ ' ಎಂದು ಎತ್ತಿನ ಭಯಂಕರ ಗರ್ಜನೆ !]

ಮನು (ವಿಸ್ಮಿತನಾಗಿ ಆಕುಲಿಯ ಕಡೆಗೆ ದಿಟ್ಟಿಸಿ ನೋಡುವನು. ಆದರೆ ಆತನ ಮುದ್ರೆಯ ಮೇಲೆ ಸಂದೇಹದ ಯಾವ ಸೂಚನೆಯೂ ತೋರುವುದಿಲ್ಲ.) : ಪುರೋಹಿತರೆ ! ಇದರ ಕಾರಣವೇನು, ಬಲ್ಲಿರಾ ? **' ದೇವೀ ವಾಚಾ '** ಇಲ್ಲವೆ **' ಮಂತ್ರ ವಾಣೀ '.** ಯಜ್ಞಪುರುಷನ ಸದಾಸೇವೆಯಿಂದಲೂ ವೇದ ಮಂತ್ರಗಳ ಅಖಂಡ ಶ್ರವಣದಿಂದಲೂ ಪರಮಪವಿತ್ರ ವೇದಗಳ ಪ್ರಜ್ವಲಿತ **ಮಂತ್ರವಾಣಿ ಆ ವೃಷಭರಾಜನನ್ನು ಆಶ್ರಯಿಸಿದರೆ** ಆಶ್ಚರ್ಯವಲ್ಲ.

ಆಕುಲಿ (ಹಿಂದಿನಂತೆ) : ಅತ್ಯಂತ ಸತ್ಯ. ಈ ಘಟನೆ ಇನ್ನೂ ಸ್ವಲ್ಪ ಕಾಲ ಹೀಗೆಯೇ ನಡೆದರೆ, ಆ ಅಸುರರೆಂಬವರ ಬೇರು ಸಹ ಔಷಧಿಗೆ ಸಿಕ್ಕಲಾರದು !

ಮನು (ಅವನ ಕಡೆ ಮತ್ತೆ ದಿಟ್ಟಿಸಿ ನೋಡುವನು; ಆದರೆ ಏನೂ ತೋರುವುದಿಲ್ಲ) : ಇಂತಹ ವೃಭಷರಾಜನನ್ನು ಬಲಿಕೊಡಲು ಹೇಳುವಿರಾ ?

[ಆಚೆಯ ಪಕ್ಕದಲ್ಲಿ "ಘುಡರ್" ಎಂಬ ಭಯಸೂಚಕ ಧ್ವನಿ !]

ಆಕುಲಿ (ಕುಟಿಲತನದಿಂದ) : ಛೇ, ಸರ್ವಥಾ ಇಲ್ಲ. ಕರುಳ ಕಡಿತದಿಂದ ಕಕ್ಕಸಪಡುತ್ತಿರುವ ತಮ್ಮ ಆರ್ಯ ಪುರೋಹಿತರ ಸಂದೇಶವದು.

ಮನು (ತಿದ್ದಿಕೊಂಡು) : ಸರಿ, ಯಾರೇ ಹೇಳಲಿ.

ಆಕುಲಿ (ಬಲವಾಗಿ): ಆ ಕಷ್ಟದಲ್ಲಿಯೂ ಅವರು ಇನ್ನೂ ಹೇಳಿದುದೇನೆಂದರೆ —

ಮನು (ಜಿಜ್ಞಾಸುವಾಗಿ) : ಏನು ಹೇಳಿದರು ?

ಆಕುಲಿ (ಅದೇ ಹಿಡಿತದಿಂದ) : ಯಜ್ಞಕ್ಕೆ ತಡೆಯಾದರೆ ಉಂಟಾಗುವ ಅನರ್ಥಕ್ಕಿಂತ ಈ ಹಾನಿಯೇನೂ ಹಿರಿದಲ್ಲ. ವೈದಿಕ ಯಜ್ಞಗಳ ಅನುಷ್ಠಾನವನ್ನು ಕೈಕೊಂಡವರು ಯಜ್ಞಪುರುಷನ ಪ್ರೀತಿಗೋಸುಗ ಸ್ವತಃ ತಮ್ಮನ್ನೇ ಬಲಿಗೊಟ್ಟಾರು; ಆದರೆ ಯಜ್ಞವನ್ನು ಸರ್ವಥಾ ನಿಲ್ಲಗೊಡರು. ಇವನ್ನು ಬೇರೆಯವರು ತಮಗೆ ಹೇಳಬೇಕಾಗಿಲ್ಲ. ಲೋಕದಲ್ಲಿ ಯಜ್ಞಸಂಸ್ಥೆಯನ್ನು ಬೆಳಗಿಸಲು, ಕೈಗೆ ಕಂಕಣಕಟ್ಟಿ, ಸರ್ವಸ್ವವನ್ನು ಧಾರೆಯೆರೆಯಲು ಸಿದ್ಧರಾದ ಆರ್ಯ ಧುರೀಣರು ತಾವು !

[ಹಿಂದುಗಡೆ ಮತ್ತೆ ಎತ್ತಿನ ಘೋರ ಶಬ್ದ !]

ಮನು (ಗದ್ಗದಿತ ಕಂಠದಿಂದ) : ಸತ್ಯ, ಸತ್ಯ, ತ್ರಿವಾರ ಸತ್ಯ.

[" ವೈದಿಕ ಯಜ್ಞಗಳ ಅನುಷ್ಠಾನವನ್ನು ಕೈಕೊಂಡವರು — " ಎಂಬ ಆಕುಲಿಯ ವಾಕ್ಯವನ್ನು ಎತ್ತಿಕೊಂಡು, ಮನನಪೂರ್ವಕವಾಗಿ ಗಂಭೀರವಾಣಿಯಿಂದ ಎರಡು ಸಲ ಉಚ್ಚಾರ ಮಾಡುವನು.]

ಆಕುಲಿ (ಬೇಟೆ ಕೈಯಲ್ಲಿ ಸಿಕ್ಕವನ ಆನಂದದಿಂದ, ಗಟ್ಟಿಯಾಗಿ)

ಯಜ್ಞದಿಂ ಪುರುಷನನು ಪೂಜಿಪರು ಸುರರು ।
ಯಜ್ಞದಲಿ ನಿಂತಿಹರು ಸ್ಥಾವರರು ಜಾಚರರು ॥

(ಎಂಬ ಮಂತ್ರವನ್ನು ಎರಡು ಸಲ ಪಠಿಸುವನು.)

ಮನು (ವಿಲಕ್ಷಣವಾದ ವಿಜಯಿ ಮುದ್ರೆಯಿಂದ ಆಕುಲಿಯ ಕಡೆ ನೋಡುವನು. ನಿರ್ಧಾರದ ಅಪ್ಪಣೆಯ ದನಿಯಿಂದ) : ಆಗಲಿ, ಆಕುಲಿಗಳೇ ! ಇನ್ನು ವಿಲಂಬವೇಕೆ ? ನಮ್ಮ ವೃಷಭರಾಜನನ್ನು ಬೇಗನೇ ಕರೆದುಕೊಂಡು ಬನ್ನಿ. ಇಂದಿನ ನಮ್ಮ ಪುರೋಹಿತ ಕಾರ್ಯವನ್ನು ವಹಿಸಿ, ನೀವೇ ಈ ಯಜ್ಞವನ್ನು ಸಾಂಗಗೊಳಿಸಿರಿ.

ಯಜ್ಞಪುರುಷಾಯ ನಮಃ ।
ಯಜ್ಞಪುರುಷಾಯ ನಮಃ ।
ಯಜ್ಞಪುರುಷಾಯ ನಮಃ !

(ತೆರೆ ...... ಬೀಳುವದು)

ಎರಡನೆಯ ದೃಶ್ಯ

ಅಸುರರ ಒಂದು ದೊಡ್ಡ ಪಾಳ್ಯ. ಮನೆಮಾರುಗಳು ಅಲ್ಲಲ್ಲಿ ಮುರಿದು ಅಸ್ತವ್ಯಸ್ತವಾಗಿ ಬಿದ್ದಿವೆ. ಅಲ್ಲಲ್ಲಿ ಅಳುವ, ಚೀರುವ, ಎದೆಯನ್ನು ಗುದ್ದಿಕೊಳ್ಳುವ ಧ್ವನಿ ಕೇಳಿಸುತ್ತಲಿದೆ. ತಲೆಯನ್ನು ಹಿಡಿದುಕೊಂಡು ಕುಳಿತವರು ಕೆಲರು. ಕೂದಲ ಕೆದರಿಕೊಂಡು ಹುಚ್ಚರಂತೆ ಓಡಾಡುವರು ಕೆಲರು. ಬಂಡಿಗಳಲ್ಲಿ ಪಾತ್ರೆ ಪಡಗುಗಳನ್ನು ಹೇರುತ್ತಿರುವವರು ಒಂದು ಕಡೆ. ಗುಡಿಚಾಪೆ ಕಟ್ಟಿಕೊಂಡು ಪಯಣ ಬೆಳೆಸಿದವರು ಇನ್ನೊಂದು ಕಡೆ. ಎಲ್ಲರ ಮುಖದ ಮೇಲೆ ಭಯ ಮತ್ತು ಚಿಂತೆಯ ಚಿನ್ಹಗಳು ಆವರಿಸಿಕೊಂಡಿವೆ. ಹೆಣ್ಣು-ಗಂಡು, ಕೂಸು-ಕುನ್ನಿ, ಎಲ್ಲರ ಕಿವಿಗಳಿಗೆ ಚರ್ಮದ ಪಟ್ಟಿಗಳನ್ನು ಬಲವಾಗಿ ಬಿಗಿದ ವಿಚಿತ್ರ ನೋಟವು ತಾನೇ ತಾನಾಗಿದೆ.

[ಆಕುಲಿ ಮತ್ತು ಅಸುರನಾಯಕ ಮಾತಾಡುತ್ತ ಬರುವರು.]

ಆಕುಲಿ : ಹೀಗೆ ಮೊದಲು ಮನುವಿನ ಆ ಪುರೋಹಿತನನ್ನು ನನ್ನ ಕಡೆಗೆ ಒಲಿಸಿಕೊಂಡೆನು. ಅನಂತರ ಮನುವಿನ ಮೇಲೆಯೂ ನನ್ನ ಬಲೆಯನ್ನು ಬೀಸಿದೆನು. ಮೊದಲು ನನ್ನ ಸೂಚನೆಯನ್ನು ಒಪ್ಪಲಿಲ್ಲ ಆ ಮುದಿಗೂಬೆ. ಆದರೆ ಆತನ ಯಜ್ಞದ ಹುಚ್ಚಿಗೆ ಪುಟವಿಕ್ಕಿ ಆತನನ್ನೂ ನನ್ನ ಹತೋಟಿಗೆ ತಂದೆನು. ಕೊನೆಗೆ ಆ ಎತ್ತನ್ನು ಕೊಂದುಹಾಕಿಸಿದೆನು. ಕಾರ್ಯವು ಸಮಾಪ್ತವಾದ ಕೂಡಲೆ ಇತ್ತ ಹೊರಟುಬಂದೆನು. ಇನ್ನು ಮುಂದೆ ನೀವು ನೆಮ್ಮದಿಯಾಗಿ ಬಾಳಬಹುದು.

ಅಸುರನಾಯಕ (ಹುಬ್ಬುಗಂಟಿಕ್ಕಿ ತಲೆಯಲ್ಲಾಡಿಸುತ್ತ): ಛೇ ಛೆ ! ಹಾಗೆ ಆಗಿಲ್ಲ. ಇದು ನಿಮ್ಮ ಭ್ರಮೆ !

ಆಕುಲಿ (ದಿಗಿಲುಗೊಂಡು) : ಏನಂದಿರಿ ನಾಯಕರೆ! ಅಸುರ ಜನಾಂಗದ ಕಲ್ಯಾಣಕ್ಕಾಗಿ ನಾನು ಅದೆಷ್ಟೋ ಕಷ್ಟಪಟ್ಟೆನು.

ನಾಯಕ : ಇರಬಹುದು ಬ್ರಾಹ್ಮಣರೇ ! ಆದರೆ ಅದರಿಂದ ನಮ್ಮ ಜನಾಂಗದ ಮೇಲಿನ ಗಂಡಾಂತರವು ದೂರವಾಗಿಲ್ಲ. ಮಾತ್ರವಲ್ಲ; ಅದು ಹೆಚ್ಚುತ್ತಿರುವಂತೆ ತೋರುತ್ತಿದೆ. ಒಂದು ದೃಷ್ಟಾಂತವು ಸಾಕು. ಈ ನಮ್ಮ ಪಾಳ್ಯದ ದುರ್ದಶೆ ನಿಮಗೆ ಕಾಣುತ್ತ ಇಲ್ಲವೆ? ನಮ್ಮವರ ಗೋಳು ನಿಮ್ಮ ಕಿವಿಗೆ ಬಿದ್ದಿಲ್ಲವೆ?

ಆಕುಲಿ (ವಿಷಣ್ಣನಾಗಿ) : ಈ ಅಳಲನ್ನು ನಾನು ನೋಡದೆ ಏನು ? ಆದರೆ ಇದರ ನಿಜವಾದ ಕಾರಣವು ಮಾತ್ರ ನನಗೆ ಸರಿಯಾಗಿ ಗೊತ್ತಾಗಿಲ್ಲ. ಈ ವಿಚಾರವಾಗಿ ನಾನೇ ನಿಮಗೆ ಇದೀಗ ಪ್ರಶ್ನಿಸಬೇಕೆಂದಿದ್ದೆನು.

ನಾಯಕ (ಉದ್ವೇಗದಿಂದ) : ಮತ್ತಾವ ಕಾರಣ, ಬ್ರಾಹ್ಮಣರೇ ? ಅದೇ ಆ ಭೀಕರ ಘೋರ ಧ್ವನಿ ! (ಮೈಯನ್ನು ನಡುಗಿಸುವನು.) ನಾನು ಮಾತ್ರ ಇದು ವರೆಗೆ ಅದನ್ನು ಕೇಳಿಲ್ಲ. (ಕಿವಿಗೆ ಬಿಗಿದ ಚರ್ಮದ ಪಟ್ಟಿಯನ್ನು ತಟ್ಟಿ ಒತ್ತಿಕೊಳ್ಳುವನು.) ಒಂದು ವೇಳೆ ಕೇಳಿದ್ದೇ ಆದರೆ ನಿಮ್ಮ ಕೂಡ ಹೀಗೆ ತಲೆ ಎತ್ತಿಕೊಂಡು ಮಾತಾಡಲು ಬದುಕಿರುತ್ತಿರಲಿಲ್ಲ !

ಆಕುಲಿ (ಚಕಿತನಾಗಿ) : ಏನು ? ಮತ್ತೆ ಆ ಧ್ವನಿ ! ಆಶ್ಚರ್ಯ ! ಆಶ್ಚರ್ಯ ! ಅದನ್ನು ಕೇಳಿ ನಮ್ಮ ಜನಗಳು ಮೊದಲಿನಂತೆ ಮತ್ತೆ ಸಾಯುತ್ತಿರುವರೇ ?

ನಾಯಕ (ತ್ವೇಷದಿಂದ) : ಅಹುದು ಸ್ವಾಮೀ ! ಈಗ ತಾನೆ ಹೀಗೆ ಸತ್ತ ಜನಗಳಿಗೆ ಮಣ್ಣನ್ನು ಕೊಟ್ಟು ಬಂದಿರುವೆ.

ಆಕುಲಿ (ಹತಾಶನಾಗಿ) : ಅಯ್ಯೊ, ಅಯ್ಯೊ, ಅಯ್ಯೋ ! ಮನುವಿನ ಎತ್ತು ಹತವಾದ ಬಳಿಕ ಇನ್ನೆಲ್ಲಿಂದ ಈ ಅನಾಹೂತವು ಪುನಃ ಉಂಟಾಗಬೇಕು ? ತಮ್ಮಗಳ ಆಲೋಚನೆಯಂತೆ ಅಸುರರ ಮಾರಿಯಾದ ಆ ಬಸವನನ್ನು ಧ್ವಂಸಮಾಡಲು ನಾನು ಇಲ್ಲಿಂದ ಹೋದೆನು; ಅಲ್ಲವೆ ?

ನಾಯಕ : ಅದೆಲ್ಲವು ನಿಜ. ನಮ್ಮ ಯುಕ್ತಿಯಿಂದ ನಮ್ಮ ವಿಪತ್ತು ನಿವಾರಣೆಯಾಗಿಲ್ಲ. ಇದೀಗ ನಮ್ಮ ಜನಗಳು ಕೇಳುತ್ತಿರುವ ಧ್ವನಿ ಆ ಬಸವನ ನಿನಾದಕ್ಕಿಂತ ಘೋರವಾಗಿದೆಯಂತೆ ! ಅದನ್ನು ಕೇಳುತ್ತಲೆ ಅಂಗಾಂಗವನ್ನು ಕಿತ್ತುಕೊಂಡು ಪ್ರಾಣಗಳು ಹೊರಕ್ಕೆ ಬರುತ್ತವೆಯಂತೆ. "

ಆಕುಲಿ (ವಿಚಾರಪರನಾಗಿ) : ಆ ಧ್ವನಿಯನ್ನು ಯಾರು ಮಾಡುತ್ತಿರುವವರು, ಎಂಬ ವಿಷಯವೇನಾದರೂ ತಿಳಿದಿರುವುದೆ ? ಇದು ಎಂದಿನಿಂದ ಆರಂಭವಾಗಿದೆ ?

ನಾಯಕ : ಮೊನ್ನೆ ಬೆಳಗಿನಿಂದ ಹೆಚ್ಚಾಗಿ. ನಿನ್ನೆ ಮಧ್ಯಾನ್ಹ ಆರ್ಯರ ಪಾಳ್ಯದಿಂದ ಒಬ್ಬ ಬ್ರಾಹ್ಮಣನು ಈ ಕಡೆ ಬಂದಿದ್ದನಂತೆ. ಆತನು ಹೀಗೆ ವರ್ತಮಾನವನ್ನು ಉಸಿರಿದನಂತೆ ಮನುವಿಗೆ ಮನಾವಿ ಎಂಬ ಹೆಂಡತಿ ಇರುವಳಂತೆ. ಈಗ ಮೂರು ದಿನಗಳಿಂದ ಆಕೆಯ ರೀತಿ ಬೇರೆ ಆಗಿದೆಯಂತೆ. ಆ ಎತ್ತು ಸತ್ತಾಗಿನಿಂದ ಆಕೆಯ ಮೈಮೇಲೆ ಏನೋ ಒಂದು ಆವೇಶ ಬರುವದಂತೆ. ಆಗ ಆಕೆ ಕೂಗಾಡುವಳಂತೆ, ಚೀರಾಡುವಳಂತೆ, ಘೋರವಾಗಿ ಶಬ್ದಮಾಡುವಳಂತೆ, ಅಸುರರನ್ನು ಶಪಿಸಲು ಪ್ರಾರಂಭಿಸುವಳಂತೆ !

ಆಕುಲಿ (ಕಳವಳದಿಂದ) : ಹಾಗಾದರೆ ಕೆಲಸ ಕೆಟ್ಟುಹೋಯಿತು !

ನಾಯಕ (ಗಾಬರಿಯಿಂದ) : ಏನಾಯಿತು ?

ಆಕುಲಿ (ಧೈರ್ಯವಾಗಿ) : ಏನೂ ಇಲ್ಲ. ನಾನು ನಿಮಗೆ ಹಿಂದೆ ಹೇಳಿದಂತೆ ಮನುವಿನ ಆ ಎತ್ತಿನ ಶರೀರದಲ್ಲಿ 'ದೇವೀ ವಾಚಾ' ಇಲ್ಲವೆ 'ಮಂತ್ರವಾಣಿ' ಸೇರಿಕೊಂಡಿತ್ತು. ಅದರ ಮೂಲಕ ಆ ಎತ್ತಿನ ಧ್ವನಿಯಿಂದ ಅಸುರರು ಸಾಯುತ್ತಿದ್ದರು. ಆ ಎತ್ತನ್ನು ಕೊಂದರೆ ಆ ಮಂತ್ರವಾಣಿಯೂ ಸತ್ತುಹೋಗುವುದು ಎಂದು ನಾವು ಬಗೆದಿದ್ದೆವು. ಆ ನಮ್ಮ ಎಣಿಕೆ ಸುಳ್ಳಾಯಿತು. ಇದೀಗ ಆ ಮಂತ್ರವಾಣಿ ಎತ್ತಿನ ಶರೀರದಿಂದ ಹೊರಬಿದ್ದು ಮನುವಿನ ಹೆಂಡತಿಯ ದೇಹದಲ್ಲಿ ಪ್ರವೇಶ ಮಾಡಿದೆ ಎಂದು ಅನುಭವಕ್ಕೆ ಬರುತ್ತಿದೆ.

ನಾಯಕ (ಚಿಂತಾಕುಲನಾಗಿ) : ಹಾಗಾದರೆ ಮುಂದೇನು ಗತಿ ?

ಆಕುಲಿ (ಸಮಾಧಾನದಿಂದ) : ಹೆದರಬೇಡಿ. ಇದಕ್ಕಾದರೂ ನಮ್ಮ ಬಳಿಯಲ್ಲಿ ಉಪಾಯವಿದೆ.

ನಾಯಕ (ಅದೇ ರೀತಿಯಲ್ಲಿ) : ಅದು ಎಂತಹದು ಸ್ವಾಮೀ ?

ಆಕುಲಿ (ಅದೇ ಪರಿಯಲ್ಲಿ) ಅಂತಹ ಕಷ್ಟವೇನೂ ಇಲ್ಲ. ಆ ಎತ್ತಿನ ದಾರಿಗೆ ಈ ಹೆಂಗಸನ್ನೂ ಕಳುಹಿದರೆ ತೀರಿತು. ಆ ಮಂತ್ರ-ವಾಣಿಗೆ ಚಿರಕಾಲಿಕ ವಿಮೋಚನೆ ದೊರೆಯುವುದು. ಅಸುರರ ಸಂಕಟವು ನೀಗುವುದು.

ನಾಯಕ (ಸಾಶಂಕನಾಗಿ) : ಎತ್ತನ್ನು ಕೊಲ್ಲಿಸುವಷ್ಟು ಹೆಂಡತಿಯನ್ನು ಕೊಲ್ಲಿಸುವುದು ಸುಲಭವೇ, ಸ್ವಾಮೀ !

ಆಕುಲಿ (ಧೈರ್ಯವಾಗಿ) ಸುಲಭವಲ್ಲದಿದ್ದರೂ ಅಸಾಧ್ಯವಲ್ಲ.

ನಾಯಕ (ಅದೇ ಪರಿಯಲ್ಲಿ) : ಅದೆಂತು ? ವಿವರಿಸಿ ನೋಡುವ.

ಆಕುಲಿ (ನಸು ನಗೆಯಿಂದ) : ಮತ್ತೆ ಅದೇ ಆ ಮಂತ್ರದ ಪ್ರಯೋಗವನ್ನು ಮಾಡುವುದು.

ನಾಯಕ (ಕುತೂಹಲದಿಂದ) : ಏನು ಅವಳನ್ನೂ ಯಜ್ಞಪಶುವನ್ನು ಮಾಡಿ ಕೊಲ್ಲಿಸುವುದೆ ? ಆ ಧೂರ್ತನು ಎತ್ತನ್ನು ಕೊಲ್ಲಲು ಒಡಂಬಡಲಿಲ್ಲ ಎಂದು ಹೇಳಿದಿರಿ. ಎಷ್ಟೋ ಕಷ್ಟವಾಯಿತು ಎಂದು ವರ್ಣಿಸಿದಿರಿ. ಇದೀಗ ತನ್ನ ಸತಿಯನ್ನೇ ಬಲಿಕೊಡಲು ಆ ಹಠವಾದಿ ಮುದುಕ ಒಪ್ಪಿಯಾನೆ ?

ಆಕುಲಿ (ನಿರ್ಧಾರ ವಾಣಿಯಿಂದ) : ಒಪ್ಪುವಂತೆ ಮಾಡುವೆ. ಇಲ್ಲದಿದ್ದರೆ ನಿಮ್ಮ ಪೌರೋಹಿತ್ಯವನ್ನು ಮಾಡಿದ್ದಕ್ಕೆ ಫಲವೇನು ? ಯಾವ ಭ್ರಮೆಯ ಮೂಲಕ ಆ ವೃದ್ಧಖೂಳನು ತನ್ನ ವೃಷಭರಾಜನಿಗೆ ತಿಲಾಂಜಲಿಯನ್ನು ಇತ್ತನೋ, ಅದೇ ಆ ಯಜ್ಞದ ಹುಚ್ಚು ಆತನನ್ನು ತನ್ನ ಅರ್ಧಾಂಗಿಯನ್ನು ಹೋಮಿಸುವಂತೆ ಅಣಿಮಾಡುವುದು.

ನಾಯಕ (ಪ್ರಶಂಸೆಯಿಂದ): ಅಂತೂ ನಿಮ್ಮ ಧೈರ್ಯ ಹೆಚ್ಚಿನದು. ನಿಮ್ಮ ಧೈರ್ಯವನ್ನೇ ನಂಬಿ ನಾವು ಹೇಗೋ ಬಾಳಿದ್ದೇವೆ.

ಆಕುಲಿ (ಆಶ್ವಾಸನಪೂರ್ವಕ) : ನಸುವೂ ಚಿಂತೆ ಬೇಡ. ನಾನೀ ಕೆಲಸವನ್ನು ನಿಶ್ಚಯವಾಗಿ ನೆರವೇರಿಸುವೆ. ಇದೀಗ ನಾನು ಆ ಮುದುಕನಿಗೆ ಕೇವಲ ವಿಶ್ವಾಸಪಾತ್ರ. ಪಶುವನ್ನು ಹುಡುಕಿಕೊಂಡು ಬರುವ ನೆಪ ಹೇಳಿ ಇಲ್ಲಿಗೆ ಓಡಿ ಬಂದಿದ್ದೇನೆ. ಮರಳಿ ಅಲ್ಲಿಗೆ ಬೇಗ ಹೋಗಬೇಕು.

ನಾಯಕ (ಸಂತೋಷವಾಗಿ) : ನಿಮ್ಮ ಕಾರ್ಯವು ಜಯಶಾಲಿ ಆಗಲಿ.

ಆಕುಲಿ (ನಿರ್ಭಯವಾಗಿ) : ನಿಶ್ಚಿಂತರಾಗಿರಿ.

ನಾಯಕ (ವಿನಯವಾಗಿ) : ಸಾಷ್ಟಾಂಗ ಪ್ರಣಾಮಗಳು.

[ಇಬ್ಬರೂ ಬೇರೆ ಬೇರೆ ದಿಕ್ಕಿನಿಂದ ಹೊರಟು ಹೋಗುವರು.]

(ತೆರೆ ಬೀಳುವುದು.)

ಮೂರನೆಯ ದೃಶ್ಯ

ಒಂದನೆಯ ದೃಶ್ಯದಲ್ಲಿಯ ಮನುವಿನ ಬಿಡಾರ. ಯಜ್ಞಶಾಲೆಯಲ್ಲಿ ಅಗ್ನಿಕುಂಡಗಳ ಮುಂದೆ ಜಟಾಧಾರಿ ಭವ್ಯಕಾಯ ಮನು ಆಸನಸ್ಥನಾಗಿ ಕುಳಿತಿದ್ದಾನೆ. ವೇದ ಮಂತ್ರಗಳನ್ನು ಪಠಿಸುತ್ತ, ಉಚ್ಚ ಧ್ವನಿಯಲ್ಲಿ ಇಂದ್ರ ಮತ್ತು ಸವಿತಾರರ ಸ್ತೋತ್ರಗಳನ್ನು ಉಚ್ಚರಿಸುವನು.

ಮನು (ತನ್ಮಯನಾಗಿ ಇಂದ್ರನನ್ನು ಸ್ತುತಿಸುವನು) :

ಚಲಿಸುತಿಹ ಈ ನೆಲವ ಬಳಕುವಾ ಬೆಟ್ಟಗಳ
ನೆಲೆಗೊಳಿಸಿ ನಿಲ್ಲಿಸಿಹೆ ಮೇರೆಯರಿಯದ ಮುಗಿಲ ।
ಜನದ ಹಗೆ ವೃತ್ರನನು ವಧಿಸಿದ್ಯೆ ಸೋಮಭುಜ
ನಿನಗೆ ನಮಿಸುವೆ ವಜ್ರಿ ! ವೀರವರ, ಸುರರಾಜ ॥

[ಅದೇ ಭಕ್ತಿಪರವಶತೆಯಿಂದ ಸವಿತಾರನನ್ನು ಸ್ತುತಿಸುವನು]

ನುತಿಸು ಯುವನನು ನಿತ್ಯ, ಸಾಗರದ ಮರೆಯಿಂದೆ
ಗತಿಸಿ ಉದಿಸುವನವನು; ಸತ್ಯವಾತಗೆ ತಂದೆ ।
ಧನಗಳನು ಸೃಜಿಸುತಿಹ ಕರುಣೆಯನು ದೇವನನು
ನೆನೆ ಮನವೆ ! ಸುಲಭನನು, ಸುಮುಖ ಸವಿತಾರನನು ॥

ಎಳಸುವೆವು ಆತ್ಮದೊಳ್
ತೊಳಗುವಾ ತೇಜವನು ।
ಇರದೆ ನಮ್ಮಯ ಮತಿಯ
ಅರಳಿಸೈ ಸವಿತಾರ ॥

["ಎಳಸುವೆವು ಆತ್ಮದೊಳ್" ಎಂಬ ಪದ್ಯವನ್ನು ಮೂರು ಸಲ ಪಠಿಸುವನು. ಕೆಲ ನಿಮಿಷ ಧ್ಯಾನಸ್ಥನಾಗುವನು. ಧ್ಯಾನವು ಮುಗಿಯಲು ಸಚಿಂತನಾಗಿ ಅತ್ತಿತ್ತ ನೋಡುವನು. ಅಷ್ಟರಲ್ಲಿ ಹೊರಗಿನಿಂದ ಯಾರೋ ಬರುತ್ತಿರುವ ಸದ್ದು ಕೇಳಿಸುವುದು. ಸಮಾಧಾನಗೊಂಡು ಉತ್ಕಂಠೆಯಿಂದ ಆ ಕಡೆ ದಿಟ್ಟಿಸಿ ನೋಡುವನು. ಬರುವವನು ಆಕುಲಿ ಎಂದು ಗೊತ್ತಾಗಲು ಸಂತೋಷಗೊಳ್ಳುವನು. ಬರುಬರುತ್ತ ಆಕುಲಿಯ ಮುಖವು ಸ್ಪಷ್ಟವಾಗಿ ಕಾಣಿಸುವುದು. ಆತನ ಮುಖದ ಮೇಲಿನ ನಿರಾಸೆಯ ಚಿನ್ಹೆಯನ್ನು ನೋಡಿ ಮನು ಮತ್ತೆ ಚಿಂತಾಕುಲನಾಗುವನು. ಆಕುಲಿ ಹತ್ತಿರಕ್ಕೆ ಬಂದವನೇ ಉಶ್-ಶ್ ಎಂದು ಉಸಿರುಗರೆಯುತ್ತ ದಮ್ಮಯ್ಯ ಎಂದು ಯಜ್ಞಕುಂಡಗಳ ಮುಂದೆ ಕುಸಿದುಬೀಳುವನು.]

ಮನು (ವ್ಯಾಕುಲತೆಯಿಂದ) : ಏನಯ್ಯ ಆರ್ಯ ಪುರೋಹಿತರೇ ! ನೀವು ಹೋದ ಕೆಲಸ ಹಣ್ಣೋ ಕಾಯೋ ?

[ಆಕುಲಿ ಮೌನವಾಗಿದ್ದು ವ್ಯಥೆಪಡುವಂತೆ ನಟಿಸುವನು.]

ಮನು (ಅದೇ ಭಾವದಿಂದ) : ಏಕೆ ಪುರೋಹಿತರೇ! ಮಾತನಾಡ ಲೊಲ್ಲಿರಿ? ಹೇಳಿ, ಬೇಗ ಹೇಳಿ.

ಆಕುಲಿ (ಬೇಸತ್ತವನಂತೆ): ಏನನ್ನು ಮಾತಾಡಬೇಕು, ಸ್ವಾಮೀ?

ಮನು (ಸಿಡಿಮಿಡಿಗೊಂಡು) : ನಿಮ್ಮೀ ರೀತಿಯನ್ನು ನೋಡಿದರೆ, ನೀವು ಬರಿಗೈಯಿಂದ ತಿರುಗಿ ಬಂದಂತೆ ತೋರುತ್ತದೆ. ನೀವು ಬರಲಿಕ್ಕೇ ಒಂದೆರಡು ದಿನ ತಡವಾಯಿತು. ಮೊನ್ನಿನ ದಿನ ಆರಂಭಿಸಬೇಕೆಂದಿದ್ದ ಯಜ್ಞವನ್ನು ನಾಳಿನ ದಿನವಾದರೂ ಪ್ರಾರಂಭಿಸುವ, ಎಂದು ನೆನೆದುಕೊಂಡಿದ್ದೆನು. ಅದಕ್ಕೂ ತಡೆ ಎಂಬಂತೆ ತೋರುತ್ತದೆ. ನಿಮ್ಮ ದಿಗ್ವಿಜಯದ ವೃತ್ತಾಂತವನ್ನಾದರೂ ವಿವರಿಸಿ.

ಆಕುಲಿ (ಗಂಭೀರವಾಗಿ): ವಿವರಿಸುವಂತಹದೇನೂ ಇಲ್ಲ. ಇಲ್ಲಿಂದ ಹೊರಟಾಗಿನಿಂದ ನನ್ನ ಕನಸು ಮನಸಿನಲ್ಲಿಯೂ ಒಂದೇ ವಿಚಾರ. ಯಜ್ಞಪಶು ಹೇಗೆ ದೊರೆತೀತು, ಎಂದು ಜಪ ಮಾಡುತ್ತ ಊರೂರಿಗೆ ಅಲೆದಾಡಿದೆನು. ಬಹಳವಾಗಿ ಕಷ್ಟ ಪಟ್ಟೆನು, ಪ್ರಯೋಜನವಾಗಲಿಲ್ಲ. ಇದೀಗ ಪಶುಗಳ ದುರ್ಭಿಕ್ಷವು ಮಿತಿಮೀರಿದೆ.

ಮನು (ಚಿಂತಾತುರನಾಗಿ) : ಹಾಗಾದರೆ ನಾಳಿನ ನನ್ನ ಯಜ್ಞದ ಸಂಕಲ್ಪವು ಈಡೇರುವುದಿಲ್ಲವೆ? ಹಾ, ಯಜ್ಞಪುರುಷಾ! ನಾನೆಂತಹ ಅಭಾಗಿ! (ಆಳವಾದ ಯೋಚನೆಯಲ್ಲಿ ಮುಳುಗಿ ಈ ಮುಂದಿನ ಪಂಕ್ತಿಗಳನ್ನು ಗುಣಗುಡುವನು.)

ಯಜ್ಞದಿಂ ಪುರುಷನನು ಪೂಜಿಪರು ಸುರರು।
ಯಜ್ಞದಲಿ ನಿಂತಿಹರು ಸ್ಥಾವರರು ಜಂಗಮರು।
ಯಜ್ಞವೇ ಪರಸತ್ಯ, ಯಜ್ಞವೇ ಆನಂದ।

ಆಕುಲಿ (ಕೆಲ ನಿಮಿಷ ತಲೆತಗ್ಗಿಸಿ ಮೌನವಾಗಿದ್ದು ಬಳಿಕ ಕತ್ತಲೆ ಯಲ್ಲಿ ಬೆಳಕನ್ನು ಕಂಡವನಂತೆ ಮುಖವನ್ನು ಮೇಲಕ್ಕೆತ್ತಿ): ಈ ಅನರ್ಥದಿಂದ ಮುಕ್ತರಾಗಲು ಒಂದು ಮಾರ್ಗವಿದೆ. ಆದರೆ ಅದು ತಮಗೆ ಹೇಗೆ ರುಚಿಸುವುದೊ? ಈ ವಿಷಯ ವನ್ನು ಪ್ರಸ್ತಾವಿಸಲು ನನಗೆ ತುಂಬ ಸಂಕೋಚ.

ಮನು (ಸಂತೋಷದ ಸುಳಿಯಿಂದ): ಪರವಾ ಇಲ್ಲ, ಪುರೋಹಿ ತರೆ! ಸಂಕೋಚವಿಲ್ಲದೆ ಹೇಳಿಬಿಡಿ.

ಆಕುಲಿ (ಆಶ್ವಾಸನ ಪಡೆದವನಂತೆ) : ಯಜ್ಞಶಾಸ್ತ್ರದಂತೆ ಬೇರೆ ಬೇರೆ ಜಾತಿಯ ಪ್ರಾಣಿಗಳು ಯಜ್ಞಪಶುವಾಗಬಹುದಷ್ಟೇ?

ಮನು : ಆಗಬಹುದು; ಧಾರಾಳವಾಗಿ.

ಆಕುಲಿ (ನಾಲಗೆಯನ್ನು ಕಚ್ಚುತ್ತ) : ನಾಲ್ಕು ಕಾಲಿನ ಪಶುಗಳಂತೆ, ಎರಡು ಕಾಲಿನ ಪಾರಿವಾಳ, ಮೊದಲಾದುವು ಹೇಗೋ, ಹಾಗೆ —

ಮನು (ದುಡುಕಿನಿಂದ) : ಹಾಗೆ-ಏನು? ಹೇಳಯ್ಯ, ತಡವರಿಸುವು ದೇಕೆ?

ಆಕುಲಿ (ಅದೇ ರೀತಿಯಲ್ಲಿ) : ಅಲ್ಲ, ಎರಡು ಕಾಲಿನ ಮನುಷ್ಯ?

ಮನು (ಗಟ್ಟಿಯಾಗಿ) : ಮನುಷ್ಯನೂ ಯಜ್ಞಪಶುವಾಗಬಲ್ಲನು. ನರಮೇಧವು ಶಾಸ್ತ್ರಸಂಮತವಲ್ಲದೆ ಯಜ್ಞಪುರುಷನಿಗೆ ಪ್ರೀತಿ ಕರವಾದುದು.

ಆಕುಲಿ : ಹಾಗಾದರೆ ನಾಳಿನ ತಮ್ಮ ಯಜ್ಞಸಂಕಲ್ಪವು ಸಫಲ ವಾಗುವಲ್ಲಿ ಸಂದೇಹವಿಲ್ಲ.

ಮನು (ಸಾಶಂಕನಾಗಿ) : ಅದು ಹೇಗಯ್ಯ? ತನ್ನ ಜೀವನವನ್ನು ಈ ಪವಿತ್ರ ಕಾರ್ಯಕ್ಕೆ ಧಾರೆಯೆರೆಯಬಲ್ಲ ನರಪಶುವಾದರೂ ಸಿಕ್ಕುವುದು ಸುಲಭವೇ, ಪುರೋಹಿತರೆ!

ಆಕುಲಿ (ಸಂತೋಷವನ್ನು ನಟಿಸುತ್ತ): ತಾವು ಒಪ್ಪುವುದಾದರೆ, ಸುಲಭವೇ, ಸ್ವಾಮಿ!

ಮನು (ಕುತೂಹಲದಿಂದ): ಅದು ಯಾರಪ್ಪ ಅಂತಹರು?

ಆಕುಲಿ : ನಾನೇ ಮಹಾಸ್ವಾಮಿ!

ಮನು (ಸಾಶಂಕನಾಗಿ): ಏನು ಪುರೋಹಿತರೇ, ನೀವು ನನ್ನ ಯಜ್ಞಕಾರ್ಯಕ್ಕಾಗಿ ನಿಮ್ಮನ್ನು ಪಶುವಾಗಿಸಿಕೊಳ್ಳಲು ಇಷ್ಟ ಪಡುವಿರಾ?

ಆಕುಲಿ (ಅಂಜಲಿಬದ್ಧನಾಗಿ) : ಹಾಂ ಸ್ವಾಮಿ! ತಮ್ಮ ಆಪತ್ತಿಗೆ ಆಗದೆ ಇದ್ದರೆ ನಾನು ತಮಗೆ ಆಪ್ತ ಪುರೋಹಿತನೆಂತು?

ಮನು (ಕೆಲ ನಿಮಿಷ ಯೋಚನಾಪರನಾಗಿ): ಆಗದು, ಸರ್ವಥಾ ಆಗದು. ಇಂತಹ ವಿಚಾರವನ್ನು ನಾನು ಎಲ್ಲಿಯೂ ಕೇಳಿಲ್ಲ. ಇದು ಶಿಷ್ಟಸಂಮತವೂ ಅಲ್ಲ. ಮೇಲಾಗಿ ಪುರೋಹಿತನೇ ಯಜ್ಞಪಶುವಾದ ಬಳಿಕ ಮುಂದೆ ನನ್ನ ಯಜ್ಞಕಾರ್ಯ ಗಳು ನಡೆಯುವುದೆಂತು? ನನ್ನ ಹಿಂದಿನ ಪುರೋಹಿತರ ವರ್ತಮಾನವಂತೂ ಇಲ್ಲವೇ ಇಲ್ಲ. ಆದ್ದರಿಂದ ಈ ವಿಚಾರ ವನ್ನು ತೆಗೆದುಹಾಕಿ ಇಂತಹ ಬೇರೆ ಸೂಚನೆ ಏನಾದರೂ ಇದ್ದರೆ ಹೇಳಿ.

ಆಕುಲಿ (ಕೆಲ ನಿಮಿಷ ಸುಮ್ಮನೆ ಇರುವನು; ಬಳಿಕ ಆಲೋಚಿ ಸುತ್ತ ಏನೋ ಒಂದು ಹೊಳೆದಂತೆ ನಟಿಸಿ) : ನೈಷ್ಠಿಕ ಯಜ ಮಾನನು ಯಜ್ಞಪುರುಷನಿಗಾಗಿ ತನ್ನ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ಧನಿರಬೇಕು, ಅಲ್ಲವೆ?

ಮನು : ಸಂದೇಹವೇನು? ಅಂತಹ ಸಂದರ್ಭ ಒದಗಿದರೆ ತನ್ನನ್ನು ಕೂಡ ಆಹುತಿಯಾಗಿಸಬೇಕು.

ಆಕುಲಿ (ಮೆಲ್ಲಮೆಲ್ಲನೆ, ನಾಲಗೆಯನ್ನು ಕಚ್ಚುತ್ತ) : ಹಾಗಾದರೆ, ತಮಗೆ ಸರಿದೋರಿದರೆ, ತಾವು ಅನ್ಯಥಾ ಭಾವಿಸುವುದಿಲ್ಲ ವಾದರೆ–

ಮನು : ಇಷ್ಟು ದುಂಡುಸುತ್ತೇಕೆ, ಪುರೋಹಿತರೆ? ನೇರವಾಗಿ ಹೇಳಿ.

ಆಕುಲಿ (ಅದೇ ರೀತಿಯಲ್ಲಿ) : ಅ-ಲ್ಲ; ಮತ್ತೆ; ತ-ಮ್ಮ-ವ-ರು-ಅ-ವ-ರು—ಇ-ದ್ದಾ-ರ-ಲ್ಲ-ವೆ?

ಮನು : (ದುಡುಕಿನಿಂದ): ಯಾರವರು? ಸ್ಪಷ್ಟವಾಗಿ ಹೇಳಿ.

ಆಕುಲಿ (ಅದೇ ರೀತಿಯಲ್ಲಿ): ಅಂ; ಅ-ತಮ್ಮ-ಮನೆಯವರು! ಕ್ಷಮಿಸಿ ಆ ಮಾತಾಯಿಯ ಮಾತನ್ನು ಎತ್ತಿದುದಕ್ಕೆ.

[ಪಕ್ಕದ ಪರ್ಣಶಾಲೆಯಿಂದ ಹೆಂಗಸಿನ ಕೂಗಾಟ ಕೇಳಿಸುವುದು.]

ಮನು (ಕೆಲ ನಿಮಿಷ ಯೋಚನೆಯಲ್ಲಿ ಮುಳುಗುವನು; ಬಳಿಕ ಸಂತೋಷ ಮುದ್ರೆಯಿಂದ): ಪುರೋಹಿತರೇ, ನಿಮ್ಮ ಮಾತಿಗೆ ನನ್ನ ಒಪ್ಪಿಗೆ ಇದೆ.

ಆಕುಲಿ (ದುಃಖವು ತುಂಬಿಬಂದು ಬಿಕ್ಕುವ ಅಳುವಿನಿಂದ) : ಅಲ್ಲ; ಮನಾವಿಯಮ್ಮನವರು ಮಹಾ ಮಾತೆ; ಸಾಧ್ವೀಮಣಿ, ಅನೇಕ ಮಕ್ಕಳ ತಾಯಿ; ಪುಣ್ಯವಂತಿ; ಅಂತಹರು—ಅವರನ್ನು—.

ಮನು (ನಿರ್ಧಾರವಾಗಿ) : ಪರವಾ ಇಲ್ಲ. ಯಜ್ಞಪುರುಷನ ಪ್ರೀತಿಗೋಸುಗ ಸರ್ವಸ್ವವನ್ನು ತ್ಯಾಗ ಮಾಡುವುದೇ ನಮ್ಮ ಜೀವನದ ಗುರಿ!

ಆಕುಲಿ (ಅದೇ ರೀತಿಯಲ್ಲಿ) : ಆ ಮಾತೃಶ್ರೀಯವರ ಅನಂತ ಸದ್ಗುಣಗಳನ್ನು ನೆನೆದು ನೆನೆದು ನನ್ನ ಹೃದಯವು ಹಣ್ಣಾಗುತ್ತದೆ.

ಮನು (ಅಲಕ್ಷ್ಯವಾಗಿ): ಹೋಗಲಿ ಬಿಡಿ; ಈಗೀಗ ಆಕೆಯ ರೀತಿ ಒಂದು ವಿಚಿತ್ರವಾಗಿದೆ. ಒಮ್ಮೊಮ್ಮೆ ನನಗೆ ಕೂಡ ಬೇಸರವಾಗುತ್ತದೆ.

[ಪಕ್ಕದ ವನದ ಕೊಟ್ಟಿಗೆಯಿಂದ ಹೆಂಗಸಿನ ಚೀರಾಟ ಕೇಳಿಸುವುದು.]

ಆಕುಲಿ (ಭಯವಾಗಿ) : ಹಾಗೆಂದರೇನು, ಸ್ವಾಮಿ!

ಮನು (ಶಾಂತವಾಗಿ) : ಸ್ವಭಾವತಃ ಆವಳು ಮಾತಾಳಿಯಲ್ಲ; ಮಿತಭಾಷಿಣಿ. ಆದರೆ ನಮ್ಮ ವೃಷಭರಾಜನು ಹತನಾದಂದಿನಿಂದ ಆಕೆಯ ನಾಲಗೆ ಏಕೋ ಚುರುಕಾಗಿದೆ.

ಆಕುಲಿ (ಕುತೂಹಲದಿಂದ) : ಅದು ಹೇಗೆ ಸ್ವಾಮಿ?

ಮನು : ಬೆಳಗಿನಲ್ಲಿ ಎದ್ದಕೂಡಲೆ ಕೂಗಾಡಲು ಪ್ರಾರಂಭಿಸುವಳು! ಮೈಮೇಲೆ ಏನೋ ಆವೇಶ ಬಂದಂತೆ ನಟಿಸುವಳು. ಆಕ್ರೋಶ ಮಾಡುವಳು, ಬೈಯುವಳು, ಶಪಿಸುವಳು.

ಆಕುಲಿ (ಚಕಿತನಾದಂತೆ) : ಇದೆಂತಹ ವಿಚಿತ್ರ ಸಮಾಚಾರ!

ಮನು : ಒಂದೊಂದು ಸಮಯ ಹೀಗೆ ಕೂಗಾಡುತ್ತ ಕಾಡಿನೊಳಗೆ ಹೋಗಿ ಬಿಡುವಳು, ಎಷ್ಟು ಹೊತ್ತಾದರೂ ಮರಳಿ ಬಿಡಾರಕ್ಕೆ ಬರುವುದೇ ಇಲ್ಲ!

ಆಕುಲಿ (ಕಳವಳದಿಂದ) : ಕಷ್ಟ, ಬಹು ಕಷ್ಟ! ಇಂತಹ ಜನಗಳನ್ನು ಹಿಡಿಯುವುದು ಬಹು ಕಷ್ಟ!!

ಮನು: ಆದರೆ ಸೂಕ್ಷ್ಮವಾಗಿ ನೋಡಿದರೆ, ಅಸಂಬದ್ಧವಾಗಿ ತೋರುವ ಆಕೆಯ ಪ್ರಲಾಪಗಳಲ್ಲಿ ಒಂದು ವಿಧವಾದ ಸುಸಂಬದ್ಧತೆ ಕಾಣುವುದು. ಅಕೋ ಕೇಳಿ.

[ಆಶ್ರಮದ ವಾಯುವ್ಯ ಮೂಲೆಯಲ್ಲಿ ಹೆಂಗಸಿನ ಆಕ್ರೋಶ ಧ್ವನಿ]

ಆಕುಲಿ (ವಿಚಾರಯುಕ್ತನಾಗಿ) : ವಯಸ್ಸು ಹೆಚ್ಚಾಗಿ, ಬುದ್ಧಿ ಸ್ಥಿರವಾಗಿರದಿದ್ದರೆ ಹೀಗಾಗುವುದೆಂದು ಹೇಳುವರು.

ಮನು : ಆಕೆ ನನಗಿಂತ ಚಿಕ್ಕವಳು.

ಆಕುಲಿ (ತಲೆ ಜಾಡಿಸುತ್ತ) : ಬೇಡ; ಆ ವಿಚಾರವೇ ಬೇಡ. ಈ ವಿಷಯದಲ್ಲಿ ಇನ್ನಿಷ್ಟು ನಿಧಾನವಾಗಿ ಯೋಚಿಸಿದರೆ ಉತ್ತಮ.

ಮನು (ನಿರ್ಧಾರವಾಗಿ) : ಆಗದು, ಆಗದು. ನಾಳಿನ ನನ್ನ ಸಂಕಲ್ಪವು ಸಫಲವಾಗಲೇಬೇಕು. ಅದಕ್ಕಾಗಿ ಅವಳನ್ನು ಯಜ್ಞಪಶುವನ್ನು ಮಾಡಲೇಬೇಕು.

ಆಕುಲಿ (ಅಂಗಲಾಚಿ) : ತಾತರೇ! ಹಾಗೆ ಹಟ ಹಿಡಿಯಬೇಡಿ. ಆ ಮಾತಾಯಿಯನ್ನು ಕಾಪಾಡಿ.

[ಆಶ್ರಮಕ್ಕೆ ದೂರದ ಪ್ರದೇಶದಿಂದ ಹೆಂಗಸಿನ ಅಸ್ಪಷ್ಟ ಕೇಕೆ ಕೇಳಿಸುವುದು.]

ಮನು: ಚನ್ನಾಗಿ ಕಾಪಾಡುವೆ. ಯಜ್ಞದಲ್ಲಿ ತಮ್ಮ ಪವಿತ್ರ ಪ್ರಾಣಗಳನ್ನು ಅರ್ಪಣ ಮಾಡಿದ ಪಶುಗಳಿಗೆ ಮುಂದೆ ಸ್ವರ್ಗದಲ್ಲಿ ಎಂತಹ ಉತ್ತಮ ಗತಿ ಪ್ರಾಪ್ತವಾಗುವುದು; ಗೊತ್ತಿಲ್ಲವೆ? ಇದುವೆ ಜೀವನದ ಧನ್ಯತೆ!

ಆಕುಲಿ: ಹಾಗಾದರೆ—

ಮನು: ನನ್ನೀ ನಿರ್ಧಾರವು ಅಚಲವಾದುದು. ಪುರೋಹಿತರೆ, ಇನ್ನು ಹೊರಟುಬಿಡಿ. ನಾಳಿನ ಯಜ್ಞದ ಸಿದ್ಧತೆಯನ್ನು ಮಾಡಿ.

ಆಕುಲಿ (ಗದ್ಗದಿತ ವಾಣಿಯಿಂದ) : ತಮ್ಮ ತ್ಯಾಗವು ಅಪೂರ್ವವಾದುದು. ತಾವು ಯಜ್ಞಪುರುಷನಿಗೆ ಅತ್ಯಂತ ಪ್ರೀತಿ ಪಾತ್ರರು. 'ಯಜ್ಞವೇ ಪರಸತ್ಯ, ಯಜ್ಞವೇ ಆನಂದ' (ಎನ್ನುತ್ತ ಹೊರಟು ಹೋಗುವನು.)

(ತೆರೆ ಬೀಳುವುದು)

ನಾಲ್ಕನೆಯ ದೃಶ್ಯ

ದೂರದಲ್ಲಿರುವ ಅಸುರರ ಒಂದು ಪಾಳ್ಯ- ಅಸುರ ನಾಯಕನು ಭಯಭೀತನೂ ಚಿಂತಾಕ್ರಾಂತನೂ ಆಗಿದ್ದಾನೆ. ಆತನ ಮುಖವು ಕಪ್ಪಿಟ್ಟಿದೆ. ಆಕುಲಿ ಇದೀಗ ಅಲ್ಲಿಗೆ ಬಂದವನಾಗಿ ಆತನೊಡನೆ ಮಾತಾಡುತ್ತಿರುವನು.

ಅಸುರನಾಯಕ: ಆಕುಲಿಗಳೇ! ನೀವು ಅಸುರಜನಾಂಗಕ್ಕಾಗಿ ಬಹುವಾಗಿ ಶ್ರಮಪಟ್ಟಿರಿ; ಅದೇನೋ ನಿಜ. ಆ ಹುಚ್ಚನ ಕೈಯಿಂದ ತನ್ನ ಹೆಂಡತಿಯನ್ನೂ ಕೊಲ್ಲಿಸಿದಿರಿ. ಅದರಿಂದ ನೀವೇನೋ ತಿಳಿದಿರಬಹುದು, ನಾವು ಸುಖವಾಗಿ ಬಾಳುವೆವೆಂದು. ಆದರೆ ನಮ್ಮ ದುರ್ದೈವದಿಂದ ಹಾಗೆ ಆಗಿಲ್ಲ.

ಆಕುಲಿ (ಆಶ್ಚರ್ಯದಿಂದ) : ನಿಜವೇ ? ಮನಾವಿಯ ಮರಣದಿಂದ ಅಸುರರ ಆಪತ್ತು ಅಳಿಯಲಿಲ್ಲವೆ ?

ನಾಯಕ : ಇಲ್ಲ, ಎಷ್ಟೂ ಇಲ್ಲ. ಅದು ಇನ್ನಿಷ್ಟು ಹೆಚ್ಚಿದೆ.

ಆಕುಲಿ (ಅದೇ ರೀತಿಯಲ್ಲಿ) : ಇದೇನು ವಿಚಿತ್ರ ! ಅದು ಹೇಗೆ ಹೇಳಿ ನೋಡುವ.

ನಾಯಕ (ಉದ್ವೇಗದಿಂದ) : ಅದು ಈಗಾಗಲೆ ನಿಮಗೆ ಸ್ವಲ್ಪ ಮಟ್ಟಿಗೆ ಗೊತ್ತಾಗಿರಬಹುದು. ನಮ್ಮ ಪಾಳ್ಯವು ಇಷ್ಟು ಇಷ್ಟು ದೂರ ಬಂದಿರುವುದೇಕೆ ? ನಮ್ಮ ಅಸುರರ ಪಾಳ್ಯಗಳ ಮೇಲೆಲ್ಲಾ ಮಸಣದ ಭೀಷಣ ಕರಿ ನೆಳಲು ಆವರಿಸಿರುವುದೇಕೆ? ಇದನ್ನು ನೀವು ಇನ್ನೂ ಲಕ್ಷಿಸಲಿಲ್ಲವೆ ?

ಆಕುಲಿ (ವ್ಯಾಕುಲತೆಯಿಂದ) : ಲಕ್ಷಿಸದೇ ಏನು, ನಾಯಕರೆ? ದಾರಿಯುದ್ದಕ್ಕೂ ಇದನ್ನೇ ನೋಡುತ್ತ ಆಲೋಚಿಸುತ್ತ ಬಂದಿರುವೆ. ನಿಮ್ಮ ಪಾಳ್ಯವನ್ನೂ ಸುಲಭವಾಗಿ ಕಂಡು ಹಿಡಿಯಲಿಕ್ಕೆ ಆಗಲಿಲ್ಲ. ಅಲ್ಲಲ್ಲಿ ವಿಚಾರಿಸುತ್ತ, ದಿನಗಟ್ಟಲೆ ದಣಿದುಕೊಂಡು ಬರಬೇಕಾಯಿತು. ಒಂದು ಪಾಳ್ಯದಿಂದ ಇನ್ನೊಂದು; ಅಲ್ಲಿಂದ ಆಚೆಗೆ; ಹೀಗೆ ಅಲೆದಲೆದೆನು. ಆದರೆ ಇದು ಹೀಗೇಕೆ ಆಯಿತು ಎಂಬುದನ್ನು ಬರೆದು ಹೇಳುವವರೇ ದೊರೆಯಲಿಲ್ಲ. ಎಲ್ಲರೂ ಚಿಂತೆಯಲ್ಲಿ ಮಗ್ನರು! ಎಲ್ಲರೂ ಸಾವಿನ ದವಡೆಯಲ್ಲಿ ಸಿಕ್ಕಂತೆ ಕಕ್ಕಾ ವಿಕ್ಕಿಯಾದವರು!

ನಾಯಕ (ಅದೇ ಪರಿಭವದಿಂದ) : ಹಾಗಾದರೆ ಈ ವೃತ್ತಾಂತವನ್ನು ವಿವರಿಸುವೆ, ಕೇಳಿ. ಹೋದ ಸಾರೆ ನನ್ನನ್ನು ಕಂಡು ನೀವು ಇಲ್ಲಿಂದ ಹೋದ ಬಳಿಕ, ಒಂದು ದಿವಸ ಇಳಿಹೊತ್ತಿನಲ್ಲಿ ಮನುವಿನ ಪಾಳ್ಯದ ದಿಕ್ಕಿನಲ್ಲಿ ಝುಗ್ಗನೆ ಏನೋ **ಒಂದು ಜ್ಯೋತಿ** ಹೊಳೆದಂತಾಯಿತಂತೆ. ಅದೇ ಸಮಯ ನೆಲವೂ ಸ್ವಲ್ಪ ಅದುರಿತಂತೆ. ಅದರಿಂದ ನಮ್ಮ ಪಾಳ್ಯಗಳಲ್ಲಿ ಹಲವಾರು ಮನೆಗಳು ಕುಸಿದುಬಿದ್ದುವು.

ಮರುದಿನದಿಂದ ಅಸುರ ಜನಾಂಗದ ಮೇಲೆ ಹೆಚ್ಚಿನ ಸಂಕಟಗಳು ಬರತೊಡಗಿದವು. ಆರ್ಯರ ದಂಡುಗಳು ನಮ್ಮ ಜನಗಳ ಮೇಲೆ ದಾಳಿಯನ್ನು ಮಾಡಲು ಮುಂದು ವರಿದುವು. ಅವರ ಜೊತೆಯಲ್ಲಿ ಕೆಲ ಬ್ರಾಹ್ಮಣರೂ ಇರು ವರು. ಅವರು ಇಂದ್ರ, ಅಗ್ನಿ ಮೊದಲಾದ ದೇವತೆಗಳನ್ನು ವೇದಮಂತ್ರಗಳಿಂದ ಸ್ತುತಿಸುವರು. ಸುರರ ಜಯಘೋಷ ವನ್ನು ಮಾಡುವರು. ಆರ್ಯರ ಈ ಆಕ್ರಮಣವನ್ನು ಇದುರಿಸುವ ಶಕ್ತಿಯು ಮಾತಂತೂ ದೂರವಿರಲಿ, ಅವರ ಮುಂದೆ ನಿಲ್ಲುವ ಧೈರ್ಯವು ಸಹ ನಮ್ಮ ಜನಗಳಲ್ಲಿ ಉಳಿಯದಂತಾಯಿತು.

ಆರ್ಯರ ಜೈತ್ರಯಾತ್ರೆ ಮುಂದುವರಿದಂತೆ ಅವರ ಯಜ್ಞ ಸಮಾರಂಭಗಳೂ ವಿಜೃಂಭಿಸಿದುವು. ಅವರಾ ಯಜ್ಞಗಳಲ್ಲಿ ನಡೆಯುವ ಮಂತ್ರಗರ್ಜನೆಯನ್ನು ಕೇಳುತ್ತಲೆ ನಮ್ಮೆದೆಗಳು ಝಲ್ಲೆನ್ನುತ್ತವೆ. ಇದೀಗ ಎಲ್ಲೆಲ್ಲಿಯೂ ಯಜ್ಞಗಳ ಹಾವಳಿ ಹೆಚ್ಚಾಗಿದೆ. ಸಂತತವಾಗಿ ಸಾಗಿರುವ ಈ ಯಜ್ಞಗಳಲ್ಲಿ ಅಧ್ವರ್ಯುಗಳು ಆಗಾಗ **ಹುಂಕಾರವನ್ನು** ಮಾಡುವರು; **ಯಜ್ಞ ಪಾತ್ರಗಳನ್ನು ಪಡಪಡನೆ ಬಾರಿಸುವರು.** ಘೋರ ವಾದ ಈ ಶಬ್ದಗಳನ್ನು ಕೇಳುತ್ತಲೆ ನಮ್ಮ ಜನರು ಮೊದಲಿ ನಂತೆ ಸಾಯತೊಡಗಿದ್ದಾರೆ. ಆರ್ಯರ ನೂತನವಾದ ಈ ಅಭಿಯೋಗದಿಂದ ಅಸುರಕುಲಗಳಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ. ಈ ಪಿಡುಗಿನಿಂದ ಪಾರಾಗಲು ನಮ್ಮ ಪಾಳ್ಯ ಪಟ್ಟುಗಳನ್ನು ಕಿತ್ತುಕೊಂಡು ಹೇಗೋ ಜೀವ ಉಳಿಸಿ ಕೊಂಡು, ಹೀಗೆ ದೂರ ದೂರ ಬಂದು ಬಿದ್ದಿರುವೆವು.

ಆಕುಲಿ (ಸಂತ್ರಸ್ತನಾಗಿ) : ಏನು ಹೀಗಾಯಿತೇ ನಮ್ಮಾ ಕೃತಿಯ ಪರಿಣಾಮ? ನಿಜವೆಂದು ನಂಬಲಾರದಷ್ಟು ವಿಲಕ್ಷಣ ವಾಗಿದೆ ಈ ವರ್ತಮಾನವು!

ನಾಯಕ (ಉದ್ವೇಗದಿಂದ) : ಬ್ರಾಹ್ಮಣರೇ! ಸಂದೇಹ, ಇನ್ನೂ ನಿಮಗೆ ಸಂದೇಹ! ಆರ್ಯರ ವೇದಮಂತ್ರಗಳಿಂದ ಮತ್ತು ಯಜ್ಞ ಸಮಾರಂಭಗಳಿಂದ ನಮ್ಮ ಅಸುರಜನಾಂಗವು ನಿತ್ಯವೂ ಕ್ಷೀಣಿಸುತ್ತಲಿದೆ. ಇದನ್ನು ನೀವು ಕಣ್ಣಾರೆ ಕಾಣುತ್ತಿರುವಿರಿ. ಆದರೂ ನಿಮಗೆ ಇನ್ನೂ ಸಂದೇಹ!

[ಆಕುಲಿಯ ಮುಖಚರ್ಯೆಗಳಿಳನೆ ಇಳಿದುಹೋಗುವುದು. ಆತನು ಕೆಲ ನಿಮಿಷ ಮೌನವಾಗಿ ಇರುವನು. ಹುಚ್ಚು ಹಿಡಿದವ ನಂತೆ ಏನೇನನೋ ಗೊಣಗಾಡುವನು. ಸ್ವಲ್ಪ ಹೊತ್ತು ಆಳವಾದ ಆಲೋಚನೆಯಲ್ಲಿ ಮುಳುಗಿಹೋಗುವನು. ಆ ಮೇಲೆ ಅರ್ಧ ಸ್ಮೃತಿಯಲ್ಲಿ ಮಾತಾಡುವನು.]

ಆಕುಲಿ : ಇನ್ನೂ ಸಂದೇಹ! ಇನ್ನೆಲ್ಲಿಯ ಸಂದೇಹ? ಯಾರೊ ಡನೆಯಾದರೂ ಹೋರಾಡಬಹುದು, ದೈವೀ ಶಕ್ತಿಯ ಮುಂದೆ ಹೋರಾಡುವದು ದುಸ್ತರ!

ನಾಯಕ (ಹೌಹಾರಿ, ಅಂಗಲಾಚುತ್ತ) : ಆಕುಲಿಗಳೇ, ಹೇಳಿ. ಇನ್ನು ನಮ್ಮ ಅಸುರ ಜನಾಂಗವನ್ನು ಉಳಿಸಿಕೊಳ್ಳುವ ಉಪಾಯ ಯಾವುದು?

[ಈ ಪ್ರಶ್ನೆಯನ್ನು ಕೇಳಿ ಆಕುಲಿಯ ಮುಖವು ವಿಲಕ್ಷಣವಾಗಿ ಪರಿವರ್ತನಗೊಳ್ಳುವುದು. ಆತನ ಹೃದಯದಲ್ಲಿ ಯಾವುದೋ ಒಂದು ಪ್ರಬಲ ಭಾವನೆ ಸಂಚರಿಸಿರುತ್ತಿರುವಂತೆ ಭಾಸವಾಗುವುದು. ಅದರ ಸ್ಫೂರ್ತಿಯಿಂದ ಆತನ ಅಂಗಾಂಗಗಳು ಚಲಿಸುವುವು. ತುಟಿ ಗಳು ಅಲುಗಾಡುವುವು. ಆವೇಶಬಂದಂತಾಗಿ ವೀರವಾಣಿಯಿಂದ ಆತನು ನುಡಿಯುವನು.]

ಆಕುಲಿ : ಉಪಾಯ! ಅಸುರ ಜನಾಂಗವನ್ನು ಉಳಿಸುವ ಉಪಾಯ! ಹಂ! ಇನ್ನು ಎಲ್ಲಿಂದ ಸಾಧ್ಯವದು?

ದೈವೀಶಕ್ತಿಯನ್ನು ಪ್ರತಿಭಟಿಸಿ ಯಾರಾದರೂ ಜಯ ಶೀಲರಾಗಬಲ್ಲರೆ? ನಾಯಕರೆ, ಕೇಳಿ. ಆರ್ಯರಿಗೆ ದೇವರ ಬಲವಿದೆ. ಅಗ್ನಿಯನ್ನು ಪೂಜಿಸಿ, ಯಜ್ಞಗಳನ್ನು ನೆರವೇರಿಸಿ ಆರ್ಯರು ಸುರರಿಗೆ ಪ್ರಿಯರಾಗಿದ್ದಾರೆ. ಅಗ್ನಿಯನ್ನು

ಹೊಸ ಪ್ರಕಟನೆಗಳು

ಬಿರುಗಾಳಿ	ಕುವೆಂಪು	೧-೮-೦
ಅನ್ತಃಪುರಗೀತೆ	ಡಿ. ವಿ. ಜಿ.	೩ ೮-೦
ಸಾಹಿತ್ಯಶಕ್ತಿ	ಡಿ. ವಿ. ಜಿ.	೩-೪-೦
ತಪೋನಂದನ	ಕುವೆಂಪು	೧-೧೨-೦
ಶ್ರೀರಾಮಕೃಷ್ಣ	ಕುವೆಂಪು	೩-೧೨-೦
ಚಂದುಮಾಮ	ಹೊಯಿಸಳ	೦-೮-೦
ಭೂಗರ್ಭಯಾತ್ರೆ	ಅಡಿಗ	೧-೧೨-೦
ನೀತಿಚಿಂತಾಮಣಿ: ೧	ಪುಟ್ಟಣ್ಣ	೦-೧೪-೦
ನೀತಿಚಿಂತಾಮಣಿ: ೨	ಪುಟ್ಟಣ್ಣ	೦-೧೦-೦
ನೀತಿಚಿಂತಾಮಣಿ: ೩	ಪುಟ್ಟಣ್ಣ	೦-೧೪-೦
ಅಹಲ್ಯೆ	ಪು. ತಿ. ನ.	೨-೪-೦
ಸುಮತಿ ಮದನಕುಮಾರರ ಚರಿತೆ		೩-೪-೦
ಮಾಡಿದ್ದುಣ್ಣೋ ಮಹಾರಾಯ	ಪುಟ್ಟಣ್ಣ	೩-೦-೦

ಕಾವ್ಯಾಲಯ ★ ಪ್ರಕಾಶಕರು ★ ಮೈಸೂರು

ತಿರಸ್ಕರಿಸುವ, ಯಜ್ಞವನ್ನು ನಿಂದಿಸುವ, ಅಧ್ಯಾತ್ಮಭಾವನೆಗೆ ವಿಮುಖರಾದ, ಅಸಂಸ್ಕೃತ ಅಸುರರು ಆರ್ಯರನ್ನು ಜಯಿಸುವುದೆಂತು ? ಆರ್ಯರಿಗೆ ಉಪದ್ರವಿಗಳಾದ, ಸುರರಿಗೆ ವಿರೋಧಿಗಳಾದ, ಅಸುರರ ಮೇಲೆ ದೇವರ ದೃಷ್ಟಿ ವಕ್ರವಾಗಿದೆ. ಅಂತೆಯೇ ದೇವೇಂದ್ರನು ಅಸುರರ ಊರುಗಳನ್ನು ಧ್ವಂಸ ಮಾಡುತ್ತಿರುವನು. ಅಗ್ನಿದೇವನು ಅಸುರರಾಷ್ಟ್ರದಲ್ಲಿ ಆಕ್ರಮಣ ನಡೆಸಿರುವನು.

ಪವಿತ್ರವಾದ, ಮಂಗಲವಾದ, ಸ್ಫೂರ್ತಿಪ್ರದವಾದ ವೇದಮಂತ್ರಗಳ ನಿತ್ಯ ಪಠನದಿಂದಲೂ ಬಲದಾಯಕ, ಸಂಘಪೋಷಕ ಮತ್ತು ಆತ್ಮಶಕ್ತಿಸಂವರ್ಧಕವಾದ ಯಜ್ಞವಿಧಿಗಳ ಸತತ ಅನುಷ್ಠಾನದಿಂದಲೂ ಆರ್ಯ ಜನಾಂಗದಲ್ಲಿ ಒಂದು ಅದ್ಭುತ, ಅಮರ ತೇಜಸ್ಸು ಪ್ರಕಟವಾಗಿದೆ. ಅದರ ಒಂದು ಅಂಶವು ಆರ್ಯ ಜನಾಂಗದ ಧುರೀಣನಾದ ತಾತ ಮನು ಮಹರ್ಷಿಯಲ್ಲಿ ನೆಲಸಿದೆ. **ಅದುವೇ ಮಂತ್ರವಾಣೀ. ಅದಕ್ಕೆ ಮೃತಿ ಇಲ್ಲ.** ಬಗೆಬಗೆಯ ಕುಯುಕ್ತಿಗಳಿಂದ ನಾವದನ್ನು ನಾಶಗೊಳಿಸಲು ಹವಣಿಸಿದರೂ ಅದು ನಷ್ಟವಾಗಲಿಲ್ಲ. ಅದನ್ನು ಅಳಿಯಲು ನಾವು ಪ್ರಯತ್ನಿಸಿದಷ್ಟೂ ಅದರ ಶಕ್ತಿಯೂ ವ್ಯಾಪ್ತಿಯೂ ಪ್ರವರ್ಧಮಾನವಾದುವು. ಕೊನೆಗೆ ಅದುವೇ ನಮಗೆ ಮಾರಿಯಾಗಿ ನಿಂತು ನಮ್ಮ ಅಳಿಗಾಲವನ್ನು ಹತ್ತಿರಕ್ಕೆ ತಂದಿತು.

ಮಂತ್ರವಾಣಿ ! ಮಂತ್ರವಾಣಿಯ ಪ್ರಭಾವವು ಮಂತ್ರಹೀನರಿಗೆ ತಿಳಿಯುವುದೆಂತು ? ಆರ್ಯಕುಲದಲ್ಲಿ ಹುಟ್ಟಿದವನಾದ ನಾನು ಸ್ವಾರ್ಥಮೋಹದಿಂದ ಮಂತ್ರಹೀನರಾದ ನಿಮ್ಮನ್ನು ಆಶ್ರಯಿಸಿದೆನು. ನಿಮ್ಮ ಪ್ರೀತಿಯನ್ನು ಗಳಿಸಲು ಮಂತ್ರವಾಣಿಗೆ ವಿರೋಧಿಯಾಗಿ ವರ್ತಿಸಿದೆನು. ಇದರಿಂದ ನನ್ನ ಆತ್ಮವು ಮಲಿನವಾಯಿತು. ಈ ನನ್ನ ಅಧಃಪತನವು ಇಲ್ಲಿಗೆ ನಿಲ್ಲಲಿ !

ನಾಯಕರೇ, ನಿಮ್ಮೀ ಅನುಭವದಿಂದ ನನಗೆ ಎಚ್ಚರ ಬಂದಿದೆ. ಚಿರವಿಜಯಿಯಾದ **ಮಂತ್ರವಾಣಿ** ನನಗೆ ತಿಳಿವಿನ ಕಣ್ಣನ್ನು ನೀಡಿದ್ದಾಳೆ. ಇನ್ನು ಮುಂದೆ ನಾನು ಮಂತ್ರಬಾಹಿರರಾದ ನಿಮ್ಮನ್ನು ಆಶ್ರಯಿಸಿ ಇಂತಹ ಹೇಯ ಜೀವನವನ್ನು ಜೀವಿಸಲಾರೆನು. ಇದೀಗ ನನಗೆ **ಮಂತ್ರವಾಣಿಯೇ ಶರಣು.** ನಾಯಕರೇ, ಹೋಗಿ ಬರುವೆ; ಪ್ರಣಾಮ.

[ಹೀಗೆ ನುಡಿದು ಕೆಂಪಾಗಿ ಅರಳಿದ ಕಣ್ಣುಗಳಿಂದ ದುರದುರನೆ ನೋಡುತ್ತ, ತಲೆಗೂದಲನ್ನು ಕೆದರಿಕೊಂಡು ಸರ್ರನೆ ಕಾಡಿನಲ್ಲಿ ಹೊರಟುಹೋಗುವನು.

ಅಸುರ ನಾಯಕನು ಆತನು ಹೋದ ಕಡೆಗೆ ಎವೆಯಿಕ್ಕದ ನೋಟದಿಂದ ನೋಡುತ್ತ, ಅವಾಕ್ಕಾಗಿ ಬಾಯಿತೆರೆದುಕೊಂಡು ನಿಲ್ಲುವನು.]

(ತೆರೆ ಬೀಳುವುದು)

ಜಾಹೀರ ನಿವೇದನೆ

"ಸಾಂಡೂ ಬ್ರದರ್ಸ" ಅಂದರೆ

"ಬ್ರಾಹ್ಮಿ ತೈಲ"

ನಾವು ಸಾಂಡೂ ಬ್ರದರ್ಸರ "**ಓರಿಜಿನಲ್ ಬ್ರಾಹ್ಮಿ ತೈಲ**" ವನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವ ಹಾಗೂ ಗ್ರಾಹಕರಿಗೆ ಪೂರೈಸುವ ಬಗ್ಗೆ ವ್ಯವಸ್ಥೆಯನ್ನು ಮಾಡಿದ್ದೇವೆಂದು ನಮ್ಮ ಯಾವತ್ತೂ ಗ್ರಾಹಕರಿಗೆ ತಿಳಿಸಲು ತುಂಬಾ ಸಂತೋಷಿಸುತ್ತೇವೆ.

ಶುದ್ಧ ಕೊಬ್ರಿಯಣ್ಣೆಯ ಪೂರೈಕೆಯ ಬಗ್ಗೆ ಇದ್ದ ಕೊರತೆಯ ಮೂಲಕ ಈ ವರೆಗಿದ್ದ "ನಿಯಂತ್ರಿತ ಪೂರೈಕೆಯ ಪದ್ಧತಿ" ಯನ್ನು ಇನ್ನು ಮುಂದೆ ನಿಲ್ಲಿಸಲಾಗುವದು.

ಪಬ್ಲಿಕ್ ರಿಲೇಶನ್ಸ ಆಫೀಸರ,

ದ. ಕೃ. ಸಾಂಡೂ ಬ್ರದರ್ಸ, ಚೆಂಬೂರ ಲಿ., ಚೆಂಬೂರ, ಮುಂಬಯಿ,
ಇವರಿಂದ ಪ್ರಚುರಪಡಿಸಲ್ಪಟ್ಟದು.

॥ ಶ್ರೀ ॥

ದಿ ಬೃಹನ್‌ಮಹಾರಾಷ್ಟ್ರ ಶುಗರ ಸಿಂಡಿಕೇಟ

-- ಲಿಮಿಟೆಡ್ ಪುಣೆ ೨. --

ನಮ್ಮ ಪಾಲುದಾರರಿಗೂ, ಠೇವುದಾರರಿಗೂ ಈ ದೀಪಾವಳಿಯು ಹಾಗೂ ನೂತನ ವರ್ಷವು ಸರ್ವಬಗೆಯ ಸುಖವನ್ನೂ ಅಭಿವೃದ್ಧಿಯನ್ನೂ ಕೊಡಲಿ.

ಕಂಪನಿಗೆ ಯಾವ ಬ್ಯಾಂಕಿನ ಸಾಲವೂ ಇಲ್ಲ

ಸಾವಿರ ಟನ್ ಶಕ್ತಿಯು ಹೊಸ ಯಂತ್ರಗಳನ್ನು ಕೂಡಿಸುವದಕ್ಕಾಗಿ ಬೇಕಾಗುವ ಹಣದ ಸಲುವಾಗಿ — ನ್ಯಾಯಮೂರ್ತಿ ಭಿಡೆ, ಆಯ. ಸಿ. ಎಸ್. (ರಿಟಾಯರ್ಡ) ಬ್ಯಾರಿಸ್ಟರ, ರಾಮರಾವ ದೇಶಮುಖ, ಅಮರಾವತಿ, ಸರ್ ಗುರುನಾಥ ಬೇವೂರ ಆಯ. ಸಿ. ಎಸ್. (ರಿಟಾಯರ್ಡ), ನ್ಯಾಯಮೂರ್ತಿ ಢವಳೆ, ಆಯ. ಸಿ. ಎಸ್. (ರಿಟಾಯರ್ಡ) ಹೀಗೆ ಸಿಂಡಿಕೇಟಿನ ಶೇರುಗಳನ್ನು ತಕ್ಕೊಂಡು ಠೇವುಗಳನ್ನೂ ಇಟ್ಟ ನಾಮಾಂಕಿತ ಭಾಗೀದಾರರನ್ನು ಕಾಣಲಾಗಿದೆ.

— ಅವರ ಭೆಟ್ಟಿಯ ನಂತರ ದೊರೆತ ಸೂಚನೆಗಳ ಮುಖ್ಯಾಂಶಗಳು —

(೧) ಹೊಸ ಯಂತ್ರಗಳನ್ನು ಕೂಡಿಸುವದು ಸಾಧ್ಯವಿದ್ದಷ್ಟು ತೀವ್ರವೇ ಆಗಲಿಕ್ಕೆ ಬೇಕು

(೨) ಕಂಪನಿಯ ಶೇರು ಹೋಲ್ಡರರಿಗೂ (ಭಾಗಿದಾರರಿಗೆ) ಠೇವುದಾರರಿಗೂ ಹಾಗೂ ಹಿತಚಿಂತಕರಿಗೂ, ಹೊಸ ಯಂತ್ರಗಳನ್ನು ಕೂಡಿಸುವದಕ್ಕೆ ಒಂದು ವರ್ಷದ ಮುದ್ದತಿ ಠೇವುಗಳನ್ನು ಕೊಡುವದು ಪ್ರಶಸ್ತವಾಗುವದಲ್ಲದೆ, ಶೇರುಗಳಿಗಿಂತ ಠೇವುಗಳು ಶೀವ್ರವೇ ದೊರೆಯಬಹುದು.

(೩) ನೂರಕ್ಕೆ ೬ ರಂತೆ ಬ್ಯಾಂಕಿಗೆ ಬಡ್ಡಿ ಕೊಡುವಂತೆ ಠೇವುಗಳಿಗೂ ಸಹ ಒಂದು ವರ್ಷಕ್ಕೆ ೬ ರೂ. ಬಡ್ಡಿ ಕೊಡಬೇಕು.

(೪) ಯಂತ್ರಗಳನ್ನು ಕೂಡಿಸುವದು ಪೂರ್ಣವಾದ ಕೂಡಲೇ ಮೇಲಿನ ದರದ ಠೇವುಗಳನ್ನು ಸ್ವೀಕರಿಸುವದನ್ನು ನಿಲ್ಲಿಸಬೇಕು.

ಠೇವಿನ ಮುದ್ದತು ೧ ವರ್ಷ : = : ಬಡ್ಡಿ ೬ ರೂ. ಯಂತೆ

ಮುದ್ದತಿ ಠೇವಿನ ಫಾರ್ಮುಗಳು ಸಿಂಡಿಕೇಟಿನ ಪುಣೆಯಲ್ಲಿಯ ಮುಖ್ಯ ಕಚೇರಿಯಲ್ಲಿ ದೊರೆಯುವವು.

ತಾ. ೨೦-೧೦-೧೯೫೮.
ಕಾಮನವೆಲ್ಥ ಬಿಲ್ಡಿಂಗ,
೯೮೦ ಸದಾಶಿವ ಪೇಠ,
ಲಕ್ಷ್ಮೀ ರೋಡ, ಪುಣೆ. ೨.

ಚಂದ್ರಶೇಖರ ಗೋವಿಂದ ಆಗಾಶೆ
ಬಿ. ಎ. ಎಲ್‌ಎಲ್. ಬಿ.
ಸಿ. ಜಿ. ಆಗಾಶೆ ಆ್ಯಂಡ ಕೊ.,
ಮ್ಯಾನೇಜಿಂಗ ಏಜಂಟ್ಸ.

★ ಮುಂಬಯಿ ರಾಜ್ಯದಲ್ಲಿ ಆಗಿರುವ ಮತ್ತು ಆಗುತ್ತಿರುವ ವಿಶ್ವವಿದ್ಯಾಲಯುಗಳು ಆರು. ಅವುಗಳಲ್ಲಿ ಉಳಿದ ವಿದ್ಯಾಲಯುಗಳ ಆರ್ಥಿಕ ಪರಿಸ್ಥಿತಿ ಒಂದು ಬಗೆಯಿಂದ ಭದ್ರವಾಗಿದೆ. ಆಗುವ ಭರವಸೆ ಯಿದೆ. ಕರ್ನಾಟಕ ವಿಶ್ವವಿದ್ಯಾಲಯುವನ್ನು ಅಷ್ಟೇ ಸುರಕ್ಷಿತ ಮಾಡುವ ಭಾರ ಕರ್ನಾಟಕದ ಜನತೆಗೂ ಮುಂಬಯಿ ಸರಕಾರಕ್ಕೂ ಸೇರಿದ್ದು. ಅದಕ್ಕೆ ಸಾಕಷ್ಟು ದ್ರವ್ಯಸಹಾಯ ಬರುವಂತೆ ಪ್ರಯತ್ನಿಸುವುದೂ ಸರಕಾರವನ್ನು ಒತ್ತಾಯಗೊಳಿಸುವುದೂ ಅವಶ್ಯವಾಗಿದೆ.

ಮುಂಬೈ ರಾಜ್ಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯು

ಲೇಖಕರು :

ಶ್ರೀ ಜಹಾಗೀರದಾರ ರಂಗಾಚಾರ್ಯ

ಉಪಕುಲಗುರುಗಳು, ಕರ್ನಾಟಕ ವಿಶ್ವವಿದ್ಯಾಲಯು



ಮುಂಬಯಿ ರಾಜ್ಯದಲ್ಲಿ ಕಳೆದ ಎರಡು ವರ್ಷಗಳೊಳಗೆ ಉಚ್ಚ ಶಿಕ್ಷಣದ ವಿಷಯುದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಮೊದಲು ಇಡಿ ಪ್ರಾಂತದ ವಿದ್ಯಾರ್ಥಿಗಳ ಉಚ್ಚ ಶಿಕ್ಷಣದ ಹೊಣೆಯು ಮುಂಬೈ ವಿದ್ಯಾಪೀಠದ ಮೇಲೆಯೇ ಇತ್ತು. ಕಳೆದ ೪೦—೪೫ ವರ್ಷಗಳಲ್ಲಿ ಶಿಕ್ಷಣದ ಪ್ರಸಾರವು ಹೆಚ್ಚು ಆಗಹತ್ತಿದ್ದರಿಂದ ಹೊಸದೊಂದು ಯೋಜನೆಯನ್ನು ಸಿದ್ಧಪಡಿಸುವದಕ್ಕಾಗಿ ಮುಂಬಯಿ ಸರಕಾರದವರು ಶಿಕ್ಷಣತಜ್ಞರ ಪರಿಷತ್ತನ್ನು ೧೯೧೭ರಲ್ಲಿ ಮುಂಬಯಿಯಲ್ಲಿ ಕರೆದಿದ್ದರು. ಆಗಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಚಾರ ಮಾಡಿ ಮುಂಬಯಿ ಪ್ರಾಂತದಲ್ಲಿ ಬೇರೆ ಬೇರೆ ಪ್ರಾದೇಶಿಕ ವಿದ್ಯಾಲಯುಗಳನ್ನು ಸ್ಥಾಪಿಸಬೇಕು ಮತ್ತು ಭಾಷಾನುಗುಣವಾಗಿ ಪ್ರದೇಶಗಳನ್ನು ನಿರ್ದೇಶಿಸಬೇಕೆಂದು ಆ ಪರಿಷತ್ತು ಅಭಿಪ್ರಾಯಪಟ್ಟಿತು. ಈ ತತ್ವಕ್ಕೆ ಸ್ಯಾಡ್ಲರ ಕಮೀಶನ್‌ದವರು ೧೯೨೦ರಲ್ಲಿ ಮನ್ನಣೆಯನ್ನು ಕೊಟ್ಟರು. ಮುಂದೆ ೧೯೨೪ ರಲ್ಲಿ ಸೆಟಲವಾಡ ಸಮಿತಿಯವರು ಈ ತತ್ವವನ್ನು ಸ್ವೀಕರಿಸಿ, ಪುಣೆಯಲ್ಲಿ ಕೂಡಲೆ ಮಹಾರಾಷ್ಟ್ರ ವಿದ್ಯಾಪೀಠವನ್ನು ಸ್ಥಾಪಿಸಬೇಕು ಮತ್ತು ಮುಂದೆ ಅನುಕೂಲವಾದಂತೆ ಕರ್ನಾಟಕ, ಗುಜರಾಥ ಮತ್ತು ಸಿಂಧಗಳಲ್ಲಿ ಒಂದೊಂದು ಸ್ವತಂತ್ರವಾದ ವಿದ್ಯಾಪೀಠವನ್ನು ಸ್ಥಾಪಿಸಬೇಕೆಂದು ಪುರಸ್ಕಾರ ಮಾಡಿದರು. ಆದರೆ ಸರಕಾರದವರು ಕಾರಣಾಂತರಗಳ ಮೂಲಕ ಅವುಗಳನ್ನು ಕೃತಿಯಲ್ಲಿ ತರಲಿಲ್ಲ. ಮುಂದೆ ೧೯೩೭ ರಲ್ಲಿ ಕಾಂಗ್ರೆಸ ಸರಕಾರವು ಪ್ರಾಂತಗಳಲ್ಲಿ ಅಧಿಕಾರವನ್ನು ಸ್ವೀಕರಿಸಿದ ಮೇಲೆ ಪರಿಸ್ಥಿತಿಯಲ್ಲಿ ಬದಲಾಯಿತು. ಮುಖ್ಯ ಮಂತ್ರಿಗಳಾದ ಮಾನ್ಯ ಬಾಳಾಸಾಹೇಬ ಖೇರರವರು ಡಾ. ಜಯಕರರವರ ನೇತೃತ್ವದಲ್ಲಿ ಮಹಾರಾಷ್ಟ್ರ ವಿದ್ಯಾಪೀಠ ಸಮಿತಿಯನ್ನು ನೇಮಿಸಿದರು. ಅವರು ತಮ್ಮ ವರದಿಯನ್ನು ೧೯೪೨ ರಲ್ಲಿ ಒಪ್ಪಿಸಿದರು. ಆದರೆ ಅಷ್ಟರಲ್ಲಿ ಕಾಂಗ್ರೆಸ್ಸಿನವರು ಅಧಿಕಾರತ್ಯಾಗ ಮಾಡಿದ್ದರಿಂದ, ಆಗಿನ ಸರಕಾರವು ಹೊಸ ವಿದ್ಯಾಪೀಠವನ್ನು ಸ್ಥಾಪಿಸುವದಕ್ಕಾಗಿ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ೨ ನೇ ಜಾಗತಿಕ ಯುದ್ಧವು ಮುಗಿದ ಮೇಲೆ ಆದ ಹೊಸ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರೇ ಪ್ರಚಂಡ ಬಹುಮತದಿಂದ ಆರಿಸಿ ಬಂದದ್ದರಿಂದ ಆ ಪಕ್ಷದವರು ಪುನಃ ಎಲ್ಲ ಪ್ರಾಂತಗಳಲ್ಲಿ ಅಧಿಕಾರಾರೂಢರಾದರು. ೧೯೪೭ ರಲ್ಲಿ ನಮಗೆ ಸಾಮಂತ ಸ್ವರಾಜ್ಯವು ಸಿಕ್ಕಿದ್ದರಿಂದ ದಿಲ್ಲಿ ಯಲ್ಲಿ ಸಹ ಕಾಂಗ್ರೆಸನಿಷ್ಠ ಮಂತ್ರಿಮಂಡಳವು ಅಧಿಕಾರವನ್ನು ಸ್ವೀಕರಿಸಿತು. ಅಂದಿನಿಂದ ಮುಂಬಯಿ ಪ್ರಾಂತದಲ್ಲಿ ಶಿಕ್ಷಣ ಶಾಖೆಯಲ್ಲಿ ವಿದ್ಯುದ್ಗತಿಯಿಂದ ಪ್ರಗತಿಯಾಗಹತ್ತಿತು. ಪರಕೀಯ ರಾಜ್ಯವು ನಮ್ಮ ಮೇಲೆ ಇದ್ದಾಗ್ಗೆ ಶಿಕ್ಷಣ ಪ್ರಸಾರದ ಕಡೆಗೆ ಸರಕಾರದ ಲಕ್ಷ್ಯವು ಇದ್ದಿಲ್ಲ. ಆದರೆ ನಮ್ಮ ರಾಷ್ಟ್ರೀಯ ಸರಕಾರವು ಬಂದ ಮೇಲೆ ಈ ವಿಷಯುದಲ್ಲಿ ಹೆಚ್ಚು ಲಕ್ಷ ಹಾಕಿ ಕರ್ನಾಟಕ ಗುಜರಾಥ ಭಾಗಗಳ ಬಗ್ಗೆ ಬೇರೆ ಬೇರೆ ಸಮಿತಿಗಳನ್ನು ನೇಮಿಸಿದರು. ಈ ಸಮಿತಿಯವರು ಕರ್ನಾಟಕಕ್ಕೊಂದು ಮತ್ತು ಗುಜರಾಥಕ್ಕೊಂದು ವಿದ್ಯಾಪೀಠವನ್ನು ಸ್ಥಾಪಿಸಬೇಕೆಂದು ಅಭಿಪ್ರಾಯ ವ್ಯಕ್ತ ಮಾಡಿದರು. ಈ ಎಲ್ಲ ಅಭಿಪ್ರಾಯುಗಳನ್ನು ಸರಕಾರದವರು ಸ್ವೀಕರಿಸಿ ಭಾಷಾನುಗುಣವಾಗಿ ಪ್ರತ್ಯೇಕವಾದ ವಿದ್ಯಾಪೀಠವನ್ನು ಕಾಯದೆಯಿಂದ ಸ್ಥಾಪಿಸಿದರು.

ಪುಣೆ ವಿದ್ಯಾಪೀಠ

೧೯೪೮ರಲ್ಲಿ ಪುಣೆ ವಿದ್ಯಾಪೀಠದ ಕಾಯದೆಯು ಪಾಸಾಗಿ ಮಾರ್ಚ ೨೪, ೧೯೪೮ರಂದು ಗವ್ಹರ್ನರರ ಸಮ್ಮತಿ ಪಡೆಯಿತು. ಎಪ್ರಿಲ ೧೫ರಂದು ಮಾನ್ಯರಾದ ಡಾ. ಜಯಕರರವರು ಮೊದಲನೇ ಉಪಕುಲಗುರುಗಳಾಗಿ ಆರಿಸಲ್ಪಟ್ಟರು. ಫೆಬ್ರುವರಿ ೧೦ ರಂದು ಪುಣೆ ವಿದ್ಯಾಪೀಠವು ಅಸ್ತಿತ್ವದಲ್ಲಿ ಬಂದು ತನ್ನ ಕಾರ್ಯವನ್ನು ಮಾಡಲಿಕ್ಕೆ ಆರಂಭಿಸಿತು. ಮಾರ್ಚ ಎಪ್ರಿಲ್ ತಿಂಗಳುಗಳಲ್ಲಿ ಜರುಗಲಿದ್ದ ಪರೀಕ್ಷೆಗಳನ್ನು ಪುಣೆ ವಿದ್ಯಾಪೀಠದವರೇ ತೆಗೆದುಕೊಂಡರು. ಜುಲೈ ೪ರಿಂದ ಅಲ್ಲಿಯ ವಿದ್ಯಾರ್ಥಿಗಳ ಅಭ್ಯಾಸಕ್ರಮವಾದರೂ ಆ ವಿದ್ಯಾಪೀಠದ ಆಶ್ರಯದಲ್ಲಿ ಆರಂಭವಾಯಿತು. ಆ ವಿದ್ಯಾಪೀಠದ ಕೆಳಗೆ ಒಟ್ಟು ೨೩ ಕಾಲೇಜಗಳು ಮತ್ತು ೪ ಸಂಶೋಧನ ಸಂಸ್ಥೆಗಳಿವೆ. ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೧೧ ಸಾವಿರ ಇರ

ಬಹುದು. ಪುಣೆ ವಿದ್ಯಾಪೀಠದ ಘಟನೆಯು ಮುಂಬಯಿ ಇಲ್ಲವೆ ಕರ್ನಾಟಕ ವಿದ್ಯಾಪೀಠಗಳ ಘಟನೆಗಳಿಗಿಂತ ಸ್ವಲ್ಪ ಬೇರೆ ಇದೆ. ಪುಣೆ ವಿದ್ಯಾಪೀಠದ ಕ್ಷೇತ್ರವಲ್ಲಿ ಎರಡು ಭಾಗಗಳಿವೆ. ಒಂದು ಪುಣೆ ನಗರ ಮತ್ತೊಂದು ಪುಣೆಯ ಹೊರ್ತಾಗಿ ಮಹಾರಾಷ್ಟ್ರದ ಉಳಿದ ಪ್ರದೇಶ. ಪುಣೆ ಪಟ್ಟಣದಲ್ಲಿ ಮಾತ್ರ ಶಿಕ್ಷಣ ಕೊಡುವ ಕ್ರಮವು ಆಕ್ಸಫರ್ಡ ವಿದ್ಯಾಪೀಠದ ಮಾದರಿಯ ಮೇಲೆ ಇದೆ. ಪುಣೆಯಲ್ಲಿರುವ ಫರ್ಗ್ಯುಸನ್ ಕಾಲೇಜ, ಎಸ್. ಪಿ. ಕಾಲೇಜ, ಮತ್ತು ವಾಡಿಯಾ ಕಾಲೇಜ ಮತ್ತು ನಾಲ್ಕು ಸಂಶೋಧನ ಸಂಸ್ಥೆಗಳು ಇವೆಲ್ಲ ವಿದ್ಯಾಪೀಠದ ಘಟಕ ಸಂಸ್ಥೆಗಳಾಗಿವೆ. ಈ ಕಾಲೇಜುಗಳಲ್ಲಿ ಮೊದಲಿನ ಎರಡು ವರ್ಷಗಳ ವಿದ್ಯಾರ್ಥಿಗಳ ಶಿಕ್ಷಣವನ್ನು ಆಯಾ ಕಾಲೇಜುಗಳ ಪ್ರಾಧ್ಯಾಪಕರೇ ಈಗಿದ್ದಂತೆ ಬೇರೆ ಬೇರೆಯಾಗಿ ಕೊಡುವರು. ಆದರೆ ಪದವಿಯ ವರ್ಗದ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಬೇರೆ ಯೋಜನೆಯನ್ನು ಕೈಕೊಂಡಿದ್ದಾಗಿದೆ. ಈ ಹೊಸ ಯೋಜನೆಯ ಮುಖ್ಯ ತತ್ವವೆಂದರೆ, ವಿದ್ಯಾರ್ಥಿಗಳು ಯಾವ ಕಾಲೇಜಿನವರೇ ಇರಲಿ, ಅವರೆಲ್ಲರೂ ವಿದ್ಯಾಪೀಠದ ವಿದ್ಯಾರ್ಥಿಗಳು. ಅವರೆಲ್ಲರನ್ನು ಒಂದೇ ಕಡೆ ಕಲೆಹಾಕಿ ಅದೇ ಪ್ರಾಧ್ಯಾಪಕರು ಆಯಾ ವಿಷಯಗಳನ್ನು ಕಲಿಸುವರು. ಈ ಯೋಜನೆಯ ಪ್ರಕಾರ, ಎಲ್ಲ ಘಟಕ ಕಾಲೇಜುಗಳು ಮತ್ತು ಘಟಕ ಸಂಶೋಧನ ಸಂಸ್ಥೆಗಳು ತಮ್ಮ ಕಾಲೇಜಿನೊಳಗಿನ ಅಥವಾ ಸಂಸ್ಥೆಗಳೊಳಗಿನ ನುರಿತ ಪ್ರಾಧ್ಯಾಪಕರನ್ನು ವಿದ್ಯಾಪೀಠಕ್ಕೆ ಒಪ್ಪಿಸುವರು ಮತ್ತು ಯಾವಾದರೂ ವಿಷಯಗಳಲ್ಲಿ ಘಟಕ ಸಂಸ್ಥೆಗಳಲ್ಲಿ ಇಲ್ಲವೆ ಕಾಲೇಜುಗಳಲ್ಲಿ ನುರಿತ ಪ್ರಾಧ್ಯಾಪಕರಿರದಿದ್ದರೆ, ಅಷ್ಟೇ ವಿಷಯಗಳಲ್ಲಿ ಮಾತ್ರ ವಿದ್ಯಾಪೀಠವು ಪ್ರಾಧ್ಯಾಪಕರನ್ನು ನೇಮಿಸಿಕೊಳ್ಳುವದು. ಈ ಪ್ರಕಾರ ಘಟಕ ಸಂಸ್ಥೆಗಳಿಂದ ಮತ್ತು ಕಾಲೇಜುಗಳಿಂದ ಪ್ರೇಷಿತರಾದ ಪ್ರಾಧ್ಯಾಪಕರೂ ವಿದ್ಯಾಪೀಠವು ನೇಮಿಸಿದ ಪ್ರಾಧ್ಯಾಪಕರೂ ಕೂಡಿಯೇ ಪದವಿಯ ವರ್ಗದ ಎಲ್ಲ ವಿದ್ಯಾರ್ಥಿಗಳಿಗೆ ಎಲ್ಲ ವಿಷಯಗಳನ್ನು ಒಂದೇ ಕಡೆಗೆ ಕಲಿಸುವರು. ಈ ಯೋಜನೆಯಿಂದ ಎರಡು ಪ್ರಕಾರದ ಲಾಭಗಳಿವೆ. ಎಲ್ಲ ವಿದ್ಯಾರ್ಥಿಗಳಿಗೆ ಶ್ರೇಷ್ಠರಾದ ಅದೇ ಪ್ರಾಧ್ಯಾಪಕರು ಶಿಕ್ಷಣ ಕೊಡುವರು. ಮತ್ತು ಅದೇ ವಿಷಯವನ್ನು ಪ್ರತಿಯೊಂದು ಕಾಲೇಜಿನಲ್ಲಿ ಕಲಿಸುವದಕ್ಕಾಗಿ ಬೇರೆ ಬೇರೆ ಪ್ರಾಧ್ಯಾಪಕರನ್ನು ನೇಮಿಸುವ ವೆಚ್ಚದ ಮತ್ತು ಶ್ರಮದ ಉಳಿತಾಯವಾಗುವದು. ಇದೇ ಕ್ರಮವನ್ನು ಸ್ನಾತಕೋತ್ತರ ಅಭ್ಯಾಸಗಳಲ್ಲಿ ಸಹ ಅನುಸರಿಸುವರು. ಪುಣೆಯ ಹೊರಗಿನ ಕಾಲೇಜುಗಳಲ್ಲಿ ಪದವಿಯ ವರ್ಗದ ವಿದ್ಯಾರ್ಥಿಗಳ ಶಿಕ್ಷಣವನ್ನು ಆಯಾ ಕಾಲೇಜುಗಳ ಪ್ರಾಧ್ಯಾಪಕರು ಕೊಡುವರು ಮತ್ತು ಸ್ನಾತಕೋತ್ತರ ಅಭ್ಯಾಸಕ್ರಮವನ್ನು ವಿದ್ಯಾಪೀಠದಿಂದ ಮನ್ನಣೆ ಹೊಂದಿದ ಪ್ರಾಧ್ಯಾಪಕರು ತಮ್ಮ ತಮ್ಮ ಕಾಲೇಜುಗಳಲ್ಲಿ ಸಾಗಿಸುವರು.

ಕರ್ನಾಟಕ ವಿದ್ಯಾಪೀಠ

ಕರ್ನಾಟಕ ವಿದ್ಯಾಪೀಠದ ಕಾಯದೆಯು ೧೯೪೯ ಮೇ ೬ನೆ ದಿನಾಂಕಕ್ಕೆ ಗವ್ಹರ್ನರರ ಸಮ್ಮತಿಯನ್ನು ಪಡೆಯಿತು. ಜುಲೈ ೧೪ಕ್ಕೆ ಉಪಕುಲಗುರುಗಳ ನೇಮಕವಾಯಿತು. ವಿದ್ಯಾಪೀಠದ ಕಚೇರಿಯು ಆಗಸ್ಟ ೧ಕ್ಕೆ ಮುಂಬಯಿ ಟಾವುನ ಹಾಲಿನ ಒಂದು ಕೋಣೆಯಲ್ಲಿ ಆರಂಭವಾಯಿತು. ಅಧಿಕಾರೀ ಸಂಸ್ಥೆಗಳ ಸಭಾಸದರ ಚುನಾವಣೆಗಳಿಲ್ಲ ೧೯೫೦ ಫೆಬ್ರುವರಿ ದಿನಾಂಕ ೨೦ಕ್ಕೆ ಮುಗಿದು, ಕರ್ನಾಟಕ ವಿದ್ಯಾಪೀಠವು ಮಾರ್ಚ ದಿ. ೧ಕ್ಕೆ ಅಸ್ತಿತ್ವದಲ್ಲಿ ಬಂದಿತು. ಕಚೇರಿ ಆರಂಭವಾದಂದಿನಿಂದ ಏಳು ತಿಂಗಳೊಳಗೆ ವಿದ್ಯಾಪೀಠವು ಅಸ್ತಿತ್ವದಲ್ಲಿ ಬರುವದೆಂದರೆ ವಿಕ್ರಮ ಪಡೆದಂತೆಯೇ ಸರಿ. ಮಾರ್ಚ ಎಪ್ರಿಲ್ ತಿಂಗಳುಗಳಲ್ಲಿ ಜರಗುವ ಕೆಲವು ಮುಖ್ಯ ಮುಖ್ಯವಾದ ಪರೀಕ್ಷೆಗಳನ್ನು ಕರ್ನಾಟಕ ವಿದ್ಯಾಪೀಠವೇ ತೆಗೆದುಕೊಂಡಿತು. ಜೂನ ೨೦ನೇ ದಿನಾಂಕದಿಂದ ಸ್ನಾತಕೋತ್ತರ ವಿದ್ಯಾರ್ಥಿಗಳ ಶಿಕ್ಷಣವು ವಿದ್ಯಾಪೀಠದಿಂದ ಮನ್ನಣೆದೊರೆತ ಪ್ರಾಧ್ಯಾಪಕರಿಂದ ಆಯಾ ಕಾಲೇಜುಗಳಲ್ಲಿ ನಡೆದಿರುವದು. ಈ ವಿದ್ಯಾಪೀಠದ ಅಧಿಕಾರದ ಕೆಳಗೆ ೧೨ ಕಾಲೇಜುಗಳು ಮತ್ತು ಒಂದು ಸಂಶೋಧನ ಸಂಸ್ಥೆಯು ಇರುವವು. ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಸುಮಾರು ೪೦೦೦. ಸ್ನಾತಕೋತ್ತರ ಶಿಕ್ಷಣದ ಬಗ್ಗೆ ಹೊಸ ಯೋಜನೆ ಸಿದ್ಧವಾಗಿದೆ. ಅದಕ್ಕೆ ಸಪ್ಟೆಂಬರ ೨೯ಕ್ಕೆ ಕೂಡಿದ ಸಿನೇಟಿನ ಸಭೆಯ ಒಪ್ಪಿಗೆಯು ದೊರೆತರೆ ನವೆಂಬರ ತಿಂಗಳಿನಿಂದ ಅದು ಕಾರ್ಯರಂಗಕ್ಕೆ ಇಳಿಯಬಹುದು. ಈ ಹೊಸ ಯೋಜನೆಯ ರೂಪರೇಷೆಗಳು ಕೆಳಗೆ ಕಾಣಿಸಿದಂತೆ ಇರುವವು.

೧. ಸ್ನಾತಕೋತ್ತರ ಶಿಕ್ಷಣದ ಎಲ್ಲ ಹೊಣೆಯನ್ನು ವಿದ್ಯಾಪೀಠವೇ ಸ್ವೀಕರಿಸುವದು. ಆ ಶಿಕ್ಷಣವು ವಿದ್ಯಾಪೀಠದಿಂದ ನೇಮಿಸಲ್ಪಟ್ಟ ಪ್ರಾಧ್ಯಾಪಕರಿಂದಾಗಲಿ ವಿದ್ಯಾಪೀಠದಿಂದ ಮನ್ನಣೆದೊರೆತ ಕಾಲೇಜುಗಳೊಳಗಿನ ಪ್ರಾಧ್ಯಾಪಕರಿಂದಾಗಲಿ ಕೊಡಲ್ಪಡುವದು.

೨. ಈ ಯೋಜನೆಯನ್ನು ಯಶಸ್ವಿಗೊಳಿಸಲು ವಿದ್ಯಾಪೀಠಕ್ಕೆ ಸಂಬಂಧಿಸಿದ ಎಲ್ಲ ಕಾಲೇಜುಗಳ ಮತ್ತು ಸಂಶೋಧನ ಸಂಸ್ಥೆಯ ಸಹಕಾರವನ್ನು ಕೇಳಿಕೊಳ್ಳಲಾಗುವದು.

೩. ಪದವಿಯ ವರ್ಗದ ಅಭ್ಯಾಸದಂತೆ, ಸ್ನಾತಕೋತ್ತರ ಶಿಕ್ಷಣವೂ ಸುವ್ಯವಸ್ಥಿತವಾಗಿ ಯೋಗ್ಯ ಪದ್ಧತಿಯಿಂದ ನಡೆಯುವದು.

೪. ಕಾಯದೆ ಮತ್ತು ಶಿಕ್ಷಣ ಇವೆರಡು ವಿಷಯಗಳನ್ನು–ಳಿದು ಎಲ್ಲ ಸ್ನಾತಕೋತ್ತರ ಶಿಕ್ಷಣದ ಕೇಂದ್ರವು ಮುಖ್ಯವಾಗಿ ಧಾರವಾಡದಲ್ಲಿಯೇ ಇರುವದು. ಆದರಲ್ಲಿ ಧಾರವಾಡದ ಹೊರಗೆ ಯಾವದಾದರೊಂದು ಕಾಲೇಜಿನಲ್ಲಿ ಸ್ನಾತಕೋತ್ತರ ಶಿಕ್ಷಣ ಕೊಡುವ ಯೋಗ್ಯತೆಯ ಪ್ರಾಧ್ಯಾಪಕರಿದ್ದರೆ ಮತ್ತು ಪುಸ್ತಕಾಲಯ ಮತ್ತು ಉಳಿದ ಉಪಕರಣಗಳ ಅನುಕೂಲತೆಯಿದ್ದರೆ, ಕೆಲವು ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಕೊಡಲಿಕ್ಕೆ ವಿದ್ಯಾಪೀಠವು ಮನ್ನಣೆ ಕೊಡಬಹುದು.

೫. ಕಾಯದೆ ಮತ್ತು ಶಿಕ್ಷಣದ ಕಾಲೇಜುಗಳು ಬೆಳಗಾಂವಿಯಲ್ಲಿ ಮಾತ್ರ ಇರುವದರಿಂದ ಈ ವಿಷಯಗಳ ಸ್ನಾತಕೋತ್ತರ ಶಿಕ್ಷಣವು ಬೆಳಗಾಂವಿ ಕೇಂದ್ರದಲ್ಲಿ ನಡೆಯುವದು.

೬. ಒಕ್ಕಲತನ ವಿಷಯದ ಸ್ನಾತಕೋತ್ತರ ಶಿಕ್ಷಣವು ಒಕ್ಕಲತನ ಕಾಲೇಜಿನಲ್ಲಿಯೇ ನಡೆಯುವದು.

೭. ಪದಾರ್ಥವಿಜ್ಞಾನ ಶಾಸ್ತ್ರದ ಹೊರತು ಉಳಿದ ಶಾಸ್ತ್ರೀಯ ವಿಷಯಗಳ ಸ್ನಾತಕೋತ್ತರ ಶಿಕ್ಷಣವು ಕರ್ನಾಟಕ ಕಾಲೇಜಿನಲ್ಲಿ ನಡೆಯುವದು. ಮತ್ತು ಪದಾರ್ಥವಿಜ್ಞಾನ ಶಾಸ್ತ್ರದ ಅಭ್ಯಾಸವು ಕೆಲವು ವರ್ಷಗಳ ವರೆಗೆ ಬೆಳಗಾಂವಿ ಲಿಂಗರಾಜ ಕಾಲೇಜಿನಲ್ಲಿ ನಡೆಯುವದು.

೮. ಸಂಶೋಧನದ ಕೆಲಸಕ್ಕೆ ಹೆಚ್ಚು ಉತ್ತೇಜನನನ್ನು ಕೊಡಲಾಗುವದು.

೯. ಒಂದು ಉತ್ತಮವಾದ ಮತ್ತು ಸಮೃದ್ಧವಾದ ಪುಸ್ತಕಾಲಯವನ್ನು ಸ್ಥಾಪಿಸುವದು.

ಈ ಯೋಜನೆಯನ್ನು ಕಾರ್ಯರಂಗಕ್ಕೆ ತರುವದಕ್ಕಾಗಿ ವಿದ್ಯಾಪೀಠವು ಕೂಡಲೆ ಕೆಲವು ವಿಷಯಗಳಲ್ಲಿ ಪ್ರಾಧ್ಯಾಪಕರನ್ನು ಮತ್ತು ಕೆಲವು ವಿಷಯಗಳಲ್ಲಿ ಅಧ್ಯಾಪಕರನ್ನು ನೇಮಿಸಿಕೊಳ್ಳುವದು. ಇವರು ಮತ್ತು ವಿದ್ಯಾಪೀಠದಿಂದ ಮನ್ನಣೆಪಡೆದ ಪ್ರಾಧ್ಯಾಪಕರು ಕೂಡಿ ಶಿಕ್ಷಣದ ಕ್ರಮವನ್ನು ಸಿದ್ಧಪಡಿಸಿ ಎಲ್ಲ ವಿಷಯಗಳನ್ನು ಕಲಿಸುವರು. ಮತ್ತು ಸಂಶೋಧನ ಕಾರ್ಯದಲ್ಲಿ ಮಾರ್ಗದರ್ಶನ ಮಾಡುವರು.

ಕರ್ನಾಟಕ ವಿದ್ಯಾಪೀಠದ ಆಶ್ರಯದಲ್ಲಿ ಮೆಡಿಕಲ್ ಕಾಲೇಜು ಇಲ್ಲ. ಎಂಜಿನಿಯರಿಂಗ ಕಾಲೇಜಿನ ಒಂದು ವರ್ಷದ ಅಭ್ಯಾಸಕ್ರಮವು ಮಾತ್ರ ಇದೆ. ಟೆಕ್ನಾಲಾಜಿಕಲ್ ಸಂಸ್ಥೆಯೂ ಇಲ್ಲ. ವಿಜ್ಞಾನದ ಈ ಮುಖ್ಯವಾದ ಶಾಖೆಗಳಲ್ಲಿ ಕಾಲೇಜುಗಳು ಇಲ್ಲಿ ಇರದೇ ಇರುವದರಿಂದ ವಿದ್ಯಾರ್ಥಿಗಳಿಗೆ ಬಹಳ ಅನಾನುಕೂಲತೆಯಾಗಿರುವದು. ಕರ್ನಾಟಕದ ಹೊರಗೆ ಇರುವ ಕಾಲೇಜುಗಳಲ್ಲಿ ಇಲ್ಲಿಯ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವದು ಕಠಿಣವಿರುತ್ತದೆ. ಒಬ್ಬಿಬ್ಬರಿಗೆ ಪ್ರವೇಶ ಸಿಕ್ಕರೂ ಉಳಿದ ಎಷ್ಟೋ ವಿದ್ಯಾರ್ಥಿಗಳಿಗೆ ಈ ಅಭ್ಯಾಸಕ್ರಮವನ್ನು ಬಿಟ್ಟು ತಮ್ಮ ಮನಸಿನ ಒಲವು ಇರದಿದ್ದರೂ ಉಳಿದ ಕಾಲೇಜುಗಳಿಗೆ ಹೋಗಬೇಕಾಗುವದು. ಕರ್ನಾಟಕದ ಜನರು ಮತ್ತು ವಿದ್ಯಾಪೀಠದವರು ಸರಕಾರದ ಗಮನಕ್ಕೆ ಈ ಕೊರತೆಯನ್ನು ತಂದು ಇಲ್ಲಿ ಕೂಡಲೆ ಎಂಜಿನಿಯರಿಂಗ ಕಾಲೇಜು, ಮೆಡಿಕಲ ಕಾಲೇಜು, ಮತ್ತು ಟೆಕ್ನಾಲಾಜಿಕಲ ಕಾಲೇಜುಗಳನ್ನು ಸ್ಥಾಪಿಸಲಿಕ್ಕೆ ಒತ್ತಾಯ ಮಾಡಬೇಕು.

ಗುಜರಾಥ ವಿದ್ಯಾಪೀಠ

೧೯೪೯ ರಲ್ಲಿ ಇದರ ಬಗ್ಗೆ ಕಾಯದೆಯು ಆಯಿತು. ಸರ್ ಹರ್ಷಿದಭಾಯಿ ದಿವಾತಿಯಾ ನಿವೃತ್ತ ಮುಂಬಯಿ ಹಾಯಕೋರ್ಟ ನ್ಯಾಯಾಧೀಶರು ಉಪಕುಲಗುರುಗಳಾಗಿ ನೇಮಿಸಲ್ಪಟ್ಟಿದ್ದಾರೆ. ಅಧಿಕಾರೀ ಸಂಸ್ಥೆಗಳ ಚುನಾವಣೆಗಳು ಇನ್ನೂ ಆಗಲಿವೆ. ಗುಜರಾಥ ವಿದ್ಯಾಪೀಠ ಸಮಿತಿಯ ವರದಿಯ ಪ್ರಕಾರ ಈ ವಿದ್ಯಾಪೀಠದ ಕೆಳಗೆ ೨೧ ಕಾಲೇಜುಗಳು ಬರುವವು ಮತ್ತು ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೧೦೦೦೦ ಕ್ಕೆ ಮಿಕ್ಕಬಹುದು. ಈ ವಿದ್ಯಾಪೀಠದ ಅಧಿಕಾರಕ್ಷೇತ್ರದಲ್ಲಿ ಮುಂಬಯಿ ರಾಜ್ಯದೊಳಗಿನ ಗುಜರಾಥ ಭಾಗ ಮತ್ತು ಸೌರಾಷ್ಟ್ರ ಬರುವದು. ೫ ವರ್ಷಗಳಲ್ಲಿ ೫೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಕಟ್ಟಡಗಳನ್ನು ಕಟ್ಟಿಸುವುದು ಮತ್ತು ೫ ವರ್ಷಗಳ ನಂತರ ಪ್ರತಿವರ್ಷ ಶಿಕ್ಷಣಕ್ಕಾಗಿ ೭,೦೦,೦೦೦ ರೂಪಾಯಿಗಳನ್ನು ವೆಚ್ಚ ಮಾಡುವ ಯೋಗ್ಯತೆ ಬರುವ ಹಾಗೆ ಯೋಜನೆಯನ್ನು ಮಾಡಬೇಕೆಂದು ವರದಿಯಲ್ಲಿ ಹೇಳಿದೆ. ಜ್ಞಾನದ ಎಲ್ಲ ಶಾಖೋಪಶಾಖೆಗಳಿಗಾಗಿ ಕಾಲೇಜುಗಳಿರುವವು. ಗಿರಣಿಗಳ ಒಡೆಯರು, ವ್ಯಾಪಾರಸ್ಥರು ಮತ್ತು ಮಧ್ಯಮ ವರ್ಗದವರು ಇದಕ್ಕೆ ಧನ ಸಹಾಯವನ್ನು ಮಾಡಲೊಪ್ಪಿದ್ದರಿಂದ ಈ ವಿದ್ಯಾಪೀಠಕ್ಕೆ ಹಣದ ಕೊರತೆ ಬೀಳಲಿಕ್ಕಿಲ್ಲೆಂಬ ಊಹೆಯಿದೆ. ೫ ವರ್ಷಗಳ ನಂತರ ಗುಜರಾಥ ಭಾಗದಲ್ಲಿ ಆನಂದ ಮತ್ತು ಸುರತ ಪಟ್ಟಣಗಳಲ್ಲಿ ಪ್ರತ್ಯೇಕವಾದ ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಬಹುದೆಂದು ವರದಿಯಲ್ಲಿ ಸೂಚಿಸಿದೆ.

ಬಡೋದಾ ವಿದ್ಯಾಪೀಠ

ಬಡೋದಾ ಸಂಸ್ಥಾನವು ಮುಂಬಯಿ ಪ್ರಾಂತದಲ್ಲಿ ವಿಲೀನವಾಗುವದಕ್ಕಿಂತ ಮೊದಲು ಬಡೋದೆಯ ಮಹಾರಾಜರು ಬಡೋದಾ ವಿದ್ಯಾಪೀಠವನ್ನು ಕಾಯದೆಯಿಂದ ಸ್ಥಾಪಿಸಿ, ಒಂದು ಕೋಟಿ ರೂಪಾಯಿಯ ಧನಸಹಾಯವನ್ನಾದರೂ ಒದಗಿಸಿಕೊಟ್ಟರು. ಶ್ರೀಮತಿ ಹಂಸಾ ಮೆಹತಾ ಇವರು ಈ ವಿದ್ಯಾಪೀಠಕ್ಕೆ ಉಪಕುಲಗುರುಗಳಾಗಿ ಆರಿಸಲ್ಪಟ್ಟಿರುವರು. ಇದರ ಅಧಿಕಾರ ಕ್ಷೇತ್ರದಲ್ಲಿ ಮೂರು ಕಾಲೇಜುಗಳು ಮತ್ತು ಒಂದು ಕಲಾ ಭವನವು ಬರುವವು. ಸಂಗೀತ ಮತ್ತು ಉಳಿದ ಲಲಿತ ಕಲೆಗಳಲ್ಲಿ ಉಚ್ಚ ಶಿಕ್ಷಣ ಕೊಡುವ ಯೋಜನೆಯನ್ನು ಮಾಡಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೨೦೦೦. ಇದು ಕಲಿಸುವ ವಿದ್ಯಾಪೀಠವು. ಕಾಲೇಜಿನ ಎಲ್ಲ ಶಿಕ್ಷಣವು ಮತ್ತು ಸ್ನಾತಕೋತ್ತರ ಶಿಕ್ಷಣವು ವಿದ್ಯಾಪೀಠದಿಂದಲೆ ಕೊಡಲ್ಪಡುವದು.

ನಥಿಭಾಯಿ ಠಾಕರ್ಸಿ ವಿದ್ಯಾಪೀಠ

ಪೂಜ್ಯ ಕರ್ವೆಯವರು ಆರಂಭಿಸಿದ ಈ ವಿದ್ಯಾಪೀಠಕ್ಕೆ ಕಾಯದೆಯಿಂದ ಸರಕಾರದ ಮನ್ನಣೆ ದೊರೆತಿದೆ. ಶ್ರೀಮತಿ ಪ್ರಮಿಲಾಬಾಯಿ ಠಾಕರ್ಸಿಯವರು ಇದರ ಮೊದಲನೆ ಉಪಕುಲಗುರುಗಳು. ಇದಕ್ಕೆ ಸಂಬಂಧಿಸಿದ ವಿದ್ಯಾಸಂಸ್ಥೆಗಳು ಪುಣೆ, ಮುಂಬಯಿ, ಅಹಮದಾಬಾದ ಮತ್ತು ಉಳಿದ ಕೆಲವು ಸ್ಥಳಗಳಲ್ಲಿ ಇವೆ.

ಮುಂಬಯಿ ವಿದ್ಯಾಪೀಠ

ಮುಂಬಯಿ ರಾಜ್ಯದಲ್ಲಿ ಬೇರೆ ಬೇರೆ ಸ್ಥಾನಿಕ ಮತ್ತು ಪ್ರಾದೇಶಿಕ ವಿದ್ಯಾಪೀಠಗಳ ಸ್ಥಾಪನೆಯಾದ್ದರಿಂದ ಮುಂಬಯಿ ವಿದ್ಯಾಪೀಠದ ಅಧಿಕಾರಕ್ಷೇತ್ರವು, ಮುಂಬಯಿ ಪಟ್ಟಣದ ಮಟ್ಟಿಗೆ ಉಳಿಯುವುದು. ಹೀಗೆ ಕ್ಷೇತ್ರವು ಮರ್ಯಾದಿತವಾಗುವದರಿಂದ, ಈ ವಿದ್ಯಾಪೀಠವು ಹೆಚ್ಚು ಕಾರ್ಯಕ್ಷಮವಾಗುವದೆಂಬುದರಲ್ಲಿ ಸಂಶಯವಿಲ್ಲ. ಒಕ್ಕಲತನ ವಿಷಯವನ್ನು ಬಿಟ್ಟು ಉಳಿದ ಎಲ್ಲ ವಿಷಯಗಳನ್ನು ಕಲಿಸುವ ಒಳ್ಳೆ ತರದ ಹಳೆಯ ಕಾಲೇಜುಗಳು ಅನೇಕ ಇರುವವು. ಮುಂಬಯಿ ರಾಜ್ಯದ ಎಲ್ಲ ವಿದ್ಯಾಪೀಠಗಳಲ್ಲಿ ಎಲ್ಲಕ್ಕೂ ಸಮೃದ್ಧವಾದ ವಿದ್ಯಾಪೀಠವೆಂದರೆ ಮುಂಬಯಿ ವಿದ್ಯಾಪೀಠವೇ. ನ್ಯಾಯಮೂರ್ತಿ ಭಗವತಿಯವರು ಈಗ ಇದರ ಉಪಕುಲಗುರುಗಳಿರುವರು. ಪದವಿಯ ವರ್ಗದ ಶಿಕ್ಷಣವನ್ನು ಸಹ, ಪುಣೆಯ ವಿದ್ಯಾಪೀಠದಂತೆ, ಈ ವಿದ್ಯಾಪೀಠವೂ ಕೈಕೊಳ್ಳುವದಾಗಿ ತೋರುತ್ತದೆ.

ಈ ರೀತಿ ಮುಂಬಯಿ ರಾಜ್ಯದ ಆರು ವಿದ್ಯಾಪೀಠಗಳಲ್ಲಿ ಮುಂಬಯಿ ಮತ್ತು ಬಡೋದಾ ವಿದ್ಯಾಪೀಠಗಳು ನಗರ ವಿದ್ಯಾಪೀಠಗಳು. ನಥೀಬಾಯಿ ಠಾಕರ್ಸಿ ವಿದ್ಯಾಪೀಠವು ಹೆಂಗಸರಿಗಾಗಿ ಮಾತ್ರ ಇರುವದು. ಗುಜರಾಥ, ಪುಣೆ ಮತ್ತು ಕರ್ನಾಟಕ ವಿದ್ಯಾಪೀಠಗಳು ಪ್ರಾದೇಶಿಕ ವಿದ್ಯಾಪೀಠಗಳೆಂದು ಹೇಳಬಹುದು. ಈ ಆರು ವಿದ್ಯಾಪೀಠಗಳಲ್ಲಿ ಕರ್ನಾಟಕ ವಿದ್ಯಾಪೀಠದಷ್ಟು ಬಡವ ಮತ್ತು ಅಪೂರ್ಣವಾದ ಬೇರೆ ಯಾವ ವಿದ್ಯಾಪೀಠವೂ ಇರುವದಿಲ್ಲ.

ಇದನ್ನು ಎಲ್ಲ ಕನ್ನಡಿಗರು ಲಕ್ಷ್ಯದಲ್ಲಿಡತಕ್ಕದ್ದಾಗಿದೆ. ಗುಜರಾಥದಲ್ಲಿಯೇ ಇನ್ನು ಎರಡು ನಗರ ವಿದ್ಯಾಪೀಠಗಳಾಗತಕ್ಕವಿವೆಯೆಂದ ಮೇಲೆ ಗುಜರಾಥ ವಿದ್ಯಾಪೀಠಕ್ಕೆ ಹಣದ ಕೊರತೆಯು ಬೀಳಲಿಕ್ಕಿಲ್ಲೆಂಬುದು ಸ್ಪಷ್ಟವಿದೆ. ಗುರ್ಜರ ಬಂಧುಗಳು ಕೊಡುಗೈ ದೊರೆಗಳಿರುವರೆಂದು ಹೇಳಲಿಕ್ಕೆ ಬೇಡ. ಬಡೋದಾ ವಿದ್ಯಾಪೀಠಕ್ಕೆ ಅಲ್ಲಿಯ ಮಹಾರಾಜರು ೧ ಕೋಟಿ ರೂಪಾಯಿಗಳ ದಾನ ಮಾಡಿದ್ದಾರೆ. ಮುಂಬಯಿ ವಿದ್ಯಾಪೀಠಕ್ಕೆ ವಿದ್ಯಾರ್ಥಿ ವೇತನಕ್ಕಾಗಿ ಮತ್ತು ಸಂಶೋಧನ ವೇತನಕ್ಕಾಗಿ ಅನೇಕ ಶಾಶ್ವತ ನಿಧಿಯ ಕಾಣಿಕೆಗಳು ಅಸ್ತಿತ್ವದಲ್ಲಿ ಇವೆ. ಮೇಲಾಗಿ ಅಲ್ಲಿ ಗಿರಣಿಗಳ ಒಡೆಯರೂ ಸಿರಿವಂತ ವ್ಯಾಪಾರಿಗಳೂ ದಾನಶೂರರೆಂದು ಖ್ಯಾತಿಯನ್ನು ಪಡೆದಿದ್ದಾರೆ. ಪುಣೆ ವಿದ್ಯಾಪೀಠದ ಸಾಂಪತ್ತಿಕ ಸ್ಥಿತಿಯು ಮರಾಠಿಗರ ಅಪೇಕ್ಷೆಯ ಪ್ರಕಾರ ತೃಪ್ತಿಕರವಿರದಿದ್ದರೂ ಕೀಳು ಇಲ್ಲ. ಪುಣೆ ವಿದ್ಯಾಪೀಠ ಮಸೂದೆಯ ಚರ್ಚೆ ನಡೆದಾಗ ಮುಖ್ಯ ಮಂತ್ರಿಗಳಾದ ಖೇರರವರು ಪುಣೆಯಲ್ಲಿಯ ಸರಕಾರೀ ಭವನವನ್ನು ಪುಣೆಯ ವಿದ್ಯಾಪೀಠಕ್ಕೆ ಕೊಡುವದಾಗಿ ಹೇಳಿದರು. ಈಗ ಗಣೇಶಖಿಂಡಿಯಲ್ಲಿರುವ ಸರಕಾರೀ ಭವನದಲ್ಲಿ ವಿದ್ಯಾಪೀಠದ ಕೇಂದ್ರವಿರುವದು. ಈ ಪ್ರಕಾರ ಅವರಿಗೆ ಹೊಸ ಕಟ್ಟಡಗಳನ್ನು ವಿದ್ಯಾಪೀಠಕ್ಕಾಗಿ ಕಟ್ಟಿಸುವ ಅಗತ್ಯವಿಲ್ಲ. ಸರಕಾರದವರು ೧೯೪೮—೪೯ ರಲ್ಲಿ, ೧,೪೩,೦೦೦ ರೂ. ೧೯೪೯—೫೦ ರಲ್ಲಿ ೩||| ಲಕ್ಷ ರೂ. ಮತ್ತು ೧೯೫೦—೫೧ ರಲ್ಲಿ ೪ ಲಕ್ಷ ರೂ. ಗಳ ಧನ ಸಹಾಯವನ್ನು ಪುಣೆ ವಿದ್ಯಾಪೀಠಕ್ಕೆ ಮಾಡಿದ್ದಾರೆ. ವಿದ್ಯಾಪೀಠವು ಕಾರ್ಯಕ್ಷಮತೆಯಿಂದ ಶಿಕ್ಷಣದ ಕೆಲಸವನ್ನು ಕೈಕೊಳ್ಳುವದಾದರೆ ಇದಕ್ಕೂ ಬಹಳ ಹೆಚ್ಚು ಹಣ ಬೇಕೆಂಬುದರಲ್ಲಿ ಸಂಶಯವಿಲ್ಲ. ಆದರೂ ಪುಣೆಯ ಪರಿಸ್ಥಿತಿಯು ಕರ್ನಾಟಕಕ್ಕಿಂತಲೂ ಬೇರೆ ಇರುವದು. ಅಲ್ಲಿಯ ಕಾಲೇಜುಗಳು ಬಹಳ ಹಳೆಯವು. ಶಿಕ್ಷಣದ ಕಾರ್ಯಕ್ಕಾಗಿ ತಮ್ಮ ಜೀವನವನ್ನು ಧಾರೆಯೆರೆದ ಅನೇಕ ಪ್ರಾಧ್ಯಾಪಕರು ಶಿಕ್ಷಣ ಸಂಸ್ಥೆಗಳ ಆಜೀವ ಸಭಾಸದರಾಗಿರುವರು. ಅವರು ಸ್ವಾರ್ಥತ್ಯಾಗಪೂರ್ವಕ ಕೆಲಸ ಮಾಡಬಯಸಿ ತಿಂಗಳ ೨೫೦ ಕ್ಕಿಂತ ಹೆಚ್ಚು ಸಂಬಳವನ್ನು ತೆಗೆದುಕೊಳ್ಳುವದಿಲ್ಲ. ಮೇಲಾಗಿ ಅವರಲ್ಲಿ ಅನೇಕರು ಮುಂಬಯಿ ವಿದ್ಯಾಪೀಠದ ಎಲ್ಲ ಅಧಿಕಾರೀ ಸಂಸ್ಥೆಗಳ ಸಭಾಸದರಿದ್ದುದರಿಂದ, ವಿದ್ಯಾಪೀಠದ ಕೆಲಸದಲ್ಲಿ ಅನುಭವವನ್ನು ಪಡೆದವರಿದ್ದಾರೆ. ಮತ್ತು ಆ ವಿದ್ಯಾಪೀಠದ ಶಿಕ್ಷಣದ ಯೋಜನೆಯ ಪ್ರಕಾರ ಪ್ರತಿಯೊಂದು ಘಟಕ ಸಂಸ್ಥೆಯು ತನ್ನ ತನ್ನ ಅನುಭವಿಕ ಮತ್ತು ನುರಿತ ಪ್ರಾಧ್ಯಾಪಕರನ್ನು ವಿದ್ಯಾಪೀಠಕ್ಕೆ ಕೊಡುವದರಿಂದ ಮತ್ತು ಅವರ ಸಂಬಳವು ಕಡಿಮೆಯಿದ್ದದರಿಂದ ವಿದ್ಯಾಪೀಠಕ್ಕೆ ಹೆಚ್ಚು ವೆಚ್ಚ ಬರುವದಿಲ್ಲ. ಪುಣೆಯ ವಿದ್ಯಾಪೀಠವು ಹೋದ ವರ್ಷ ನಾಲ್ಕು ಪ್ರಾಧ್ಯಾಪಕರನ್ನು ಮತ್ತು ನಾಲ್ಕು ಅಧ್ಯಾಪಕರನ್ನು ಮಾತ್ರ ನೇಮಿಸಿಕೊಂಡಿದೆ. ಈ ಪ್ರಕಾರ ಅವರ ಶಿಕ್ಷಣದಾನದ ಕೆಲಸವು ಸ್ವಲ್ಪ ವೆಚ್ಚದಲ್ಲಿಯೇ ನಡೆದಿರುವದು.

ಇದಲ್ಲದೆ ಮಹಾರಾಷ್ಟ್ರದ ಮಧ್ಯಮ ವರ್ಗದವರು ತಮ್ಮ ಕರ್ತವ್ಯವನ್ನು ಬಲ್ಲರು. ಪ್ರಾಧ್ಯಾಪಕರಲ್ಲಿ ಕಂಡು ಬರುವ ಸ್ತುತ್ಯವಾದ ಮತ್ತು ಅನುಕರಣೀಯವಾದ ಸ್ವಾರ್ಥತ್ಯಾಗ ವೃತ್ತಿಯು ಮಧ್ಯಮ ವರ್ಗದ ಜನರಲ್ಲಿಯಾದರೂ ಕಂಡು ಬರುವದು. ವಿದ್ಯಾಪೀಠವು ಕಾರ್ಯಕ್ಷಮವಾಗುವದರಿಂದ ಮುಂದಿನ ಪೀಳಿಗೆಗೆ ಆಗುವ ಲಾಭವನ್ನು ಲಕ್ಷ್ಯದಲ್ಲಿ ತಂದು, ಮಹಾರಾಷ್ಟ್ರದ ಮಧ್ಯಮ ವರ್ಗದವರು ತಮ್ಮ ಶಕ್ತಿ ಮೀರಿ ವಿದ್ಯಾಪೀಠಕ್ಕೆ ಧನಸಹಾಯ ಮಾಡಹತ್ತಿದ್ದಾರೆ. ೧೯೫೦ ಜೂನ ೩೦ ರ ವರೆಗೆ ಅಂದರೆ ಮೊದಲಿನ ಎರಡು ವರ್ಷಗಳಲ್ಲಿ ವಿದ್ಯಾಪೀಠಕ್ಕೆ ಕೆಳಗೆ ತೋರಿಸಿದಂತೆ ಧನ ಸಹಾಯ ಸಿಕ್ಕಿದೆ.

ಸಂಶೋಧನ ಕಾರ್ಯದಲ್ಲಿ ವಿದ್ಯಾರ್ಥಿವೇತನವನ್ನು ಕೊಡಲು ಕೂಡಿಸಿದ ಶಾಶ್ವತ ನಿಧಿ	೨,೫೧,೦೦೦
ವಿದ್ಯಾರ್ಥಿವೇತನದ ಸಲುವಾಗಿ ಕೂಡಿದ ಶಾಶ್ವತ ನಿಧಿ	೩,೨೭,೫೦೦
ಬಹುಮಾನ	೩,೪೦೦
ಇತರ ಕಾಣಿಕೆಗಳು	೮೦,೮೬೨
	೬,೬೨,೭೬೨

ಜೂನ ೩೦ ರಿಂದ ಬಂದ ಅನೇಕ ಕಾಣಿಕೆಗಳು ಇದರಲ್ಲಿ ಅಡಕವಾಗಿಲ್ಲ.


ಕರ್ನಾಟಕ ವಿಶ್ವವಿದ್ಯಾಲಯದ ಪರಿಸ್ಥಿತಿಯು ಇವೆಲ್ಲ ವಿಷಯಗಳಲ್ಲಿ ತೀರ ಭಿನ್ನವಿದೆ. ಸರಕಾರೀ ಭವನದಂಥ ಸ್ಥಳವು ನಮಗೆ ದೊರೆತಿಲ್ಲ. ಕನ್ನಡ ಟ್ರೇನಿಂಗ ಕಾಲೇಜಿನೊಳಗಿನ ಮೂರು ಕೋಣೆಗಳನ್ನು ಮಾತ್ರ ಸರಕಾರದವರು ನಮ್ಮ ವಶಕ್ಕೆ ಕೊಟ್ಟರು. ಅಷ್ಟು ಸ್ಥಳ ನಮ್ಮ ಕಚೇರಿಯ ಕೆಲಸಕ್ಕೆ ಸಾಕಾಗುತ್ತಿದ್ದಿಲ್ಲ. ಬಾಡಿಗೆಯಿಂದಾದರೂ ಸ್ಥಳವು ದೊರೆಯುಲು ಶಕ್ಯವಿಲ್ಲದ್ದರಿಂದ ಪುಸ್ತಕಾಲಯ

ದೇವ ಕನ್ನಿಕೆಯರ ಆಯ್ಕೆ !

ಲೀನಾ

:: ಸ್ನೋ :: ಅತ್ತರ
:: ಬ್ರಿಲಿಯಂಟಾಯಿನ್
:: ಸುಗಂಧಿ ಕ್ಯಾಸ್ಟರಆಯಿಲ
ಮತ್ತು
:: ಕೊಬ್ರಿಯೆಣ್ಣೆ





ತಯಾರಕರು :
ಮೆಸರ್ಸ ಫಾರ್ಮಾಕೋಜ ಕಾರ್ಪೊರೇಶನ್
ಲೇಡಿ ಜಮಶೇಡಜಿ ರೋಡ, ದಾದರ,
ಮುಂಬಯಿ ೧೪.
ಎಲ್ಲ ಕಡೆಗೂ ಸ್ಟಾಕಿಸ್ಟರು ಬೇಕು
ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾತ್ರ.

ವನ್ನು ಸ್ಥಾಪಿಸುವದಕ್ಕಾಗಲಿ ಖುರ್ಚಿ, ಮೇಜು, ಕಪಾಟುಗಳನ್ನು ಮಾಡಿಸಲಿಕ್ಕಾಗಲಿ ಅವಕಾಶವಿದ್ದಿಲ್ಲ. ಈಗ ಕಳೆದ ಎರಡು ತಿಂಗಳುಗಳಿಂದ ಮತ್ತೆ ಎರಡು ಕೋಣೆಗಳು ಸಿಕ್ಕಿವೆ. ಈಗ ಪುಸ್ತಕಗಳನ್ನು ಕೊಳ್ಳುವ ಮತ್ತು ಕಪಾಟು ಮೊದಲಾದ ಸಾಮಾನುಗಳನ್ನು ಮಾಡಿಸುವ ಕೆಲಸವು ನಡೆದಿದೆ. ಥೋಟಾ ಮಹಾಬಳೇಶ್ವರದಲ್ಲಿಯ ಸುಮಾರು ೨೦೦ ಎಕರೆ ಸ್ಥಳವನ್ನು ಸರಕಾರದವರು ನಮಗೆ ಕೊಟ್ಟಿದ್ದಾರೆಂಬುದು ನಿಜ. ಕರ್ನಾಟಕ ವಿದ್ಯಾಪೀಠ ಸಮಿತಿಯವರು, ಕಟ್ಟಡಗಳನ್ನು ಕಟ್ಟಿಸುವದಕ್ಕಾಗಿ ೨೫ ಲಕ್ಷ ಮತ್ತು ವಾಚನಾಲಯ ಮತ್ತು ಶಾಸ್ತ್ರೀಯ ವಿಷಯಗಳನ್ನು ಕಲಿಸಲು ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಡುವದಕ್ಕಾಗಿ ೧೫ ಲಕ್ಷ ಹೀಗೆ ಒಟ್ಟು ನಾಲ್ವತ್ತು ಲಕ್ಷ ರೂಪಾಯಿಗಳನ್ನು ಸರಕಾರದಿಂದ ಬೇಡಿದ್ದರು. ಪ್ರತಿ ವರ್ಷ ೮ ಲಕ್ಷದಂತೆ ೫ ವರ್ಷಗಳಲ್ಲಿ ಸರಕಾರವು ೪೦ ಲಕ್ಷ ರೂಪಾಯಿಗಳನ್ನು ಕೊಡಬಹುದೆಂದು ನಿರೀಕ್ಷಿಸಲಾಗಿದೆ. ಮೊದಲನೇ ವರ್ಷ ಸರಕಾರದವರು ಕರ್ನಾಟಕವಿದ್ಯಾಪೀಠದ ಕಟ್ಟಡಗಳಿಗಾಗಿ ೮ ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಕಾಣಿಸಿದ್ದರು. ಕಟ್ಟಡಗಳನ್ನು ಕಟ್ಟುವ ಪೂರ್ವದಲ್ಲಿ ಅನೇಕ ನಿರ್ಬಂಧಗಳನ್ನು ಹಾಕಿದ್ದರಿಂದ ೧೯೫೦ ಮಾರ್ಚ ಕೊನೆಯೊಳಗೆ ಅದಕ್ಕೆ ಏನೂ ಹಣ ಖರ್ಚು ಮಾಡಿಕೊಳ್ಳಲು ಶಕ್ಯವಾಗಲಿಲ್ಲ. ಒಂದು ಕಾಂಟೂರ ನಕಾಶೆಯನ್ನು ತೆಗೆಸಲಿಕ್ಕೆ ಕೆಲವು ಪ್ರಮುಖರ ವಶೀಲಿ ಹಚ್ಚಿ ಸಹ ೬ ತಿಂಗಳುಗಳು ಹತ್ತಿದವು. ಈ ೮ ಲಕ್ಷ ರೂಪಾಯಿಗಳ ದಾನವು ಬಿದ್ದುಹೋಗಬಾರದೆಂದು ಸಿಂಡಿಕೇಟಿನವರು ಮುಖ್ಯ ಮಂತ್ರಿಗಳ ಕಡೆಗೆ ಮಾರ್ಚ ತಿಂಗಳಲ್ಲಿ ಒಂದು ಶಿಷ್ಟ ಮಂಡಳವನ್ನು ಕಳಿಸಿದ್ದರು. ಪ್ರತಿ ವರ್ಷದ ೮ ಲಕ್ಷ ಗ್ರಾಂಟನ್ನು ೧೯೫೦—೫೧ ರಿಂದ ಮುಂದೆ ೫ ವರ್ಷಗಳ ವರೆಗೆ ಕೊಡುತ್ತ ಹೋಗಬೇಕೆಂದು ನಮ್ಮ ಶಿಷ್ಟಮಂಡಳವು ಮುಖ್ಯ ಮಂತ್ರಿಗಳನ್ನು ಕೇಳಿಕೊಂಡಿತು. ಕಟ್ಟಡಕ್ಕೆ ಕೊಡತಕ್ಕ ಧನಸಹಾಯವು ಎಂದೂ ಬಿದ್ದು ಹೋಗುವಹಾಗಿಲ್ಲ. ೧೯೫೦-೫೧ ರ ಬಜೆಟ್ಟಿನಲ್ಲಿ ಕರ್ನಾಟಕ ವಿದ್ಯಾಪೀಠದ ಕಟ್ಟಡದ ವೆಚ್ಚಕ್ಕಾಗಿ ೮ ಲಕ್ಷ ಮತ್ತೆ ಕಾಣಿಸಲಾಗಿದ್ದಿತು. ಆದರೆ ಅಷ್ಟರಲ್ಲಿ ಸಾಂಪತ್ತಿಕ ದುರವಸ್ಥೆಯುಂಟಾದ್ದರಿಂದ ಈ ವರ್ಷದ ಕಟ್ಟಡದ ಕಾಣಿಕೆಯನ್ನು ೪ ಲಕ್ಷಕ್ಕೆ ಇಳಿಸಲಾಯಿತು. ಇನ್ನು ಮುಂದೆ ಸರಕಾರದವರು ಕಟ್ಟಡಗಳಿಗಾಗಿ ಎಷ್ಟು ಹಣವನ್ನು ಯಾವ ಕಂತುಗಳಿಂದ ಕೊಡುವರೆಂಬುದನ್ನು ನಿಶ್ಚಿತವಾಗಿ ತಿಳಿದುಕೊಳ್ಳುವದಕ್ಕಾಗಿ ಸಿಂಡಿಕೇಟಿನ ಇನ್ನೊಂದು ಶಿಷ್ಟ ಮಂಡಳವು ಮುಖ್ಯ ಮಂತ್ರಿಗಳನ್ನು ಕಾಣಲಿಕ್ಕೆ ಕ್ಷಿಪ್ರದಲ್ಲಿಯೇ ಹೋಗುವದಿದೆ. ಪ್ರತಿ ವರ್ಷ ಆಗುವ ವೆಚ್ಚಕ್ಕಾಗಿ ಸರಕಾರದವರು ನಮಗೆ ಮೊದಲನೇ ವರ್ಷ ೩॥ ಲಕ್ಷ ರೂ. ಕೊಡಲು ಒಪ್ಪಿದ್ದಾರೆ. ಈ ಪ್ರಕಾರ ನಮ್ಮ ಸಾಂಪತ್ತಿಕ ಸ್ಥಿತಿಯು ಅಸಮಾಧಾನಕರವಿದೆ.

ಶಿಕ್ಷಣದ ಅನುಕೂಲತೆಗಳ ದೃಷ್ಟಿಯಿಂದ ನೋಡಿದರೆ, ಕರ್ನಾಟಕ ಬಹಳ ಹಿಂದೆ ಉಳಿದಿರುವದೆಂದು ನಾವು ಒಪ್ಪಲೇಬೇಕಾಗುವದು. ಕರ್ನಾಟಕದಲ್ಲಿಯ ಎಲ್ಲಕ್ಕೂ ಹಳೆಯದಾದ ಕರ್ನಾಟಕ ಕಾಲೇಜಿನ ಸ್ಥಾಪನೆಯು, ಡೆಕ್ಕನ ಕಾಲೇಜು ಸ್ಥಾಪನೆಯಾಗಿ ೫೭ ವರ್ಷಗಳ ನಂತರ ಮತ್ತು ಗುಜರಾಥ ಕಾಲೇಜ ಸ್ಥಾಪನೆಯಾಗಿ ೩೮ ವರ್ಷಗಳ ನಂತರ ಆಗಿದೆ. ಅದೊಂದೇ ಕಾಲೇಜಿನಲ್ಲಿ ಹೆಚ್ಚು ಅನುಭವಿಕ ಪ್ರಾಧ್ಯಾಪಕರು ದೊರೆಯುವರು. ಕೆ. ಇ. ಬೋರ್ಡ ಕಾಲೇಜು ಇನ್ನೂ ಹೊಸದಿದೆ. ವಿದ್ಯಾಪೀಠದಿಂದ ಮನ್ನಣೆ ಪಡೆದ ಪ್ರಾಧ್ಯಾಪಕರು ಇಬ್ಬರೇ ಇರುವರು. ಬೆಳಗಾಂವಿಯ ಲಿಂಗರಾಜ ಕಾಲೇಜು ಹಳೆಯದಿದ್ದರೂ ಅಲ್ಲಿಯ ಪ್ರಾಧ್ಯಾಪಕರೇ ದಿನವೂ ಧಾರವಾಡಕ್ಕೆ ಕಲಿಸಲಿಕ್ಕೆ ಬರಲು ಶಕ್ಯವಿಲ್ಲ. ಕರ್ನಾಟಕ ವಿದ್ಯಾಪೀಠಕ್ಕೆ ಘಟಕ ಸಂಸ್ಥೆಗಳು ಯಾವವೂ ಇಲ್ಲ. ಆದ್ದರಿಂದ ಪದವಿಯ ವರ್ಗದ ಅಭ್ಯಾಸವನ್ನು ಘಟಕ ಕಾಲೇಜುಗಳಿಂದ ಪಡೆದ ಪ್ರಾಧ್ಯಾಪಕರ ಸಹಾಯದಿಂದ ಮಾಡುವದು ನಮ್ಮ ವಿದ್ಯಾಪೀಠಕ್ಕೆ ಶಕ್ಯವಿಲ್ಲ. ನಮ್ಮ ವಿದ್ಯಾಪೀಠವು ಸ್ನಾತಕೋತ್ತರ ಶಿಕ್ಷಣದ ಬಗ್ಗೆ ಮಾತ್ರ ಅನುಕೂಲತೆಗಳನ್ನು ಒದಗಿಸಿಕೊಡಲಿಕ್ಕೆ ಯೋಜನೆ ಮಾಡಿಕೊಂಡಿದೆ. ಕರ್ನಾಟಕದಲ್ಲಿ ಹಳೆಯ ಕಾಲೇಜುಗಳು ಎರಡೇ ಇರುವದರಿಂದ ವಿದ್ಯಾಪೀಠದಿಂದ ಮನ್ನಣೆ ಪಡೆದ ಪ್ರಾಧ್ಯಾಪಕರ ಸಂಖ್ಯೆಯು ಸಹ ಕಡಿಮೆ ಇರುವದು. ಆ ಕಾರಣ ವಿದ್ಯಾಪೀಠದವರೇ ಹೆಚ್ಚು ಜನ ಪ್ರಾಧ್ಯಾಪಕರನ್ನು ಮತ್ತು ಅಧ್ಯಾಪಕರನ್ನು ನೇಮಿಸಬೇಕಾಗುವದು. ಈ ಪ್ರಕಾರ ಸ್ನಾತಕೋತ್ತರ ಶಿಕ್ಷಣದ ಸಲುವಾಗಿ ನಾವು ಪುಣೆಯ ವಿದ್ಯಾಪೀಠಕ್ಕಿಂತಲೂ ಹೆಚ್ಚು ವೆಚ್ಚ ಮಾಡುವದು ಅವಶ್ಯವಾಗಿದೆ. ಸ್ನಾತಕೋತ್ತರ ಶಿಕ್ಷಣವನ್ನು ಪಡೆಯುವಂಥ ವಿದ್ಯಾರ್ಥಿಗಳ ಸಂಖ್ಯೆಯು ಇನ್ನೂ ರಕ್ಕೆ ಮಿಕ್ಕಲಿಕ್ಕಿಲ್ಲ.

ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಲು ವಿದ್ಯಾರ್ಥಿ ವೇತನ ಬಹುಮಾನಗಳನ್ನು ಕೊಡುವದಕ್ಕಾಗಿ ಕರ್ನಾಟಕದ ಜನತೆಯು, ಮಹಾರಾಷ್ಟ್ರದ ಜನತೆಯಂತೆ, ಮುಂದೆ ಬಂದಿಲ್ಲ. ಪುಣೆ ವಿದ್ಯಾಪೀಠಕ್ಕೆ ಮೊದಲಿನ ೨ ವರ್ಷಗಳಲ್ಲಿ ೬॥ ಲಕ್ಷ ಕಾಣಿಕೆಯು ಬಂದಿದೆ. ಕನ್ನಡ ವಿದ್ಯಾಪೀಠಕ್ಕೆ ಬಹುಮಾನದ ಸಲುವಾಗಿ ೪೫೦೦ ಮಾತ್ರ ಬಂದಿದೆ. ವಿದ್ಯಾರ್ಥಿವೇತನದ ಶಾಶ್ವತ ನಿಧಿಗಾಗಿ ಶ್ರೀ ದೊಂದೆ ಮಾಸ್ತರರ ಕಡೆಯಿಂದ ೧೨,೭೦೦ ರೂ.ಗಳು ಬಂದಿವೆ. ಶ್ರೀ ದೋಂದೆಯವರು ಕರ್ನಾಟಕದ ಹೊರಗಿನವರು. ಕರ್ನಾಟಕದ ಜನರಿಂದ ರೂ. ೪೫೦೦ ಮಾತ್ರ ಬಂದಿದೆ. ಕರ್ನಾಟಕ ಜನರ ಈ ಅಕ್ಷಮ್ಯವಾದ ಔದಾಸೀನ್ಯ ಮತ್ತು ಅನಾಸ್ಥೆಯನ್ನು ನೋಡಿದರೆ ಕನ್ನಡಿಗರ ಉಜ್ವಲ ಭವಿಷ್ಯತ್ಕಾಲದ ಬಗ್ಗೆ ಮನಸ್ಸು ಸಾಶಂಕವಾಗುವದು. ಈ ಔದಾಸೀನ್ಯದ ಮತ್ತು ಅನಾಸ್ಥೆಯ ಮೊದಲಿನ ಪರಿಣಾಮವೆಂದರೆ ನಮ್ಮೊಳಗಿನ ಚುರುಕು ಬುದ್ಧಿಯ ಹುಡುಗರು ಕರ್ನಾಟಕದ ಹೊರಗಿನ ವಿದ್ಯಾಪೀಠವನ್ನು ಸೇರಬಹುದು. ಹಾಗೆ ಆದಲ್ಲಿ ಅಂತರ್ವಿಶ್ವವಿದ್ಯಾಲಯಗಳಲ್ಲಿ ಈ ವಿದ್ಯಾಪೀಠವು ವಿಶೇಷವಾದ ಸ್ಥಾನವನ್ನು ಪಡೆಯಲು ಶಕ್ಯವಿಲ್ಲ. ಇದು ಮೂರನೆ ತರಗತಿಯ ವಿದ್ಯಾಪೀಠವಾಗಿ ಉಳಿಯಬಹುದು. ಪುಣೆ ವಿದ್ಯಾಪೀಠಕ್ಕೆ ಹಣ ಕೊಟ್ಟವರಲ್ಲಿ ಬಂಡವಲುದಾರರ ವರ್ಗವಿಲ್ಲ. ಎಲ್ಲ ಕಾಣಿಕೆಗಳು ಮಧ್ಯಮವರ್ಗದ ಜನರಿಂದಲೇ ಬಂದಿವೆ. ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳನ್ನು ಸಾಮಾನ್ಯವಾಗಿ ಸರಕಾರದ ಕಡೆಯಿಂದ ಬಂದ ನಿಧಿಯೊಳಗಿಂದ ಯಾವ ವಿದ್ಯಾಪೀಠವೂ ಕೊಡುವದಿಲ್ಲ. ಸಾರ್ವಜನಿಕರಿಂದ ಬಂದ ಕಾಣಿಕೆಯೊಳಗಿಂದಲೇ ಬಹುಮಾನ ಮೊದಲಾದವುಗಳು ಕೊಡಲ್ಪಡುವವು.

ನಮ್ಮ ವಿದ್ಯಾಪೀಠದ ಕ್ಷೇತ್ರವು ಮುಂಬಯಿ ಕರ್ನಾಟಕದ ಮಟ್ಟಿಗೆ ಇರುವದರಿಂದ ಇದಕ್ಕೆ ಪ್ರಾದೇಶಿಕವೆಂದು ಅನ್ನಬೇಕೇ ಹೊರತು, ಶಿಕ್ಷಣದ ದೃಷ್ಟಿಯಿಂದ ಇದು ರಾಷ್ಟ್ರೀಯ ವಿದ್ಯಾಪೀಠವಾಗಿಯೇ ಇರುವದು. ಉಳಿದ ವಿದ್ಯಾಪೀಠಗಳಲ್ಲಿ ಸಾಮಾನ್ಯವಾಗಿ

ಕಲಿಸಲ್ಪಡುವಂಥ ಎಲ್ಲ ವಿಷಯಗಳೂ ಈ ವಿದ್ಯಾಪೀಠದಲ್ಲಿ ಕಲಿಸಲ್ಪಡುವವು. ಆದರೂ ನಮ್ಮ ವಿದ್ಯಾಪೀಠದ ವೈಶಿಷ್ಟ್ಯವೇನಾದರೂ ಬೇಕು. ಕನ್ನಡ ಭಾಷೆ, ವಾಙ್ಮಯ ಮತ್ತು ಕರ್ನಾಟಕದ ಪ್ರಾಚೀನ ಇತಿಹಾಸ ಇವುಗಳ ಕಡೆಗೆ ನಾವು ಹೆಚ್ಚು ಲಕ್ಷಕೊಡಬೇಕು. ಜೈನರೂ ವೀರಶೈವರೂ ಬ್ರಾಹ್ಮಣರೂ ಕನ್ನಡ ಸಾಹಿತ್ಯಕ್ಕೆ ವಿಶೇಷವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಸ್ಮರಣಾರ್ಥವಾಗಿ ವೀರಶೈವ ಧರ್ಮದ ತತ್ವಜ್ಞಾನ,ಜೈನ ಧರ್ಮದ ತತ್ವಜ್ಞಾನ ಮತ್ತು ವೇದಾಂತ ತತ್ವಜ್ಞಾನಗಳ ಅಭ್ಯಾಸದ ಬಗ್ಗೆ ಪ್ರತ್ಯೇಕವಾಗಿ ಒಬ್ಬೊಬ್ಬ ಪ್ರಾಧ್ಯಾಪಕನನ್ನು ನೇಮಿಸುವದು ಯೋಗ್ಯವಾಗಿದೆ. ಇದರ ವೆಚ್ಚಕ್ಕಾಗಿ ಆಯಾ ಧರ್ಮದ ಮಠಾಧಿಪತಿಗಳು ಉದಾರವಾದ ದಾನವನ್ನು ಮಾಡಿದರೆ ಅವರು ತಮ್ಮ ಧರ್ಮಕಾರ್ಯ ಮಾಡಿದ್ದಲ್ಲದೆ ಜ್ಞಾನದ ಬೆಳೆವಣಿಗೆಗಾದರೂ ಸಹಾಯ ಮಾಡಿದಂತೆ ಆಗುವದು. ವಿದ್ಯಾಪೀಠದವರಾದರೂ ಪಾಶ್ಚಾತ್ಯ ತತ್ವಜ್ಞಾನದೊಡನೆ ಭಾರತದೊಳಗಿನ ಯಾವವಾದರೂ ಎರಡು ತತ್ವಜ್ಞಾನಗಳನ್ನು ವಿದ್ಯಾರ್ಥಿಗಳು ಕಲಿಯತಕ್ಕದ್ದೆಂದು ನಿರ್ಬಂಧ ಹಾಕಿದರೆ, ವಿದ್ಯಾರ್ಥಿಗಳಿಗೆ ತುಲನಾತ್ಮಕ ದೃಷ್ಟಿಯಿಂದ ಬೇರೆ ಬೇರೆ ಧರ್ಮದ ತತ್ವಗಳ ಅಭ್ಯಾಸಮಾಡಲಿಕ್ಕೆ ಅನುಕೂಲತೆಯನ್ನು ಒದಗಿಸಿ ಕೊಟ್ಟಂತಾಗುವದು.

ಧಾರವಾಡದಲ್ಲಿ ಈಗ ಒಂದು ಅರಣ್ಯ ಕಾಲೇಜು ಇದೆ. ಇದನ್ನೇ ಬೆಳೆಸಿ ಪದವಿ ಕೊಡುವ ಯೋಜನೆಯನ್ನು ಕೈಕೊಂಡರೆ. ಇದೊಂದು ವಿಷಯವು ಕರ್ನಾಟಕ ವಿದ್ಯಾಪೀಠದ ವೈಶಿಷ್ಟ್ಯವಾಗಬಹುದು. ಅರಣ್ಯದ ವಿಷಯದಲ್ಲಿ ಸಂಶೋಧನಕ್ಕೆ ಬಹಳ ಅವಕಾಶವಿರುವದು. ಸರಕಾರವು ಹಣವನ್ನು ಒದಗಿಸಿಕೊಟ್ಟರೆ ಈ ಸಂಶೋಧನ ಕಾರ್ಯವನ್ನು ನಮ್ಮ ವಿದ್ಯಾಪೀಠದವರು ಮಾಡಬಹುದು. ಭೂಗರ್ಭ ಶಾಸ್ತ್ರದ ದೃಷ್ಟಿಯಿಂದ ಕರ್ನಾಟಕದ ನಿರೀಕ್ಷಣೆಯು ಇನ್ನೂ ತೃಪ್ತಿಕರವಾಗಿ ಆಗಿಲ್ಲ. ಆ ಕಾರಣ ಭೂಗರ್ಭ ಶಾಸ್ತ್ರದ ಅಭ್ಯಾಸದ ಬಗ್ಗೆ ವಿಶೇಷವಾದ ಸಲಕರಣೆಗಳನ್ನು ಒದಗಿಸಬೇಕೆಂದು ವಿದ್ಯಾಪೀಠವು ವಿಚಾರ ಮಾಡುತ್ತಲಿದೆ.

ವಿದ್ಯಾಪೀಠವು ಜನ ಸಾಮಾನ್ಯರಿಗೂ ತಮ್ಮ ಜ್ಞಾನದ ಲಾಭವನ್ನು ಕೊಡುವದು ಅವಶ್ಯವಿದೆ. ಬೇಸಿಗೆಯ ಬಿಡುವಿನಲ್ಲಿ ವಿದ್ಯಾಪೀಠದ ಪ್ರಾಧ್ಯಾಪಕರು ಉಪಯುಕ್ತವಾದ ಶಾಸ್ತ್ರಿಯ ವಿಷಯಗಳ ಬಗ್ಗೆ ಸುಲಭವಾದ ಶೈಲಿಯಲ್ಲಿ ಸಾಮಾನ್ಯ ಜನರಿಗೆ ತಿಳಿಯುವಂತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ವ್ಯಾಖ್ಯಾನಗಳನ್ನು ಕೊಡುವಂತೆ ವಿದ್ಯಾಪೀಠವು ಏರ್ಪಾಡುಮಾಡಬಹುದು. ಜನಸಾಮಾನ್ಯರ ಜ್ಞಾನವನ್ನು ಹೆಚ್ಚಿಸುವದು ವಿದ್ಯಾಪೀಠದ ಅವಶ್ಯವಾದ ಕರ್ತವ್ಯಗಳಲ್ಲಿ ಒಂದಾಗಿದೆ ಎಂದು ನನ್ನ ಭಾವನೆಯಿರುವದು. ಈ ರೀತಿಯಿಂದ ವಿದ್ಯಾಪೀಠವು ಸಮಾಜ ಸೇವೆಯನ್ನು ಮಾಡಿದರೆ ವಿದಾರ್ಥಿಗಳಾದರೂ ಈ ಕೆಲಸದಲ್ಲಿ ಸ್ವಯಂ–ಸೇವಕರಾಗಿ ಮುಂದೆ ಬರುವರೆಂಬುದರಲ್ಲಿ ಸಂಶಯವಿಲ್ಲ. ಕರ್ನಾಟಕದ ಜನರು ಮತ್ತು ವಿದ್ಯಾರ್ಥಿಗಳು ಭಾರತದ ಯಾವ ಭಾಗದ ಜನರು ಮತ್ತು ವಿದ್ಯಾರ್ಥಿಗಳಿಗಿಂತಲೂ ಬುದ್ಧಿಯಲ್ಲಿ ಮತ್ತು ಕರ್ತೃತ್ವದಲ್ಲಿ ಕಡಿಮೆಯಿಲ್ಲ. ಅವರ ಬುದ್ಧಿ ಮತ್ತು ಕರ್ತೃತ್ವಶಕ್ತಿ ವಿಕಾಸಹೊಂದಲಿಕ್ಕೆ ಕರ್ನಾಟಕದ ಜನರೂ ಕರ್ನಾಟಕದ ವಿದ್ಯಾಪೀಠದವರೂ ಪರಸ್ಪರ ಸಹಕಾರದಿಂದ ಅನುಕೂಲತೆಗಳನ್ನು ಒದಗಿಸಿಕೊಟ್ಟರೆ, ಕರ್ನಾಟಕವು ೧೦–೧೫ ವರ್ಷಗಳಲ್ಲಿ ಭಾರತದ ಉಳಿದ ಪ್ರಾಂತಗಳಿಗೆ ಸರಿಗಟ್ಟುವದೆಂದು ನನ್ನ ದೃಢವಾದ ನಂಬಿಗೆಯಿದೆ. ಕರ್ನಾಟಕದ ಜನರು ಕರ್ನಾಟಕ ವಿದ್ಯಾಪೀಠಕ್ಕೆ ಯೋಗ್ಯವಾದ ಧನ ಸಹಾಯ ಮಾಡುವರೇ ?

ಪ್ರಖ್ಯಾತವಾದ

ಪೈಸನ್ಸ್ ಕಾಫಿ **Pai Sons Coffee**

೨೪ ಪೌಂಡು, ೧೮ ಪೌಂಡ, ೧೦ ಪೌಂಡು, ೫ ಪೌಂಡು, ೩ ಪೌಂಡು, ೨ ಪೌಂಡು

ಮತ್ತು

ಒಂದು ಪೌಂಡಿನ ಏರ್‌ಟೈಟ್ ಟಿನ್‌ಗಳಲ್ಲಿ (Airtight Tins) ದೊರೆಯುತ್ತೆ.

ಪರಿಶುದ್ಧತೆ ಮತ್ತು ಮಿಶ್ರಣರಹಿತವೆಂದು ಗ್ಯಾರಂಟಿ ಕೊಡಲಾಗುತ್ತೆ.

ವಿವರಗಳಿಗೆ ಮತ್ತು ವ್ಯಾಪಾರೀ ಶರ್ತುಗಳಿಗೆ ಇಂದೇ ಬರೆಯಿರಿ.

Pai Sons Coffee Mfg. Co.
(Regd.)
Post Box No 13,
Chikmagalur (Mysore)

ಪೈಸನ್ಸ್ ಕಾಫೀ ಮ್ಯಾನ್ಯುಫ್ಯಾಕ್ಚರಿಂಗ
ಕಂಪನಿ (ರಿಜಿಸ್ಟರ್ಡ)
ಪೋಸ್ಟ ಬಾಕ್ಸ ನಂ. ೧೩
ಚಿಕ್ಕಮಗಳೂರ (ಮೈಸೂರ)

ಹೃತ್ಪೂರ್ವಕ ಅಭಿವಂದನೆಗಳು. ಹೊಸ ವರುಷ ಶುಭದಾಯಕವಾಗಲ್ಲಿ !!

ನಮ್ಮ ಪುಸ್ತಕಗಳು

ನಾಟಕಗಳು

	ರೂ.	ಆ.
ಸಂಪೂರ್ಣ ರಾಮಾಯಣ	೨	೦
ದಶಾವತಾರ	೧	೮
ಶಾಂತ ಕುಮಾರಿ	೧	೮
ಸ್ತ್ರೀ ರತ್ನ	೧	೮
ಹರಿಶ್ಚಂದ್ರ	೦	೮
ಧರತಿಮಾತಾ	೧	೮
ಉಷಾ ಸ್ವಯಂವರ	೧	೮
ನರರಾಕ್ಷಸಿ (ಹೆಣ್ಣಿನ ಹಂಬಲ)	೨	೦
ಸಾಮ್ರಾಟ ಉತ್ತರ ಕುಮಾರ	೧	೮
ಸತ್ಯವಾನ ಸಾವಿತ್ರಿ	೧	೮
ಚಲೆಜಾವ (ಮಹಾದೇವ ಮೈಲಾರ)	೧	೮
ಸತಿ ಅನಸೂಯಾ	೧	೦
ಬ್ಲ್ಯಾಕ್ ಮಾರ್ಕೆಟ್	೦	೮
ಚಿತ್ತೂರ ಪದ್ಮಿನಿ	೧	೮
ರಾಧಾರಮಣ	೧	೮
ಕಿತ್ತೂರ ಕೇಸರಿ	೧	೮
ಝಾಂಸಿ ಲಕ್ಷ್ಮೀಬಾಯಿ	೧	೮

ನಾಟಕಗಳು

	ರೂ.	ಆ
ಭೂ ಕೈಲಾಸ	೧	೮
ಜೀವನ ಸಂಗೀತ	೧	೮
ಬೆಳವಡಿ ಮಲ್ಲಮ್ಮ	೧	೮
ನವಯುಗ	೧	೮
ನಾಗಯಜ್ಞ	೧	೮
ಕುರುಕ್ಷೇತ್ರ	೧	೮
ಸಿಂಧೂರ ಲಕ್ಷ್ಮಣ	೧	೮
ಕರ್ಣಾರ್ಜುನ	೧	೮
ಭಾಗ್ಯಹೀನ ಮಂಡೋದರಿ	೧	೮
ಚಲನ ಪ್ರಪಂಚ	೧	೮
ಸ್ವಜನದ್ರೋಹ	೧	೮
ರಾಷ್ಟ್ರಭಕ್ತಿ	೧	೮
ಚಂದ್ರಹಾಸ	೨	೦
ಶಾಪವಿಮೋಚನ	೧	೮
ಕಡ್ಲಿಮುಟ್ಟೆ ಸ್ಟೇಶನ ಮಾಸ್ತರ	೧	೮
ಭೌಮಾಸುರ	೧	೮
ಜೈಹಿಂದ	೦	೮

ಏಕಾಂಕ ನಾಟಕಗಳು

	ರೂ.	ಆ.
ಹುತಾತ್ಮರು	೦	೪
ಜೈ ಕರ್ನಾಟಕ	೦	೬
ಯಮನ ನ್ಯಾಯಮಂದಿರ	೨	೮
ನಡುಗಾಲ ಸರಕಾರ	೦	೮

ಕಥಾಸಂಗ್ರಹಗಳು

	ರೂ.	ಆ.
ಗೇಣು ಹೊಟ್ಟೆಗಾಗಿ	೦	೮
ಸಂಧಿಕಾಲ	೧	೪
ಹಾಡುವ ಹುಡಿಗೆ	೧	೮

ರಾಜಕೀಯ

	ರೂ.	ಆ.
ಸೋವ್ಹಿಯೆಟ್ ಭೂಮಿ	೧	೮
ಮರುಭೂಮಿಯ ಅರಬರು	೧	೪

ಪತ್ತೆದಾರಿ ಕಾದಂಬರಿಗಳು

	ರೂ.	ಆ.
ಕರ್ಮಪತ್ನಿ	೦	೧೨
ಫರಾರಿ	೧	೦
ಅವಸಾನ ಕಾಲ	೧	೦

ವಿರಭದ್ರಪ್ಪಾ ದುಂಡಪ್ಪಾ ಆರುಬೆರಳಿನ ಶಾಸ್ತ್ರಿ ಇವರ ೧೦ ವರ್ಷದಿಂದ ದುರ್ಮಿಳವಾದ ಅಪೂರ್ವ ಗ್ರಂಥ

ಕಾಮಧೇನು

ಇದರಲ್ಲಿ : ಮುಹೂರ್ತ ಸಂಗ್ರಹ, ಶಿಶುಜನ್ಮ ಫಲ, ಪ್ರಶ್ನ ಸಂಗ್ರಹ, ಶಕುನ ಸಂಗ್ರಹ, ಸ್ವಪ್ನ ಫಲ, ಸಾಮುದ್ರಿಕ, ಯಂತ್ರ ಮಂತ್ರ ತಂತ್ರ ಸಂಗ್ರಹ, ವಿವಿಧ ಕಲಾ ಸಂಗ್ರಹ, ವೈದ್ಯ ಸಂಗ್ರಹ, ಸ್ತ್ರೀರೋಗ ಚಿಕಿತ್ಸೆ, ಬಾಲಚಿಕಿತ್ಸೆ, ಬಾಲರೋಗ ಚಿಕಿತ್ಸೆ ವಗೈರೆ ಅಮೌಲ್ಯ ಮಾಹಿತಿ ಇರುವದು. ಬೇಗನೇ ತಕ್ಕೊಳ್ಳಿರಿ. ಪ್ರತಿಗಳು ಸ್ವಲ್ಪೇ ಇರುವವು. ನಿರಾಶೆ ಆಗಬೇಡಿರಿ.

ಸುಧಾರಿಸಿ ಬೆಳೆಸಿದ ಹೊಸ ೭ ನೇ ಆವೃತ್ತಿ ೫೫೦ ಪುಟಗಳು, ಬೆಲೆ ರೂ. ೫/೮/೦ ವ್ಹಿ. ಪಿ. ಯಿಂದ ರೂ. ೬/೦/೦

ಕಲ್ಪವೃಕ್ಷ

ಇದರಲ್ಲಿ : ಗ್ರಹಗಳ ಶುಭಾಶುಭ ಫಲ, ನವಗ್ರಹ ಶಾಂತಿ ಕ್ರಮ, ಸುಭಿಕ್ಷೆ- ದುರ್ಭಿಕ್ಷ ವಿಚಾರ, ವ್ಯಾಪಾರಿ ತೇಜಿ ಮಂದಿ ನಿರ್ಣಯ, ಗೃಹನಿರ್ಮಾಣ ವಿಚಾರ, ಔಷಧಿ ಸಂಗ್ರಹ, ಪಶುರೋಗ ಚಿಕಿತ್ಸೆ, ವಿಷವೈದ್ಯ, ಯಂತ್ರ ಮಂತ್ರ ತಂತ್ರಗಳು, ಅಶ್ವಾದಿ ಪಶು ಪರೀಕ್ಷೆ, ಜಲಮಾರ್ಗ ವಿಚಾರ (ದೃಗಾರ್ಗಲ ಶಾಸ್ತ್ರ) ಬುದ್ಧಿವರ್ಧಕ, ಮನೋರಂಜಕ ಲೆಕ್ಕಗಳು ವಗೈರೆ ಮಾಹಿತಿ ಇರುವದು. ಬೇಗನೇ ತರಿಸಿಕೊಳ್ಳಿರಿ. ಪ್ರತಿಗಳು ಸ್ವಲ್ಪೇ ಇರುವವು.

ಸುಧಾರಿಸಿ ಬೆಳೆಸಿದ ಹೊಸ ಮೂರನೇ ಆವೃತ್ತಿ ೪೦೦ ಪುಟಗಳು, ಬೆಲೆ ರೂ. ೪/೮/೦ ವ್ಹಿ. ಪಿ. ಯಿಂದ ರೂ. ೫/೦/೦.

ಕನ್ನಡ--ಹಿಂದೀ ಸ್ವಯಂಬೋಧೆ

ಇದರಲ್ಲಿ : ಕನ್ನಡ- ಉಚ್ಚಾರ ಸಹಿತ. ಅಂಕಲಿಪಿ ವಿಭಾಗ, ಕಥಾ ವಿಭಾಗ, ಅನುವಾದ ವಿಭಾಗ, ಪತ್ರಲೇಖನ ವಿಭಾಗ, ವಾಕ್‌ಪ್ರಚಾರ ವಿಭಾಗ, ಹೀಗೆ ಆರು ವಿಭಾಗಗಳು ಇರುವವು. ಪ್ರತಿಗಳು ಸ್ವಲ್ಪೇ ಇರುವವು- ಬೇಗನೇ ತರಿಸಿಕೊಳ್ಳಿರಿ.

ಸಂಪೂರ್ಣ ಹೊಸ ದೊಡ್ಡ ಗ್ರಂಥ ಬೆಲೆ ರೂ. ೧/೦/೦ ವ್ಹಿ. ಪಿ. ಯಿಂದ ರೂ. ೧/೬/೦

ಕಾಮಕಲಾನಿಧಿ

ಇದರಲ್ಲಿ ೮ ಬಣ್ಣದ ಫೋಟೋಗಳು ಇರುವವು. ಬೆಲೆ ೨/೦/೦

ರತಿವಿಲಾಸ ಅಥವಾ ರತಿಶಾಸ್ತ್ರ

ಇದರಲ್ಲಿ ೮ ಬಣ್ಣದ ಫೋಟೋಗಳು ಇರುವವು. ಬೆಲೆ ೨/೦/೦

ಸಿಟಿ ಬುಕ್ ಸ್ಟಾಲ ದುರ್ಗದ ಬೈಲ--ಹುಬ್ಬಳ್ಳಿ

★ ಸ್ನೇಹಲತೆ ಅಗಲಿ ಹೋದೊಡನೆ ಅವಳ ಪ್ರಿಯಪತಿಗಾದ ದುಃಖವೆಷ್ಟು! ಅವಳ ಪ್ರೀತಿಯ ಮೇಲೆಯೆ ಶೇಷಜೀವನವನ್ನು ತಳ್ಳಬೇಕೆಂದು ನಿರ್ಧಾರ ಮಾಡಿದ. ಆದರೆ ಇದೇನು ಬಳೆಗಳ ಸದ್ದು? ಗುಣು ಗುಣು ಹಾಡು?

ಸ್ನೇಹಲತಾ

(ಚಿಕ್ಕ ಕತೆ)

ಶ್ರೀ. ವರದರಾಜ ಹುಯಿಲಗೋಳರಿಂದ

೧೫—೯—೧೯...

ಈಗ ಮನಸ್ಸಿಗೆ ನೆಮ್ಮದಿಯೆನಿಸುತ್ತಿದೆ. ಇಂದಿನಿಂದ ಮತ್ತೆ ನನ್ನ ದಿನಚರಿ ಬರೆಯುವ ಕಾರ್ಯಕ್ರಮವನ್ನು ಆರಂಭಿಸಬೇಕು. ದಿನಚರಿಯೆ ನನ್ನ ಸಹಧರ್ಮಿಣಿ; ನನ್ನ ಸಹಸಂಚಾರಿ. ಅದೆ ನನಗೆ ಹೆಚ್ಚು ಸಂತಸ ಕೊಡುವುದು.

ಈ ಹದಿನೈದು ದಿನ ನನ್ನ ಮನಸ್ಸು ಬಿರುಗಾಳಿಯಲ್ಲಿ ಸಮುದ್ರವಾಗಿತ್ತು. ನನ್ನ ಆತ್ಮಸಂಯಮನದಿಂದ ಈಗ ಶಾಂತತೆ ಪಡೆದಿರುವೆ. ಈ ಶಾಂತ ಮನಸ್ಸು ಚಿರವಾಗಿರಲೆಂದು ಹಾರೈಸುವೆ.

ನನಗೆ ಅತ್ಯಂತ ಶಾಂತತೆಯನ್ನು ತಂದು ಕೊಟ್ಟವರು ಆನಂದರಾಯರು. ಅವರು ಬಹಳ ಸರಳ ಮನುಷ್ಯರು. ತಮ್ಮ ರೀತಿ ನೀತಿಗಳಲ್ಲಿ ಎಷ್ಟು ನಯವಾಗಿದ್ದಾರೆ! ನಿಜವಾಗಿಯೂ ಎಲ್ಲರಿಗೂ ಆನಂದ ಕೊಡುವ ಸ್ವಭಾವ ಆನಂದರಾಯರದು!

ರಾತ್ರಿ ಹನ್ನೆರಡು ಗಂಟೆ! ಹೂಂ. ಇದೇ ಹೊತ್ತು! ಮಳೆ ಧೋ ಧೋ ಹೊಡೆಯುತ್ತಿತ್ತು! ಸ್ನೇಹಲತಾ, ಇಂಥ ಹೊತ್ತಿನಲ್ಲಿ ನೀನು ನನ್ನ ಕೈಬಿಟ್ಟು ಹೋದೆಯಲ್ಲಾ! ನೀನು ಹಾಸಿಗೆಯಲ್ಲಿ ಹಾಗೆಯೆ ಮಲಗಿದ್ದರೂ ಬೇಕಾದಷ್ಟು ದಿನ ಇದ್ದರೂ ನಿನ್ನ ಸೇವೆ ಮಾಡಲು ನಾನು ಸಿದ್ಧನಿದ್ದೆ. ಈಗ ಹದಿನೈದು ದಿನ ನಾನೊಬ್ಬನೆ ಕಳೆಯಬೇಕಾದರೆ ನನಗೆ ಎಷ್ಟೊ ಯುಗಗಳನ್ನು ಕಳೆದಂತಾಗಿದೆ. ರಾತ್ರಿ ನಿದ್ದೆಯೇ ಇಲ್ಲ. ನನ್ನ ನೆನಪು ನಿನಗೆ ಆಗುತ್ತದೆಯೆ? ನಾನು ಜೀವಂತವಿದ್ದು ಎಷ್ಟು ಕಷ್ಟಕ್ಕೀಡಾಗಿದ್ದೇನೆ ಬಲ್ಲೆಯಾ? 'ಚಿತಾ ದಹತಿ ನಿರ್ಜೀವಂ, ಚಿಂತಾ ದಹತಿ ಜೀವಿತಂ' ಎಂಬುದು ಸತ್ಯ. ಏನು ಹೇಳಲಿ ಸ್ನೇಹಲತಾ!

ನೋಡು ಸ್ನೇಹಲತಾ! ನಿನ್ನ ಸ್ನೇಹದ ಲತೆ ನನ್ನ ದೇಹವನ್ನು ಸುತ್ತಿಕೊಂಡಿದೆ. ಅದರಿಂದಲೆ ನನ್ನ ಜೀವನ. ನಿನ್ನನ್ನು ಮರೆಯಲು ಸಾಧ್ಯವೇ ಇಲ್ಲ. ನೀನು ಆಗ ಅಂದದ್ದು ಈಗ ಮತ್ತೆ ನೆನಪಾಗುತ್ತದೆ. ನಿನಗೆ ಜಡ್ಡು ಬಹಳ ಆದಾಗ "ನಾನು ಸತ್ತ ಮೇಲೂ ಪ್ರೀತಿ ಕಡಿಮೆಯಾಗುವುದಿಲ್ಲವೆ?" ಎಂದು ಕೇಳಿದ್ದಿ. "ಛೀ. ಇದೆಂಥ ಮಾತು!" ಎಂದು ಹೇಳಿದ್ದೆ. "ಮತ್ತೊಬ್ಬಳನ್ನು ಲಗ್ನವಾಗುವುದಿಲ್ಲವೆ?" ಎಂದು ಕೇಳಿದ್ದೆ. "ಇಂಥ ಮಾತುಗಳನ್ನು ಆಡಬೇಡ. ಸುಮ್ಮನೆ ಮಲಗಿಕೊ" ಎಂದು ಸಮಾಧಾನಪಡಿಸಿದ್ದೆ. ದೈವ ಎಷ್ಟು ವಿಚಿತ್ರ! ಯಾವುದು ಆಗಬಾರದೆಂದು ಬಯಸಿದ್ದೆನೊ ಅದು ಆಗಿ ಹೋಯಿತು.

ಸ್ನೇಹಲತಾ, ನಿನ್ನ ಕೊರಳಾಣೆ ಮಾಡುತ್ತೇನೆ. ನಿನ್ನನ್ನೆ ವರಿಸಿದ್ದೇನೆ. ಕೊನೆಯ ವರೆಗೂ ಹಾಗೆಯೆ ಬಾಳುವೆ. 'ನವೋದಯ' ಪತ್ರಿಕೆಯಲ್ಲಿ ಬಂದಿದೆ. ನೀನು ಓದಿರುವೆಯಾ?

ನವೋದಯ ದಿನ ಪತ್ರಿಕೆ; ೧೪—೯—೧೯...., ಮೊದಲನೆಯ ಪುಟ; ನಾಲ್ಕನೆಯ ಕಾಲಮ್ಮಿನಲ್ಲಿ "ನನ್ನ ಪ್ರಿಯ ಪತ್ನಿ ಸ್ನೇಹಲತಾ ನನ್ನನ್ನು ಅಗಲಿದ್ದರಿಂದ ನನ್ನ ಸ್ನೇಹಲತೆಯ ಕುಡಿಯನ್ನೆ ಚಿವುಟಿದಂತಾಗಿದೆ. ಅವಳ ಪ್ರೀತಿ ನನ್ನ ಹೃದಯದಲ್ಲಿ ಚಿರಸ್ಥಾಯಿಯಾಗಿದೆ. ನನ್ನ ದುಃಖದಲ್ಲಿ ಸಮಭಾಗಿಗಳಾಗಿ ನನ್ನ ಮತ್ತು ಅವಳ ಗೆಳೆಯ ಗೆಳತಿಯರು ಕಾಗದ ಬರೆದಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ."

ಈ ಸುದ್ದಿಯನ್ನು ವಿಶೇಷ "ಬಾರ್ಡರ್" ಹಾಕಿ ಕೊಟ್ಟದ್ದಾರೆ. ಈ ದಿನಾಂಕದ ಪತ್ರಿಕೆಯನ್ನು ತೆಗೆದುಕೊಂಡು ಒಳಗೆ ಇಟ್ಟದ್ದೇನೆ.

೧೬—೯—೧೯....

"ಆಫೀಸಿನ ಕೆಲಸ ಬಹಳವಾಗಿದೆ. ಪತ್ರಿಕಾ ವ್ಯವಸಾಯದಲ್ಲಿ ಕೆಲಸಮಾಡುವವರ ಗತಿ ಹೀಗೆಯೆ!" ಹೀಗೆ ನನ್ನ ಮಿತ್ರರು ಹೇಳಿದರು. ನನಗೇನೂ ಹಾಗೆ ಅನಿಸುವುದಿಲ್ಲ. ಸ್ನೇಹಲತಾ ಇರುವಾಗ ಹಾಗೆ ಅನಿಸುತ್ತಿತ್ತು. ಈಗ ಆಫೀಸಿನಲ್ಲಿಯೆ ಇನ್ನೂ ಇರಬೇಕು ಎನಿಸುತ್ತದೆ. ರಾತ್ರಿ ಪಾಳಿ ಬಂದರಂತೂ ಇನ್ನೂ ಉತ್ತಮ. ಹೊತ್ತು ಹೇಗಾದರೂ ಹೋಗುವುದು.

ಹಗಲು ಪಾಳಿ ಮುಗಿಸಿಕೊಂಡು ಕೋಣೆಗೆ ಬಂದೆ. ಆನಂದರಾಯರ ಮನೆಯಲ್ಲಿ ಚಹಾಪಾನವಾಯಿತು. ಚಹಾ ಚೆನ್ನಾಗಿತ್ತು, ಚಹಾ ಮಾಡಿದವರಾರೆಂದು ಕೇಳಿದಾಗ ರಾಯರು ಮುಗುಳುನಗೆ ನಕ್ಕರು!

ನಾನು ಹೀಗೆಯೆ ಇಲ್ಲಿ ಎಷ್ಟು ದಿನ ಇರಬೇಕು? ಆನಂದರಾಯರು ಕೋಣೆಯ ಬಾಡಿಗೆಯನ್ನು ಹೇಳಲೊಲ್ಲರು. ಮೊದಲಿನ ಮನೆಗೆ...? ಛೇ, ಅಲ್ಲಿಗೆ ಹೋಗುವುದು ಸಾಧ್ಯವೇ ಇಲ್ಲ. ಅದನ್ನು ಬಿಟ್ಟ ಸುದ್ದಿಯನ್ನು ಮಾಲಕರಿಗೆ ತಿಳಿಸಿ ಬಿಡಬೇಕು. ಸ್ನೇಹಲತೆಯ ಜಡ್ಡಿನ ಸಲುವಾಗಿ ಊರ ಬಿಟ್ಟು ಅಷ್ಟು ದೂರ ತೋಟದಲ್ಲಿಯ ಬಂಗಲೆಯನ್ನು ಹಿಡಿದೆ. ಈಗ ಅಲ್ಲಿ ಹೇಗೆ ಇರುವುದು....? ಸದ್ಯ ಈ ಕೋಣೆ ಚೆನ್ನಾಗಿದೆ. ಎಲ್ಲ ಸೌಕರ್ಯಗಳೂ ಇವೆ. ಆನಂದರಾಯರು ಬಾಡಿಗೆ ತೆಗೆದುಕೊಂಡರೆ ಹಿತವಾಗುವುದು.

ಆನಂದರಾಯರು ಈ ದಿನ ಸಂಜೆ ನನ್ನ ವ್ಯವಸಾಯದ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ನನ್ನ ಲೇಖನಗಳು ಅವರ ಮನಸ್ಸಿಗೆ ಬಹಳ ಸೇರುತ್ತಿವೆಯಂತೆ. ಅಹುದು; ಅಂತೆಯೆ ಅವರು ಮೊದಲ ಸಲ ನನ್ನ ಭೆಟ್ಟಿಯಾದಾಗ, ಕಾವ್ಯವಿಮರ್ಶೆಯ ಮೇಲೆ ನಾನು ಬರೆದ ಲೇಖನದ ಬಗ್ಗೆ ಹೊಗಳಿ ಮಾತನಾಡಿದರು. ನೋಡಿದರೆ ಆನಂದರಾಯರು ವಕೀಲರು. ಅವರಿಗೆ ಕಾವ್ಯ ಮತ್ತು ಕಾವ್ಯ

ವಿಮರ್ಶೆಯಲ್ಲಿ ಇಷ್ಟು ಆಸಕ್ತಿ ಹೇಗೆ ಬಂದಿದೆಯೊ! ಇಂಥ ವಕೀಲರು ಇರುವುದು ತೀರ ಕಡಮೆ. ವಕೀಲರು ಸಾಹಿತ್ಯಕ್ಕಿಂತ ರಾಜಕಾರಣದಲ್ಲಿ ಭಾಗವಹಿಸುವುದು ಬಹಳ.

ಸ್ನೇಹಲತಾ! ಸ್ನೇಹಲತಾ! ಸ್ನೇಹಲತಾ!.... ನಿನ್ನ ಹೆಸರು ಅನೇಕ ಸಲ ಬರೆದರೂ ನನಗೆ ಸಮಾಧಾನವಿಲ್ಲ. ನಿನ್ನನ್ನು ನೆನೆಯದೆ ನಾನು ನಿದ್ದೆ ಹೋಗುವುದು ಅಶಕ್ಯ.

೧೭--೯--೧೯....

ಈ ದಿನ ಆನಂದರಾಯರ ಮನೆಯಲ್ಲಿ ಒಂದು ವಿಶೇಷ ಸಂಗತಿ ನಡೆಯಿತು. ನಾವು ಕೋಣೆಯಲ್ಲಿ ಕುಳಿತು ಮಾತನಾಡುವಾಗ ಹೊರಗೆ ಯಾರೋ ಗುಣುಗುಣು ಹಾಡುವುದು ಕೇಳಬಂದಿತು. ಆ ಧ್ವನಿಯ ಬಗ್ಗೆ ಕೇಳಿದೆ. ಆನಂದರಾಯರು ಕೂಡಲೆ ಅವಳನ್ನು ಕರೆಯಿಸಿ ಹಾಡು ಹೇಳಲು ಆಜ್ಞಾಪಿಸಿದರು. ಅವಳು ಮೊದಲು ನಾಚಿಕೊಂಡಳು. ಮಹಿಳೆಯರಿಗೆ ಇದು ಸಹಜವಾದುದು. ತರುವಾಯ ಪೇಟಿ ತೆಗೆದುಕೊಂಡು ಹಾಡಿದಳು. ಆಹಾ! ಕಂಠ ಎಷ್ಟು ಮಧುರವಾಗಿತ್ತು! ಅದು ಅವಳು ಹಾಡಿದುದು 'ನನ್ನ ಹಾಡು.' ಅವಳ ಹಾಡುಗಾರಿಕೆ ನನ್ನ ಮನಸ್ಸಿಗೆ ಅತ್ಯಂತ ಸುಖದಾಯಕವಿತ್ತು.

ಇನ್ನು ಬೇಸರಿಕೆ ಬಂದಾಗ ಆ ಹಾಡುಗಳನ್ನು ಕೇಳಬೇಕು.

೨೨--೯--೧೯....

ನಾಲ್ಕು ದಿನ ದಿನಚರಿ ಬರೆಯುವುದಾಗಲಿಲ್ಲ. ಪರಊರಲ್ಲಿರುವಾಗ ಹೇಗೆ ಬರೆಯುವುದಾಗುವುದು!

ನಾನು ಮಾಡಿದ ಭಾಷಣ ಎಲ್ಲರಿಗೂ ಮನಸ್ಸಿಗೆ ಬಂದಂತೆ ತೋರಿತು. "ಜೀವನದಲ್ಲಿ ಸ್ತ್ರೀಯರ ಸ್ಥಿತಿಗತಿ"ಗಳ ಬಗ್ಗೆ ಹೇಳುವಾಗ, ಮುಖ್ಯತಃ ಸ್ತ್ರೀಯರು ಬಹಳ ತಲ್ಲೀನರಾಗಿ ಕೇಳುತ್ತಿದ್ದರು. ವಿಷಯವೂ ಹಾಗೆಯೆ ಇತ್ತು. ಅಹುದು— ಪತಿ ಸತ್ತರೆ ಸ್ತ್ರೀಯರ ಗೋಳು ಹೇಳತೀರದಷ್ಟಿದೆ. ಸಮಾಜದಲ್ಲಿ ಅವರಿಗೆ ಎಂಥ ನಿಂದ್ಯಸ್ಥಾನ! ಅವರು ಸುಶೋಭಿತರಾಗಿ, ಮತ್ತೊಮ್ಮೆ ಮದುವೆಯಾಗಿ ಸುಖವಾಗಿ ಕಾಲ ಕಳೆಯಲಾರರು! ಅದೇ ಗಂಡಸರ ಸ್ಥಿತಿ ಹಾಗಿಲ್ಲ. ಅವರಿಗೆ ಮುಕ್ತದ್ವಾರ. ನನ್ನ ಈ ಮಾತು ಕೇಳಿ ಸ್ತ್ರೀಯರು ಸುಮ್ಮನೆ ಇದ್ದರು. ಒಮ್ಮೊಮ್ಮೆ ಅನಿಸುತ್ತದೆ—ಸ್ತ್ರೀಯರು ವಿಚಾರವನ್ನೇ ಮಾಡುವದಿಲ್ಲವೋ ಏನೋ!

ಚಿಕ್ಕ ಊರಿನಲ್ಲಿ ಸಹ ಅದೆಷ್ಟು ಜನ ಸ್ತ್ರೀಯರು ಅಲ್ಲಿ ನೆರೆದಿದ್ದರು. ಬಹುತರ ಗುಡಿಯಲ್ಲಿ ನನ್ನ ಭಾಷಣವಿದ್ದಿತೆಂದೇ ಹಾಗೆ ಇರಬಹುದು, ಇರಲಿ.

ಭಾಷಣ ಮುಗಿದ ಮೇಲೆ ಗುಂಡಕ್ಕ ಭೆಟ್ಟಿಯಾಗಿದ್ದಳು. ನನ್ನ ದುಃಖದ ಸುದ್ದಿ ಕೇಳಿ ಬಹಳ ಮರುಗಿದರು. ಕಣ್ಣಲ್ಲಿ ನೀರು ತಂದಳು. ಸ್ನೇಹಲತೆಯ ಸಂಗಡ ಮದುವೆಯಾಗುವಾಗ ಅದು ಪ್ರೀತಿಯ ವಿವಾಹವೆಂದು, ಇದೇ ಗುಂಡಕ್ಕ ಎಷ್ಟು ವಿರೋಧಿಸಿದ್ದಳು! ಈಗ ಅವಳೇ–ಅಂಥವಳೇ ಕಣ್ಣೀರು ಸುರಿಸಿದಳು. ಸಂಪ್ರದಾಯದ ಹೆಂಗಸರಲ್ಲಿ ಇದೊಂದು ದೊಡ್ಡ ಗುಣ ಅನ್ನಬೇಕು. ಹಾಗೆ ನನಗೆ ಅನಿಸುತ್ತದೆ.

ಆ ಊರಲ್ಲಿ ನನಗೆ ಪರಿಚಿತ ಜನ ಬಹಳ. ಗೋದಕ್ಕನ ಭೆಟ್ಟಿಯೂ ಆಗಿತ್ತು. ಅವಳು ಎಲ್ಲ ನನ್ನ ಕಥೆ ಕೇಳಿಕೊಂಡಳು. ಹೊರಡುವಾಗ ಒಂದು ಮಾತು ಹೇಳಿದಳು — "ಮದುವೆಯ ವಿಚಾರ ಏನಾದರೂ....?" ಆ ಮಾತನ್ನು ಒಮ್ಮೆಲೆ ನಾನು ತಿರಸ್ಕರಿಸಿ ಬಿಟ್ಟೆ. ಗೋದಕ್ಕ ಮತ್ತೆ ಹೇಳಿದಳು — "ಇಲ್ಲ, ಎಳೆ ಹುಡುಗ. ಸಾಯುವ ವರೆಗೆ ಹೀಗೆಯೆ ಇರಬೇಕೆ?" ಪಾಪ! ಗೋದಕ್ಕನಿಗೇನು ಗೊತ್ತು! ಹೆಂಗರುಳು! ಹಾಗೆ ಹೇಳಿದಳು. ಏಕಾಕಿಯಾಗಿ ಜೀವನ ಸಾಗಿಸಲು ಸಾಧ್ಯವಿಲ್ಲವೇ? ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ.

'ಬ್ರಹ್ಮಚರ್ಯವೇ ಜೀವನ' ಈ ಗ್ರಂಥವನ್ನು ಇಂದೇ ಓದಲು ಆರಂಭಿಸಿದ್ದೇನೆ.

೨೪--೯--೧೯....

ಇಂದೆ, ಮೇಲಿಗೆ ಆನಂದರಾಯರು ಮುಂಬೈಗೆ ಹೋದರು. ನನ್ನ ಅರ್ಜಿಗಳನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ಸರಕಾರಿ ಪ್ರಚಾರ ಪತ್ರಿಕೆಯ ಸಂಪಾದಕ ಮಂಡಲದಲ್ಲಿ ಸೇರ್ಪಡೆಯಾಗುವಂತೆ ಯತ್ನಿಸುವರಂತೆ. ಸರಕಾರಿ ನೌಕರಿ; ಮೇಲಾಗಿ ಹೆಚ್ಚಿನ ಪಗಾರ; ನನ್ನ ಸೈವ ಹೇಗಿದೆಯೊ ನೋಡಬೇಕು. ಇದೆಲ್ಲ ಶೇಖ ಮುಹಮ್ಮದನ ಲೆಖ್ಖ ಆಗಬಾರದು ಅಷ್ಟೆ.

ಏನೆ ಆದರೂ ಆನಂದರಾಯರು ನನ್ನ ಸಲುವಾಗಿ ಇಷ್ಟು ಚಿಂತಿಸುವುದನ್ನು ನೋಡಿ ಅತೀವ ಹರ್ಷವಾಗುತ್ತದೆ. ಇಷ್ಟೆಲ್ಲ ಯಾರು ಮಾಡುವರು? ಸ್ನೇಹಲತೆಯ ಸಂಗಡ ಪ್ರೀತಿವಿವಾಹವಾಯಿತೆಂದು ನನ್ನ ಬಂಧುಬಳಗದವರೂ ನನ್ನನ್ನು ಮಾತನಾಡಿಸುವುದನ್ನೆ ಬಿಟ್ಟುಬಿಟ್ಟಿದ್ದಾರೆ. ಅವಳು ಮೂರು ವರ್ಷವೆ ಇದ್ದಳು–

For Quality Papers
&
Boards always contact

THE
BOMBAY PAPER
MARKETING Co.

Podar Chambers, Parsi Bazar Street,
Fort, ... BOMBAY. 1.

Telegram : PAPERCO Telephone : 21268

ನೂರು ವರ್ಷ ಇರಲಿಲ್ಲ. ನಮ್ಮ ಜನರೆ ಏನಾದರೂ ಮಾಟವನ್ನೆ ಮಾಡಿಸಿದರೊ ಏನೊ! ಕ್ಷಯದಿಂದ ಸಾಯಬೇಕಾದರೆ! ಇರಲಿ, ಆದುದು ಆಗಿಹೋಯಿತು. ಈಗಾದರೂ ಒಂದು ಒಳ್ಳೆಯ ಮಾತು! ಇಂಥ ಸಂದರ್ಭದಲ್ಲಿ ಆನಂದರಾಯರ ಸಹವಾಸ ಚೈತನ್ಯ ಕೊಡುತ್ತಿದೆ. ನನ್ನ ಬಗ್ಗೆ ಅವರು ಎಷ್ಟು ಕಾಳಜಿ ತೆಗೆದುಕೊಳ್ಳುತ್ತಾರೆ!

ಜೀವನದ ಕಹಿ ಗುಳಿಗೆಯನ್ನು ಒಬ್ಬನೇ ನುಂಗಬೇಕಿಲ್ಲ. ಅಲ್ಲ—ಜೀವನದ ಕಹಿಯೂ ಕಡಿಮೆಯಾಗುತ್ತಿದೆ — "ಚೇತರಿಸಿಕೊಂಡೇಳೆ ಚೇತನದ ಚೆಲುವೆ."

೨೬-.-೯-.-೧೯-...

ಮತ್ತೆ ಹಲವು ದಿನ ಬರೆಯುವದಾಗಲಿಲ್ಲ. ನನ್ನ ದಿನಚರಿ ಬರೆಯುವ ಕೆಲಸ ಹೀಗೇಕೆ ಆಗುತ್ತಿದೆ?

ಈ ತಲೆಶೂಲೆ ಬಹಳ ತ್ರಾಸ ಕೊಡುತ್ತಿದೆ. ಆಫೀಸಿನಲ್ಲಿ ಕುಳಿತು ಕೆಲಸ ಮಾಡುವುದೇ ಆಗವೊಲ್ಲದು. ರಾತ್ರಿ ಅಭ್ಯಾಸವೂ ಇಲ್ಲ. ನಿದ್ದೆಯೂ ಚೆನ್ನಾಗಿ ಬರವೊಲ್ಲದು. ಮೈಯೆಲ್ಲ ನೋವು! ಈ ಸಮಯದಲ್ಲಿ ಯಾರಾದರೂ "ಸಂಗಾತಿ" ಇದ್ದರೆ.... !

ಈ ದಿನ ಸಂಜೆ ತಲೆಶೂಲೆ ಮತ್ತೆ ಹೆಚ್ಚಾಯಿತು. ಮುಸುಗು ಹಾಕಿಕೊಂಡು ಮಲಗಿದೆ. ಸ್ವಲ್ಪ ನಿದ್ದೆ ಬಂದಂತಾಯಿತು. ಏನೊ ಬಳೆಗಳ ಸಪ್ಪಳವಾದಂತಾಯಿತು. ನಾನು ಮುಸುಕು ತೆರೆಯಲೆ ಇಲ್ಲ....ಮತ್ತೆ ಬಾಗಿಲ ಸಪ್ಪಳವಾಯಿತು! "ಯಾರು!" ಎಂದು ಕೇಳುವಂತಾಗದೆ ಮುಸುಕು ತೆರೆದೆ. ಬಾಗಿಲದಲ್ಲಿ ಆನಂದರಾಯರ ಮಗನಿದ್ದ. "ಚಹಾ ತಗೊಂಡ್ರೇನ್ರಿ?" ಎಂದು ಕೇಳಿದ.

ಈ ಬಳೆಗಳ ಸಪ್ಪಳ ನಿಜವೊ ಸುಳ್ಳೊ!

೨೭-.-೯-.-೧೯....

ಈ ದಿನ ವಿಶ್ರಾಂತಿಗಾಗಿ ರಜೆ ಪಡೆದುಕೊಂಡೆ. ಡಾಕ್ಟರರಿಂದ ಔಷಧವನ್ನು ತಂದಿರುವೆ. ಹಾಸಿಗೆಯ ಮೇಲೆ ಹೊರಳಾಡಿ ಬೇಸರಿಕೆ ಬಂದಿತು. ಮಧ್ಯಾಹ್ನ ಬಾಗಿಲಲ್ಲಿ ನಿಂತುಕೊಂಡಿದ್ದೆ.

ಓಣಿಯಲ್ಲಿ ಹಲವು ಹುಡುಗರು ಪಾರಿವಾಳಗಳನ್ನು ಹಾರಿಸುತ್ತಿದ್ದರು. ಇಂದು ಆಕಾಶವು ಸ್ವಚ್ಛವಿತ್ತು. ಆ ನೀಲಾಕಾಶದಲ್ಲಿ, ಆ ಸೂರ್ಯನ ತೇಜಃಪುಂಜದ ಬೆಳಕಿನಲ್ಲಿ ಪಾರಿವಾಳಗಳು ಹಾರಿ ಹೋಗುತ್ತಿದ್ದವು. ಚಿಕ್ಕಮಗುವಿನ ಹಾಗೆ ನಾನು ಅವುಗಳನ್ನೆ ನೋಡುತ್ತ ನಿಂತೆ. ನಾವೆಲ್ಲ ಪಾರಿವಾಳಗಳು. ಪ್ರೀತಿಯಿಂದ ಆಟವಾಡಿ ಪಾರಿವಾಳಗಳು ತಮ್ಮ ಗೂಡಿಗೇ ತಿರುಗಿ ಬರುವಂತೆ ನಾವೂ ದೇವರ ಕಡೆಗೆ ಬರುತ್ತೇವೆ. ಇಂಥ ತತ್ವಜ್ಞಾನದ ವಿಚಾರಗಳೂ ನನ್ನ ತಲೆಯಲ್ಲಿ ಸುಳಿದವು. ಆ ಪಾರಿವಾಳ ಹಾರಿಸುವ ಹುಡುಗ ಒದರಿದ. "ನೋಡಲೇ ನೋಡು, ಅವು ಗಂಡು ಹೆಣ್ಣು, ಅದಕ್ಕs ಎಷ್ಟು ಕೂಡಿಕೊಂಡು ಮ್ಯಾsಲ ಹಾರಿದವು." ಪಕ್ಷಿಗಳಲ್ಲಿಯೂ ಪ್ರೇಮ ಇಷ್ಟು ಹೆಚ್ಚಾಗಿದೆಯೆ?

ನಾನು ಈ ರೀತಿಯಾಗಿ ಪಕ್ಷಿಗಳನ್ನು ನೋಡುವಾಗ, ನನ್ನ ಹಿಂದೆ ಮತ್ತೊಂದು ಪಕ್ಷಿ ಇರುವ ಕಲ್ಪನೆ ನನಗೆ ಬರಲಿಲ್ಲ. ಕಿಟಕಿಯಲ್ಲಿ ಅವಳ ಮುಖ ಕಂಡಿತು. ಇಂದೇ ಅವಳು ಎರಕೊಂಡಿದ್ದಳೊ ಏನೊ! ಮುಖದಲ್ಲಿ ವಿಶೇಷ ಕಳೆಯಿದ್ದಿತು. ಅವಳ ನೋಟ ನನ್ನ ಕಡೆಗೇ ಇದ್ದಿತು. ನಾನು ಮುಖ ಹೊರಳಿಸಿ ನೋಡಿದಾಗ ಒಂದು ಚಣದಲ್ಲಿಯೆ ನನಗೆ ಇವೆಲ್ಲ ಹೊಳೆದವು.

೨೮-.-೯-.-೧೯....

ಆನಂದರಾಯರ ಸಂಗಡ ವಿಶೇಷ ಮಾತುಕತೆಗಳಾದವು. ನನ್ನ ಕೆಲಸವಾಗುವುದು ಸಂಪೂರ್ಣ ಆಶಾದಾಯಕವಿದೆಯಾಗಿ ಕಂಡು ಬರುತ್ತಿದೆ. ನನ್ನ ದೈವ ತೆರೆಯಬಹುದೆ?

ನನ್ನ ಪ್ರಕೃತಿಯ ಬಗ್ಗೆ ಬಹಳ ಕಾಳಜಿ ತೆಗೆದುಕೊಂಡು ಕೇಳಿದರು. ನನ್ನ ತಲೆಶೂಲೆ ಹಾಗೆ ಹೋಗುವುದಿಲ್ಲ" ಎಂದರು. ಅವರ ಮಾತಿನ ಮಥಿತಾರ್ಥ ನನಗೆ ಹೊಳೆಯಿತು. ಮುಖ ಕೆಳಗೆ ಮಾಡಿದೆ.

ನಾನು ಅವರ ಕೋಣೆಯಿಂದೆದ್ದು ಹೊರಗೆ ಬರುತ್ತಿರುವಾಗ "ಇವೊತ್ತಾಧರೂ ಕೇಳಿದಿರಾ?" ಎಂದು ಹೆಂಗಸರು ಅವರನ್ನು ಒಳಗೆ ಕರೆದು ಕೇಳಿದರು. ಅದು ನನ್ನ ಬಗ್ಗೆಯೇ ಇರಬೇಕೆಂದು ನನಗೆ ನಿಶ್ಚಿತವೆನಿಸಿತು.

ಈ ಬಲೆಯಲ್ಲಿ ನಾನು ಬೀಳಲಿಕ್ಕಿಲ್ಲವೆಂದು ಅನಿಸುತ್ತದೆ. ಈಗಂತೂ ಈ ಕೋಣೆ ಬಿಡಲು ಸಾಧ್ಯವಿಲ್ಲ. ಬೇಗ ಮುಂಬೈಗೆ ಹೋಗುವುದು ಆಗಬಹುದು. ಆ ಮೇಲೆ ಈ ಪ್ರಶ್ನೆಯೆ ಉದ್ಭವಿಸುವದಿಲ್ಲವಲ್ಲ!

೨೯-.-೯-.--೧೯...-

ಇಂದು ನಮ್ಮ ಆಫೀಸದಲ್ಲಿ ವಿಶೇಷ ಚರ್ಚೆ ನನ್ನ ಬಗ್ಗ ನಡೆಯಿತು. ಇದಕ್ಕೆ ಕಾರಣ ಜಾಹೀರಾತು. ಒಬ್ಬ ಮನುಷ್ಯ ಒಂದು ಜಾಹೀರಾತನ್ನು ಪ್ರಕಟಣೆಗಾಗಿ ಕಳುಹಿದ್ದ. ಅವನಿಗೆ ಎರಡು ಹುಡುಗರು; ಮೊದಲನೆಯ ಹೆಂಡತಿ ಸತ್ತಿದ್ದಾಳೆ; ಅವನಿಗೆ ಲಗ್ನ

ಬೆಂಗಳೂರು ಟೈಪ್ ಫೌಂಡ್ರಿ

ಅರಳೇಪೇಟೆ, ಬೆಂಗಳೂರು ಸಿಟಿ

ನಮ್ಮಲ್ಲಿ ಉತ್ತಮವಾದ ಕಾಪರ್ ಅಲಾಯ್ಡ ಸೀಸದಿಂದ ತಯಾರಿಸಿದ ಕನ್ನಡ, ಇಂಗ್ಲಿಷ್, ಟೈಪುಗಳೂ ಅನೇಕ ವಿಧವಾದ ಸುಂದರ ಬಾರ್ಡರುಗಳೂ ದೊರೆಯುತ್ತವೆ. ಎಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

For all varieties of English & Kannada Type

The BANGALORE TYPE FOUNDRY

Cottonpet — BANGALORE City.

ವಾಗುವ ಆಶೆಯಿದೆಯಂತೆ. ಅದಕ್ಕಾಗಿ ಯೋಗ್ಯ ವಧು ಬೇಕೆಂದು ಪ್ರಕಟಣೆಕೊಟ್ಟಿದ್ದನು. ಇದರ ಎಳೆಯನ್ನು ಹಿಡಿದು ನನ್ನ ಮಿತ್ರರು ನನಗೆ ಚೇಷ್ಟೆ ಮಾಡಿದರು. ' ನನಗಂತೂ ಮಕ್ಕಳಿಲ್ಲ. ಏಕೆ ಲಗ್ನ ವಾಗಬಾರದು ? " ಎಂದು ಕೇಳಿದರು. ಬೇರೆ ಬೇರೆ ಹೆಣ್ಣುಗಳ ವರ್ಣನೆಮಾಡಿ, ಅವುಗಳನ್ನು ತಂದುಕೊಡುವದಾಗಿ ಚೇಷ್ಟೆಯಿಂದ ಹೇಳಿದರು........ ಇವರ ಮುಂದೆ ನಾನೇನು ಮಾಡಬೇಕು !

೩೦-೯-೧೯..

ಆನಂದರಾಯರೂ ಅವರ ಮಗಳೂ ಕೂಡಿ ತಿರುಗಾಡಲು ಹೊರಟಿದ್ದರು. ನನ್ನನ್ನು ಕರೆದರು. ಒಪ್ಪಿಕೊಳ್ಳಬೇಕಾಯಿತು.

ಒಮ್ಮೆ ಮದುವೆಯಾದ ಮೇಲೆ ಹೆಂಗಸರಎದುರು ನಿರ್ಭಿಡೆಯಿಂದ ಮಾತನಾಡಲು ಅನುಕೂಲ. ಏನೂ ಸಂಕೋಚವೆನಿಸುವುದಿಲ್ಲ. ನನಗೂ ಒಮ್ಮೆ ಮದುವೆಯಾಗಿದೆ. ಒಬ್ಬ ಹಿರಿಯನಂತೆಯೇ ಎಲ್ಲವನ್ನು ಮಾತನಾಡಿದೆ. ಹುಡುಗೆಯೂ ದಿಟ್ಟ ಸ್ವಭಾವದವಳು. ನಾವೆಲ್ಲರೂ ಹೊರಟಾಗ, ನಮ್ಮ ಮಾತುಗಳಲ್ಲಿ ತಾನೂ ದನಿಗೂಡಿಸಿದಳು. ಅವಳ ಧ್ವನಿ ಮಧುರವಾಗಿದೆ. ಈ ದಿನ ರಾತ್ರಿ ಊಟವಾದ ಮೇಲೆ ಹಾಡುತ್ತಿದ್ದಳು. ಗಂಧರ್ವಲೋಕದಿಂದ ಗಾನದ ತೆರೆಗಳು ಬಂದಂತೆ ಭಾಸವಾಯಿತು !

ನನ್ನ ಮನಸ್ಸು ಹೀಗೇಕೆ? ಅವಳದೇ ಚಿತ್ರ ನನ್ನ ಕಣ್ಣ ಮುಂದೆ ಏಕೆ? ಛೀ.... ಮುಸುಕು ಹಾಕಿಕೊಂಡು ಮಲಗಿಬಿಡೋಣ.

೧-೧೦-೧೯---

ಇಂದು ಒಂದು ಅತ್ಯಾನಂದದ ಸಂಗತಿ! ಆನಂದರಾಯರ ಪ್ರಯತ್ನದಿಂದ ಫಲಿಸಿದೆ. ಇನ್ನು ಮುಂಬೈಗೆ ಹೋಗಬೇಕು. ಆದರೆ ಅಲ್ಲಿ ಇರುವ ವ್ಯವಸ್ಥೆ ಹೇಗೆ? ಇದರ ಬಗ್ಗೆಯೇ ಆನಂದರಾಯರು ತಮ್ಮ ವಿಚಾರ ತಿಳಿಸುವುದಾಗಿ ಹೇಳಿದ್ದಾರೆ.

ಇನ್ನು ನನ್ನ ಲಗ್ನದ ವಿಚಾರ ಏನೂ ಇಲ್ಲವೆಂದು ಭಾವಿಸಿದ್ದೆ. ಆದರೆ ಆನಂದರಾಯರು ಸ್ಪಷ್ಟವಾಗಿ ತಮ್ಮ ಮನಸ್ಸಿನಲ್ಲಿರುವುದನ್ನು ಹೇಳಿಬಿಟ್ಟಿದ್ದಾರೆ. ಏನು ಮಾಡಬೇಕು ತಿಳಿಯದು. ಈಗಂತೂ ಅವರ ಮುಂದೆ ನಾನು ಏನೂ ಉತ್ತರ ಕೊಟ್ಟಿಲ್ಲ. ಸ್ನೇಹಲತೆಗೆ ವಚನ ಕೊಟ್ಟಿದ್ದೇನೆ. ಅದನ್ನು ಮುರಿಯುವದೆಂತು? ಇತ್ತಕಡೆ ಆನಂದರಾಯರ ಮಾತನ್ನು ಮೀರುವ ಹಾಗಿಲ್ಲ. ಅವರು ಕಷ್ಟಕಾಲದಲ್ಲಿ ನನಗೆ ಧನಸಹಾಯ ಮಾಡಿದ್ದಾರೆ. ಬೇರೆ ರೀತಿಯಿಂದಲೂ ನೆರವಾಗಿದ್ದಾರೆ. ಏನು ಮಾಡಬೇಕು ? ? ? ? ? ? ? ?

೨--೧೦--೧೯---

ಮನಸ್ಸಿನ ತೊಡಕು ಬಿಡವೊಲ್ಲದು. ಮುಂಬೈಯ ಕೆಲಸ ಬಿಟ್ಟುಬಿಡಲೇ ? ಈ ಕೋಣೆಯನ್ನು ಬಿಟ್ಟುಬಿಡಲೆ ? ಇಲ್ಲಿಂದ ದೂರ ಹೋಗಿಬಿಡಲೆ? ಯಾರಾದರೂ ಹುಚ್ಚನೆಂದಾರು !

ಮನಸ್ಸಿಗೆ ವಿರಾಮವಾಗಲು "Twelfth Night" ನಾಟಕ ಓದಲು ಆರಂಭಿಸಿದೆ. "If music be the food of love, give me the excess of it" ಎಂಬುವೇ ಮೊದಲ ವಾಕ್ಯಗಳು. ಈ ಮಾತುಗಳು, ಅವಳ ಚಿತ್ರವನ್ನು ನನ್ನ ಕಣ್ಣೆದುರು ನಿಲ್ಲಿಸಿದುವು. ಅವಳು ನನ್ನ ಕವನಗಳನ್ನು ಹಾಡಬೇಕು. ನಾನು ಅವುಗಳನ್ನು ಕೇಳಬೇಕು. ಹೀಗೆ ಹೀಗೆಯೆ ಇರಬೇಕು. ಅಂದರೆ ಎಂಥ ಸುಖಮಯ ಜೀವನ !

ಹಾಂ! ಏನು ಬರೆಯುತ್ತಿದ್ದೇನೆ ನಾನು ? ಇದನ್ನು ಯಾರಾದರೂ ನೋಡಿದರೆ ? ಛೇ, ದಿನಚರಿಯಲ್ಲಿ ಎಲ್ಲವನ್ನು ಬರೆದುಬಿಡುವೆ.

೩-೧೦-೧೯---

ಆಫೀಸಿನಲ್ಲಿ ಈಗ ನನಗೆ ವಾರಪತ್ರಿಕೆಯ ಕೆಲಸ ಬಿದ್ದಿದೆ. ಅದರಲ್ಲಿಯೂ ' ಸಿನೆಮಾ ಪುಟ ' ನಾನು ಸಂಪಾದಿಸಿ ಕೊಡಬೇಕು. ಏನು, ಅದರಲ್ಲಿ ಪ್ರೇಮದ ಚಿತ್ರಗಳು ಎಷ್ಟು ಇವೆ! ಪ್ರೇಮಕ್ಕೆ ಜಗತ್ತಿನಲ್ಲಿ ಬಹಳ ಮಹತ್ವವಿದೆ. ಆ ಎಲ್ಲ ಚಿತ್ರಗಳನ್ನು ನೋಡುತ್ತ ಚಿರಕಾಲ ಕಳೆದೆ.

ನಿರಾಶ್ರಿತರು ಈ ಊರಿಗೆ ಬಂದಿದ್ದಾರೆ. ಅವರನ್ನು ಸಂದರ್ಶಿಸಿ, ಅವರ ಜೀವನದ ಬಗ್ಗೆ ಒಂದು ಲೇಖನ ಬರೆಯಬೇಕಿತ್ತು. ಅವರ ದುಃಖದ ಕಥೆಗಳನ್ನು ಕೇಳಿ ಹೃದಯ ಒಡೆದು ಹೋಗುತ್ತಿದೆ. ಎಲ್ಲವನ್ನು ಕಳೆದುಕೊಂಡು, ಈಗ ಎಲ್ಲಿಯೊ ಅಪರಿಚಿತ ಜಗತ್ತಿನಲ್ಲಿ ವಾಸಮಾಡಬೇಕಾಗಿದೆ. ಒಂದು ಮನೆತನದವರು ಹೇಳಿದ ಮಾತುಗಳು ನನ್ನ ಮನಸ್ಸನ್ನು ಬಹಳ ಆಕರ್ಷಿಸಿದವು. ಏನೇ ತ್ರಾಸವಾದರೂ ಗಂಡಹೆಂಡಿರು ಮತ್ತು ಮಕ್ಕಳು ಕೂಡಿಕೊಂಡು ಸುಖವಾಗಿ ಬಾಳಲು ಬರುವದಂತೆ !

ಈ ದಿನ ಥಾಮಸ್ ಹಾರ್ಡಿ ಕವಿಯು ಬರೆದ— "Yonder a maid and her wight come whispering by; War annals will cloud into night ere the story die" ವಾಕ್ಯಗಳು ಬಹಳ ನೆನಪಾಗುತ್ತವೆ. ಮಾನವ ಪ್ರಣಯ ನಿರಂತರ; ನಿತ್ಯ ನೂತನ.

೪--೧೦--೧೯---

ಮುಂಬೈಯಲ್ಲಿ ನನಗೆ ವಸತಿಯ ಏರ್ಪಾಡೂ ಆಯಿತು. ಇನ್ನು ನಾನು ಇಲ್ಲಿಯ ಕೆಲಸ ಬಿಡುವುದರ ಬಗ್ಗೆ ಆಫೀಸಿನಲ್ಲಿ ಹೇಳಬೇಕು. ಬೇಗ ಮುಂಬೈಯಲ್ಲಿ ಹೊಸ ಕೆಲಸ ಸ್ವೀಕರಿಸಲು ಹೋಗಬೇಕು.

ಮುಂಬೈಗೆ ಹೋಗುವ ಮೊದಲು ಲಗ್ನವಾಗಿಯೆ ಹೋಗಬೇಕೆಂದು ಆನಂದರಾಯರು ಹೇಳುತ್ತಿದ್ದಾರೆ. ಲಗ್ನದ ಬಗ್ಗೆ ತಮ್ಮ ಜುಲುಮೆಯಿಲ್ಲವೆಂದೂ, ಮನಸ್ಸಿದ್ದರೆ ಮಾಡಿಕೊಳ್ಳಬೇಕೆಂಮೂ ಅನ್ನುತ್ತಾರೆ. ಅವರು ಹೀಗೆ ಅಂದರೂ ನಾನು ಸುಮ್ಮನಿರಲು

ಕಾಂತಾ ಮತ್ತು ಕಂಪನಿ,

ಫತ್ತರಗಲ್ಲಿ — ಬನಾರಸ

((ಬನಾರಸ್-ಶ್ರೀಕ್ಷೇತ್ರ ಕಾಶಿ)

ಹೆಂಗಸರು ಉಡುವ ರೇಶ್ಮೆ ಜರಿ ಶೀರೆ, ಬುಟ್ಟಾ ಮತ್ತು ಸಾದಾ ಎಲ್ಲಾ ಬಣ್ಣಗಳ ಖಣಗಳು ಮತ್ತು ಗಂಡಸರು ಉಡುವ ಮತ್ತು ಹೊದಿಯುವ ಸಾದಾ ಪೀತಾಂಬರಗಳು, ಜರಿಯುಳ್ಳದ್ದು ಸಹಾ ಸಿಗುತ್ತವೆ. ಈಗಿನ ಫ್ಯಾಶನ್ನಿಗೆ ತಕ್ಕಂತೆ ಶೀರೆಗಳು ಎಲ್ಲಾ ರಂಗಿನಲ್ಲಿಯೂ ಮೊಳ ೧೨-೧೦ ರ ಅಗದಿ ಸೋಯಿಯಿಂದ ಪೂರೈಸುತ್ತೇವೆ. ಇದಲ್ಲದೆ ಉತ್ತಮ ಕಸ್ತೂರಿ, ಕೇಸರಿ, ಶಿರಾಜಿತು, ಪಚ್ಚ ಕರ್ಪೂರ, ಶಂಖ,ಜೈಗಂಟೆ, ರುದ್ರಾಕ್ಷಿ, ಶಿವಪಂಚಾಯತನ, ಶ್ರೀಚಕ್ರ ವಗೈರೆ ಕಾಶಿಯಲ್ಲಿ ತಯಾರಾಗುವ ಯಾವತ್ತೂ ಮಾಲುಗಳು ನಮ್ಮಲ್ಲಿ ಯೋಗ್ಯದರದಲ್ಲಿ ಸಿಗುತ್ತವೆ.

ಹೇಗಾಗುತ್ತದೆ? ಏನಾದರೂ ಬೇಗ ನಿರ್ಧರಿಸಬೇಕು. ಈ ದಿನ ಅವಳೇ—ಅವಳೆ ಅಂದರೆ ಸರಳಾ—(ಹೆಸರು ಬರೆಯಲು ಏಕೆ ಸಂಶಯ !) ಬಂದು ಚಹ ಕೊಟ್ಟು ಹೋದಳು.

ಮತ್ತೆ ಅವಳ ಮಾತು ! ಅವಳ ನಡಿಗೆ ! ಅವಳ ಮುಖ ! ಮನಸ್ಸು ಎಷ್ಟು ಬದಲಾಗುತ್ತಿದೆಯಲ್ಲಾ !!!

ಸ್ನೇಹಲತಾ, ನೀನೇ ನನಗೆ ಮಾರ್ಗವನ್ನು ತೋರಿಸು. ನಿನಗೆ ಶರಣು ಬಂದಿರುವೆ.

ಒಬ್ಬನೇ ಬಹಳ ದೂರ ತಿರುಗಾಡಿ ಬಂದೆ! ಆದರೂ ವಿಚಾರ ಬಗೆಹರಿಯಲಿಲ್ಲ.

೫--೧೦--೧೯----

ದಾರಿಯಲ್ಲಿ ಊರಲ್ಲಿ ನನ್ನ ಮಿತ್ರ ದೇ.... ಅವರು ಭೆಟ್ಟಿಯಾದರು. ಅವನ ದೈವ ಎಂತಹದೊ! ಲಗ್ನವಾಗಿ ಒಂದು ವರ್ಷದಲ್ಲಿಯೆ ಹೆಂಡತಿಯನ್ನು ಕಳಕೊಂಡಿದ್ದಾನೆ! ಹೀಗೆ ಎರಡು ಸಲ ವಾಗಿದೆ! ತನ್ನ ದುಃಖವನ್ನು ಕಡಿಮೆ ಮಾಡಿಕೊಳ್ಳಲು ಈಗ ಪ್ರತಿನಿತ್ಯ ಸಂಜೆ ಒಂದೆಡೆಗೆ ಹೋಗಿ ಕುಳಿತುಕೊಳ್ಳುತ್ತಾನಂತೆ. ಅಲ್ಲಿ ಸಂಗೀತದ ಏರ್ಪಾಡು ಇದೆ. ಒಮ್ಮೊಮ್ಮೆ ರಾತ್ರಿ ೧೧ರ ವರೆಗೂ ಅಲ್ಲಿ ಇರುತ್ತಾನಂತೆ! ನನಗೆ ಸ್ವಲ್ಪ ಸಂಶಯ ಬಂದಿತು. ಆಗ ಅವನೆ ನಕ್ಕು ಹೇಳಿದ. "ಹಾಗೇನೂ ತಿಳಿದುಕೊಳ್ಳಬೇಡ. ಅದು ನನ್ನ ಮಿತ್ರನ ಮನೆ. ಹಾಡುವವನೂ ಅವನೆ. ಆದರೆ ಸಿತಾರಾ ಬಾರಿಸುವವಳು ಅವನ ಮಗಳು. ಎಷ್ಟು ರಮ್ಯ ಬಾರಿಸುವಳು! ನೋಡು, ಲಗ್ನವಾದರೆ ಇಂಥ ಹುಡುಗೆಯರನ್ನೆ ಲಗ್ನವಾಗಬೇಕು. ಜೀವನದಲ್ಲಿ ಸುಖ ಇದೆ" ಎಂದ.

ಸುಖ ಎಲ್ಲಿ ಇದೆ? ದಾರಿಗಳು ಅನೇಕವಿವೆ. ಆದರೆ ಕೈಗಂಬ ಕಾಣಿಸವೊಲ್ಲದು! ಸ್ನೇಹಲತಾ, ಉತ್ತರ ಹೇಳು.

೭--೧೦--೧೯----

ನನ್ನ ಮನಸ್ಸಿನ ಗೊಂದಲದಲ್ಲಿ ಏನೂ ಬರೆಯುವದಾಗಲಿಲ್ಲ. ಸ್ನೇಹಲತಾ, ನಿನ್ನ ರೂಪ 'ಸರಳೆ'ಯಲ್ಲಿದೆಯೆಂದು ನನಗೆ ಅನಿಸುತ್ತಿದೆ. ಇದಕ್ಕೆ ನಿನ್ನ ಒಪ್ಪಿಗೆಯಿದೆಯೇ ????

೮--೧೦--೧೯----

ಒಪ್ಪಿಕೊಂಡಿದ್ದೇನೆ (೧) ಮುಂಬೈಗೆ ಹೋಗುವುದು.
(೨) ಆನಂದರಾಯರ ಮಾತು ಕೇಳುವುದು.

ಆನಂದರಾಯರ ಮನಸ್ಸಿನ ವಿರುದ್ಧ ಹೋಗುವುದು ಸಾಧ್ಯವೇ ಇಲ್ಲ. ಅಲ್ಲ, ಪ್ರೀತಿಯೆ ಹೀಗೆ ಇದೆಯೊ ಯಾರಿಗೂ ಹೇಳಲು ಬರುವುದಿಲ್ಲ.

೧೦--೧೦--೧೯----

ಆನಂದರಾಯರಿಗೆ ವಿಜೃಂಭಣೆಯಿಂದ ಮದುವೆ ಮಾಡಬಾರದೆಂದು ಹೇಳಿರುವೆ. ಎಲ್ಲಿಯಾದರೂ ಗುಡಿಯಲ್ಲಿ ಮಂಗಲಕಾರ್ಯ ತೀರಿಸಿಕೊಂಡು ಹೋದರಾಯಿತು. ಅವರೂ ಒಪ್ಪುವರೆಂದು ನಂಬಿರುವೆ.

೧೫--೧೦—೧೯---

ಎಲ್ಲ ಕಡೆಗೂ ಬೇರೆ ಬೇರೆ ಉತ್ಸಾಹ ಕಂಡುಬರುತ್ತಿದೆ. ಮುಂಬೈಗೆ ಬಂದು ಕೆಲಸಕ್ಕೆ ಹಾಜರಾಗಿದ್ದೇನೆ. ಮತ್ತೆ ಮದುವೆಯ ಕಾರ್ಯಕ್ಕೆ ಊರಿಗೆ ಹೋಗಬೇಕು!

ನಾನು ಬೇಡವೆಂದು ಹೇಳಿದ್ದೆ. ಆದರೆ 'ನವೋದಯ' ಪತ್ರಿಕೆಯಲ್ಲಿ ಇದೇನು? ಭಾವಚಿತ್ರಗಳು ಬಂದಿವೆ. ಮದುವೆಯ ಆಮಂತ್ರಣ ಎಲ್ಲರಿಗೂ ಹೋಗಿದೆ.

ಭಾವಚಿತ್ರಗಳಿಗೆ ಸುಂದರವಾದ ಬಾರ್ಡರ್ ಇದೆ. ೧೪-೧೦-೧೯.. ಈ ದಿನಾಂಕದ 'ನವೋದಯ' ಪತ್ರಿಕೆ ತೆಗೆದಿಡಬೇಕೆ?

ಮಾನಸಗಂಗಾ

(ರಾಗ : ಹಿಂದೋಳ— ಮಾಲಕಂಸ; ತಾಳ - ತ್ರಿತಾಲ)

ಮಂದವಾಗಿ ಮಂದಾಕಿನಿ ಬಂದಳು
ಸುಂದರ ಶಿವಜಟೆಯಿಂದಿಳಿತಂದಳು ||ಪ||

ಕತ್ತುರಿಕೇಸರ ಅಗರು ಸುವಾಸಿತೆ,
ಮೆತ್ತಿದೆಲರ ಸಂಸ್ಪರ್ಶಭೂಷಿತೆ
ಕೈಲಾಸಪತಿಯ ಅಂತಃಪುರಾಶ್ರಿತೆ
ಶೈಲರಾಜಸುತೆ, ಲೋಕವಿಶ್ರುತೆ ||೧||

ಸುತ್ತಿಸುಳಿದು ಹಿಮಗಿರಿಯಿಂದಿಳಿದು
ಕತ್ತಲೆಯನು ಜನಮನದಿಂ ಕಳೆದು
ಎತ್ತೆತ್ತಲು ಮುತ್ತಿನ ಬೆಳೆಬೆಳೆದು
ಹೊನ್ನಿನ ಹೊಳೆಯೆನೆ ಹರಿದಳು ನಲಿದು ||೨||

ದೇವದಾರು ಶ್ರೀಗಂಧ ವೃಕ್ಷಕುಲ
ಪಾವನಗೈಯುವ ಗಂಗೆ ಪುಣ್ಯಜಲ
ಭೂವಿನೋದವನೆ ಬಯಸಿ ಬಂದಳೆನೆ
ಧಾವಿಸಿದಳು ಹರಿದ್ವಾರ ಪಿಂಡಿಯನೆ ||೩||

ಎನ್ನ ಮನದ ಮಾನಸದ ಶುಚಿಯ ಸೆಲೆ
ಎನ್ನ ದೇಹದಾದ್ಯಂತ ಹರಿದಳಲೆ
ಅಮೃತವಾಹಿನೀ, ಚಿತ್ತಚೋದಿನೀ
ಅಮರಗಂಗೆ ಹೃದ್ರಂಗವ್ಯಾಪಿನೀ ||೪||

— ಜಿ. ಆರ್. ಪಾಂಡೇಶ್ವರ್



★ ಸಾಹಿತ್ಯ ಲೋಕಕಲ್ಯಾಣದ ಸಾಧನವಾಗಬೇಕಾದರೆ— ಅದು ಆಗಲೇಬೇಕು ಮತ್ತು ಆಗಬಲ್ಲುದು— ಅದು ಯುಗಧರ್ಮವನ್ನು ಲಕ್ಷಿಸಿ ಸಾಗಬೇಕು. ವ್ಯಕ್ತಿ, ಸಮಾಜ, ವಿಶ್ವ ಇವು ಪರಸ್ಪರ ಅನುವರ್ತಿಗಳು. ಇದು ಇಂದಿನ ಯುಗಧರ್ಮ. ಸಾಹಿತ್ಯ ದೊರೆಯನ್ನಾಗಲಿ ದೇವರನ್ನಾಗಲಿ ಆಶ್ರಯಿಸದೆ ಜನಪದವನ್ನೇ ಮೊರೆಹೊಗಬೇಕು.

★

ಸಾಹಿತ್ಯ ಮತ್ತು ಯುಗಧರ್ಮ

ಲೇಖಕರು : ಶ್ರೀ. ಅ. ನ. ಕೃಷ್ಣರಾಯರು

ಕಾವ್ಯರಮಣಿ ಚಿರಂತನ ಸುಂದರಿಯಾಗಿದ್ದಾಳೆ, ನವನವೋನ್ಮೇಷಶಾಲಿನಿಯಾಗಿದ್ದಾಳೆ, ಅಮೃತಸ್ತನ್ಯಪಾನ ಮಾಡಿದ ಯುವತಿಯಾಗಿದ್ದಾಳೆ. ಅವಳ ಹಾಸ ಹ್ರಾಸ; ಒಲುಮೆ ಬಲುಮೆ; ಒನಪು ವೈಯಾರಗಳೇ ಕವಿಯ ಸ್ಫೂರ್ತಿಕೇಂದ್ರಗಳು. ಅವಳ ಭಾವದ ಬೆಡಗು, ಬಿಂಕದ ಕೊಂಕು, ಸ್ವಚ್ಛಂದ ಲೀಲಾವಿಲಾಸದ ರಸರಮಣೀಯತೆಗಳನ್ನು ಬಣ್ಣಿಸುವುದರಲ್ಲಿಯೇ ಕವಿಗೆ ಕೈಲಾಸ.

ತನ್ನ ರೂಪಯೌವನದ ಗಾಡಿಯಿಂದ ಜನರಿಗೆ ಮೋಡಿ ಮಾಡುವ ಅಪೂರ್ವಶಕ್ತಿಶಾಲಿನಿ ಅವಳು. ಅಂಥವಳನ್ನೂ ಅಬಲೆಯೆನ್ನುವ 'ಎಂಟೆರ್ದೆ' ತೋರಿದವನು ಕನ್ನಡ ರನ್ನ. 'ಸರಸತಿಯನಬಲೆಯುಂ ಗೋಣ್ ಮುರಿಗೊಂಡರ್ಥಕ್ಕೆ ಕುದಿದು ನೋಯಿಸುವವನಕ್ಕುರಿಗನೆ?' ಎಂದು ರನ್ನ ಕೇಳುತ್ತಾನೆ. ಈ ಸಂಪ್ರದಾಯದಲ್ಲಿ ಬೆಳೆದು ಬಂದ ಕವಿಗಳು ಪಾಪ-ಪುಣ್ಯದ ತಕ್ಕಡಿ ಹಿಡಿದು ಕಾವ್ಯದ ಯೋಗ್ಯತೆಯನ್ನು ಅಳೆಯಲು ಯತ್ನಿಸಿದರು. ಶುಷ್ಕ ವೈಯಾಕರಣಿಗೆ, ಶುಷ್ಕ ತಾರ್ಕಿಕನಿಗೆ ಕಾವ್ಯರತ್ನ ವಿಷಯವಲ್ಲ--ಅದು ಅತಿಚತುರಕವಿಕದಂಬಕವಿಷಯವೆಂದು ಪಂಪ ಸಾರಿಬಿಟ್ಟ.

> "ಕೇಳಲೊಡಂ ಕಿವಿ ಸವಿಯೊಳ
> ಗಾಳದೊಡಂ ತುನ್ನನಂ ಮುಳುಂಗದೊಡಂ ಸಾ
> ಖ್ಯಾಲಂಬಿಯೆನಿಪ ಚಿತ್ತಂ
> ಲೀಲೆಯೊಳವಗಾಹವಿರದೊಡದು ಸತ್ಕೃತಿಯೇ"

ಎಂದು ಕೇಳಿದ ಹರಿಹರನೂ ಕಾವ್ಯರಸಾಸ್ವಾದನದಿಂದಾಗುವ ಸೌಖ್ಯ(ಆನಂದ)ದ ಕಡೆಗೇ ನಮ್ಮ ಲಕ್ಷ್ಯ ಸೆಳೆದಿದ್ದಾನೆ. ಉತ್ತಮ ಕಾವ್ಯದಲ್ಲಿರಬೇಕಾದ ಅನೇಕ ಲಕ್ಷಣಗಳನ್ನು ವರ್ಣಿಸಿರುವ ರಾಘವಾಂಕನೂ 'ಸುಳಿ ಸುಖಂ ನಿಳಯುವಂತಪ್ಪ' ಎಂದು ಸೌಖ್ಯದ ಕಡೆಗೇ ನಮ್ಮ ಗಮನ ಸೆಳೆಯುತ್ತಾನೆ.

> "ರಸ ಜೀವ ಭಾವವೊಡಲರ್ಥವವಯವ ಶಬ್ದ
> ವಿಸರವೇ ನುಡಿಯಲಂಕಾರವೇ ತೊಡಿಗೆಯು ಶ-
> ವೆ ಸುಲಕ್ಷಣವೆ ಲಕ್ಷಣ ವಿಮಳ ಪದನ್ಯಾಸ ನಡೆ ರೀತಿ
> ಸುಕುಮಾರತೆ॥
> ರಸಿಕತನ ಸುಳಿ ಸುಖಂ ನಿಳಯುವಂತಪ್ಪ ಈ
> ಪೊಸ ಕಾವ್ಯಕನ್ನಿಕೆಯು..............................."

ಓದುಗನ ಮನಸ್ಸಿನಲ್ಲಿ ಸುಖವನ್ನುಂಟುಮಾಡುವುದೂ ಅವನಲ್ಲಿ ಪಾಪ-ಪುಣ್ಯದ ತಾರತಮ್ಯಜ್ಞಾನವನ್ನು ಹುಟ್ಟಿಸುವುದೂ ಕಾವ್ಯದ ಮುಖ್ಯ ಲಕ್ಷಣವೆಂದು ಹೆಚ್ಚುಕಡಿಮೆ ಕನ್ನಡದ ಪ್ರಾಚೀನ ಕವಿಗಳು ಒಪ್ಪಿಕೊಂಡಿದ್ದಾರೆ.

ಈ ಭಾವನೆಯ ಉಗಮಸ್ಥಾನವನ್ನು ಕಾಣಲು ನಾವು ನೃಪತುಂಗನಿಗಿಂತಲೂ ಹಿಂದಿದ್ದ ಭರತಮುನಿಯ ದೃಷ್ಟಿಯ ಕಡೆಗೆ ಗಮನ ಕೊಡಬೇಕು. ನಾಟಕದಲ್ಲಿ ದುಃಖ ಗೌಣಸ್ಥಾನ ಪಡೆದಿರಬೇಕು, ನಾಟಕ ಸುಖಪರ್ಯವಸಾಯಿ ಆಗಬೇಕೇ ವಿನಾ ದುಃಖಪರ್ಯವಸಾಯಿ ಆಗಬಾರದು ಎನ್ನುವುದು ಭರತಮುನಿಯ ಮತ್ತು ಅವನ ತರುವಾಯದ ಲಕ್ಷಣ ಶಾಸ್ತ್ರಜ್ಞರ ಅಭಿಮತವಾಗಿತ್ತು. ಮೊದಲಿನಿಂದ ಕೊನೆಯ ವರೆಗೂ ವಿಷಾದದಿಂದ ಕೂಡಿದ ದುಷ್ಯಂತ, ಹರಿಶ್ಚಂದ್ರ, ಪಾಂಡವರು ಇವರ ಕಥೆಗಳೂ ಸುಖದಲ್ಲಿಯೆ ಮುಕ್ತಾಯಗೊಂಡಿವೆ.

ಪ್ರಾಚೀನ ಕವಿಗಳು ಜೀವನದ ರುದ್ರತೆಯನ್ನು ಉಪೇಕ್ಷಿಸಿದ್ದರು ಅಥವಾ ಜೀವನದ ರುದ್ರತೆಯನ್ನು ಎದುರಿಸಲು ಅಂಜುತ್ತಿದ್ದರು ಎಂದು ಭಾವಿಸುವುದು ತಪ್ಪಾದೀತು. ಭಾಸನ ಏಕಾಂಕ ನಾಟಕಗಳು, ವಿಶಾಖದತ್ತನ 'ಮುದ್ರಾರಾಕ್ಷಸ', ಭಟ್ಟನ 'ವೇಣೀಸಂಹಾರ' ಶ್ರೇಷ್ಠ ವರ್ಗದ ರುದ್ರನಾಟಕಗಳಾಗಿವೆ. ಶೂದ್ರಕ ಜೀವನದ ಸಮಗ್ರತೆಯನ್ನು, ಜೀವನದ ಶುಚಿ ಅಶುಚಿಯನ್ನು, ಜೀವನದ ಋಜುತ್ವ ವೈಪರೀತ್ಯಗಳನ್ನು ಕಣ್ತುಂಬ ಕಂಡು, ಮನತುಂಬುವಂತೆ ಬಣ್ಣಿಸಿರುವ ಸೀಮಾಪುರುಷ. ಆದರೆ ಇವು ಕೆಲವು ಅಪರೂಪದ ಅಪವಾದಗಳು.

ಜೀವನದ ಸುಕುಮಾರತೆಯ ಕಡೆಗೇ ಪ್ರಾಚೀನ ಕವಿಗಳಲ್ಲಿ ಹೆಚ್ಚಿನವರ ಲಕ್ಷ್ಯವಿತ್ತೆಂಬ ಮಾತು ನಿರ್ವಿವಾದ. ಇದಕ್ಕೆ ಕಾರಣವೂ ಸಾಕಷ್ಟು ಪ್ರಬಲವಾಗಿಯೆ ಇದೆ. ಕವಿಯೇನೊ ತನ್ನ ಆತ್ಮತೃಪ್ತ್ಯರ್ಥವಾಗಿ ಈಶತೃಪ್ತ್ಯರ್ಥವಾಗಿ 'ಮೊಸಲುಗವಿತೆ' ರಚಿಸುತ್ತಿದ್ದ. ಆದರೆ ಕವಿಯ 'ಗೇಣು ಹೊಟ್ಟೆ' ತುಂಬುತ್ತಿದ್ದವನು ದೊರೆ. ದೇವ

ರನ್ನು ಮೆಚ್ಚಿಸುವುದಕ್ಕಿಂತಲೂ ಹೆಚ್ಚಾಗಿ ದೊರೆಯನ್ನು ಮೆಚ್ಚಿಸಬೇಕು. ಪಂಪ, ರನ್ನ, ಜನ್ನರಂಥ ಮಹಾಕವಿಗಳೂ ದೊರೆಯನ್ನು ಮೆಚ್ಚಿಸದೆ ಬಾಳಲು ಸಾಧ್ಯವಿರಲಿಲ್ಲ. ದೊರೆಯ ಆಸ್ಥಾನದಲ್ಲಿ ಗೋಳಿನ ಕತೆಯನ್ನು ಸುರಲು ಸಾಧ್ಯವೇ? ದೊರೆಮನೆಯಲ್ಲಿ ಹಬ್ಬ ನಡೆದಾಗ, ದೊರೆ ವಿಜಯಯಾತ್ರೆ ಮುಗಿಸಿಕೊಂಡು ಬಂದಾಗ ಅವನ ಮನಮೆಚ್ಚಿಸಲು ದುರಂತ ಜೀವನ ಚಿತ್ರವನ್ನು ಕಾವ್ಯರೂಪದಲ್ಲಿ ಅರ್ಪಿಸಲು ಸಾಧ್ಯವೇ? ವಾತಾವರಣ, ಸನ್ನಿವೇಶಗಳೆರಡೂ ಪ್ರಾಚೀನ ಕವಿಗಳನ್ನು ಒಂದೇ ಜಾಡಿನಲ್ಲಿ ಒಯ್ಯುತ್ತಿದ್ದವು. ದೊರೆ ಮೆಚ್ಚಿ ಕವಿಗೆ ಪುರಸ್ಕಾರ ನೀಡಬೇಕು. ಅವನ ಆಸ್ಥಾನದ ಪಂಡಿತವರ್ಗ ಮೆಚ್ಚಿ 'ಅಹುದೆ'ನಬೇಕು. ಮಧುರನ ಮಾತೇ ಈ ಊಹೆಗೆ ಆಧಾರ.

"ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ದುಂಡುಚಿಯೇ ಬೀದಿವರೆಯೆ ಬೀರನ ಕತೆಯೇ ?"

ಈ ಪರಿಸ್ಥಿತಿ ಅಸಹನೀಯವಾಗಿತ್ತೆಂದು ಹರಿಹರ ಸ್ಪಷ್ಟವಾಗಿ ಹೇಳಿದ್ದಾನೆ.

"ನರರಂ ಸೇವಿಪ ಜೀಯಜೀಯೆನುತುಮಿರ್ಪೆನೆಂದೊಡಂ ದೈನ್ಯಮು –
ಬ್ಬರಿಸುತ್ತುಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ.
ರ್ಪಿರವಂ ಸುಟ್ಟುಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂದಂದು ಶಂ
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ ॥

"ಸಡಿಫಡ ಮಾನವರ್ ಕುಡುವರೆಂಬುದನಾಡದಿರೆನ್ನ ಮುಂದೆ, ಕ–
ಪ್ಪಡದ ಶರೀರಗಳ್ ತೃಣದ ಹಾಹೆಗಳಕ್ಕಟ! ಮಣ್ಣ ಬೊಂಬೆಗಳ್।
ಕುಡುವುವೆ ? ಬೇಡು ಬೇಡಿದುದನೀವ ಮಹಾನಿಧಿಯಂ ಮಹೇಶನಂ
ಮೃಡನನನೂನದಾನಿಯನಲಂಪಿನ ಪೆಂಪಿನ ಹಂಪೆಯಾಳ್ದನಂ ॥"

ದೊರೆಯನ್ನೇ ದೇವರೆಂದು ಭಾವಿಸುತ್ತಿದ್ದ ಮನೋಭಾವ ಪ್ರಾಚೀನ ಸಾಹಿತ್ಯದ ಒಂದು ಮುಖವಾದರೆ, ದೇವರನ್ನೇ ದೊರೆಯೆಂದು ಭಾವಿಸುತ್ತಿದ್ದ ಮನೋಭಾವ ಇನ್ನೊಂದು ಮುಖ. ಮಧ್ಯಕಾಲದ ಶೈವ ವೈಷ್ಣವ ಸಾಹಿತ್ಯಗಳು ಮಾನವನ ಅಲ್ಪತನ, ಬಾಳಿನ ಕ್ಷಣಭಂಗುರತೆಯನ್ನು ಸಾರಿ ದೈವಶಕ್ತಿಯ ಹಿರಿಮೆಯನ್ನು ಎತ್ತಿ ತೋರಿದವು.

"ಅಕಟಕಟಾ ಶಿವ ನಿನಗಿನಿತು ಕರುಣವಿಲ್ಲ.
ಅಕಟಕಟಾ, ಶಿವ ನಿನಗಿನಿತು ಕೃಪೆಯಿಲ್ಲ.
ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರಲೋಕ ದೂರನ?
ಏಕೆ ಹುಟ್ಟಿಸಿದೆ, ಕೂಡಲ ಸಂಗಮದೇವ ಕೇಳಯ್ಯಾ,
ಎನಗಾಗಿ ಮತ್ತೊಂದು ತರುಮೃಗಾದಿಗಳಿದ್ದಿಲ್ಲವೇ ?"

ಎಂದು ಬಸವಣ್ಣನವರು ಹಲುಬುತ್ತಾರೆ.

ಪುರಂದರದಾಸರು ಅಡಿಗಡಿಗೆ ನುಡಿಯುತ್ತಾರೆ:

"ಆರೇನು ಮಾಡುವರು ಅವನಿಯೊಳಗೆ
ಪೂರ್ವಜನ್ಮದ ಕರ್ಮ ಹಣೆಯಲ್ಲಿ ಬರೆದುದಕೆ॥"

"ಹಿಗ್ಗುವೆ ಯಾಕೋ ಈ ದೇಹಕ್ಕೆ ಹಿಗ್ಗುವೆ ಯಾಕೋ॥
ಹಿಗ್ಗುವ ತಗ್ಗುವ ಮುಗ್ಗುವ ಕುಗ್ಗುವ
ಅಗ್ನಿಯೊಳಗೆ ದಗ್ಧವಾಗುವ ದೇಹಕ್ಕೆ ॥"
"ಲೊಳಲೊಟ್ಟೆ, ಬದುಕು ಲೊಳಲೊಟ್ಟೆ ॥"

ಈ ದೇಹ ಅಸ್ಥಿರ, ಈ ಬಾಳು ಕ್ಷಣಿಕ ಎಂದು ಸಾರಿದ ಕವಿಗಳು ಇದಕ್ಕೊಂದು ಪರಿಹಾರೋಪಾಯವನ್ನೂ ಸೂಚಿಸಿದರು. ಈ ದೇಹ, ಈ ಬಾಳು, ಈ ಲೋಕದ ಪರಿವೆ ಮರೆತು ಅಗೋಚರನಾಗಿ, ಅವ್ಯಕ್ತನಾಗಿ–ಆದರೆ ಅಣುರೇಣುತೃಣಕಾಷ್ಠಗಳಲ್ಲಿರುವ ಮುಕ್ಕಣ್ಣನನ್ನೊ ಮುಕುಂದನನ್ನೋ ಮರೆಹೊಗುವುದು. ಇಂದಿನ ಜೀವನದ ಅಶಾಶ್ವತತೆಯನ್ನರಿತ ಕವಿ ಲೋಕಕ್ಕೆ ಮಾಡಿದ ಉಪಕಾರವೇನು? ಅಶಾಶ್ವತವಾದ ಕಾಲಾವಧಿಯಲ್ಲಿ ಜೀವ ಹೇಗೆ ವಿಕಾಸವಾಗಬಹುದು, ಹೇಗೆ ತನ್ನಲ್ಲಿ ಸುಪ್ತವಾಗಿರುವ ಪರಮೇಷ್ಠಿಯನ್ನು ಕಂಡುಕೊಳ್ಳಬಹುದು ಎಂದು ತಿಳಿಸುವ ಗೋಜಿಗೆ ಹೋಗಲಿಲ್ಲ. ಕಂಡಿರುವ ಈ ಲೋಕ ಅನಿತ್ಯವಾದರೆ ಕಾಣದಿರುವ ಮುಂದಣ ಲೋಕ ನಿತ್ಯವೆಂದು ನಂಬುವುದಾದರೂ ಹೇಗೆ?

ಪರಂಪರಾಗತವಾಗಿ ಬಂದ ಕರ್ಮಬಂಧವನ್ನೇ ಕವಿ ಜನಾಂಗದ ಮೇಲೆ ಮತ್ತಷ್ಟು ಬಿಗಿಯುತ್ತ ಬಂದ. 'ಇರುವ ನಾಲ್ಕು ದಿನ ಆದಷ್ಟು ಸುಖವಾಗಿರೋಣ' ಎಂದು ಭಾವಿಸುವವರು ಕೆಲವರಾದರು; 'ಈ ನಾಲ್ಕು ದಿನದ ಬಾಳಿನ ಸುಖ ಮರೆತು ಶಾಶ್ವತ ಸುಖವನ್ನರಸೋಣ' ಎಂದು ಭಾವಿಸುವವರು ಕೆಲವರಾದರು. ಇಬ್ಬರೂ ಜೀವನವನ್ನು ಸರಿಯಾಗಿ ಎದುರಿಸಲಿಲ್ಲ.

ಭಾರತೀಯ ಕವಿಗಳ 'ಕರ್ಮವಾದ' ಕೇವಲ ಸಾಹಿತ್ಯ, ದರ್ಶನ ಪ್ರಪಂಚದಲ್ಲಿಯೇ ನಿಂತಿದ್ದರೆ ನಾವು ದುಃಖಪಡಬೇಕಾಗಿರಲಿಲ್ಲ. ಅದು ಭಾರತೀಯ ಜೀವನದ ಸಮಸ್ತವಾಹಿನಿಯಲ್ಲಿಯೂ ಪ್ರವಹಿಸಿತು. ಜನತೆಗೆ ಸುಳ್ಳು ವೈರಾಗ್ಯ ಬೋಧಿಸಿತು. ಈ ಸುಳ್ಳು ವೈರಾಗ್ಯ ಕಾಲಕಾಲಕ್ಕೆ ಭಾರತವನ್ನು ತುರುಕರು, ಮುಘಲರು, ಫ್ರೆಂಚರು, ಡಚ್ಚರು, ಆಂಗ್ಲರು ಮೊದಲಾದವರ ಪಾದತಲದಲ್ಲಿ ಹಾಕುತ್ತ ಬಂತು.

ಸಂಪ್ರದಾಯವಾದಿ ಒಂದು ಸವಾಲು ಹಾಕುತ್ತಾನೆ. "ಬಾಳು ಶಾಶ್ವತವೇ? ಅಶಾಶ್ವತ ಬಾಳುವೆಗಾಗಿ ಮಾನವ ತೊಳಲಾಡಬೇಕೇ?" ಶಾಶ್ವತ-ಅಶಾಶ್ವತ ಮನುಷ್ಯನ ಬಾಳುವೆಯ ವರ್ಷಗಳನ್ನು ಅವಲಂಬಿಸಿಲ್ಲ-ಬಾಳುವೆಯ ರೀತಿಯನ್ನವಲಂಬಿಸಿದೆ. ಯೇಸು, ಶಂಕರಾಚಾರ್ಯ, ವಿವೇಕಾನಂದ ನೂರಾರು ವರ್ಷ ಬದುಕಲಿಲ್ಲ. ಆದರೆ

BANKING SERVICE

The Agricultural & Industrial Bank Ltd.

[Estd. 1934]

One of the pleasing developements of Modern Banking Service is the building of a favourable Bank credit standing. As a result, you can use that credit at any time.

Whenever we can be helpful to you in any Banking matter, you will find us ready to serve you. Please feel free to consult with us whether we can be of service.

OPEN YOUR ACCOUNT TO-DAY,

A. Madhava Pai, B. A., B. L.
General Manager

ಅವರು ಬಾಳಿ ಬದುಕಿದ ಒಂದೊಂದು ಕ್ಷಣವೂ ಒಂದೊಂದು- ಮಹಾಯುಗ- ಎಲ್ಲ ಮಾನವರೂ ಯೇಸು, ಶಂಕರಾಚಾರ್ಯ, ವಿವೇಕಾನಂದ ಆಗುವುದು ಸಾಧ್ಯವೇ ? — ಸಾಧ್ಯ — ಮತ್ತು ಸಾಧ್ಯವಿಲ್ಲ. ಅವರ ಸಾಧನೆಯಿದ್ದವರಿಗೆ ಸಾಧ್ಯ, ಆಲಸ್ಯಜೀವಿಗಳಿಗೆ ಸಾಧ್ಯವಿಲ್ಲ. ಇದು ವೈಯಕ್ತಿಕ ದೃಷ್ಟಿಯಾಯಿತು—ಸಾಮೂಹಿಕ ದೃಷ್ಟಿಯೂ ಒಂದಿದೆ. ವ್ಯಕ್ತಿ, ವ್ಯಕ್ತಿಯಾಗಿ ದುರ್ಬಲನಾಗಿರಬಹುದು, ಆದರೆ ಸಮೂಹದ ಒಂದಂಶವಾಗಿ ಅವನು ಸಮೂಹದಷ್ಟೇ ಸಶಕ್ತನಾಗುತ್ತಾನೆ. ಇಂದಿನ ಗಿರಣಿಯ ಕಾಮಗಾರ ವೈಯಕ್ತಿಕವಾಗಿ ತನ್ನ ಒಡೆಯನ ವಿರುದ್ಧ ಏನೂ ಮಾಡಲಾರ. ಒಡೆಯನ ಹಿಂದೆ ಧನಬಲವಿದೆ, ಅಧಿಕಾರಬಲವಿದೆ. ಆದರೆ ಗಿರಣಿ ಶ್ರಮಜೀವಿಗಳ ಸಂಘದ ಸದಸ್ಯನಾದ ಕಾಮಗಾರ ಒಡೆಯನ ದೌರ್ಜನ್ಯವನ್ನೆದುರಿಸಬಲ್ಲ. ಅವನ ಹಿಂದೆ, ಇಡೀ ಶ್ರಮಜೀವಿವರ್ಗ ನಿಂತಿರುತ್ತದೆ.

ನಮ್ಮ ಜೀವನದ ಪ್ರತಿಯೊಂದು ಅಂಶದ ಮೇಲೂ ಸಾಮೂಹಿಕ ಭಾವನೆ ಪ್ರಭಾವ ಬೀರುತ್ತಿರುವುದನ್ನು ನಾವು ನೋಡಬಹುದು. ಲೋಕದ ಸ್ಥಿತಿಗತಿ ವೈಯಕ್ತಿಕ ಜೀವನವನ್ನು ಗೌಣಮಾಡಿ ಸಾಮೂಹಿಕ ಜೀವನಕ್ಕೆ ಮಹತ್ತ್ವ ಕೊಡುತ್ತಿದೆ. ವಿಶ್ವ ಒಂದು ಕುಟುಂಬ. ಇದರಲ್ಲಿ ದುಡಿಯುವವರು ದುಡಿಸಿಕೊಳ್ಳುವವರು ಎಂಬ ವಿಭೇದ ಇರಬಾರದು. ಎಲ್ಲರಿಗೂ ಸಮಾನ ಹಕ್ಕು ಬಾಧ್ಯತೆ, ಸಮಾನ ಜೀವನಾನುಕೂಲವಿರಬೇಕು ಎಂಬ ತತ್ತ್ವವನ್ನು ಕಾರ್ಲ್ ಮಾರ್ಕ್ಸ್ ಪ್ರತಿಪಾದಿಸಿದ. ಮಾರ್ಕ್ಸವಾದ ಪಾಶ್ಚಾತ್ಯ ಜಗತ್ತಿಗೆ ವಿನೂತನವೂ ಕ್ರಾಂತಿಯುತವೂ ಆಗಿ ಕಂಡುಬಂದಿತು.

ಭಾರತೀಯ ಸಂಸ್ಕೃತಿಯ ಭದ್ರ ಬುನಾದಿಯೇ—ಯಾವುದನ್ನು ಇಂದು ನಾವು ಮಾರ್ಕ್ಸವಾದ (Marxism) ಎಂದು ಕರೆಯುತ್ತೇವೆಯೋ—ಆ ಮಾನವವಾದದ ಮೇಲೆ ನಿಂತಿದೆ. ಪ್ರಸ್ಥಾನತ್ರಯಗಳನ್ನು ಭಾರತ ಧರ್ಮದ ಅಸ್ತಿಭಾರವೆಂದು ನೆರೆನಂಬಿರುವ ನಾವು ಉಪನಿಷತ್ತಿನ ಸಂಸ್ಕೃತಿಯನ್ನು ನೋಡಬೇಕು. ಜಾತ್ಯತೀತವಾದ, ವರ್ಗಾತೀತವಾದ, ಸಾಮಾಜಿಕ ವ್ಯವಸ್ಥೆಯೇ ಮಾನವ ಕಲ್ಯಾಣದ ಮೂಲವೆಂದು ಪ್ರಾಚೀನರು ನಂಬಿದ್ದುದು ಮಾತ್ರವೇ ಅಲ್ಲ, ಅಂತೇ ನಡಸಿಕೊಂಡೂ ಬಂದರು. ಮಹಾಭಾರತ ಕಾಲದಲ್ಲಿ ಕೂಡ ಚಾತುರ್ವರ್ಣ್ಯಗಳು ಗುಣಕರ್ಮಾನುಸಾರವಾಗಿಯೇ ವಿಭಜಿಸಲ್ಪಟ್ಟಿದ್ದವು. ಮುಂದೆ ಸಾಮೂಹಿಕ ಭಾವನೆ ರಾಹುಗ್ರಸ್ತವಾಗಿ ವೈಯಕ್ತಿಕ ಭಾವನೆ ಬೆಳೆಯತೊಡಗಿದ ಮೇಲೆ ಉತ್ತಮ, ಕನಿಷ್ಠ ವರ್ಣಗಳೂ ವರ್ಗಗಳೂ ತಲೆಯೆತ್ತಿದ್ದವು. ರೈಕ್ವ, ಸತ್ಯಕಾಮ, ಜಾಬಾಲಿಗಳಿಗೆ ಋಷಿಪಟ್ಟ ಕಟ್ಟಿದ ಸಂಸ್ಕೃತಿ, ಮೈತ್ರೇಯಿ, ಗಾರ್ಗಿಯರನ್ನು ಬ್ರಹ್ಮವಾದಿನಿಯರೆಂದು ಒಪ್ಪಿಕೊಂಡ ಸಂಸ್ಕೃತಿ ಮಾರ್ಕ್ಸ್ ತತ್ತ್ವವನ್ನು ನಿತ್ಯಮಾಡಿತ್ತು.

ಇಂದು ನಮ್ಮ ಮುಂದೆ ಎರಡು ತತ್ತ್ವಗಳು ನಿಂತಿವೆ. ಸಾಹಿತಿ ಉಪನಿಷತ್ತಿನ ಋಷಿಗಳಂತೆ 'ಮಾನವವಾದಿ' ಯಾಗಬೇಕೇ— ಅಥವಾ— ತರುವಾಯದವರಂತೆ 'ವ್ಯಕ್ತಿವಾದಿ'ಯಾಗಬೇಕೇ?

ವ್ಯಕ್ತಿವಾದಕ್ಕೆಡೆಕೊಡದಿದ್ದರೆ ಮಾನವ ಜೀವನವೆಲ್ಲಾ ಏಕಮುಖವಾಗಿ ನೀರಸವಾಗುತ್ತದೆ. ಮಾನವರೆಲ್ಲ ಯಂತ್ರಗಳಂತೆ ಒಂದೇ ದೃಷ್ಟಿಯಲ್ಲಿ ವಿಚಾರಮಾಡತೊಡಗಿ ತಮ್ಮ ವಿಶಿಷ್ಟ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ, ಎನ್ನುವ ಆಕ್ಷೇಪಣೆಯನ್ನು ವ್ಯಕ್ತಿವಾದಿಗಳೆತ್ತುತ್ತಾರೆ.

ವ್ಯಕ್ತಿ, ಸಮಾಜ, ವಿಶ್ವ ಪರಸ್ಪರ ಅನುವರ್ತಿಗಳು. ಹಲವು ವ್ಯಕ್ತಿಗಳು ಸೇರಿದರೇ ಒಂದು ಸಮಾಜ; ಹಲವು ಸಮಾಜಗಳು ಸೇರಿದರೇ ವಿಶ್ವ. ಆದರೆ ವ್ಯಕ್ತಿ ತನ್ನ ನಡೆ-ನುಡಿಯಲ್ಲಿ ವಿಶ್ವಕ್ಕೆ ಕಲ್ಯಾಣಮಾಡುವಂಥದು ಯಾವುದು? ವಿಶ್ವದ ಪ್ರಗತಿಗೆ ಅಡ್ಡಿ ತರುವುದು ಯಾವುದು? ಎಂದು ಯೋಚಿಸಬೇಕಾಗುತ್ತದೆ. ವಿಶ್ವಮುಖಿಯಾದ ವ್ಯಕ್ತಿ ತನ್ನ ವಿಶಿಷ್ಟ ವಿಚಾರಶಕ್ತಿಯಿಂದ ವಿಶ್ವದ ಹಿತವನ್ನೇ ಮುಂದುವರಿಸುತ್ತಾನೆ. ಗಾಂಧೀಜಿಯ ವಿಚಾರಸರಣಿ ವಿಶ್ವತೋಮುಖವಾಗಿತ್ತು; ಅದನ್ನು ಕಾರ್ಯರೂಪಕ್ಕೆ ತರುವ ಬಗೆ ವೈಯುಕ್ತಿಕವಾಗಿತ್ತು. ವಿಶ್ವದ ಮಹಾವೃಕ್ಷದಲ್ಲಿ ತಾನೊಂದು ಬೇರು ಎಂದು ಭಾವಿಸುವ ವ್ಯಕ್ತಿ, ತನ್ನ ಪ್ರತಿಭೆ, ಶಕ್ತಿ, ತಪಸ್ಸನ್ನು ವಿಶ್ವಕಲ್ಯಾಣಕ್ಕೆ ಮೀಸಲುಮಾಡುತ್ತಾನೆ. ವಿಶ್ವಶಕ್ತಿಯಿಂದ ಅವನ ಚೈತನ್ಯ ಬೆಳೆದಂತೆ, ಅವನ ತಪಸ್ಸಿನಿಂದ ವಿಶ್ವದ ಶಕ್ತಿಯೂ ವೃದ್ಧಿಯಾಗುತ್ತದೆ. ವಿಶ್ವಶಕ್ತಿಯನ್ನು ತನ್ನ ವೈಯುಕ್ತಿಕ ಪ್ರಭಾವಪ್ರಸಾರಕ್ಕೆ ಉಪಯೋಗಿಸಿಕೊಳ್ಳುವ ವ್ಯಕ್ತಿ ಹಿಟ್ಲರ, ಮುಸಲೋನಿಗಳಂತೆ ಲೋಕಕಂಟಕನಾಗುತ್ತಾನೆ.

ಈ ವಿಶ್ವರೂಪವೇ ಇಂದಿನ ಯುಗಧರ್ಮವೆಂದು ಹೇಳಬಹುದು. ಯುಗಧರ್ಮಕ್ಕೆ ಅನುಗುಣವಾಗಿ ಸಾಹಿತ್ಯನಿರ್ಮಾಣವಾಗಬೇಕು. ಅದು ದೊರೆಯನ್ನಾಗಲಿ ದೇವರನ್ನಾಗಲಿ ಮರೆವೊಗದೆ ಜನಪದವನ್ನು ಆಶ್ರಯಿಸಬೇಕು.

ಜನಪದದಲ್ಲಿ ಶಕ್ತಿ ಕುಂದಿದಾಗ, ನೀತಿ ಅಳಿದಾಗ, ಸ್ಥೈರ್ಯ ಲಯವಾದಾಗ, ಕವಿ ಅದಕ್ಕೆ ಶಕ್ತಿ, ನೀತಿ, ಸ್ಥೈರ್ಯ ನೀಡುತ್ತಾನೆ. ಸಂಗ್ರಾಮದಿಂದ, ರೋಗದಿಂದ, ಆರ್ಥಿಕ ವಿಪನ್ನಾವಸ್ಥೆಯಿಂದ ಜನಪದ ಕಳೆಗುಂದಿ ಕಂಗೆಟ್ಟು ಕುಳಿತಾಗ ಕವಿ ತನ್ನ ಪಾಂಚಜನ್ಯ ಊದುತ್ತಾನೆ. ಬಾಳಿನಲ್ಲಿ ಜಿಹಾಸೆ ಹೊಂದಿದವರ ಮನಸ್ಸಿನಲ್ಲಿ ಆಸೆಯಂಕುರಿಸುವಂತೆ ಮಾಡುತ್ತಾನೆ-

ಹೊಸ ಪುಸ್ತಕ ! ರೈತನ ಜ್ಞಾನಭಾಂಡಾರ !!

....ಸಚಿತ್ರ....

ದನಕರುಗಳ ಕುರಿಕೋಳಿಗಳ ಸಂಗೋಪನ ಮತ್ತು ಲಘು ಚಿಕಿತ್ಸೆ

ಲೇಖಕರುಃ— ಟಿ ಎನ್. ಕುಲಕರ್ಣಿ;
ನಿವೃತ್ತ ವ್ಹೆಟರನರಿ ಡಾಕ್ಟರ.
ತೊರವಿ ಜಿ. ವಿಜಾಪುರ

ಬೆಲೆ ೨ ರೂಪಾಯಿ

ಒಕ್ಕಲಿಗನಿಗೆ ಸುಲಭದಲ್ಲಿ ದನಕರುಗಳ ಬಗ್ಗೆ ಸಶಾಸ್ತ್ರ ಜ್ಞಾನವನ್ನು ಕನ್ನಡದಲ್ಲಿ ಒದಗಿಸಿಕೊಡುವ ಮೊಟ್ಟಮೊದಲನೆಯ ಪುಸ್ತಕವಿದು ಹಾಲು ಪೂರೈಸುವವರಿಗೆ, ಗೋ. ಸಂಸ್ಥೆಗಳ ಚಾಲಕರಿಗೆ, ಉಪಯುಕ್ತವಾಗಿದೆ

—ಏಜಂಟರಿಗೆ ಯೋಗ್ಯ ಕಮೀಶನ್ ಕೊಡಲಾಗುವದು—

ಪುಸ್ತಕ ಸಿಗುವ ಸ್ಥಳ— **ಟಿ. ಎನ್. ಕುಲಕರ್ಣಿ**
ತೊರವಿ, ಜಿ. ವಿಜಾಪುರ

ಸಾಧನ ಮುದ್ರಣಾಲಯ, ಧಾರವಾಡ

ಕವಿಯ ಅತಿ ಸೂಕ್ಷ್ಮ ಚೇತನ ಸಾಮಾನ್ಯರಿಗೆ ಗೋಚರವಾಗದೆಡೆ ಅವನಿಗೆ ಸತ್ಯ, ಸೌಂದರ್ಯ, ಶಕ್ತಿಯನ್ನು ಕಾಣಿಸುತ್ತದೆ. ತನ್ನ ಅನುಭವ ಹಲವರ ಅನುಭವವಾಗುವಂತೆ ತನ್ನ ನಿತ್ಯಾನಂದ, ನಿತ್ಯ ತೃಪ್ತಿ, ನಿತ್ಯತೇಜಸ್ಸು ಹಲವರದಾಗುವಂತೆ ಮಾಡುವದರಲ್ಲಿಯೇ ಕವಿ ಉದ್ಯುಕ್ತನಾಗಬೇಕು.

ಸತ್ಯಸಾಧಕನಾದ ಕವಿ ಕೇವಲ ಅತಿ'ಸುಳಿಸುಖಂ'ನಿಳಯವಂತಪ್ಪ' ಕೃತಿಗಳನ್ನು ಮಾತ್ರ ರಚಿಸಲು ಸಾಧ್ಯವಿಲ್ಲ. ನಾವು ಜೋಲನ **ಜರ್ಮಿನಾಲ್** ಅಪ್ಟನ್ ಸಿಂಕ್ಲೇರನ **ಜಂಗಲ್** ಸಿಲಾನನ **ಫಾಂತಮಾರಾ** ಅಲೆಕ್ಸಾಂಡರ ಕುಪ್ರಿನ್ನನ **ಯಾಮಾ** ಗ್ರಂಥಗಳನ್ನೋದಿದಾಗ ನಮಗೆ ರಾಜಶೇಖರವಿಳಾಸ, ಭರತೇಶವೈಭವ, ಮೇಘದೂತ, ಹಾಫೀಸನ ದಿವಾನ ಓದಿದ ಸಂತೋಷ ಲಭಿಸುವದಿಲ್ಲ. ಬಡತನದ, ದಾರಿದ್ರ್ಯದ, ಮಿತವರಿಯದ ದುಡಿಮೆಯ, ಹೊಟ್ಟಿಗಾಗಿ ದೇಹಮಾರುವ ವ್ಯಾಪಾರದ ದುರಂತ ಚಿತ್ರಗಳನ್ನು ನೋಡಿದಾಗ ಮನಸ್ಸು ಮುದುಡುತ್ತದೆ. ಹೃದಯಕ್ಕೆ ಅತೀವ ಯಾತನೆಯಾಗುತ್ತದೆ. ಈ ಯಾತನೆಯನ್ನುಂಟುಮಾಡಿ ತೃಪ್ತನಾಗುವುದಷ್ಟೇ ಕವಿಯ ಉದ್ಯಮವಲ್ಲ. ನಮ್ಮ ಯಾತನೆ, ಕಳಕಳಿ ಕಾರ್ಯರೂಪಕ್ಕೆ ಬರಬೇಕು. ಮಾನವಜೀವನವನ್ನು ಅಧಃಪತನಕ್ಕೆಳೆಯುತ್ತಿರುವ ಪರಿಸ್ಥಿತಿಯನ್ನು ಸುಧಾರಿಸಬೇಕು. ಅಂಥಲೋಕದ ಕಣ್ಣು ತೆರೆಸುವ ಕೆಲಸವನ್ನು ಕವಿನಿರ್ವಹಿಸುತ್ತಾನೆ. ಚಾರ್ಲ್ಸ್ ಡಿಕೆನ್ಸ ತನ್ನ 'ಆಲಿವರ್ ಟ್ವಿಸ್ಟ' 'ಗ್ರೇಟ ಎಕ್ಸಪೆಕ್ಟೇಷನ್ಸ' 'ನಿಕ್ಲಾಸ ನಿಕಲಬಿ' ಮೊದಲಾದ ಕಾದಂಬರಿಗಳನ್ನು ಬರೆದ ಮೇಲೆ ರಾಯಲ್ ಕಮಿಶನನ್ನುಗಳೇರ್ಪಟ್ಟು ಸೆರೆಮನೆಯ ಸುಧಾರಣೆ, ಅನಾಥ ಬಾಲಬಾಲಿಕೆಯರ ಪರಿಸ್ಥಿತಿಯ ಸುಧಾರಣೆ ಕಾರ್ಯರೂಪಕ್ಕೆ ಬಂದವು. ರಿಚರ್ಡ ರೈಟ, ಬೂಕರ್ ಟಿ ವಾಷಿಂಗಟನ ಇವರ ಗ್ರಂಥಗಳು ನೀಗ್ರೋ ಜನರಲ್ಲಿ ಅಭೂತಪೂರ್ವ ಜಾಗೃತಿಯನ್ನುಂಟುಮಾಡಿದವು. ಸ್ಟಲಿನ್‌ಗ್ರಾಡ ಮಹಾಸಮರದ ಅದ್ಭುತ ವಿಜಯಕ್ಕೆ ಎಲಿಯಾ ಎರನ್‌ಬರ್ಗ, ಫೆಡಿನ್, ಶೋಲಾಕಾಫ ಇವರ ಗ್ರಂಥಗಳು ನೆರವಾದವು.

ಕವಿಯ ಸತ್ಯದೃಷ್ಟಿ ನಿರ್ದಾಕ್ಷಿಣ್ಯ ನಿರೂಪಣೆ ತಾತ್ಕಾಲಿಕವಾಗಿ ಮನಸ್ಸಿಗೆ ವಿರಸವನ್ನುಂಟುಮಾಡಬಹುದು. ಆದರೆ ಕವಿ ಜನಾಂಗದ ಅವಿವೇಕ ಅಜ್ಞಾನಗಳಿಗೆ ಸೊಪ್ಪು ಹಾಕುತ್ತ ತನ್ನ ಸುಖ, ಶಾಂತಿಯನ್ನಷ್ಟೇ ಗಮನಿಸಿದರೆ ಲೋಕದಲ್ಲಿ ನಿತ್ಯತತ್ತ್ವಗಳು ಬಾಳುವುದೆಂತು? ಮಾನವವರ್ಗ ಋಜುಮಾರ್ಗವನ್ನವಲಂಬಿಸುವುದೆಂತು?

ಕವಿ ಜನಪದದ ಗುರುವೂ ಮಾರ್ಗದರ್ಶಕನೂ ಆಗಬೇಕು ಲೋಕ ಬದುಕಿದರಲ್ಲವೇ ಅವನ ಕಾವ್ಯ ಬದುಕುವುದು?

ಸಮಾಧಾನ

ಲಾಜಿಂಗ ಮತ್ತು ಬೋರ್ಡಿಂಗ

ಪಾಟೀಲಗಲ್ಲಿ, ಸ್ಟೇಶನ್ ರೋಡ, **ಬೆಳಗಾವಿ**

ಶಾಕಾಹಾರಿ — ಮಾಂಸಾಹಾರಿ

ಭೋಜನದ ಮತ್ತು ಉಳಿದುಕೊಳ್ಳಲಿಕ್ಕೆ
ಪ್ರಮುಖವಾದ ಸ್ಥಳ

ಸ್ಟೇಶನ್, ಮೋಟಾರ ಸ್ಟ್ಯಾಂಡ ಮತ್ತು
ಪೋಸ್ಟ ಆಫೀಸುಗಳಿಂದ ಎರಡೇ ನಿಮಿಷುಗಳ ಹಾದಿಯು

ಹೊಸ ವರ್ಷವು

ಎಲ್ಲರಿಗೂ
ಸುಖಸಮೃದ್ಧಿಯನ್ನೀಯಲಿ!

ಅಬಾಲ— ವೃದ್ಧರಿಗೆಲ್ಲ ಚೈತನ್ಯವೀಯುವ

ಜೀವನ ಬಿಂದು

ಅರ್ಥಾತ್ ಮನೆಯ ದವಾಖಾನೆ (ರಜಿಸ್ಟರ್ಡ)

ಜೀವನ ಬಿಂದುವಿನ ಒಂದೇ ಹನಿಯು ಅಮೃತದಂತೆ ಅಮರ ಕೃತಿಯನ್ನು ಮಾಡುತ್ತದೆ. ಜೀವನ ಬಿಂದು ಸರ್ವ ಪ್ರಕಾರದ ಜ್ವರ, ಶೀತ, ಕೆಮ್ಮು, ನ್ಯೂಮೋನಿಯಾ, ಕಾಲರಾ, ಕಣ್ಣು ಕತ್ತಲೆಗವಿಯುವದು, ದಮ್ಮು, ಹಲ್ಲುಬೇನೆ, ಅಜೀರ್ಣ, ಪಿತ್ತವಿಕಾರ, ಕಫ, ಸಂಧಿವಾತ, ವಾಯುವಿಕಾರ, ಕಳೆ ಬರುವದು ನೋವಾಗುವದು, ಗುಲ್ಮ, ಬಾಯುವದು, ಕ್ಷಯ, ಹೊಟ್ಟೆ ಉಬ್ಬುವದು, ಹೊಟ್ಟೆ ನೋಯುವದು, ಹೊಟ್ಟೆ ಮುರಿಯುವದು, ಹೊಟ್ಟೆಯಲ್ಲಿ ಗಾಳಿ ತುಂಬುವದು, ಕರಳು ಬೇನೆ, ಸ್ತ್ರೀಯರ ಆರ್ತವ ದೋಷ, ನಿಯಮಿತ ಕಾಲಕ್ಕೆ ಮುಟ್ಟಾಗದಿರುವದು, ಅದರಂತೆ ಹುರಕು, ಕಜ್ಜಿ, ತದ್ದು, ಗಜಕರ್ಣ, ಇಸಬು ಇತ್ಯಾದಿ ಎಲ್ಲ ತ್ವಚ ರೋಗಗಳಿಗೂ ಹಾಗೂ ಶಾರೀರಿಕ ರೋಗಗಳಿಗೂ ತತ್‌ಕ್ಷಣ ಉಪಾಯ ಮಾಡುವ ಈ ಮಹಾ ಔಷಧಿಯು ಪ್ರತಿಯೊಬ್ಬರ ಮನೆಯಲ್ಲಿ ಅವಶ್ಯವಾಗಿ ಇರಲೇಬೇಕು. ಇಂದೇ ತರಿಸಿಕೊಂಡು ಅನುಭವ ಪಡೆಯಿರಿ.


ಬಾಟ್ಲಿ ಕಿ. ೪ ರೂ. (ವ್ಹಿ· ಪಿ ಖರ್ಚು ಸಹ)
ವ್ಯಾಪಾರಿ ದರಗಳಿಗೆ ಬರೆಯಿರಿ

ಎಸ್· ಆರ್· ಸುಣಗಾರ ಪರ್ಫ್ಯೂಮರ್ಸ
ಶಹಾಪೂರ—ಬೆಳಗಾವ

ಜಟಿಲವಾದೊಂದು ತೇದಿ

(ಸಂಶೋಧಾತ್ಮಕ ಲೇಖ)

ರಾಷ್ಟ್ರಕವಿ **ಶ್ರೀ. ಗೋವಿಂದ ಪೈ,** ಮಂಜೇಶ್ವರ ಅವರಿಂದ



ಸಿಂಹಸೂರಿ ಎಂಬ ಯಾವನೊಬ್ಬ ಪ್ರಾಚೀನ ಜೈನಾಚಾರ್ಯನಿಂದ ರಚಿತವಾದ ಜೈನ ಜಗದ್ವರ್ಣನಾತ್ಮಕವಾದ 'ಲೋಕವಿಭಾಗ' ಎಂಬ ಗ್ರಂಥವನ್ನು ದಿಗಂಬರ ಜೈನನಾದ ಸರ್ವನಂದಿ ಎಂಬಾತನು ಸಂಪ್ರತಿಸಿ ಮುಗಿಸಿದ ತೇದಿಯನ್ನು ಕುರಿತ ಆ ಕೊನೆಯ ೨ ಪದ್ಯಗಳು ಆ ಹಸ್ತಪ್ರತಿಯಲ್ಲಿ ಹೀಗಿವೆ[೧]—

ವೈಶ್ವೇ ಸ್ಥಿತೇ ರವಿಸುತೇ ವೃಷಭೇ ಚ ಜೀವೇ ।
ರಾಜೋತ್ತರೇಷು ಸಿತಪಕ್ಷಮುಪೇತ್ಯ ಚಂದ್ರೇ... ॥೧॥
ಸಂವತ್ಸರೇ ತು ದ್ವಾವಿಂಶೇ ಕಾಂಚೀಶಸಿಂಹವರ್ಮಣಃ ।
ಅಶೀತ್ಯಗ್ರೇ ಶಕಾಬ್ದಾನಾಂ ಸಿದ್ಧಮೇತಚ್ಛತತ್ರಯೇ ॥೨॥

ಅಂದರೆ ಕಾಂಚಿಯ ಅರಸನಾದ, ಅತಏವ ಪಲ್ಲವ ವಂಶದವನಾದ, ಸಿಂಹವರ್ಮನ ಆಳಿಕೆಯ ೨೨ನೆಯ ಸಂವತ್ಸರಕ್ಕೆ ಸರಿಯಾದ ಶಾಲಿವಾಹನ ಶಕದ (ಶಾ. ಶ.) ೩೮೦ನೆಯ ವರ್ಷದಲ್ಲಿ, ಅಂದರೆ ಕ್ರಿಸ್ತಶಕದ (ಕ್ರಿ. ಶ.) ೪೫೮-೪೫೯ನೆಯ ವರ್ಷದಲ್ಲಿ ಆ ಗ್ರಂಥವು ಸಂಪ್ರತಿಸಿ ತೀರಿತು. ಅಂದಿನ ಗ್ರಹಸ್ಥಿತಿ ಹೀಗಿದ್ದಿತು—

(೧) 'ರವಿಸುತ' ಅಂದರೆ ಸೂರ್ಯನ ಮಗನಾದ ಶನಿ, 'ವೈಶ್ವ' ಅಂದರೆ ವಿಶ್ವೇದೇವತೆಗಳೇ ಅಧಿದೇವತೆಗಳಾಗಿರುವ ಯಾವ ನಕ್ಷತ್ರವಿದೆಯೊ ಆ ನಕ್ಷತ್ರದಲ್ಲಿದ್ದನು. ವಿಶ್ವೇದೇವತೆಗಳು ಅಧಿದೇವತೆಗಳಾಗಿ ಉಳ್ಳ ನಕ್ಷತ್ರವೆಂದರೆ ಉತ್ತರಾಷಾಢಾ ನಕ್ಷತ್ರ[೨], ಅತಏವ ಶನಿ ಉತ್ತರಾಷಾಢಾ ನಕ್ಷತ್ರದಲ್ಲಿದ್ದನೆಂದಾಗುತ್ತದೆ. ಕ್ರಾಂತಿಚಕ್ರದಲ್ಲಿಯ (ecliptic) ಅಶ್ವಿನ್ಯಾದಿ ಆ ೨೭ ಚಂದ್ರ ನಕ್ಷತ್ರಗಳಲ್ಲಿ ೨೧ನೆಯದಾದ ಉತ್ತರಾಷಾಢಾ ನಕ್ಷತ್ರವು ೨೬೬° ೪೦ ರಿಂದ ೨೮೦° ಅಂಶಗಳ (degrees) ವರೆಗೆ ವ್ಯಾಪಿಸಿರುತ್ತದೆ.

(೨) 'ಜೀವ' (=ಗ್ರೀಕ ಭಾಷೆಯಲ್ಲಿ Zeus) ಅಂದರೆ ಗುರು ವೃಷಭ ರಾಶಿಯಲ್ಲಿದ್ದನು. ವೃಷಭ ರಾಶಿ ಕ್ರಾಂತಿಚಕ್ರದ ಮೇಷಾದಿ ೧೨ ರಾಶಿಗಳಲ್ಲಿ ಎರಡನೆಯದು: ಅದು ೩೦° ರಿಂದ ೬೦° ಅಂಶಗಳ ತನಕ ವ್ಯಾಪಿಸಿದೆ.

(೩) 'ರಾಜೋತ್ತರೇಷು' ಎಂಬಲ್ಲಿಯ 'ಉತ್ತರ' ಎಂಬ ಹೆಸರು ಕ್ರಾಂತಿಚಕ್ರದಲ್ಲಿರುವ ಆ ೨೭ ಚಂದ್ರ ನಕ್ಷತ್ರಗಳಲ್ಲಿ 'ಉತ್ತರ' ಎಂಬ ಪೂರ್ವಪದದಿಂದ ಮೊದಲಾಗುವ (೧) ೧೨ನೆಯ ಉತ್ತರ(ರಾ)ಫಲ್ಗುನೀ, (೨) ೨೧ನೆಯ ಉತ್ತರಾಷಾಢಾ ಮತ್ತು (೩) ಉತ್ತರಭಾದ್ರಪದಾ ಅಥವಾ ಉತ್ತರಾಭಾದ್ರಾ ಎಂಬೀ ಮೂರು ನಕ್ಷತ್ರಗಳಿಗೂ[೩] ಸರಿಯಾಗಿ ಸಮನ್ವಯಿಸುತ್ತದೆ. ಹಾಗಾದರೆ 'ರಾಜೋತ್ತರ' ಎಂಬ ಸಮಸ್ತಪದಕ್ಕೆ, 'ಕುಜಾಶ್ವಿನೀ' (= ಕುಜವಾರದಂದಿನ ಅಶ್ವಿನೀ ನಕ್ಷತ್ರ, ಅಥವಾ ಅಶ್ವಿನೀ ನಕ್ಷತ್ರದಿಂದ ಒಡಗೂಡಿರುವ ಕುಜವಾರ), 'ಭೃಗುರೇವತೀ' (= ಶುಕ್ರವಾರದಂದು ಬಂದಿರುವ ರೇವತೀ ನಕ್ಷತ್ರ, ಅಥವಾ ರೇವತೀ ನಕ್ಷತ್ರದಿಂದ ಕೂಡಿರುವ ಶುಕ್ರವಾರ), 'ಶನಿರೋಹಿಣೀ' (=ಶನಿವಾರದಂದು ಒದಗಿರುವ ರೋಹಿಣೀ ನಕ್ಷತ್ರ, ಅಥವಾ ರೋಹಿಣೀ ನಕ್ಷತ್ರವಿರುವ ಶನಿವಾರ) ಎಂಬಂತೆ, 'ರಾಜ' ಎಂದು ಕರೆಯಲ್ಪಡುವ ಯಾವ ಗ್ರಹವಿದೆಯೊ ಆ ಗ್ರಹದ ಹೆಸರಿನ ವಾರದಂದು ಒದಗಿದ 'ಉತ್ತರ' ಎಂಬ ಆ ಮೂರು ನಕ್ಷತ್ರಗಳಲ್ಲಿಯ ಒಂದು ಅಥವಾ 'ಉತ್ತರ' ಎಂಬ ಆ ಮೂರು ನಕ್ಷತ್ರಗಳಲ್ಲಿಯ ಯಾವೊಂದರಿಂದ ಒಡಗೂಡಿರುವ, ಹಾಗೂ 'ರಾಜ' ಎಂದು ಕರೆಯಲ್ಪಡುವ ಗ್ರಹದ ಹೆಸರುಳ್ಳ ವಾರ ಎಂದು ನೇರಾಗಿ ಅರ್ಥವಾಗುತ್ತದೆ. ಸಪ್ತಾಹದ ಅವೇಳು ವಾರಗಳಿಗೆ ಹೆಸರುಗಳನ್ನು ಕೊಟ್ಟಿರುವ ಸೂರ್ಯಾದಿ ಸಪ್ತ ಗ್ರಹಗಳಲ್ಲಿ 'ರಾಜ' ಎಂದರೆ ಚಂದ್ರನೊಬ್ಬನೇ[೪] ವಿನಾ ಅನ್ಯಗ್ರಹವಲ್ಲ ಎಂದು ಕಂಡಿತವಿರುವುದರಿಂದ, 'ರಾಜೋತ್ತರ' ಅಂದರೆ ಸೋಮವಾರದಂದಿನ 'ಉತ್ತರ' ಎಂಬ ಆ ಮೂರು ನಕ್ಷತ್ರಗಳಲ್ಲಿ ಒಂದು, ಅಥವಾ ಆ ಮೂರು ನಕ್ಷತ್ರಗಳಲ್ಲಿಯ ಒಂದರಿಂದ ಒಡಗೂಡಿರುವ ಸೋಮವಾರ ಎಂದು ಸ್ಪಷ್ಟವಿದೆ.

(೪) ಚಂದ್ರನನ್ನು ಕುರಿತು 'ಸಿತಪಕ್ಷಮುಪೇತ್ಯ' ಎಂದಿರುವುದರಿಂದ, ಆಗ್ಗೆ ಅಮಾವಾಸ್ಯೆ ಕಳೆದು ಶುಕ್ಲಪಕ್ಷ ತೊಡಗಿ ಹೆಚ್ಚಾದರೆ ೨-೩ ದಿನಗಳಷ್ಟೇ ಆಗಿರಬೇಕು.

ಈ ಗ್ರಹಸ್ಥಿತಿಯನ್ನು ಆಧರಿಸಿ, 'ಲೋಕವಿಭಾಗ'ವನ್ನು ಸಂಪ್ರತಿಸಿ ಮುಗಿದ ದಿನಕ್ಕೆ ಸರಿಯಾದ ಕ್ರಿಸ್ತಶಕದ ತೇದಿಯನ್ನು ಇವರಿಬ್ಬರು ವಿದ್ವಾಂಸರು ಹೀಗೆ ಇಬ್ಬಗೆಯಾಗಿ ನಿಶ್ಚಯಿಸಿರುತ್ತಾರೆ.

(೧) ಕಾಶಿಯ ಅಧ್ಯಾಪಕರಾದ ಶ್ರೀಮಾನ್ ಶಶಿಪಾಲ ಝಾ (Sri Sasipal Jha) ಎಂಬವರು ಈ ತೇದಿ ಶಾ. ಶ.

---

೧. Mysore Archaeological Report MAR) ೧೯೧೦ (ಪುಟ ೪೬)

೨. ವೈಶ್ವೇ ಉತ್ತರಾಷಾಢಾಯಾವರ್ (ಬೃಹತ್ಸಂಹಿತಾ, ೨೩·೮) ವಿಶ್ವೇದೇವಾ ಉತ್ತರಾಷಾಢಾಯಾಃ (ಅದೇ, ೯೭·೫)

೩. ತ್ರೀಣ್ಯುತ್ತರಾಣಿ ಉತ್ತರಫಲ್ಗುನೀ ಉತ್ತರಾಷಾಢೋತ್ತರಭಾದ್ರಪದಾಃ (ಅದೇ, ೯೭.೬)

೪. ರಾಜಾ ತು ಪಾರ್ಥಿವೇ ನಿಶಾಕರೇ ಪ್ರಭೌ (ಹೇಮಚಂದ್ರನ ಅನೇಕಾರ್ಥಸಂಗ್ರಹ, ಶ್ಲೋ. ೨೯೨.)

೩೮೦ನೆಯ ಫಾಲ್ಗುಣ ಬಹುಳ ಅಮಾವಾಸ್ಯೆಯ ನಟ್ಟಿರುಳಿನ ಬಳಿಕಣ ಹೊತ್ತಿಗೆ ಸರಿಹೋಗುತ್ತದೆ ಎಂದಿರುತ್ತಾರೆ[೫]. ಅಂದರೆ ಅದು ಕ್ರಿ. ಶ. ೪೫೮ನೆಯ ಇಸವಿಯ ಮಾರ್ಚ ೧ನೆಯ ತಾರೀಕು ಶನಿವಾರದ ರಾತ್ರಿಯಾಗುತ್ತದೆ. ಅಂದು ಅಮಾವಾಸ್ಯೆ ಸೂರ್ಯೋದಯಾತ್ಪರ ೫॥ ತಾಸುಗಳ ವರೆಗೆ, ಅಂದರೆ ಹೆಚ್ಚು ಕಡಿಮೆ ಪೂರ್ವಾಹ್ಣ ೧೧॥ಗಂಟೆಯ (11-30 A. M.) ವರೆಗಷ್ಟೇ ಇದ್ದುದರಿಂದ, ಇವರ ನಿರ್ಣಯಿಕೆಯ ಅಂದಿನ ಸರಿರಾತ್ರಿಯಲ್ಲಿ ಉತ್ತರಾಭಾದ್ರೆಯಲ್ಲಿದ್ದ ಚಂದ್ರನು ಶುಕ್ಲಪಕ್ಷದಲ್ಲಿ ಕಾಲೂರಿದ್ದನಷ್ಟೇ. ಆದರೂ ಇವರ ತೇದಿಯಲ್ಲಿ ಈ ಕೆಲವು ಕೊರತೆಗಳು ಇರುವುದರಿಂದ ಅದನ್ನು ಒಪ್ಪಿಕೊಳ್ಳಲಾಗುವುದಿಲ್ಲ —

ಅಂದಿಗೆ ಬೃಹಸ್ಪತಿಯ ಭೋಗ (longitude) ೧೫°೨ ಅಂಶದಷ್ಟೇ ಇದ್ದುದರಿಂದ, ಆತನು ೦°ಯಿಂದ ೩೦°ಅಂಶಗಳ ವರೆಗೆ ವ್ಯಾಪಿಸಿರುವ ಮೇಷ ರಾಶಿಯಲ್ಲಿಯೇ ಇದ್ದನಲ್ಲದೆ, 'ಲೋಕವಿಭಾಗ'ದ ಸಂಪ್ರತಿಯಲ್ಲಿಹೇಳಿರುವಂತೆ ೩೦°ರಿಂದ ೬೦° ಅಂಶಗಳ ವರೆಗಣ ವೃಷಭ ರಾಶಿಯನ್ನು ಸೇರಿರಲಿಲ್ಲ ಎಂದಾಗುತ್ತದಷ್ಟೆ. ಈ ತೊಡಕಿನಿಂದ ತಪ್ಪಿಸಿಕೊಳ್ಳುವರೆ ಇವರು 'ವೃಷಭೇ ಚ ಜೀವೇ' ಎಂಬಲ್ಲಿಯ 'ವೃಷಭೇ' ಎಂಬುದಕ್ಕೆ ವೃಷಭರಾಶಿ ಎಂದು ಅಷ್ಟು ಸ್ಪಷ್ಟವಾಗಿರುವ ಅರ್ಥಮಾಡದೆ, ಅದನ್ನು 'ವೃಷ+ಭ' ಎಂದು ಪದಚ್ಛೇದಿಸಿ, ಅದರಲ್ಲಿಯ 'ವೃಷ' ಎಂದರೆ ಧರ್ಮ[೬], ಧರ್ಮ ಎಂದರೆ ಯಮ[೭], 'ಭ' ಎಂದರೆ ನಕ್ಷತ್ರ[೮], ಅತಏವ ವೃಷ+ಭ ಎಂದರೆ ಯಮದೇವತಾಕವಾದ ನಕ್ಷತ್ರ, ಅಂದರೆ ಭರಣೀ ನಕ್ಷತ್ರ[೯], ಎಂಬುದರಿಂದ ಆಗ್ಗೆ ಬೃಹಸ್ಪತಿ ಭರಣೀ ನಕ್ಷತ್ರದಲ್ಲಿ ಇದ್ದನೆಂದು ಅರ್ಥವಿಸಿರುತ್ತಾರೆ. ಮೇಷರಾಶಿಯಲ್ಲಿರುವ ಭರಣೀ ನಕ್ಷತ್ರವು ಕ್ರಾಂತಿಚಕ್ರದಲ್ಲಿ ೧೩° ೨೦ ರಿಂದ ೨೬° ೪೦ ಅಂಶಗಳ ವರೆಗೆ ಇರುವುದರಿಂದ ಅಂದು ೧೫° ೨ ಅಂಶಗಳ ಭೋಗವಿದ್ದ ಗುರು ಆಗ್ಗೆ ಭರಣೀ ನಕ್ಷತ್ರದಲ್ಲಿ, ಅಂದರೆ ಮೇಷ ರಾಶಿಯಲ್ಲಿ ಇದ್ದನೆಂಬುದೂ ದಿಟವೇ. ಆದರೆ 'ವೃಷಭೆ' ಎಂಬ ಶಬ್ದಕ್ಕೆ ಇಷ್ಟು ನೇರಾಗಿ, ಇಷ್ಟು ಪ್ರತ್ಯಕ್ಷವಾಗಿ, ಇಷ್ಟು ಸುಕರವಾಗಿ ಇರುವ 'ವೃಷಭ ರಾಶಿ' ಎಂಬ ಸ್ಪಷ್ಟವಾದ ಅರ್ಥವನ್ನು ಅವರೇ ಬಲ್ಲ ಯಾವ ಕಾರಣದಿಂದೇನೋ ನೀಗಿಬಿಟ್ಟು, ಯಮನಿಗೆ 'ವೃಷ' ಎಂಬ ಹೆಸರಿಲ್ಲವಾದರೂ 'ವೃಷ' ಅಂದರೆ ಧರ್ಮ, 'ಧರ್ಮ' ಅಂದರೆ 'ಯಮಧರ್ಮ' ಎಂಬೀ ಬಗೆಯಾಗಿ ಇವರು ಪ್ರಯತ್ನಪೂರ್ವಕವಾಗಿ ಹೊಸೆಹೊಸೆದು ಮಾಡಿರುವ ಈ ಕೃತಕ ಅರ್ಥವನ್ನು ಎಷ್ಟು ಮಾತ್ರಕ್ಕೂ ಅಂಗೀಕರಿಸಲಾಗುವುದಿಲ್ಲ. 'ವೃಷಭೇ ಚ ಜೀವೇ' ಎಂದರೆ ಆಗ್ಗೆ ಗುರು ವೃಷಭೆ ರಾಶಿಯಲ್ಲಿ ಇದ್ದನೆಂದೇ ಹೊರತು ಬೇರೇನೂ ಅಲ್ಲ. ಹೀಗೆ ಇವರ ನಿರ್ಣಯದ ತೇದಿಯಂದು ಗುರು ಮೇಷದಲ್ಲಿ ಇದ್ದನೇ ವಿನಾ ವೃಷಭಕ್ಕೆ ಇನ್ನೂ ಬಂದಿರಲಿಲ್ಲ ಎಂಬುದರಿಂದಲೂ ಇವರ ಎಣಿಕೆಯ ಮೇರೆಗೆ, ಸರ್ವ ಶುಭಕಾರ್ಯಕ್ಕೆ ತ್ಯಾಜ್ಯವಾದ ಅಮಾವಾಸ್ಯೆಯ ಸರಿರಾತ್ರಿಯಲ್ಲಿ ಆ ಸಂಪ್ರತಿ ಬರೆದು ಮುಗಿದಿರಬೇಕೆಂಬುದು ತೀರ ಸಂಶಯಾಸ್ಪದವೆಂದು ತೋರುವುದರಿಂದಲೂ ಇವರು ನಿಶ್ಚಯಿಸಿರುವ ತಾರೀಕು ಎಂದಿಗೂ ಸರಿಯಲ್ಲವೆಂದು ಧೈರ್ಯವಾಗಿ ಹೇಳಬಹುದು.

(೨) ಡಾ॥ ಫ್ಲೀಟರು (Dr. J. F. Fleet) ಗೊತ್ತುಹಚ್ಚಿರುವ ಮೇರೆಗೆ ಈ ತೇದಿ ಶಾ. ಶ. ೩೮೦ನೆಯ ಭಾದ್ರಪದ ಬಹುಳ ಅಮಾವಾಸ್ಯೆ, ಅಂದರೆ ಕ್ರಿ. ಶ. ೪೫೮ನೆಯ ಆಗೋಸ್ತು ೨೫ನೆಯ ತಾರೀಕು ಸೋಮವಾರ[೧೦],ಆಗುತ್ತದೆ. ಅಂದಿನ ವಾರವು ಸೋಮವಾರ, ಅಂದಿನ ನಕ್ಷತ್ರ ಉತ್ತರಾಫಲ್ಗುನಿ ಆಗಿದ್ದುದರಿಂದ, 'ರಾಜೋತ್ತರೇಷು' ಎಂಬುದರ ಅರ್ಥವನ್ನು ಇವರು ಸರಿಯಾಗಿ ಮನಗಂಡಿರುತ್ತಾರೆ ಎಂಬುದು ನಿಜವೇ ಆದರೂ ಈ ಬೇರೆ ಕಾರಣಗಳಿಂದ ಇವರ ತೇದಿಯೂ ಸರಿಯಲ್ಲ ಎನಿಸುತ್ತದೆ. ಏಕೆಂದರೆ—

(ಕ) ಅಂದು ಸುರ್ಯೋದಯಾತ್ಪರ ಹೆಚ್ಚುಕಡಿಮೆ ೧೦ತಾಸುಗಳ ವರೆಗೆ, ಅಂದರೆ, ಅಪರಾಹ್ಣ ೪ ಗಂಟೆಯ (4 P.M.) ವರೆಗೆ ಭಾದ್ರಪದ ಬಹುಳ ಅಮಾವಾಸ್ಯೆಯ ತಿಥಿಯೇ ನಡೆಯುತ್ತಲಿದ್ದು, ಆ ವರೆಗಾದರೂ ಚಂದ್ರನು ಇನ್ನೂ ಕೃಷ್ಣಪಕ್ಷದಲ್ಲಿ ಇದ್ದನಲ್ಲದೆ ಶುಕ್ಲಪಕ್ಷವನ್ನು ಸೇರಿರಲಿಲ್ಲ. ಹಾಗಾದರೆ ಆ ಸಂಪ್ರತಿ ಬರೆದು ಮುಗಿದುದು, 'ಸಿತಪಕ್ಷಮುಪೇತ್ಯ ಚಂದ್ರೇ' ಎಂದುದಕ್ಕೆ ಯಥೋಚಿತವಾಗಿ, ಆ ಅಮವಾಸ್ಯೆ ಕಳೆದ ಬಳಿಕ ಆಶ್ವಯುಜ ಶುದ್ಧ ಪಾಡ್ಯ ತೊಡಗಿದ ಅಂದಿನ ಸಂಜೆಯ ತರುವಾಯ ಎಂದಾಗುತ್ತದೆ. ಅಷ್ಟು ಉದ್ದಕ್ಕೂ ಅಮಾವಾಸ್ಯೆ ಮುಟ್ಟಿರುವ, ಅತಏವ ಚಂದ್ರದರ್ಶನವಿಲ್ಲದೆ ತೀರ ತ್ಯಾಜ್ಯವೆನಿಸುವ ಅಂದಿನ ತಿಥಿ ಆ ಗಳಿಗೆಯ ಮಟ್ಟಿಗೆ ಶುಕ್ಲ ಪಾಡ್ಯವೇ ಆದರೂ ಯಾವ ಶುಭಕಾರ್ಯಕ್ಕೂ ಸಲ್ಲದಷ್ಟೇ. ಅಂಥಾ ಹೊತ್ತಿನಲ್ಲಿ ಸರ್ವನಂದಿ ತಾನೆಷ್ಟೋ ಸಮಯದಿಂದ ಹಿಡಿದಿದ್ದ ಆ ಸಂಪ್ರತಿಯ ಕಾರ್ಯವನ್ನು ಕೊನೆಗಾಣಿಸುವನೆಂದು ನಂಬಲಾಗುವದಿಲ್ಲ.

(ಖ) ಆಗ್ಗೆ ಶನಿ ವಕ್ರಗತಿಯಲ್ಲಿ ಇದ್ದುದರಿಂದ ಆತನ ಭೋಗ ೨೬೨° ೧ ಅಂಶವಾಗಿದ್ದು ಅಂದು ಆತನು ಕ್ರಾಂತಿಚಕ್ರದಲ್ಲಿ ೨೫೩° ೨೦ ರಿಂದ ೨೬೬° ೪೦ ಅಂಶಗಳವರೆಗೆ ಉಳ್ಳ ಜಲದೇವತಾಕವಾದ ಪೂರ್ವಾಷಾಢಾ ನಕ್ಷತ್ರದಲ್ಲಿ[೧೧] ಇದ್ದನೇ ಹೊರತು 'ಲೋಕವಿಭಾಗ'ದ ಸಂಪ್ರತಿಯಲ್ಲಿ ಹೇಳಿರುವಂತೆ (ಪೂರ್ವಾಷಾಢೆಯಿಂದ ಮುಂದಣ) ವೈಶ್ವ ಎನಿಸುವ ಉತ್ತರಾಷಾಢೆಯಲ್ಲಿ (೨೬೬° ೪೦ರಿಂದ ೨೮೦°) ಅಲ್ಲ.

ಆದಕಾರಣ ಈ ವಿದ್ವಾಂಸರಿಬ್ಬರ ಎಣಿಕೆಯ ಮೇಲಣ ಅವೆರಡೂ ತೇದಿಗಳನ್ನು ವಿಸರ್ಜಿಸಿ, 'ಲೋಕವಿಭಾಗ'ವನ್ನು ಸಂಪ್ರತಿಸಿ ಮುಗಿಸಿದ ದಿನ ಶಾ. ಶ ೩೮೦ನೆಯ ಪುಷ್ಯ ಶುಕ್ಲ ತದಿಗೆ, ಅಂದರೆ ಕ್ರಿ. ಶ. ೪೫೮ನೆಯ ನವಂಬರ ೨೮ನೆಯ ತಾರೀಖು ಸೋಮವಾರ ಎಂದು ನಾನು ನಿರ್ಣಯಿಸಿರುತ್ತೇನೆ. ಆಗ್ಗೆ ಶನಿಯ ಭೋಗ ೨೬೭° ೯ ಅಂಶವಾಗಿದ್ದು ಆತನು ವಕ್ರಗತಿಯನ್ನು ನೀಗಿ ಉತ್ತರಾಷಾಢೆಗೆ ಮರಳಿದ್ದನಷ್ಟೆ. ಬೃಹಸ್ಪತಿಯ ಭೋಗ ೪೫° ೭ ಆಗಿದ್ದು

೫. MAR ೧೯೧೦ ಪುಟ ೪೬.
೬. ವೃಷೋ ಗವಾಖುಧರ್ಮಯೋಃ (ಅನೇಕಾರ್ಥಸಂಗ್ರಹ, ಶ್ಲೋ. ೫೭)
೭. ಯಮಃ ಕೃತಾಂತಃ...ಅಂತಕಧರ್ಮರಾಜಾ (ಹೇಮಚಂದ್ರನ ಅಭಿಧಾನಚಿಂತಾಮಣಿ, ಶ್ಲೋ. ೧೮೪.)
೮. ಭಮುಡು (ಅನೇಕಾರ್ಥ ಸಂಗ್ರಹ, ಶ್ಲೋ. ೯)
೯. ಭರಣೀ ಯಮದೇವತಾ (ಅಭಿಧಾನಚಿಂತಾಮಣಿ, ಶ್ಲೋ. ೧೦೮)

೧೦. Epigraphia Indica, XIV ಪುಟ ೩೩೪
೧೧. ಜಲದೇವೇ ಪೂರ್ವಾಷಾಢಾಯಾಮ್ (ಬೃಹತ್ಸಂಹಿತಾ, ೧೧-೫೯.)

ಆತನು ವೃಷಭ ರಾಶಿಯಲ್ಲಿದ್ದನು. ಅಂದಿನ ನಕ್ಷತ್ರವೂ ಉತ್ತರಾಷಾಢೆ ಆಗಿದ್ದು, ಉತ್ತರಾಷಾಢೆಯಿಂದ ಒಡಗೂಡಿರುವ ಸೋಮವಾರದ ಆ ದಿನವು 'ರಾಜೋತ್ತರ'ವಾಗಿತ್ತು ಮಾತ್ರವಲ್ಲ, ಅಂದಿಗೆ ಚಂದ್ರನು ಶುಕ್ಲಪಕ್ಷವನ್ನು ಸೇರಿ ಎರಡು ದಿನಗಳು ಆಗಿದ್ದುವಷ್ಟೆ.

ಆ ಗ್ರಂಥವನ್ನು ಸಂಪ್ರತಿಸಿದ ದಿನವನ್ನು 'ರಾಜೋತ್ತರ' ಎಂದಿರುವುದರಿಂದ ಆ ದಿನವು 'ಉತ್ತರ' ಎಂಬ ಪೂರ್ವಪದದಿಂದ ಮೊದಲಾಗುವ ನಕ್ಷತ್ರದಿಂದ ಕೂಡಿರಬೇಕೆಂದು ಸ್ಪಷ್ಟವಿದೆ. ಅಂಥಾ ನಕ್ಷತ್ರಗಳಾದರೂ ಕ್ರಾಂತಿಚಕ್ರದಲ್ಲಿ ಮೇಲೆ ಹೆಸರಿಸಿರುವ ಆ ಮೂರೇ. ಆ ಮೂರು ನಕ್ಷತ್ರಗಳು ಒದಗುವ ದಿನಗಳಾದರೊ ವರ್ಷದಲ್ಲಿ ಈ ಮೇಲಣ ಮೂರು, ಅಥವಾ (ಅಧಿಕಮಾಸ ಬಂದಿದ್ದರೆ, ಇಲ್ಲವೆ ನಕ್ಷತ್ರಮಾನದಲ್ಲಿ ವೃದ್ಧಿ-ಕ್ಷಯಗಳಿದ್ದರೆ) ಇವುಗಳ ಆಚೀಚೆಯ ಮೂರು, ಹೇಗೂ ಮೂರೇ ವಿನಾ ಬೇರೆ ದಿನವಿಲ್ಲ.

ದರ್ಶನ*

ಬಿಟ್ಟುಬಿಡು ಈ ಬಣಗು ಭಕ್ತಿಗಾನವನು,
ಇಟ್ಟುಬಿಡು ಇಟ್ಟುಬಿಡು ಜಪಮಾಲೆಯನ್ನು !
    ದೇಗುಲದ ಬಾಗಿಲುಗಳೆಲ್ಲವನು ಮುಚ್ಚಿ,
    ಕತ್ತಲೆಯ ಮೂಲೆಯಲಿ ಕುಳಿತು ಕಣ್ಮುಚ್ಚಿ,
ಪೂಜಿಸುತ್ತಿಹೆ ನೀನು ಯಾವ ದೇವನನು
ಅವ ನಿನ್ನ ಮುಂದಿಲ್ಲವೆಂಬುದನು ಕಾಣು !
    ಗೋಡೆಗಳ ನಡುವಿರಲು ಕೈದಿಯವನಲ್ಲ,
    ಕೇಳು, ಪೇಳುವೆನವನ ಜಾಗೆಗಳನೆಲ್ಲ.
ಒಕ್ಕಲಿಗನುಳುತಿರುವ ಬಿರುಸು ನೆಲದಲ್ಲಿ,
ಹಾದಿಮಾಡುವ ಕೂಲಿ ಕಲ್ಲೊಡೆಯುವಲ್ಲಿ,
    ಅವನಿರುವನವರೊಡನೆ ಮಳೆಬಿಸಿಲುಗಳಲಿ;
    ಧೂಳಿ ಮುಳುಗಿಹುದವನು ಹೊದ್ದಿರುವ ವಲ್ಲಿ.

ಬಿಟ್ಟು ಬಾ ನೀ ಹೊದ್ದ ಮಡಿವಸ್ತ್ರವನ್ನು
ಮುಟ್ಟು ಬಾ ಈ ಮಣ್ಣು ಹುಡಿಯ ನೆಲವನ್ನು
    ಮುಕ್ತಿ ಬೇಕೇ ಮುಕ್ತಿ ? ಎಲ್ಲಿಹುದು ಮುಕ್ತಿ ?
    ಮುಕ್ತಿಯೆಂಬುವದೊಂದು ಕಾಲ್ಪನಿಕ ಯುಕ್ತಿ !
ಸೃಷ್ಟಿಕರ್ತನೆ ತನ್ನ ಸೃಷ್ಟಿಯಲಿ ಸಿಲುಕಿ,
ಕಟ್ಟಿಕೊಂಡಿಹನೆಲ್ಲರನು ಪ್ರೇಮ ತುಳುಕಿ !
    ಧ್ಯಾನ ಮೌನದ ಮುದ್ರೆಯೊಡೆದು ಬಾ ಹೊರಗೆ
    ಪುಷ್ಪ ಧೂಪಾದಿಗಳ ಸರಿಸಿಟ್ಟು ಬದಿಗೆ.
ಬಟ್ಟೆಬರೆಗಳು ಹರಿದು ಹೊಲಸಾದರೇನು ?
ಘಟ್ಟಿ ಕಾರ್ಯಂಗೈದ ತೃಪ್ತಿ ಸಿಗದೇನು ?
    ಮೈ ನೀರುನೀರಾಗಿ ದುಡಿಯುವನ ಕೂಡ;
    ಮೈಮುರಿದು ದುಡಿಯುವದೆ ದರ್ಶನವು ನೋಡ !

—ಗಂಗಪ್ಪ ವಾಲಿ

*ಕವೀಂದ್ರ ರವೀಂದ್ರರ ಗೀತಾಂಜಲಿಯ ಒಂದು ವಚನದ ಭಾವಾನುವಾದ.

ಈ ದೀಪಾವಳಿಯು
ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ ಸುಖದಾಯಕವಾಗಲಿ!

ನಿಮಗೆ ಶ್ರೇಷ್ಠವಾದ ತಿಜೋರಿಗಳು ಬೇಕಲ್ಲವೆ?
ಹಾಗಾದರೆ
ದಿ ಪ್ರಭಾತ ಮತ್ತು ಕಂಪನಿ
— ಇವರು ತಯಾರಿಸುವ —
ತಿಜೋರಿ :: ಕಪಾಟು :: ಕ್ಯಾಶಬಾಕ್ಸ
ಮುಂತಾದವುಗಳನ್ನೇ ಕೊಂಡುಕೊಳ್ಳಿರಿ.
ಇವರ ವೈಶಿಷ್ಟ್ಯ :: ಭದ್ರತೆ, ಶಾಂತತೆ, ನಿಶ್ಚಿಂತತೆ, ಭರವಸೆ.



ವಿವರಗಳಿಗೆ : ದಿ ಪ್ರಭಾತ ಮತ್ತು ಕಂಪನಿ, ಸ್ಟೇಶನ್‌ರೋಡ--ಹುಬ್ಬಳ್ಳಿ.

★ ಹತ್ತು ಹನ್ನೆರಡು ವರ್ಷಗಳಿಂದ ನಾವು 'ಪ್ರಗತಿಶೀಲ ಸಾಹಿತ್ಯ'ದ ಕೂಗು ಕೇಳುತ್ತಿದ್ದೇವೆ. ಆ ತಲೆಪಟ್ಟಿ ಹಚ್ಚಿಕೊಂಡ ಸಾಹಿತ್ಯವೂ ಸಾಕಷ್ಟು ಹುಟ್ಟಿಕೊಂಡಿದೆ. ಆದರೆ ಅದರ ಭವಿತವ್ಯವೇನು ? ಈ ವರೆಗೆ ಅದೇನು ಸಾಧಿಸಿದೆ ? ಹೊಸದೇನನ್ನೂ ಸೃಷ್ಟಿಸಲು ಅದು ಸಮರ್ಥವಾಗಿಲ್ಲ. ಶ್ರೀಮಂತರಿಗೆ ತೊಡಿಸಲಾಗುತ್ತಿದ್ದ ಶೃಂಗಾರದ ಹೊದಿಕೆಯನ್ನೇ ಅದು ರೈತ ಕೂಲಿಕಾರರಿಗೆ ತೊಡಿಸಿದೆ. ಶಾಶ್ವತ ರೂಪದ ಹೊಸ ಬಗೆಯ ಸಾಹಿತ್ಯವನ್ನು ಕೊಡಲು ಅದು ಸಮರ್ಥವಾಗದಿದ್ದರೆ ಅದರ ಭವಿತವ್ಯ ಅಂಧಕಾರಮಯವೇ ಆಗಿದೆ.

ಪ್ರಗತಿಶೀಲ ಸಾಹಿತ್ಯ ಮತ್ತು ಅದರ ಭವಿತವ್ಯ

ಲೇಖಕರು – **ಪಂ. ಮಂಜುನಾಥ ಶಾಸ್ತ್ರಿ,** ಘಟಕೇಶ್ವರ.

ಕಳೆದ ೧೧-೧೨ ವರ್ಷಗಳಿಂದ ಕನ್ನಡ 'ಪ್ರಗತಿಶೀಲಸಾಹಿತ್ಯ' ಎಂಬ ಶಬ್ದ ಕೇಳಿಬರುತ್ತಿದೆ. ಪ್ರಗತಿಶೀಲವಲ್ಲದ ಸಾಹಿತ್ಯವಾವುದೂ 'ಸಾಹಿತ್ಯ'ವೆಂಬ ಯಥಾರ್ಥ ನಾಮ ಪಡೆಯಲಾರದಾದರೂ ಯುಗ ಯುಗಾಂತರಗಳ ವರೆಗೆ ಅಚ್ಚಳಿಯದೆ ಶಾಶ್ವತವಾಗಿ ನಿಲ್ಲುವ ಸಾಹಿತ್ಯವೇ ಪ್ರಗತಿಶೀಲ ಸಾಹಿತ್ಯವೆನ್ನಬೇಕು. ಆದರೆ, 'ಪ್ರಗತಿಶೀಲ' ಶಬ್ದವೀಗ ವಿಶಿಷ್ಟವಾದೊಂದು ಸಾಹಿತ್ಯವನ್ನು ಕುರಿತು ಪ್ರಯೋಗಿಸಲ್ಪಡುತ್ತಿದೆ. ನಮ್ಮ ಸಾಹಿತ್ಯದಲ್ಲಿ ಅದು ಒಂದು 'ವಾದ'ದ ರೂಪದಲ್ಲಿ ಪ್ರಚಲಿತವಾಗಿದೆ. ಕನ್ನಡದಲ್ಲಿ ಮಾತ್ರವೇ ಅಲ್ಲ, ನಮ್ಮ ದೇಶದ ಇತರ ಭಾಷೆಗಳಲ್ಲಿಯೂ ಇದೇ ಅರ್ಥದಲ್ಲಿ ಅದರ ಪ್ರಯೋಗವಾಗುತ್ತಿದೆ. ಐತಿಹಾಸಿಕ ದೃಷ್ಟಿಯಿಂದ ಇದನ್ನು ಅನುಭಾವವಾದ (mysticism)ದ ಪ್ರತಿಕ್ರಿಯೆಯೆಂದೂ ಹೇಳಬಹುದು. ಎಷ್ಟೋ ವರ್ಷಗಳ ವರೆಗೆ ಕನ್ನಡ ಸಾಹಿತ್ಯದಲ್ಲಿ ಕಲ್ಪನೆಯ ಹಾಗು ಆದರ್ಶದ ಲೋಕ ಸೃಷ್ಟಿ ನಡೆಯುತ್ತಾ ಬಂದಿದೆ. ಕಲಾಕಾರನು ತನ್ನದೇ ಸುಖ, ಉಲ್ಲಾಸ, ಅಭಾವ ಮತ್ತು ವಿಷಾದಗಳನ್ನು ಸೃಷ್ಟಿಸುತ್ತಾ ಬಂದಿದ್ದಾನೆ. ದೃಶ್ಯ ಜಗತ್ತಿನಲ್ಲಿ ಕಣ್ಣುಮುಚ್ಚಿ ಅದೃಶ್ಯ ಜಗತ್ತಿನಲ್ಲಿ ವಾಯುವೇಗದಲ್ಲಿ ಸುತ್ತಿದ್ದಾನೆ; ಸುತ್ತಿಲ್ಲದಿರಬಹುದು, ಸುತ್ತುವ ಕಲ್ಪನೆಯನ್ನಂತೂ ಅವಶ್ಯವಾಗಿ ಮಾಡಿದ್ದಾನೆ. ಕಣ್ಣುತೆರೆದು ದೃಶ್ಯ ಜಗತ್ತಿನತ್ತ ನೋಡೋಣವೆಂಬ ಇಚ್ಛೆ ಅವನಲ್ಲಿ ಹುಟ್ಟಲಿಲ್ಲ. ತನ್ನ ನಾಲ್ಕೂ ಕಡೆ ಹಬ್ಬಿದ ಆರ್ತನಾದಕ್ಕೆ ಅವನ ಮಾನಸದಲ್ಲಿ ಬೆಲೆಯೇ ಇರಲಿಲ್ಲ. ಅವನ ಅನುಭವವು ಸಾಲ ಕೊಂಡ ವಸ್ತುವಿನಂತೆ ಯಥಾರ್ಥತೆಗೆ ಬಹು ದೂರವಿತ್ತು. ಸಂಸ್ಕೃತ, ಬಂಗಾಲಿ, ಇಂಗ್ಲೀಷ್ ಭಾಷೆಗಳ ಪ್ರಮುಖ ಕವಿಗಳ ಭಾವ ಅವರಲ್ಲಿ ಕಾಣಬಹುದಿತ್ತು. ಹೊಸ ಬಾಟ್ಲಿಯಲ್ಲಿ ಹಳೆಯ ಸರಾಯಿಯಿಟ್ಟಂತಿತ್ತು ಆ ದೃಶ್ಯ. ಯಥಾರ್ಥ ಅನುಭವವು ಕಲಾಕಾರನ ಕಲ್ಪನೆಗೆ ಎಟಕಲೇ ಇಲ್ಲ. ಒಂದೇ ಭಾವನೆಯ, ಒಂದೇ ರಸದ ಚಿತ್ರಗಳನ್ನು ಎಷ್ಟರ ವರೆಗೆ ಚಿತ್ರಿಸಬಹುದಾಗಿತ್ತು?

ದೇಶದಲ್ಲಿ ಸಾಮ್ಯವಾದ (ಕಮ್ಯುನಿಜಂ)ದ ತರಂಗಗಳೆದ್ದವು. ಅನೇಕ ಕಡೆ ನಡೆದ ಪಿತೂರಿಯ ದಾವೆಗಳು ನವಯುವಕರನ್ನು ರಶ್ಯದ ಸಾಮ್ಯವಾದದತ್ತ ಸೆಳೆದವು. ಮರೆಮರೆಯಲ್ಲೇ ಜಾರಶಾಹಿಯ ವಿನಾಶ, ಪ್ರಜಾರಾಜ್ಯಸ್ಥಾಪನೆ, ಮಜದೂರ-ರೈತರ ಭಾಗ್ಯೋದಯಗಳನ್ನು ಚಿತ್ರಿಸಿದ ರಶ್ಯದ ಕ್ರಾಂತಿಯ ಇತಿಹಾಸಗಳು ಓದಲ್ಪಟ್ಟವು. ಇತ್ತ ಕೆಲ ಸಾಹಿತ್ಯಮರ್ಮಜ್ಞ ಭಾರತೀಯರು ಇಂಗ್ಲೆಂಡಿನಿಂದ ಹೊಸ ಹುರುಪನ್ನು ತಂದರು ದೇಶದ ಕಲಾಕಾರರ; ಗಮನವನ್ನು ಯಥಾರ್ಥವಾದದತ್ತ ಸೆಳೆದರು. ಅವರು ಪ್ರಾಚೀನತೆಯ ಕೋಟೆಯಲ್ಲೇ ಹುದುಗಿದ್ದ ದೇಶದ ಸಾಹಿತ್ಯವನ್ನು ವಿಶ್ವಸಾಹಿತ್ಯದ ಆಧುನಿಕತಮ ಪ್ರವೃತ್ತಿಗಳಿಂದ ತುಂಬಿದರು. ಬೇರೆ ಬೇರೆ ಪ್ರಾಂತಗಳಲ್ಲಿ ಯುಗಾಂತರವನ್ನುಂಟುಮಾಡುವ ಸಾಹಿತ್ಯಕೇಂದ್ರಗಳ ಸ್ಥಾಪನೆಯಾಯಿತು. ಅವನ್ನು ಪ್ರಗತಿಶೀಲ ಸಾಹಿತ್ಯ ಸಂಘಗಳೆಂದು ಕರೆದರು.

ಆಗ ಜೀರ್ಣಶೀರ್ಣವಾದ ಪ್ರಾಚೀನ ಕಾವ್ಯಮಂಟಪದಲ್ಲಿ ವಿಹರಿಸುತ್ತಿದ್ದ ಕನ್ನಡ ಸಾಹಿತಿಗಳು ಬೇಗನೇ ಪ್ರಗತಿವಾದದ ಪತಾಕೆಯ ತಳಕ್ಕೆ ಬಂದು ಸೇರಿದರು; ಆಕಾಶದ ತಾರಕೆಗಳನ್ನೆಣಿಸುವುದನ್ನು ಬಿಟ್ಟು, ತಮ್ಮ ಚರಣತಲದಲ್ಲಿ ಬೆಳೆದ ಹುಲ್ಲು, ಎದುರಿನಲ್ಲಿ ಹುಲ್ಲಿನ ಬುಟ್ಟಿಯನ್ನು ತಲೆಯ ಮೇಲೆ ಹೊತ್ತ ರೈತ ಹೆಂಗಸು, ಎಡಗಡೆಯಲ್ಲಿ ಹಾರೆ ಪಿಕಾಸಿ ಹಿಡಿದು ಅಗೆಯುತ್ತಿರುವ ರೈತ ಇವರತ್ತ ದೃಷ್ಟಿ ಬೀರತೊಡಗಿದರು. ಇಂತಹ ಕಲಾಕಾರರಲ್ಲಿ ಇವರ ರೇಖಾಚಿತ್ರಗಳನ್ನು ಬಿಡಿಸಿ ಸಂತುಷ್ಟರಾಗುವವರು ಕೆಲವರು; ಈ ಪ್ರಾಣಿಗಳ ಜೊತೆಯಲ್ಲಿ ತಮ್ಮ ಪ್ರಾಣಸ್ಪಂದನವನ್ನೂ ಸೇರಿಸಲು ಆತುರರಾಗಿ ಸುಖದುಃಖಗಳಲ್ಲಿ ಸಹಭಾಗಿಗಳಾಗಿ ಒಡನಾಡಿತನದಿಂದ ಅಭಾವಗಳನ್ನೂ ಭಾವಗಳನ್ನೂ ಸೃಷ್ಟಿಸಬಯಸುವವರು ಹಲವರು.

ಕೆಲ ಕಲಾಕಾರರು ಪ್ರಾಚೀನಕಾಲದ ಶೃಂಗಾರ ಪರಂಪರೆಯನ್ನು ಅಂಗೀಕರಿಸಿದ್ದರಿಂದ ಪ್ರಗತಿಶೀಲರಾದ ಮೇಲೆ ಕಿಸಾನ-ಮಜದೂರರ ರೇಖಾಚಿತ್ರಗಳೊಂದಿಗೆ ಅವರಲ್ಲಿ ವಿಷಯವಾಸನೆಯ ಬಣ್ಣವನ್ನು ಬಳಿದರು. ಪಾತ್ರೆ ತೊಳೆಯುವವಳ, ಹುಲ್ಲು ಹೊರುವವಳ ದಯನೀಯ ಸ್ಥಿತಿಯೊಂದಿಗೆ ಅವರ ಯೌವನಭರದಿಂದ ಪ್ರಕಟವಾದ ವಿಚಾರಗಳನ್ನೂ ಉತ್ತೇಜಕ ಭಾಷೆಯಲ್ಲಿ ವರ್ಣಿಸಿದರು. ಹೀಗಾಗಿ ಕಲಾಕಾರನ ಹಿಂದಿನ ಮತ್ತು ಇಂದಿನ ಕಲೆಯಲ್ಲಿ ಏನೊಂದೂ ವ್ಯತ್ಯಾಸ ಕಂಡುಬರಲಿಲ್ಲ. ಹಿಂದೆ ಅವನು ಯಾವದೋ ಕಲ್ಪನಾಲೋಕದ ಸುಂದರಿಯ ಅಂಗಗಳನ್ನೂ ಭಾವಭಂಗಿಗಳನ್ನೂ ಚಿತ್ರಿಸುತ್ತಿದ್ದನು. ಇಂದು ಯಥಾರ್ಥ ಲೋಕದ ಕಿಸಾನ ಮಜದೂರ--ನಾರಿಯರ ಅಂಗಗಳತ್ತ ನಟ್ಟ ದೃಷ್ಟಿಯಿಂದ ನಿಟ್ಟಿಸುತ್ತಿರುತ್ತಾನೆ. ಇವೆಲ್ಲವೂ ಯಥಾರ್ಥವಾದದ ಮರೆಯಲ್ಲಿ! ಕಥಾಸಾಹಿತ್ಯದಲ್ಲಿ ಈ ಯಥಾರ್ಥವಾದದ ಪ್ರಗತಿಯಿಂದಾಗಿ ಸಮಾಜದಲ್ಲಿ ಸ್ತ್ರೀಪುರುಷರಿಬ್ಬರ ಸಂಬಂಧಗಳು ಮಾತ್ರ ಕಂಡುಬರುತ್ತಿವೆ. ಪ್ರೇಮವೆಂದರೆ, ಯೌವನ-ಆಕರ್ಷಣ ಮಾತ್ರವೆಂದು ಭಾವಿಸಲಾಗು

ತ್ತಿದೆ. ಮಾತಾ-ಪುತ್ರ, ಭಗಿನೀ-ಭ್ರಾತಾ, ಇವರ ಪ್ರೇಮದ ನೈಸರ್ಗಿಕತೆಯು ಮಾನವಸಂಸ್ಕಾರದಲ್ಲೇ ಇದ್ದಿಲ್ಲವೇನೊ, ಎಂದು ತೋರುತ್ತಿದೆ. ದಾಸಸಾಹಿತ್ಯದಿಂದ ಪರಿಪೂರ್ಣವಾದ ಆಧ್ಯಾತ್ಮಿಕತೆಯು ಪ್ರಗತಿವಾದಿಗಳಿಗೆ ವಿಕೃತವಾದ ಮೆದುಳಿನ ಪ್ರತಿಕ್ರಿಯೆಮಾತ್ರವಾಗಿಬಿಟ್ಟಿದೆ. ವ್ಯಕ್ತಿಪೂಜೆ – ಆ ವ್ಯಕ್ತಿ ಎಷ್ಟೇ ದೊಡ್ಡದಾಗಿರಲಿ– ಅಸ್ವಾಭಾವಿಕವೆಂದು ಭಾವಿಸಲ್ಪಡುತ್ತಿದೆ. ಸಮಾನತೆಯ ಅಳತೆಕೋಲು ಇಷ್ಟರ ಮಟ್ಟಿಗೆ ಮುಂದುವರಿದಿದೆ. ಈ ನವಮತವಾದಿ ಸಾಹಿತ್ಯದ ಬೆನ್ನ ಹಿಂದೆ ಯಾವ ಆಧಾರವಿದೆಯೆಂಬುದೇ ದೊಡ್ಡ ಪ್ರಶ್ನೆ. ಇದು ಭೌತಿಕತಾವಾದಿಯುಗ. ಆಧ್ಯಾತ್ಮಿಕತೆಗಿಲ್ಲಿ ಸೂಜಿಯ ಮೊನೆಯಷ್ಟು ಸ್ಥಾನವಿಲ್ಲ. ಇದು ತರ್ಕಯುಗ, ವಿಶ್ವಾಸ ಶ್ರದ್ಧೆಗಳ ಕಾಲವಲ್ಲ. ಭೌತಿಕತಾವಾದವು ಪ್ರತ್ಯಕ್ಷವನ್ನು ನಂಬುತ್ತದೆ. ಅನುಮಾನಕಂಡರೆ ಅದಕ್ಕಾಗದು. ಬುದ್ಧಿಯಿಂದ ಸಾಧಿಸದ ಯಾವ ವಸ್ತುವಿನ ಅಸ್ತಿತ್ವವನ್ನೂ ನಂಬುವದಿಲ್ಲ. ಆದುದರಿಂದಲೇ ಕಲ್ಪನಾ ಸಾಹಿತ್ಯವು ಪ್ರಗತಿವಾದಿಗಳಿಗೆ ರುಚಿಸುವದಿಲ್ಲ. ಅವರ ಎದುರಿನಲ್ಲಿ ಭೂತಕಾಲವಿರುವದಿಲ್ಲ, ವರ್ತಮಾನ ಮಾತ್ರವಿರುತ್ತದೆ. ಅವರ 'ದರ್ಶನ'ವು ಜಗತ್ತು ಕ್ಷಣಪ್ರತಿಕ್ಷಣದಲ್ಲಿ ಪರಿವರ್ತನೆ ಹೊಂದುತ್ತದೆಂದು ಅವರಿಗೆ ಹೇಳಿಕೊಡುತ್ತಿದೆ. ಆ ಪ್ರತಿಕ್ಷಣದ ಪರಿವರ್ತನೆಯೇ ನಾವೀನ್ಯಕ್ಕೆಜನ್ಮವನ್ನೀಯುತ್ತದೆ. ಅಂದ ಮೇಲೆ ನಿನ್ನೆ ಸತ್ಯವಾಗಿದ್ದುದು ಇಂದೂ ಸತ್ಯವಾಗಿರಲು ಹೇಗೆ ಸಾಧ್ಯವಿದೆ? ಪ್ರಗತಿವಾದದ ದಾರ್ಶನಿಕ ವಿಚಾರಗಳು ಮಾರ್ಕ್ಸ ಸಿದ್ಧಾಂತದ ಪ್ರಭಾವಕ್ಕೊಳಗಾಗಿರುವುದರಿಂದ ಸರ್ವಥಾ ಸ್ಥೂಲ ದೃಷ್ಟಿಕೋಣವನ್ನುಳ್ಳದಾಗಿವೆ. ಈ ದರ್ಶನವನ್ನು ದ್ವಂದ್ವಾತ್ಮಕ ಭೌತಿಕವಾದ (Dialectical Materialism) ವೆಂದು ಹೇಳುತ್ತಾರೆ. ಎರಡು ಬೇರೆ ಬೇರೆ ವಸ್ತುಗಳ ಸಂಘರ್ಷದಿಂದ ಮೂರನೆಯ ವಸ್ತುವೊಂದು ನಿರ್ಮಾಣವಾಗುತ್ತದೆಂಬುದು ಅದರ ತಾತ್ಪರ್ಯ. ರಶ್ಯದಲ್ಲಿ ಶೋಷಕ ಶೋಷಿತರಲ್ಲಿ ಪ್ರಬಲ ಸಂಘರ್ಷ ತಲೆದೋರಿದಾಗ ದೇಶದ ರೂಪವನ್ನೇ ಬದಲಾಯಿಸಿದ ಆ ಪ್ರಸಿದ್ಧ ಕ್ರಾಂತಿ ಹುಟ್ಟಿಕೊಂಡಿತು. ಆದುದರಿಂದಲೇ ಪ್ರಗತಿವಾದಿಗಳು ಸಮಾಜದಲ್ಲಿ ವಿರೋಧಿ ವಿಚಾರಗಳನ್ನುಳ್ಳ ಎರಡು ಪಂಗಡಗಳಲ್ಲಿ ಸಂಘರ್ಷವನ್ನುಂಟುಮಾಡಬಯಸುತ್ತಾರೆ. ಆದರಿಂದ ನೂತನ ಪರಿಸ್ಥಿತಿಯೊಂದು ತಲೆದೋರಿ ನವಯುಗ ಪ್ರಾರಂಭವಾಗುವದೆಂದು ಅವರು ಹೇಳುತ್ತಾರೆ. ಭೌತಿಕತಾವಾದಿಯಾದುದರಿಂದ ಪ್ರಗತಿವಾದವು ಮಾನವನ ಮಾನಸಿಕ ಸ್ಥಿತಿಯಲ್ಲಿ ಕ್ರಮಶಃ ಪರಿವರ್ತನೆಯಾಗುತ್ತದೆಂದು ನಂಬುವದಿಲ್ಲ. ಮನಸ್ಸಿನಲ್ಲಿ ಸಂಸ್ಕಾರಗಳಾಗಲು ಸಮಯಾವಕಾಶ ಬೇಕಾಗುತ್ತದೆ. ಮಾರ್ಕ್ಸವಾದಿಗಳು ಮುಂದೆ ಬರುವ ದಿನಗಳಿಗಾಗಿ ನಿರೀಕ್ಷಣೆ ಮಾಡಲು ಇಚ್ಛಿಸುವದಿಲ್ಲ.

ಈ ಪರಿವರ್ತನಶೀಲರಾದ ಪ್ರಗತಿವಾದಿ ಸಾಹಿತ್ಯದ ಭಾವೀ ರೂಪವೇನಾಗುವುದು? ಎಂಬುದೀಗ ದೊಡ್ಡ ಪ್ರಶ್ನೆ. ರಶ್ಯದ ಪ್ರಗತಿಶೀಲ ಲೇಖಕ ಸಂಘದ ಒಂದು ಸಭೆಯಲ್ಲಿ ಈಪ್ರಶ್ನೆ ಬಂದಿತ್ತು. ಒಬ್ಬ ಸದಸ್ಯನು ಎದ್ದು ಹೇಳಿದನು :"ಇಂದಿನ ವರೆಗೆ ನಾವು ಬರೆದ ಸಾಹಿತ್ಯವೆಲ್ಲವೂ ಪ್ರಚಾರಾತ್ಮಕವಾಗಿದೆ. ಸಾಹಿತ್ಯವನ್ನು ಶಾಶ್ವತವಾಗಿಡುವ ತತ್ವಗಳಾವುವೂ ಅದರಲ್ಲಿಲ್ಲ. ಇಂತಹ ಸಾಹಿತ್ಯವು ಮುಂದಿನ ಜನಾಂಗಕ್ಕೆ ಸಂತುಷ್ಟಿಯನ್ನೀಯಬಲ್ಲುದೆಂಬುದರಲ್ಲಿ ಸಂದೇಹವಿದೆ." ಮಾಡಲ್ ಎನ್ನಿಸಿಕೊಳ್ಳುವ ಸಾಹಿತ್ಯದ ಅವಸ್ಥೆಯೇ ಇದೆಂದ ಮೇಲೆ ಇದನ್ನು ಅನುಕರಣೆಮಾಡಿ ಬರೆದ ನಮ್ಮಗಳ ಸಾಹಿತ್ಯದ ಸ್ಥಿತಿಯನ್ನೇನು ವರ್ಣಿಸೋಣ? ಯಾವ ವರ್ಗಕ್ಕಾಗಿ ನಾವು ಈ ಸಾಹಿತ್ಯಸೃಷ್ಟಿ ಮಾಡುತ್ತಿದ್ದೇವೋ ಆ ವರ್ಗದ ಭಾಷೆಗೂ ನಮ್ಮ ಸಾಹಿತ್ಯದ ಭಾಷೆಗೂ ಏನೊಂದೂ ಹೊಂದಾಣಿಕೆ ಇಲ್ಲದಿರುವುದೇ ನಮ್ಮ ಸಾಹಿತ್ಯದ ಒಂದು ಮಹಾ ದೋಷ. ಅಷ್ಟು ಮಾತ್ರವೇ ಅಲ್ಲ. ಆ ವರ್ಗದೊಂದಿಗೆ ಏಕರಸವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ ಸಾಹಿತಿಗಳು ನಮ್ಮಲ್ಲಿ ತೀರಾ ವಿರಳರೆನ್ನಬಹುದು. ನಮ್ಮ ದೃಷ್ಟಿಯಿಂದ ನೋಡೋಣವೆಂಬ ಭಾವನೆಯೂ ಅವರಲ್ಲಿರುವುದಿಲ್ಲ. ಅಂದಮೇಲೆ ಮಣಗಟ್ಟಲೆ ಕಾಗದದ ಮೇಲೆ ಬರೆಯಲ್ಪಟ್ಟ ನಮ್ಮ ಪ್ರಗತಿಶೀಲ ಸಾಹಿತ್ಯ ಯಾರ ಬೌದ್ಧಿಕ ಪಿಪಾಸೆಯನ್ನು ತಾನೇ ನೀಗಬಲ್ಲದು? ಆದುದರಿಂದ ಪ್ರಗತಿಶೀಲ ಸಾಹಿತ್ಯದ ಭವಿಷ್ಯವು ಅಂಧಕಾರದಲ್ಲಿದ್ದಂತೆ ಕಾಣುತ್ತಿದೆ. ಯುಗಭಾವನೆಯನ್ನು ತೆಗೆದುಕೊಂಡು ಚಿತ್ರಿಸಲ್ಪಟ್ಟ ಚರಿತ್ರೆಗಳೆಂದಿಗೂ ಸಮಯ ಕಳೆದ ಕೂಡಲೇ ನಷ್ಟವಾಗುವದಿಲ್ಲ. ಆದರೆ, ಕೇವಲ ಯುಗದ ಅಸ್ಥಿಪಂಜರ ಮಾತ್ರ ಉಳಿದಾಗ ಅದರ ಮೇಲೆ ಸುಂದರ ಶಬ್ದಗಳ ಆವರಣವನ್ನು ಹೊದ್ದಿಸಿ ಧ್ವನಿಗೈಯುವಂತೆಯೂ ಮಾಡಲಾಗುವದಿಲ್ಲ. ಆದುದರಿಂದ ಪ್ರಗತಿವಾದಿಗಳೀಗ ಯುಗಚಿತ್ರಗಳಲ್ಲಿ ಯುಗಭಾವನೆಯನ್ನು ತುಂಬುವ ಕೆಲಸದತ್ತ ವಿಶೇಷವಾಗಿ ಗಮನಕೊಡಬೇಕು. ಸಾಹಿತ್ಯವು ಯಾವದಾದರೊಂದು ವರ್ಗವಿಶೇಷದ ಕಟ್ಟಿಟ್ಟ ಬುತ್ತಿಯಲ್ಲ, ಅದರಲ್ಲಿ ಸಮಾಜದ ಪೂರ್ಣ ಚೇತನೆ ಪ್ರತಿಬಿಂಬಿತವಾಗಬೇಕು.

ನಮ್ಮಲ್ಲಿ ——— ಬನ್ನಿರಿ



ಎಲ್ಲ ನಮೂನೆಯ ತೂಕ, ತಕ್ಕಡಿ, ಕಾಟಾ ಕಲ್ಲು ವ ಮಾಪುಗಳು ಅಲ್ಲದೆ **ಬಂಗಾಲಿ ತೂಕದ ಕಲ್ಲುಗಳು** ಯೋಗ್ಯ ಬೆಲೆಗೆ ಸಿಗುತ್ತವೆ. ಸಮಕ್ಷಮ ಕಾಣಿರಿ ಇಲ್ಲವೆ ಪತ್ರದ್ವಾರ ಕೇಳಿರಿ.

ನಿಮ್ಮೆಲ್ಲರಿಗೂ
ದೀಪಾವಳಿಯು
ಮಂಗಲದಾಯಕವಾಗಲಿ

*

ಜಿ. ಸಿ. ಹೊಸಕಟ್ಟಿ

(ಲಾಯಸನ್ಸದಾರ)

ಹತ್ತೀಕಾಳಸಾಲ...ಹುಬ್ಬಳ್ಳಿ.



ಏನು ಮಹಾ ನೆಹರು ?

'ಬೀಚಿ' ಬರೆದುದು

★

★ ಏನು ಮಹಾ ನೆಹರು ? ತಿಮ್ಮನ ಪ್ರಭು ಗೌಡರೇನು ಕಡಿಮೆ ? ಗಂಡ ಗರುವದಿ ನೋಡೆ ಕೆಂಡವನೆ ನಗುವವರು, ತ್ಯಾಗದೊಳೊ ದಿನವೆರಡು ಜೈಲು ಕಂಡವರು; ಚಂಡ ಭಾಷಣದಲಿ ಅಖಂಡ ಮೂರ್ಮೂರು ತಾಸು, ಮುಂಡೆ ಕೆಳಗಾಗಿಯೂ ನಿಲ್ಲಬಲ್ಲವರು ! . . . ನಿಲ್ಲಿ ನಿಲ್ಲಿ ಅವರ ಸ್ವಂತ ಸ್ವತಂತ್ರ ಪತ್ರಿಕೆ ಹೊರಟಾಗ, ಶಾಸ್ತ್ರಿಗಳು ಬರೆಯುತ್ತಿರುವ ಅವರ ಆತ್ಮಚರಿತ್ರೆ ಹೊರಟಾಗ ನಿಮಗೆ ಅವರ ಮಹಿಮೆಯು ಪರಿಚಯವಾದೀತು . . .

ಕಿಡಿಕಿಡಿ ಆಗಿಬಿಟ್ಟಿದ್ದರು ಅದೇಕೋ, ನಮ್ಮ ಸಾಹುಕಾರರು, ಒಂದು ಸಾಯಂಕಾಲ. ಧಂ, ಧಂ, ಧಧಂ ಆಗಿದ್ದರು, ಶಾಪಕೊಡುವ ದುರ್ವಾಸರ ಅವತಾರವೇ ಅವರು, ತಪದ ಪ್ರಭಾವದಿಂದಲ್ಲ—ಕೋಪದ ಸ್ವಭಾವದಿಂದ. ಸಿಟ್ಟುಬಂದಾಗ ಅವರನ್ನು ಕೆಣಕುವ ಮೂಢತನಕ್ಕೆ ಯಾರು ತಾನೆ ಹೋದಾರು? ಅವರು ಸಿಟ್ಟಿಲ್ಲದೆ ಇರುವದು ಯಾವಾಗ? ನಗುವಾಗಲೂ ಸಿಟ್ಟಿನಿಂದಲೇ ನಗುವ ಸಭ್ಯರವರು. ಅದೂ ಅವರ ತಪ್ಪಲ್ಲ. ಸಿಟ್ಟಾಗಲೇ ಬೇಕಾದಾಗಲೂ ನಗುವ ಮೂರ್ಖರು ಇಲ್ಲವೇ? ಅದು ಒಂದು ತುದಿ, ಇದು ಇನ್ನೊಂದು ತುದಿ. ವೈವಿಧ್ಯ ದುಷ್ಟ ಸೃಷ್ಟಿಯ ನಿಯಮ.

ಇಂದಿನ ಸಿಟ್ಟಿಗಂತೂ ಕಾರಣವಿರಲೇಬೇಕೆಂದು ಹೊಳೆಯಿತು. ಆ ದೃಶ್ಯವನ್ನು ನೋಡಿದ ಕೂಡಲೆ ಪಾತ್ರೆಪಡಗುಗಳು ಗಡಿಗೆ ಸೋರೆಗಳು ಒಡೆದು ಮನೆಯ ತುಂಬ ಬೋಕಿಗಳು ಉರುಳಾಡುತ್ತಿದ್ದವು. ಮೇಜು ಗುದ್ದಿದಾಗ ಚೆಲ್ಲಿದ ಕಾಫಿಯು ಸಾಹುಕಾರರ ಭಾರೀ ಖಾದಿಯ ಉಡುಪಿನ ಸೌಂದರ್ಯವನ್ನೇ ಕೆಡಿಸಿಬಿಟ್ಟಿದ್ದಿತು. ನಾನು ಒಳಗೆ ಕಾಲಿಟ್ಟಾಗ ಅವರು ಹಿಂದೆ ಕೈಕಟ್ಟಿ ಶತಪಥ ಮಾಡುತ್ತಿದ್ದರು. ಅವರ ಆ ಅಚ್ಚ ಕಪ್ಪು ಮುಖಕ್ಕೆ ಸಹ ಕಮ್ಯೂನಿಸ್ಟರ ಬಣ್ಣವೇರಿದ್ದಿತು. ಹೊರ ಉಕ್ಕುತ್ತಿದ್ದ ನನ್ನ ನಗುವನ್ನು ಸಾಹಸದಿಂದ ನುಂಗಿಕೊಂಡು ಹೆಣಹೊರಲು ಬಂದವನಂತೆ ಗಂಭೀರ ಮುಖಮುದ್ರೆಯಿಂದ ಒಳಬಂದು, ಅವರ ಬೆನ್ನಿಗೆ ಕೈಮುಗಿದು ನನ್ನ ಮಾಮೂಲು ಕುರ್ಚಿಯಲ್ಲಿ ಬಾಲವನ್ನು ಮುದುಡಿಸಿಕೊಂಡ ಬೆಕ್ಕಿನಂತೆ ಕುಳಿತೆ.

'ಸ್ವಾತಂತ್ರ್ಯವಂತೆ........ಸ್ವಾತಂತ್ರ್ಯ........ ಈ ಕುರಿಗಳಿಗೇಕೆ ಸ್ವಾತಂತ್ರ್ಯ? .... ಮುಖಂಡರ ಪೂಜೆ ಮಾಡುವ ದಾಸಪ್ಪಗಳಿಗೆ ಸ್ವಾತಂತ್ರ್ಯವೇಕೆ? .... ಸಾಯಲಿಕ್ಕೆ...........' ಇನ್ನೂ ಏನೇನನ್ನೋ ಅಸ್ಪಷ್ಟವಾಗಿ ಒಟಗುಟ್ಟುತ್ತಿದ್ದರು. ಅವರ ಮಾತುಗಳೂ ಅವರ ತಲೆಯಲ್ಲಿದ್ದ ವಿಚಾರಗಳಷ್ಟೇ ಅಸ್ಪಷ್ಟವೋ ಏನೋ, ಎಲ್ಲವ ಬಲ್ಲ ಬಸವನೇ ಬಲ್ಲ! ಕೋಪವು ಒಂದು ಡಿಗ್ರಿಯಷ್ಟಾದರೂ ಇಳಿದರೆ 'ಈ ಸಭಾಮಂಟಪಕ್ಕೆ ಬಂದ ಕಾರಣವೇನು ಭೋಪರಾಕ್' ಎಂದು ಕೂಗಿ ಸಾರಥಿ ಕೆಲಸವನ್ನಾದರೂ ಆರಂಭಿಸಬಹುದೆಂದು ಕಾದು ಕುಳಿತೆ. ಕಾದು ಕಾದು ನನ್ನ ಬುಡದಲ್ಲಿದ್ದ ಕುರ್ಚಿಯೂ ಕಾಯ್ದಿತು, ಸಾಹುಕಾರರ ತುದಿಯಲ್ಲಿದ್ದ ತಲೆಯೂ ಕಾಯ್ದಿತು.

"ಅವನೊಬ್ಬ ದೇವರೇನು.......?" ಗಟ್ಟಿಯಾಗಿಯೆ 'ಆತ್ಮಗತ' ಮಾಡಿಕೊಂಡು ನನ್ನ ಮುಖವನ್ನು ದುರುದುರು ನೋಡಿದರು, ಇರುಕಲ ಎತ್ತಿನಂತೆ. ಆಗ ನೀವು ನೋಡಬೇಕಿತ್ತು ನನ್ನ ಮುಖವನ್ನು! ಅವನು ಎಂದರೆ ಯಾರು ಎಂದು ಕೇಳಿದರೆ ಆ 'ಅವನ' ಗತಿ ಏನಾಗುತ್ತದೋ? ಸುಮ್ಮನೆ ಕುಳಿತರೆ ಸಾಹುಕಾರರ ಕೋಪವು ನನ್ನ ಮೇಲೆಯೇ ಹೊರಳಿ ಕೊಳೆಯ ಹೊಳೆಯಾಗಿ ಹರಿದುಬಿಟ್ಟರೆ?

"ನೀನೇ ಹೇಳೋ ತಿಮ್ಮಾ, ಅವನೇನು ದೇವರೇನು?" ಎಂದೊಂದು ಪ್ರಶ್ನೆಯನ್ನು ನೀಟಾಗಿ ಬಿಟ್ಟರು ನನ್ನ ಮುಖಕ್ಕೆ.

"ಆ್ಯ, ಅವನ ತಲೆ. ಅವನೆಲ್ಲಿಯ ದೇವರು?" ಮಾತು ಮುರಿದೆ. ಅವರ ಆ 'ಅವನು' ಯಾರೋ ಅವನ ಆ ದೇವನೇ ಬಲ್ಲ.

"ಮೂರ್ಖರೋ ತಿಮ್ಮಾ ನಾವು, ಶತಮೂರ್ಖರು........" ಪುನಃ ಹೆಜ್ಜೆಹಾಕಲು ಸುರು ಮಾಡಿದರು.

ಅಹುದು ಎಂದು ಹೇಗೆ ಎನ್ನಲಿ? ತಂತಮ್ಮ ಬಗ್ಗೆ ತಾವು ಹೇಳಿಕೊಳ್ಳಲಿ, ತಮ್ಮ ಮೂರ್ಖರ ಗುಂಪಿಗೆ ನನ್ನನ್ನೂ ಸೇರಿಸಿಕೊಂಡುಬಿಟ್ಟರು ಸಿಟ್ಟಿನ ಸಾಹುಕಾರರು. ಮುಂದೇನು ಬರಲಿದೆಯೋ ನೋಡೋಣವೆಂದು ಮೈಯೆಲ್ಲವೂ ಕಿವಿಯಾಗಿ ಕುಳಿತೆ ಅವರ ಬೆನ್ನು ನೋಡುತ್ತ.

"ಎಲ್ಲಿ ನೋಡಿದರೂ ನೆಹ್ರುಪೂಜೆ, ನೆಹ್ರುಪೂಜೆ. ವಿದ್ಯಾವಂತರೂ ಒಂದೇ ಹಾಳುಹಳ್ಳಿಗರೂ ಒಂದೇ........ ಈ ದರಿದ್ರ ಕುರಿಗಳ ದೇಶದಲ್ಲಿ."

ಹಾ! ಈಗ ತಿಳಿಯಿತು ಗಡಿಗೆ ಒಡೆದ ಕಾರಣ. ಯಾರೋ ದಡ್ಡರು ಬಂದು ನಮ್ಮ ಗೌಡರ ಮುಂದೆ ಆ ಯಃಕಶ್ಚಿತ್ ನೆಹ್ರೂನನ್ನು ಕೊಂಡಾಡಿಬಿಟ್ಟಿದ್ದಾರೆ!

"ಸ್ವಾಗತ, ಹೂಮಾಲೆ, ಆ ನೆಹ್ರೂಗೆ. ನಾವೇನೂ ಮಾಡಿಯೇ ಇಲ್ಲ ದೇಶಕ್ಕೆ?"

ಮತ್ತೆ 'ನಾವು' ಎನ್ನುತ್ತಾರಲ್ಲ ಇವರು ಎಂದುಕೊಂಡೆ.

"....ಅಂ....ಅಂ....ನಾನೇನೂ ಮಾಡಿಲ್ಲ ಗೌಡರೇ ದೇಶಕ್ಕೆ. ನಾನೂ....ನಾನೇಕೆ ನೆಹ್ರೂರೊಟ್ಟಿಗೆ—ಅಲ್ಲಾ ಕ್ಷಮಿಸಿ—ನೆಹ್ರೂನೊಟ್ಟಿಗೆ ಪೋಟಾಪೋಟಿ ಮಾಡಲಿ?" ಎಂದು ಒಳಗಂಟಲಲ್ಲಿಯೇ ಗೊಣಗಿದೆ.

"ನೀನು ಮಾಡಿಲ್ಲವೋ ತಿಮ್ಮಾ, ನಾವು ಮಾಡಿಲ್ಲವೇನು ದೇಶಕ್ಕೆ?" ಹಿಂದೆಯೇ ಬಂದಿತು ಮರುಪ್ರಶ್ನೆ, ಗೂಟ ಹೊಡೆದಂತೆ. ಜೀವಕ್ಕೆ ಕೊಂಚ ಸಮಾಧಾನವಾಯಿತು. ನಮ್ಮ ಗೌಡರ 'ನಾವು' ಎಂಬುದು ಅವರ ವ್ಯಾಕರಣದೀಪಿಕೆಯಲ್ಲಿ ದ್ವಿ ಅಥವಾ

ಬಹುವಚನವಲ್ಲ ; ಕೀಳರಿಮೆಯುವರ ಸ್ವಯಂಕೃತ ಮರ್ಯಾದೆಯು ಏಕವಚನ! ಇದೀಗ ಗೌಡರು 'ನಾವು ಮೂರ್ಖರು' ಎಂದುದರ ಅರ್ಥವೇನು?

"ಇಂತಹ ಪ್ರಚಾರಗಳಿಂದ ಮುಂದಾಳುಗಳ ತಲೆ ತಿರುಗಿಸಬಾರದು, ಈ ಪತ್ರಿಕೆಗಳು." ಏನೋ ಹಟಾತ್ತಾಗಿ ನೆನಪಾಯಿತು, ದ್ವಿನೇತ್ರಗಳಿಂದ ಚಿಟಿಚಿಟಿ ಕಿಡಿಹಾರಿಸಿ ತುಟಿಕಡಿದರು. ಸದ್ಯ ನನ್ನ ಪುಣ್ಯ, ಆ ಕಿಡಿಗಳು ಹಾರಿಬಿದ್ದು ನನ್ನ ಇದ್ದೊಂದು ಬುಶ್ಕೋಟನ್ನು ಸುಡಲಿಲ್ಲ. ಅವರ ಕನ್ನಡಕದ ಗಾಜಿಗೆ ಬಡಿದು ಅಲ್ಲಿಯೇ ನಂದಿದವು.

"ಯಾರೋ ತಿಮ್ಮಾ, ಆ ದರಿದ್ರ.......ಪತ್ರಿಕೆಯ ಸ್ವಂತ ಸುದ್ದಿಗಾರ ಈ ಊರಲ್ಲಿ? ಅವನಿಗೇನೋ ಕೇಡುಬಂದಂತಿದೆ."

"ಯಾಕೆ ಗೌಡರೇ, ಏನಾಯಿತು? ಏನು ಮಾಡಿದ ಅವನು?"

ಅಲ್ಲವೋ, ಮೊನ್ನೆ ಸ್ವಾತಂತ್ರ್ಯೋತ್ಸವದ ಸಭೆಯಲ್ಲಿ ಎಲ್ಲರಿಗಿಂತಲೂ ಹೆಚ್ಚು ಮಾತನಾಡಿದುದು ಯಾರು? ನಾನೇ ಅಲ್ಲವೇನೋ?"

"ಅಲ್ಲವೇ ಮತ್ತೆ? ಮೊನ್ನೆ ಮಾತ್ರ ಏಕೆ, ಯಾವ ಸಭೆಯೇ ಆಗಲಿ, ಎಲ್ಲಿಯೇ ಆಗಲಿ, ಯಾರೇ ಸೇರಿಸಲಿ ತಮ್ಮದೇ ಉದ್ದನ್ನ ಭಾಷಣ. ಗಾಂಧೀಜಿಯವರು ಸತ್ತ ದಿನವು ಸಹ ಬಿಡಲಿಲ್ಲ ತಾವು. ವಾಲಂಟರಿಗಳು ಅಂಗಿಯ ಬಾಲ ಹಿಡಿದು ಎಳೆದರೂ ಕೂಡಲಿಲ್ಲ ನೀವು. ಜನರು ಮನೆಗೆ ಹೋಗಿ ಮನೆ ಮುಟ್ಟಿದರೂ ತಮ್ಮ ಭಾಷಣ ನಿಂತಿರಲಿಲ್ಲ. ಅದಿರಲಿ, ಈಗೇನು ಅನಾಹುತವಾಗಿದೆ ಪ್ರಭೂ?"

"ಅಲ್ಲಾ, ಆ ಮುಠ್ಠಾಳ ಹೀಗೇ ಏನು ವರದಿ ಮಾಡುವದು? ನನ್ನಂತಹ ಉದಿತೋದಿತ ಏಕೈಕ ಮುಖಂಡನ ಹೆಸರು ಬೇಡವೇ ಆ ವರದಿಯಲ್ಲಿ? ಬರೀ 'ಮುಂತಾದವರು ಮಾತನಾಡಿದರು' ಎಂದು ಬರೆದಿದ್ದಾನಲ್ಲವೋ ಅವನು."

"ಛೆ ಛೆ! ಅದು ಅವನ ತಪ್ಪಲ್ಲ ಗೌಡರೆ. ಸಭೆಯಿಂದ ಬಂದು ತಮ್ಮ ಮನೆಯಲ್ಲಿಯೇ ಚಹಾ ಕುಡಿದು ಹೋಗಿದ್ದಾನೆ ಆ ರಾತ್ರಿ. ಪತ್ರಿಕೆಯವರೇ ಬಿಟ್ಟಿರಬೇಕು ಬುದ್ಧಿಪೂರ್ವಕ, ಕೆಲಸಕ್ಕೆ ಬಾರದವರ ಹೆಸರುಗಳೆಲ್ಲ ಏಕೆಂದು."

"ಏನು ನಿನ್ನ ಪಿಂಡ ಹಾಗೆಂದರೆ? ನಾನು ಕೆಲಸಕ್ಕೆ ಬಾರದವನೇನು?"

"ಅಯ್ಯೊ, ಅಯ್ಯೊ, ನಾನು-ತಮಗೆ-ತಮ್ಮ ಇದುರಿನಲ್ಲಿ ಹೀಗನ್ನಲು ಸಾಧ್ಯವೇ ಸಾಹುಕಾರರೇ? ಕೆಲಸಕ್ಕೆ ಬಾರದವರು ಎಂದರೆ ಬರೀ ಭಾಷಣಕ್ಕೆ ಬರುವವರು ಎಂಬರ್ಥದಲ್ಲಿ ಹೇಳಿದೆ ಅಷ್ಟೇ. ಒಟ್ಟಾರೆ ಆ ಪತ್ರಿಕೆಯದು ತಪ್ಪು ಪ್ರಭೂ, ಅದನ್ನು ಕ್ಷಮಿಸಿಬಿಡಿ."

"ಮಾಡಿಸುತ್ತೇನೆ ತಡಿ ಆ ಪತ್ರಿಕೆಗೆ. ರೈಲ್ವೆದವರಿಗೆ ಹೇಳಿ ಆ ಪಾರ್ಸಲ್ಲೇ ಮಾಯ ಮಾಡಿಸುತ್ತೇನೆ. ನಮ್ಮಂತಹ ಪ್ರಮುಖ ಮುಖಂಡರ ಪ್ರಚಾರ ಮಾಡದಿದ್ದ ಮೇಲೆ ಈ ಹಾಳು ಪತ್ರಿಕೆ ನಮ್ಮೂರಿಗೇಕೆ ಬರಬೇಕು?........"

"ಪ್ರಚಾರದಿಂದ ಮುಖಂಡರ ತಲೆ ತಿರು..........."

"ಮುಚ್ಚೋ ಬಾಯಿ ಅಧಿಕಪ್ರಸಂಗಿ."

"......................"

"ನೆಹ್ರು ನೆಹ್ರೂ. ಎಲ್ಲ ಪತ್ರಿಕೆಗಳೂ ನೆಹ್ರೂನ ಅಡ್ವರ್ಟೈಜಿಂಗ್ ಏಜನ್ಸಿಗಳಾಗಿ ಬಿಟ್ಟಿವೆ. ಒಂದು ಪತ್ರಿಕೆಯಲ್ಲಾದರೂ ನಮ್ಮ ಹೆಸರು?"

"ಇದಕ್ಕೇನು ಗೌಡರೇ ಉಪಾಯ? ಇಲ್ಲದಿದ್ದರೆ ನೀವೂ-ಅಲ್ಲಾ-ತಾವೂ....ಒಂದು....ತಮ್ಮ ಅಡ್ವರ್ಟೈಜಿಂಗ್ ಏಜನ್ಸಿ-ಅಲ್ಲಾ-ಸ್ವಂತ ಪತ್ರಿಕೆ......."

"ಹಾ! ಅದೇ ನೋಡೋ ತಿಮ್ಮಾ ಇದಕ್ಕೆ ಮದ್ದು." ರಪ್ಪೆಂದು ನನ್ನ ಬೆನ್ನು ಚಪ್ಪರಿಸಿದಾಗ ನನ್ನ ಪ್ರಾಣವು ಮಾಳಿಗೆಗೆ ಹಾರಿ ಮರಳಿ ಬಂದಿತು.

"ತಲೆ ಎಂದರೆ ನಿನ್ನ ತಲೆಯೇ ತಲೆ" ಎಂದು ಸಿಟ್ಟಿನಲ್ಲಿಯೇ ನಕ್ಕುಬಿಟ್ಟರು. ತಲೆಗೆ ಶಬಾಸ್ ಕೊಟ್ಟರೂ ಪೆಟ್ಟನ್ನಂತೂ ಬೆನ್ನಿಗೆ ಕೊಟ್ಟರೆಂದು ಸಂತಸವಾಯಿತು. ಅದೇ ಏಟು ತಲೆಗೆ ಬಿದ್ದಿದ್ದರೆ ತಿಮ್ಮನಿಗೆ ತಲೆಯೇ ಇಲ್ಲದಂತಾಗುತ್ತಿತ್ತು ಎಂದು ಉಸಿರನ್ನಾಡಿಸಿಕೊಂಡೆ ಒಂದು ಬಾರಿ.

"ಬರುತ್ತೆ ಬರುತ್ತೆ, ನನ್ನದೇ ಸ್ವಂತ ಸ್ವತಂತ್ರ ಪತ್ರಿಕೆಯೊಂದು. ನನ್ನ ಪ್ರಚಾರಕ್ಕಾಗಿಯೇ ಅದನ್ನು ಮೀಸಲಾಗಿ ಇಟ್ಟುಬಿಡುತ್ತೇನೆ. ಅದರಲ್ಲಿ ನಾನೇ ಬರೆಯುತ್ತೇನೆ."

ಸ್ವರಾಜ್ಯವೆಂದರೆ- ಸ್ವಾಹಾದ ರಾಜ್ಯವಲ್ಲ

ನಿಜವಾದ ಸ್ವರಾಜ್ಯವು ಬಹುಜನ ಸಮಾಜದ ಹಿತದಲ್ಲಿಯೇ ಅಡಕವಾಗಿದೆ.

ದಿ

ಕೆನರಾ ಲಾಜ

ಬೋರ್ಡಿಂಗ ಆ್ಯಂಡ ಲಾಜಿಂಗ

ಮೋಟಾರ ಸ್ಟ್ಯಾಂಡಿನ ಅತಿ ಸಮೀಪ, **ಹುಬ್ಬಳ್ಳಿ**

ದೀಪಾವಳಿಯ ಶುಭಚಿಂತನೆ

ಅಂದವಾದ ಎಲ್ಲಾಬಗೆಯ ಉಡುಪು ತಯಾರಿಕೆಗೆ

ನಾವೆಲ್ಟಿ ಟೇಲರಿಂಗ ಫರ್ಮ

ಕೊಪ್ಪೀಕರ ರೋಡ, ಹುಬ್ಬಳ್ಳಿ

ಪ್ರೊ. ಎಸ್. ಎಮ್. ಸುತಗಟ್ಟಿಮಠ ಕಮರ್ಶಿಯಲ್ ಡಿಪ್ಲೊಮಾ ಹೋಲ್ಡರ.

ಕರ್ನಾಟಕದ ಸ್ತ್ರೀಯರ ಅಭಿಮಾನ !

★

ಅಂದರೆ...

ಹೂವಿನ ದಡಿಯ

(ಅಂಚಿನ)

ಪತ್ತಲಗಳು

ಉಪಯೋಗಿಸಿ ದೀಪಾವಳಿಯ ಆನಂದವನ್ನು ದ್ವಿಗುಣಿತ ಮಾಡಿರಿ !

★

ನೂತನ ವರ್ಷ ನಮ್ಮ ಗ್ರಾಹಕರಿಗೆಲ್ಲ ಸುಖದಾಯಕವಾಗಲಿ !

★

ನ್ಯೂ ನ ವ ಜೀ ವ ನ ಮಿ ಲ್ಸ

ಫ್ಯಾನ್ಸಿ ಪತ್ತಲಗಳ ಕಾರಖಾನೆದಾರರು

ಇಚಲಕರಂಜಿ

H.O.C. POONA

"ಅದನ್ನು ನೀವೇ ಓದುತ್ತೀರಿ?"

"ಬಾಯಿ ಮುಚ್ಚ್ಕೋ ಭಡವಾ!"

"ಅಲ್ಲಾ ಗೌಡರೆ, ತಮ್ಮ ಅಪ್ಪನವರೂ ಎಡಗೈ ಹೆಬ್ಬರಳಿನ ಪ್ರಭೃತಿಗಳು. ಅದಕ್ಕೇ ಅಂದೆ ತಾವೇ ಓದುತ್ತೀರಿಯೆಂದು. ಬೇರಿನ್ನಾರು ಓದಬೇಕು, ಪಾಪ?"

"ಅಲ್ಲವೋ, ನೀನೇ ಹೇಳು" ಕೊಂಚ ದನಿತಗ್ಗಿಸಿ ಕುರ್ಚಿಯನ್ನು ಮುಂದೆಳೆದು "ನೀನೇ ಹೇಳು, ಆ ನೆಹ್ರೂಗೂ ನನಗೂ ಏನೋ ಭೇದ?"

"ಅಂದರೆ, ಆ ನೆಹ್ರು ಹುಚ್ಚನಲ್ಲ ಗೌಡರೆ" ಪಕ್ಕೆಂದು ನಕ್ಕುಬಿಟ್ಟೆ.

"ಮೈಮೇಲೆ ಎಚ್ಚರವಿಟ್ಟುಕೊಂಡು ಮಾತನಾಡು, ತಿಳಿಯಿತೇ? ನನಗೆ ಅಹಿಂಸೆ ಪಹಿಂಸೆಗಳಲ್ಲಿ ವಿಶ್ವಾಸವಿಲ್ಲ ಇಂತಹ ಸಂದರ್ಭಗಳಲ್ಲಿ!" ಪ್ರಳಯಸೂಚನೆ ಸಿಡಿಲಿನಿಂದಲೇ ಸುರು ಆಯಿತು.

"ತಪ್ಪಾಯಿತು ತಪ್ಪಾಯಿತು, ಮಹಾಪರಾಧವಾಯಿತು ಸಾಹುಕಾರರೇ. ನೀವೂ ನಗಬಲ್ಲಿರಿ ಎಂದು ಪರಪಾಟು ಬಿದ್ದೆ. ಕ್ಷಮಿಸಿ ಕ್ಷಮಿಸಿ" ಎಂದವರ ಪಾದಾರವಿಂದದಲ್ಲಿ ಬಿದ್ದು ಹೊರಳಾಡಿದೆ. ಕೊಂಚ ಶಾಂತರಾದರು. ಹಿಂದೆಯೇ ಬಿಟ್ಟೆ ಮೋಹನಾಸ್ತ್ರ.

"ಅಹುದು ಗೌಡರೆ, ತಾನಂದಂತೆ ಏನು ಮಹಾ ಭೇದವಿದೆ ತಮಗೂ ಆ ನೆಹ್ರೂಗೂ? ಎರಡು ಕಾಲು, ಎರಡು ಕೈ, ಒಂದು ಮೂಗು, ಎರಡೆರಡು ಕಣ್ಣು ಕಿವಿ, ನಿಮಗೂ ಅಷ್ಟಿವೆ. ಎಲ್ಲಿದೆ ಭೇದ, ನೀವೇ ನೆಹ್ರು, ನೆಹ್ರೂನೇ ನೀವು. ಆದರೆ ಒಂದು ಮಾತು ನೋಡಿ, ಅವರ—ಅಲ್ಲಾ—ಅವನ ಪರ್ಸನಾಲಿಟಿ ಮಾತ್ರ........''

"ಹೋಗೋ ಹುಚ್ಚ ಹುಚ್ಚ" ಎಂದವರೆ ಕಪಾಟದ ಬೀಗ ತೆರೆದರು. ಎದೆ ಹಾರಿತು, ಹೊಡೆಯಲು ಹಂಟರ್ ತೆಗೆಯುತ್ತಾರೇನೋ ಎಂದು.

''ತೆಗೆದು ನೋಡು, ಅದರಲ್ಲಿ ಹೇಗಿದ್ದೇನೆ ನಾನು. ಏನೋ ಹೇಳುತ್ತಾನೆ, ಆ ನೆಹ್ರೂನ ಪರ್ಸನಾಲಿಟಿ ಪುರಾಣ!" ಎನ್ನುತ್ತ ಕರೀ ಕಾಗದದ ಪ್ಯಾಕೆಟ್ಟೊಂದನ್ನು ಕೈಗೆ ಕೊಟ್ಟರು.

ಅಯ್ಯೊ, ಸಾಕ್ಷಾತ್ ನೆಹ್ರು! ಅವರದೇ ಅದೇ ಜುಬ್ಬ, ಅವರದೇ ಜಾಕೆಟ್, ಟೊಪ್ಪಿಗೆ, ಜೋಡು, ಕೆಳಕಾಲನ್ನು ಬಿಗಿಹಿಡಿಯುವ ಚಲ್ಲಾಣ, ನಿಲ್ಲುವ ರೀತಿ, ಮುಂದೊಂದು ಧ್ವನಿವಾಹಕ ಯಂತ್ರ ಎಲ್ಲವೂ ನೆಹ್ರೂರವರದೇ!! ನೆಹ್ರೂರೇ ನೆಹ್ರು!!! ಆ ನೆಹ್ರೂರ ಉಡಿಗೆಯೊಳಗಿದ್ದ ಈ ನೆಹ್ರೂ ಮಾತ್ರ ಕೊಂಚ ಕುಳ್ಳ, ತುಸು ಅಳುಮೋರೆ. ಅಷ್ಟೇ ಭೇದ.

" ಈ ಪೋಷಾಕನ್ನು ಯಾವಾಗ ಸಾಹುಕಾರರೇ ಹೊಲಿಸಿದ್ದು? " ಎಂದೆ.

" ಹೇಗಿದೆ ಹೇಳು, ನನಗೇನು ಕಡಿಮೆ ಇದೆ ಆ ನೆಹ್ರೂನಕಿಂತಲೂ'' ಎಂದು ಹೆಮ್ಮೆಯಿಂದ ಆ ಭಾವಚಿತ್ರವನ್ನು ಆರಾರು ಬಾರಿ ನೋಡಿಕೊಂಡರು.

" ಕಡಿಮೆ ಏಕೆ, ಒಂದರಲ್ಲಂತೂ ತಾವು ಆ ನೆಹ್ರೂನಕಿಂತ ಹತ್ತು ಪಾಲು ಹೆಚ್ಚು ಇದ್ದೀರಿ ಬಿಡಿ."

" ಯಾವುದರಲ್ಲಿಯೋ ತಿಂಮಾ? " ಮೀಸೆಯ ಮೇಲೆ ಕೈಯಾಡಿಸಿ ಅಟ್ಟಹಾಸದಿಂದ ಕೇಳಿದರು.

" ಪಿಟ್ಟನಲ್ಲಿ."

ಆದೇಕೋ ಸಾಹುಕಾರರು ಪಿಟ್ಟನ್ನೆಲಿಲ್ಲ.

" ಅದೆಂತಹ ಚೈತನ್ಯ ನೋಡಿ ಗೌಡರೇ, ಆ ನೆಹ್ರೂಂದು. ಮೂರು ಮೂರು ಗಂಟೆಕಾಲ ಕೊಂಚವೂ ಶ್ರಮವಿಲ್ಲದೆ ಭಾಷಣ ಗಳನ್ನು ಮಾಡುತ್ತಾನೆ, ನಾಲ್ಕಾರು ಊರುಗಳನ್ನು ತಿರುಗಿ ಒಂದೇ ದಿನದಲ್ಲಿ" ಎಂದು ಬಾಯಿ ಜಾರಿ ರಾಕ್ಷಸನನ್ನೇ ಕೆಣಕಿಬಿಟ್ಟೆ.

" ನೀನೆ ಮೆಚ್ಚಬೇಕು ನೋಡೊ ತಿಂಮಾ, ಆ ಭಾಷಣಕ್ಕೆ. ಏನಿದೆ ಅದರಲ್ಲಿ ಸ್ವಾರಸ್ಯ? ನಾನು ಕಳೆದ ತಿಂಗಳು ಕಾಲೇಜಿನಲ್ಲಿ ಮಾಡಲಿದ್ದ ಭಾಷಣವನ್ನು ನೀನು ಕೇಳಬೇಕಿತ್ತು. ಬರೀ ನೀನಲ್ಲ, ಕಲ್ಲಿನಂತಹಾ ನಿನ್ನ ಆ ನೆಹ್ರೂ ಸಹ ನನಗೆ ಶರಣು ಬರಬೇಕು," ಎದೆಎದೆ ತಟ್ಟಿಗೊಂಡರು ತಮ್ಮ ಕೈಯಿಂದ " ಆದರೆ ...."

" ಏನಾಯಿತು ಗೌಡರೆ, ಭಾಷಣ ಮಾಡಲಿಲ್ಲವೇನು ತಾವು? ''

" ಎಲ್ಲಿಯ ಭಾಷಣವೋ, ಅಂದು ಮನೆ ಮುಟ್ಟುವದೇ ಕಷ್ಟ ವಾಗಿ ಹೋಯಿತು. ಪ್ರಾರಂಭದಲ್ಲಿಯೇ ಸುರು ಮಾಡಿದ ಆ ದರಿದ್ರ ಅಧ್ಯಕ್ಷ ಬೇಗ ಮುಗಿಸಿರಿ ಎಂದು ಈ ವಿದ್ಯಾರ್ಥಿ ಮೂರ್ಖರಂತೂ ಗೊಳ್ಳೆಬ್ಬಿಸಿಬಿಟ್ಟರು, ಭಾಷಣ ಬೇಡ ಎಂದು.ಚೀರಿ ಸಿಟ್ಟಾಗಿ ನಾನೂ ಕುಳಿತೇಬಿಟ್ಟೆ. '' ಆಡಿದ ಮಾತಿಗೆ ಶೋಭಿಸುವಂತೆ ಕಂಣಲ್ಲಿ ಜ್ವಾಲಾ ಮುಖಿಯನ್ನೇ ಎಬ್ಬಿಸಿದರು.

" ನೆಹ್ರೂನ ತ್ಯಾಗವೆಂತಹದು ನೋಡಿರಿ ಗೌಡರೇ'' ಎಂದು ನನ್ನ ಇನ್ನೊಂದು ಬಾಣಪ್ರಯೋಗ ಮಾಡಿನೋಡಿದೆ.

" ತ್ಯಾಗ ತ್ಯಾಗ, ಅದೊಂದು ಮಹಾಮಂತ್ರವೇ ಆಗಿದೆ ಎಲ್ಲರ ಬಾಯಲ್ಲಿಯೂ. ಏನು ನಿನ್ನ ತಲೆ ಹಾಗಂದರೆ, ಅವನೊಬ್ಬನೇ ಎಂದು ತಿಳಿದಿ ಏನು ಜೇಲು ಕಂಡವನು?" ಎಂದು ನರಸಿಂಹನಂತೆ ಮುಖಮಾಡಿ ಸಿಂಹನಂತೆ ಗರ್ಜಿಸಿ ಗ್ರಾಮಸಿಂಹನಂತೆ ಕಂಠ ಶೋಷಣೆ ಮಾಡಿಕೊಂಡು ತಲೆ ಜಜ್ಜಿಕೊಂಡರು.

" ತಾವೂ ಜೇಲು ಕಂಡಿದ್ದಿರೇನು ಗೌಡರೆ? ನನಗೆ ತಿಳಿದಿರ ಲಿಲ್ಲ ಬಿಡಿ ಈ ವಿಷಯ. ಈ ಸಮಾಚಾರವು ಪ್ರತಿಯೊಬ್ಬ ಮೂರ್ಖ ನಿಗೂ ತಿಳಿಯಬೇಕು, ತಿಳಿಯಲೇಬೇಕು. ತ್ಯಾಗದೇವಾ, ತಾವೊಂದು ಆತ್ಮಕಥೆಯನ್ನು ಏಕೆ ಬರೆಯಬಾರದು?''

" ಬರೆಸುತ್ತೇನೆ ಬರೆಸುತ್ತೇನೆ, ಒಬ್ಬ ಒಳ್ಳೆಯ ಶಾಸ್ತ್ರಿ ಗಳನ್ನೇ ಹಿಡಿದಿದ್ದೇನೆ ನನ್ನ ಆತ್ಮಕತೆ ಬರೆಯಲು. ಆಗ ತಿಳಿ ದೀತು ನಮ್ಮ ಜನಕುರಿಗಳಿಗೆ ಜವಾಹರನ ಡಿಸ್ಕವರೀ ಆಫ್ ಇಂಡಿಯಾವನ್ನು ಕಂಡು ನನ್ನ ಶಾಸ್ತ್ರಿವಿರಚಿತ ಆತ್ಮಕಥೆಯು ನಕ್ಕಾಗ.

"ಡಿಸ್ಕವರಿ ಆಫ್ ಇಂಡಿಯಾ ಎಂಬುದು ನೆಹ್ರೂನ ಆತ್ಮ ಕತೆಯೇನು ಗೌಡರೆ?" ಪ್ರಶ್ನೆಯನ್ನು ಕೇಳಿ ಮುಖ ನೋಡಲು ಅಂಜಿ ಮಾಳಿಗೆ ನೋಡಿದೆ.

ನನ್ನ ಪ್ರಶ್ನೆ ಅವರ ಕಿವಿಯಲ್ಲಿ ತೂರಿದಂತೆಯೇ ಕಾಣಲಿಲ್ಲ. ತಮ್ಮ ಸಾವಿರಾರು ಭಾಷಣಗಳಿಂದಲೇ ಅವರ ಕಿವಿಯು ತುಂಬಿ ಹೋಗಿದ್ದಿತು. ಸಿನೇಮಾದಲ್ಲಿ ಕಟ್ ಆದಂತಾಯಿತು. ನಮ್ಮೂರ ನೆಹ್ರೂ ಸುಮ್ಮನಾಗಿಬಿಟ್ಟಿದ್ದರು ಅದೇಕೋ.

" ಡಿಸ್ಕವರಿ ಆಫ್ ಇಂಡಿಯಾ ಆ ಪಂಡಿತನ ಆತ್ಮಕತೆ ಅಲ್ಲ ವೇನೋ ತಿಂಮಾ?'' ಹುಲಿಯಂತಿದ್ದ ಈ ಜ್ಞಾನಭಾಂಡಾರಿಗಳು ಏಕ್ದಂ ದೀನವದನರಾಗಿ ಕಾಲುನೆಕ್ಕುವಂತಾದರು. ಅಂತೂಗೊಂದಲ ದಲ್ಲಿ ಗೌಡರು ಬಿದ್ದರು. ಮಾತು ಬದಲಿಸಿದೆ.

ಕರ್ನಾಟಕ ಪ್ರಾಂತದಲ್ಲೆಲ್ಲ

- ಪ್ರಸಿದ್ಧಿ ಪಡೆದ -

ಜೆಕಾರ್ಡ ದಡಿಯ

(ಅಂಚಿನ)

ಪತ್ತಲಗಳು

ಇವುಗಳನ್ನೇ ಉಪಯೋಗಿಸಿ — ದೀಪಾವಳಿ ಹಾಗೂ ನೂತನ ವರ್ಷವನ್ನು ಸಂಭ್ರಮದಿಂದ ಆಚರಿಸಿರಿ

★

ನೂತನ ವರ್ಷವು
ನಮ್ಮ ಗ್ರಾಹಕರಿಗೆ
ಆನಂದದಾಯಕವಾಗಲಿ

★

ಡೆಕ್ಕನ್ ತಾರಾ ವೀವ್ಹಿಂಗ ಮಿಲ್ಸ
ಇಚಲಕರಂಜಿ

H.O.C.Poona

" ತಾವು ಯಾವಾಗ ತ್ಯಾಗಮೂರ್ತೀ, ಸೆರೆಮನೆಗೆ ಹೋಗಿದ್ದು? ತಮ್ಮ ತರುವಾಯ ವಿನೋಬಾ ಬಂದರೇನು?"

" ಇಲ್ಲವೊ ತಿಂಮಾ, ಆಗ ನನಗೆ ಅನುಕೂಲವಿರಲಿಲ್ಲ. ಹೊಸ ದಾಗಿ ಮದುವೆಯಾಗಿದ್ದಿತು. ನಲವತ್ತೆರಡರಲ್ಲಿ...."

" ಸರಿ ಸರಿ. ಹಾಗಾದರೆ ರೆಡಿಮೇಡ ದೇಶಭಕ್ತರೇನು? ಸ್ಥಾನ ಬದ್ಧತೆಯಲ್ಲಿ ಎಷ್ಟು ವರ್ಷಗಳಿದ್ದಿರಿ ದೇಶೋದ್ಧಾರೀ?''

" ತಿಂಮಾ, ನಾನೆಂತಹ ಕ್ರಾಂತಿಪುರುಷನೆಂಬುದು ಗೊತ್ತೇ ನಿನಗೆ? "

" ಇಲ್ಲ ಇಲ್ಲ, ಗೊತ್ತಿಲ್ಲ, ಸ್ವಾತಂತ್ರ್ಯದಾತಾ. ತಾವು ಹೇಳಿದ ನಮ್ಮ ದೇಶದ ಕುರಿಗಳಲ್ಲಿ ನಾನೇ ಕಡೆಯ ಕುರಿ. ನನಗೇನು ಗೊತ್ತು ಪ್ರಭೂ, ದುಡಿದು ತಿನ್ನುವ ಹೆಡ್ಡ ನಾನು," ದೈನ್ಯದಿಂದ ನುಡಿದು ದೇ ಭ ಗೌಡರ ಆತ್ಮಚರಿತ್ರಕಥನದ ಶ್ರವಣಾನಂದಕ್ಕೆ ಆಹುತಿಯಾದೆ.

ಆಗ ಸುರಿಯಿತು ಗೆರೆಸೊಪ್ಪೆಯ ಧಬಧಬೆ. " ಎಲೇ,ಬೆಸ ಗೊಳ್ಳುವಾತನೇ ಕೇಳು. ಈ ಮಹಾವೀರನ ಮಹಾಕ್ರಾಂತಿಯ ಮಹಾಸಚ್ಚರಿತ್ರೆಯನ್ನು ನಮ್ಮೂರ ಕಾಲೇಜಿನಲ್ಲಿಯ ಇಡೀ ಪುಸ್ತಕ ಭಾಂಡಾರವನ್ನು ಭಸ್ಮೀಭೂತ ಮಾಡಿದ ಧವಳ ಕೀರ್ತಿಯು....''

" ಭಲೆ ಭಲೆ ಭಪ್ಪರೆ ಭೈರಿ ಸರಸ್ವತಿಯ ಸಾಕ್ಷಾತ್ ವೈರೀ" ಎಂದು ಕೂಗುತ್ತ ಎದ್ದು ನಿಂತು ಎಡಗಾಲು ನೆಲಕ್ಕೆ ಒದೆದು ಬಾಯಿ ತೆರೆದು ಎರಡೂ ಕೈಯಿಂದ ಕಂಣು ಮುಚ್ಚಿಕೊಂಡೆ ಆ ಮುಖ ನೋಡಲಾರದೆ.

ಗೌಡರ ಕತೆ ಮುಂದುವರಿಯಿತು. "ಆಗ ನನ್ನನ್ನು ಹಿಡಿದ ಪೋಲೀಸರು ಎರಡು ದಿನಗಳು ಸ್ಟೇಶನಿನಲ್ಲಿ ಕೂಡಿಸಿದರು. ನನ್ನ ಶ್ರೀಮಂತ ಮಾವ ಬಂದ ಮೇಲೆ ಎಲ್ಲವೂ ಸರಿಹೋಯಿತು, ಹೊರಗೆ ಬಂದು ಬಿಟ್ಟೆ. ಆ ಇಡೀ ಎರಡೂ ದಿನಗಳೂ ನಾನು ಜೇಲಿನಲ್ಲಿ ದ್ದುದು ತ್ಯಾಗವಲ್ಲವೇನೋ ತಿಂಮಾ?"

" ಅಲ್ಲವೇ ಮತ್ತೆ? ಹದಿನೈದು ಎಕರೆಗಾಗಿ ನೀವೂ ಅರ್ಜಿ ಮಾಡಿದಿರೇನು ರಾಜಕೀಯ ಸಂತ್ರಸ್ತ ಮಹಾವೀರಾ?''

" ನಮಗೂ ಕೊಡುತ್ತಾರೇನೋ ತಿಂಮಾ?'' ಗೌಡರ ಬಾಯಿ ನೀರೊಡೆಯಿತು.

" ಅದೇಕೆ ಕೊಡುವದಿಲ್ಲ ತ್ಯಾಗೇಂದ್ರಾ? ಕ್ಷಮಾಪಣೆ ಬರೆದು ಕೊಟ್ಟವರಿಗೆ ಮಾತ್ರ ಪರಿಹಾರವಿಲ್ಲ. ಲಂಚಕೊಟ್ಟು ಪಾರಾದ ವರಿಗೇಕಿಲ್ಲ?"

" ಮುಚ್ಚೊ ಬಾಯಿ, ಅಧಿಕ ಪ್ರಸಂಗಿ!"

ಬಾಯಿ ಮುಚ್ಚಿದೆ, ಪುನಃ ತೆರೆಯಿತು.

" ಮಹಾಕ್ರಾಂತಿಪುರುಷಾ, ಹಾಂ, ಈಗ ಹೊಳೆಯಿತು ಈ ಅಲ್ಪಮತಿಗೆ ತಾವಿನ್ನೂ ಏಕೆ ನೆಹ್ರೂ ಆಗಿಲ್ಲವೆಂಬುದು. ನಿಮ್ಮ ಭಾವ ಚಿತ್ರ, ನಿಮ್ಮ ಕೋಪೋದ್ವೇಗ, ಮಹಾತ್ಯಾಗ–ಎರಡೇ ದಿನಗಳದು ಮತ್ತೆಲ್ಲವೂ ನೆಹ್ರೂನನ್ನು ಹಿಂದೂಡಲು ಸಾಕು. ಆದರೂ ಈಗ ತಾವಿನ್ನೂ ಹದಿನೈದಾಣೆ ನೆಹ್ರೂ ಆಗಿದ್ದೀರಿ. ಇನ್ನೊಂದೇ ಆಣೆಯ ಭಾಗವು ಮಾತ್ರ ಉಳಿದಿದೆ, ಮಹಾಗೌಡಾ" ಎಂದು ಕಂಣು ಪಿಳಿಕಿಸಿದೆ.

" ಅದಾವುದು ಹೇಳೋ ತಿಂಮಾ? ನಾನು ಸಿಗಾರ್ ಸೇದುತ್ತೇನೆ.''

" ಭೇಷ್, ಇನ್ನೊಂದು ಪಾಯಿಂಟೂ ದೊರೆಯಿತು. ಆದರೂ ಇನ್ನೊಂದೇ ಉಳಿದಿದೆ ಗೌಡರೆ. ಪ್ರತಿನಿತ್ಯವು ಒಂದು ತಾಸು ನೆಹ್ರು ತಲೆಕೆಳಗಾಗಿ ನಿಲ್ಲುತ್ತಾನಂತೆ."

" ಒಂದೇ ತಾಸು ಏಕೋ, ಇಡೀ ದಿನವೇ ನಿಲ್ಲಬಲ್ಲೆ ತಲೆ ಕೆಳಗಾಗಿ'' ಕೂಡಲೆ ಹುರ್ ಎಂದು ಕೂಗಿ ಗೋಡೆಗೆ ಕಾಲು ಒದೆದು ಕಾಲುಮೇಲಾಗಿ ನಿಂತೇಬಿಟ್ಟರು.

ಭೂಮಿಯಿಂದ ಧ್ವನಿ ಬಂದಿತು. " ನೋಡಿದಿಯಾ ತಿಂಮಾ, ತಲೆಕೆಳಗಾಗಿ ನಿಂತಿದ್ದೇನೆ ನೋಡು."

" ತಾವು ಕಾಲುಮೇಲೆ ಮಾಡಿ ಮಾತ್ರ ನಿಂತಿದ್ದೀರಿ ಪ್ರಭೂ. ತಲೆಕೆಳಗಾಗಿ ನಿಲ್ಲಲು ತಲೆ ಇರಲೇಬೇಕು.'' ಎಂದವನೆ ಜೀವದಾಸೆ ಯಿಂದ ಮನೆವರೆಗೂ ನಾಗಾಲೋಟವನ್ನು ಬಿಟ್ಟೆ.

(ಬರಲಿರುವ " ದೇ ಭ ನ ದಶವತಾರ " ವೆಂಬ ಗ್ರಂಥದಲ್ಲಿಯ ಒಂದು ಅವತಾರ)

ನಮ್ಮ ಆಶ್ರಯದಾತರಿಗೂ
ಪಾಲುಗಾರರಿಗೂ
ಈ ದೀಪಾವಳಿಯು
ಶುಭದಾಯಕವಾಗಲಿ !



ಎನ್. ಎಸ್. ಪೈ & ಕಂ.
ಮ್ಯಾನೇಜಿಂಗ ಏಜಂಟರು
ಕರ್ನಾಟಕ ಮರ್ಕಂಟಾಯಿಲ್ ಕಾರ್ಪೋರೇಶನ್ ಲಿ.,
ಬೆಳಗಾವಿ.

ನಮ್ಮ ಎಲ್ಲ ಆಶ್ರಯದಾತರಿಗೂ
ದೀಪಾವಳಿಯು ಮತ್ತು ನೂತನವರ್ಷವು
ಸುಖದಾಯಕವಾಗಲಿ
ಎಲ್ಲ ಪ್ರಕಾರದ ಫೌಂಟನ್ ಪೆನ್ನುಗಳಿಗಾಗಿ
ಸರ್ವೋತ್ಕೃಷ್ಟ
ಸ್ಟುಡಂಟ ಇಂಕ
ಉಪಯೋಗಿಸಿರಿ.
ದಿ ಸ್ಟುಡಂಟ ಇಂಕ ಮ್ಯಾನುಫ್ಯಾಕ್ಚರಿಂಗ ಕಂಪನಿ
ಬೆಳಗಾಂವ (M. S. M. Rly)

ಕಾವ್ಯಕುಂಜ

ಕಲ್ಪನಾ ಕಲ್ಪವೃಕ್ಷ

೧

ಕಲ್ಪನಾಕಲ್ಪವೃಕ್ಷ-
ನೆಲದೊಳಿದರ ಮೂಲಬೇರು
ಕುಡಿವುದೇಳು ಕಡಲ ನೀರು
ಸೂರ್ಯ ಚಂದ್ರರಿದರ ಹಣ್ಣು
ಬೆಳಕು ತಾಯಿ ತೆರೆದ ಕಣ್ಣು
ಮುಗಿಲ ತೊಂಗಲಲ್ಲಿ ಹೂತ
ಇಂದ್ರವನದ ಪಾರಿಜಾತ
ನಕ್ಷತ್ರದ ಪುಂಜವು
ಮುಗಿಲ ಮಲರ ಕುಂಜವು
ಸಪ್ತಲೋಕವಿದರ ಸುತ್ತು-
ಮುತ್ತು ಬಳ್ಳಿವರಿಯುತಿತ್ತು.
ಜೀವರಸದ ಕಲಶವಿಡಿದು
ಋತುಗಳಿದರ ಸುತ್ತು ನಡೆದು
ನೆಲಕೆ ಧಾರೆಯೆರೆಯುತಿರಲು
ಸ್ವರ್ಣಕುಂಭ ಸುರಿಯುತಿರಲು
ಪ್ರಾಣಪಕ್ಷಿ ಮೊರೆಯುತಿರಲು
ನೆಲದ ಜಲದ ಸೊಲ್ಲಿಗೆ
ಹೂತ ಮುಗಿಲ ಮಲ್ಲಿಗೆ.

೨

ಕಲ್ಪನಾಕಲ್ಪವೃಕ್ಷ
ಕುಡಿದು ಕಡಲ ತಾಯ ವಕ್ಷ
ಮುಗಿಲ ತುಂಬಿ ತುಳುಕಿದೆ.
ದಿಗ್ದಿಗಂತವಿದರ ಹಂತ-
ವೇರಬಯಸಿ ಸೀಗದಂಥ
ಪ್ರಾಣದೀ ವಿರಾಟ ಪಂಥ
ದರ್ಶನಕ್ಕೆ ಬಳುಕಿದೆ.
ತಾಯಿ ಬೇರಿನಾಳದಲ್ಲಿ
ಮರದ ನಾಳನಾಳದಲ್ಲಿ
ಪುಣ್ಯಪಾಪ ಹರಿದಿವೆ,
ನನೆಕೊನೆಗಳ ತೆರೆದಿವೆ.
ಜೀವಪಕ್ಷಿಯಿದನು ಕಂಡು
ಹೆದರಿ ಕಣ್ಣ ಮುಚ್ಚಿಕೊಂಡು
ಎಲೆಯ ಮರೆಯೊಳವಿತುಕೊಂಡು
ಕಾಣದಂತೆ ಕುಳಿತಿದೆ.
ವಿಧಿಯು ವಿಶ್ವರೂಪ ತೆರೆದು
ಸುಖದುಃಖದ ಸೋನೆಗರೆದು
ಮುಗಿಲು ಗರಿಯ ಬಿಚ್ಚಿಕೊಂಡು
ಆಸೆ ಅಳುಕಿದೆ.

೩

ಕಲ್ಪನಾ ಕಲ್ಪವೃಕ್ಷ-
ಸತ್ಯವಿದರ ತಾಯಿಬೇರು
ಚೆಲುವು ರೆಂಬೆಗೊಂಚಲು
ಮಾಯೆಯಿದಿರ ಮಿಂಚಲು
ಮರದ ತುಂಬಿ ಮಾತಿನಮೃತ-
ಕುಂಭ ಉಯ್ಯಲಾಡಿವೆ.
ಬೈಗು ಬೆಳಗು ರೆಕ್ಕೆ ತೆರೆದ
ಹಕ್ಕಿಯಿಲ್ಲಿ ಹಾಡಿವೆ
ಬಳ್ಳಿಯೊಂದು ಹರಿದು ಬಂದು
ವೃಕ್ಷದಡಿಗೆ ನಿಂದಿತು
" ಏನು ಬಯಕೆ? "ಎಂದಿತು.
" ನಿನ್ನೊಳರಳಿ ಹೂವ ತೆರೆದು ಹಬ್ಬಿ ಬಿಡುವೆ" ನೆಂದಿತು
" ಮಾತು ಹೂತು ಬಂದಿತು."

ಎಸ್. ಆರ್. ಎಕ್ಕುಂಡಿ

❋

ಗೊಮ್ಮಟೇಶ್ವರ

ಶತಮಾನಗಳ ವರೆಗೆ ಋತುಮಾನಗಳ ಕಳೆದು
ಕಾಲಚಕ್ರದ ಘೋರ ಆಘಾತಗಳ ತಡೆದು
ಬಟ್ಟಬಯಲೊಳು ಬೆಟ್ಟದಂಥ ಬಂಡೆಯ ಮೇಲೆ
ಧ್ಯಾನಯೋಗಾಸಕ್ತ, ಗಂಭೀರ ಮೌನದಿಂ
ನಿಂದ, ನಿಷ್ಪಂದ, ಭವ್ಯಾಕೃತಿಯ, ಬತ್ತಲೆಯ
ಕೌಸ್ತುಭಂ ಕನ್ನಡದ ಶಿಲ್ಪಕ್ಷೀರೋದಧಿಯ
ಶ್ರವಣಬೆಳುಗೊಳದ ಋಷಿ, ಬಾಹುಬಲಿ, ಗೊಮ್ಮಟನ
ಮುಂದೆ ನಾನಂದು ಭಯಭಕ್ತಿಯಿಂ ನಿಂದಿರಲು—
ಸೀಮೆಯಿಲ್ಲದ ಆತ್ಮದಾನಂದ ಬಯಲಿನೊಳು
ನೆಲೆನಿಂತು ಚಲಿತ ಪ್ರಕೃತಿಯ ರಮ್ಯನೃತ್ಯವನು
ನೋಡುತಿಹ ನಿರ್ಲಿಪ್ತ ಅಚಲ ಪುರುಷನ ದಿವ್ಯ
ದರುಶನವ ಚರ್ಮಚಕ್ಷುಗಳಿಂದ ಪಡೆದೆ.
ನಶ್ವರದ ವಿಶ್ವದಾಂತರ್ಯದೊಳು ಶಾಶ್ವತದ
ತತ್ತ್ವವೊಂದಿಹುದೆಂಬ ಅನುಭಾವ ತಿಳಿದೆ.

— ಚಿದಾನಂದ

ನಡೆದು ಬಂದ ದಾರಿ

೧

ನಡೆದು ಬಂದ ದಾರಿಕಡೆಗೆ
ತಿರುಗಿಸಬೇಡ—
ಕಣ್ಣ—
ಹೊರಳಿಸಬೇಡ.

ಮಬ್ಬಿಗಿಳಿದ ಸಾಲುಸಾಲು ಅನ್ನುತಶಿಲೆಯ ಗೋರಿ,
ಕತ್ತಲೆದೆಯ ಚೂರಿ;
ಮನದ ಮಕ್ಕಳೆಲ್ಲ ನಕ್ಕ ಮಲ್ಲಿಗೆ ಬನತೋಟ,
ಮರೆದು, ಮಸಣವಾಟ;
ಹಲಸು ಮಾವು ಆಲ ಬೇಲ ಸೆರಗನೆತ್ತಿ ಕಣ್ಣಿಗೆ,
ಸುಯ್ಯುವೆಲರು ತಣ್ಣಗೆ;
ಕಮಲದೆದೆಯ ಅಳಿ ಪರಾಗರಾಗ ಕಾಲಕೂಟ,
ವಿರಹ ಚಿತ್ರಕೂಟ;
ಹಸುಳೆ ಚಂದ್ರ, ಮೇಘತಂದ್ರ, ನಿಶಾನಾಗಬಂಧ,
ಉಸಿರು ಮಂದಮಂದ;
ಕಂಬನಿಗಳ ಕಾರಿ ಖಾರಿ ತಳಮಳಿಸಲು ಸುತ್ತಲೂ
ತೆಂಗು ತಲೆಯನೆತ್ತಲು;
ಇಳಿದ ಕಡಲು,ಕೊರೆದ ಮಳಲು,ಉಡಿದ ಹಾಯಿಹರಕಲು
ಒಡೆದು ಹಡಗು ಬೋರಲು,
ಅಹಾ, ಕೊಳದಿ ಬಾಲರವಿಯ ಅಂಬೆಗಾಲ ಲೀಲೆ,
ಅಲೆಯ ವಲಿಯ ಮೇಲೆ!
ಹಿನ್ನೋಟದ ದಿಣ್ಣೆತಲೆಯ ಚಿಮ್ಮಿ ಹಾರು ಮುಂದೆ,
ನೋಡಬೇಡ ಹಿಂದೆ!

೨


ಮುಂದೆ ನೋಡು ದಾರಿ ಸಾವಿರಾರು ಮೈಲಿ ದೂರ
ಸಾಲು ಸಾಲು ಡೇರ;
ಮರಳುಕಾಡು, ತಲೆಯ ಓಡು ಎಲುಬುಗೂಡು ಮೆಟ್ಟಲು
ಜೀವ ಪಟ್ಟ ತೊಟ್ಟಲು;
ಹೆಜ್ಜೆಗೊಂದು ಬಿಸಿಲುಗುದುರೆ ಬೆನ್ನ ನೇರಿ ತೂಗಿ,
ಮುಂದೆ ದಾರಿ ಸಾಗಿ;
ಕರೆಯುತಿದೆ ಅಲ್ಲಿ ದೂರ ಬೆಳುದಿಂಗಳ ತಾರಿ,
ಕನಸು ಹಾಯಿ ಹಾರಿ,
ಬೆಳ್ಳಿಯಿರುಳು, ಮಂಜುಮುಜಲು, ತಾರೆಮಹಲು ದಾಟಿ,
ದಿಗ್ದಿಗಂತ ಮಾಟ,
ಗುಳ್ಳೆಗುಳ್ಳೆ ದನಿಯ ಮೇಲೆ ಮಳೆಯ ಬಿಲ್ಲು ಬಾಗಿ,
ಹೇಗೋ ಮುಂದೆ ತೂಗಿ;
ಆ ಅಪಾರ ನೀಲಲೋಲವೀಚಿಜಾಲ ನೂಕಿ,
ಆಚೆ ಕಾಲು ತಾಕಿ;
ಪಾರಿಜಾತ ತೋಟದಲ್ಲಿ ಪಾರಿವಾಳ ಮೂರು,
ಗೋಪುರ ತುದಿಗೇರು:
ಮನದ ಧಮ್ಮಸ್ಸಿನೇಟಗಲ್ಲಿ ಎಲ್ಲವೂ ಸಮ,
ಹಳ್ಳ ತಿಟ್ಟು ಸರಿಸಮ.
ಗೋಳಗಾಜು ಕುಗ್ಗಿ ಕರಗಿ ನಗ್ನ ದೀಪ ಸಂಭ್ರಮ,
ಕೃಷ್ಣ ಬುದ್ಧ ಅಲ್ಲಮ.

ನಡೆದು ಬಂದ ದಾರಿಕಡೆಗೆ
ತಿರುಗಿಸಬೇಡ,
ಕಣ್ಣ
ಹೊರಳಿಸಬೇಡ.

— ಎಂ. ಗೋಪಾಲಕೃಷ್ಣ ಅಡಿಗ

ನಮ್ಮೆಲ್ಲ ಗ್ರಾಹಕರಿಗೂ ಹಿತಚಿಂತಕರಿಗೂ ಈ ದೀಪಾವಳಿಯು ಸುಖಶಾಂತಿಯನ್ನೀಯಲಿ

*



★ ವರ್ಷ ಭವಿಷ್ಯ ★

ಶಕೆ ೧೮೭೨ ಕಾರ್ತಿಕ ಶು. ೧ ಶುಕ್ರವಾರದಿಂದ ಶಕೆ ೧೮೭೩ ಆಶ್ವೀನ ವ. ೩೦ ಬುಧವಾರ ವರೆಗೆ (ಸನ್ ೧೯೫೦ ನವ್ಹೆಂಬರ ತಾ. ೧೦ರಿಂದ ಸನ್ ೧೯೫೧ ಅಕ್ಟೋಬರ ತಾ. ೩೦ರ ವರೆಗೆ)

ಮೇಷ

ಈ ರಾಶಿಯ ಜನರು ಈ ವರ್ಷ ತಮ್ಮ ಆರೋಗ್ಯವನ್ನು ಸ್ವಲ್ಪ ಜಪ್ಪಿಸಿಕೊಂಡು ಇರತಕ್ಕದ್ದು. ಮಾರ್ಚ ೨೩ ರಿಂದ ಮುಂದೆ ಬರುವ **೧೨ ನೇ ಗುರು** ನಿಮಗೆ ಬಹಳ ತೊಂದರೆ ಕೊಡುವನು. ಇಡಿ ವರ್ಷ ನಿಮ್ಮ ರಾಶಿಯಲ್ಲಿ ಇರುವ **೬ನೇ ಶನಿಯು** ಶತ್ರು ಮತ್ತು ಸಂಕಟನಾಶಕನಾಗಿದ್ದರೂ ನಿಮ್ಮ ಆರೋಗ್ಯಕ್ಕೆ ಅಷ್ಟೊಂದು ಹಿತಕಾರಕನಲ್ಲ. ವಿಷಜಂತುಗಳ ದಂಶ, ವಿಷಜ್ವರ ಇಲ್ಲವೆ ಬೇರೆ ಯಾವುದೊಂದು ಕಾರಣದಿಂದ ವಿಷಬಾಧೆಯಾಗುವಂಥ ಭಯವುಂಟು. ಅದರಲ್ಲಿಯೂ ಫೆಬ್ರುವರಿ ೨೦ ರಿಂದ ಎಪ್ರಿಲ ೧, ಮೇ ೧೧ ರಿಂದ ಜೂನ ೨೩ ಮತ್ತು ಅಗಸ್ಟ ೮ ರಿಂದ ಸಪ್ಟಂಬರ ೨೫ ಈ ಅವಧಿಯಲ್ಲಿ ವಿಶೇಷವಾಗಿ ಜಾಗ್ರತೆ ವಹಿಸಬೇಕು. ವರ್ಷಪ್ರವೇಶ ಕಾಲದಲ್ಲಿ **ಅಷ್ಟಮ** ಅಂದರೆ **ಮೃತ್ಯು ಸ್ಥಾನದಲ್ಲಿ** ಇದ್ದ **ಬುಧನು** ಹುರುಕು ಕಜ್ಜಿ, ಮೈಲೀ, ಗೊಬ್ಬರ, ಇಸಬು ಗಜಕರ್ಣ ಮೊದಲಾದ ತ್ವಚ ರೋಗಗಳ ಭಯವನ್ನುಂಟುಮಾಡುವನು. ಆದರೆ ನಿಮ್ಮ ರಾಶಿಯ ಸ್ವಾಮಿಯಾದ **ಮಂಗಳನು** ವರ್ಷಾರಂಭದಲ್ಲಿ ನವಮ ಅಂದರೆ ಆಯುರ್ವರ್ಧಕ ಸ್ಥಾನದಲ್ಲಿ ಇದ್ದುದರಿಂದ ನೂರಕ್ಕೆ ೯೦ ರಷ್ಟಾದರೂ ಗಂಡಾಂತರಗಳ ಭೀತಿ ತಪ್ಪುವದು. ಉಳಿದ ವಿಷಯಗಳಲ್ಲಿ ಈ ವರ್ಷ ದೇಹ ಸುಖಕ್ಕೆ ಒಳ್ಳೆ ಅನುಕೂಲವಿರುವದು. ಅದರಲ್ಲಿಯೂ ಫೆಬ್ರುವರಿ ೨೦ ರ ವರೆಗೆ ಮತ್ತು ಜೂನ ೨೩ ರಿಂದ ಅಗಸ್ಟ ೮ ರ ವರೆಗೆ ವಿಶೇಷವಾಗಿ ಸುಖದ ದಿನಗಳನ್ನು ಕಳೆಯುವಿರಿ.

ಈ ವರ್ಷ ನಿಮಗೆ ಸ್ತ್ರೀಸುಖ ವಿಶೇಷವಾಗಿ ದೊರೆಯುವದು. ಉಭಯತರ ಪ್ರೇಮಬಂಧನವು ಮತ್ತಷ್ಟು ಗಟ್ಟಿಯಾಗುವದು. ಆದರೆ ಮಾರ್ಚ ೨೩ ರ ನಂತರ ಯಾವದೊಂದು ಇಷ್ಟಾಪತ್ತಿಯಿಂದಲೆ ಅನೇಕ ದಿನಗಳ ವರೆಗೆ ಉಭಯತರು ಪರಸ್ಪರ ವಿರಹದಿಂದಿರಬೇಕಾಗುವದು. ಈ ರಾಶಿಯ ಯಾವ ಸ್ತ್ರೀ ಪುರುಷರ ಮದುವೆಯಾಗುವದಿದೆಯೊ ಅಂಥವರ ಮದುವೆ ಬಹುಶಃ ಮಾರ್ಚ ೨೩ ರೊಳಗಾಗಿ ಜರಗುವವು. ಯಾವದೊಂದು ಸಮಾರಂಭವು ವಿಜೃಂಭಣೆಯಿಂದ ಮತ್ತು ಸುವ್ಯವಸ್ಥಿತವಾಗಿಯೇ ನೆರವೇರುವದು. ಆದರೆ ಮಾರ್ಚ ೨೩ ರ ನಂತರ ಜರುಗಿದ ಸಮಾರಂಭಗಳಲ್ಲಿಅಂದಾಜುಮೀರಿ ವೆಚ್ಚವಾಗುವದು. ಅದರಂತೆಯೇ ಮಾರ್ಚ ೨೩ ರ ನಂತರ ಆಗುವ ಲಗ್ನಗಳಲ್ಲಿ ಗಂಡಹೆಂಡಿರಲ್ಲಿ ಪರಸ್ಪರ ಅಷ್ಟೊಂದು ಮೇಳವು ಕಂಡು ಬರಲಾರದು. ಪ್ರಾಪಂಚಿಕ ಸುಖವೂ ಸ್ವಲ್ಪ ಕಟಕಟಿಯಿಂದ ಸಿಕ್ಕುವದು. ಮನೆಯಲ್ಲಿಯ ಪ್ರತಿಯೊಂದು ವ್ಯಕ್ತಿಯು ಸ್ವತಃ ತಾನು ಬಹಳ ಜಾಣನೆಂದು ತಿಳಿದುಕೊಂಡು ಸ್ವಯಂ ಪ್ರವೃತ್ತಿಯಿಂದ ಮತ್ತು ಸ್ವಚ್ಛಂದವಾಗಿ ವರ್ತಿಸುವನು. ಬಂಧು ಭಗಿನಿಯರು ಸರಿಯಾದ ರೀತಿಯಿಂದ ನಡೆಯುವದಿಲ್ಲ; ತಾಯಿ ತಂದೆ ಇದ್ದರೆ ಅವರೂ ಅವರ ಪಕ್ಷವನ್ನೇ ಕಟ್ಟುವರು; ಆದರೂ ವಿಭಕ್ತರಾಗುವ ಸರತಿ ಏನೂ ಬರಲಿಕ್ಕಿಲ್ಲ. ಮನೆಯ ಹೊರಗಿನ ಉಳಿದ ಆಪ್ತರು ನಿಮ್ಮೊಡನೆ ಪ್ರೇಮದಿಂದ ವರ್ತಿಸುವರು. ಹೆಂಡತಿಯ ಬಂಧುವರ್ಗದವರು ನಿಮ್ಮ ಬಗ್ಗೆ ಬಹಳ ಆದರ ತೋರುವರು. ವಿಶೇಷವಾಗಿ ನವಂಬರ ೧೫ ರ ವರೆಗೆ ಮತ್ತು ಮುಂದೆ ಡಿಸೆಂಬರ ೯ ರಿಂದ ಜಾನೇವರಿ ೨, ಮಾರ್ಚ ೧೫ ರಿಂದ ಎಪ್ರಿಲ ೯ ಈ ಅವಧಿಯಲ್ಲಿ ಪ್ರಾಪಂಚಿಕ ತೊಂದರೆಯು ಬಗೆಬಗೆಯ ಕಾರಣಗಳಿಂದ ಬಹಳ ಎನಿಸುವದು. ಮಾರ್ಚ ೨೩ ರ ನಂತರ ನೀವಾದರೂ ಸ್ವಲ್ಪ ಜಾಗ್ರತೆಯಿಂದಲೇ ಎರಡನೆಯವರೊಡನೆ ಮಾತುಕತೆ ಮಾಡಬೇಕು. ಏಕೆಂದರೆ ಮಾತಾಡುವ ಭರದಲ್ಲಿ ಎಲುಬಿಲ್ಲದ ನಾಲಿಗೆಯು ಮನನೋಯಿಸುವಂತೆ ಎಂತಹ ಮಾತುಗಳನ್ನೂ ಆಡಬಹುದು. ಈ ದಿನಾಂಕದ ನಂತರ ಚಾಡಿ ಹೇಳುವವರ ಲೋಕಾಪವಾದವೂ ಬರುವ ಸಂಭವವುಂಟು.

ಮಾರ್ಚ ೨೩ ರ ವರೆಗೆ ನಿಮ್ಮ ಮಕ್ಕಳಿಗೆ ಬಹಳ ಉತ್ಕರ್ಷದ ಅವಧಿಯು. ಆದರೆ ಡಿಸೆಂಬರ ೨೬ ರಿಂದ ಅವರ ಆರೋಗ್ಯ ಅಷ್ಟೊಂದು ಅನುಕೂಲ ಉಳಿಯಲಾರದು. ಫೆಬ್ರುವರಿ ೨೦ ರಿಂದ ಎಪ್ರಿಲ ೧, ಮೇ ೧೧ ರಿಂದ ಜೂನ ೨೩, ಅಗಸ್ಟ ೮ ರಿಂದ ಸಪ್ಟಂಬರ ೨೫ ರ ಅವಧಿಯಲ್ಲಿ ಅವರು ತಮ್ಮ ಆರೋಗ್ಯವನ್ನು ಹೆಚ್ಚು ಕಾಯ್ದುಕೊಂಡು ಇರತಕ್ಕದ್ದು. ಹುಚ್ಚು, ಭ್ರಮ, ಭೂತಬಾಧೆ ಇಲ್ಲವೆ ಯಾವದೊಂದು ಮಾಟಿನ ಬಗ್ಗೆ ಕೆಟ್ಟ ಅನ್ನಿಸಿಕೊಳ್ಳುವದು ಇವೇ ಮೊದಲಾದ ಚಮತ್ಕಾರಿಕ ಉಪದ್ರವಗಳ ಭೀತಿಯು ವಿಶೇಷವೆನಿಸುವದು.

ಧಂದೆಯವರಿಗೆ, ಕೂಲಿಗಾರರಿಗೆ ಮಾರ್ಚ ೨೩ ರ ವರೆಗೆ ಬಹಳ ಅನುಕೂಲ. ಸ್ವತಂತ್ರ ಧಂದೆ ಮಾಡುವವರಂತೂ ಬಹಳ ಉತ್ಕರ್ಷ ಹೊಂದುವರು. ಕೈಯಲ್ಲಿ ಮಣ್ಣು ಹಿಡಿದರೂ ಕ್ಷಣಾರ್ಧದಲ್ಲಿ ಅದು ಹೊನ್ನಾಗಿ ಪರಿಣಮಿಸುವದು. ನಿಮ್ಮ ಲಾಭದಲ್ಲಿ ಅಡ್ಡಗಾಲು ಹೊಡೆಯುವವರು ಎಂಥ ದೊಡ್ಡ ಶತ್ರುವಿದ್ದರೂ ಹಾ ಹಾ ಎನ್ನುವದರಲ್ಲಿ ಅವರು ಹಾರಿಹೋಗುವರು. ಅದರಂತೆಯೇ ಸಂಕಟಗಳೂ ಪರಿಹಾರ ಹೊಂದುವವು. ಡಿಸೆಂಬರ ೨೬ ರ ವರೆಗೆ ನಿಮಗೆ ಉತ್ಕರ್ಷಕಾರಕ ಎನಿಸುವದು. ಅಂದಾಜಿಗಿಂತ ಬಹಳ ಹೆಚ್ಚು ಲಾಭವಾಗುವದು. ನೀವು ನೋಕರಿಯಲ್ಲಿದ್ದರೆ ಅವರ ದೈವವೂ ತೆರೆಯುವದು. ಮೇಲಿನ ಗ್ರೇಡ ಸಿಕ್ಕುವ ಸಂಭವವಿದ್ದರೆ ಅದು ಸಿಕ್ಕೇ ತೀರುವದು. ಯಾಂತ್ರಿಕ ಧಂದೆಯವರು, ಹೊಲಮಾಡುವವರು ಗಣಿಗಳಲ್ಲಿ ಧಂದೆ ಮಾಡುವವರು, ಉಪ್ಪು ಮಾಡುವವರು ಇಲ್ಲವೆ ಆಯಾ ಶಾಖೆಗಳಲ್ಲಿ ನೋಕರಿಮಾಡುವವರು, ವಕೀಲರು, ಬ್ಯಾರಿಷ್ಟರರು ಇಲ್ಲವೆ ಕೋರ್ಟುಗಳಲ್ಲಿಯ ನೋಕರರು ಇವರ ಕಿಸೆಗಳು ಉಳಿದವರ ಕಿಸೆಗಳಿಗಿಂತ ಹೆಚ್ಚು ತುಂಬುವವಾದರೂ ಮಾರ್ಚ ೨೩ ರ ನಂತರ ಬರುವ **೧೨ ನೇ ಗುರುವಿನ** ಅವಧಿಯಲ್ಲಿ ಧಂದೆ ಮಾಡುವವರಾದರೂ ಹೆಚ್ಚು ಜಾಗೃತರಾಗಿ ಇರಬೇಕು. ಏಕೆಂದರೆ ತುಂಬಿದ ಕಿಸೆಗಳಿಗೆ ದಿನವೂ ಹೊಸ ಹೊಸ ತೂತುಬಿದ್ದು ಹಣ ಹೇಗೆ ಸಿಕ್ಕಿತೋ ಹಾಗೆ ಮಾಯವಾಗಿ ಹೋಗುವ ಅನವಸ್ಥೆಯುಂಟಾದೀತು. ನೋಕರ ವರ್ಗದವರಿಗೂ ಬಹಳ ತೊಂದರೆಯಾಗುವದು. ಒಡೆಯರ ಇಲ್ಲವೆ ಸರಕಾರದವರ ವಕ್ರದೃಷ್ಟಿ ನಿಮ್ಮ

ಜ್ಯೋತಿಷಿ: **ಶ್ರೀ. ಕೃಷ್ಣಶಾಸ್ತ್ರಿ ಭಿಡೆ,** ಭವಿಷ್ಯಕಥನ ಆಫೀಸ, ಕಾರ್ಲೇಕರ ಬಿಲ್ಡಿಂಗ, ಖಡೇಬಝಾರ—ಬೆಳಗಾವಿ.

ಮೇಲೆ ಬೀಳುವದು. ಅದನ್ನು ಸರಿಪಡಿಸಬೇಕಾದರೆ ಕಣ್ಣಿನ ನೀರು ಕಪಾಳಕ್ಕೆ ಬರುವದು. ಮಿತ್ರರು ತಿರುಗಿಬಿದ್ದು ಶತ್ರುಗಳಾಗುವರು. ಬದಲಿಯಾಗುವದಿದ್ದರೆ ಬಹಳ ಕೆಟ್ಟ ಹವೆಯಿದ್ದ ಸ್ಥಳಕ್ಕೆ ಆಗುವದು. ಇಲ್ಲವೆ ನಿಮ್ಮ ಮರ್ಯಾದೆಗೆ ಇಲ್ಲವೆ ಅಧಿಕಾರಕ್ಕೆ ಸ್ವಲ್ಪ ಧಕ್ಕೆ ತಟ್ಟುವಂತೆ ಪರಿಣಮಿಸುವದು. ಕೈಯಲ್ಲಿಯ ದುಡ್ಡು ಬಹಳ ಸಂಪ್ರುಷ್ಟಕ್ಕೆ ಬರುವದು. ಒಟ್ಟಾರೆ ವಿಪುಲ ದ್ರವ್ಯ ಸಂಚಯವಾಗಿದ್ದರೂ ಸಂಗ್ರಹ ಉಳಿಯುವ ಇಲ್ಲವೆ ಮನಸ್ಸಿನಂತೆ ಸುಖ ಸಿಕ್ಕುವ ಯೋಗ ಕಡಮೆಯೇ. ಆದರೆ ಮನೆಯ ಉತ್ಪನ್ನವನ್ನು ಅವಲಂಬಿಸಿಕೊಂಡು ಇರುವವರಿಗೆ **೧೨ ನೇ ಗುರು** ಕೇವಲ ಕಿರಕುಳ ತೊಂದರೆ ಮಾತ್ರ ಕೊಡಬಲ್ಲನು. ಯಾವನೊಬ್ಬ ಅಧಿಕಾರಿಯ ಕೃಪೆಯಿಂದ ಡಿಸೆಂಬರ ೧೫ ರಿಂದ ಮಾರ್ಚ ೧೨ ರ ವರೆಗೆ ಇಲ್ಲವೆ ಜೂನ ೧೬ ರಿಂದ ಅಕ್ಟೋಬರ ೧೬ ರ ವರೆಗೆ ಸ್ಥಾವರ ಸಂಬಂಧದಲ್ಲಿ ಹೆಚ್ಚಳ ಇಲ್ಲವೆ ಅನ್ಯರೀತಿಯಿಂದ ವಿಶೇಷ ಕಲ್ಯಾಣಕರ ಘಟನೆಗಳು ಸಂಭವಿಸುವವು. ಡಿಸೆಂಬರ ೨೬ ರ ನಂತರ ದನಕರುಗಳಿಗೆ ರೋಗ ರುಜಿಗಳ ಅಂಜಿಕೆ ಇದೆ. ವಾಹನಗಳಿದ್ದರೂ ಅವುಗಳ ಸುಖ ನಿಮಗಿಂತ ಎರಡನೆಯವರಿಗೇ ಹೆಚ್ಚು ದೊರೆಯುವದು.

ಕೋರ್ಟ ಕಚೇರಿಗಳಲ್ಲಿ ನಡೆದ ದಾವೆಗಳಲ್ಲಿ ಇಲ್ಲವೆ ಖಾಸಗಿ ರೀತಿಯಿಂದ ನಡೆದ ಯಾವದೇ ಬಗೆಯ ಸ್ಪರ್ಧೆಗಳಲ್ಲಿ ೧೦ ರಲ್ಲಿ ೮ ರಲ್ಲಿಯಾದರೂ ನಿಶ್ಚಿತವಾಗಿ ಯಶಸ್ಸು ದೊರೆಯುವದು. ಅದರಲ್ಲಿಯೂ ನವಂಬರ ೧೫ ರ ವರೆಗೆ ಮತ್ತು ಅನಂತರ ದಿಸೆಂಬರ ೯ ರಿಂದ ಜಾನೇವರಿ ೨, ಜಾನೇವರಿ ೨೬ ರಿಂದ ಫೆಬ್ರುಅರಿ ೧೯, ಮಾರ್ಚ ೧೫ ರಿಂದ ಎಪ್ರಿಲ ೯, ಮೇ ೪ ರಿಂದ ಮೇ ೩೧ ಮತ್ತು ಜುಲೈ ೧ ರ ನಂತರ ಹೆಚ್ಚು ಪ್ರಮಾಣದಲ್ಲಿ ಅದು ಸಿಕ್ಕುವದು. ಮಾರ್ಚ ೨೩ ರ ನಂತರ ದೂರದೂರದ ಪ್ರವಾಸಗಳು ಸಂಭವಿಸುವವು. ಆದರೆ ಆದರಲ್ಲಿಯ ಉದ್ದೇಶ ಮಾತ್ರ ಪೂರ್ಣವಾಗುವದಿಲ್ಲ.

ಈ ರಾಶಿಯ] ಸ್ತ್ರೀಯರು ಹಡೆಯುವವರಿದ್ದರೆ ಅವರು ದಿಸೆಂಬರ ೨೬ ರೊಳಗಾಗಿ ಹಡೆದರೆ ಅತಿ ಸುಲಭವಾಗಿ ಹೆರುವರು. ಮಾರ್ಚ ೨೩ ರೊಳಗಾಗಿ ಸ್ವಲ್ಪ ಕಷ್ಟದಿಂದ ಹಡೆಯುವರು. ಆದರೆ ಅನಂತರ ಹೆರುವವರು ಪಡುವ ಕಷ್ಟ ಬಹಳ ದಿನಗಳ ವರೆಗೆ ನೆನಪಿನಲ್ಲಿ ಉಳಿಯುವದು. ಆದುದರಿಂದ ತಜ್ಞ ಡಾಕ್ಟರರ ಸಲಹೆ ಸೂಚನೆಗಳಂತೆ ನಡೆಯಬೇಕು. ಮಾರ್ಚ ೨೩ ರೊಳಗಾಗಿ ಹಡೆದರೆ ಗಂಡು ಮಗು ಮತ್ತು ಅನಂತರ ಹೆಣ್ಣುಮಗು ಹುಟ್ಟುವ ಸಂಭವ ಬಹಳ. ಆದರೆ ಮಕ್ಕಳು ಮಾತ್ರ ದುಂಡಗಾಗಿ ಬಹಳ ಸುಂದರ ಇರುವರು.

ಈ ರಾಶಿಯ ವಿದ್ಯಾರ್ಥಿಗಳಿಗಾದರೂ ಮಾರ್ಚ ೨೩ ರ ವರೆಗೆ ಯಶಸ್ಸು ಹೆಚ್ಚು. ಮುಂದಿನದು ಸಂಶಯಾಸ್ಪದ. ಭಾಷಾವಿಷಯ ಮತ್ತು ಇತಿಹಾಸ ಬಹಳ ಕಚ್ಚಾ ಉಳಿಯುವದು. ಬಿ ಕಾಮ ಮತ್ತು ಸಿವಿಲ್ ಎಂಜಿನಿಯರಿಂಗ ಓದುವ ವಿದ್ಯಾರ್ಥಿಗಳು ಉಳಿದವರಿಗಿಂತ ಹೆಚ್ಚಾಗಿ ಯಶಸ್ವಿಗಳಾಗುವದು ನಿಶ್ಚಿತ. ಆದರೆ ಮಾರ್ಚ ೨೩ ರ ನಂತರ ಮಾತ್ರ ಬಹಳ ತೊಂದರೆ. ನವಂಬರ ೧೫ ರ ವರೆಗೆ ಮತ್ತು ಅನಂತರ ಡಿಸೆಂಬರ ೧೫ ರಿಂದ ಜಾನೇವರಿ ೧೪, ಫೆಬ್ರುಅರಿ ೧೨ ರಿಂದ ಮಾರ್ಚ ೧೩ ಎಪ್ರಿಲ ೧೪ ರಿಂದ ಮೇ ೧೫ ಮತ್ತು ಅಗಸ್ಟ ೧೬ ರಿಂದ ಸಪ್ಟಂಬರ ೧೬ ರೊಳಗಾಗಿ ಯಾವ ವಿದ್ಯಾರ್ಥಿಗಳ ಪರೀಕ್ಷೆಯಾಗುವದಿದೆಯೊ ಅವರಿಗೆ ಸರಸ್ವತಿಯೇ ನಿಂತುಕೊಂಡು ಯಶಸ್ಸು ತಂದು ಕೊಡುವಳು. ಇದು ನಿಶ್ಚಿತ.

ಒಟ್ಟಾರೆ ಈ ವರ್ಷದ ಅಥಾವೆ ತೆಗೆದು ನೋಡಿದರೆ, ನಿಮಗೆ ಮಾರ್ಚ ೨೩ ರ ವರೆಗೆ ಎಲ್ಲ ಬಗೆಯಿಂದ ಪೂರ್ಣ ಸಮಾಧಾನ ಮತ್ತು ಸಂಪೂರ್ಣ ಯಶಸ್ಸು ಸಿಕ್ಕುವದು. ಅನಂತರ ಅಷ್ಟೊಂದು ಯಶಸ್ಸು ಮತ್ತು ಸಮಾಧಾನ ದೊರೆಯದೆ ಶತ್ರು ಮತ್ತು ಸಂಕಟಗಳ ನಾಶ ಮನಸ್ಸಿನಂತೆ ನಡೆಯಹತ್ತಿದರೂ ತೊಂದರೆ ಮತ್ತು ವೆಚ್ಚ ಹಾಗು ವಿಪರೀತ ಯಾತಾಯಾತ ಎನಿಸದೆ ಇರಲಾರದು.

ವೃಷಭ

ಈ ರಾಶಿಯವರು ಈ ವರ್ಷವನ್ನೆಲ್ಲ ಸರ್ವಸಾಧಾರಣ ಚಿಕ್ಕ ದೊಡ್ಡ ಕಾಯಿಲೆಯಲ್ಲಿಯೆ ಕಳೆಯಬೇಕಾಗುವದು. ಬಹಳ ತೊಂದರೆಯೂ ಎನಿಸುವದು. ಮೂಲವ್ಯಾಧಿ, ಮೂತ್ರಕೃಚ್ಛ್ರ ಪ್ರಮೇಹ, ಉಪದಂಶ, ದಮ್ಮು, ತೊಡೆಗೆ ಅಂತರ್ಗಳ, ಹುಣ್ಣಾಗುವದು, ಕಾಲು ಸುಟ್ಟು ಇಲ್ಲವೆ ಬಿದ್ದು ಗಾಯ ಹೊಂದುವದು ಇಲ್ಲವೆ ಕಿರುಕಳ ಉಪದ್ರವದ ಅಂಜಿಕೆ ಬಹಳ ಇದೆ. ವರ್ಷಾರಂಭದಲ್ಲಿ **ಎರಡನೆಯ** ಸ್ಥಾನದಲ್ಲಿ **ಹರ್ಶಲ** ಮತ್ತು **ಅಷ್ಟಮ** ಸ್ಥಾನದಲ್ಲಿ ಮಂಗಳನಿರುವದರಿಂದ ಕುಪಥ್ಯ ಮಾಡಿಸುವರು. ಅದರಿಂದ ಔಷಧೋಪಚಾರದ ಉಪಯೋಗವೂ ಅಷ್ಟೊಂದಾಗುವದಿಲ್ಲ. ಈ ವಿಷಯದಲ್ಲಿ ದಿಸೆಂಬರ ೬ ರ ವರೆಗೆ ಅನಂತರ ಫೆಬ್ರುವರಿ ೨೦ ರಿಂದ ಎಪ್ರಿಲ ೧, ಜೂನ ೨೩ ರಿಂದ ಅಗಷ್ಟ ೮ ಮತ್ತು ಸಪ್ಟಂಬರ ೨೫ ನಂತರದ ಅವಧಿಯು ಹೆಚ್ಚು ತೊಂದರೆದಾಯಕವೆನಿಸುವವು. ಆದರೆ ಅಷ್ಟಮೇಶ ಅಂದರೆ ಮೃತ್ಯುಸ್ವಾಮಿಯಾದ **ಗುರು** ಈ ವರ್ಷದಲ್ಲಿ ಹತ್ತನೇ ಮತ್ತು ಹನ್ನೊಂದನೆ ಅಂದರೆ ಉತ್ತಮ ಸ್ಥಾನಗಳಲ್ಲಿ ಭ್ರಮಣ ಮಾಡುವದರಿಂದ ಗಂಡಾಂತರದ ಅಂಜಿಕೆ ಸ್ವಲ್ಪವೂ ಇರುವದಿಲ್ಲ. ಆದರೆ ಅವಾಂತರ ಶರೀರ ಸ್ವಾಸ್ಥ್ಯಕ್ಕೆ ಅವಶ್ಯಕವೆನಿಸುವಂತಹ ಸುಖ ಕೂಡ ಸಿಕ್ಕಲಾರದು. ಸ್ವಂತದ ಮನೋವೃತ್ತಿಯೂ ದುಃಖದಲ್ಲಿ ಸುಖವನ್ನು ಹುಡುಕುವದಾಗಿರದೆ ಸುಖದಲ್ಲಿ ದುಃಖವನ್ನು ಹುಡುಕುವದೇ ಆಗಿ ಉಳಿಯುವದು.

ನಿಮ್ಮ ಆರೋಗ್ಯ ಮತ್ತು ಮನೋವೃತ್ತಿಯ ಸ್ಥಿತಿ ಹೇಗೆ ಇರುವದೋ ಸರ್ವಸಾಧಾರಣ ಅದರಂತೆಯೆ ನಿಮ್ಮ ಹೆಂಡತಿಯ ಸ್ಥಿತಿಗತಿಯೂ ಇರುವದು. ಉಭಯತರಲ್ಲಿ ಒಬ್ಬರೊಬ್ಬರ ಬಗ್ಗೆ ಪ್ರೇಮ ಮತ್ತು ಆದರ ಅನುಕೂಲವಿದ್ದರೂ ಅಸಂತೋಷದಿಂದ ಇಬ್ಬರ ಸ್ವಭಾವವೂ ವಿಪರೀತ ಸಿಡಕಿನವಾಗುವದು. ಕೆಲವೊಂದು ಅಪರಿಹಾರ್ಯ ಕಾರಣದಿಂದ ಅವಳು ಇಲ್ಲವೆ ನೀವು ಸ್ಥಳಾಂತರವಾಗುವದರಿಂದ ಬಹಳ ದಿನಗಳ ವರೆಗೆ ವಿರಹವ್ಯಥೆಯನ್ನು ಅನುಭೋಗಿಸಬೇಕಾಗುವದು. ದಿಸೆಂಬರ ೨೬ ರ ವರೆಗೆ ಮಕ್ಕಳಿಗೆ ಕಾಯಿಲೆಯ ಅಂಜಿಕೆ ಇದ್ದುದೆ. ಅನಂತರ ನಿಮ್ಮ ಮತ್ತು ಪತ್ನಿಯ ತಂದೆ ತಾಯಿಗಳಿಗೆ ಕಾಯಿಲೆಯ ಅಂಜಿಕೆಯಿದೆ. ಅಲ್ಲದೆ ಹಿತಶತ್ರು ಇಲ್ಲವೆ ಆಗಲಾರದ ಜನರ ಹೇಳಿಕೆಯಿಂದ ಮೇಲಿಂದ ಮೇಲೆ ನಿಮ್ಮೊಳಗೆ ವಿರೋಧವುಂಟಾಗಿ ಮಾತು-ನಡವಳಿಕೆಯಲ್ಲಿ ಬಹಳ ತಿಕ್ಕಾಟವೇಳುವದು. ಮಾರ್ಚ ೨೩ ರ ನಂತರ ಇದು ಮತ್ತಷ್ಟು ಹೆಚ್ಚುವದು. ಉಳಿದ ಆಪ್ತೇಷ್ಟರೊಡನೆಯೂ ಕೆಲಮಟ್ಟಿಗೆ ವಿರೋಧವೇ. ಡಿಸೆಂಬರ ೨೬ ರ ನಂತರ ಸ್ಥಾವರದಲ್ಲಿ ಹಾನಿ ವಿಪರೀತ. ಗೊಂದಲ ಇಲ್ಲವೆ ಕಾಲ್ಪನಿಕ ಭೀತಿಗಳಿಂದ ಬಹಳ ತೊಂದರೆಯುಂಟಾಗಹತ್ತುವದು. ರೋಗರುಜಿಗಳಿಂದ ಮತ್ತು ನೋಕರರ ಅಸಡ್ಡೆಯಿಂದ ವಾಹನಗಳು ಮತ್ತು ದನಕರುಗಳ ನಾಶ ಮತ್ತು ಹಾನಿಯಾಗುವದು. ಇದರಿಂದ ಮನೆಬಿಟ್ಟು ಹೋಗಬೇಕೆಂದೆನಿಸುವದು. ಬೇಡಾದಾಗ ನಿದ್ದೆ ಬರುವದು, ಬೇಕೆನಿಸಿದಾಗ ಸ್ವಲ್ಪೂ ನಿದ್ದೆ ಹತ್ತುವದಿಲ್ಲ. ಮಕ್ಕಳ ವಯೋಮಾನಕ್ಕನುಸರಿಸಿ ಮಕ್ಕಳ ಉನ್ನತಿ ಬಹಳ ಮಟ್ಟಿಗೆ ಆಗುವದು. ಅವರ ವಿವಾಹ ಮೊದಲಾದ ಮಂಗಳ ಕಾರ್ಯಗಳು ಮಾರ್ಚ ೨೩ ರ ನಂತರ ಅಲ್ಪಾಯಾಸದಿಂದ ಜರಗುವವು. ಅದರಂತೆಯೇ ಈ ರಾಶಿಯ ಸ್ತ್ರೀಪುರುಷರ ವಿವಾಹವಾಗುವದಿದ್ದರೆ ಮೇಲೆ ಹೇಳಿದ ತಾರೀಕಿನ ನಂತರ ಹೆಚ್ಚಾಗಿ ಆಗೇ ತೀರುವದು. ಆದರೆ ಅದಾಗುವ ವರೆಗೆ ಹದಿನೆಂಟು ಅಡಚಣೆಗಳು ಅಡ್ಡ ಬರುವವು. ವಧೂವರರೂ ಬಹಳ ಮಟ್ಟಿಗೆ ಅನುರೂಪ ಇರುವದಿಲ್ಲ.

ಶಾರೀರಿಕ ಮತ್ತು ಪ್ರಾಪಂಚಿಕ ಸೌಖ್ಯ ಅಳದಕ್ಕಿಯದಾಗಿದ್ದರೂ ಧಂದೆ ಮಾಡುವವರಿಗೆ ಮತ್ತು ಕೂಲಿಗಾರರಿಗೆ ಉತ್ತಮವೇ ಇದೆ. ಮಾರ್ಚ ೨೩ ರ ವರೆಗೆ ಧಂದೆಯವರಿಗೆ ಮತ್ತು ಅನಂತರ ನೋಕರ ವರ್ಗದವರಿಗೆ ಪ್ರಗತಿಯಾಗುವದು. ಮನಸ್ಸಿನಂತೆ ದುಡ್ಡು ಸಿಕ್ಕುವದು. ಮತ್ತು ಬಹಳ ಸಂಗ್ರಹವೂ ಆಗುವದು. ಮೂಲತಃ ದುರ್ದೈವಿಗಳಾಗಿದ್ದವರ ಭಾಗ್ಯವೂ ತೆರೆಯುತ

ವದು. ಮನಸ್ಸಿನಂತೆ ಉದ್ಯೋಗ ಧಂದೆಗಳು ವಿಸ್ತಾರಹೊಂದಿ ನಿಮಗೇ ಆಶ್ರಯವೆನಿಸುವಷ್ಟು ಪತ್ತು ಉಳಿಯುವದು. ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಪ್ರತಿಷ್ಠೆಯೂ ಹೆಚ್ಚಿ ಮಾತಿನ ವರ್ಚಸ್ಸು ಚೆನ್ನಾಗಿ ಉಳಿಯುವದು. ದೊಡ್ಡವರ ಭೆಟ್ಟಿ, ಸಹವಾಸ ಮತ್ತು ಅನುಗ್ರಹದ ಯೋಗ ಮೇಲಿಂದ ಮೇಲೆ ಒದಗಿ ಬರುವದು. ಇಂಥ ಯೋಗವು ಮಾರ್ಚ ೩೧ ರ ವರೆಗೆ ಹೆಚ್ಚಿಗೆ. ಅನಂತರ ಮಿತ್ರಸುಖ ಬಹಳ ಉತ್ತಮ. ಅವರಲ್ಲಿ ಕೆಲವರು ನೀವು ಮನೆಯಲ್ಲಿ ಕುಳಿತಿರುವಾಗ ಲಾಭ ಮತ್ತು ಯಶಸ್ಸನ್ನು ನಿಮ್ಮ ಉಡಿಯಲ್ಲಿ ತಂದು ಹಾಕುವರು. ನೀವು ನೋಕರ ವರ್ಗದವರಿದ್ದರೆ ನಿಮ್ಮ ಅಧಿಕಾರ ಮತ್ತು ಸಂಬಳದಲ್ಲಿ ಬಢತಿ ಅಪೇಕ್ಷೆಗಿಂತ ಹೆಚ್ಚಿಗೆ ಆಗುವದು. ಬದಲಿಯಾದರೆ ಉತ್ತಮ ಸುಖ ಸೌಕರ್ಯಗಳಿದ್ದ ಸ್ಥಳಗಳಿಗೆ ಆಗುವದು. ಕೈಕೆಳಗಿನ ನೋಕರರಿಗಿಂತ ವರಿಷ್ಠರೇ ಹೆಚ್ಚು ಸ್ನೇಹಭಾವದಿಂದ ವರ್ತಿಸುವರು. ವಿಶೇಷವಾಗಿ ನವಂಬರ ೩೦ ರ ವರೆಗೆ ಫೆಬ್ರುವರಿ ೪ ರಿಂದ ೨೪, ಮಾರ್ಚ ೧೨ ರಿಂದ ೨೮, ಜೂನ ೨ ರಿಂದ ೧೯ ಮತ್ತು ಸಪ್ಟಂಬರ ೨೮ ರಿಂದ ಆಕ್ಟೋಬರ ೧೬ ರ ವರೆಗಿನ ಅವಧಿಯಲ್ಲಿ ವಿಪರೀತ ಲಾಭ ದೊರಕುವದು. ಒಕ್ಕಲಿಗರು, ಹಣ್ಣು ಕಾಯಿಪಲ್ಲೆ ಮಾರುವವರು, ಧಂಧೆ ಮಾಡುವವರು, ಡೇರಿಯವರು, ಮಿಠಾಯಿಗಾರರು ಇವರಿಗೆ ಮತ್ತು ಕಸ್ಟಮ್ಸ, ಪೋಷ್ಟ, ನೀರಾವರಿ, ರೇಲ್ವೆಗಳಂಥ ಶಾಖೆಗಳಲ್ಲಿಯ ನೋಕರರಿಗೆ ಆದರಂತೆ ಮುದ್ರಣಾಲಯದವರು, ಕವಿಗಳು, ಗ್ರಂಥಕರ್ತರು, ವರ್ತಮಾನ ಪತ್ರಕಾರರಂಥ ಬುದ್ಧಿಜೀವಿಗಳಿಗೆ ಈ ವರ್ಷ ಹೆಚ್ಚು ಭಾಗ್ಯ ಮತ್ತು ಲಾಭಕಾರಕವಾಗಿರುವದು. ನಿಮ್ಮ ದೊಡ್ಡಸ್ತಿಕೆಯನ್ನು ತೋರಿಸುವದಕ್ಕಾಗಿ ಬಹಳ ನಿರರ್ಥಕ ವೆಚ್ಚವನ್ನು ಬೇಕೆಂತಲೆ ಮಾಡುವ ಹುಚ್ಚು ಕಂಡುಬರುವದಾದರೂ ಉಳಿದ ವಿಷಯಗಳಲ್ಲಿ ಅಳವಿನಲ್ಲಿಯೇ ಉಳಿಯುವಿರಿ. ಗುಪ್ತ ಮತ್ತು ಪ್ರತ್ಯಕ್ಷ ಶತ್ರುಗಳು ಮೊದಲಿಗಿಂತ ಬಹಳ ಹೆಚ್ಚುವರು ಮತ್ತು ಅವರಲ್ಲಿ ಕೆಲ ಸ್ತ್ರೀಯರೂ ಕಂಡುಬರುವರು. ವಾದವಿವಾದದ ಇಲ್ಲವೆ ಸ್ಪರ್ಧೆಯ ಕೆಲಸಗಳಲ್ಲಿ ವಿರುದ್ಧ ಪಕ್ಷದವರಿಗೇ ಬಹಳ ಯಶಸ್ಸು ಸಿಕ್ಕುವ ಅಂಜಿಕೆ. ನಿಮ್ಮ ಮಾತುಗಳು ಮತ್ತು ನೀವು ಹಾಜರಪಡಿಸಿದ ಪುರಾವೆಗಳೇ ನಿಮ್ಮ ವಿರುದ್ಧವಾಗಿ ಪರಿಣಮಿಸುವವು. ನವಂಬರ ೧೫ ರಿಂದ ದಿಸೆಂಬರ ೯, ಜಾನೇವರಿ ೨ ರಿಂದ ೨೬, ಫೆಬ್ರುವರಿ ೧೯ ರಿಂದ ಮಾರ್ಚ ೧೫, ಎಪ್ರಿಲ ೯ ರಿಂದ ಮೇ ೪, ಮೇ ೩೦ ರಿಂದ ಜುಲೈ ೧ ರ ಮಧ್ಯಾಂತರ ಅವಧಿಯಲ್ಲಿ ದಾವೆಯ ನಿಕಾಲೆಯಾದರೆ ಯಶಸ್ಸು ನಿಶ್ಚಿತವಾಗಿ ಸಿಕ್ಕುವಂಥ ಯೋಗ. ವಾದಿಗಿಂತ ಪ್ರತಿವಾದಿಯಾಗಿರುವವರಿಗೇ ಯಶಸ್ಸಿನ ಅನುಕೂಲತೆ ಹೆಚ್ಚು. ಪರಸ್ತ್ರೀಯ ಬಗ್ಗೆ ದುರಾಶೆ ಹೆಚ್ಚಿ ಯಾರ ಜನ್ಮ ಕುಂಡಲಿಯಲ್ಲಿ ಶುಕ್ರನು ಅಷ್ಟಮ ಇಲ್ಲವೆ ದ್ವಾದಶ ಸ್ಥಾನದಲ್ಲಿ ಇರುವನೋ ಅವರ ಬಗ್ಗೆ ಈ ವಿಷಯದಲ್ಲಿ ಬಹಳ ಬೊಬ್ಬಾಟೆ ಆಗುವ ಅಂಜಿಕೆಯಿದೆ.

ಈ ರಾಶಿಯ ಹೆಣ್ಣು ಮಕ್ಕಳು ಈ ವರ್ಷದಲ್ಲಿ ಹಡೆಯುವವರಿದ್ದರೆ-ಗಂಡು ಹುಟ್ಟಿದರೆ ಬಹಳ ಕಷ್ಟದಿಂದ, ಹೆಣ್ಣು ಹುಟ್ಟಿದರೆ ಅದಕ್ಕಿಂತ ಸುಲಭವಾಗಿ ಹೆರಿಗೆಯಾಗುವದು. ಅದರಲ್ಲಿಯೂ ದಿಸೆಂಬರ ೨೬ ವರೆಗೆ ಬಹಳ ಕಷ್ಟ. ಅನಂತರ ಮಾರ್ಚ ೨೬ ರ ವರೆಗೆ ಹಡೆದರೆ ಅವರಿಗೆ ಮಧ್ಯಮ ಮತ್ತು ಅನಂತರ ಹಡೆದವರಿಗೆ ಬಹಳ ಕಡಮೆ ಕಷ್ಟವೆನಿಸುವದು. ಈ ರಾಶಿಯವರ ಮಕ್ಕಳು ಇಲ್ಲವೆ ಸೊಸೆ ಹಡೆಯುವವರಿದ್ದರೆ ದಿಸೆಂಬರ ೨೬ ರಿಂದ ಮಾರ್ಚ ೩೧ ರ ವರೆಗಿನ ಅವಧಿಯಲ್ಲಿ ಆದರೆ ಸ್ವಲ್ಪ ಕಷ್ಟದಿಂದ ಅವರ ಹೆರಿಗೆಯಾಗುವದು. ಅನಂತರ ಸುಲಭವಾಗಿ ಸಂಭವಿಸುವದು.

ಈ ರಾಶಿಯ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಕನಿಷ್ಠ ೭೫ ರಷ್ಟಾದರೂ ಯಶಸ್ವಿಯಾಗುವದು. ವೈದ್ಯಕೀಯ, ಭೂಗರ್ಭಶಾಸ್ತ್ರ, ಭೂಸ್ತರಶಾಸ್ತ್ರ, ಒಕ್ಕಲತನ ಮತ್ತು ನೌಕಾಶಾಸ್ತ್ರ ಇವುಗಳ ಅಭ್ಯಾಸ ಮಾಡುವವರಿಗೆ ಉಳಿದ ವಿಷಯಗಳ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗಿಂತ ಹೆಚ್ಚಿಗೆ ಯಶಸ್ಸಿನ ಖಾತ್ರಿ. ಆದರೆ ಪರೀಕ್ಷೆ ನವಂಬರ ೩೦ ರ ವರೆಗೆ ಮತ್ತು ಅನಂತರ ಫೆಬ್ರುವರಿ ೪ ರಿಂದ ೨೪, ಮಾರ್ಚ ೧೨ ರಿಂದ ೨೮, ಜೂನ ೨ ರಿಂದ ಜುಲೈ ೧೫ ಮತ್ತು ಸಪ್ಟಂಬರ ೨೮ ರಿಂದ ಅಕ್ಟೋಬರ ೧೬ ರ ವರೆಗೆ ಆಗುವದಿದ್ದರೆ ಅವರಾದರೂ ಯಶಸ್ಸಿನ ಬಗ್ಗೆ ಖಾತ್ರಿ ಹಿಡಿಯಲಡ್ಡಿಯಿಲ್ಲ.

ಒಟ್ಟಾರೆ ಈ ವರ್ಷದ ಅಥಾವೆ ತೆಗೆದು ನೋಡಿದರೆ ಸಾಂಸಾರಿಕ ಜೀವನ ತೊಂದರೆಯಿಂದ ಸಾಗಿದ್ದರೂ ವಿದ್ಯಾ ವ್ಯವಸಾಯಗಳಿಗೆ ಒಳ್ಳೆ ಹುರುಪಿನ ವರ್ಷವಾಗಿ ಪರಿಣಮಿಸುವದು.

ಮಿಥುನ

ಈ ವರ್ಷ ನಿಮಗೆ ದೇಹಾರೋಗ್ಯ ಮೇಷ ಮತ್ತು ವೃಷಭರಾಶಿಯವರಿಗಿಂತ ಹೆಚ್ಚು ಕ್ಲೇಶಕರವಾಗಿ ಪರಿಣಮಿಸುವದು. ವರ್ಷಾರಂಭದಲ್ಲಿಯೇ ದೇಹಾಧಿಪತಿಯಾಗಿರುವ **ಬುಧನು** ಆರನೇ ಅಂದರೆ ರೋಗಸ್ಥಾನದಲ್ಲಿ ವೃಶ್ಚಿಕ ರಾಶಿಯಂಥ ಶತ್ರು ಮತ್ತು ಅತ್ಯುಷ್ಣ ರಾಶಿಯಲ್ಲಿ ಇರುವದರಿಂದ ಮತ್ತು ತತ್ಸ್ವಾಮಿಯಾದ **ಮಂಗಳನು** ಮತ್ತು ಈಗ ೪ ನೇ ಸ್ಥಾನದಲ್ಲಿ ಇರುವ ಮೃತ್ಯುಸ್ವಾಮಿ **ಶನಿಯ ದೃಷ್ಟಿ** ದೇಹಸ್ಥಾನದ ಮೇಲೆ ಬೀಳುವದರಿಂದ ಈ ಎಲ್ಲ ಯೋಗವು ಬಹಳ ತೊಂದರೆಯನ್ನು ಕೊಡುವದು. ಇದರ ಪರಿಹಾರಾರ್ಥ ಈ ರಾಶಿಯ ಮತ್ತು ಈ ಲಗ್ನದ ಪ್ರತಿಯೊಬ್ಬ ಮನುಷ್ಯನು ಮಹಾ ಮೃತ್ಯುಂಜಯ ಜಪವನ್ನು ಕನಿಷ್ಠ ೧೧೦೦೦ ವನ್ನಾದರೂ ಮಾಡಬೇಕು. ಅಂದರೆ ವರ್ಷಾರಂಭದಲ್ಲಿ ಇದ್ದ **೯ ನೇ ಗುರು**ವಿನ ದೇಹಸ್ಥಾನದ ಮೇಲೆ ಇದ್ದ ದೃಷ್ಟಿಯು ಮತ್ತು ಮೃತ್ಯುಂಜಯ ಜಪ ಮಾಡಿದ ಪುಣ್ಯ ನಿಶ್ಚಿತವಾಗಿ ಗಂಡಾಂತರವನ್ನು ತಪ್ಪಿಸುವವು. ದಿಸೆಂಬರ ೨೬ ರ ವರೆಗೆ ತಾಯಿ ತಂದೆಗಳಿಗೂ ಬಹಳ ಕ್ಲೇಶ ಸಂಭವಿಸುವದು. ಅಲ್ಲದೆ ಇದೇ ಕಾಲಕ್ಕೆ ಅವರವರ ಗ್ರಹಯೋಗ ಅನನುಕೂಲವಿದ್ದರೆ ಆದರ ಪರಿಣಾಮವು ಯಾರೊಬ್ಬರ ವಿಯೋಗದಲ್ಲಿ ಆಗಬಹುದು. ನಿಮ್ಮ ಆರೋಗ್ಯವನ್ನು ನವಂಬರ ೩೦ ರ ವರೆಗೆ ಮತ್ತು ಅನಂತರ ಫೆಬ್ರುವರಿ ೪ ರಿಂದ ೨೪, ಜೂನ ೨ ರಿಂದ ೧೯, ಜುಲೈ ೫ ರಿಂದ ೩೧ ಮತ್ತು ಸಪ್ಟಂಬರ ೨೮ ರಿಂದ ಅಕ್ಟೋಬರ ೧೬ ರ ವರೆಗಿನ ಅವಧಿಯಲ್ಲಿ ಹೆಚ್ಚು ಜಾಗ್ರತೆ ವಹಿಸಬೇಕು. ಆರೋಗ್ಯವನ್ನು ಬಿಟ್ಟು ದೇಹಸುಖಕ್ಕೆ ಪೋಷಕವಾದ ಉಳಿದ ವಿಷಯಗಳಿಂದ ಬಹಳ ಉತ್ತಮ ಸುಖ ಸಿಕ್ಕುವದು. ನೆರೆಹೊರೆಯುವರಿಂದ ಮತ್ತು ಕೆಲ ಅಪ್ತೇಷ್ಟರಿಂದ ಅಲ್ಪಸ್ವಲ್ಪ ವಿತುಷ್ಟತೆಯುಂಟಾಗುವ ಸಂಭವವಿದ್ದರೂ ಮನೆಯಲ್ಲಿಯ ಜನರೊಡನೆ ಒಳ್ಳೆ ಕೂಡಿಕೊಂಡು ನಡೆದು ಪ್ರಾಪಂಚಿಕ ಸುಖ ಅನುಕೂಲವಾಗುವದು. ಮಾರ್ಚ ೩೧ ರ ನಂತರವಂತೂ ಪ್ರಾಪಂಚಿಕ ಸುಖ ತೀರ ಅನುಕೂಲವಾಗಿ ಪರಿಣಮಿಸುವದು. ಕೌಟುಂಬಿಕ ಉತ್ಕರ್ಷದ ಅಭಿವೃದ್ಧಿ ಮಾಡುವಂಥ ಕೆಲ ಮಹತ್ವದ ಸಂಗತಿಗಳು ಸಂಭವಿಸುವವು. ಬಯಸಿದ ಇಲ್ಲವೆ ಮೊದಲು ನಷ್ಟವಾಗಿದ್ದ ಮನೆತನದ ಕೆಲ ಹಕ್ಕು ಬಾಧ್ಯತೆಗಳು ದೊರೆಯುವವು. ಅಸ್ತಿಯಲ್ಲಿ ಕೆಲ ಮಟ್ಟಿಗೆ ತೊಂದರೆಯಾದರೂ ಅದು ಕಡಮೆಯಾಗದೆ ಮತ್ತಷ್ಟು ಹೆಚ್ಚುವದು. ಅದರಿಂದ ದೊರೆಯುತಕ್ಕ ವಾರ್ಷಿಕ ಉತ್ಪನ್ನವೂ ಹೆಚ್ಚುವದು. ಮೊದಲು ನೋಕರರಾಗಿದ್ದ ಕೆಲವರು ನೋಕರಿ ಬಿಟ್ಟು ಹೋಗುವರು. ಆದರೆ ಅವರ ಸ್ಥಾನದಲ್ಲಿ ಮೊದಲಿಗಿಂತ ಹೆಚ್ಚು



ಪ್ರಾಮಾಣಿಕರು ಸಿಕ್ಕುವರು. ದಿಸೆಂಬರ ೨೬ ರ ವರೆಗೆ ವಾಹನಗಳಿಂದ ಅಪಘಾತದ ಅಂಜಿಕೆ ಬಹಳಿದೆ. ಆದರೆ ಅನಂತರ ಅವುಗಳ ಸುಖೋಪಭೋಗ ಬೇಕಾದಷ್ಟು ದೊರೆಯುವದು. ಮಾರ್ಚ ೨೩ ರ ನಂತರ ಸದಾಪ್ರಿಯ ಜನರ ಸಹವಾಸ ಸಂಭವಿಸುವದು. ಸ್ಥಾವರ ಜಂಗಮ ಸಂಗ್ರಹ ಬಹಳ ಹೆಚ್ಚುವದು. ಆದರೆ ಫೆಬ್ರುವರಿ ೨೦ ರಿಂದ ಎಪ್ರಿಲ ೧ ಇಲ್ಲವೆ ಜೂನ ೨೩ ರಿಂದ ಅಗಸ್ಟ ೮ ಈ ಮಧ್ಯಾಂತರ ಅವಧಿಯಲ್ಲಿ ಮನೆಯಲ್ಲಿ ಕಳವಾಗಿ ಬಹಳ ವಸ್ತುಗಳು ಹೋಗುವ ಅಂಜಿಕೆ ಇದೆ.

ಸ್ತ್ರೀಸುಖದಲ್ಲಿ ಸಹಸಾ ವ್ಯತ್ಯಯ ಬರದಿದ್ದರೂ ಉಭಯತರಲ್ಲಿ ಕೂಡಿ ನಡೆಯದೆ ಆಗಾಗ ಮತಭೇದವಾಗುತ್ತ ನಡೆಯುವದು. ಆದರೆ ಎರಡನೆಯವರಿಗೆ ಮಾತ್ರ ನಿಜವೆಂದು ಎನಿಸುವದಿಲ್ಲ. ಅವಳ ಸ್ವಭಾವ ಬಹಳ ತೀಕ್ಷ್ಣ ಮತ್ತು ವಾಚಾಳಿ ಎನಿಸುವದು. ದಿಸೆಂಬರ ೨೬ ರ ನಂತರ ಅವಳ ಮತ್ತು ನಿಮ್ಮ ಬಂಧುವರ್ಗದವರಲ್ಲಿ ಅಲ್ಪಸ್ವಲ್ಪ ವಿರೋಧವುಂಟಾಗುವ ಸಂಭವ. ಈ ರಾಶಿಯ ಸ್ತ್ರೀ ಪುರುಷರ ವಿವಾಹವಾಗುವದಿದ್ದರೆ ಅದು ಬಹುಶಃ ಮಾರ್ಚ ೨೩ ರೊಳಗಾಗಿಯೇ ಆಗುವದು. ಗಂಡು ಹೆಣ್ಣು ಮಕ್ಕಳ ವಿವಾಹವೂ ಇದೇ ಅವಧಿಯಲ್ಲಿ ಅಲ್ಪಾಯಾಸದಿಂದ ಜರಗುವದು. ಅನಂತರವೂ ಮದುವೆಯಾಗಬಲ್ಲದು. ಆದರೆ ಅದು ಕೂಡಿಬರುವದರಲ್ಲಿ ಇಲ್ಲವೆ ಸಮಾರಂಭದ ಕಾಲಕ್ಕೆ ಏನಾದರೊಂದು ಅನಪೇಕ್ಷಿತ ಅಡಚಣಿಯುಂಟಾಗುವದು. ತೊಂದರೆ ಮನೋಭಂಗ ಸ್ವಲ್ಪಾದರೂ ಎನಿಸುವದು. ವರನಿಗಿಂತ ವಧು ಹೆಚ್ಚು ಸರಸ ಇರುವಳು. ಮಕ್ಕಳಿಗೆ ಆರೋಗ್ಯಕಾರಕ ಮತ್ತು ಉತ್ಕರ್ಷಕಾರಕವೇ ಆಗಿದೆ ಈ ವರ್ಷ. ಅವರಲ್ಲಿ ಯಾರೊಬ್ಬರು ಮನಸ್ಸಿನ ವಿರುದ್ಧ ವರ್ತಿಸಿದರೂ ಹೊರಗಿನ ಲೌಕಿಕ ಹೆಚ್ಚುವಂತಹ ಕೆಲಸವನ್ನೇ ಮಾಡುವರು. ಅವರಲ್ಲಿ ಒಬ್ಬರ ಭಾಗ್ಯೋದಯ ಬಹಳ ಮಟ್ಟಿಗೆ ಆಗುವದು. ಬಂಧುವರ್ಗದವರಿಗೂ ಈ ವರ್ಷ ಬಹಳ ಭಾಗ್ಯದಾಯಕವಾಗಿ ಮಾರ್ಚ ೨೩ ರ ವರೆಗೆ ವಿಶೇಷ ಅಭಿವೃದ್ಧಿಯಾಗುವದು. ಒಂದೆರಡು ಯಾತ್ರೆಗಳೂ ಸಂಭವಿಸುವ ಯೋಗ. ಧರ್ಮಜಾಗೃತಿಯ ಕೆಲ ಕೆಲಸಗಳನ್ನು ಮಾಡುವಲ್ಲಿ ಯಾವಾಗಲೂ ನಿಮ್ಮದೆ ಧುರೀಣತ್ವ. ನಿಮ್ಮ ಮುಖಾಂತರವೇ ಅನೇಕರ ಮದುವೆಗಳಾಗುವವು.

೪ ನೇ ಶನಿಯಿದ್ದರೂ ಧಂದೆ ಕೂಲಿ ಮೊದಲಾದವುಗಳಿಗೆ ಉಳಿದ ಗ್ರಹಗಳು ಸ್ವಲ್ಪವೂ ದುಷ್ಟನಿರದೆ ತದ್ವಿರುದ್ಧ ಬಹಳ ಉತ್ಕರ್ಷಕಾರಕವಾಗಿವೆ. ನೋಕರಿ ಮಾಡುವವರಿಗಿಂತ ಧಂದೆ ಮಾಡುವವರದೇ ಹೆಚ್ಚು ಭರಭರಾಟ. ಆದರೆ ಅವಾಸ್ತವ ಲಾಭ ಪಡೆದ ಬಗ್ಗೆ ಇಲ್ಲವೆ ಕಳ್ಳಪೇಟಿ ವ್ಯವಹಾರ ಮಾಡಿದರೆಂದು ಸರಕಾರೀ ಅಧಿಕಾರಿಗಳು ಯಾವಾಗಲೂ ನಿಮ್ಮ ಮೇಲೆ ಸಂಶಯ ಇಡುವರು! ನೋಕರರಿಗೆ ಮೇಲಿನ ದರ್ಜೆ ಸಿಕ್ಕರೂ ಮೇಲಧಿಕಾರಿಗಳ ವಕ್ರದೃಷ್ಟಿ ಸ್ವಲ್ಪ ಇರುವದರಿಂದ ಮನಸ್ಸು ಯಾವಾಗಲೂ ವ್ಯಗ್ರವೇ. ಬದಲಿಯಾದರೆ ಆದರಿಂದ ಅಧಿಕಾರ ಮತ್ತು ಸಂಬಳ ಹೆಚ್ಚಿದರೂ ಬಹಳ ಅನನುಕೂಲ ಸ್ಥಳಕ್ಕೆ ವರ್ಗವಾಗುವದು. ಅಧಿಕಾರದ ಅತಿಕ್ರಮಣ ಮಾಡಿದ ಬಗ್ಗೆ ಮೇಲಧಿಕಾರಿಗಳ ಹೊಡೆತ ಬೀಳುವ ಅಂಜಿಕೆಯೂ ಇದೆ. ದಿಸೆಂಬರ ೨೬ ರ ನಂತರ ತೊಂದರೆ ಕಡಮೆಯಾಗುವದು. ಮಾರ್ಚ ೨೩ ರ ವರೆಗೆ ಉತ್ಕರ್ಷಕ್ಕೆ ವಿಶೇಷ ಅನುಕೂಲ ಸಂಗತಿಗಳು ಸಂಭವಿಸುವವು. ಆದರೆ ಅನಂತರ ಅಧಿಕಾರ, ಪ್ರತಿಷ್ಠೆ ಮತ್ತು ಪತ್ತು ಹೆಚ್ಚುವಂಥ ಘಟನೆಗಳು ಸಂಭವಿಸುವವು. ದಿಸೆಂಬರ ೬ ರ ವರೆಗೆ ಮತ್ತು ಅನಂತರ ಜನೆವರಿ ೧೩ ರಿಂದ ಫೆಬ್ರುವರಿ ೨೦ ರ ವರೆಗೆ, ಎಪ್ರಿಲ ೧ ರಿಂದ ಮೇ ೧೧, ಜೂನ ೨೬ ರಿಂದ ಅಗಸ್ಟ ೮ ಮತ್ತು ಸಪ್ಟಂಬರ ೨೫ ರ ನಂತರ ದ್ರವ್ಯಲಾಭಕ್ಕೆ ಬಹಳ ಅನುಕೂಲವಿರುವದು. ಬಟ್ಟೆ ವ್ಯಾಪಾರಸ್ಥರು, ನೂಲಿನವರು, ಬಣ್ಣದ ವ್ಯಾಪಾರಿಗಳು ಇಲ್ಲವೆ ಬಣ್ಣ ಹಾಕುವವರು, ಹೆಂಗಸರ ಬಟ್ಟೆ ಹೊಲಿಯುವವರು, ದನಕರುಗಳ ವ್ಯಾಪಾರಿಗಳು, ಬಟ್ಟೆ ಮತ್ತು ಎಣ್ಣೆ ಗಿರಣಿಯವರು ಮೊದಲಾದ ಧಂದೆಯವರಿಗೆ ಅದರಂತೆ ವಕೀಲರು ಮತ್ತು ಅವರ ಸಹಾಯಕರು ವೃತ್ತಪತ್ರ ಸುದ್ದಿಗಾರರು, ಹರಿದಾಸರು, ಪುರಾಣಿಕರು, ವಧೂವರ ಕೂಡಿಸುವ ಮಧ್ಯಸ್ಥರು, ಭಿಕ್ಷುಕರು, ನಟರು, ಗವಾಯಿಗಳು ಮೊದಲಾದ ಬುದ್ಧಿಜೀವಿಗಳಿಗೆ ಮತ್ತು ಅಂಚಿ ಕಂತಿ, ವಿಮಾನ ಖಾತೆ, ನೌಕಾ ಮತ್ತು ವಿದ್ಯಾ ಖಾತೆಯಲ್ಲಿ ನೋಕರಿ ಮಾಡುವವರಿಗೆ ಈ ವರ್ಷ ಬಹಳ ಪ್ರಗತಿಯದಿರುವದು. ದಿಸೆಂಬರ ೬ರಿಂದ ಜನೇವರಿ ೧೩ ರ ವರೆಗೆ ಗುಪ್ತ, ಅಕಸ್ಮಾತ್ ಮತ್ತು ಅನಪೇಕ್ಷಿತ ಲಾಭ ಅಲ್ಪಸ್ವಲ್ಪ ಆಗುತ್ತಲೇ ನಡೆಯುವದು. ಕೈಕೆಳಗಿನ ನವಕರರು, ಪರಕೀಯರು ಇಲ್ಲವೆ ಅಷ್ಟೊಂದು ಪರಿಚಯುದವರಿಲ್ಲದಿದ್ದರೂ ಬಹಳ ಪ್ರಾಮಾಣಿಕ ರೀತಿಯಿಂದ ನಡೆದುಕೊಳ್ಳುವರು. ಆದರೆ ಸಂಬಂಧಿಕರಿದ್ದರೆ ಮಾತ್ರ ಬಹಳ ಢೋಂಗಿಗಳಂತೆ ವರ್ತಿಸಿ ನಿಮ್ಮ ಫಜೀತಿ ಮಾಡುವದರಲ್ಲಿ ತೊಡಗುವರು. ಮಿತ್ರರಿಂದ ಒಳ್ಳೆ ಸುಖ ಸಿಕ್ಕುವದು. ಪ್ರತಿಯೊಬ್ಬನು ನಿಮ್ಮ ಹಿತವನ್ನು ಬಯಸುವನು. ಆದರೆ ಅವರಲ್ಲಿ ಕೆಲವರು ದೂರ ಹೋಗುವದರಿಂದ ಮನಸ್ಸು ವಿಷಣ್ಣವಾಗುವನು. ಅಲ್ಲದೆ ಅವರಲ್ಲಿ ಕೆಲವರಿಗೆ ಫೆಬ್ರುವರಿ ೨೦ ರಿಂದ ಎಪ್ರಿಲ ೧ ರ ವರೆಗೆ ಮತ್ತು ಅಗಸ್ಟ ೮ ರಿಂದ ಸಪ್ಟಂಬರ ೨೫ ರ ವರೆಗಿನ ಅವಧಿಯಲ್ಲಿ ಶಾರೀರಿಕ ಇಲ್ಲವೆ ಪ್ರಾಪಂಚಿಕ ಆಪತ್ತಿ ಬಹಳ ಮಟ್ಟಿಗೆ ಉಂಟಾಗುವ ಅಂಜಿಕೆ ಇದೆ.

ವಾದವಿವಾದಗಳಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಯಶಸ್ಸಿನ ಹಾರ ನಿಮ್ಮ ಕೊರಳಿನಲ್ಲಿಯೇ ಬೀಳುವದು. ಆದರೆ ಅದು ನಿಮ್ಮ ಕೊರಳಿನಲ್ಲಿ ಬೀಳಬೇಕಾದರೆ ಸಣ್ಣ ದೊಡ್ಡವರ ಮರ್ಜಿ ಹಿಡಿಯಬೇಕಾದ ಪ್ರಸಂಗ ಬರುವದು. ಇಷ್ಟು ಮಾಡಿದರೂ ಕೊನೆಗೆ ಸುಟ್ಟು ಹೋಗಲೆಪ್ಪಾ ಈ ಯಶಸ್ಸು ಎಂದೆನಿಸಿಬಿಡುವದು. ಅವರಲ್ಲಿ ಕೆಲವರು ಪ್ರತಿಪಕ್ಷಿಗಳಿಗೆ ಫಿತೂರ ಆದ ಸುದ್ದಿ ಬರುವದು. ಆದರೆ ಈ ಬಗೆಯ ಕೆಲಸಗಳಲ್ಲಿ ಜನೆವರಿ ೧೩ ರಿಂದ ಫೆಬ್ರುವರಿ ೨೦, ಎಪ್ರಿಲ ೧ ರಿಂದ ಮೇ ೧೧ ಮತ್ತು ಸಪ್ಟಂಬರ ೨೫ ರ ನಂತರದ ಅವಧಿಯು ಬಹಳ ಕಡಮೆ ಯಾತಾಯಾತದ್ದು. ಮತ್ತು ಬಹಳ ಮಟ್ಟಿಗೆ ಯಶಸ್ಸಿನದಾಗಿ ಪರಿಣಮಿಸುವದು. ಈ ರಾಶಿಯ ಸ್ತ್ರೀಯರು ಹಡೆಯುವದಿದ್ದರೆ ಅವರು ಬಹಳ ಸುಲಭವಾಗಿ ಹಡೆಯುವರು. ಮಾರ್ಚ ೨೩ ರೊಳಗಾಗಿ ಆಗುವ ಪ್ರಸೂತಿಯಂತೂ ಬಹಳ ಅಲ್ಪ ಸಮಯದಲ್ಲಿ ಮತ್ತು ಏನೂ ತೊಂದರೆಯಿಲ್ಲದೆ ಆಗುವದು. ಮತ್ತು ಬಹುತರ ಗಂಡು ಮಗುವೇ ಹುಟ್ಟುವದು. ಮಾರ್ಚ ೨೩ ರ ನಂತರ ಗಂಡು ಮತ್ತು ಹೆಣ್ಣು ಮಕ್ಕಳು ಸಮಪ್ರಮಾಣದಲ್ಲಿ ಹುಟ್ಟುವವು. ಆದರೆ ನವಂಬರ ೧೫ ರಿಂದ ಡಿಸೆಂಬರ ೯, ಜನೆವರಿ ೨ ರಿಂದ ೨೬, ಎಪ್ರಿಲ ೯ ರಿಂದ ಮೇ ೪ ಈ ಅವಧಿಯಲ್ಲಿ ಹಡೆಯುವವರಿಗೆ ಅಲ್ಪಸ್ವಲ್ಪ ಕಷ್ಟವೆನಿಸುವದು. ಹೆಣ್ಣು ಮಕ್ಕಳು ಮತ್ತು ಸೊಸೆಂದರು ಹಡೆಯುವವರಿದ್ದರೆ ಸೊಸೆಗಿಂತ ಹೆಣ್ಣು ಮಗಳ ಪ್ರಸೂತಿಯೇ ಬಹಳ ಸುಖದ್ದಾಗಿ ಪರಿಣಮಿಸುವದು.

ಕರ್ನಾಟಕ ಟ್ರೇಡ ಡಿರೆಕ್ಟರಿ

ಸರಿಯಾದ ಮಾಹಿತಿಯೇ
ಉದ್ಯೋಗದ ಕೈದೀವಿಗೆ

ಕನ್ನಡ ನಾಡಿನ ಎಲ್ಲ ಉದ್ಯೋಗ, ವ್ಯವಹಾರ ಉದ್ದಿಮೆಗಳ, ಬ್ಯಾಂಕುಗಳ, ವಿಮಾ ಕಂಪನಿಗಳ ವಿಷಯಕ್ಕೆ ಕೈಪಿಡಿಯನ್ನು ರಚಿಸುವ ಪ್ರಯತ್ನ ಕೈಕೊಳ್ಳಲಾಗಿದ್ದು ಇದಕ್ಕೆ ವರ್ಷಕ್ಕೆ ಕೇವಲ ೬ ರೂಪಾಯಿಗಳ ಚಂದಾ ಹಣವನ್ನು ಇಡಲಾಗಿದೆ. ಈ ಕೈಪಿಡಿಯು ಕರ್ನಾಟಕ ಮತ್ತು ಪರಪ್ರಾಂತದ ವ್ಯಾಪಾರಸ್ಥರ ಕಡೆಗೆ ಹೋಗುತ್ತಿರುವದರಿಂದ ಚಂದಾದಾರರ ವಿಳಾಸ,ಉದ್ಯೋಗಗಳ ಬಗ್ಗೆ ಪ್ರಚಾರ ಕಾರ್ಯವು ಬೇಕಾದಷ್ಟು ಆಗುವದು. ಮತ್ತು ಅವರವರ ವ್ಯವಹಾರ ಬೆಳೆಯಲು ತುಂಬಾ ಸಹಾಯವಾಗುವದು.

ಆದುದರಿಂದ ಕೂಡಲೇ ಚಂದಾದಾರರಾಗಿರಿ.

ಪ್ರಕಾಶಕರು :—

ದಿ ಕರ್ನಾಟಕ ಟ್ರೇಡ ಡಿರೆಕ್ಟರಿ

ನರೇಂದ್ರಮಠ ಬಿಲ್ಡಿಂಗ್ಸ, ಬೆಳಗಾಂವಗಲ್ಲಿ, ಹುಬ್ಬಳ್ಳಿ.

ವಿದ್ಯಾರ್ಥಿಗಳು ಈ ವರ್ಷ ನಿಶ್ಚಯದಿಂದ ಪಾಸಾಗುವರು. ವರ್ಗವೂ ಸಿಕ್ಕಬಹುದು. ಕಾಯದೆ, ಶಾಸ್ತ್ರೀಯ ವಿಷಯ, ಯಾಂತ್ರಿಕ, ಸೈನಿಕ, ಗಾಯನ ವಾದನ, ಆರೋಗ್ಯಶಾಸ್ತ್ರ ಶಿಕ್ಷಣ ಪ್ರಾಧ್ಯಾಪನ ಮೊದಲಾದ ಅಭ್ಯಾಸ ಮಾಡುವವರು ಅಲ್ಪಾಯಾಸದಿಂದ ಯಶಸ್ಸು ಹೊಂದುವರು. ವಿಶೇಷವಾಗಿ ಯಾರ ಪರೀಕ್ಷೆ ನವಂಬರ ೧೫ ರ ವರೆಗೆ ಮತ್ತು ಅನಂತರ ಡಿಸೆಂಬರ ೯ ರಿಂದ ಜನೆವರಿ ೨, ಜನೆವರಿ ೨೬ರಿಂದ ಫೆಬ್ರುವರಿ ೧೯, ಮಾರ್ಚ ೧೫ ರಿಂದ ಎಪ್ರಿಲ ೯, ಮೇ ೪ ರಿಂದ ೩೧ ಮತ್ತು ಜುಲೈ ೧ ರಿಂದ ಮುಂದೆ ಆಗುವದಿದೆಯೋ ಅವರು ಬಹುಶಃ ಸ್ವಪ್ನದಲ್ಲಿ ಕೂಡ ನಾಪಾಸಾಗುವ ಅಂಜಿಕೆ ಇಲ್ಲ.

ಒಟ್ಟಾರೆ ವರ್ಷದ ಅಧಾವೆ ತೆಗೆದು ನೋಡಿದರೆ ಸುಖದ ಮಾನದಿಂದ ದುಃಖ ತೊಂದರೆ ಇಲ್ಲವೆ ನಿರಾಶೆ ಬಹಳ ಕಡಮೆ ಅನುಭವಿಸಬೇಕಾಗುವದೆಂಬದನ್ನು ನಿಶ್ಚಿತ ತಿಳಿದುಕೊಳ್ಳಿರಿ.

ಕರ್ಕ

ಈ ರಾಶಿಯವರಿಗೆ ಈ ಮೊದಲು ಇದ್ದ ಸಾಡೇಸಾತಿಯು ಕಳೆದ ಸಪ್ಟೆಂಬರದಲ್ಲಿ ಮುಗಿದದ್ದರಿಂದ ಎದೆಗೆ ಅಂಟಿಕೊಂಡಿದ್ದ ಚಿಂತೆ ದೂರ ದೂರ ಹೋಗಹತ್ತಿದ್ದರೂ ಮಾರ್ಚ ೨೪ ರ ವರೆಗೆ **೮ ನೇ ಗುರುವಿಗಾಗಿ** ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳಲೇಬೇಕಾಗುವದು. ಅಜೀರ್ಣ, ಬಹುಮೂತ್ರ, ದೈವಿಕಪೀಡೆ, (ಡಾಕ್ಟರರು ವೈದ್ಯರಿಗೆ ತಿಳಿಯದಂಥ) ಕೈಯಿಂದ ಆಗತಕ್ಕ ಅಜ್ಞಾತ ರೋಗಗಳು ಬ್ರಹ್ಮರಾಕ್ಷಸ ಮೊದಲಾದ ಉಚ್ಚಕೋಟಿಯ ಪೈಶಾಚಿಕ ಪೀಡೆಯಾಗುವ ಸಂಭವವೂ ಬಹಳ ಉಂಟು. ಅಂತೆಯೇ ಈ ಅವಧಿಯಲ್ಲಿ ವೇತಾಲ ಸ್ತೋತ್ರ, ಕಾಲಭೈರವ ಸ್ತೋತ್ರ, ಮಹಿಮ್ನ ಸ್ತೋತ್ರ ಇಲ್ಲವೆ ಕನಿಷ್ಠ ರಾಮರಕ್ಷಾಸ್ತೋತ್ರವನ್ನಾದರೂ ದಿನವೂ ಅವಶ್ಯವಾಗಿ ಪಾರಾಯಣ ಮಾಡಬೇಕು ಇಲ್ಲವೆ ಶ್ರವಣ ಮಾಡಬೇಕು. ಆದರೂ **ಷಷ್ಠಸ್ಥಾನದಲ್ಲಿಯ ಮಂಗಳ** ಮತ್ತು **ಅಷ್ಟಮೇಶ ಶನಿ** (ವರ್ಷಾರಂಭದಲ್ಲಿ) ಮೂರನೆಯ ಅಂದರೆ ಬಲಿಷ್ಠನಾಗುವ ಸ್ಥಾನದಲ್ಲಿ ಕನ್ಯಾ ಅಥವಾ ಮಿತ್ರ ರಾಶಿಯಲ್ಲಿ ಇರುವದರಿಂದ ಎಷ್ಟೇ ಕ್ಲೇಶ ಸಂಭವಿಸಿದರೂ ಗಂಡಾಂತರದ ಅಂಜಿಕೆ ಸ್ವಲ್ಪೂ ಇರುವದಿಲ್ಲ. ಉಳಿದ ವಿಷಯಗಳಲ್ಲಿ ದೇಹಸುಖ ಅನುಕೂಲವಿದೆ. ಮಾರ್ಚ ೨೪ ರಿಂದ ಆರೋಗ್ಯವೂ ಚೆನ್ನಾಗಿ ಸುಧಾರಿಸುತ್ತ ಹೋಗುವದು. ತಂದೆಯಿದ್ದರೆ ಅವನೊಡನೆ ಅಲ್ಪಸ್ವಲ್ಪ ವ್ಯಾಜ್ಯ ನಡೆದರೂ ತಾಯಿ ಬಂಧುಗಳು ಮೊದಲಾದವರೊಡನೆ ಚೆನ್ನಾಗಿ ಕೂಡಿ ನಡೆಯುವದು. ಆದರೆ ಬಂಧುಗಳ ಆರೋಗ್ಯಕ್ಕೆ ಡಿಸೆಂಬರ ೨೬ ರ ವರೆಗೆ ಕ್ಲೇಶಭಯವಿದ್ದು ಅನಂತರವೂ ಅವರ ಸುಖದಲ್ಲಿ ನಿಮ್ಮ ಇಲ್ಲವೆ ಅವರ ಸ್ಥಲಾಂತರದಿಂದ ವ್ಯತ್ಯಯವುಂಟಾಗುವ ಸಂಭವ. ಡಿಸೆಂಬರ ೨೬ ರ ನಂತರ ಒಂದು ಬಗೆಯ ಆಪ್ತ ಇಲ್ಲವೆ ಮಿತ್ರ ಅತಿಥಿಯಿಂದ ತೊಂದರೆಯಾಗಹತ್ತುವದು. ಸ್ಥಾವರ ಜಂಗಮ ಆಸ್ತಿಯಲ್ಲಿ ಹೆಚ್ಚಳ. ಅಲ್ಪ ಬೆಲೆಯಲ್ಲಿ ಮತ್ತು ಅಲ್ಪಾಯಾಸದಿಂದ ಆಗಿ ಒಟ್ಟಾರೆ ವಾರ್ಷಿಕ ಉತ್ಪನ್ನವು ವ್ಯವಸ್ಥಿತವಾಗಿ. ಸಿಕ್ಕುವದು. ಆಪ್ತರಲ್ಲಿ ಒಟ್ಟ ಹೆಣ್ಣು ಮಗಳು ನಿಮ್ಮ ಹಿತವನ್ನು ಬಹಳ ಮಟ್ಟಿಗೆ ಸಾಧಿಸುವರು. ಮತ್ತು ಈ ವರ್ಷ ಒಟ್ಟಾರೆ ಪುರುಷ ವರ್ಗದವರಿಗಿಂತ ಹೆಣ್ಣು ಮಕ್ಕಳೆ ನಿಮ್ಮ ಬಗ್ಗೆ ಹೆಚ್ಚು ಸಹಾನುಭೂತಿ ತೋರಿಸುವರು. ವಾಹನಗಳು ದನಕರುಗಳು ಮನೆಯಲ್ಲಿಯ ನೋಕರ ಚಾಕರರಿಂದ ಸುಖ ಎಷ್ಟು ಸಿಕ್ಕಬೇಕೋ ಅಷ್ಟು ಸಿಕ್ಕುವದು. ಆದರೆ ಅದನ್ನು ನೋಡಿ ನಿಮ್ಮ ಮಿತ್ರರು ಮಾತ್ರ ಮತ್ಸರಗ್ರಸ್ತರಾಗುವರು. ಊರಲ್ಲಿ ಮತ್ತು ನೆರೆಹೊರೆಯವರಲ್ಲಿ ನಿಮ್ಮ ಮಾತಿನ ಪ್ರಭಾವ ಬಹಳ ಬೀಳುವದು. ಸಮೀಪದ ಆಪ್ತರಲ್ಲಿ ಈ ವರ್ಷ ಬಹಳ ವಿವಾಹಾದಿ ಮಂಗಳ ಕಾರ್ಯಗಳು ನಡೆಯುವವು. ಸ್ವಂತ ವಿವಾಹವಾಗುವದಿದ್ದರೆ ಮಾರ್ಚ ೨೪ ರ ನಂತರವೇ ಆಗುವ ಯೋಗವಿದೆ. ಪತಿಪತ್ನಿಯರು ಪೂರ್ಣ ಅನುರೂಪರಿರುವರಿಷ್ಟೇ ಅಲ್ಲ; ಅನೇಕ ಸಂದರ್ಭಗಳಲ್ಲಿ ಪರಸ್ಪರ ಪ್ರೇಮಾನುರಕ್ತರೂ ಇರುವರು. ಅರ್ಥಾತ್ ಪ್ರೇಮವಿವಾಹ ಹೆಚ್ಚಾಗುವ ಸಂಭವ ಇದೆ. ಹೆಂಡತಿ ಮತ್ತು ನಿಮ್ಮದು ಬಹಳ ಮಟ್ಟಿಗೆ ಕೂಡಿ ನಡೆಯುವದು. ಆದರೆ ಅವರ ತವರುಮನೆಯವರು ಮಾತ್ರ ವಿರಸ ಮಾಡುವ ಸಂಭವ. ಮಕ್ಕಳ ಮದುವೆಯಾಗುವದಿದ್ದರೆ, ಡಿಸೆಂಬರ ೬ ರಿಂದ ಜನೆವರಿ ೧೪, ಫೆಬ್ರುವರಿ ೨೦ ರಿಂದ ಎಪ್ರಿಲ ೧, ಮೇ ೧೧ ರಿಂದ ಜೂನ ೨೪ ರ ಅವಧಿಯಲ್ಲಿ ಆಗುವವು. ಆದರೆ ಮಾರ್ಚ ೨೪ ರೊಳಗಾಗಿ ಆಗುವ ಸಮಾರಂಭಗಳಲ್ಲಿ ತಕರಾರು ಇಲ್ಲವೆ ಅನ್ಯ ಕೆಲ ಕಾರಣಗಳಿಂದ ಮನೋಭಂಗವಾಗುವದು. ಮಾರ್ಚ ೨೪ ರ ನಂತರ ದೂರ ಯಾತ್ರೆ ಇಲ್ಲವೆ ಬೇರೆ ಕೆಲಸಗಳಿಗಾಗಿ ಪ್ರವಾಸವಾಗುವದು. ಪಾರಮಾರ್ಥಿಕ ಕೆಲಸಗಳತ್ತ ಈ ವರ್ಷ ಬಹಳ ಒಲವು ಇರುವದು.

ಧಂದೆಯವರಿಗೆ ಕೂಲಿಕಾರರಿಗೆ ಮಾರ್ಚ ೨೪ ರ ವರೆಗೆ ಅಷ್ಟೊಂದು ಜೋರು ಎನಿಸದಿದ್ದರೂ ಅನಂತರ ನಾಲ್ಕೆಂಟು ದಿನಗಳಲ್ಲಿ ಅದು ತೀವ್ರ ಗತಿಯಿಂದ ಬೆಳೆಯಹತ್ತಿ ಅದರಲ್ಲಿಯ ಮನೋರಥ ಅಪೇಕ್ಷೆಯಂತೆ ಪೂರ್ಣವಾಗಹತ್ತುವದು. ಉದ್ಯೋಗದಲ್ಲಿ ಸಾಹಸ ಇಲ್ಲವೆ ಅಧಿಕಾರದ ಅಮಲುಬಜಾವಣೆ ಮಾಡುವಲ್ಲಿ ಬಹಳ ಚಾತುರ್ಯ ಕಂಡು ಬರುವದು ಮತ್ತು ಅದನ್ನು ನೋಡಿ ಶತ್ರುಗಳು ಇಲ್ಲವೆ ಪ್ರತಿಪಕ್ಷಿಗಳು ಕೂಡ ಬೆಪ್ಪಾಗುವರು. ಧಂದೆಯುವರಿಗೆ ನವಂಬರ ೧೫ ರಿಂದ ಡಿಸೆಂಬರ ೯, ಜಾನೆವರಿ ೨ ರಿಂದ ೨೬, ಫೆಬ್ರುವರಿ ೧೯ ರಿಂದ ಮಾರ್ಚ ೧೫, ಎಪ್ರಿಲ ೯ ರಿಂದ ಮೇ ೪ ಮತ್ತು ಮೇ ೩೧ ರಿಂದ ಮುಂದಿನ ಅವಧಿಯಲ್ಲಿ ಉತ್ತರೋತ್ತರ ಉತ್ಕರ್ಷವಾಗುತ್ತ ನಡೆಯುವದು. ಹಾಟೆಲ ಮತ್ತು ಖಾನಾವಳಿಯವರು, ನಾಟಕ ಮತ್ತು ಸಿನೆಮಾದವರು, ಫೋಟೋಗ್ರಾಫರರು, ಮಿಠಾಯಿಗಾರರು, ಮೆಣಸಿನಕಾಯಿ, ತಂಬಾಕು, ಬೆಲ್ಲ ಮತ್ತು ಸುವಾಸಿಕ ಪದಾರ್ಥಗಳ ಅಂಗಡಿಕಾರರು ಡಾಕ್ಟರರು, ವೈದ್ಯರು, ಮೋಟರ ಇಲ್ಲವೆ ಉಳಿದ ಮೆಕ್ಯಾನಿಕ ಧಂದೆಯವರು ರೆವಿನ್ಯೂ ಮತ್ತು ಇನ್‌ಕಮ್‌ಟ್ಯಾಕ್ಸ ಕಚೇರಿಗಳಲ್ಲಿ ನೋಕರಿ ಮಾಡುವವರು, ಸಾರ್ವಜನಿಕ ಮತ್ತು ರಾಜಕೀಯ ಮುಂದಾಳುಗಳು ಇವರಿಗೆ ಈ ವರ್ಷ ಹೆಚ್ಚು ಲಾಭ ಮತ್ತು ಯಶಸ್ಸಿನದಾಗಿ ಪರಿಣಮಿಸುವದು. ಬದಲಿಯಾಗುವದಿದ್ದರೆ ಬಹಳ ಅನುಕೂಲ ಸ್ಥಳಗಳಿಗೆ ಆಗಿ ಬಹುಶಃ ಮೇಲಿನ ಗ್ರೇಡ ಸಿಕ್ಕುವದು. ನೋಕರಿಯುವರಿಗೆ ಡಿಸೆಂಬರ ೬ ರ ವರೆಗೆ ಮತ್ತು ಅನಂತರ ಡಿಸೆಂಬರ ೨೨ ರಿಂದ ಜನೆವರಿ ೧೪, ಫೆಬ್ರುಅರಿ ೨೦ ರಿಂದ ಮೇ ೧೧, ಆಗಸ್ಟ ೮ ರಿಂದ ಸಪ್ಟಂಬರ ೨೫ ಈ ಅವಧಿಯ ಕಾಲ ಹೆಚ್ಚು ಪ್ರಗತಿಯದು. ಆದರೆ ಎಷ್ಟು ದುಡ್ಡು ಸಿಕ್ಕರೂ ಡಿಸೆಂಬರ ೨೬ ರಿಂದ ಬರುವ ಧನಸ್ಥಾನದಲ್ಲಿಯ ರಾಹುವಿನಿಂದ ಬಹಳ ವೆಚ್ಚವಾಗಹತ್ತಿ ನಾಲ್ಕು ದುಡ್ಡು ಕೂಡ ಕೂಡಿಬೀಳುವದಿಲ್ಲ.

ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು ದೊರೆತರೂ ಮಾರ್ಚ ೨೪ ರ ನಂತರ ಅಶಕ್ಯವೆನಿಸಿದ ಕೆಲಸಗಳಲ್ಲಿಯೂ ಯಶಸ್ಸು ಸಿಕ್ಕುವದು ಮತ್ತು ಅದರಲ್ಲಿಯೂ ಡಿಸೆಂಬರ ೬ ರ ವರೆಗೆ ಮತ್ತು ಅನಂತರ ಮೇ ೧೧ ರಿಂದ ಜೂನ ೨೪ ಮತ್ತು ಸಪ್ಟಂಬರ ೨೫ ರ ನಂತರದ ಅವಧಿಯಲ್ಲಿ ಶತ್ರುಗಳು ಇಲ್ಲವೆ ಪ್ರತಿಪಕ್ಷಿಗಳು ಬಹಳ ಹಣ್ಣಾಗುವಂಥ ಘಟನೆಗಳು ಸ್ವಪರಾಕ್ರಮದಿಂದ ಕೆಲವು, ಯದೃಚ್ಛೆಯಿಂದಲೆ ಕೆಲವು ಸಂಭವಿಸುವವು. ಈ ವರ್ಷದಲ್ಲಿ ಹಡೆಯುವವರು ಮಾರ್ಚ ೨೪ ರ ನಂತರ ಹಡೆದರೆ ಸ್ವಲ್ಪ ಕಷ್ಟದಿಂದ ಹಡೆಯುವರು. ಅನಂತರ ಹಡೆದರೆ ಬಹಳ ಸುಲಭವಾಗಿ ಹಡೆಯುವರು. ಹುಟ್ಟುವ ಮಗು ಅಳದಕ್ಕಿಯಾಗುವದು. ಬಾಣಂತಿಗೂ ಅಷ್ಟೊಂದು ಅನುಕೂಲವೆನಿಸದು. ಅನೇಕರಿಗೆ ಹೆಣ್ಣು ಹುಟ್ಟುವವು. ಆದರೆ ಯಾರು ಡಿಸೆಂಬರ ೬ ರ ವರೆಗೆ ಇಲ್ಲವೆ ಜನೆವರಿ ೧೪ ರಿಂದ ಫೆಬ್ರುವರಿ ೨೦, ಎಪ್ರಿಲ ೧ ರಿಂದ ಮೇ ೧೧ ಮತ್ತು ಸಪ್ಟೆಂಬರ ೨೫ ರ ನಂತರ ಹಡೆಯುವವರು ಅವರು ಬಹುಶಃ ಗಂಡು ಹಡೆಯುವರು.

ಮಾರ್ಚ ೨೪ ರ ವರೆಗೆ ವಿದ್ಯಾರ್ಥಿಗಳು ನಾಪಾಸಾಗುವೆವೆಂದು ಹಿಡಿದುಕೊಂಡು ಇಮ್ಮಡಿ ದಕ್ಷತೆಯಿಂದ ಅಭ್ಯಾಸ ಮಾಡಬೇಕು. ಅಂದರೆ

ಮಾತ್ರ ಪಾಸಾಗುವ ಸಂಭವವಿದೆ. ಆದರೆ ಆ ದಿನಾಂಕದನಂತರ ಸ್ವಲ್ಪಅಭ್ಯಾಸ ಮಾಡಿದವರೂ ಪಾಸಾಗುವದು ಶಕ್ಯವಿದೆ. ವೈದ್ಯಕೀಯ ಯಾಂತ್ರಿಕ ನೋಕರಿಗಳಲ್ಲಿ ಇದ್ದವರು ಹೆಚ್ಚಿನ ತರಗತಿಯ ಪರೀಕ್ಷೆಗೆ ಕುಳಿತವರು ಹೆಚ್ಚಾಗಿ ಪಾಸಾಗುವರು.

ಒಟ್ಟಾರೆ ಈ ವರ್ಷ ಮಾರ್ಚ ೨೪ ರ ವರೆಗೆ ಅಲ್ಪಸ್ವಲ್ಪ ದಗದಗಿಯಿದ್ದರೂ ಅನಂತರ ಬರುವ **೯ನೇ ಗುರು**ವಿನಿಂದ ಒಳ್ಳೆ ಭಾಗ್ಯಕಾರಕ ಮತ್ತು ಬಹುತರ ಮಾತುಗಳಲ್ಲಿ ಸುಖದಾಯಕ ಫಲಗಳೇ ಉಂಟಾಗುವವು ಎಂಬಲ್ಲಿ ಮಾತ್ರ ಸ್ವಲ್ಪೂ ಸಂಶಯವಿಲ್ಲ.

ಸಿಂಹ

ಈ ರಾಶಿಯವರು ಇದೇ ತಾನೆ **ಸಾಡೇಸಾತಿ**ಯ ಮೊದಲ ೫ ವರುಷಗಳನ್ನು ದಾಟಿ ಕೊನೆಯ ಎರಡೂವರೆ ವರುಷಗಳು ಇನ್ನೂ ಭೋಗಿಸುವದುಳಿದಿದೆ ಅದರಲ್ಲಿ ಈ ವರ್ಷಸ್ವತಃ ನಿಮ್ಮಪ್ರಕೃತಿಗೆ ಮಾರ್ಚ ೨೪ ರಿಂದ ಬರುವ **೮ ನೇ ಗುರು**ವಿನಿಂದ ಅಲ್ಪಸ್ವಲ್ಪ ಕಷ್ಟವೆ. ಡಿಸೆಂಬರ ೨೬ ರ ವರೆಗೆ ಒಂದಿಲ್ಲೊಂದು ಬಗೆಯ ಕಾಯಿಲೆ ಇರುವ ಅಂಜಿಕೆ ಇದ್ದೇಇದೆ. ಅರ್ಥಾತ್ ಅಂದಿನಿಂದ ಮುಂದೆ ಮಾರ್ಚ ೨೪ ರ ವರೆಗೆ ಮಾತ್ರ ಆರೋಗ್ಯ ಸ್ವಲ್ಪ ಚೆನ್ನಾಗಿ ಉಳಿಯುವದು. ಅಪಚನ, ಅಗ್ನಿಮಾಂದ್ಯ, ಹೊಟ್ಟೆಯಲ್ಲಿ ಗ್ಯಾಸು ಹಿಡಿಯುವದು, ಸ್ವಲ್ಪ ಹೊಟ್ಟೆನೋವು ಮೊದಲಾದ ವಿಕಾರಗಳು ಇರುವ ಅಂಜಿಕೆ ಇದೆ. ಅದರಲ್ಲಿಯೂ ಆಗಸ್ಟ ೮ ರಿಂದ ಸಪ್ಟೆಂಬರ ೨೫ ರ ವರೆಗೆ ಹೆಚ್ಚು ತೊಂದರೆಯಾಗುವ ಸಂಭವವಿದೆ. ದೇಹ ಸುಖಕ್ಕೆ ಅವಶ್ಯಕವಾದ ಉಳಿದ ಮಾತು ಗಳಲ್ಲಿಯೂ ಸುಖಕ್ಕಿಂತ ದುಃಖವೇ ಹೆಚ್ಚಾಗಿ ಆಗುವ ಸಂಭವ. ಕೆಲ ಸಂಗತಿಗಳಂತೂ ದುರ್ಮಿಳವೇ ಆಗುವವು. ಬರುವ **೨ ನೇ ಶನಿ**ಯಿಂದ ವಿಪರೀತ ಕಲಹ. ಶತ್ರುವು ಮನೆಯಲ್ಲಿ ಇಲ್ಲವೆ ಸಮೀಪದಲ್ಲಿಯೇ ಧರಣೀ ಕುಳಿತು ಛಲಿಸಲು ಪ್ರಾರಂಭಿಸುವ ಅಂಜಿಕೆ. ಅತ್ಯಂತ ಪ್ರಿಯ ಜನರು ಅನಪೇಕ್ಷಿತ ಕಾರಣಗಳಿಂದ ಸಿಡಿದುಹೋಗುವರು. ಇಲ್ಲವೆ ಅವರ ವಿರಹ ಅಥವಾ ವಿಯೋಗದ ಸಂಭವವೂ ಇದೆ. ಅತಿ ವೆಚ್ಚದಿಂದ ಹತ್ತಿರದ ಹಣವೆಲ್ಲ ಇಲ್ಲದಂತಾಗಿ ತಿರುಗಿ ಸಾಲ ಮಾಡಬೇಕಾದ ಸರತಿ. ಎಷ್ಟು ಸರಳ ರೀತಿಯಿಂದ ವರ್ತಿಸಿದರೂ ಎರಡನೆಯವರಲ್ಲಿ ಆ ಬಗ್ಗೆತಪ್ಪು ತಿಳಿವಳಿಕೆಯಾಗಿ ಮನಸ್ಸು ಬಹಳ ಅಸ್ವಸ್ಥವಾಗುವದು. ಆದರೂ ವರ್ಷಾರಂಭದಲ್ಲಿ ಇರುವ **೭ ನೇ ಗುರು** ಒಂದಿಲ್ಲೊಂದು ಬಗೆಯ ಶಕ್ತಿ ಇಲ್ಲವೆ ಯುಕ್ತಿಯಿಂದ ಎಂಥ ಸಂಕಟಗಳಿಂದಲೂ ಪಾರು ಮಾಡುವ ಮನೋಧೈರ್ಯವನ್ನು ಕೊಡುವರು.

ದೃಷ್ಟಿಮಾಂದ್ಯ ಬಹಳಾಗುವದು. ಡಿಸೆಂಬರ ೨೬ರ ವರೆಗೆ ಮನೆಯಲ್ಲಿ ದೆವ್ವನ ಬಾಧೆಯಾಗಿ ವಿಲಕ್ಷಣ ಪ್ರಕಾರಗಳು ಸಂಭವಿಸುವ ಯೋಗ. ಅನಂತರ ಅತ್ತೆಮನೆಯವರಿಗೂ ಅದೃಷ್ಟ ಇಲ್ಲವೆ ದೈವಿಕ ಕೋಪದಂತಹ ತೊಂದರೆಯಾಗುವ ಅಂಜಿಕೆ ಇದೆ.

ಸಹವಾಸದೃಷ್ಟಿಯಿಂದ ಸ್ತ್ರೀಸುಖಕ್ಕೆ ಈ ವರ್ಷ ಅನುಕೂಲವಿದ್ದರೂ ಡಿಸೆಂಬರ ೨೬ ರ ನಂತರ ಅವಳ ಪ್ರಕೃತಿಯ ಬಗ್ಗೆ ಒಂದಿಲ್ಲೊಂದು ಬಗೆಯ ತಕರಾರು ಇದ್ದದ್ದೇ. ಇದಲ್ಲದೆ ಕಿರಕಳ ವಿಷಯಗಳ ಬಗ್ಗೆ ಹೇಗಾದರೂ ನಡೆದರೂ ಒಂದೆರಡು ಮಹತ್ವದ ಪ್ರಾಪಂಚಿಕ ವಿಷಯಗಳಲ್ಲಿ ಉಭಯತರಲ್ಲಿ ಬಹಳ ಮತಭೇದ ಮತ್ತು ಅದು ಜನೇವರಿ ೧೪ ರಿಂದ ಫೆಬ್ರುವರಿ ೨೦ ಮತ್ತು ಜೂನ ೨೪ ರಿಂದ ಆಗಸ್ಟ ೮ ಈ ಅವಧಿಯಲ್ಲಿ ಬಹಳ ಹೆಚ್ಚುವದು. ಉಭಯತರ ಸ್ವಭಾವದಲ್ಲಿ ದುರಭಿಮಾನ ಬಹಳ ಮಟ್ಟಿಗೆ ಹೆಚ್ಚಿದ್ದು ಪ್ರತ್ಯಯಕ್ಕೆ ಬರುವದು. ಈ ರಾಶಿಯ ಸ್ತ್ರೀ ಪುರುಷರಲ್ಲಿ ಯಾರದಾದರೂ ವಿವಾಹವಾಗುವದಿದ್ದರೆ ಅದು ಮಾರ್ಚ ೨೪ ರಲ್ಲಿ ಆಗುವ ಯೋಗ ಹೆಚ್ಚು ಪ್ರಬಲವಿದೆ. ಆದರೆ ಮುಂದೆ ಅಷ್ಟು ಇರುವದಿಲ್ಲ. ವರಗಳಿಗೆ ವಧು ಬಹಳ ಮಟ್ಟಿಗೆ ಒಪ್ಪಿಗೆಯಾದರೂ ವಧುಗಳಿಗೆ ಮಾತ್ರ ವರ ಅಷ್ಟೊಂದು ಒಪ್ಪಿಗೆಯಾಗದಿದ್ದ ಗುಣಗುಣು ಸುದ್ದಿ ಬರುವದು. ಲಗ್ನಸಮಾರಂಭಗಳಲ್ಲಿಯೂ ಉಭಯ ಪಕ್ಷಗಳಲ್ಲಿ ಬಹಳ ಮಟ್ಟಿಗೆ ಪ್ರೀತಿ ಉಳಿಯುವುದಿಲ್ಲ. ಈ ರಾಶಿಯವರ ಮಕ್ಕಳ ಲಗ್ನವಾಗುವದಿದ್ದರೆ ಅದು ಮೇಲಿನ ಅವಧಿಯಲ್ಲಿ ಮಾತ್ರ ಅದೇ ಬಗೆಯಿಂದ ಸಂಭವಿಸುವದು. ಆದರೆ ಅವರ ಶೈಕ್ಷಣಿಕ ಇಲ್ಲವೆ ವ್ಯವಸಾಯಿಕ ಉನ್ನತಿಗೆ ಈ ವರ್ಷ ಬಹಳ ಅನುಕೂಲ. ಡಿಸೆಂಬರ ೬ ರ ವರೆಗೆ ಮತ್ತು ಅನಂತರ ಜನೆವರಿ ೧೪ ರಿಂದ ಫೆಬ್ರುವರಿ ೨೦, ಎಪ್ರಿಲ ೧ ರಿಂದ ಮೇ ೧೧, ಜೂನ ೨೪ ರಿಂದ ಆಗಸ್ಟ ೮ ಮತ್ತು ಸಪ್ಟಂಬರ ೨೫ ರ ನಂತರದ ಅವಧಿಯು ಹೆಚ್ಚು ಪ್ರಗತಿಪರವಿದೆ.

ಸ್ವಂತ ಧಂದೆಮಾಡುವವರಿಗೆ ಈ ವರ್ಷ ಸಾಧಾರಣವೇ ಇದೆ. ಮಾರ್ಚ ೨೪ ರ ವರೆಗೆ ಸ್ವತಂತ್ರ ಧಂದೆಮಾಡುವವರಿಗೆ ಮತ್ತು ಅನಂತರ ನೋಕರ ವರ್ಗದವರಿಗೆ ಹೆಚ್ಚು ಸುಖವಾಗುವದು. ಯಾವದೊಂದು ಕೆಲಸದಲ್ಲಿಯೂ ದಗದಗಿ, ತೊಂದರೆ ಮತ್ತು ಎರಡನೆಯವರ ಲಹರಿಯನ್ನು ಅನುಸರಿಸಿ ನಡೆಯಬೇಕಾದ ಪ್ರಸಂಗ ಬರುವದು. ಅನಂತರ ಅದು ಬಹಳ ಮನಸ್ಸಿಗೆ ಹತ್ತುವದು. ಬುದ್ಧಿಜೀವಿಗಿಂತ್ಶ್ರಮಜೀವಿಗಳಿಗೆ ಕಡಮೆ ತೊಂದರೆಯಿದೆ. ಧಂದೆಯವರಿಗೆ ನವಂಬರ ೩೦ ರಿಂದ ಫೆಬ್ರುವರಿ ೨೦, ಫೆಬ್ರುವರಿ ೨೮ ರಿಂದ ಮಾರ್ಚ ೧೨, ಮಾರ್ಚ ೨೮ ರಿಂದ ಜೂನ ೨, ಜೂನ ೧೯ ರಿಂದ ಜುಲೈ ೫ ಮತ್ತು ಸಪ್ಟಂಬರ ೨೮ ರ ನಂತರದ ಅವಧಿಯು ದ್ರವ್ಯಲಾಭಕ್ಕೆ ಬಹಳ ಅನುಕೂಲವಾಗಿ ಸಂಭವಿಸುವದು. ಮಾರ್ಚ ೨೪ ರ ನಂತರ ಅಲ್ಪಸ್ವಲ್ಪ ಗುಪ್ತ ಇಲ್ಲವೆ ಅಕಸ್ಮಾತ್ ಲಾಭ ಖಾತ್ರಿಯಿಂದ ಆಗುವದು. ನೋಕರಿ ಮಾಡುವವರಿಗೆ ಸ್ವಲ್ಪಹೆಚ್ಚಿನ ಗ್ರೇಡದೊರೆವುದು ಬಡತಿಯಾದರೂ ಕೆಲಸದ ಭಾರ ಬಹಳ ಹೆಚ್ಚುಬಿದ್ದು ಮೋರ್ಕೆಳಗೆ ಮಾಡಿಕೊಂಡು ಕೂಡ್ರುವ ಸ್ಥಿತಿಯೇ ಉಂಟಾಗುವದರಿಂದ ಆ ಅಧಿಕಾರ ಅಷ್ಟೊಂದು ಹೆಮ್ಮೆಯದೆನಿಸಲಾರದು. ಸಣ್ಣಪುಟ್ಟ ಕೆಲಸಗಳಲ್ಲಿಯೂ ವರಿಷ್ಠರು ತಪ್ಪು ತೆಗೆಯಹತ್ತುವ ಪ್ರವೃತ್ತಿ ಬಹಳ ಹೆಚ್ಚುವದು. ಧಂದೆಮಾಡುವವರಿಗೂ ಗಿರಾಕಿಗಳು ಇದೇ ರೀತಿ ತೊಂದರೆ ಕೊಡುವರು. ಸಣ್ಣದೊಡ್ಡ ಯಂತ್ರಗಳಲ್ಲಿ ಧಂದೆಮಾಡುವವರು, ನೋಕರರು, ಲೋಕರಿಯ ಇಲ್ಲವೆ ಅದರಂತಹ ಬಟ್ಟೆಯ ವ್ಯಾಪಾರಸ್ಥರು ಹೊಲಮನೆಗಳ ಕ್ರಯವಿಕ್ರಯಮಾಡಿಸುವ ಕಂತ್ರಾಟದಾರರು, ಬ್ಯಾಂಕುಗಳ ಒಡೆಯರು ಇಲ್ಲವೆ ಡಾಯರೆಕ್ಟರರು, ಕಾಷ್ಠೌಷಧಿಗಳ ಮಾರಾಟಗಾರರು, ನಾಟಕ ಮತ್ತು ಕಾದಂಬರಿಕಾರರು, ಕ್ರಿಮಿನಲ್ ವಕೀಲರು, ಮೋಟರದವರು ಇವೇ ಮೊದಲಾದ ಧಂದೆಮಾಡುವವರು ಮತ್ತು ಪೋಲೀಸ, ಮಿಲಿಟರಿ, ಜೇಲ, ಟಂಕಸಾಲಿ ಮತ್ತು ದಿನವೂ ತಿರುಗುತ್ತಿರುವ ಅಧಿಕಾರಿಗಳು ಇಂಥ ಶಾಖೆಗಳಲ್ಲಿ ನೋಕರಿ ಮಾಡುವವರಿಗೆ ಉಳಿದ ಧಂದೆ ಮತ್ತು ನೋಕರಿ ಮಾಡುವವರಿಗಿಂತ ಈ ವರ್ಷ ಕಡಮೆ ತೊಂದರೆಯಿರುವದು. ಕೆಲ ಸಮಯ ಹಣ ಕೂಡಿಬೀಳುವ ಯೋಗವಿದ್ದರೂ ಅದು ಕೂಡಿಬೀಳುವದೋ ಇಲ್ಲವೊ ಎನ್ನುವಷ್ಟರಲ್ಲಿ ಅದಕ್ಕಿಂತ ಹೆಚ್ಚು ವೆಚ್ಚ ಧುತ್ತೆಂದು ಮುಂದೆ ಬಂದು ನಿಲ್ಲುವದು. ಸಾಲವಿದ್ದವರಿಗೆ ಸಾವಕಾರರ ಯಾತಾಯಾತಿ ಬಹಳವಾಗುವದು. ಸಣ್ಣ ಇಲ್ಲವೆ ದೊಡ್ಡ ಕೆಲಸಗಳಲ್ಲಿ ಹೆಚ್ಚು ವೆಚ್ಚ ಮಾಡಬೇಕಾದ ಪ್ರಸಂಗ ಬರುವದು.

ಶತ್ರುಗಳ ಸಂಖ್ಯೆ ಹೆಚ್ಚುವದೇ ಈ ವರ್ಷದ ವೈಶಿಷ್ಟ್ಯವಾಗಿದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾರ್ಚ ೨೪ ರ ನಂತರ ಬಹಳ ತೊಂದರೆಯಾಗಿ ಬಹುಶಃ ಅದರ ಇತ್ಯರ್ಥವಾಗಿ ನಿಮ್ಮ ವಿರುದ್ಧ ನಿರ್ಣಯವೇ ಆಗತಕ್ಕದ್ದು. ಮಿತ್ರರು ಇಲ್ಲವೆ ಸಹಾಯಕರು ಮನಸ್ಸಿನಂತೆ ವರ್ತಿಸುವರು. ಇಲ್ಲವೆ ವಿಪರೀತ ಈರ್ಷೆಗೆ ನಿಮ್ಮನ್ನು ಗುರಿಮಾಡುವರು. ಕೆಲ ಜನರ ವಿರುದ್ಧಪಕ್ಷಕ್ಕೆ ಒಳಗೊಳಗೇ ಫಿತೂರ ಆಗಿ ನಿಮ್ಮ ವ್ಯೂಹವನ್ನು ಪೂರ್ಣವಾಗಿ ನಿರರ್ಥಕಗೊಳಿಸುವರು. ಆದುದರಿಂದ ಈರ್ಷೆಗೆ ಬೀಳದೆ ಒಡಂಬಡಿಕೆಯ ಮಾರ್ಗವನ್ನನುಸರಿಸಿದರೆ ಸ್ವಲ್ಪಿಲ್ಲ ಸ್ವಲ್ಪ ಹಿತವಾಗುವದು ಎಂದು ತಿಳಿದುಕೊಳ್ಳಬೇಕು. ಮನಸ್ಸು ವಿಷಣ್ಣವಾಗುವಷ್ಟು ಶತ್ರುಗಳ ತ್ರಾಸು ಈ ವರ್ಷ ಆಗುವದು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರಲ್ಲಿ ಬಹುತರ ಎಲ್ಲರಿಗೆ ಗಂಡು ಮಗು ಹುಟ್ಟುವದು. ಮಾರ್ಚ ೨೩ ರ ವರೆಗೆ ಅವರು ಬಹಳ ಸುಲಭವಾಗಿ ಹಡೆಯುವರು, ಅನಂತರ ಕಷ್ಟದಿಂದ. ಡಿಸೆಂಬರ ೨೬ ರಿಂದ ಮಾರ್ಚ ೨೩ ರೊಳಗಾಗಿ ಹುಟ್ಟುವ ಮಕ್ಕಳು ಮಾತ್ರ ಬಹಳ ಅಶಕ್ತರು ಇಲ್ಲವೆ ಅಳದಕ್ಕಿಯಾಗುವರು. ಅವರ ಆಯುಷ್ಯದ ಬಗ್ಗೆಯೂ ಮನಸ್ಸು ಸಾಶಂಕವಾಗಿ ಉಳಿಯುವ ಸಂಭವ ಇದೆ. ವಿಶೇಷವಾಗಿ ಡಿಸೆಂಬರ ೬ ರಿಂದ ಜನೆವರಿ ೧೩, ಎಪ್ರಿಲ ೧ ರಿಂದ ಮೇ ೧೧ ಮತ್ತು ಸಪ್ಟಂಬರ ೨೫ ರ ನಂತರದ ಕಾಲದಲ್ಲಿ ಹುಟ್ಟುವ ಮಕ್ಕಳು ಹೆಚ್ಚು ಸದೃಢರು ಮತ್ತು ಆಯುಷ್ಯವಂತರಾಗುವರು.

ಈ ರಾಶಿಯ ವಿದ್ಯಾರ್ಥಿಗಳಿಗೆ ಮಾರ್ಚ ೨೩ರ ವರೆಗೆ ಬಹಳ ಖಾತ್ರಿಯಿಂದ ಯಶಸ್ಸು ಸಿಕ್ಕುವದು. ಆದರೆ ಮುಂದೆ ಎಂಥ ಹುಷಾರ ವಿದ್ಯಾರ್ಥಿಗೂ ತೊಂದರೆಯೆನಿಸುವದು. ಅದರಲ್ಲಿಯೂ ಯಾರ ಪರೀಕ್ಷೆ ನವಂಬರ ೩೦ ರಿಂದ ಫೆಬ್ರುವರಿ ೪, ಫೆಬ್ರುವರಿ ೨೪ ರಿಂದ ಮಾರ್ಚ ೧೨, ಮಾರ್ಚ ೨೮ ರಿಂದ ಜೂನ ೨, ಜೂನ ೧೯ ರಿಂದ ಜುಲೈ ೫, ಜುಲೈ ೨೩ ರಿಂದ ಸಪ್ಟಂಬರ ೨೮ ಮತ್ತು ಆಕ್ಟೋಬರ ೧೬ ರ ನಂತರದಲ್ಲಿ ಆಗುವದಿದೆಯೊ ಅವರು ಕನಿಷ್ಠ ಪಾಸಾಗುವಷ್ಟಾದರೂ ಗುಣಗಳನ್ನು ದೊರಕಿಸಿ ಯಶಸ್ಸು ಸಂಪಾದಿಸುವರು. ಯಾರು ಯಾಂತ್ರಿಕ, ಸೈನಿಕ, ಅಧ್ಯಾಪಕ ಮತ್ತು ಯಾವದೇ ಶಾಖೆಯಲ್ಲಿಯ ಹೆಚ್ಚಿನ ತರಗತಿಯ ಅಭ್ಯಾಸ ನಡೆಸಿರುವರೋ ಅಂಥವರಿಗೆ ಉಳಿದವರಿಗಿಂತ ಹೆಚ್ಚು ಸುಲಭವಾಗಿ ಯಶಸ್ಸು ದೊರೆಯುವದು.

ಒಟ್ಟಾರೆ ಪ್ರಾಪಂಚಿಕ, ಶಾರೀರಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಈ ರಾಶಿಯವರಿಗೆ ಸ್ವಲ್ಪ ಹೆಚ್ಚುಕಡಿಮೆ ತೊಂದರೆ ಅನುಭವಿಸುವ ಯೋಗವಿದ್ದರೂ ಕೊನೆಯಲ್ಲಿ ಇಚ್ಛಿತ ಧ್ಯೇಯವನ್ನು ಬಹಳ ಮಟ್ಟಿಗೆ ಸಾಧ್ಯ ಮಾಡಿಕೊಳ್ಳುವಷ್ಟು ಪ್ರಬಲ ಗ್ರಹಯೋಗ ಈ ವರ್ಷ ಖಾತ್ರಿಯಿಂದ ಇದೆಯೆಂದು ಮನಸ್ಸಿನಲ್ಲಿ ಇಟ್ಟುಕೊಂಡು ಒಳ್ಳೆ ಧೈರ್ಯದಿಂದ ಮುನ್ನಡೆಯಬೇಕು.

ಕನ್ಯಾ

ಈ ರಾಶಿಯವರ ಆರೋಗ್ಯ ಕಳೆದ ವರುಷಕ್ಕಿಂತ ಬಹಳ ಉತ್ತಮವಿದ್ದು ಡಿಸೆಂಬರ ೨೬ ರ ನಂತರ ಬಹಳ ವೇಗದಿಂದ ಸುಧಾರಿಸಹತ್ತುವದು. ಮಾರ್ಚ ೨೩ ರ ನಂತರವಂತೂ ವಯಸ್ಸಿಗನುಗುಣವಾದಷ್ಟು ತೂಕ ಹೆಚ್ಚುವದು. ಯಾವಾಗಾದರೊಮ್ಮೆ ಮೂಲವ್ಯಾಧಿ, ಹುರುಕು ಮತ್ತು ಅರುಚಿಯಿಂದ ತೊಂದರೆಯಾಗುವದಾದರೂ ಹಾಸಿಗೆ ಹಿಡಿಯುವ ಸರತಿ ಬಹುಶಃ ಬರಲಿಕ್ಕಿಲ್ಲ. ಸದ್ಯದಲ್ಲಿ ಸಾಡೇಸಾತಿಯ ನಡುವಿನ ಎರಡೂವರೆ ವರುಷ ಈಗ ಪ್ರಾರಂಭವಾದ್ದರಿಂದ ನಿಮಗೆ ಮಾನಸಿಕ ತೊಂದರೆ ವಿಶೇಷವೆನಿಸುವದು. ಪ್ರತಿಯೊಂದು ವಿಷಯದಲ್ಲಿ ನಿರರ್ಥಕವಾಗಿ ತಪ್ಪು ತಿಳಿವಳಿಕೆಯುಂಟಾಗಿ ಸಂಶಯದ ಸ್ವಭಾವವಾಗಿ ಪರಿಣಮಿಸುವದು ಮತ್ತು ಸಿಡುಕಿನ ಸ್ವಭಾವವೂ ಆಗುವದು. ಮನಸ್ಸಿನಲ್ಲಿ ದುಷ್ಟ ಮತ್ತು ಪಾಪ ವಿಚಾರಗಳು ಮೇಲಿಂದ ಮೇಲೆ ಬಂದು ಎರಡನೆಯವರೂ ಹಾಗೆ ಇರುವರೆಂದು ಭಾಸವಾಗಹತ್ತುವದು. ದೇಹಸೌಖ್ಯಕ್ಕೆ ಅವಶ್ಯಕವಾದಷ್ಟು ಸುಖ ಬಹಳ ಚನ್ನಾಗಿ ಸಿಕ್ಕುವದು. ಆದರೆ ಅದರ ಯೋಗ್ಯ ಉಪಯೋಗ ಮಾಡಿಕೊಳ್ಳುವ ಹಿಡಿತ ಮಾತ್ರ ಚೆನ್ನಾಗಿ ಸಾಧಿಸುವದಿಲ್ಲ. ದಿಸೆಂಬರ ೨೬ ರ ವರೆಗೆ ತಪ್ಪು ತಿಳಿವಳಿಕೆ ಬಹಳ ಮಟ್ಟಿಗೆ ಹೆಚ್ಚುವದು. ಆದರೆ ಎಲ್ಲ ಸಂಗತಿಗಳು ಸ್ವಲ್ಪ ಹೆಚ್ಚುಕಡಮೆ ಪ್ರಮಾಣದಲ್ಲಿ. ಕೊನೆಯಲ್ಲಿ ಮನಸ್ಸಿನಂತೆಯೇ ಸಂಭವಿಸುವವು, ಇಷ್ಟು ಮಾತ್ರ ನಿಶ್ಚಿತ. ಮಾರ್ಚ ೨೩ ರ ವರೆಗೆ ಸ್ತ್ರೀ ಸುಖದಲ್ಲಿ ಅವಳ ಸ್ಥಳಾಂತರದಿಂದಲೋ ಕಾಯಿಲೆಯಿಂದಲೋ ವ್ಯತ್ಯಯವುಂಟಾಗುವದು. ಆದರೆ ಅನಂತರ ಮಾತ್ರ ಬಹಳ ಉತ್ತಮ ಯೋಗವಿರುವದು. ಅವಳ ವಿಚಾರಗಳೆಲ್ಲ ನಿಮಗೆ ಸರಿಹೋಗುವವು. ನಿಮಗೆ ತಂದೆಯಿದ್ದರೆ ಅವರಿಗೆ ವರ್ಷದಲ್ಲಿ ಮೇಲಿಂದ ಮೇಲೆ ಕ್ಲೇಶ. ತಾಯಿಯಿದ್ದರೆ ಅವಳಿಗೂ ಡಿಸೆಂಬರ ೨೬ ರಿಂದ ಮಾರ್ಚ ೨೩ ರ ವರೆಗೆ ಸಣ್ಣದೊಡ್ಡ ಕಾಯಿಲೆಯ ಅಂಜಿಕೆ. ಅಲ್ಲದೆ ಅವರೊಡನೆ ಮೊದಲಿನಷ್ಟು ಕೂಡಿ ನಡೆಯುವದೂ ಇಲ್ಲ. ಮಾರ್ಚ ೨೩ ರ ವರೆಗೆ ವಾಹನಗಳಲ್ಲಿ ಬಹಳ ಹಾನಿಯುಂಟಾಗುವದು. ದನಕರುಗಳು ರೋಗರುಜೆಗಳಿಂದ ಬಳಲುವವು. ಮನೆಯಲ್ಲಿಯ ನೋಕರರು ಆಳುಗಳು ಕೆಲಸ ಬಿಟ್ಟು ಹೋಗುವರು ಇಲ್ಲವೆ ಅವರು ಕಾಯಿಲೆ ಬೀಳುವದರಿಂದ ಅವರ ಶುಶ್ರೂಷೆಯನ್ನೇ ನೀವು ಮಾಡಬೇಕಾದ ಸರತಿ ಬರುವದು. ಇದಲ್ಲದೆ ನೆರೆಹೊರೆಯವರು ಮತ್ತು ಅಪ್ತೇಷ್ಟರು ಸಹ ಬೇರೆಬೇರೆ ಕಾರಣಕಾರಣಗಳಿಂದ ಬಹಳ ಭಂಗಬಡಿಸುವರು. ಆದರೆ ಮಾರ್ಚ ೨೩ ರಿಂದ ಮುಂದೆ ಈ ಎಲ್ಲ ತೊಂದರೆ ಬಹಳಮಟ್ಟಿಗೆ ಇಲ್ಲದಂತಾಗಿ ವಿಶೇಷ ಸಮಾಧಾನವುಂಟಾಗುವದು. ಅದರಲ್ಲಿಯೂ ಜೂನ ೨ ರಿಂದ ದೇಹಸ್ವಾಸ್ಥ್ಯ ಮತ್ತು ಉಳಿದ ವಿಷಯಗಳಲ್ಲಿ ಸಮಾಧಾನ ಬಹಳಮಟ್ಟಿಗೆ ಸಿಕ್ಕುವದು. ಈ ರಾಶಿಯ ಯಾವ ಸ್ತ್ರೀಪುರುಷರ ವಿವಾಹವಾಗುವದಿದೆಯೋ ಅವರಿಗೆ ಮಾರ್ಚ ೨೩ ರ ನಂತರ ಬಾಸಿಂಗ ಬಲ ಹೆಚ್ಚು ಉತ್ತಮವಿದೆ. ಅದಕ್ಕೂ ಮೊದಲು ಆದರೆ ಅನೇಕ ಅಡಚಣಿಗಳು ಬಂದು ಹೇಗೋ ಸಮಾರಂಭ ನಡೆದು ಹೋಗುವದು. ವಧೂವರರು ಪರಸ್ಪರ ಅನುರೂಪ ದೊರೆಯುವರು. ಈ ರಾಶಿಯವರ ಮಕ್ಕಳ ವಿವಾಹವಾಗುವದಿದ್ದರೆ ಅದಾದರೂ ಮಾರ್ಚ ೨೩ ರ ನಂತರವೇ ಅನಾಯಾಸವಾಗಿ ಕೂಡಿಬಂದು ವ್ಯವಸ್ಥಿತವಾಗಿ ಜರಗುವದು. ನಿಮ್ಮ ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಬಹಳ ಉತ್ತಮವಿದೆ. ಅದರಲ್ಲಿಯೂ ನವಂಬರ ೨೩ ರ ವರೆಗೆ ಮತ್ತು ಅನಂತರ ಫೆಬ್ರುವರಿ ೪ ರಿಂದ ೨೪, ಜೂನ ೨ ರಿಂದ ೧೯, ಜುಲೈ ೫ ರಿಂದ ೨೩, ಸಪ್ಟಂಬರ ೨೮ ರಿಂದ ಆಕ್ಟೋಬರ ೧೬ ಈ ಅವಧಿಯ ಕಾಲವು ಅವರ ಉನ್ನತಿಗೆ ವಿಶೇಷ ಅನುಕೂಲವಾಗಿರುವದು. ಈ ವರ್ಷ ಬಗೆಬಗೆಯ ವಸ್ತುಗಳನ್ನು ಸಂಗ್ರಹಿಸುವ ಯೋಗ ಮೇಲಿಂದ ಮೇಲೆ ಬರುವದು. ಅದರಲ್ಲಿಯೂ ನವಂಬರ ೧೬ ರ ವರೆಗೆ, ಮತ್ತು ಅನಂತರ ಜನೆವರಿ ೨ ರಿಂದ ೨೬, ಮಾರ್ಚ ೧೫ ರಿಂದ ಎಪ್ರಿಲ ೯, ಮೇ ೪ ರಿಂದ ೩೧ ರ ವರೆಗಿನ ಅವಧಿಯಲ್ಲಿ ಈ ಬಗೆಯ ಯೋಗ ವಿಶೇಷ ಕಂಡುಬರುವದು. ಸ್ಥಾವರದಲ್ಲಿ ಮಾರ್ಚ ೨೩ ರ ವರೆಗೆ ಕೆಲ ಮಟ್ಟಿಗೆ ಕಿಟಕಿಟಯಾಗುವ ಸಂಭವವಿದೆ. ಅನಂತರ ಮಾತ್ರ ಅವು ತಮ್ಮಷ್ಟಕ್ಕೆ ತಾವೇ ಮಾಯವಾಗುವವು.

ನಿಮಗೆ ಸಾಡೇಸಾತಿಯಿದ್ದರೂ ನೀವು ಧಂದೆ ಇಲ್ಲವೆ ಕೂಲಿಮಾಡುತ್ತಿದ್ದರೆ ಈ ವರ್ಷ ಬಹಳ ಅನುಕೂಲವಾಗಿ ಪರಿಣಮಿಸುವದೆಂಬದನ್ನು ನಿಶ್ಚಿತ ಹಿಡಿಯಿರಿ. ನೀವು ನೋಕರರಾಗಿದ್ದರೆ ಮಾರ್ಚ ೨೩ ರ ವರೆಗೆ ನಿಮಗೆ ಬಹಳ ಉತ್ತಮವಿದೆ ಮೇಲಿನ ಗ್ರೇಡು ಸಿಗುವದು, ಯೋಗ್ಯ ಸ್ಥಳಕ್ಕೆ ಬದಲಿಯಾಗುವದು ಮತ್ತು ಯಾವಾಗಲೂ ಕಿಸೆ ತುಂಬಿರುವದು ಮೊದಲಾದ ಅನುಕೂಲ ಸಂಗತಿಗಳು ಸಂಭವಿಸಿ ವರಿಷ್ಠರ ಅನುಗ್ರಹ ಯಾವಾಗಲೂ ನಿಮ್ಮ ಮೇಲೆ ಉಳಿಯುವದು. ಧಂದೆ ಮಾಡುತಿದ್ದವರ ದೈವ ಮಾತ್ರ ಮಾರ್ಚ ೨೩ ರ ನಂತರವೇ ತೆರೆಯುವದು. ಸರಳ ಮಾರ್ಗದಿಂದ ನಡೆಯುವವರಂತೂ ಒಳ್ಳೆ ಉತ್ಕರ್ಷ ಹೊಂದುವರು. ಇಷ್ಟೇ ಅಲ್ಲ ಹಾಗೆ ನಡೆಯದಿದ್ದವರು ಕೂಡ ಹಿಂದೆ ಬೀಳುವದಿಲ್ಲ. ಡಾಕ್ಟರರು, ವೈದ್ಯರು, ಔಷಧ ವ್ಯಾಪಾರಿಗಳು, ಕಿರಾಣಿ ಇಲ್ಲವೆ ದಲಾಲಿ ವ್ಯಾಪಾರಿಗಳು ಆಹಾರ ಧಾನ್ಯಗಳ ವ್ಯವಹಾರಸ್ಥರು, ಹಣ್ಣುಕಾಯಿ ಮಾರುವವರು, ತೋಟಪಟ್ಟಿಯವರು, ಶಾಲಾ ಶಿಕ್ಷಕರು ಇಲ್ಲವೆ ವಿದ್ಯಾಶಾಖೆಯಲ್ಲಿಯ ಉಚ್ಚ ಶಿಕ್ಷಕರು ಮತ್ತು ಪ್ರಾಧ್ಯಾಪಕರು, ಅಂಚೆತಂತಿ ಕಚೇರಿಯಲ್ಲಿಯ ನೋಕರರು, ಮಿಠಾಯಿಗಾರರು, ಪತ್ತಾರರು ಮತ್ತು ಮುತ್ತು ರತ್ನದ ವ್ಯಾಪಾರಿಗಳು, ಅಚ್ಚಿನ ಕೆಲಸ ಮಾಡುವವರು ಈ ರಾಶಿಯವರಾಗಿದ್ದರೆ ಅವರಿಗೆ ಈ ವರ್ಷ ಬಹಳ ಲಾಭ ಸಿಕ್ಕುವದು. ನೋಕರಿ ಮಾಡುವವರಾಗಿದ್ದರೆ ಡಿಸೆಂಬರ ೬ ರ ವರೆಗೆ ಮತ್ತು ಅನಂತರ ಜನೆವರಿ ೧೩ ರಿಂದ ಫೆಬ್ರುವರಿ ೨೦, ಎಪ್ರಿಲ ೧ ರಿಂದ ಮೇ ೧೧, ಜೂನ ೨೩ ರಿಂದ ಅಗಷ್ಟ ೮ ಮತ್ತು ಸಪ್ಟಂಬರ ೨೫ ರ ನಂತರದ ಕಾಲವು ಹೆಚ್ಚು ಉನ್ನತಿಯದಾಗುವದು ಮತ್ತು ಧಂದೆ ಮಾಡುವವರಿಗೆ ನವಂಬರ ೧೫ ರಿಂದ ಡಿಸೆಂಬರ ೯,

ಜನೆವರಿ ೨ ರಿಂದ ೨೬, ಫೆಬ್ರುವರಿ ೧೯ ರಿಂದ ಮಾರ್ಚ ೧೫, ಎಪ್ರಿಲ ೯ ರಿಂದ ಮೇ ೪, ಮೇ ೩೧ರಿಂದ ಜುಲೈ೧ ಮತ್ತು ಅಕ್ಟೋಬರ೧೬ ನಂತರದ ಕಾಲವು ವಿಶೇಷ ಯಶಸ್ಸು ಮತ್ತು ಲಾಭಪ್ರದವಾಗಿದೆ. ವರ್ಷಾರಂಭದಲ್ಲಿ ದಶಮ ಅಂದರೆ ಕರ್ಮಸ್ಥಾನದಲ್ಲಿ ವಿಪರೀತ ಮಹತ್ವಾಕಾಂಕ್ಷೆಯನ್ನು ಮತ್ತು ಮನೆಮುರುಕತನದ ಧೋರಣವನ್ನು ನಿಮ್ಮಲ್ಲಿ ಉಂಟುಮಾಡುವ **ಹರ್ಶಲ್‌ನು ಶನಿ ಮತ್ತು ಮಂಗಳ**ನಿಂದದೃಷ್ಟನಾಗಿರುವದರಿಂದ ಕೆಲ ಸಮಯ ಇದ್ದ ನೋಕರಿಯು ಇಲ್ಲವೆ ಉದ್ಯೋಗ ಧಂದೆಯ ಬಗ್ಗೆ ಬೇಸರಿಕೆ ನಿಮ್ಮಲ್ಲಿ ಉಂಟಾಗಿ ಅದನ್ನು ಬಿಟ್ಟು ಬೇರೆ ನೋಕರಿ ಇಲ್ಲವೆ ಧಂದೆಯನ್ನು ಮಾಡಬೇಕೆಂದೆನಿಸುವದು. ಆದರೆ ಹಾಗೆ ಮಾಡುವಲ್ಲಿ ಸಾಡೇಸಾತಿಯ ಮೂಲಕ ನಿಮಗೆ ಯಾವದೇ ಲಾಭವಾಗುವದಿಲ್ಲ. ನಿಮ್ಮ ಕಲ್ಯಾಣವೂ ಆಗಲಾರದು. ತದ್ವಿರುದ್ಧವಾಗಿ ಹೆಚ್ಚು ಹೊಡೆತವೆ ಬೀಳುವದು. ನವಂಬರ ೩೦ ರಿಂದ ಫೆಬ್ರುವರಿ ೨೪, ಮಾರ್ಚ ೧೨ ರಿಂದ ೨೮, ಜೂನ ೧೯ ರಿಂದ ಜುಲೈ ೫ ಮತ್ತು ಜುಲೈ ೨೩ ರಿಂದ ಸಪ್ಪಂಬರ ೨೮ ರ ಕಾಲದಲ್ಲಿ ಈ ಲಹರಿಯು ವಿಶೇಷವಾಗಿ ಕಂಡುಬರುವದು.

ಈ ರಾಶಿಯವರಲ್ಲಿ ಯಾರಾದರೂ ಮೊದಲ ಸಲ ನೋಕರಿ ಹಿಡಿಯುವದಿದ್ದರೆ ಆ ಬಗೆಯ ಪ್ರಯತ್ನಕ್ಕೆ ಮಾರ್ಚ ೨೩ ರ ವರೆಗೆ ಅಲ್ಪಾಯಾಸದಿಂದ ಯಶಸ್ಸು ಸಿಕ್ಕುವದು. ಇಂಥವರಾರಾದರೂ ಧಂದೆಮಾಡುವವರಿದ್ದರೆ ಮೇಲೆ ಹೇಳಿದ ತಾರೀಕಿನಿಂದ ಮುಂದೆ ಪ್ರಾರಂಭಿಸಬಹುದು.

ಸರಕಾರಿ ಇಲ್ಲವೆ ಖಾಸಗಿ ರೀತಿಯ ವಾದವಿವಾದಗಳಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಮಾರ್ಚ ೨೩ ರ ವರೆಗೆ ಒಡಂಬಡಿಕೆಯಿಂದಲೆ ಬಗೆಹರಿಸಿಕೊಳ್ಳುವದು ಹಿತಕರವೆನಿಸುವದು. ಹಾಗೆ ಮಾಡದಿದ್ದರೆ ನಿಶ್ಚಿತವಾಗಿ ಅಪಯಶಸ್ಸು ಉಂಟಾಗುವ ಅಂಜಿಕೆ ಇದೆ. ಆದರೆ ಆ ತಾರೀಕಿನ ನಂತರ ಮಾತ್ರ ಆ ಬಗೆಯ ಕೆಲಸಗಳಲ್ಲಿ ಮೀಸೆ ಹುರಿಹಾಕಿಕೊಂಡು ನಡೆದರೆ ಅಡ್ಡಿಯಿಲ್ಲ. ಏಕೆಂದರೆ ಶತ್ರುಗಳು ಪೂರ್ಣ ರೀತಿಯಿಂದ ಪರಾಜಯ ಹೊಂದುವಂತೆ ಉತ್ತಮ ಯಶಸ್ಸು ಉಡಿಯಲ್ಲಿ ಬೀಳುವದು. ಈ ಬಗ್ಗೆ ಎಳ್ಳಷ್ಟೂ ಸಂಶಯವಿಲ್ಲ. ನಿಮ್ಮ ಜಾತಿಬಾಂಧವರೇ ವಿಶೇಷ ಶತ್ರುತ್ವ ವಹಿಸುವರು. ಮಿತ್ರರು ಈ ವರ್ಷ ನಿಮಗೆ ಒಳ್ಳೆ ಸುಖ ಕೊಡುವರು. ಆದರೆ ನಿಮ್ಮ ವರ್ತನೆಯಿಂದಲೆ ಅವರ ಮನಸ್ಸು ಅಲ್ಪಸ್ವಲ್ಪ ದುಃಖಿತವಾಗುವದು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರು ಪೂರ್ಣ ನಿರ್ಭಯರಾಗಿ ಉಳಿಯಬೇಕು. ಆದರಲ್ಲಿಯೂ ಮಾರ್ಚ ೨೩ ರ ನಂತರ ಅದು ಬಹಳ ಸುಲಭ ರೀತಿಯಿಂದ ಆಗುವದು. ಮತ್ತು ಬಾಣಂತಿತನವೂ ಸುಖದಿಂದ ಮುಗಿಯುವದು. ನವಂಬರ ೧೫ ರ ವರೆಗೆ ಮತ್ತು ನಂತರ ಡಿಸೆಂಬರ ೯ ರಿಂದ ಜನೇವರಿ ೨, ಜನೇವರಿ ೨೬ ರಿಂದ ಫೆಬ್ರುವರಿ ೧೯, ಮಾರ್ಚ ೧೫ ರಿಂದ ಎಪ್ರಿಲ ೯, ಮೇ ೪ ರಿಂದ ೩೧ ಮತ್ತು ಜುಲೈ ೧ ರ ನಂತರ ಹಡೆಯುವವರಿಗೆ ಬಹುಶಃ ಪುತ್ರಪ್ರಾಪ್ತಿಯ ಆನಂದವೂ ಲಭಿಸುವದು. ಆದರೆ ನೂರಕ್ಕೆ ೮೦ ರಷ್ಟು ಕನ್ಯಾ ರತ್ನ ಹುಟ್ಟುವ ಯೋಗ ಈ ವರ್ಷ ಇರುವದರಿಂದ ಮೇಲೆ ಹೇಳಿದ ಅವಧಿಯಲ್ಲಿ ಹಡೆಯುವವರೇ ವಿರಳ. ಹೆಣ್ಣು ಹುಟ್ಟುವ ಮಕ್ಕಳು ದಷ್ಟಪುಷ್ಟ ಸಶಕ್ತ, ಸುಂದರ ಮತ್ತು ದೀರ್ಘಾಯುಗಳಾಗುವರೆಂದು ಪೂರ್ಣವಾಗಿ ತಿಳಿದುಕೊಳ್ಳತಕ್ಕದ್ದು.

ವಿದ್ಯಾರ್ಥಿಗಳು ಈ ವರ್ಷ ಮಾರ್ಚ ೨೩ ರ ವರೆಗೆ ಬಹಳ ಆಲಸ್ಯದಿಂದ ಕಾಲ ಕಳೆಯುವ ಯೋಗವಿದೆ. ಆದರೆ ಹಾಗೆ ಮಾಡದೆ ಅಭ್ಯಾಸದಲ್ಲಿ ಮನಸ್ಸು ಹಾಕಿದರೆ ನಪಾಸಾಗುವ ಅಂಜಿಕೆ ಸ್ವಲ್ಪೂ ಇಲ್ಲ. ನೂರಕ್ಕೆ ೯೦ ರಷ್ಟು ಜನ ಪಾಸಾಗೇತೀರುವರು. ಯಾರ ಪರೀಕ್ಷೆ ಡಿಸೆಂಬರ ೯ ರ ವರೆಗೆ ಮತ್ತು ಅನಂತರ ಜನೆವರಿ ೨ ರಿಂದ ೨೬, ಫೆಬ್ರುವರಿ ೪ ರಿಂದ ೨೬, ಮಾರ್ಚ ೧೨ ರಿಂದ ೨೮, ಜೂನ ೨ ರಿಂದ ೧೯, ಜುಲೈ ೫ ರಿಂದ ೨೩ ಮತ್ತು ಸಪ್ಪಂಬರ ೨೮ ರ ನಂತರ ಆಗುವದಿದೆಯೋ ಅವರಿಗೆ ಸರಸ್ವತಿಯು ವಿಜಯಶ್ರೀಯನ್ನು ಕೈಯಲ್ಲಿ ಹಿಡಿದುಕೊಂಡೇ ಇರುವಳು. ಅಪಯಶದ ಅಂಜಿಕೆಯಿಲ್ಲ.

ಒಟ್ಟಾರೆ ಈ ವರ್ಷ ಸಾಡೇಸಾತಿಯಿದ್ದರೂ ಸಹಸಾ ಹಾಗೆನಿಸದೆ ಉತ್ಕರ್ಷದ ಒಂದೆರಡು ಹೆಜ್ಜೆಯಾದರೂ ಮುಂದೆ ಬೀಳುವಲ್ಲಿ ಸಂದೇಹವಿಲ್ಲ.

ತುಲಾ

ಈ ರಾಶಿಯ ಜನರಿಗೆ ಮೊನ್ನೆ ಮೊನ್ನೆ ಸಪ್ಟಂಬರ ೧೯ ರಿಂದ ಶನಿಯ ಸಾಡೇಸಾತಿಯು ಪ್ರಾರಂಭವಾಗಿದೆ. ಅಂತೆಯೆ **೧೨ ನೇ ಶನಿ** ಇರುವ ವರೆಗೆ ಅಂದರೆ ಶನಿಯು ವ್ಯಯಸ್ಥಾನದಲ್ಲಿ ಇರುವ ವರೆಗೆ ಎಷ್ಟೇ ಜಾಣತನವಿದ್ದರೂ ಪ್ರತಿಯೊಂದು ಹೆಜ್ಜೆಯನ್ನು ಜಪ್ಪಿಸಿ ಇಡಬೇಕಾಗುವದು. ಈ ವರ್ಷ ನಿಮ್ಮ ಆರೋಗ್ಯಕ್ಕೆ ಅನುಕೂಲವಿದ್ದರೂ ಸಾಡೇಸಾತಿ ಮೂಲಕ ಆಹಾರ ವಿಹಾರಗಳಲ್ಲಿ ಅತಿರೇಕ ಇಲ್ಲವೆ ಅನಿಯಮಿತತನವನ್ನೆಂದಿಗೂ ಮಾಡಬಾರದು. ಏಕೆಂದರೆ ಹಾಗೇನಾದರೂ ಸ್ವಲ್ಪ ಅನಿಯಮಿತತನವಾದರೆ ಅದರ ಬಿಸಿ ಕೂಡಲೆ ಹತ್ತದೆ ಇರದು. ಡಿಸೆಂಬರ ೨೬ ರ ವರೆಗೆ ಏನು ತಿಂದರೂ ಪಚನವಾಗುವದು. ಏನು ಮಾತಾಡಿದರೂ ದಕ್ಕಿಹೋಗುವದು. ಆದರೆ ಅನಂತರ ಮಾತ್ರ ಬಾಯಿ ಮತ್ತು ನಾಲಗೆಯನ್ನು ನಿಯಂತ್ರಣದಲ್ಲಿ ಇಡಬೇಕು. ಈ ರಾಶಿಯವರಿಗೆ ಈ ವರ್ಷ ಆರೋಗ್ಯ ಚೆನ್ನಾಗಿ ಇದ್ದರೂ ಫೆಬ್ರುವರಿ ೧೯ ರಿಂದ ಮಾರ್ಚ ೧೫ ಎಪ್ರಿಲ ೯ ರಿಂದ ಮೇ ೪ ಈ ಮಧ್ಯಾಂತರ ಅವಧಿಯಲ್ಲಿ ಕಿರಕಳ ಕ್ಲೇಶ ಅಲ್ಪಸ್ವಲ್ಪ ಎನಿಸುವದು. ದೇಹ ಸ್ವಾಸ್ಥ್ಯಕ್ಕೆ ಅವಶ್ಯಕವಾದಂತಹ ಅನೇಕ ವಿಷಯಗಳು ವ್ಯವಸ್ಥಿತವುಳಿಯುವ ಯೋಗವಿದ್ದರೂ ಕುಟುಂಬ ಸ್ಥಾನದ ಮೇಲೆ ಬಿದ್ದ **ಶನಿಯ** ದೃಷ್ಟಿಯಿಂದ ಮನೆಯಲ್ಲಿ ಸಾವಕಾಶವಾಗಿ ಕಲಹದ ವಾತಾವರಣವುಂಟಾಗುವದು. ಕಾಲಾಕಾಲವನ್ನರಿಯದೆ ನಿಮ್ಮ ದೊಡ್ಡತನವನ್ನು ತೋರಿಸುವ ಅಟ್ಟಹಾಸದಲ್ಲಿ ಅಪಾತ್ರ ಜನರಿಗೆ ಕೂಡ ಮನಬಂದಂತೆ ವಚನ ಕೊಟ್ಟು ನಿಷ್ಕಾರಣವಾಗಿ ನಿಮ್ಮ ಕೈಕಟ್ಟಿಕೊಂಡು ಕೂಡ್ರಬೇಕಾಗುವದು ಮತ್ತು ಅದನ್ನು ಪೂರ್ತಿ ಮಾಡುವದಾಗದ್ದರಿಂದ ಇಲ್ಲವೆ ತಪ್ಪಿನಿಂದ ಆ ಬಗೆಯ ವಚನ ಕೊಡಲಾಯಿತೆಂದು ಲಕ್ಷ್ಯಕ್ಕೆ ಬರುವದರಿಂದ ಎಲ್ಲವೂ ಕುಂಠಿತವಾಗುವದು. ಮಾರ್ಚ ೨೩ ರ ನಂತರ ಇಂಥ ಯೋಗ ಬಹಳ ಸಲ ಬರುವದು. ಸ್ತ್ರೀ ಸುಖ ಚೆನ್ನಾಗಿ ದೊರೆಯುವ ಯೋಗವಿದ್ದರೂ ಉಳಿದ ಜನರೊಡನೆ ಕೂಡಿ ನಡೆಯುವದಿಲ್ಲ. ಪ್ರತಿಯೊಬ್ಬನೂ ತನ್ನ ಹಠವನ್ನು ಸಾಧಿಸಿಕೊಳ್ಳುವದಕ್ಕಾಗಿ ವಿಪರೀತ ವೆಚ್ಚ

ಹೊಟ್ಟೆಯ ವಿಕಾರವೇ ? ಅಶಕ್ತತೆಯೋ ? ಮರುಗಬೇಡಿ ! ಶ್ರೀ ಶಿವಾನಂದ ಸ್ವಾಮಿಗಳ ಅನುಭವಪೂರ್ಣ
ವ್ಯಾಯಾಮ, ಆಸನ ಮೊದಲಾದ ಹಲವಾರು ಚಿಕಿತ್ಸೆಗಳಿಂದ ದೀರ್ಘಾಯುಷಿಗಳಾಗಿರಿ ! !

ಉದರದ ಆರೋಗ್ಯ ಮತ್ತು ಸ್ನಾಯುಬಲ ಸಂವರ್ಧನ

೧೫೦ ಚಿತ್ರಗಳುಳ್ಳ ಪುಸ್ತಕ. ಅಂಚೆವೆಚ್ಚ ಸೇರಿ ಬೆಲೆ : ರೂ. ೨/೬/೦

ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು !

ವೀರ್ಯರಕ್ಷಣೆಯ ರಾಮಬಾಣ ಉಪಾಯಗಳು ! ೨೫೦ ಪುಟ ! ಅಂಚೆ ವೆಚ್ಚ ಸೇರಿ ರೂ. ೩/೮/೦

ಸ ಮಾ ಜ ಪು ಸ್ತ ಕಾ ಲ ಯ, ಸು ಭಾ ಸ ಬೀ ದಿ, ಧಾ ರ ವಾ ಡ

ಮಾಡಿಸಲಿಕ್ಕೆ ಹಚ್ಚುವರು ಮತ್ತು ಮನಬಂದಂತೆ ವರ್ತಿಸಿ ತೊಂದರೆ ಕೊಡುವರು. ಮಾರ್ಚ ೨೩ ನಂತರ ಬಂಧುಗಳು ಬಹಳ ವಿರೋಧದಿಂದ ವರ್ತಿಸುವರು. ತಂದೆತಾಯಿಗಳಿದ್ದರೆ ಅವರ ಒಲವು ನಿಮಗಿಂತ ಅವರ ಕಡೆಗೇ ಹೆಚ್ಚು ಇರುವದು. ಡಿಸೆಂಬರ ೨೬ ರಿಂದ ನಿಮ್ಮ ಮಕ್ಕಳು ಮರಿಗಳ ಆರೋಗ್ಯ ಸರಿಯಾಗಿ ಉಳಿಯಲಾರದು ಮತ್ತು ಮಾರ್ಚ ೨೩ ರ ನಂತರ ಅವರ ವರ್ತನೆಯೂ ಚೆನ್ನಾಗಿ ಉಳಿಯುವದಿಲ್ಲ. ಮಕ್ಕಳಲ್ಲಿ ಒಬ್ಬರಿಗೆ ಸಪ್ಟಂಬರ ೨೫ ರ ನಂತರ ಬಹಳ ದುಃಖವಾಗುವ ಸಂಭವವಿದೆ. ಇಲ್ಲದಿದ್ದರೆ ಅವರ ಬಗ್ಗೆ ಬಹಳ ಕಾಳಜಿ ತೆಗೆದುಕೊಳ್ಳ ಬೇಕಾಗುವ ಕೆಲ ಸಂಗತಿಗಳು ಸಂಭವಿಸುವವು. ಅದೇ ಸಮಯದಿಂದ ದೇವ ಧರ್ಮಗಳ ಕಡೆಗಿದ್ದ ನಿಮ್ಮ ಮನದ ಒಲವು ಬಹಳ ಮಟ್ಟಿಗೆ ಕಡಮೆಯಾಗುವದು. ಮಾರ್ಚ ೨೩ ರಿಂದ ಹೌಸಿನಿಂದ ಇಲ್ಲವೆ ನಿರುಪಾಯದಿಂದಲಾದರೂ ನಿಮ್ಮಸ್ಥಾವರ ಆಸ್ತಿಯು ಕೆಲಮಟ್ಟಿಗೆಯಾದರೂ ಹೆಚ್ಚುವದು. ಆಪ್ತರಲ್ಲಿ ಮತ್ತು ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚುವದು ಅಂತೆಯೆ ಕೆಲ ಮಟ್ಟಿಗೆ ಕುಚೇಷ್ಟೆ ನಡೆಯುವದು. ವಾಹನ ಸುಖ ಬಹಳ ಚೆನ್ನಾಗಿ ಸಿಕ್ಕುವದು ಮತ್ತು ಕೈಕೆಳಗಿನ ನೋಕರರು ಆಳುಗಳು ವಿಶ್ವಾಸದಿಂದ ನಡೆದುಕೊಳ್ಳುವರು. ಸ್ಥಾವರ ಉತ್ಪನ್ನದಲ್ಲಿ ವ್ಯವಸ್ಥೆಯುಂಟಾಗುವದು. ಆದರೂ ಬಹಳ ವೆಚ್ಚ ನಡೆದು ಇದ್ದ ಸಂಗ್ರಹವೆಲ್ಲ ಬಹಳ ಮಟ್ಟಿಗೆ ಕರಗಿ ಕೆಲ ಸಲ ಸಾಲ ಕೂಡ ಅಗುವದು. ಹೆಂಡತಿಯನ್ನು ಬಿಟ್ಟು ಉಳಿದ ಸ್ತ್ರೀ ವರ್ಗದಲ್ಲಿ ಕೆಲಮಟ್ಟಿಗೆ ತಪ್ಪುತಿಳಿವಳಿಕೆಯಿಂದ ನಿಮ್ಮ ಬಗ್ಗೆ ಅನಾದರ ಹೆಚ್ಚುತ್ತ ಹೋದದ್ದು ಕಂಡುಬರುವದು. ಮಿತ್ರರು ನಿಮ್ಮ ಎದುರಿನಲ್ಲಿ ಯೋಗ್ಯ ರೀತಿಯಿಂದ ನಡೆದುಕೊಂಡರೂ ಹಿಂದಿನಿಂದ ಸ್ವಲ್ಪ ಕೈವಾಡವನ್ನೇ ನಡೆಸುವರು.

ಈ ರಾಶಿಯ ಸ್ತ್ರೀಪುರುಷರ ವಿವಾಹವಾಗುವದಿದ್ದರೆ ಮಾರ್ಚ ೨೩ ರ ವರೆಗೆ ಬಾಸಿಂಗ ಬಲ ಇದೆ. ಮುಂದೆ ಆದರೂ ಬಹಳ ತೊಂದರೆಯಿಂದ ಅದು ಒದಗಿ ಬರುವದು. ವಿವಾಹವೆಂದೇ ಒದಗಿ ಬಂದರೂ ವಧೂವರರು ಪರಸ್ಪರ ಅನುರೂಪ ಸಿಕ್ಕುವರು. ಮಾರ್ಚ ೨೩ ರ ವರೆಗೆ ಅಗುವ ವಿವಾಹಗಳಲ್ಲಿ ಪ್ರೇಮವಿವಾಹದ ಪ್ರಮಾಣ ಹೆಚ್ಚು ಕಂಡುಬರುವದು. ಅದರಂತೆಯೇ ಯಾರ ಮಕ್ಕಳ ವಿವಾಹವಾಗುವದಿದೆಯೋ ಅದಕ್ಕೆ ಮಾರ್ಚ ೨೩ ರ ನಂತರವೇ ಒಳ್ಳೆ ಅನುಕೂಲ ಯೋಗವಿದೆಯೆಂದು ತಿಳಿಯಬೇಕು. ಮಕ್ಕಳ ಉನ್ನತಿಗೆ ಮಾತ್ರ ಡಿಸೆಂಬರ ೨೬ ರ ನಂತರ ಈ ವರ್ಷ ಬಹಳ ಅನನುಕೂಲವಿರುವದು.

ನಿಮ್ಮ ಉದ್ಯೋಗ ಧಂದೆಗೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲವೆಂದು ಹೇಳಬಹುದಾದರೂ ಅಪಾಯಕಾರಕವಿದೆಯೆಂದು ಹೇಳುವಂತಿಲ್ಲ. ನೀವು ಕೂಲಿಕಾರರಿದ್ದರೆ ಇದೇ ಬಗೆಯ ಯೋಗ ಕಂಡುಬರುವದು. ದ್ರವ್ಯ ಲಾಭ ಸಾಕಷ್ಟು ಆದರೂ ಅದು ನಿಮ್ಮ ಬೊಕ್ಕಸದಲ್ಲಿ ಬೀಳುವ ಮೊದಲೆ ವೆಚ್ಚವಾಗಿ ಹೋಗುವ ಪ್ರಸಂಗ ಧುತ್ತೆಂದು ಮುಂದೆ ಬಂದು ನಿಲ್ಲುವದು. ಮಾರ್ಚ ೨೩ ರ ನಂತರ ವೆಚ್ಚದ ಈ ವಿಷಯಗಳು ಹೆಚ್ಚು ತೊಂದರೆ ಕೊಡುವವು. ಧಂದೆ ಮಾಡುವವರಿಗಿಂತ ನೋಕರದಾರರಿದ್ದವರಿಗೇ ಈ ವರ್ಷವು ಕಡಮೆ ತೊಂದರೆಯದಾಗಿ ಪರಿಣಮಿಸುವದು. ಧಂದೆಮಾಡುವವರಿಗೆ ಕಳ್ಳಪೇಟೆಯ ಇಲ್ಲವೆ ಅದರಂತಹದೇ ಖೊಟ್ಟಿ ವ್ಯವಹಾರ ಮಾಡಿದವರಿಗೆ ರಾಜಕೀಯ ತೊಂದರೆಯಾಗುವಅಂಜಿಕೆಯೂ ಬಹಳಇದೆ.ನಿಮ್ಮ ಸಹಾಯಕರೆಂದು ಮುಂದೆ ಬಂದವರೇ ನಿಮ್ಮನ್ನು ಪೇಚಿನಲ್ಲಿ ತರುವರು. ಈ ಬಗೆಯ ಗಂಡಾಂತರದ ಅಂಜಿಕೆ ಮಾರ್ಚ ೨೮ ರಿಂದ ಜೂನ ೨, ಮತ್ತು ಸಪ್ಟಂಬರ ೨೮ ರಿಂದ ಅಕ್ಟೋಬರ ೧೬ ರ ಮಧ್ಯಾಂತರ ಅವಧಿಯಲ್ಲಿ ವಿಶೇಷವಿದೆ. ಕೊಡ ತಕ್ಕೊಳ್ಳುವ ವಿಷಯಗಳಲ್ಲಿ ಮೇಲಿಂದ ಮೇಲೆ ತಪ್ಪುಮರವುಗಳಾಗಿ ವಿವಾದದ ಪರಿಸ್ಥಿತಿ ಉಂಟಾಗುವದು. ಯಾರ ಜನ್ಮಕುಂಡಲಿಯಲ್ಲಿ **ಶನಿ** ಇಲ್ಲವೆ **ಮಂಗಳ** ಈ ರಾಶಿಯ ಇಲ್ಲವೆ ಲಗ್ನದ ವ್ಯಯಸ್ಥಾನದಲ್ಲಿ ಇರುವನೋ ಅಂಥ ಉದ್ಯೋಗ ಧಂದೆಮಾಡುವವರಿಗೆ ಮೇಲಿನ ಅವಧಿಯಲ್ಲಿ ಔಷಧ ಕೂಡ ವಿಷವಾಗಿ ಪರಿಣಮಿಸುವ ಅಂಜಿಕೆ ಇದ್ದದರಿಂದ ಬಹಳ




ಒಂದೊಂದು ಹಂತಕ್ಕೂ ಹೆಚ್ಚಿನ ಅನ್ನ



ಕಿಸಾನ ನೇಗಿಲು

ಈ ನೇಗಿಲು ಸಾಮಾನ್ಯವಾಗಿದ್ದರೂ ಗಡಸಾಗಿ ರಚಿಸಲ್ಪಟ್ಟಿದೆ. ಉಳುವುದರಲ್ಲಿ ಹೆಗುರವಾಗಿದ್ದು ಬಾಳಿಕೆ ಕೊಡುತ್ತದೆ. ಒಂದರಿಂದ ನಾಲ್ಕು ಎತ್ತುಗಳು ಇದಕ್ಕೆ ಬೇಕಾಗುತ್ತದೆ. 'ಕಿಸನ್' ರೂಪದಲ್ಲಿ ಆಕರ್ಷಿಸುವಂತಹದು. ಭಾರವಿಲ್ಲದೆ ಗಟ್ಟಿ ನೆಲವನ್ನು ಉಳಲು ತಕ್ಕಂತಹದು.



ಈ ಕಬ್ಬಿನ ಆಲೆಯು ನಾಲ್ಕು ಎತ್ತುಗಳಿಂದ ಎಳೆಯಲ್ಪಡುವಂತಹದು. ಅತ್ಯುತ್ತಮವಾದ ಜೀಡು ಕಬ್ಬಿಣದಿಂದ ತಯಾರಿಸಲ್ಪಟ್ಟಿದೆ. ದಪ್ಪಸಿಪ್ಪೆಯುಳ್ಳ ಕಬ್ಬನ್ನೂ ಇದು ಹಿಂಡುತ್ತದೆ. ಯಾವೊಂದು ಭಾಗವೂ ಸುಲಭವಾಗಿ ಒಡೆಯದಂತಹದು. ಪ್ರತ್ಯೇಕ ಭಾಗಗಳು ನಮ್ಮಲ್ಲಿ ಸಿಗುತ್ತವೆ.

ವಿಶ್ವಾಸ ಕಬ್ಬಿನ ಆಲಗಾಣ

DE MADHAVNAGAR

ದಿ ಡೆಕ್ಕನ ಇಂಜನಿಯರಿಂಗ್ ಲಿಮಿಟೆಡ್
ಮಾಧವನಗರ (ಎಂ.ಎಸ್.ಎಂ.)

DEL/21K TOM & BAY (R.)

ಒಪ್ಪಿಸಿಕೊಂಡು ಇರಬೇಕಾಗಿದೆ. ಮತ್ತು ಕಣ್ಣಲ್ಲಿ ಎಣ್ಣೆಹಾಕಿಕೊಂಡು ನಿಮ್ಮ ಧಂದೆಯ ಪ್ರತಿಯೊಂದು ವಿಷಯದತ್ತ ಲಕ್ಷಕೊಡಬೇಕು. ಮಾರ್ಚ ೨೩ರ ವರೆಗೆ ಧಂದೆಮಾಡುವವರಿಗೆ ಅಷ್ಟೊಂದು ತೊಂದರೆಯಾಗುವದಿಲ್ಲ. ಆದರೆ ನೋಕರಿ ಮಾಡುವವರಿಗೆ ಈ ದಿನಾಂಕದ ನಂತರ ಬಹಳ ತೊಂದರೆಯಾಗದು. ನಿಮಗೆ ಬದಲಿಯಾಗುವದಿದ್ದರೆ ಸುಖಸೌಕರ್ಯದ ಸ್ಥಳಕ್ಕೆ ಆದರೂ ಅಲ್ಲಿ ಮೊದಲಿಗಿಂತ ಕಠಿಣ ಮತ್ತು ಅಪಾಯಕರ ಕೆಲಸ ಮಾಡುವ ಪ್ರಸಂಗ ಬರುವದು. ನಿಮ್ಮ ಕೆಲಸವನ್ನು ಮಾಡಿಕೊಂಡು ಎರಡನೆಯವರ ಕೆಲಸ ಮಾಡುವ ಅಪರಿಹಾರ್ಯ ಪ್ರಸಂಗವೂ ಬರುವದು. ಕೆಲ ಕಿರುಕಳ ತಪ್ಪುಗಳಾಗಿ ಅವನ್ನು ಸರಿಪಡಿಸುವದಕ್ಕೆ ಇಲ್ಲವೆ ತಿದ್ದಿಕೊಳ್ಳುವದಕ್ಕೆ ಅಳುವ ಪ್ರಸಂಗ ಕೂಡ ಬರುವದು. ಏನೋ ಸ್ವಲ್ಪ ಸಂತೋಷ ಹಚ್ಚಿಕೊಳ್ಳುವಂತಹ ಘಟನೆ ನಡೆಯುತ್ತಿದೆಯೊ ಇಲ್ಲವೊ ಅಷ್ಟರಲ್ಲಿಯೇ ಅದಕ್ಕಿಂತ ಹೆಚ್ಚು ವ್ಯಗ್ರತೆಯ ಸಂಗತಿ ಸಂಭವಿಸುವದು. ನೀವು ಸಾಲಮಾಡಿದ್ದರೆ ಸಾವಕಾರರ ತೊಂದರೆ ವಿಪರೀತವಾಗಿ ಬಹಳ ಅಸಹ್ಯ ಪರಿಸ್ಥಿತಿ ಉಂಟಾಗುವದು. ಅನೇಕ ಸಲ ಹಿಂದೆಕೊಟ್ಟ ಹಣದ ಬಗ್ಗೆಯೂ ವಿಸ್ಮರಣೆಯಿಂದಲೊ ಇಲ್ಲವೆ ಬೇಕೆಂತಲೊ ಮತ್ತೆ ಸಾವಕಾರನ ಬೇಡಿಕೆ ಹೆಚ್ಚುವದು. ನೀವು ಏನಾದರೂ ವ್ಯವಹಾರ ಮಾಡುತಿದ್ದರೆ ಅಳತೆಮೀರಿ ಸಂಗ್ರಹ ಮಾಡುವ ಬುದ್ಧಿ ನಿಮ್ಮಲ್ಲಿ ಉಂಟಾಗುವದು. ಆದರೂ ಬುದ್ಧಿಜೀವಿಗಳಿಗೆ ಮತ್ತು ತಕ್ಕಡಿಯಿಂದ ತೂಗಿ ಕೊಡುವ ಸರಕುಗಳ ವ್ಯಾಪಾರಿಗಳಿಗೆ ಧಾನ್ಯ ಬಿಟ್ಟು ಉಳಿದ ಖಾದ್ಯ ಪದಾರ್ಥಗಳ ವ್ಯವಹಾರ ಮಾಡುವವರಿಗೆ ಹಳ್ಳಿ ಹಳ್ಳಿಗೆ ಹೋಗಿ ಇಲ್ಲವೆ ಮನೆ ಮನೆಗೆ ಹೋಗಿ ಸರಕುಗಳನ್ನು ಮಾರುವವರಿಗೆ, ಚಿತ್ರಗಾರರು, ಫೋಟೋಗ್ರಾಫರರು, ಮನೋರಂಜನದ ಸಾಧನಗಳ ವ್ಯಾಪಾರ ಮಾಡುವವರು, ಬೌದ್ಧಿಕ ವ್ಯವಹಾರ ಮಾಡುವವರಿಗೆ ಸಹಾಯಕರರಾದವರು ಅದರಂತೆಯೇ ವಿದ್ಯಾಶಾಖೆ, ಕಷ್ಟಮ ಇಲ್ಲವೆ ಅಬಕಾರೀ ಇಲ್ಲವೆ ಆರೋಗ್ಯಶಾಖೆಯ ನೋಕರರಿಗು ಇವರಿಗೆ ಅಷ್ಟೊಂದು ತೊಂದರೆಯಾಗಲಾರದು. ನವಂಬರ ೧೬ ರ ವರೆಗೆ ಮತ್ತು ಅನಂತರ ಡಿಸೆಂಬರ ೧೪ ರಿಂದ ಜನೇವರಿ ೧೪ ಫೆಬ್ರುವರಿ ೧೩ ರಿಂದ ಮಾರ್ಚ ೧೩, ಎಪ್ರಿಲ ೧೪ ರಿಂದ ಮೇ ೧೫ ಮತ್ತು ಜೂನ ೧೪ ರಿಂದ ಸಪ್ಟಂಬರ ೧೬ರ ಮಧ್ಯಾಂತರದ ಕಾಲವು ಹೆಚ್ಚು ಅನುಕೂಲವಾಗಿ ಪರಿಣಮಿಸುವದು.

ಎಷ್ಟೇ ಸಂಕಟಗಳು ಬಂದರೂ ಮರ್ಯಾದೆಯಿಂದಲೆ ಅವನ್ನೆಲ್ಲ ಎದುರಿಸಿ ಯಶಸ್ವಿಗಳಾಗುವ ಪ್ರಬಲ ಯೋಗವಿದೆ. ವಾದವಿವಾದಗಳಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹುಶಃ ಯಶಸ್ಸು ಸಿಕ್ಕುವದು ಇಲ್ಲವೆ ಅದರ ನಿರ್ಣಯ ಗೊತ್ತಾಗದಿದ್ದರೆ ಮುಂದೆಯಾದರೂ ಅದು ಅನುಕೂಲವಾಗಿ ಪರಿಣಮಿಸುವ ಯೋಗ ಸ್ಪಷ್ಟವಾಗಿ ಕಾಣಿಸುವದು. ಡಿಸೆಂಬರ ೨೬ ರ ವರೆಗೆ ಮತ್ತು ಅನಂತರ ಫೆಬ್ರುವರಿ ೨೦ ರಿಂದ ಎಪ್ರಿಲ ೧, ಜೂನ ೨೩ ರಿಂದ ಆಗಸ್ಟ ೮ ಮತ್ತು ಸಪ್ಟಂಬರ ೨೫ ರ ನಂತರದ ಅವಧಿಯಲ್ಲಿ ಶತ್ರುಗಳು ಇಲ್ಲವೆ ಸಂಕಟಗಳು ಬಹಳಮಟ್ಟಿಗೆ ನಿಃಸತ್ವವಾಗಿ ಪರಿಣಮಿಸುವವೆಂಬುದು ನಿಶ್ಚಿತ.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರಲ್ಲಿ ಯಾರು ಸಪ್ಟಂಬರ ೨೬ ರೊಳಗಾಗಿ ಹಡೆಯುವರೊ ಅವರು ಒಬ್ಬರ ಕಿವಿ ಕೇಳಿತು ಇನ್ನೊಬ್ಬರ ಕಿವಿ ಕೇಳಲಿಲ್ಲ ಇಷ್ಟು ಸುಲಭವಾಗಿ ಹಡೆಯುವರು. ಆದರೆ ಮುಂದೆ ಮಾರ್ಚ ೨೩ರ ವರೆಗೆ ಹಡೆಯುವವರಿಗೆ ಸ್ವಲ್ಪ ಕಷ್ಟವೆನಿಸುವದು. ಅನಂತರ ಹಡೆಯುವವರು ಮಾತ್ರ ಯೋಗ್ಯ ತಜ್ಞರ ನೇತೃತ್ವದಲ್ಲಿಯೆ ಹಡೆಯಬೇಕಾದುದು ಹಿತಕರವೆನಿಸುವದು. ಡಿಸೆಂಬರ ೨೬ ರ ವರೆಗೆ ಗಂಡುಮಗು ಹುಟ್ಟುವ ಮತ್ತು ಅನಂತರ ಹೆಣ್ಣುಮಗು ಹುಟ್ಟುವ ಯೋಗವು ಹೆಚ್ಚಿಗೆ ಇದೆ. ಹಡೆಯುವಾಗ ಕಷ್ಟವಾಗಲಿ ಆಗದಿರಲಿ ಮಗು ಮಾತ್ರ ಬಹಳ ಅಶಕ್ತ ಇಲ್ಲವೆ ಕಿರಿಕಿರಿ ಕೊಡುವಂತಹದಾಗುವದು. ಡಿಸೆಂಬರ ೨೬ ರ ನಂತರವಂತೂ ಈ ಬಗೆಯ ಸ್ಥಿತಿ ಬಹಳ ಮಟ್ಟಿಗೆ ಕಂಡುಬರುವದು. ಅಲ್ಲದೆ ಅವಾಂತರ ಸುಖದ ದೃಷ್ಟಿಯಿಂದ ನೋಡಿದರೂ ಈ ಸಲದ ನಿಮ್ಮ ಹೆರಿಗೆಯು ಅಷ್ಟೊಂದು ಸುಖಪ್ರದವೆನಿಸುವದಿಲ್ಲ.



• WESTERN CLUB
• EVERLAST
• WELDON
• LONDON NAVY
• WESTERN BABY.
THE WESTERN PLAYING CARD CO. INDIA
WESTERN PLAYING CARD CO.
BOMBAY No 4.

ಹುಷಾರ ವಿದ್ಯಾರ್ಥಿಯು ಕೂಡ ಈ ವರ್ಷ ಆತ್ಮವಿಶ್ವಾಸದ ಬಲವನ್ನೇ ಅವಲಂಬಿಸದೆ, ಪ್ರತಿಯೊಂದು ವಿಷಯವನ್ನು ಬಹಳ ದಕ್ಷತೆಯಿಂದ ಓದಿಕೊಳ್ಳಬೇಕು. ಅಂದರೆ ಮಾತ್ರ ಪಾಸಾಗುವಮಟ್ಟಿಗಾದರೂ ಸರಸ್ವತಿಯು ಪ್ರಸನ್ನಳಾಗುವಳು. ಯಾರು ಮೂಲತಃ ಜಡಬುದ್ಧಿಯವರಿರುವರೊ ಇಲ್ಲವೆ ಯಾರ ವಿಷಯಗಳು ಕಚ್ಚಾ ಇರುವವೊ ಅಂಥವರ ಹಣೆಬರಹವನ್ನು ಬೇರೆ ಬರೆಯಲಿಕ್ಕೆಬೇಡ. ಮಾರ್ಚ ೨೩ ರ ವರೆಗೆ ಯಾರ ಪರೀಕ್ಷೆಯಾಗುವದಿದೆಯೋ ಅವರು ಇಲಿ ಹೊಡೆಯುವಾಗ ಹುಲಿ ಹೊಡೆಯುವಷ್ಟು ಸಿದ್ಧತೆಯಿಂದ ಅಭ್ಯಾಸ ಮಾಡಿದರೇನೇ ಪರೀಕ್ಷೆಗೆ ಕಟ್ಟಬೇಕು ಇಲ್ಲದಿದ್ದರೆ ಪರೀಕ್ಷೆಗೆ ಕೂಡದಿರುವದೇ ಲೇಸು. ಆದರೆ ನೋಕರದಾರರಾರಾದರೂ ಹಾಯರ ಪರೀಕ್ಷೆಗೆ ಕಟ್ಟುತಿದ್ದರೆ ಅವರು ಮಾರ್ಚ ೨೩ ರ ನಂತರವೇ ಕೂಡಲು ಹೆಚ್ಚು ಅನುಕೂಲವಿದೆ.

ಒಟ್ಟಾರೆ ಈ ವರ್ಷದ ಅಥಾವೆ ತೆಗೆದು ನೋಡಿದರೆ, ಗುಡ್ಡ ತೋಡಿ ಇಲಿ ಹೊರತೆಗೆದೆ ಎನ್ನುವ ಪರಿಸ್ಥಿತಿಯೇ ಪ್ರತಿಯೊಂದು ವಿಷಯದಲ್ಲಿ ಕಂಡು ಬರುವದು.

ವೃಶ್ಚಿಕ

ಈ ರಾಶಿಯವರ ಆರೋಗ್ಯ ಒಟ್ಟಾರೆ ಚನ್ನಾಗಿ ಉಳಿಯುವ ಯೋಗವಿದ್ದರೂ ಮೇ ೧೧ ರಿಂದ ಜೂನ ೨೩ ರ ಮಧ್ಯಾಂತರ ಅವಧಿಯಲ್ಲಿ ಉಷ್ಣವಿಕಾರದಿಂದ ಇಲ್ಲವೆ ಸಣ್ಣ ದೊಡ್ಡ ಅಪಘಾತಗಳಿಂದ ಅದು ಕೆಲ ಮಟ್ಟಿಗೆ ಕೆಡುವ ಸಂಭವವಿದೆ. ಆದರೆ ಉಳಿದ ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲವಾಗಿಯೇ ಪರಿಣಮಿಸುವದು. ಏನೆಂದರೂ ನವಂಬರ ೧೫ ರ ವರೆಗೆ ಮತ್ತು ಅನಂತರ ಮಾರ್ಚ ೧೫ ರಿಂದ ಎಪ್ರಿಲ್, ಮೇ ೪ ರಿಂದ ೩೧ ರ ಮಧ್ಯಾಂತರ ಅವಧಿಯಲ್ಲಿ ನೀವು ಇಲ್ಲವೆ ಹೆಂಡತಿಯು ಬೇರೆ ಸ್ಥಳಕ್ಕೆ ಹೋಗುವದರಿಂದ ವಿರಹ ವ್ಯಥೆಯನ್ನು ಕೆಲ ಮಟ್ಟಿಗೆ ಅನುಭವಿಸಬೇಕಾಗಿ ಬಂದರೂ ಉಳಿದ ಅವಧಿಯಲ್ಲಿ ದಾಂಪತ್ಯ ಸುಖ ಬಹಳ ಚೆನ್ನಾಗಿ ದೊರೆತು ಪ್ರೇಮಬಂಧನವು ಮೊದಲಿಗಿಂತ ಹೆಚ್ಚು ಬಲಿಷ್ಠವಾಗುವದು. ಬಾಯಿಂದ ಆಡಿ ತೋರಿಸದೆ ಪರಸ್ಪರರ ಮನೋಗತ ಗೊತ್ತಾಗುವದು. ಡಿಸೆಂಬರ ೨೬ ರ ನಂತರ ಅವಳ ಇಲ್ಲವೆ ನಿಮ್ಮ ತಂದೆ ತಾಯಿಗಳು ಮಾತ್ರ ಮೇಲಿಂದ ಮೇಲೆ ಕಾಯಿಲೆ ಬೀಳುವರು. ಮಾರ್ಚ ೨೩ ರ ವರೆಗೆ ಕದಾಚಿತ್ ಮಾತ್ರ ವಿಯೋಗವೂ ಆಗಬಹುದು. ಇದೇ ಸಮಯದಿಂದ ಸಮೀಪದ ಆಪ್ತರು ಇಲ್ಲವೆ ನೆರೆಯುವರು

ಕೆಲವೊಂದು ಅಪ್ರಿಯ ಸಂಗತಿಯನ್ನು ಮಾಡುವದರಿಂದ ಇಲ್ಲವೆ ಆ ಬಗೆಯ ಹೆದರಿಕೆ ಹಾಕುವದರಿಂದ ಉಭಯತರಲ್ಲಿ ಬಹಳ ಮಟ್ಟಿಗೆ ಬಾಯಿಗೆ ಬಾಯಿ ಹತ್ತುವದು. ವಾಹನಗಳಿಂದ ತೊಂದರೆಯಾಗುವದು. ದನ ಕರುಗಳಿಗೆ ಕಾಯಿಲೆಯಾಗುವದು. ಆಳುಮಕ್ಕಳು ನೋಕರರು ಬೇಕೆಂತಲೆ ಕೆಲಸದ ಸಮಯದಲ್ಲಿ ತಪ್ಪಿಸಿ ಬಿಡುವದರಿಂದ ಅಲ್ಪಸ್ವಲ್ಪ ತೊಂದರೆಯೆನಿಸಿದರೂ ದೂರದಿಂದ ನೋಡುವವರಿಗೆ ಅದರ ಸುಳಿವು ಕೂಡ ಹತ್ತುವದಿಲ್ಲ. ಸ್ಥಾವರ ಉತ್ಪನ್ನ ಚೆನ್ನಾಗಿ ಲಭಿಸುವದು. ಅಲ್ಲದೆ ಮಾರ್ಚ ೨೩ ರ ನಂತರ ಯಾವದೊಂದು ಹೊಲವನ್ನು ಇಲ್ಲವೆ ಮನೆಯನ್ನು ಕೊಳ್ಳಬಹುದು. ಮಾರ್ಚ ೨೩ ರಿಂದ ಮಕ್ಕಳು ಮರಿಗಳ ಉನ್ನತಿ ಮನಸ್ಸಿನಂತೆ ಆಗಹತ್ತುವದು. ಇಷ್ಟೇ ಅಲ್ಲ, ಅವರಲ್ಲಿ ಒಬ್ಬನು ಬಯಸಿದ ಉಚ್ಚ ಮಟ್ಟವನ್ನೂ ಮುಟ್ಟುವನು. ಮಾರ್ಚ ೨೬ ರ ವರೆಗೆ ಮಾತ್ರ ಅವರಲ್ಲಿ ಒಬ್ಬನಿಗೆ ಬಹಳ ಕಾಯಿಲೆಯಾಗುವ ಅಂಜಿಕೆ ಇದೆ. ಈ ವರ್ಷ ಸುಖದ ದೃಷ್ಟಿಯಿಂದ ವಿಚಾರಮಾಡಿದಾಗ ಅಷ್ಟೊಂದು ಕಠಿನಸಮಸ್ಯೆಗಳು ನಿಮ್ಮನ್ನೆದುರಿಸದಿದ್ದರೂ ಮನಸ್ಸಿಗೆ ಮಾತ್ರ ಎಂದಿಗೂ ಆನಂದವೆನಿಸದೆ ಪರದ್ವೇಷ ಮತ್ಸರ ಅಸಹಿಷ್ಣುತೆ ಮೊದಲಾದ ವೃತ್ತಿಗಳಿಂದ ಮನಸ್ಸು ಗ್ರಸ್ತವಾಗಿ ಯಾವಾಗಲೂ ಕಷ್ಟದಲ್ಲಿಯೆ ಕಾಲಕಳೆಯಬೇಕಾಗುವದು. ತಮ್ಮನ್ನು ಪೇಚಿನಲ್ಲಿ ಹಾಕಿಕೊಂಡು ಎರಡನೆಯವರಿಗೆ ಅಪಶಕುನವನ್ನು ಉಂಟುಮಾಡಬೇಕೆಂಬ ದುರ್ವಾಸನೆ ಕೂಡ ಕೆಲ ಸಮಯ ಉಂಟಾಗುವದು. ನಾನು ದೊಡ್ಡವನು, ನಾನು ಜಾಣನು, ವಿದ್ವಾಂಸನು ಧರ್ಮಿಷ್ಠನು ಮೊದಲಾದ ಅಹಂಭಾವದಿಂದ ಮೆರೆಯುವರು. ಆದರೆ ಆ ಬಗೆಯ ದರ್ಪ ಕಡಮೆಯಾಗುವ ಕೆಲ ಪ್ರಸಂಗಗಳು ಫೆಬ್ರುವರಿ ೨೦ ರಿಂದ ಎಪ್ರಿಲ ೧ ಮತ್ತು ಅಗಷ್ಟ ೮ ರಿಂದ ಸಪ್ಟಂಬರ ೨೫ ರ ಮಧ್ಯಾಂತರ ಅವಧಿಯಲ್ಲಿ ಬರುವ ಸಂಭವವಿದೆ. ಸ್ವಂತ ನಿಮ್ಮ ಮಾತುಕತೆಗಳೂ ಮರ್ಮಭೇದಕ ಮತ್ತು ತೊಂದರೆಯವೆನಿಸುವವು.

ಈ ರಾಶಿಯ ಸ್ತ್ರೀ ಪುರುಷರು ವಿವಾಹವಾಗುವದಿದ್ದರೆ ಅವರಿಗೆ ಈ ವರ್ಷ ಬಾಸಿಂಗ ಬಲ ಬಹಳ ಮಟ್ಟಿಗೆ ಇರುವದಿಲ್ಲ. ಆದರೆ ಅದು ಒದಗಿ ಬಂದರೆ ಮಾರ್ಚ ೨೩ ರ ನಂತರ ಕೂಡಿ ಬರುವದು. ಒದಗಿ ಬರುವಾಗ ಮತ್ತು ಅನಂತರ ಪ್ರತ್ಯಕ್ಷವಾಗಿ ಸಮಾರಂಭ ನಡೆವವರೆಗೆ ಅನೇಕ ಅಡಚಣಿಗಳು ಬರುವವು. ಕೆಲವರಿಗೆ ಗೋತ್ರ ಪ್ರವರಾದಿಗಳನ್ನು ಕೂಡ ನೋಡದೆ ಗೊತ್ತುಪಡಿಸಿದ ಮುಹೂರ್ತದಲ್ಲಿ ಸಮಾರಂಭವನ್ನು ಮಾಡಿಬಿಡಬೇಕಾಗುವದು. ವಧೂವರರು ಅನುರೂಪವಿದ್ದರೂ ಜನರಲ್ಲಿ ಆ ಬಗ್ಗೆ ಬಹಳ ಭಿನ್ನಾಭಿಪ್ರಾಯ ಕಂಡುಬರುವದು. ಅದರಲ್ಲಿಯೂ ನವಂಬರ ೧೫ ರಿಂದ ಡಿಸೆಂಬರ ೯, ಫೆಬ್ರುವರಿ ೧೯ ರಿಂದ ಮಾರ್ಚ ೧೫, ಎಪ್ರಿಲ ೯ ರಿಂದ ಮೇ ೪ ಮತ್ತು ಮೇ ೩೧ ರಿಂದ ಜುಲೈ ೧ ಈ ಮಧ್ಯಾಂತರದಲ್ಲಿ ಆಗುವ ಸಮಾರಂಭಗಳಲ್ಲಿ ತೊಂದರೆ ಕಡಮೆ. ಈ ರಾಶಿಯವರ ಮಕ್ಕಳ ಮದುವೆಯಾಗುವದಿದ್ದರೆ ಅದಕ್ಕೆ ಕೂಡ ಮಾರ್ಚ ೨೩ ರ ನಂತರವೇ ಅನುಕೂಲ ಯೋಗವಿದೆ.

ವ್ಯವಹಾರಸ್ಥರಿಗೆ ಕೂಲಿಗಾರರಿಗೆ ಇದೇ ತಾನೇ ಬಂದ **೧೧ ನೇ ಶನಿ** ಬಹಳ ಅನುಕೂಲನಾಗಿ ಪರಿಣಮಿಸುವನು. ಮಾರ್ಚ ೨೩ ರ ನಂತರ ಮಣ್ಣು ಹಿಡಿದರೂ ಹೊನ್ನಾಗಿ ಪರಿಣಮಿಸುವದು. ಧಂದೆ ಮಾಡುವವರಿಗಂತೂ ದುಡ್ಡು ಎಣಿಸುವಾಗ ದೇವರು ಎರಡೇ ಕೈಗಳನ್ನೇಕೆ ಕೊಟ್ಟನು, ನಾಲ್ಕು ಕೈ ಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು ಎಂದೆನಿಸುವದು. ಖರೆ ಖೊಟ್ಟಿ, ಸಚ್ಚಾ-ಲುಚ್ಚಾ, ನೀತಿವಂತ ನೀತಿಭ್ರಷ್ಟ, ವ್ಯಸನಿ ನಿರ್ವ್ಯಸನಿ, ಸರಳ ಮಾರ್ಗದವರು ಅಡ್ಡಮಾರ್ಗದವರು ಒಟ್ಟಾರೆ ಎಂಥ ವೃತ್ತಿಯವರು ನೀವಾಗಿದ್ದರೂ ಈ ವರ್ಷ ಅಮೃತದಂತೆ ವಿಷವನ್ನು ಕೂಡ ಪಚನ ಮಾಡಿಕೊಂಡು ಬೇಕಾದಷ್ಟು ಹಣವನ್ನು ಗಳಿಸುವದರಲ್ಲಿ ಸಂಶಯವಿಲ್ಲ. ನೀವು ನೋಕರಿ ಮಾಡುತಿದ್ದರೆ ನಿಮ್ಮ ದೈವ ಹೆಚ್ಚಾಗಿ ತೆರೆಯುವದು. ಮೇಲಧಿಕಾರಿಗಳು ನಿಮ್ಮ ತಪ್ಪುಗಳನ್ನು ಕೂಡ ಲಕ್ಷಿಸದಿರುವದರಿಂದ ನಿಮ್ಮ ಅಧಿಕಾರಕ್ಕೆ ಲಗಾಮಿಲ್ಲದ ದನಗಳಂತೆ ಎಲ್ಲಿಯೂ ಅಡೆತಡೆಗಳು ಉಳಿಯುವದಿಲ್ಲ. ಡಿಸೆಂಬರ ೨೬ ರ ನಂತರ ಬಾಯಿಗೆ ನೀರು ಬರುವಂತಹ ಅನೇಕ ಸಂದರ್ಭಗಳು ಒದಗಿ ಬರುವದರಿಂದ ಮತ್ತು ಎರಡನೆಯವರು ಮಾಡಿದ ಸ್ತೋತ್ರದ ಗುಂಗಿನಲ್ಲಿ ಲಂಚ ತೆಗೆದುಕೊಳ್ಳುವ ಇಲ್ಲವೆ ಬೇರೆ ಯಾವದೊಂದು ಅಪಕೃತ್ಯ ಮಾಡಲು ಒಪ್ಪಿಗೆಯನ್ನು ಕೊಡುವ ದುರ್ಬುದ್ಧಿ ಉಂಟಾಗುವದು. ಇಂದು ಇದೆಲ್ಲದನ್ನೂ ನೀವು ಪಚನಮಾಡಿಕೊಳ್ಳಬಹುದು. ಆದರೆ ಇನ್ನೆರಡು ವರ್ಷಗಳ ನಂತರ ಇಂದಿನ **೧೧ ನೆಯ ಶನಿ** ಯಾವಾಗ **೧೨ ನೆಯ ಸ್ಥಾನಕ್ಕೆ ಬಂದು** ಸಾಡೇಸಾತಿಯು ಪ್ರಾರಂಭವಾಗುವದೋ ಆಗ ಮಾತ್ರ ಹಿಂದಿನದನ್ನೆಲ್ಲ ಕಾರಿಕೊಂಡು ಬಿಡುವ ಸರತಿ ಬರುವದೆಂಬುದು ನಿಶ್ಚಿತ. ಅಂತೆಯೇ ಈಗಿನಿಂದಲೆ ಕೈಯಲ್ಲಿದ್ದ ಅಧಿಕಾರವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಿರಿ. ಹೆಚ್ಚಿನ ಆಸೆಯನ್ನು ಮಾಡಬೇಡಿರೆಂದು ಸೂಚಿಸಬಯಸುತ್ತೇನೆ. ನೀವು ನೋಕರದಾರರಾಗಿದ್ದು ಬದಲಿಯಾಗುವದಿದ್ದರೆ ಸ್ವಲ್ಪ ಅನುಕೂಲ ಸ್ಥಳಕ್ಕೆ ಆದರೂ ಆಹಾರವಿಹಾರಕ್ಕೆ ಬೇಕಾದಷ್ಟು ಅವಕಾಶವಿದ್ದ ಸ್ಥಳಕ್ಕೆ ಆಗುವದು. ಡಾಕ್ಟರರು ಆರೋಗ್ಯ ಶಾಖೆಯ ನೋಕರರು, ಔಷಧ ಮಾರಾಟಗಾರರು, ಹುಡುಗಿಯರ ಶಾಲೆಯ ಶಿಕ್ಷಕರು ಶಿಕ್ಷಕಿಯರು, ಸಾರ್ಟರರು, ವಿದ್ಯುತ್ ಶಾಖೆ



ನಿತ್ಯದ ಸ್ನಾನಕ್ಕೆ
'ಕಲ ಕೆಮಿಕೊ'ರವರ
ಜು-ಹಿನಾ ಬ್ಯೂಟಿ ಮಿಲ್ಕ
ಮರೆಯದೆ ಬೇಡಿರಿ
ಅದು ಮುಖ, ಕುತ್ತಿಗೆ, ಮತ್ತು ಕೈಗಳನ್ನು ಮಿದುವಾಗಿಟ್ಟು ನಿಷ್ಕಲಂಕ ಮುಖಚರ್ಯೆಯನ್ನು ಕೊಡುತ್ತದೆ.

ರೇಣುಕಾ ಪಾವಡರ
ಶ್ರೇಷ್ಠ ವರ್ಗದ ಮುಖಕ್ಕೆ ಹಚ್ಚುವ ಪಾವಡರ್. ಚರ್ಮವನ್ನು ನುಣುಪಾಗಿಟ್ಟು ಸೌಂದರ್ಯವನ್ನು ವರ್ಧಿಸುವದು.

ಲೆಬೊನಿ ಸ್ನೋ ಮತ್ತು ಕ್ರೀಮ
ಚರ್ಮವನ್ನು ಸ್ವಚ್ಛ ಮತ್ತು ಮಿದುಗೊಳಿಸಿ ಮುಖಚರ್ಯೆಗೆ ಅಧಿಕ ಕಾಂತಿ ಕೊಡುವದು. ಹಗಲು ಸ್ನೊ ಮತ್ತು ರಾತ್ರಿ ಕ್ರೀಮ ಉಪಯೋಗಿಸಬೇಕು.

CALCUTTA CHEMICAL
CALCUTTA 29

Bombay Office :- Devkaran Mansion, Princess Street.

ಯಲ್ಲಿ ಕೆಲಸ ಮಾಡುವವರು, ಬಣ್ಣ ಹಾಕು ವವರು, ಶಿಂಪಿಗರು, ತೋಟಪಟ್ಟಿ ಮಾಡು ವವರು, ಸ್ತ್ರೀ ಒಡೆಯಳಾಗಿದ್ದ ನೋಕರರು, ಕಂದಾಯ ಶಾಖೆಯಲ್ಲಿಯ ನೋಕರರು, ಗಾಯಕರು ವಾದಕರು ಭವಿಷ್ಯ ಕಥಕರು ಸ್ಫುಟಕಥಾನಕಗಳನ್ನು ಇಲ್ಲವೆ/ ಸಣ್ಣ ಪುಸ್ತಕ ಗಳನ್ನು ಬರೆಯುವ ಲೇಖಕರು ಮತ್ತು ನಾವಿ ಕರು ಮೊದಲಾದವರಿಗೆ ಬೇಕಾದಷ್ಟು ಲಾಭ ಮತ್ತು ಇಷ್ಟಕಾರ್ಯದಲ್ಲಿ ಯಶಸ್ಸು ಸಂಪೂರ್ಣ ಸಿಕ್ಕುವದೆಂಬುದು ನಿಶ್ಚಿತ. ನಿಮ್ಮ ಉತ್ಕರ್ಷ ವನ್ನು ನೋಡಿ ಅನೇಕರ ಹೊಟ್ಟೆಯಲ್ಲಿ ಕಾರ ಕಲಿಸಿದಂತಾಗುತ್ತದೆ. ಮಿತ್ರರಿಗಿಂತ ಶತ್ರು ಗಳ ಹೆಜ್ಜಳವು ಹೆಚ್ಚಾಗುತ್ತದೆ. ಅವರು ತಮ್ಮ ದಾರಿಯ ಮೇಲಿರುವ ಮುಳ್ಳನ್ನು ತೆಗೆದೊಗೆಯಲು ಸಂಧಿ ಕಾಯುತ್ತ ಕೂಡ್ರುವರು. ಆದರೂ ವಾದವಿವಾದಗಳಲ್ಲಿ ಇಲ್ಲವೆ ಸ್ಪರ್ಧೆ ಯಲ್ಲಿ ನೂರಕ್ಕೆ ೯೦ ರಷ್ಟು ನಿಮಗೆ ಅನುಕೂಲ ವಾಗಿ ಪರಿಣಮಿಸುವವು. ಶತ್ರುಗಳನ್ನು ಸೋಲಿ ಸಲು ಡಿಸೆಂಬರ ೬ ರಿಂದ ಜನೆವರಿ ೧೩, ಎಪ್ರಿಲ ೧೦ ರಿಂದ ಮೇ ೧೧ ಮತ್ತು ಆಗಷ್ಟ ೮ ರಿಂದ ಸಪ್ಟಂಬರ ೨೫ ಈ ಮಧ್ಯಾಂತರ ಅವಧಿಯಲ್ಲಿಯ ಕಾಲ ಬಹಳ ಅನುಕೂಲವಿದೆ. ಆದರೆ ಅವರು ಪೂರ್ಣವಾಗಿ ಪರಾಜಿತರಾಗದೆ ತಕ್ಷಕನಂತೆ ಅನುಕೂಲ ಸಮಯವನ್ನು ಕಾಯುತ್ತ ಕೂಡ್ರು ವರು.

ಈ ರಾಶಿಯ ಸ್ತ್ರೀಯರು ಗರ್ಭಿಣಿಯರಾಗಿದ್ದರೆ ಅವರ ಹೆರಿಗೆ ಸ್ವಲ್ಪ ಕಷ್ಟದಿಂದಲೆ ಆಗುವದಾದರೂ ಮಾರ್ಚ ೨೩ರ ನಂತರ ಹಡೆದರೆ ಅದು ಅಷ್ಟೊಂದು ಕಷ್ಟದ್ದೆನಿಸುವದಿಲ್ಲ. ಗಂಡು ಮಗುವಿಗಿಂತ ಹೆಣ್ಣು ಹೆಚ್ಚಾಗಿ ಹುಟ್ಟುವವು. ಹುಟ್ಟುವ ಮಕ್ಕಳು ದೇವರ ದಯೆಯಿಂದ ದೀರ್ಘಾಯುಗಳಾದರೆ ಅವರು ಬಹಳ ಚಾಣಾಕ್ಷ ಮತ್ತು ಹೆಚ್ಚು ಸುದೈವಿಯಾಗುವರೆಂಬುದು ನಿಶ್ಚಿತ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ ೨೬ ರ ನಂತರ ಅಗುವದಿದೆಯೋ ಅವರು ಪಾಸಾಗುವರೆಂಬುದು ನಿಶ್ಚಿತ. ಮಾರ್ಚ ೨೩ ರ ನಂತರ ಪರೀಕ್ಷೆಯಾದರೆ ನೂರಕ್ಕೆ ೮೦ ರಷ್ಟು ಪ್ರಮಾಣದಲ್ಲಿ ಪಾಸಾಗುವರು. ಮೆಟ್ರಿಕ್ ಪರೀಕ್ಷೆಯಲ್ಲಿಯಂತೂ ಅಭ್ಯಾಸ ಚೆನ್ನಾಗಿ ಮಾಡದಿದ್ದವರೂ ಪಾಸಾಗುವರು. ಅದರಂತೆ ಬಿ. ಎ., ಎಂ. ಎ., ಬಿ ಟಿ, ಟ್ರೇನಿಂಗ್ ಕಾಲೇಜು, ಕಾಮರ್ಸ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ಅಲ್ಪಾಯಾಸದಿಂದ ಯಶಸ್ಸು ಸಿಕ್ಕುವದೆಂಬುದಾಗಿ ತಿಳಿಯಬೇಕು.

ಒಟ್ಟಾರೆ ದುಃಖ ಮತ್ತು ಕಷ್ಟಕ್ಕಿಂತ ಸುಖ ಮತ್ತು ಯಶಸ್ಸಿನ ಪ್ರಮಾಣವನ್ನು ಬಹಳಮಾಡಿ ಹೆಚ್ಚಿಸುವಂತಹ ವರ್ಷ ಇದಾಗಿರುವದರಿಂದ ನಿಮ್ಮ ಅಪೇಕ್ಷಿತ ಇಚ್ಛೆಯನ್ನು ಪೂರ್ಣಮಾಡಿಕೊಳ್ಳುವದಕ್ಕಾಗಿ ತೀರ ಜಾಗ್ರತರಾಗಿರಬೇಕೆಂದು ಮಾತ್ರ ಹೇಳಬಯಸುತ್ತೇವೆ.

ಧನು

ಈ ರಾಶಿಯ ಜನರ ಆರೋಗ್ಯ ಈ ವರ್ಷ ಬಹಳ ಚೆನ್ನಾಗಿ ಉಳಿದು ಮೊದಲಿಗಿಂತ ಬಹಳ ಮಟ್ಟಿಗೆ ತೂಕ ಹೆಚ್ಚಾಗುವದು. ಆದರೆ ಮೂಗು ಒಡೆಯುವದು, ಕಿವಿ ಸೋರುವದು, ನಾಲಗೆ ಒರಟಾಗುವದು, ಒಣ ಹುರುಕು ಮೊದಲಾದ ಕಿರುಕಳ ಉಪದ್ರವ ಡಿಸೆಂಬರ ೨೬ ರ ವರೆಗೆ ಸಂಭವಿಸುವ ಯೋಗ. ಇಷ್ಟೇ ಅಲ್ಲ ತಂದೆತಾಯಿಗಳಿಗೂ ಈ ಅವಧಿಯಲ್ಲಿ ಅಸ್ವಸ್ಥತೆಯಾಗುವದು. ಅದರಂತೆಯೇ ಜುಲೈ ೨೩ ರ ನಂತರ ಹೆಂಡತಿಯ ಆರೋಗ್ಯ ಚೆನ್ನಾಗಿ ಉಳಿಯುವದಿಲ್ಲ. ಹೊಟ್ಟೆನೋವು, ತಲೆನೋವು ಇಲ್ಲವೆ ಜನನೇಂದ್ರಿಯ ಸಂಬಂಧದ ರೋಗದಿಂದ ಅಲ್ಪಸ್ವಲ್ಪ ತೊಂದರೆಯಾಗುವದು. ಫೆಬ್ರುವರಿ ೨೦ ರಿಂದ ಎಪ್ರಿಲ ೧ ರ ಮಧ್ಯಾಂತರ ಅವಧಿಯಲ್ಲಿ ಸಮೀಪದ ಆಪ್ತರಲ್ಲಿಯ ಪೂಜ್ಯ ಮತ್ತು ಪ್ರೀತಿಯ ವ್ಯಕ್ತಿಯ ವಿಯೋಗವಾಗುವ ಅಂಜಿಕೆ. ಸ್ತ್ರೀಸಹವಾಸ ಸುಖಕ್ಕೆ ಈ ವರ್ಷ ಉತ್ತಮವೇ ಇದ್ದರೂ ಅಮಾನದಿಂದ ಇಬ್ಬರಲ್ಲಿ ಮತ್ತೈಕ್ಯ ಉಳಿಯದೆ ಪರಸ್ಪರ ಮನಸ್ಸು ನೋಯಿಸುವಂಥ ಮಾತಾಡುವಿಕೆ. ಅವಾಂತರ ವಿಷಯಗಳಲ್ಲಿ ದೇಹ ಸುಖಕ್ಕೆ ಅವಶ್ಯಕವಾದ ಎಲ್ಲ ವಿಷಯಗಳು ಪೂರ್ಣ ಸಮೃದ್ಧಿಯಾಗಿ ಪ್ರಾಪಂಚಿಕ ಸುಖ ಬಹುತರ ಎಲ್ಲ ವಿಷಯಗಳಲ್ಲಿ ಮನಮೆಚ್ಚುವಂತೆ

Grams : Bestluck Belgaum | Motto : Best Service | Grams : City Motor Hubli

Goodluck Automobiles
Fort Road
BELGAUM
&
City Motor Stores
Koppikar Road
HUBLI

While Wishing All
Patrons & Friends

Happy Deepavali

Assure them also the continuance
of their
BEST SERVICE
during this
CURRENT PROSPEROUS YEAR

Tuberculosis Still Kills Millions

But it need not worry You

Know its symptoms :

1. Tirednes 2. Polpitation 3. Fever 4. Indigestion 5. Night sweats, 6. Loss of appetite and weight 7. Cough without apparent reason.

Use :

LI-CALCIN WITH GOLD
(A Pearl Product)


Sole Agents :
THE PIONEER GADAG PHARMACY
Prop :- Merwade Bros; Gadag.

ದೊರೆಯುವದೆಂದು ತಿಳಿದುಕೊಳ್ಳಲಡ್ಡಿಯಿಲ್ಲ. ಮಾರ್ಚ ೨೩ ರಿಂದ ಬಂಧುಗಳು ಮತ್ತು ನೆರೆಯವರೊಡನೆ ತಿಕ್ಕಾಟದ ಮತ್ತು ತಕರಾರಿನ ಪ್ರಸಂಗ ಬರುವ ಯೋಗವಿದ್ದರೂ ಮನೆಯಲ್ಲಿಯ ಇತರ ಜನರೊಡನೆ ನಿಮ್ಮದು ಬಹಳ ಮಟ್ಟಿಗೆ ಕೂಡಿನಡೆಯುವದು. ಬಹು ಅಮೂಲ್ಯದ ವಸ್ತುಗಳು ಅಲ್ಪ ಬೆಲೆಯಲ್ಲಿ ಸಿಕ್ಕುವ ಯೋಗ ಮೇಲಿಂದ ಮೇಲೆ ಒದಗಿ ಬರುವದು. ಇದೇ ಈ ವರ್ಷದ ವೈಶಿಷ್ಟ್ಯ. ಒಂದೆರಡು ವಸ್ತುಗಳಂತೂ ಎರಡನೆಯವರ ಕಣ್ಣಲ್ಲಿ ನಡುವಂತಹವು ಮತ್ತು ಅವರಿಗೆ ವಿಷಾದವೆನಿಸುವಷ್ಟು ಬಹುಮೂಲ್ಯದವಿರುವವು. ಮಕ್ಕಳುಮರಿಗಳ ಯಥೋಚಿತ ಉನ್ನತಿಯಾಗಿ ಅವರ ಕೀರ್ತಿ ಎಲ್ಲೆಡೆ ಹಬ್ಬುವದು. ಡಿಸೆಂಬರ ೨೬ ರ ನಂತರ ಸ್ಥಾವರ ಸಂಬಂಧದಲ್ಲಿ ಏನಾದರೂ ತೊಂದರೆಯಿದ್ದರೆ ವಿಶೇಷ ಪ್ರಯತ್ನಗಳಿಲ್ಲದೆ ತಂತಾನೆ ನಿವಾರಣೆ ಹೊಂದಿ ಮತ್ತೆ ಅಸ್ತಿವೃದ್ಧಿ ಹೊಂದುವ ಯೋಗ. ಈ ಬಗೆಯ ಯೋಗ ಜನೆವರಿ ೧೩ ರಿಂದ ಫೆಬ್ರುವರಿ ೨೦, ಎಪ್ರಿಲ ೧ ರಿಂದ ಮೇ ೧೧ ಮತ್ತು ಸಪ್ಟಂಬರ ೨೫ ರಿಂದ ಬಹಳ ಮಟ್ಟಿಗೆ ಇದೆ.

ಈ ರಾಶಿಯ ಸ್ತ್ರೀಪುರುಷರ ವಿವಾಹವಾಗುವದಿದ್ದರೆ ಮಾರ್ಚ ೨೩ ರ ವರೆಗೆ ತೀರ ಅಲ್ಪಾಯಾಸದಿಂದ ಮತ್ತು ಸಹಜವಾಗಿ ಕೂಡಿಬರುವದು. ಅನಂತರ ಮಾತ್ರ ಸ್ವಲ್ಪ ಕಷ್ಟದಿಂದ ಕೂಡಿಬರುವದು. ಒಂದು ಪಕ್ಷದವರಿಗೆ ಮತ್ತೊಂದು ಪಕ್ಷದವರ ಮಾತಿನ ಬಗ್ಗೆ ಮೇಲಿಂದ ಮೇಲೆ ಸಂಶಯ ಉತ್ಪನ್ನವಾಗ ಹತ್ತುವದು. ವಧುವಿಗಿಂತ ವರನು ಹೆಚ್ಚು ಗುಣಸಂಪನ್ನನಿದ್ದುದು ಅನೇಕ ಸಂದರ್ಭಗಳಲ್ಲಿ ಕಂಡು ಬರುವದು. ನಿಮ್ಮ ಮಕ್ಕಳುಮರಿಗಳ ವಿವಾಹವಾಗುವದಿದ್ದರೆ ಅದಕ್ಕೆ ಡಿಸೆಂಬರ ೨೬ ರ ನಂತರ ಹೆಚ್ಚು ಅನುಕೂಲಯೋಗವಿದೆ. ಆಪ್ತರ ಸ್ಥಿತಿ ನಿಮಗಿಂತ ಹೆಚ್ಚು ಸಧನವಿರುವ ಸಂಭವವಿದೆ. ಆದರೆ ಪ್ರತ್ಯಕ್ಷ ಸಮಾರಂಭಗಳಲ್ಲಿ ಉಭಯ ಪಕ್ಷದವರೂ ಪರಸ್ಪರರ ಲೋಪದೋಷಗಳನ್ನು ತೆಗೆಯುವತ್ತ ಗಮನಿಸುವರು. ಅದರಿಂದ ನಾರದ ಪ್ರವೇಶವಾಗಿ ರಂಭಾಟ ವೇಳುವದು. ಆದರೆ ಸೊಸೆ ಇಲ್ಲವೆ ಅಳಿಯ ಮನಸ್ಸಿಗೆ ಬರುವಂಥವರು ಸಿಕ್ಕುವದರಿಂದ ಸಂತೋಷದಲ್ಲಿಯೇ ನಲಿದಾಡುವಿರಿ.

ಧಂದೆಯವರಿಗೆ ಮತ್ತು ಕೂಲಿಕಾರರಿಗೆ ಈ ವರ್ಷ ಬಹಳ ಉತ್ತಮವಿದೆ. ಕಳೆದ ಐದಾರು ವರ್ಷಗಳಿಗಿಂತ ಈ ವರ್ಷ ನಿಮ್ಮ ದೈವ ಬಹಳ ತೆರೆಯುವದು. ಧಂದೆಮಾಡುವವರು ಮತ್ತು ನೋಕರಿ ಮಾಡುವವರು ಯಾವಾಗಲೂ ಸಂತೋಷದಲ್ಲಿಯೇ ಇರುವರು. ಕೆಲ ಧಂದೆಯವರಂತೂ ಕುಬೇರರಾಗುವ ಸಂಭವವೂ ಇದೆ. ನಿಮ್ಮ ತಪ್ಪುಗಳು, ವಿಸಂಗತ ಧೋರಣೆ ಇಲ್ಲವೆ ಅಪಕೃತಿಯಿಂದ ನಿಮಗೆ ಯಾವದೇ ಬಗೆಯ ಹಾನಿಯಾಗದೆ ತದ್ವಿರುದ್ಧ ಯಶಸ್ಸು ಮತ್ತು ಲಾಭವೇ ಆಗುವದು. ಯಾವದೇ ಮಾರ್ಗದಿಂದಲಾದರೂ ದುಡ್ಡು ಸಿಕ್ಕರೆ ಸಾಕು ಎಂಬ ಮನೋವೃತ್ತಿಯಾಗುವದು. ಅಶಕ್ಯ ಮತ್ತು ದುರ್ಘಟವಾದ ಮಾತನ್ನೂ ಸಾಧ್ಯ ಮಾಡಿಕೊಳ್ಳುವ ಹವ್ಯಾಸ ಹೆಚ್ಚುವದು. ದೈವವೂ ಅನುಕೂಲವಾಗಿ ಪರಿಣಮಿಸುವದು. ಸರಾಫರು, ಪತ್ತಾರರು, ಪಟೇಗಾರರು, ನೇಕಾರರು, ನೂಲು ನೇಯುವ ಗಿರಣಿಗಾರರು ಮತ್ತು ಅದರಲ್ಲಿಯ ನೋಕರದಾರರು, ಸ್ಟೇಶನರಿ ವ್ಯಾಪಾರಿಗಳು, ಕಬ್ಬಿಣದ ಹೊರತು ಉಳಿದ ಧಾತುಗಳ ವ್ಯಾಪಾರಿಗಳು, ಗಿರಣಿಗಳವರು ಮತ್ತು ಕಾರಖಾನೆದಾರರು, ನಾಣ್ಯಗಳನ್ನು ನಿರ್ಮಿಸುವ ವ್ಯಾಪಾರಿಗಳು, ಬ್ಯಾಂಕರರು, ಹರಿದಾಸರು ಪುರಾಣಿಕರು, ಪ್ರವಚನಕಾರರು, ವ್ಯಾಖ್ಯಾನಕಾರರು, ಶಾಸ್ತ್ರೀಯ ವಿಷಯಗಳ ಲೇಖಕರು, ಸಕ್ಕರೆಬೆಲ್ಲದವ್ಯಾಪಾರಿಗಳುಮಸಾಲೆ ಸಾಮಾನ ಮಾರುವವರು ಎಣ್ಣೆಯನ್ನು ಬಿಟ್ಟು ತುಪ್ಪ ಬೆಣ್ಣೆ ಜೇನುತುಪ್ಪ ಮೊದಲಾದ ಸ್ನಿಗ್ಧ ಮತ್ತು ದ್ರವ ಪದಾರ್ಥಗಳ ವ್ಯಾಪಾರಸ್ಥರು ಒಕ್ಕಲಿಗರು ಮೊದಲಾದ ಧಂದೆ ಮಾಡುವವರಿಗೆ ಈ ವರ್ಷ ಲಾಭದಾಯಕವಾಗಿ ಪರಿಣಮಿಸುವದು. ವಿಶೇಷವಾಗಿ ನವಂಬರ ೧೫ ರ ವರೆಗಿನ ಮತ್ತು ಅನಂತರ ಡಿಸೆಂಬರ ೯ ರಿಂದ ಜನೆವರಿ ೨, ಜನೆವರಿ ೨೬ ರಿಂದ ಫೆಬ್ರುವರಿ ೧೯, ಮಾರ್ಚ ೧೫ ರಿಂದ ಎಪ್ರಿಲ ೯, ಮತ್ತು ಜುಲೈ ೧ ರಿಂದ ಮುಂದಿನ ಕಾಲ ಬಹಳ ಲಾಭಮಾಡಿ ಕೊಡುವದು. ರೇಲ್ವೆ ಮೋಟಾರ ವಿಮಾನ ಪೋಷ್ಟ ಟೆಲಿಗ್ರಾಫ ರೆವಿನ್ಯೂ ಪೋಲೀಸ ಮಿಲಿಟರಿ ಹಡಗುಪಡೆ ಈ ಶಾಖೆಗಳಲ್ಲಿಯ ನೋಕರರಿಗೆ ಈ ವರ್ಷ ಬಹಳ ಸುಖದಿಂದ ಹೋಗುವದು. ಬಯಸಿದಷ್ಟು ಸಂಬಳ ಬಡತಿಯಾಗುವದು. ಅವರವರ ಯೋಗ್ಯತೆಯಂತೆ ಅಧಿಕಾರವೂ ಹೆಚ್ಚುವದು. ಆದರೆ ಬದಲಿಯಾದರೆ ಮೊದಲಿಗಿಂತ ಬಹಳ ಅನನುಕೂಲ ಸ್ಥಳಕ್ಕೆ ಆಗುವದು. ಅದರಂತೆಯೇ ವರಿಷ್ಠರಿಗಿಂತ ಕೈಕೆಳಗಿನವರ ತೊಂದರೆಯೇ ಹೆಚ್ಚಾಗುತ್ತ ನಡೆಯುವದು. ಈ ರಾಶಿಯವರಿಗೆ ಡಿಸೆಂಬರ ೬ ರಿಂದ ಜನೆವರಿ ೧೩, ಮೇ ೧೧ ರಿಂದ ಜೂನ ೨೩ ಮತ್ತು ಆಗಷ್ಟ ೮ ರಿಂದ ಸಪ್ಟಂಬರ ೧೫, ಈ ಅವಧಿಯು ಹೆಚ್ಚು ಅನುಕೂಲವಿರುವದು. ವೆಚ್ಚ ಅಂದಾಜಗಿಂತ ಹೆಚ್ಚಿಗೆ ಆದರೂ ಅದರ ಉದ್ದೇಶವು ಮಾತ್ರ ಸಾಧಿಸುವದು. ದೊಡ್ಡ ದೊಡ್ಡ ವೆಚ್ಚದ ವಿಷಯಗಳಲ್ಲಿ ಉದಾರರಾಗಿದ್ದರೂ ಕಿರುಕಳ ಕೆಲಸಗಳಲ್ಲಿ ಕೈ ಬಿಗಿಹಿಡಿಯುವ ಲಹರಿಯು ಹೆಚ್ಚುವದು.

ಮಿತ್ರಸುಖ ಅನುಕೂಲ. ಶತ್ರುಗಳಲ್ಲಿಯ ಕೆಲವರು ಹಿಂದಿನ ಮಿತ್ರತ್ವವನ್ನು ಬಿಟ್ಟುಗೊಟ್ಟು ಶತ್ರುಗಳು ಮಿತ್ರರಾಗುವ ಸಂಭವವಿದೆ. ಅದರಂತೆಯೇ ವಾದವಿವಾದಗಳಲ್ಲಿ ಸ್ಪರ್ಧೆಯಲ್ಲಿ ಈ ವರ್ಷ ಪ್ರತಿಪಕ್ಷಿಗಳ ಜೋರು ಮಾರ್ಚ ೨೩ ರಿಂದ ಹೆಚ್ಚುವದಾದರೂ ಯಶಸ್ಸು ನಿಮಗೇ ಸಿಕ್ಕುವ ಯೋಗ. ನಿಮ್ಮ ಆ ಕಾರ್ಯದಲ್ಲಿ ಸಹಾಯ ಮಾಡಿದವರ ಆಸೆ ಬಹಳ ಮಟ್ಟಿಗೆ ಹೆಚ್ಚಿ ಅವರು ಒಂದೇಸವನೆ ಏನಾದರೂ ಬೇಡಲಿಕ್ಕೆ ಹತ್ತುವರು. ಆದರೆ ಸಹಾಯದಲ್ಲಿ ಮಾತ್ರ ಯಾವ ಬಗೆಯಿಂದಲೂ ಕಡಮೆ ಮಾಡಲಾರರು. ಪ್ರತಿಪಕ್ಷಿಗಳ ಮೇಲೆ ವಿಜಯ ಸಂಪಾದಿಸಲು ನವಂಬರ ೩೦ ರಿಂದ ಫೆಬ್ರುವರಿ ೪, ಫೆಬ್ರುವರಿ ೨೪ ರಿಂದ ಮಾರ್ಚ ೧೨, ಮಾರ್ಚ ೨೮ ರಿಂದ ಜೂನ ೨, ಜೂನ ೧೯ ರಿಂದ ಜುಲೈ ೫, ಜುಲೈ ೨೩ ರಿಂದ ಸಪ್ಟಂಬರ ೨೮ ಈ ಅವಧಿಯು ಅನುಕೂಲ.



BHAMA STUDIO

ಇಷ್ಟೆಲ್ಲ ಅನುಕೂಲತೆ ಇದ್ದರೂ ನಿಮ್ಮ ಮರ್ಯಾದೆ ಹೋಗುವದೋ ಏನೋ? ಸಮಾಜದಲ್ಲಿ ಅಪ್ರತಿಷ್ಠೆ ಆಗುವದೋ ಏನೊ? ಒಂದಾದರೂ ಸಂಕಟ ಬರಲಾರದೊ? ಗುಪ್ತಚಾರರು ಈ ನಿಮ್ಮ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿರಬಹುದೆಂದು ಭ್ರಮಮಾತ್ರ ಬಹಳ ಜನರಿಗೆ ಆಗಬಹುದು. ಪತ್ರವ್ಯವಹಾರಗಳಲ್ಲಿ ಅನೇಕ ಸಲ ಗೊಂದಲ ಉಂಟಾಗುವದು. ಛಿಟ್ಟಿಯ ಕೆಲಸಗಳಲ್ಲಿ ಮುಖ್ಯ ವಿಷಯವು ಹಿಂದೆಯೇ ಬಿದ್ದು ಹಾಳು ಹರಟೆಯೇ ಮೊದಲು ನಡೆಯುವದು. ಇಂಥ ಹಲವಾರು ದೋಷಗಳು ಈ ವರ್ಷ ಇರುವವು.

ಈ ರಾಶಿಯ ಸ್ತ್ರೀಯರು ಹಡೆಯುವದಿದ್ದರೆ ಅವರಲ್ಲಿ ಅನೇಕರಿಗೆ ಪುತ್ರರತ್ನ ಹುಟ್ಟುವವು. ಮಾರ್ಚ ೨೩ ರ ವರೆಗೆ ಹಡೆಯುವವರು ಸುಲಭವಾಗಿ ಹೆರುವರು. ಅನಂತರ ಸ್ವಲ್ಪ ಕಷ್ಟದಿಂದ. ಕೂಸು ಸಶಕ್ತ ಸುಂದರ ಆದರೆ ಬಹಳ ಉಲಕೋಚಿ ಆಗುವದು. ಬಾಣಂತಿತನ ಎಲ್ಲರಿಗೂ ಸುಖಮಯವಾಗಿ ಪರಿಣಮಿಸುವದು.

ಈ ರಾಶಿಯ ವಿದ್ಯಾರ್ಥಿಗಳಿಗೆ ಸಹಸಾ ಅಪಯಶಸ್ಸು ಬಾರದೆ ಅನೇಕರಿಗೆ ಯಶಸ್ಸಿನ ಮುದ್ರೆ ಬೀಳುವದು. ಮಾರ್ಚ ೨೩ ರ ವರೆಗೆ ಅದು ಖಾತ್ರಿಯಿಂದ ಸಿಕ್ಕುವದು. ಆದರೆ ಆ ಅವಧಿಯ ನಂತರ ಯಾರ ಪರೀಕ್ಷೆ ಆಗುವದಿದೆಯೋ ಅವರು ಮರಗೂಳಿಗಳಾಗದೆ ದೈವದ ಜೊತೆ ಪ್ರಯತ್ನವನ್ನು ಮಾಡಬೇಕು ಅಂದರೆ ಹೆಚ್ಚು ಅಭ್ಯಾಸ ಮಾಡಬೇಕು.

ಕೆಲವರಿಗೆ ಕಡಮೆ ಕೆಲವರಿಗೆ ಹೆಚ್ಚು ಹೀಗೆ ಮೂಲತಃ ಅವರ ಗ್ರಹಯೋಗ ಹೇಗೆ ಇದೆಯೋ ಹಾಗೆ ಫಲ ದೊರೆಯುವದು. ತೊಂದರೆ ಮತ್ತು ಹಾನಿಗಿಂತ ಸುಖ ಮತ್ತು ಲಾಭ ಬಹಳ ಹೆಚ್ಚು ಪ್ರಮಾಣದಲ್ಲಿ ದೊರೆವ ಯೋಗ ಈ ವರ್ಷ ನಿಶ್ಚಿತವಾಗಿ ಇದೆ.

High Class

Wrist Watches



ಸ್ವಿಸ್ ತಯಾರಿಕೆ, ಕ್ಲಿಪ್ತಕಾಲ ಸೂಚಿಸುವುದು. 10 ವರ್ಷ ಗ್ಯಾರಂಟಿ. ಗುಂಡಗೆ ಅಥವ ಚೌಕನೆ ಆಕಾರ ಕ್ರೋಂ. 4 ಜ್ಯೂ- ರೂ- 16-8-0. ಉತ್ತಮ ರೂ. 17-8-0 ಮಹಿಳೆಯರ ರೊ. ಗೊ. 6 ಜು. ರೂ. 25, ಚೌಕ ಕ್ರೋಂ. 6 ಜು. ರೂ. 25, 15 ಜು. ಚಪ್ಪಟೆಆಕಾರ ರೂ- 37. ಚಚೌಕ, ಬದಿರುವ ಅಥವಾ ಟಾನ್ನು ಆಕಾರ 7 ಜು. ಕ್ರೋಂಕೇಸ್ ರೂ.32, ರೊ. ಗೊ. 7 ಜು. ಗ್ಯಾರಂಟಿ 12 ವರ್ಷ ರೂ. 38, ಉತ್ತಮ ರೂ- 40, 5 ಜ್ಯು ರೊ. ಗೋ. ರೂ. 55, ಉತ್ತಮ ರೂ. 70, ಅಲಾರಾಂ ಗಡಿಯಾರ ರೂ. 17, ಪಾಕೆಟ್ ಗಡಿಯಾರ, ರೂ-17 ಒಂದು ಸಿಗರೆಟ್ ಲೈಟರ್ ಪ್ರತಿ ಕೈಗಡಿಯಾರದೊಂದಿಗೆ ಮುಫತ್ತು. ಪೋಸ್ಟೇಜು 14 ಆಣೆ.

Kohinoor Watch Co., (K. S.)
Post Box No. 2217, Calcutta 5.

ಮಕರ


ಈ ರಾಶಿಯ ಜನರಿಗೆ ಗಂಟು ಬಿದ್ದಿದ್ದ ೮ ನೇ ಶನಿ ಇದೀಗ ಬಿಟ್ಟು ೯ ನೆಯವನು ಬಂದಿರುವದರಿಂದ ಮತ್ತು ಆ ಶನಿ ನಿಮ್ಮ ರಾಶಿಯ ಸ್ವಾಮಿಯಾಗಿರುವದರಿಂದ ಆರೋಗ್ಯದ ಬಗ್ಗೆ ಸಹ ಕಾಳಜಿ ಮಾಡಬೇಕಿಲ್ಲ. ಆರೋಗ್ಯದಂತೆ ಮನಃಸ್ಥಿತಿಯೂ ಸುಧಾರಿಸುವದು. ಆದರೆ ಡಿಸೆಂಬರ ೨೬ ರಿಂದ ಅಜೀರ್ಣವಾಗದಂತೆ ಸಾದಾ ಆಹಾರ ಸೇವಿಸಬೇಕು. ಶಕ್ಯವಿದ್ದಷ್ಟು ಜಾಗರಣೆ ಮಾಡಬಾರದು. ಅದರಂತೆಯೇ ಜನೆವರಿ ೧೩ ರಿಂದ ಫೆಬ್ರುವರಿ ೨೦ ಮತ್ತು ಸಪ್ಟಂಬರ ೨೫ ರಿಂದ ಮುಂದೆ ವಾಹನಗಳನ್ನು ಹತ್ತುವಾಗ ಇಲ್ಲವೆ ಕೆಳಗೆ ಇಳಿಯುವಾಗ ಮತ್ತು ರಾತ್ರಿ ಗೊತ್ತಿದ್ದ ಸ್ಥಳದಲ್ಲಿಯೂ ಕಾಲು ಇಡುವಾಗ ಬಹಳ ದಕ್ಷತೆ ವಹಿಸಬೇಕು. ಇಲ್ಲದಿದ್ದರೆ ಸಣ್ಣದೊಡ್ಡ ಅಪಘಾತದ ತೊಂದರೆಯನ್ನನುಭವಿಸಬೇಕಾಗುವದು. ದೇಹಸ್ವಾಸ್ಥ್ಯಕ್ಕೆ ಅನುಕೂಲವಿದ್ದ ಎಲ್ಲ ಬಗೆಯ ಸುಖ ದೊರೆತರೂ ಡಿಸೆಂಬರ ೨೬ ರಿಂದ ಮನೆಯಲ್ಲಿ ಕಲಿ ಪ್ರವೇಶ ಮೆಲ್ಲನೆ ಆಗಹತ್ತುವನು. ಮಾರ್ಚ ೨೩ ರ ನಂತರವಂತೂ ಅವನು ಚನ್ನಾಗಿ ತಳವೂರಿ ಬಿಡುವನು. ಅದರಿಂದ ಕುಟುಂಬದಲ್ಲಿ ಕಲಹ ಪ್ರಾರಂಭವಾಗುವದು. ಅವಿಭಕ್ತ ಕುಟುಂಬವಿದ್ದರೆ ನೀವು ವಿಭಕ್ತರಾಗುವಿರಿ. ಬಂಧುಬಳಗಗಳಲ್ಲಿ ಕೂಡಿ ನಡೆಯುವದಿಲ್ಲ. ಇಷ್ಟೇ ಅಲ್ಲ ತಂದೆ ಮಕ್ಕಳಲ್ಲಿಯೂ ಕೂಡಿ ನಡೆಯದೆ ಬಹುಶಃ ಎರಡು ಒಲೆ ಹೂಡುವ ಪ್ರಸಂಗ ಬರುವದು. ಸ್ವಂತದ ಸ್ವಭಾವವೂ ಸಿಡುಕಿನದಾಗುವದು. ನೀವು ಅಂದದ್ದೇ ನಿಜ ಎಂದು ಹಠವಾದಿಯಾಗುವಿರಿ. ಸ್ತ್ರೀ ಸಹವಾಸದಲ್ಲಿ ವ್ಯತ್ಯಯವುಂಟಾಗಲಾರದಾದರೂ ಉಭಯತರಲ್ಲಿ ಬಹಳ ಮಟ್ಟಿಗೆ ಪುತ್ರೈಕ್ಯ ಮತ್ತು ಪ್ರೇಮ ವುಳಿಯಲಾರದು. ಮಕ್ಕಳ ಕಡೆಗೇ ಅವಳ ಒಲವು. ಮಾರ್ಚ ೨೩ ರ ವರೆಗೆ ಕೌಟುಂಬಿಕ ಹಿತದ ಒಂದಾದರೂ ಸಂಗತಿ ಸಂಭವಿಸುವದು. ಆದರೆ ಪ್ರತಿಯೊಬ್ಬರು ವಿಮನಸ್ಕರಾಗುವದರಿಂದ ಯಾರ ಮೋರೆಯ ಮೇಲೂ ಸಮಾಧಾನದ ಕಳೆ ಕಂಡುಬರುವದಿಲ್ಲ. ಡಿಸೆಂಬರ ೨೬ ರ ವರೆಗೆ ಒಂದೆರಡು ಮಂಗಲ ಕಾರ್ಯಗಳು ಸಂಭವಿಸುವ ಯೋಗ. ಸಮೀಪದ ಅಪ್ತರು ನೆರೆಯವರು ಯಾವಾಗಲೂ ತಟಸ್ಥರು ಇಲ್ಲವೆ ಉದಾಸೀನರಾಗಿ ವರ್ತಿಸುವರು. ಡಿಸೆಂಬರ ೬ ರಿಂದ ಜನೆವರಿ ೧೩, ಇಲ್ಲವೆ ಎಪ್ರಿಲ ೧ ರಿಂದ ಮೇ ೧೧ ರ ಮಧ್ಯಾಂತರ ಕಾಲದಲ್ಲಿ ಹೊಸದೊಂದು ವಾಹನವನ್ನು ಇಲ್ಲವೆ ಒಂದು ಹಿಂಡುವ ದನವನ್ನು ತೆಗೆದುಕೊಳ್ಳುವಿರಿ. ಆದರೆ ಅದರಿಂದ ಸುಖಕ್ಕಿಂತ ತಾಪತ್ರಯವೇ ಹೆಚ್ಚು. ಇದೇ ಅವಧಿಯಲ್ಲಿ ಒಬ್ಬ ಇಲ್ಲವೆ ಹೆಚ್ಚು ನವಕರರನ್ನು ಇಟ್ಟುಕೊಳ್ಳುವ ಯೋಗವಿದೆ. ಅವರು ಹೆಚ್ಚು ಹುಷಾರಾಗಿದ್ದರೂ ಬಹಳ ಶ್ರೀಮಂತಿಕೆ ಇವು ಇದ್ದುದರಿಂದ ಆ ಬಗ್ಗೆಯೂ ಬಹಳ ಸಮಾಧಾನವಾಗದು. ಲಬ್ಧಪ್ರತಿಷ್ಠರೂ ಒಳ್ಳೆ ಅಟ್ಟಹಾಸದ ಅತಿಥಿಗಳು ಕೂಡ ಈ ವರ್ಷ ಬಹಳ ಬರುವರು.

ಈ ರಾಶಿಯ ಯಾವ ಸ್ತ್ರೀ ಪುರುಷರ ವಿವಾಹವಾಗುವದಿದೆಯೊ ಅವರಿಗೆ ಇಡಿ ವರ್ಷ ಒಂದೇ ಸವನೆ ಗುರು ಇಲ್ಲವೆ ಬಾಸಿಂಗ ಬಲವಿದೆ. ಲೋಕ ದೃಷ್ಟಿಯಿಂದ ವಧೂವರರು ಅನುರೂಪರಾಗಿರುವದು ಕಂಡುಬಂದರೂ ಅವಳ ಬಯಕೆಯಂತೆ ಯೋಗ್ಯಪತಿ ಅವಳಿಗೆ ಸಿಕ್ಕಂತೆನಿಸುವದಿಲ್ಲ. ನವಂಬರ ೧೫ ರ ವರೆಗೆ ಮತ್ತು ಅನಂತರ ಜನೆವರಿ ೯ ರಿಂದ ೨೬, ಫೆಬ್ರುವರಿ ೧೯ ರಿಂದ ಮಾರ್ಚ ೧೫, ಎಪ್ರಿಲ ೯ ರಿಂದ ಮೇ ೪ ಮತ್ತು ಮೇ ೩೧ ರಿಂದ ಜುಲೈ ೧ ರ ಮಧ್ಯಾಂತರ ಅವಧಿಯಲ್ಲಿ ಆಗುವ ವಿವಾಹಗಳು ವಿಶೇಷವಾಗಿ ಮನಸ್ಸಿನಂತೆ ನಡೆಯುವವು. ಅದರಂತೆಯೆ ಯಾರ ಮಕ್ಕಳ ವಿವಾಹವಾಗುವದಿದೆಯೊ ಅಂಥವರಿಗೆ ಮಾತ್ರ ಮಾರ್ಚ ೨೩ ರ ವರೆಗೆ ಹೆಚ್ಚು ಅನುಕೂಲ ಕಾಲವಿದೆಯೆಂದು ತಿಳಿದುಕೊಂಡು ಅಷ್ಟರಲ್ಲಿ ಅದನ್ನು ಮುಗಿಸಿಕೊಳ್ಳಬೇಕು. ಏಕೆಂದರೆ ಅನಂತರ ಆದರೆ ಅವರ ಯೋಜನೆಯಲ್ಲಿ ಅಪೇಕ್ಷಾಭಂಗವಾಗಿ ಬಹಳ ಬದಲಾವಣೆ ಮಾಡಬೇಕಾಗುವದು.

ಧಂದೆಗಾರರಿಗೆ ಕೂಲಿಕಾರರಿಗೆ ಮಾತ್ರ ಈ ವರ್ಷ ಬಹಳ ಉತ್ಸಾಹದ್ದಿದೆ. ಧಂದೆ ಮಾಡುವವರಿಗೆ ಲಕ್ಷ್ಮಿಯ ಪ್ರಸಾದವು ಚೆನ್ನಾಗಿ ಸಿಕ್ಕದ್ದು ಕಂಡುಬರುವದು. ಮೊದಲು ಎಲ್ಲಿಯಾವ ಮೂಲೆಯಲ್ಲಿ ಬಿದ್ದ ಧಂದೆಯವರು ಕೂಡ ಉನ್ನತಿಗೆ ಬರುವರು. ಖಪ್ಪಾಗದೆ ಬಿದ್ದ ಸರಕು ಕೂಡ ಒಳ್ಳೇ ಧಾರಣೆಯಿಂದ ಮಾರಾಟಾಗಿ ಹೋಗುವದು. ಅದರಲ್ಲಿಯೂ ಡಿಸೆಂಬರ ೬ ರ ನಂತರ ಅವರ ಬೊಕ್ಕಸ ಪೂರ್ಣ ತುಂಬುವದು ಮತ್ತು ಹಿಂದಿನ ಕೊಡತಕ್ಕೊಳ್ಳುವದು ಸಾಲ ಮುಂತಾದ ದುಃಸಂಚಿತವು ಬಹುತರವಾಗಿ ಇಲ್ಲದಂತಾಗುವದು. ನೋಕರಿಯವರಿಗೂ ವರಿಷ್ಠರಿಂದ ಮೇಲಿಂದ ಮೇಲೆ ಪ್ರೋತ್ಸಾಹ ಸಿಕ್ಕುವದರಿಂದ ವ್ಯೈಯಲ್ಲಿಯ ಮಾಂಸ ಕೆಲಮಟ್ಟಿಗೆ ಹೆಚ್ಚಿದಂತೆ ಎನಿಸುವದು ಮತ್ತು ಕೈಕೆಳಗಿನವರು ಯಾವಾಗಲೂ ಜೀ ಎಂದು ಕೈಮುಗಿದುಕೊಂಡು ಕೆಲಸಮಾಡುವದರಿಂದ ಮನಸ್ಸು ಯಾವಾಗಲೂ ಪ್ರಸನ್ನ ಉಳಿಯುವದು. ಮೇಲಿನ ಗ್ರೇಡು ಬಹುಶಃ ಅನೇಕರಿಗೆ ಸಿಕ್ಕುವದು ಆದರೆ ಸಂಬಳ ಹೆಚ್ಚಳವು ಮನಸ್ಸಿನಂತೆ ಸಿಕ್ಕದಿರುವದರಿಂದ ಕೆಲಮಟ್ಟಿಗೆ ಮನೋಭಂಗವೆನಿಸುವ ಸಂಭವವಿದೆ. ಬದಲಿಯಾದರೆ ಅದು ಬಹಳ ಅನುಕೂಲ ಸ್ಥಳಕ್ಕೆ.


ಕಚೇರಿಯ ಮಹತ್ವವು ಹೆಚ್ಚಿದ್ದ ಸ್ಥಳಕ್ಕೇ ಆಗುವದು. ದೊಡ್ಡ ಕಚೇರಿಯವರಿಗೆ ಮಾರ್ಚ ೧೫ ರಿಂದ ಎಪ್ರಿಲ ೯ ಇಲ್ಲವೆ ಮೇ ೪ ರಿಂದ ಜುಲೈ ೧ ರ ವರೆಗೆ ಬಹುಮಾನದ ಯಾವುದೊಂದು ಪದವಿ ದೊರೆವ ಸಂಭವವೂ ಇದೆ. ಅನೇಕರಿಗೆ ಯಾವದೊಂದು ಮಹತ್ವದ ಕೆಲಸ ದೊರೆತು ಪರದೇಶಕ್ಕೆ ಹೋಗುವ ಪ್ರಸಂಗವೂ ಬರುವದು. ಆದರಂತೆಯೇ ಸಣ್ಣ ದೊಡ್ಡ ದರ್ಜೆಯಲ್ಲಿದ್ದ ಈ ರಾಶಿಯ ನೋಕರರಿಗೆ .ಕೂಡ ಸಂಭವಿಸುವ ಯೋಗ. ದೇಶಭಕ್ತಿಯ ಸೋಗು ಹಾಕಿದವರು ಈ ವರ್ಷ ಬಹಳ ಪ್ರಸಿದ್ಧಿಗೆ ಬರುವರು. ಹತ್ತಿ, ಸಣಬು ಮತ್ತು ರೇಶಿಮೆಯ ವ್ಯಾಪಾರಸ್ಥರು ಇಟ್ಟಂಗಿ ಮತ್ತು ಕಾಜಿನ ಕಾರಖಾನೆದಾರರು, ಎಣ್ಣೆಯ ವ್ಯಾಪಾರಸ್ಥರು ಮತ್ತು ಕಾರಖಾನೆದಾರರು ಹಣ್ಣು ಹಂಪಲ ಬೆಳೆವ ತೋಟಪಟ್ಟಿಯವರು ಮತ್ತು ಅವುಗಳನ್ನು ಮಾರುವವರು, ದೇಶೀ ಔಷಧಿಗಳ ಕಾರಖಾನೆದಾರರು ಮತ್ತು ಮಾರಾಟಗಾರರು, ಹಡಗು ಪಡೆಯ ಕಾರಖಾನೆದಾರರು ಮತ್ತು ಅವುಗಳ ಗುತ್ತಿಗೆ ಹಿಡಿದು ವ್ಯಾಪಾರ ಮಾಡುವವರು, ಸಾಗರೋತ್ಪನ್ನ ಎಲ್ಲ ಬಗೆಯ ವಸ್ತುಗಳ ವ್ಯಾಪಾರ ಮಾಡುವವರು, ಸರ್ಕಸ ಕಂಪನಿಯವರು, ವಕೀಲರು ಬ್ಯಾರಿಸ್ಟರರು, ಕೋರ್ಟಿನಲ್ಲಿಯ ನೋಕರರು, ಕಸ್ಟಮ್ ಇನಕಂಟ್ಯಾಕ್ಸ ಮತ್ತು ಪಬ್ಲಿಕ ವರ್ಕ್ಸಿನಲ್ಲಿಯ ನೋಕರರು, ಸಿ. ಆಯಡಿಯ ನೋಕರರು ವೃತ್ತಪತ್ರ ಸುದ್ದಿಗಾರರು ಮತ್ತು ಸಾಚಾ ವ್ಯವಹಾರ ನಡೆಸದೆ ಹೊತ್ತು ಬಂದಂತೆ ಮನಬಂದಂತೆ ಮಾತಾಡುವವರು ಇವರೆಲ್ಲರಿಗೆ ಈ ವರ್ಷ ಬೇಕಾದಷ್ಟು ಲಾಭವಿದೆ. ವ್ಯಾಜ್ಯ ಕಲಹಗಳ ಸಮಯವೂ ಮೇಲಿಂದ ಮೇಲೆ ಒದಗಿಬರುವದು ಆದರೆ ಲೋಕಪ್ರಿಯತೆಯು ಮಾತ್ರ ಎಳ್ಳಷ್ಟೂ ಕಡಮೆಯಾಗುವದಿಲ್ಲ. ಮನವಾರೆ ದುಡ್ಡು ಸಿಕ್ಕರೂ ನಾಲ್ಕು ದುಡ್ಡು ಕೂಡಿ ಬೀಳಬೇಕಾದರೆ ಸಾಕುಬೇಕಾಗಿ ಹೋಗುವದು. ಏಕೆಂದರೆ ಹಣ ವೆಚ್ಚ ಮಾಡಿ ನಾಲ್ಕು ಜನರಲ್ಲಿ ಹೌದೆನಿಸಿಕೊಳ್ಳುವ ಹವ್ಯಾಸ ಬಹಳ. ಮನೆಯಲ್ಲಿ ಕಲಹ ಮತ್ತು ಭಾವೀ ಆಸೆಯಿಂದ ಯಾವ ಯಾವ ವ್ಯವಹಾರದಲ್ಲಿಯೂ ದುಡ್ಡು ಹಾಕುವ ಹುಚ್ಚು ಉಂಟಾಗಿ ಸಂಗ್ರಹದತ್ತ ಲಕ್ಷ್ಯವೇ ಉಳಿಯುವದಿಲ್ಲ.

ಸರಕಾರೀ ವಾದವಿವಾದಗಳಲ್ಲಿ ಮೊದಲು ಉಭಯ ಪಕ್ಷಗಳಲ್ಲಿ ಬಹಳ ಸ್ಪರ್ಧೆನಡೆದು ಕೊನೆಗೆ ಅದರಲ್ಲಿ ಬಹುತರ ದಾವೆಗಳು ಒಡಂಬಡಿಕೆಯಿಂದಲೆ ನಿರ್ಣೀತವಾಗುವವು. ಆದರೆ ಯಾವುವು ಅಂತು ನಿರ್ಣಯಿಸಲ್ಪಡುವದಿಲ್ಲವೋ ಅವುಗಳಲ್ಲಿ ನಿಮಗೆ ಯಶಸ್ಸು ಸಿಕ್ಕುವ ಅನುಕೂಲ ಪರಿಸ್ಥಿತಿ. ಪ್ರತಿಪಕ್ಷಿಗಳಿಗೆ ಅನುಕೂಲತೆ ಕಡಮೆ. ಖಾಸಗಿ ಸ್ಪರ್ಧೆಯಲ್ಲಿ ಬೆಂಕಿ ಹಾಗೆಯೇ ಹೊತ್ತುತ್ತ ನಡೆಯುವದು. ಶತ್ರುಗಳು ಮುಖ್ಯ ಮುದ್ದೆಯನ್ನು ಅಂದರೆ ವೈರದ ಮುದ್ದೆಯನ್ನು ಬಿಟ್ಟು ಉಳಿದ ವಿಷಯಗಳಲ್ಲಿ



ಹೆಚ್ಚಿನ ಉತ್ಪಾದನೆಯನ್ನು ಕನಿಷ್ಟ ಮನುಷ್ಯ 'ಶಕ್ತಿಯಿಂದ ಅತಿ ಕಡಿಮೆ ವೇಳೆಯಲ್ಲಿ ನಡೆಯಿಸುವುದು ವಾಸ್ತವಿಕವಾಗಿಯೂ ಮಿಗಿತಾಯದ ದಾರಿಗಳಲ್ಲಿದೊಂದು. ಇಲ್ಲೇ ದಾಂಡೇಕರ್ ಅಕ್ಕಿಕುಟ್ಟುವ ಯಂತ್ರದ ಆವಶ್ಯಕತೆ. ಎಲ್ಲಾ ವಿಧವಾದ ಅಕ್ಕಿ ಕುಟ್ಟುವ ಕೆಲಸವನ್ನೂ, ಅಂದರೆ ಹಸನು ಮಾಡುವುದನ್ನೂ, ಹೊಟ್ಟು ತೆಗೆಯುವುದನ್ನೂ, ವಿಂಗಡಿಸುವುದನ್ನೂ ಮತ್ತು ಪಾಲಿಷ್ ಮಾಡುವುದನ್ನು ಈ ಯಂತ್ರವು ಸ್ವಯಂ ಚಾಲಕತ್ವದಿಂದ ನಡೆಯಿಸಲ್ಪಡುವುದು. ಈ ಯಂತ್ರವು ಸ್ಥಳದ ಆವಶ್ಯಕತೆಯನ್ನನುಸರಿಸಿ ರಚಿಸಲ್ಪಟ್ಟದ್ದು ಎಲ್ಲಾ ತರದ ಪ್ರಮಾಣದಲ್ಲಿದೆ. ಸಂಶೋಧನೆಯು ಸ್ವಲ್ಪ ಖರ್ಚಿನದಾಯಕವಾಗಿ ಇದ್ದಾಗ್ಯೂ ಕಡಿಮೆ ವೇಳೆಯಲ್ಲಿ ಕೊಡುವ ಇದರ ಉತ್ಪನ್ನವನ್ನು ಗಮನಿಸಿದರೆ ಈ ಯಂತ್ರವು ಪ್ರತಿಯೊಂದು ಅಕ್ಕಿ ಕುಟ್ಟುವ ಕಾರ್ಖಾನೆಗಳಲ್ಲಿ ಅಗತ್ಯವಿದೆ.

ದಾಂಡೇಕರ್
ಅಕ್ಕಿ ಕುಟ್ಟುವ ಯಂತ್ರ
(ಮೈಸೂರು ಮಾದರಿ)



ಜಿ.ಜಿ. ದಾಂಡೇಕರ್
ಮೆಷಿನ್ ವರ್ಕ್ಸ್ ಲಿಮಿಟೆಡ್

TOM & BAY

ಸೌಜನ್ಯಗಳಿಂದ ವರ್ತಿಸುವರು. ಆದರೆ ಮಿತ್ರರು ಮಾತ್ರ ಅಡ್ಡತಿಡ್ಡ ವರ್ತಿಸುವದು ಆಗಾಗ ಕಂಡು ಬರುವದು.

ಯಾವ ಸ್ತ್ರೀಯರು ಈ ವರ್ಷ ಹಡೆಯುವ ದಿದೆಯೊ ಅವರಲ್ಲಿ ಬಹುತರ ಎಲ್ಲರಿಗೆ ಪರಕುಲೋದ್ಧಾರ ಮಾಡುವದಕ್ಕಾಗಿ ಹೆಣ್ಣೇ ಹುಟ್ಟುವದು. ಆದರಲ್ಲಿಯೂ ಡಿಸೆಂಬರ ೨೬ ರ ವರೆಗೆ ಗಂಡುಮಗು ಹುಟ್ಟಿದರೂ ಹುಟ್ಟ ಬಹುದು. ಹೆರಿಗೆಯು ಸುಲಭವಾಗಿ ಮಗು ಬಹಳ ಸಶಕ್ತ ಮತ್ತು ಉಂಡಾಡಿಗ ಆಗುವನು. ಆದರೆ ಹೆರಿಗೆಯ ಕಾಲಕ್ಕೆ ರಕ್ತಸ್ರಾವ ಹೆಚ್ಚಾಗಿ ಬಾಣಂತಿಯು ಬಹಳ ಅಶಕ್ತಳಾಗುವ ಯೋಗ ಇರುವದರಿಂದ ಅವಳ ಪಥ್ಯ ಮುಂತಾದ್ದರ ಬಗ್ಗೆ ನಾಲ್ಕಾರು ತಿಂಗಳು ಬಹಳ ಜಪ್ಪಿಸಿಕೊಂಡಿರ ಬೇಕು.

ಈ ವರ್ಷ ನೂರಕ್ಕೆ ೮೦ ರಷ್ಟು ವಿದ್ಯಾರ್ಥಿಗಳು ನಿಶ್ಚಿತವಾಗಿ ಪಾಸಾಗುವರು. ಆದರೆ ಉಳಿದವರಲ್ಲಿಯೂ ನಿಜ ಹುಷಾರ ವಿದ್ಯಾರ್ಥಿಗಳ ದೈವವು ಪ್ರತಿಕೂಲವಿದ್ದದ್ದು ಕಂಡ ಬರುವದು. ಡಿಸೆಂಬರ ೨೬ ರ ವರೆಗೆ ಯಾರ ಪರೀಕ್ಷೆ ಆಗುವದಿದೆಯೊ ಅಂಥವರು ಎಷ್ಟು ದಡ್ಡರಿದ್ದರೂ ಅವರು ಪಾಸಾಗುವರು. ಆದರೆ ಅನಂತರ ಯಾರ ಪರೀಕ್ಷೆ ಅಗುವದಿದೆಯೋ ಅವರು ಮೇಲಿಂದ ಮೇಲೆ ತಮ್ಮ ವಿಷಯುಗಳ ಚಿಂತನೆ ಮಾಡಬೇಕು. ಅಂದರೆ ಸರಸ್ವತಿಯು ಪ್ರಸಾದವು ಸುಲಭವಾಗಿ ದೊರೆಯುವದು.

ಒಟ್ಟಾರೆ ಈ ವರ್ಷ ಮನೆಯಲ್ಲಿ ಎಷ್ಟೋ ದಗದಗಿ ಕಷ್ಟ ಎನಿಸಿದರೂ ಹೊರಗಿನ ವಾತಾವರಣದಲ್ಲಿ ಮನಸ್ಸು ಬಹಳ ಪ್ರಸನ್ನ ಉಳಿಯುವದು.

ಕುಂಭ

ಈ ರಾಶಿಯು ಸ್ವಾಮಿಯಾದ **ಶನಿಯು** ಇದೇ ತಾನೆ **ಅಷ್ಟಮ** ಎಂದರೆ ಮೃತ್ಯುಸ್ಥಾನದಲ್ಲಿ ಬಂದಿದ್ದು ಡಿಸೆಂಬರ ೨೬ ರ ವರೆಗೆ ಅವನ ಸಂಗಡ ಯಾವಾಗಲೂ ವಕ್ರಗತಿಯಿಂದ ನಡೆಯುವ ಪಾಪಗ್ರಹವಾದ **ಕೇತು** ಇದ್ದುದರಿಂದ ಈ ರಾಶಿಯು ಜನರಿಗೆ ತಮ್ಮ ಆರೋಗ್ಯದ ಬಗ್ಗೆ ಬಹಳ ಕಾಳಜಿ ತೆಗೆದುಕೊಳ್ಳಬೇಕಾದದ್ದು ಅತ್ಯವಶ್ಯವಾಗಿದೆ. ಯಾವದೊಂದು ವಿಷಯುವನ್ನು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಅತ್ಯಂತ ಸ್ನಿಗ್ಧ ಮತ್ತು ಎಣ್ಣೆಯಲ್ಲಿ ಕರಿದ ಪದಾರ್ಥ ಖಾರದ ಪದಾರ್ಥಗಳನ್ನು ತಿನ್ನಬಾರದಿಷ್ಟೇ ಅಲ್ಲ ಆದರಂತೆ ಸಿಹಿ ಪದಾರ್ಥಗಳನ್ನೂ ತಿನ್ನಬಾರದು. ಅಡ್ಡಾಡುವದು, ಜಾಗರಣೆ ಮಾಡುವದು ಮತ್ತು ಮಾತಾಡುವದು ಕೂಡ ಅಷ್ಟಕಷ್ಟೇ ಇರತಕ್ಕದ್ದು. ಈ ಎರಡು ಗ್ರಹಗಳ ಜೊತೆ **ನೆಪಚೂನ** ಇರುವದರಿಂದ ಬಾವಿ, ಕೆರೆ, ನದಿ ಮೊದಲಾದ ನೀರಿದ್ದ ಸ್ಥಳಗಳಲ್ಲಿ ಬಹಳ ಸಾವಧಾನದಿಂದ ಇರತಕ್ಕದ್ದು. ವಿಶೇಷವಾಗಿ ಡಿಸೆಂಬರ ೨೬ ರ ವರೆಗೆ ಮತ್ತು ಅನಂತರ ಮಾರ್ಚ ೨೮ ರಿಂದ ಜೂನ ೨, ಜುಲೈ ೫ ರಿಂದ ೨೩, ಸಪ್ಟಂಬರ ೨೮ ರಿಂದ ಅಕ್ಟೋಬರ ೧೬ ಈ ಅವಧಿಯಲ್ಲಿ ವಿಶೇಷ ಜಾಗ್ರತರಾಗಿರತಕ್ಕದ್ದು. ಅದರಂತೆಯೆ ಅಂಜಿಕೆಯು ಮತ್ತು ಭೂತ ಪಿಶಾಚಿಗಳಿರುವವೆಂದೆನ್ನುವ ಸ್ಥಳಗಳಿಂದ ದೂರ ಇರಬೇಕು. ಉಳಿದ ವಿಷಯಗಳಲ್ಲಿಯೂ ದೈಹಿಕ ಮತ್ತು ಪ್ರಾಪಂಚಿಕ ಸುಖಕ್ಕೂ ಈ ವರ್ಷ ಹೆಚ್ಚುಕಡಮೆ ತೊಂದರೆಯೇ. ಡಿಸೆಂಬರ ೨೬ ರ ವರೆಗೆ ಒಬ್ಬರ ಮೋರೆ ಪೂರ್ವಕ್ಕಿದ್ದರೆ ಮತ್ತೊಬ್ಬರದು ಪಶ್ಚಿಮಕ್ಕೆ. ಅಗ ಒಬ್ಬರ ಇಚ್ಛೆಯಂತೆ ಮತ್ತೊಬ್ಬರು ನಡೆಯಲಾರರು. ಅವಿಭಕ್ತ ಕುಟುಂಬವಿದ್ದರೆ ಅದು ಒಡೆದು ವಿಭಕ್ತವಾಗುವದು. ಮಾರ್ಚ ೨೬ ರ ನಂತರ ಮನೆಯಲ್ಲಿಯ ಕಲಹಸ್ಥಿತಿ ಕೆಲ ಮಟ್ಟಿಗೆ ಕಡಮೆಯಾದರೂ ಹೆಂಡತಿಯ ಪ್ರಕೃತಿಗೆ ಒಂದಿಲ್ಲೊಂದು ತಕರಾರು ಇದ್ದದ್ದೇ. ಅಲ್ಲದೆ ಉಭಯತರ ಸಹವಾಸ ಅಬಾಧಿತವಿದ್ದರೂ ಪರಸ್ಪರರ ಮತೈಕ್ಯವಾಗುವದು ಕಪಿಲಾಷಷ್ಠಿಯ ಯೋಗದಂತೆ ಯಾವಾಗಾದರೊಮ್ಮೆ ಕೂಡಿಬರುವದು. ಎರಡನೆಯವರ ತಪ್ಪು ಹುಡುಕುವದರಲ್ಲಿಯೆ ಎಲ್ಲರೂ ತೊಡಗುವರು. ಜನೆವರಿ ೧೩ ರಿಂದ ಫೆಬ್ರುವರಿ ೧೨, ಮಾರ್ಚ ೧೩ ರಿಂದ ಎಪ್ರಿಲ ೧೪, ಜುಲೈ ೧೬ ರಿಂದ ಅಗಷ್ಟ ೧೫ ಮತ್ತು ಸಪ್ಟೆಂಬರ ೧೬ ರಿಂದ ಅಕ್ಟೋಬರ ೧೫ ಈ ಮಧ್ಯಾಂತರ ಅವಧಿಯಲ್ಲಿ ಈ ರಾಶಿಯುವರು ಗಂಡನು ಹೆಂಡತಿಯ, ಹೆಂಡತಿಯು, ಗಂಡನ ಆರೋಗ್ಯ, ಪುನಃಸ್ಥಿತಿಯ ಬಗ್ಗೆ ಹೆಚ್ಚು ದಕ್ಷತೆ ವಹಿಸಬೇಕು. ಮಕ್ಕಳ ಉನ್ನತಿಗೆ ಮಾತ್ರ ಈ ವರ್ಷ ಬಹಳ ಅನುಕೂಲವಿದೆ ಆದರೆ ಎಲ್ಲ ಮಕ್ಕಳೂ ನಿಮ್ಮಿಂದ ದೂರೇ ಉಳಿಯುವರು. ನಿಮ್ಮ ಅಮೃತವಾಕ್ಯ ಕೂಡ ಅವರಿಗೆ ಸಮವೆನಿಸುವದು. ನಿಮ್ಮ ಕುಚೇಷ್ಟೆಯನ್ನೂ ಅವರು ಮಾಡುವರು. ಅವರಲ್ಲಿ ಯಾರಾದರೊಬ್ಬರು ನಿಮ್ಮಗೂಡ ಚಲೋ ರೀತಿಯಿಂದಿದ್ದರೆ ಅವನೂ ದೂರ ಹೋಗುವ ಪ್ರಸಂಗ ಹಠಾತ್ತಾಗಿ ಬರುವದು. ಉಳಿದ ಆಪ್ತರು ಮನೆಯುವರಿಗಿಂತ ಹೆಚ್ಚು ಸಹಾನುಭೂತಿಯಿಂದ ವರ್ತಿಸುವರು. ಪ್ರಾಪಂಚಿಕ ಮತ್ತು ದೈಹಿಕ ಸುಖಕ್ಕೆ ಈ ಬಗೆಯ ಅನುಕೂಲ ಪರಿಸ್ಥಿತಿಯುದ್ದರೂ ಡಿಸೆಂಬರ ೨೬ ರಿಂದ ದ್ರವ್ಯ ಮತ್ತು ಜಂಗಮ ವಸ್ತುಗಳ ಹಾಗು ಮಾರ್ಚ ೨೩ ರಿಂದ ಹೊಲ ಮನೆ ಮೊದಲಾದ ಸ್ಥಾವರ ಸಂಗ್ರಹಕ್ಕೆ ಬಹಳ ಉತ್ತಮ ಕಾಲವಿದೆ. ಅನೇಕ ದಿನಗಳಿಂದ ಇಟ್ಟುಕೊಂಡ ಉದ್ದೇಶ ಕೂಡ ಸಫಲವಾಗುವ ಯೋಗವಿದೆ. ಮೊದಲಿದ್ದ ಸ್ಥಾವರ ಆಸ್ತಿಯು ದುರಸ್ತಿಯೂ ಆಗುವದು. ಪ್ರಿಯ ಅತಿಥಿಗಳ ಸಹವಾಸ ಅನೇಕ ಸಲ ಸಿಕ್ಕುವದು. ನೋಕರಚಾಕರರು ಪ್ರಮಾಣಿಕ ರೀತಿಯಿಂದ ವರ್ತಿಸುವರು. ಆದರೆ ಅವರ ಮನೆತನದ ಅಡಚಣಿಗಳಿಂದ ಅವರು ಕಷ್ಟಕ್ಕೊಳಗಾಗುವರು. ವಾಹನಗಳನ್ನು ಮಾತ್ರ ನಿಮಗಿಂತ ಎರಡನೆಯವರಿಗಾಗಿಯೆ ಇಡಬೇಕಾದ ಪ್ರಸಂಗ ಬರುವದು.



ನಮ್ಮ ಗ್ರಾಹಕರಿಗೆ ದೀಪಾವಳಿ
ಸುಖದಾಯಕವಾಗಲಿ

ಈ ರಾಶಿಯು ಸ್ತ್ರೀಪುರುಷರ ವಿವಾಹವಾಗುವದಿದ್ದರೆ ಮಾರ್ಚ ೨೩ ರ ವರೆಗೆ ಸಂಭವಿಸುವ ಯೋಗವಿದ್ದಷ್ಟು ಮುಂದೆ ಇರುವದಿಲ್ಲ. ವಧುವರರು ಸ್ವಲ್ಪ ಇಜ್ಜೋಡು ಕಂಡರೂ ಗುಣಗಳಿಂದ ಪರಸ್ಪರರ ಅನುರೂಪರಾಗಿರುವರಲ್ಲದೆ ಪರಸ್ಪರರಿಗೆ ಒಪ್ಪಿಗೆಯಾದವರೂ ಇರುವರು. ಡಿಸೆಂಬರ ೨೬ ರ ನಂತರ ಮದುವೆಯಾದರೆ ಗೊತ್ತುಪಡಿಸಿದ ಮುಹೂರ್ತ ಇಲ್ಲವೆ ಕಾಲದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗುವಂತಹ ಕೆಲ ಅಡಚಣಿಗಳು ಬರುವ ಸಂಭವವಿದೆ ಅದರಂತೆಯೇ ಯಾರ ಮಕ್ಕಳ ಮದುವೆಯಾಗುವದಿದೆಯೊ ಅದಕ್ಕೆ ಮಾತ್ರ ಮಾರ್ಚ ೨೩ ರ ನಂತರವೇ ಹೆಚ್ಚು ಬಲಿಷ್ಠಯೋಗವಿದೆ. ಮತ್ತು ನಿಮ್ಮ ಮಕ್ಕಳಿಗಿಂತ ಅಳಿಯ ಸೊಸೆಯರು ಹೆಚ್ಚು ಸುಲಕ್ಷಣ ಸಿಕ್ಕುವರು. ಅಲ್ಲದೆ ನೈಮಿತ್ತಿಕ ಅನೇಕ ಧಾರ್ಮಿಕ ಮತ್ತು ದೈಹಿಕ ಕೃತ್ಯಗಳು ಜರುಗುವವು.

ನಿಮಗೆ **೮ ನೇ ಶನಿ** ಇದ್ದು ಪ್ರಾಪಂಚಿಕ ಮತ್ತು ಪ್ರಕೃತಿಜನ್ಯ ದಗದಗಿ ಹೆಚ್ಚುತ್ತಿದ್ದರೂ ಧಂದೆ ಮತ್ತು ಕೂಲಿಯುವರಿಗೆ ಈ ವರ್ಷ ಸ್ವಲ್ಪೂ ಅನನುಕೂಲವಾಗಿ ಪರಿಣಮಿಸದು. ಡಿಸೆಂಬರ ೨೬ ರ ವರೆಗೆ ಧಂದೆಯು ಮಂದವಾಗಿ ತೋರಿ ನೋಕರಿಯಲ್ಲಿ ತೊಂದರೆಯೆನಿಸಿದರೂ ಅನಂತರ ಮಾತ್ರ ತೇಜಿಯ ಮತ್ತು ಸುಖದ ದಿನಗಳನ್ನೆ ನಿಶ್ಚಿತವಾಗಿ ಕಳೆಯುವಿರಿ. ಧಂದೆ ಮಾಡುವವರಿಗೆ ಮಾತ್ರ ಮಾರ್ಚ ೨೩ ರ ನಂತರ ಮಾತ್ರ ದುಡ್ಡು ಎಣಿಸಿಕೊಳ್ಳಲಿಕ್ಕೆ

ಕೂಡ ಪುರಸತ್ತು ಸಿಕ್ಕಲಾರದು. ಅಂದಬಳಿಕ ಸ್ವಸ್ಥ ಕುಳಿತು ನಾಲ್ಕು ಮಾತು ಮಾತಾಡಲು ಅವಕಾಶವೆಂತು ಸಿಕ್ಕಬಹುದು? ಅದರಲ್ಲಿಯೂ ಜನೆವರಿ ೧೩ ರಿಂದ ಫೆಬ್ರುವರಿ ೨೦, ಎಪ್ರಿಲ ೧ ರಿಂದ ಮೇ ೧೧, ಜೂನ ೨ ರಿಂದ ಜುಲೈ ೫, ಜುಲೈ ೨೩ ರಿಂದ ಸಪ್ಟಂಬರ ೨೮ ಮತ್ತು ಅಕ್ಟೋಬರ ೧೬ ರ ನಂತರದ ಕಾಲವು ತುಂಬ ಲಾಭದಾಯಕವಾಗಿ ಪರಿಣಮಿಸುವದು. ನೌಕರಿ ಮಾಡುವವರಿಗೆ ಮಾರ್ಚ ೨೩ ರ ನಂತರ ಮೇಲಿನ ಗ್ರೇಡು ಸಿಕ್ಕುವದು. ಬದಲಿಯಾಗುವದಿದ್ದರೆ ಡಿಸೆಂಬರ ೨೬ ರ ವರೆಗೆ ಅನುಕೂಲ ಸ್ಥಳಕ್ಕೆ ಆಗುವದು. ಆದರೆ ಅನಂತರ ಮಾತ್ರವಂತೂ ನಿಮ್ಮ ಅಪೇಕ್ಷೆ ಮೀರಿ ಸುಖ ಸೌಕರ್ಯಗಳ ಸ್ಥಳಕ್ಕೆ ವರ್ಗವಾಗುವದು. ಮೇಲಿನ ಅಧಿಕಾರಿಗಳು ಸಹಾನುಭೂತಿಯಿಂದ ವರ್ತಿಸಿದರೂ ಅವರ ಮನೆಯವರು ಮತ್ತು ಉಳಿದ ಮಹನೀಯರು ಕೆಲಮಟ್ಟಿಗೆ ಉದ್ಧಾಮತನದಿಂದ ನಡೆದುಕೊಳ್ಳುವರು. ಮತ್ತು ಅದರ ಪ್ರತ್ಯಂತರವು ಮಾರ್ಚ ೨೩ ರ ವರೆಗೆ ಅನೇಕ ಸಲ ಕಂಡುಬರುವದು. ಅದರಲ್ಲಿಯೂ ನವಂಬರ ೧೫ ರ ವರೆಗೆ ಮತ್ತು ಅನಂತರ ಡಿಸೆಂಬರ ೯ ರಿಂದ ಜನೆವರಿ ೨, ಜನೆವರಿ ೨ ರಿಂದ ಫೆಬ್ರುವರಿ ೧೯, ಎಪ್ರಿಲ ೯ ರಿಂದ ಮೇ ೪ ಮತ್ತು ಜುಲೈ ೧ ರಿಂದ ಮುಂದಿನ ಕಾಲದಲ್ಲಿ ನೌಕರರಿಗೆ ವಿಶೇಷ ಸುಖ ಸಮಾಧಾನದ ಪರಿಸ್ಥಿತಿ ಸಂಪ್ರಾಪ್ತವಾಗುವದು. ಅದರಂತೆಯೇ ನವಂಬರ ೩೦ ರಿಂದ ಫೆಬ್ರುವರಿ ೪, ಮಾರ್ಚ ೧೨ ರಿಂದ ೨೮, ಜೂನ ೨ ರಿಂದ ಜುಲೈ ೫, ಮತ್ತು ಸಪ್ಟಂಬರ ೨೮ ರಿಂದ ಅಕ್ಟೋಬರ ೧೬ ರ ಕಾಲದಲ್ಲಿ ಲಾಟರಿ, ಸಟ್ಟಾ, ರೇಸ, ಕಳ್ಳ ಮತ್ತು ಸಾಚಾ ಪೇಟಿ ವ್ಯವಹಾರ, ಲಂಚ ಇಲ್ಲವೆ ಯಾವದೆ ಬಗೆಯ ಶ್ರಮವಿಲ್ಲದ ಮಾರ್ಗದಿಂದ ಅವರವರ ದೈವದಂತೆ ಹೆಚ್ಚುಕಡಿಮೆ ಪ್ರಮಾಣದಲ್ಲಿ ಆದರೆ ನಿಶ್ಚಯವಾಗಿ ಆಕಸ್ಮಿಕ ಇಲ್ಲವೆ ಗುಪ್ತ ಲಾಭ ಸಿಕ್ಕದಿರದು. ಕಬ್ಬಿಣ ಉಕ್ಕು ಬೀಡು ಮೊದಲಾದ ಸಾಮಾನುಗಳ ಮತ್ತು ಎಲ್ಲ ಬಗೆಯ ಯಂತ್ರಗಳಲ್ಲಿ ವ್ಯವಹಾರ ಮಾಡುವವರು, ಕಾರಖಾನೆದಾರರು, ವ್ಯಾಪಾರಸ್ಥರು, ಭುಸಾರಿ ಸರಕುಗಳ ಸಣ್ಣ ದೊಡ್ಡ ವ್ಯಾಪಾರಸ್ಥರು, ಗಟಾರ, ಪೂಲು, ರಸ್ತೆ, ಡ್ರೇನೇಜ ಮೊದಲಾದವುಗಳ ಕಂಟ್ರಾಟ ಹಿಡಿದವರು, ವಿಮಾಕಂಪನಿ ಏಜಂಟರು, ವಿದ್ಯುತ್ ಧಂದೆಯವರು, ಕಮೀಶನ್ ಏಜಂಟರು, ಯಾವದೇ ಬಗೆಯ ವಾಹನಗಳ ಒಡೆಯರು, ನಾಟಕಕಾರರು, ಕಾದಂಬರಿಕಾರ, ಫೌಜದಾರಿ ಖಟ್ಲೆ ನಡೆಸುವ ವಕೀಲರು, ಅರಣ್ಯಗಳ ಕಂಟ್ರಾಕ್ಟದಾರರು ಮತ್ತು ದೇವಸ್ಥಾನದ ಒಡೆಯರು ಮೊದಲಾದವರಿಗೆ ಮತ್ತು ಅಬಕಾರಿ ನೀರಾ ಕೇಂದ್ರ ಪೋಲೀಸ ರಜಿಸ್ಟರ ಶಾಖೆ ರೆವಿನ್ಯು ಸಿವಿಲ್ ಮೆಕ್ಯಾನಿಕಲ್ ಎಂಜನಿಯರಿಂಗ ಶಾಖೆ, ಹಡಗುಪಡೆ ಸರಕಾರಿ ಇಲ್ಲವೆ ಖಾಸಗಿ ಮುದ್ರಣಾಲಯಗಳು ಮೊದಲಾದವುಗಳಲ್ಲಿ ಕೆಲಸ ಮಾಡುವ ನೌಕರರಿಗೆ ಈ ವರ್ಷ ಬಹಳ ಉನ್ನತಿಯದಾಗಿ ಪರಿಣಮಿಸುವದು. ಒಟ್ಟಾರೆ ಉಪಜೀವನ ಸಾಧನಗಳಲ್ಲಿ ಹಾನಿಯಾಗದೆ ಸ್ವಲ್ಪಾದರೂ ಹೆಚ್ಚಳವೇ ಆಗುವ ಯೋಗವಿದೆ.

ಸರಕಾರೀ ದಾವೆಗಳಲ್ಲಿ ಇಲ್ಲವೆ ಖಾಸಗಿ ರೀತಿಯಲ್ಲಿ ನಡೆವ ಸ್ಪರ್ಧೆಯಲ್ಲಿ ಕನಿಷ್ಠ ಹತ್ತಾಕೆಯಷ್ಟಾದರೂ ಯಶಸ್ಸು ಸಿಕ್ಕುವದು. ಮಾರ್ಚ ೨೩ ರ ನಂತರ ವಿರುದ್ಧ ಪಕ್ಷದವರು ಗುಪ್ತ ರೀತಿಯಿಂದ ಹೆಚ್ಚು ಉಪದ್ರವ ಕೊಡಹತ್ತುವರು. ನಿಮ್ಮ ಬಗ್ಗೆ ಲೋಕಮತವನ್ನು ಪ್ರತಿಕೂಲಪಡಿಸುವ ಪ್ರಯತ್ನವನ್ನು ಅವರು ಹೆಚ್ಚಾಗಿ ಮಾಡುವರು. ಇಷ್ಟಾದರೂ ಅವರಿಗೆ ದೈವವು ಪ್ರತಿಕೂಲವೇ. ಇಂಥ ಕೆಲಸಗಳಲ್ಲಿ ಯಶಸ್ಸಿಗೆ ಡಿಸೆಂಬರ ೬ ರ ವರೆಗೆ ಅನಂತರ ಎಪ್ರಿಲ ೧ ರಿಂದ ಮೇ ೧೧ ಮತ್ತು ಅಗಷ್ಟ ೮ ರಿಂದ ಸಪ್ಟಂಬರ ೨೫ ರ ಕಾಲ ಹೆಚ್ಚು ಅನುಕೂಲವಿದೆ. ಮಿತ್ರಸುಖ ಬಹಳ ಉತ್ತಮ ದೊರೆಯುವದು. ಒಂದೆರಡು ಸಲ ದೂರದ ಪ್ರವಾಸ ಸಂಭವಿಸುವದು. ಯಾವದೇ ಬಗೆಯ ಲೇಖನಕೆಲಸಗಳಿಗಿಂತ ಪ್ರತ್ಯಕ್ಷ ಭೆಟ್ಟಿ ಹೆಚ್ಚು ಉತ್ಸಾಹಜನಕವೆನಿಸುವವು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರು ಮಾರ್ಚ ೨೩ ರೊಳಗಾಗಿ ಹಡೆದರೆ ಗಂಡುಮಗು ಹುಟ್ಟುವ ಸ್ವಲ್ಪಾದರೂ ಆಸೆಯಿದೆ. ಅನಂತರ ಹಡೆದರೆ ನೂರಕ್ಕೆ ೯೦ ರಷ್ಟು

ಶಹಾಜಿ ಕೆಮಿಕಲ್ ವರ್ಕ್ಸ್, ಬೆಳಗಾವಿ



ಸಂಬಳ ಇಲ್ಲವೆ ಭತ್ತೇದ ಮೇಲೆ ಸ್ಟಾಕಿಸ್ಟರೂ, ಹಾಗೂ ಪ್ರವಾಸಿ ಏಜಂಟರು ಬೇಕು. ಶರ್ತುಗಳನ್ನು ಹಾಗೂ ಕರಾರುಗಳನ್ನು ತಿಳಿಯಲು ೦—೮—೦ ಅಂಚೇ ಟಿಕೆಟ್ಟನೊಂದಿಗೆ ಕೂಡಲೇ ಬರೆಯಿರಿ.

ನೂತನವರ್ಷವು — ದೀಪಾವಳಿಯು ನಮ್ಮೆಲ್ಲ ಗ್ರಾಹಕವೃಂದಕ್ಕೆ ಸುಖಸಮೃದ್ಧಿಯನ್ನೀಯಲಿ.

ಅಲ್ಲಲ್ಲಿಯ

ವಾರ್ತೆಗಳನ್ನು ಭಾಷಣಗಳನ್ನು ಇಂಪಾದ ಗಾಯನಗಳನ್ನು ಕೇಳುವುದಕ್ಕಾಗಿ

ಜಿ. ಈ. ಸಿ. ರೇಡಿಯೋ ಅಗತ್ಯ

ವಿವರಗಳಿಗೆ —

ಎಸ್. ಎಮ್. ಬಾಡಗಂಡಿ
ಜಿ. ಈ. ಸಿ. ರೇಡಿಯೋ ಸಬ್‌ಡೀಲರ,
ಯುನಿಕ್ ಸ್ಪೋರ್ಟ್ಸ್, ವಿಜಾಪುರ

ಇದಲ್ಲದೇ

ಕರ್ನಾಟಕದ ಪ್ರಮುಖ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕ ಮುಂತಾದವೂ ಶಾಲೆ, ಕಾಲೇಜುಗಳಿಗೆ ಬೇಕಾಗುವ (Sports) ಹಾಕೀ ಸ್ಟಿಕ್ಸ್, ಬ್ಯಾಟ, ಫುಟಬಾಲ್ ಇತ್ಯಾದಿಗಳೂ ದೊರೆಯುತ್ತಿವೆ...

ನಮ್ಮ ಗ್ರಾಹಕರಿಗೆಲ್ಲ ದೀಪಾವಳಿಯು ಶುಭದಾಯಕವಾಗಲಿ

ಹೆಣ್ಣು ಹುಟ್ಟುವವು. ಅಲ್ಲದೆ ಅಂದಿನಿಂದ ಹಡೆಯುವವರಿಗೆ ಹೆರಿಗೆಯ ಕಾಲಕ್ಕೆ ಸ್ವಲ್ಪ ಕಷ್ಟವೂ ಆಗುವದು. ಮಗುವೂ ಅಶಕ್ತ ಕಿರಿಕಿರಿಮಾಡುವ ಇಲ್ಲವೆ ಕ್ವಚಿತ್ ವ್ಯಂಗವುಳ್ಳವಾಗುವವು. ಅದರಂತೆಯೇ ನೂರಕ್ಕೆ ೧೦–೧೫ರಷ್ಟಾದರೂ ಅವಳಿಜವಳಿ ಮಕ್ಕಳಾಗುವವು. ಶ್ರೀಮಂತ ಸ್ತ್ರೀಯರ ಬಾಳಂತಿತನವೂ ಅಷ್ಟೊಂದು ಮೈಗೆ ಹತ್ತುವದಿಲ್ಲ. ಉಳಿದ ಪರಿಸ್ಥಿತಿಯನ್ನು ಪ್ರತ್ಯೇಕವಾಗಿ ಹೇಳಲಿಕ್ಕೆ ಬೇಡ.

ಈ ರಾಶಿಯ ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಸ್ವಲ್ಪಮಟ್ಟಿಗೆ ಹಯಿಗಯಿ ಮಾಡಿದರೂ ಅದರ ದುಷ್ಪರಿಣಾಮ ಕಂಡು ಬರದಿರಲಾರದು. ಮಾರ್ಚ ೨೩ ರ ನಂತರ ಪರೀಕ್ಷೆಯಾಗುವವರಂತೂ ಬಹಳ ದಕ್ಷತೆಯಿಂದ ಇರಬೇಕು. ಅಭ್ಯಾಸದಲ್ಲಿ ಅನಪೇಕ್ಷಿತ ಅಡಚಣಿಗಳೂ ಅನೇಕ ಸಲ ಕಂಡುಬರುವವು. ಅವುಗಳನ್ನೆದುರಿಸಬೇಕಾದ ಪ್ರಸಂಗವೂ ಬರುವದು. ನವಂಬರ ೩೦ ರಿಂದ ಫೆಬ್ರುವರಿ ೪, ಫೆಬ್ರುವರಿ ೨೪ ರಿಂದ ಮಾರ್ಚ ೧೨, ಮಾರ್ಚ ೨೮ ರಿಂದ ಜೂನ ೨, ಜೂನ ೧೯ ರಿಂದ ಜುಲೈ ೫, ಜುಲೈ ೨೩ ರಿಂದ ಸಪ್ಟಂಬರ ೨೮ ಮತ್ತು ಅಕ್ಟೋಬರ ೧೬ ರ ನಂತರದ ಕಾಲದಲ್ಲಿ ಆಗುವ ಪರೀಕ್ಷೆಗಳಲ್ಲಿ ಹೇಗಾದರೂ ಪಾಸಾಗುವ ಯೋಗವಿದೆ.

ಒಟ್ಟಾರೆ ಈ ವರ್ಷದ ಅಧಾವೆ ತೆಗೆದು ನೋಡಿದರೆ ಶಾರೀರಿಕ ಕೌಟುಂಬಿಕ ಮತ್ತು ಬೌದ್ಧಿಕ ವಿಷಯುಗಳಲ್ಲಿ ಬಹಳ ಸಂಕಷ್ಟಗಳನ್ನೆದುರಿಸಬೇಕಾದ ಪ್ರಸಂಗ ಅನೇಕ ಸಲ ಬಂದರೂ ಔದ್ಯೋಗಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಉತ್ಕರ್ಷದ ಶೀತಲವಾಯು ಜೋರಿನಿಂದ ಬೀಸಹತ್ತುವದೆಂಬಲ್ಲಿ ಸಂದೇಹವಿಲ್ಲ.

ಮೀನ

ಈ ರಾಶಿಯ ಜನರ ಆರೋಗ್ಯ ಡಿಸೆಂಬರ ೨೬ ರ ವರೆಗೆ ಅಷ್ಟೊಂದು ಚೆನ್ನಾಗಿ ಇದ್ದದ್ದು ಕಂಡುಬರುವದಿಲ್ಲ. ಹಿಂದಿನ ವರ್ಷದಂತೆ ವಾತದ ಉಪದ್ರವವು ಯಾವಾಗಾದರೊಮ್ಮೆ ಆಗುವದು. ಅನಂತರ ಮಾರ್ಚ ೨೩ ರ ವರೆಗೆ ಈ ಉಪದ್ರವ ಕಡಮೆಯಾದರೂ ಹೊಟ್ಟೆಯಲ್ಲಿ ಗ್ಯಾಸು ಹಿಡಿಯುವದು, ಸಕಾಲಕ್ಕೆ ಹಸಿವೆಯಾಗದಿರುವದು, ಚಕ್ಕರ ಬರುವದು ಇಂಥ ಕಿರಕಿಳ ತೊಂದರೆಯಾಗುವ ಸಂಭವವಿದೆ. ಆದರೆ ಅನಂತರ ಮಾತ್ರ ಯಾವದೇ ಬಗೆಯ ತೊಂದರೆ ಸಹಸಾ ಉಳಿಯಲಾರದು. ಅಂದಿನಿಂದ ಆರೋಗ್ಯ ಸುಧಾರಿಸುತ್ತ ನಡೆದು ವಯಸ್ಸಿಗೆ ತಕ್ಕಂತೆ ನಿಮ್ಮ ತೂಕವೂ ಹೆಚ್ಚುವದು. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖಃ ವರ್ಷ ಅದರಲ್ಲಿಯೂ ಮಾರ್ಚ ೨೩ ನಂತರ ಬಹಳ ಅನುಕೂಲವಿದೆ. ಅಲ್ಲಿಯ ವರೆಗೆ ಹೆಂಡತಿಗೂಡ ಕ್ಷುಲ್ಲಕ ವಿಷಯುಗಳಲ್ಲಿಆಗಾಗ ತಿಕ್ಕಾಟವುಂಟಾಗುವದು. ಅವಳ ಆರೋಗ್ಯದ ಬಗ್ಗೆಯೂ ಒಂದಿಲ್ಲೊಂದು ಬಗೆಯ ತಕರಾರು ಇದ್ದದ್ದೇ. ಅವಾಂತರ ವಿಷಯಗಳಲ್ಲಿ ದೇಹಸ್ವಾಸ್ಥ್ಯ ಡಿಸೆಂಬರ ೨೬ ರಿಂದ ಬಹಳ ಅನುಕೂಲ. ಏಕತ್ರ ಕುಟುಂಬದಲ್ಲಿಯ ಬಹುತರ ಜನರ ಉನ್ನತಿಯ ಗುರುತು ನಡೆದು ಅವರೆಲ್ಲ ನಿಮ್ಮೊಡನೆ ಪ್ರೇಮದಿಂದ ಇಲ್ಲವೆ ಶ್ರದ್ಧೆಯಿಂದ ನಡೆದುಕೊಳ್ಳುವರು. ಜನೆವರಿ ೧೩ ರ ವರೆಗೆ, ಅನಂತರ ಎಪ್ರಿಲ ೧ ರಿಂದ ಜೂನ ೨೩, ಮತ್ತು ಅನಂತರ ಸಪ್ಟಂಬರ ೨೫ ರ ನಂತರದ ಕಾಲವು ಮಾನಸಿಕ ಸಮಾಧಾನಕ್ಕೆ ವಿಶೇಷ ಅನುಕೂಲವಾಗಿ ಪರಿಣಮಿಸುವದು. ಸ್ಥಾವರ ಆಸ್ತಿಗಿಂತ ಬಹುಮೂಲ್ಯ ಜಂಗಮ ವಸ್ತುಗಳ ಸಂಗ್ರಹ ಮಾಡಲಿಕ್ಕೆ ಈ ವರ್ಷ ಬಹಳ ಅನುಕೂಲವಿದೆ. ಉಳಿದ ಆಪ್ತರ ಸ್ಥಿತಿಗಿಂತ ನಿಮ್ಮ ಸ್ಥಿತಿ ಬಹಳ ಮಟ್ಟಿಗೆ ಸುಧಾರಿಸುವದು. ಆದರೆ ಅವರೊಡನೆ ಮಾತ್ರ ನಿಮ್ಮದು ಅಷ್ಟೊಂದು ಕೂಡಿ ನಡೆಯುವದಿಲ್ಲ. ನಿಮ್ಮ ಮನಸ್ಸಿಗೆ ಒಗ್ಗದಂತಹ ಅನೇಕ ವಿಷಯುಗಳನ್ನು ನೀವು ಸ್ವತಃ ಮಾಡಿರಿ ಇಲ್ಲವೆ ಮಾಡುವವರಿಗೆ ಸಹಾಯಮಾಡಿರಿ ಎಂದು ಅವರು ದುರಾಗ್ರಹ ಹಿಡಿಯುವರು. ವಾಹನಗಳು ನೋಕರ ಚಾಕರರು ಮೊದಲಿಗಿಂತ ಹೆಚ್ಚುವರಾದರೂ ಆಯತ್ತ ಸಮಯದಲ್ಲಿ ಅವರು ಬಹುಶಃ ನಿಮ್ಮ ಹತ್ತರ ಉಳಿಯುವದಿಲ್ಲ. ನೆರೆಹೊರೆಯವರು ಕೆಲ ಮಟ್ಟಿಗೆ ಮತ್ಸರಗ್ರಸ್ತರಾಗುವರು ಇಲ್ಲವೆ




ಕೆಟ್ಟ ರೀತಿಯಿಂದ ನಡೆದುಕೊಳ್ಳುವರು. ಮಿತ್ರ ಸುಖ ಮಾತ್ರ ಬಹಳ ಉತ್ತಮ ಸಿಕ್ಕುವದು ಮತ್ತು ಬಹುತರ ಜನರು ಕಷ್ಟಮಾರ್ಗದಿಂದ ಮುಕ್ತರಾಗಿ ಉನ್ನತಿಯ ಸತ್ಪಥವನ್ನಾಕ್ರಮಿಸ ಹತ್ತುವದನ್ನು ನೀವು ನೋಡುವಿರಿ.

ಈ ರಾಶಿಯ ಸ್ತ್ರೀಪುರುಷರ ವಿವಾಹವಾಗುವದಿದ್ದರೆ ಅವರಿಗೆ ಮಾರ್ಚ ೨೩ ರ ನಂತರವೇ ಬಾಸಿಂಗಬಲವಿದೆ. ಅಂತೆಯೆ ಅದೆಲ್ಲ ಕೂಡಲೆ ಒದಗಿಬಂದು ನಿರ್ವಿಘ್ನದಿಂದ ಸಾಂಗವಾಗುವದು. ವರಕ್ಕೆ ವಧು ಮತ್ತು ವಧುಗೆ ವರ ತನಗಿಂತ ಹೆಚ್ಚು ರೂಪ ಗುಣಯುಕ್ತ ದೊರೆಯುವದು. ಮಾರ್ಚ ೨೩ ರೊಳಗಾಗಿ ಆಗುವ ವಿವಾಹಗಳು ಅಷ್ಟಕ್ಕಷ್ಟೇ ಆಗುವವು. ಅನಂತರ ಮಾತ್ರ ಬಹಳ ಸಮಾರಂಭದಿಂದ ಜರಗುವವು. ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ಇಡಿ ವರ್ಷ ಅದಕ್ಕೆ ಅನುಕೂಲ ಯೋಗವಿದೆ. ಅದರಲ್ಲಿಯೂ ಮಾರ್ಚ ೨೩ ಕ್ಕೆ ಮೊದಲು ಆದರೆ ವೆಚ್ಚ ಅಳತೆಮೀರಿ ಆಗುವದು. ಅನಂತರ ಜರಗಿದರೆ ನೀವು ಲೆಕ್ಕ ಹಾಕಿದ್ದಕ್ಕಿಂತ ಕಡಮೆ ಹಣ ವೆಚ್ಚವಾಗುವದು. ಅಳಿಯ ಮತ್ತು ಸೊಸೆ ಬಹಳ ಅನುರೂಪ ದೊರೆಯುವರು.

ಧಂದೆ ಮತ್ತು ಕೂಲಿಯವರಿಗೆ ಈ ವರ್ಷ ಮಾರ್ಚ ೨೩ ರ ವರೆಗೆ ಬಹಳ ಮಂದ ಮತ್ತು ಬಹುತರ ಕೆಲಸಗಳಲ್ಲಿ ಎರಡನೆಯವರ ತಂತ್ರಗಳಿಂದ ವರ್ತಿಸುವ ಇಲ್ಲವೆ ಅವರ ನೆಳಲನ್ನು ಆಶ್ರಯಿಸಬೇಕಾದ ಪ್ರಸಂಗಬರುವಯೋಗವಿದೆ. ಅನಂತರ ಮಾತ್ರ ಒಳ್ಳೆ ಯಶಸ್ಸು ಲಾಭ ಮತ್ತು ಪ್ರತಿಷ್ಠೆ ಸಿಕ್ಕುವವು. ಇದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಯಾರ ಯೋಗವು ಮೂಲತಃ ಬಲಿಷ್ಠವಾಗಿದೆಯೋ ಅಂಥವರಿಗೆ ಮಾತ್ರ ಅಪೂರ್ವ ಭಾಗ್ಯೋದಯವಾಗುವದು. ನೋಕರಿ ಮಾಡುವವರಿಗೆ ದಿಸೆಂಬರ ೨೬ ರ ವರೆಗೆ ಹೆಚ್ಚು ಮತ್ತು ಮುಂದೆ ಮಾರ್ಚ ೨೩ ರ ವರೆಗೆ ಮಧ್ಯಮ ಹೀಗೆ ಪರಿಷ್ಕರ ತೊಂದರೆಯನ್ನು ಅನುಭವಿಸಬೇಕಾದ ಪ್ರಸಂಗ ಬರುವದು. ಧಂದೆ ಮಾಡುವವರಿಗೂ ಈ ವರ್ಷ ಈ ಅವಧಿಯಲ್ಲಿ ಅಷ್ಟೊಂದು ಅನುಕೂಲವಿಲ್ಲ. ಮೊದಲು ಗಿರಾಕಿಗಳ ಬಗ್ಗೆ ಅಸಮಾಧಾನಗೊಂಡರೂ ಅನಂತರ ಒಳ್ಳೆ ಸ್ಥೈರ್ಯಬಂದು ಗಿರಾಕಿಗಳು ಅತ್ಮ ಸಂತೋಷದಿಂದಲೆ ವ್ಯವಹರಿಸುವರು. ಅದರಲ್ಲಿಯೂ ಜನೆವರಿ ೧೩ ರ ವರೆಗೆ ಮತ್ತು ಅನಂತರ ಮಾರ್ಚ ೨೩ ರಿಂದ ಜೂನ ೨೩ ಮತ್ತು ಅಗಸ್ಟ ೮ ರಿಂದ ಮುಂದಿನ ಕಾಲದಲ್ಲಿ ಅಮೋಘ ಲಾಭ ಸಿಕ್ಕುವದು. ಅಲ್ಲದೆ ಲಾಟರಿ, ರೇಸು, ಸಟ್ಟಾ, ಕಳ್ಳ ಇಲ್ಲವೆ ಸರಳ ಪೇಟೆ ವ್ಯವಹಾರ, ಲಂಚ, ಭೂಗತ ದ್ರವ್ಯ ಸಿಕ್ಕುವದು ಮತ್ತು ಇನ್ನೂ ಕೆಲ ಚಮತ್ಕಾರಿಕ ರೀತಿಯಿಂದ ಆಕಸ್ಮಿಕ ಇಲ್ಲವೆ ಗುಪ್ತ ಲಾಭ ಆಗುವ ಪ್ರಬಲ ಯೋಗ ಇದೆ.

ಈ ಬಗೆಯ ಯೋಗದಿಂದ ಜನೆವರಿ ೨ ರ ವರೆಗೆ ಮತ್ತು ಅನಂತರ ಜನೆವರಿ ೨೬ ರಿಂದ ಫೆಬ್ರುವರಿ ೧೯, ಮಾರ್ಚ ೧೫ ರಿಂದ ಎಪ್ರಿಲ ೯, ಮೇ ೪ ರಿಂದ ೩೧ ಮತ್ತು ಜೂನ ೧೫ ರಿಂದ ಜುಲೈ ೧ ರ ವರೆಗೆ ವಿಶೇಷ ಫಲ ಕಂಡುಬರುವದು. ದೊಡ್ಡ ವ್ಯಾಪಾರಿಗಳಿಗಿಂತ ಸಣ್ಣ ವ್ಯಾಪಾರಿಗಳಿಗೆ ಮತ್ತು ಮಧ್ಯಮ ತರಗತಿಯ ಅಧಿಕಾರ ಇಲ್ಲವೆ ದರ್ಜೆ ಇದ್ದ ನೋಕರರಿಗೆ ಈ ವರ್ಷ ಹೆಚ್ಚು ಪ್ರಸನ್ನದಾಯಕವಿದೆ. ಹಳ್ಳಿ ಹಳ್ಳಿಗೆ ಮತ್ತು ಮನೆ ಮನೆಗೆ ಹೋಗಿ ಮಾರಾಟ ಮಾಡುವವರು ಬೆಣ್ಣೆ ತುಪ್ಪ ಮತ್ತು ಎಲ್ಲ ಬಗೆಯ ಎಣ್ಣೆ ವ್ಯಾಪಾರಸ್ಥರು ಯುದ್ಧದ ಮತ್ತು ಇತರ ಐಷಆರಾಮದ ಸಾಮಾನು ಮದ್ಯ ಮಾರುವವರು ಮತ್ತು ಕಾರಕಾನೆದಾರರು, ಔಷಧಿಗಳಕಾರಖಾನೆದಾರರು ಮತ್ತು ಮಾರಾಟಗಾರರು ಎಲ್ಲ ಬಗೆಯ ಸಮುದ್ರ ದಂಡೆಯ ಮತ್ತು ಅದರಲ್ಲಿಯ ಸರಕುಗಳ ವ್ಯಾಪಾರಸ್ಥರು, ಜ್ಯೋತಿಷಿಗಳು, ಸಾಮುದ್ರಿಕರು ಭವಿಷ್ಯಕಥಕರುಮತ್ತು ಕೇವಲ ಹೆಣ್ಣು ಮಕ್ಕಳ ಉಡುಪುಮಾಡುವವರು ಅವರ ಅಲಂಕಾರ ಮತ್ತು ವಸ್ತ್ರಗಳನ್ನು ಸಿದ್ಧಪಡಿಸುವವರು ಮತ್ತು ಮಾರಾಟ ಮಾಡುವವರು ದನಕರುಗಳ ವ್ಯಾಪಾರ ಮಾಡುವವರು, ಡೇರಿಯವರು, ಅರಣ್ಯ ಶಾಖೆಯಲ್ಲಿಯ ಅಂಚೆ ಶಾಖೆಯಲ್ಲಿಯ, ವಿಮಾ ಕಂಪನಿಗಳಲ್ಲಿಯ ಯಾಂತ್ರಿಕ ಧಂದೆಯಲ್ಲಿಯ ಇಲ್ಲವೆ ಎಂಜಿನಿಯರಿಂಗ ಶಾಖೆ

ಆಯಿಲ್ ಎಂಜಿನುಗಳು ಹಾಗೂ ಇಲೆಕ್ಟ್ರಿಕ್ ಮೋಟಾರಗಳು



ಪೆಟ್ಟರ, ಕಿರ್ಲೋಸ್ಕರ ಪೆಟ್ಟರ ಮತ್ತು ಪೆಟ್ಟರ ಫೀಲ್ಡಿಂಗ ಆಯಿಲ್ ಎಂಜಿನುಗಳಿಗೆ ಹಾಗೂ ಕಿರ್ಲೋಸ್ಕರ ಬ್ರಶ್ ಇಲೆಕ್ಟ್ರಿಕ್ ಮೋಟಾರಗಳ ಬಗ್ಗೆ ಬೆಳಗಾವಿ ಮತ್ತು ಕಾರವಾರ ಜಿಲ್ಹೆಗಳಿಗೆ ನಮ್ಮನ್ನು ಸೋಲ ಡಿಸ್ಟ್ರಿಬ್ಯೂಟರರನ್ನಾಗಿ ಮೆಸರ್ಸ ಪ್ಯಾರೀ ಆ್ಯಂಡ ಕಂಪನಿಯವರು ನೇಮಿಸಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ.

—ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿಯು ಆನಂದದಾಯಕವಾಗಲಿ—

ಮೆಸರ್ಸ ವಿಜಯಾ ಎಂಜಿನಿಯರಿಂಗ ಆ್ಯಂಡ ಮಶಿನರಿ ಕಂ.

ಕೊಪ್ಪೀಕರ ರೋಡ..ಹುಬ್ಬಳ್ಳಿ

ಶಾಖೆಗಳು:— **ವಿಜಾಪೂರ, ಸೊಲ್ಲಾಪುರ.** ಹೆಡ್ ಆಫೀಸು;— **೧೩೪, ಮೆಡೋಜ ಸ್ಟ್ರೀಟ, ಫೋರ್ಟ, ಮುಂಬಯಿ**

ಯಲ್ಲಿಯ ನೋಕರರು ಮತ್ತು ಉದಿತೋದಿತ ಲೇಖಕರಿಗೆ ಬಹಳ ಅನುಕೂಲವಿದ್ದು ಅವರ ಲೌಕಿಕ ಮತ್ತು ದುಡ್ಡು ಬಹಳ ಹೆಚ್ಚುವದು. ಬದಲಿ ಮಾಡಿಕೊಳ್ಳುವದಿದ್ದರೆ ಅವರು ಮಾರ್ಚ ೨೩ ರ ನಂತರವೇ ಆ ಬಗೆಯ ಪ್ರಯತ್ನ ಮಾಡ ತಕ್ಕದ್ದು. ಅಂದರೆ ಯೋಗ್ಯ ಸ್ಥಳಕ್ಕೆ ಆಗುವದು. ಅದಕ್ಕೂ ಮೊದಲು ಪ್ರಯತ್ನಿಸಿದರೆ ಇಲ್ಲವೆ ತಾನಾಗಿಯೇ ಆದರೆ ಅನನುಕೂಲ ಸ್ಥಳಕ್ಕೆ ಆಗುವ ಸಂಭವವಿದೆ. ಅದರಂತೆಯೇ ಪ್ರತ್ಯಕ್ಷ ಭೆಟ್ಟಿಯ ಕೆಲಸಕ್ಕೆ ಮಾರ್ಚ ೨೩ ರ ವರೆಗೆ ದೈವ ಪ್ರತಿಕೂಲವಿದೆಯೆಂದು ತಿಳಿದು ನಡೆದು ಕೊಳ್ಳಬೇಕು. ಅನಂತರ ಮಾತ್ರ ನಾಲಗೆ ಯನ್ನು ಬೇಕಾದಹಾಗೆ ಹರಿಬಿಡಬೇಕು. ಪತ್ರ ವ್ಯವಹಾರ ಮತ್ತು ಇತರ ಲೇಖನ ಕೆಲಸಗಳಿಗೆ ಫೆಬ್ರುವರಿ ೪ ರಿಂದ ೨೪, ಮಾರ್ಚ ೧೨ ರಿಂದ ೨೮, ಜೂನ ೨ ರಿಂದ ೧೯, ಜುಲೈ ೫ ರಿಂದ ೨೩ ಮತ್ತು ಸಪ್ಟಂಬರ ೨೮ ರಿಂದ ಅಕ್ಟೋಬರ ೧೬ ಈ ಮಧ್ಯಾಂತರ ಅವಧಿಯು ಬಹಳ ಸುಕರ ವಾಗಿ ಪರಿಣಮಿಸುವದು. ನೂರಿನ್ನೂರು ಮೈಲುಗಳ ಪ್ರವಾಸ ಅನೇಕ ಸಲ ಆಗುವದು. ಒಟ್ಟಾರೆ ಧಂದೆ ಉದ್ಯೋಗಗಳ ದೃಷ್ಟಿಯಿಂದ ಈ ವರ್ಷದ ಪೂರ್ವಾರ್ಧಕ್ಕಿಂತ ಉತ್ತರಾರ್ಧ ಹೆಚ್ಚು ಅನುಕೂಲವಿದೆ.

ವಾದ ವಿವಾದಗಳಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳಿಂದ ಪ್ರತ್ಯಕ್ಷವಾಗಿ ಮತ್ತು ಗುಪ್ತ ರೀತಿಯಿಂದ ಛಲನೆ ಅನೇಕ ಸಲ ನಡೆಯು ವದು. ಮಾರ್ಚ ೨೩ ರ ವರೆಗೆ ಅಂದರೆ **೧೨ ನೇ ಗುರು** ಇರುವವರೆಗೆ ಅವರದೇ ಮೇಲ್ಗೈ. ಅನಂತರ ಅಂದರೆ **ಗುರು** ೧ ನೇ ಅಂದರೆ **ಜನ್ಮಸ್ಥಾನ**ಗತನಾದರೆ ನಿಮ್ಮದೇ ಮೇಲ್ಗೈಯಾಗಿ ಶತ್ರುಗಳು ಬಹಳಮಟ್ಟಿಗೆ ಪರಾಜಿತರಾಗುವರು. ನೀವು ಸಂಪೂರ್ಣ ಯಶಸ್ವಿಗಳಾಗುವಿರಿ. ಅವರಲ್ಲಿ ಒಬ್ಬಿಬ್ಬರು ಡಿಸೆಂಬರ ೨೬ ರ ನಂತರ ನಿಜಧಾಮಕ್ಕೂ ಹೋಗುವ ಯೋಗವಿದೆ. ವಿಶೇಷವಾಗಿ ಅವರ ಸೋಲಿಗೆ ಮಾರ್ಚ ೧೨ ರಿಂದ ೨೮, ಜೂನ ೨ ರಿಂದ ೧೯ ಮತ್ತು ಸಪ್ಟಂಬರ ೨೫ ರ ನಂತರದ ಕಾಲವು ಹೆಚ್ಚು ಅನುಕೂಲವಿದೆ. ಡಿಸೆಂಬರ ೨೬ ರ ನಂತರ ಎಂಥ ಸಂಕಟವಿದ್ದರೂ ನಾವ ಕಾಶವಾಗಿ ಮತ್ತು ತಾನಾಗಿಯೇ ಇಲ್ಲದಂತಾ ಗುವದು. ಪರಸ್ತ್ರೀಯರ ಬಗ್ಗೆ ನೀವು ಎಷ್ಟೇ ಗಂಭೀರ ವೃತ್ತಿಯವರಾಗಿದ್ದರೂ ಚಂಚಲ ಮನಸ್ಸಿನವರಾಗುವ ಯೋಗ ಈ ವರ್ಷ ಬಹಳ ಮಟ್ಟಿಗೆ ಇದೆ.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಮಾರ್ಚ ೨೩ ರ ವರೆಗೆ ಅದು ಕಿಂಚಿತ್ ಕಷ್ಟ ದಿಂದ ಆಗುವದಿದ್ದರೂ ಬಹು ಜನರಿಗೆ ಗಂಡು ಮಗು ಹುಟ್ಟಿದ ಸಂತೋಷವೆನಿಸುವದು. ಮತ್ತು ಈ ಅವಧಿಯ ನಂತರ ಹೆರಿಗೆಯಾದರೆ ಅದು ಅತ್ಯಂತ ಸುಲಭವಾಗಿ ಆಗುವದಾದರೂ ಬಹುತರ ಜನರಿಗೆ ಹೆಣ್ಣು ಹುಟ್ಟುವದರಿಂದ ಮನಸ್ಸಿಗೆ ಸ್ವಲ್ಪ ಬೇಜಾರವೆನಿಸುವದು. ಗಂಡು ಮಕ್ಕಳು ಕೆಲ ಮಟ್ಟಿಗೆ ಅಶಕ್ತರಾದರೆ ಹೆಣ್ಣು ಹುಡುಗರು ಬಹಳ ಸಶಕ್ತರಾಗುವ ಯೋಗ ವಿದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೨೩ ರ ವರೆಗೆ ಆಗುವದಿದೆಯೋ ಅಂಥವರು ಒಳ್ಳೆ ಜೋರಿನಿಂದ ಅಭ್ಯಾಸ ಮಾಡಿದರೆ ಮಾತ್ರ ಸರಸ್ವತಿ ಪ್ರಸನ್ನಳಾಗುವ ಯೋಗವಿದೆ. ಅನಂ ತರ ಯಾರ ಪರೀಕ್ಷೆ ಆಗುವದಿದೆಯೋ ಅವರು ಮಾತ್ರ ಬಹಳ ನಿಷ್ಕಾಳಜಿಯಿಂದ ಇದ್ದು ಪರಿ ಣಾಮ ಹೊರಬೀಳುವದಕ್ಕಿಂತ ಮೊದಲೆ ಪೇಡೆ ಕೊಂಡುಕೊಂಡು ಇಟ್ಟರೂ ಅದೇನೂ ನಿರ ರ್ಥಕವಾಗಿ ಪರಿಣಮಿಸದು.

ಒಟ್ಟಾರೆ ಈ ವರ್ಷ ಸಿಂಹಾವಲೋಕನ ಮಾಡಿದರೆ ಎಲ್ಲ ವಿಷಯಗಳಲ್ಲಿ ಮೊದಲಿನ ನಾಲ್ಕೂವರೆ ತಿಂಗಳು ಎಷ್ಟೋ ಅನುತ್ಸಾಹ ದಿಂದ ಕಳೆಯಬೇಕಾಗುವದೋ ಅಷ್ಟೇ ಉತ್ಸಾಹದಿಂದ ಮುಂದಿನ ಕಾಲವನ್ನು ನೀವು ಕಳೆಯುವಿರಿ ಎಂಬುದು ಕಂಡುಬರುವದು.

—:: ಶುಭಂ ಭವತು ::—

ಸೂಚನೆ

ಪ್ರತಿಯೊಂದು ಜನ್ಮರಾಶಿಯ ಎಲ್ಲ ಗ್ರಹಗಳ ವಿಚಾರವನ್ನು ಸಾಕಲ್ಯವಾಗಿ ಮಾಡಿ ಅನುಕೂಲ ಪ್ರತಿಕೂಲ ಫಲ ಗಳ ಪರಿಣಾಮ ಪ್ರತಿಯೊಬ್ಬರ ಮೇಲೆ ಎಂತಾಗುವದೆಂಬುದರ ಸ್ಥೂಲ ಅನು ಮಾನವು ಇದರ ಮೇಲಿಂದ ಬಹಳ ಮಟ್ಟಿಗೆ ಆಗುವದು.

ವಾಸ್ತವಿಕವಾಗಿ ವೈಯಕ್ತಿಕ ಭವಿಷ್ಯ ವನ್ನು ಅವರವರ ಜನ್ಮಕುಂಡಲಿಯ ಮೇಲಿಂದಲೆ ಹೇಳಿದ್ದಾದರೆ ಅದು ಅಕ್ಷರಶಃ, ಕನಿಷ್ಠ ಬಹಳ ಮಟ್ಟಿಗೆ ಯಾದರೂ ನಿಜವಾಗಿ ಕಂಡುಬರುವದು ಇದು ಸ್ಪಷ್ಟವೇ ಇದೆ.

ಆದರೂ ಆಯಾ ರಾಶಿಯವರಿಗೆ ಈ ವರ್ಷ ಸಾಮಾನ್ಯವಾಗಿ ಸುಖ ದುಃಖಗಳ ಪರಿಣಾಮ ಎಂತಾಗುವದೆಂಬದನ್ನು ತಿಳಿದುಕೊಳ್ಳಲಿಕ್ಕೆ ಈ ವರ್ಷಭವಿಷ್ಯವು ಬಹಳ ಮಟ್ಟಿಗೆ ಉಪಯೋಗಬೀಳುವ ದೆಂಬಲ್ಲಿ ಸಂದೇಹವಿಲ್ಲ. ಅದರಂತೆಯೇ ಜನ್ಮಲಗ್ನ ಮತ್ತು ಜನ್ಮರಾಶಿ ಇವೆರಡರ ಭವಿಷ್ಯವನ್ನು ಓದಿ ಅದಕ್ಕನುಸಾರವಾಗಿ ನಡೆಯಹತ್ತಿದರೆ ಶುಭಾಶುಭ ಫಲಗಳ ಬಗ್ಗೆ ಜಾಗ್ರತರಾಗಿ ಉಳಿಯಲು ಅವಕಾಶ ಸಿಕ್ಕುವದು. ಶುಭ ಫಲಗಳ ಬಗ್ಗೆ ಹೆಚ್ಚು ಪ್ರಯತ್ನ ಮಾಡಿ ಈ ವರ್ಷದ ಭವಿಷ್ಯ ಮಾರ್ಗವನ್ನು ಹೆಚ್ಚು ಸುಕರ ಮಾಡಿ ಕೊಳ್ಳಲು ಬರುವದೆಂಬದನ್ನು ನಿಶ್ಚಿತವಾಗಿ ತಿಳಿದುಕೊಳ್ಳಬೇಕು.

—ನಮಸ್ತೇ!

ಮೋಟರಿನ ಎಲ್ಲ ಬಗೆಯ ವಿಮೆ ಅಲ್ಪ ದರದಲ್ಲಿ ಇಳಿಸುವ
ಕರ್ನಾಟಕ ಮಹಾರಾಷ್ಟ್ರಗಳಲ್ಲಿಯ ಪ್ರಮುಖ ವಿಮೆ ಕಂಪನಿ ಅಂದರೇನೆ

ಇನವ್ಹೆಸ್ಟಮೆಂಟ ಟ್ರಸ್ಟ ಆ್ಯಂಡ
ಇನ್ಶುರನ್ಸ ಕಾರ್ಪೊರೇಶನ್ ಲಿ.,

ಹೆಡ್ ಆಫೀಸು : ಫೋರ್ಟ ರೋಡ, ಬೆಳಗಾವಿ ಪೊ. ಬಾ ನಂ. ೫೯

ಶಾಖೆಗಳು :— ಪುಣೆ, ಕೊಲ್ಹಾಪೂರ, ನಾಶಿಕ ಹಾಗು ಹೈದರಾಬಾದ (ದ)

ನಮ್ಮ ವೈಶಿಷ್ಟ್ಯಗಳು :—

- ಪ್ರೀಮಿಯಮ್‌ದ ದರವು ಅತ್ಯಂತ ಅಗ್ಗವಾದುದು
- ಕಂತಿನಿಂದ ಪ್ರೀಮಿಯಮ್ಮು ತುಂಬುವ ಸವಲತ್ತು
- ಇತರ ಅನೇಕ ಸವಲತ್ತುಗಳು

ವಿಶೇಷ ಸಂಗತಿಗಳಿಗಾಗಿ :— ವಿಮೆ ಇಳಿಸುವವರು, ಎಜಂಟರು ಸಮಕ್ಷಮ ಭೆಟ್ಟಿಯಾಗಬೇಕು ಇಲ್ಲವೆ ಬರೆಯಬೇಕು

ನಮ್ಮ ಕಂಪನಿಯ ಯಾವತ್ತೂ ಗ್ರಾಹಕರಿಗೆ,
ಎಜಂಟರಿಗೆ ಹಾಗು ಹಿತಚಿಂತಕರಿಗೆ ಈ ದೀಪಾವಳಿಯು
ಸುಖದಾಯಕವು 'ಆನಂದದಾಯಕವು ಆಗಲಿ.

ನಮ್ಮ ಸರ್ವತಂತ್ರ ಸ್ವತಂತ್ರ ಗಣರಾಜ್ಯದ ಘಟನೆಯ ತತ್ವಗಳನ್ನು ನಮ್ಮ ರೇಲುಗಾಡಿಗಳಲ್ಲಿ ಅಕ್ಷರಶಃ ಆಚರಣೆಗೆ ತರಲಾಗುತ್ತಿದೆಯೆಂಬ ಕಲ್ಪನೆ ತಮಗೆ ಎಂದಾದರೂ ಬಂದಿದ್ದಿತೆ? ವಿರಾಮ, ವಿಶ್ರಾಂತಿ, ಸರಿಸಮಾನತೆ, ವ್ಯಕ್ತಿಸ್ವಾತಂತ್ರ್ಯ, ಆರೋಗ್ಯಸುಧಾರಣೆ ಇವೆಲ್ಲ ತತ್ವಗಳು ಪ್ಯಾಸೆಂಜರ ಗಾಡಿಗಳಲ್ಲಿ ದಿನವೂ ಆಚರಣೆಗೆ ಬರುತ್ತಿವೆ. ಈ ಘಟನೆಯ ಗಾಡಿ ನಿಮ್ಮನ್ನು ನಡುದಾರಿಯಲ್ಲಿ ಕೈ ಬಿಟ್ಟು ಹೋದರೆ ಆಪದ್ಬಾಂಧವ ಮಾಲುಗಾಡಿಯಂತೂ ಇದ್ದೇ ಇದೆಯಲ್ಲ . . . .

ಘಟನೆಯ ಗಾಡಿ

ತಾವು ಮಾಲುಗಾಡಿಯಿಂದ ಎಂದಾದರೂ ಪ್ರವಾಸ ಮಾಡಿದ್ದೀರಾ? ಅದೂ ಹೋಗಲಿ, ಲಕ್ಷಾವಧಿ ಚೌರಸ ಮೈಲುಗಳ ನಮ್ಮ ದೇಶದಲ್ಲಿ ಕೆಲವೆ ಸಾವಿರ ಮೈಲು ರೈಲು ದಾರಿ ಇದ್ದುದಕ್ಕೆ ಇಂತಹ ಗಾಡಿಯನ್ನಾದರೂ ತಮ್ಮಲ್ಲಿ ಎಷ್ಟು ಜನ ನೋಡಿರಬಹುದೊ? ಅಂತೂ ಈಗ ಆ ಬಗ್ಗೆ ನನ್ನ ಹರಟೆಯು ಪ್ರಾರಂಭವಾಗಬೇಕಾದ್ದರಿಂದ ಸ್ವಲ್ಪದರಲ್ಲಿ ಅದರ ಕಲ್ಪನೆಯನ್ನು ತಮಗೆ ಕೊಡುವೆ. ಮುಂದೆ ಒಂದು ಎಂಜಿನು, ತೀರ ಕೊನೆಗೆ ಒಬ್ಬ ಗಾರ್ಡ ಎಂಬವನ ಒಂದು ಕಂಪಾರ್ಟುಮೆಂಟು; ನಡುವೆ ಮಾತ್ರ ಸಾಮಾನ್ಯ ಭಾರತೀಯನ ಹುಟ್ಟು-ಸಾವುಗಳ ನಡುವಿನ ಜೀವನದಲ್ಲಿಯಂತೆ ಚೈತನ್ಯದ ಸುಳಿವು ಕೂಡ ಇರುವುದಿಲ್ಲ. ಒಂದೇ ಒಂದು ವೈಶಿಷ್ಟ್ಯ ಈ ಗಾಡಿಗೆ; ಅದೆಂದರೆ ಎಂಜಿನು ಬೇಕಾದಾಗ ಹಳಿ ಬಿಟ್ಟು ಸರಿಯಬಹುದು. ಯಾಕಂದರೆ, ಈ ಎಂಜಿನು ಸಾಮಾನ್ಯವಾಗಿ ಒಬ್ಬ ಸುಶಿಕ್ಷಿತ ತರುಣನಂತೆ, ಎಲ್ಲ ಕಡೆ ಅರ್ಜಿ ಹಾಕಿ ಎಲ್ಲಿಯೂ ಕೆಲಸ ದೊರಕದ ತರುಣನಂತೆ, ಎಲ್ಲ ಕಡೆ ಓಡಾಡಿ ಇನ್ನೆಲ್ಲಿಯೂ ಉಪಯೋಗಕ್ಕೆ ಬಾರದ ಎಂಜಿನೇ ಈ ಗಾಡಿಗೆ ಜೋಡಿಸಲ್ಪಡುವದರಿಂದ ಆ ತರುಣನಂತೆ ಇದೂ ಹಾದಿ ಬಿಟ್ಟು ಹೋಗುವದು, ಪಾಪ! ಅದರದಾದರೂ ತಪ್ಪೇನು? ಅಷ್ಟೊಂದು ಕಲಿತ ವಿಚಾರಶಕ್ತಿಯಿದ್ದ ತರುಣನೆ ಹಾದಿಯನ್ನು ಬಿಡುವಾಗ ಅಜ್ಞಾನವೆಂಬ ಅಂಧಕಾರದ ಮೂರ್ತಿಯಂತಿದ್ದ ಈ ಅಚೇತನ ಎಂಜಿನು ಹಾದಿಯನ್ನು ಬಿಟ್ಟು ನಡೆದರೆ ಆಶ್ಚರ್ಯವೇನು?

ಆದರೂ ಕೆಲವೊಂದು ಆಶ್ಚರ್ಯದ ಘಟನೆಗಳು ನನ್ನ ಒಂದು ಪ್ರವಾಸದಲ್ಲಿ ನಡೆದುವು; ಅಥವಾ ನನ್ನ ಪ್ರವಾಸವು ಘಟನೆಯಲ್ಲಿ ನಡೆಯಿತು ಎಂದು ಹೇಳಬಹುದು. ಯಾಕೆಂದರೆ ಸ್ವತಂತ್ರ ಭಾರತದ ಘಟನೆಯ ಕಲಮಿಗನುಸಾರವಾಗಿ ಪ್ರವಾಸಮಾಡುವ ಪ್ರಸಂಗ ಬಂದಿತು. ಆ ಅನುಭವವನ್ನು ಬರೆಯುವ ಮುಂಚೆ ಒಂದು ಸಂಗತಿಯನ್ನು ಹೇಳಲೇಬೇಕಾಗಿದೆ. ಹೊಸ ಘಟನೆಯ ೩ ನೆಯ ಭಾಗದಲ್ಲಿ ಕಲಮು ೧೯ (೧) ರಲ್ಲಿ "ಎಲ್ಲ ನಾಗರಕರಿಗೆ ಇಡಿಯ ಭಾರತ ಕ್ಷೇತ್ರದಲ್ಲಿ ಪುಕ್ಕಟೆಯಾಗಿ ಸಂಚರಿಸುವ ಹಕ್ಕು ಇದೆ" ಎಂದು ಹೇಳಿದೆ. ಈ ಮಾತಿನ ಬಗ್ಗೆ ತಮಗೆ ಸಂಶಯವಿದ್ದರೆ ಘಟನೆಯ ಕಲಮನ್ನು ಮೂಲ ಇಂಗ್ಲಿಶದಲ್ಲಿ ಇದ್ದಂತೆಯೆ ಕಾಣಿಸುವೆ:—

"All citizens shall have the right to move freely throughout the territory of India"

ಇಂಗ್ಲಿಶದಲ್ಲಿ free ಎಂಬ ಶಬ್ದವನ್ನು "ಫ್ರೀ ಪಾಸ" ಎಂಬ ರೂಪದಲ್ಲಿ ಇಂಗ್ಲಿಶ ಅರಿಯದವರು ಕೂಡ ಅರ್ಥಮಾಡಿಕೊಳ್ಳಬಹುದಾಗಿದೆ. "ಫ್ರೀ" ಎಂದರೆ ಉಚಿತ, ಪುಕ್ಕಟೆ. ಇದನ್ನು ಪ್ರತಿಯೊಬ್ಬ ನಾಗರಕನು ಸ್ಪಷ್ಟವಾಗಿ ತಿಳಿದುಕೊಳ್ಳತಕ್ಕದ್ದು. ಇಂದಿಲ್ಲ ನಾಳೆ, ಕೊನೆಗೆ ಇನ್ನು ಹದಿನಯ್ದು ವರ್ಷಗಳ ತರುವಾಯ ಇಂಗ್ಲಿಶ ಭಾಷೆಯ ಉಚ್ಚಾಟನವಾದರೆ ನಮಗೆ ಪುಕ್ಕಟೆ ಪ್ರವಾಸದ ಹಕ್ಕು ಇದೆ ಎಂಬುದು ನಮ್ಮ ಮಕ್ಕಳು-ಮೊಮ್ಮಕ್ಕಳಿಗೆ ತಿಳಿಯದೆ ಹೋಗಬಹುದಾಗಿದೆ. ಆದುದರಿಂದ ಈಗಿನಿಂದಲೆ ಆ ಹಕ್ಕನ್ನು ಕಾರ್ಯಕಾರಿ ಮಾಡಲು ನಾವು ಯತ್ನಿಸಬೇಕು. ಇಷ್ಟೊಂದು ಉಪೋದ್ಘಾತದ ತರುವಾಯ ಇನ್ನು ಮುಖ್ಯ ವಿಷಯದತ್ತ ಹೊರಳೋಣ. ನನ್ನ ಪ್ರವಾಸವೊಂದನ್ನು ಸಂದರ್ಭಿಸಿ ನಾನು ಈಗ ಬರೆಯುತ್ತಿರುವೆನಷ್ಟೆ? ಆ ಪ್ರವಾಸದಲ್ಲಿ ಮೇಲ್ಕಾಣಿಸಿದ ಹಕ್ಕನ್ನು ನಾನು ಕಾರ್ಯಕಾರಿ ಮಾಡಿರುವೆ, ಪ್ರವಾಸದ ಕೆಲ ಭಾಗದ ಮಟ್ಟಿಗಾದರೂ ಮಾಡಲು ನಾನು ಶಕ್ತನಾದೆ ಎಂಬುದನ್ನೆ ಹೆಮ್ಮೆಯಿಂದ ತಮ್ಮೆದುರು ಕಾಣಿಸಬೇಕೆಂದಿದ್ದೇನೆ.

'ಶ್ರೀರಂಗ ಪ್ರಣೀತ'
ತಲೆಹರಟೆಯೊಂದು

ದಾಸ್ಯವು ಅನೇಕ ವರ್ಷಗಳಿಂದ ಮೈಯುಂಡಿದ್ದರಿಂದಲೂ ಸ್ವಾತಂತ್ರ್ಯ ಇನ್ನೂ ಹೊಸತಾದದ್ದರಿಂದಲೂ ಸ್ವತಂತ್ರ ಭಾರತ ಘಟನೆಯ ಕಲಮುಗಳನ್ನು ಇನ್ನೂ ಪಾಠ ಮಾಡದ್ದರಿಂದಲೂ ಪ್ರವಾಸವನ್ನು ಪ್ರಾರಂಭಿಸುವಾಗ ನಾನು ಟಿಕೆಟ್ಟನ್ನೇ ಕೊಂಡುಕೊಂಡೆ, ಮತ್ತು ಒಂದು ಜೀವಂತ ಗಾಡಿಯನ್ನು (ಇದಕ್ಕೆ ಪ್ಯಾಸೆಂಜರ ಟ್ರೇನ್ ಎನ್ನುವರು) ಹತ್ತಿದೆನು. ದಾರಿಯಲ್ಲಿ ಎಲ್ಲಿಯೊ ಮಳೆಯಾಗಿತ್ತೆಂದೊ ಇಲ್ಲವೆ ಇಂಜಿನ್‌ದ ಎಲ್ಲ ಗಾಲಿಗಳು ಸಮನಾಗಿದ್ದಿಲ್ಲವೆಂದೊ ಇಲ್ಲವೆ ಹಳಿಗಳು ಸಂಪನ್ನು ಹೂಡಿದ್ದುವೆಂದೊ ಯಾವುದೊ ಕಾರಣಕ್ಕಾಗಿ ಗಾಡಿ ಒಂದೇ ಗಂಟೆ ತಡವಾಗಿ ಬಂದಿತು. ಹೇಳುವ ಕಾರಣವಿಷ್ಟೇ, ಆಫೀಸಿಗೆ ತಡಮಾಡಿ ಹೋದರೆ ದಂಡವನ್ನು ಮಾಡುವಂತೆ ತಡಮಾಡಿ ಬರುವ ಗಾಡಿಗೆ ದಂಡವಿಲ್ಲ. ಆದುದರಿಂದ

ಚುನಾವಣೆಯಲ್ಲಿ ಕೊಟ್ಟ ವಚನಗಳಂತೆ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳಲು ಗಾಡಿ ಎಷ್ಟು ತಡಮಾಡಿ ಬಂದರೂ ನಾವು ನಿರುಪಾಯರಾಗಿರುತ್ತೇವೆ. ಮುಖ್ಯ, ಹಣವನ್ನು ಕೊಟ್ಟು ಮುಂಗಡವಾಗಿಯೆ ಟಿಕೆಟ್ಟನ್ನು ಕೊಂಡುದರಿಂದ ಗಾಡಿ ಬಂದರೆ ಸಾಕು ಎಂದು ಹೊರಹೊರಗೆ ಉಲ್ಲಾಸವನ್ನು ತೋರಿಸುತ್ತಲೆ ನಾವು ದಾರಿಯನ್ನು ಕಾಯಬೇಕಾಗುವುದು. ಅದರಂತೆ ಕಾದೆವು.

ಈಗ ಒಂದು ಪ್ರಶ್ನೆ, ಗಾಡಿ ತಡ ಮಾಡಿದರೆ ಪ್ರವಾಸಿಕರ ವ್ಯವಸ್ಥೆ ಏನು? ದಾರಿಯಲ್ಲಿ ಊಟ—ಉಡಿಗೆಗಳ ವ್ಯವಸ್ಥೆ ಏನು? ಈ ಬಗ್ಗೆ ಸ್ವತಂತ್ರ ಭಾರತದ ಘಟನೆಯಲ್ಲಿ ಏನನ್ನೂ ಹೇಳಿಲ್ಲವಾದ್ದರಿಂದ ನಿಶ್ಚಿತ ಉತ್ತರವನ್ನು ಕೊಡುವುದು ಸುಲಭವಲ್ಲ. ಆದರೆ ಒಂದು ವಿಶೇಷವನ್ನು ಮಾತ್ರ ಇಲ್ಲಿ ಕಾಣಿಸಬಹುದು. ಘಟನೆಯ ೪೩ ನೆಯ ಕಲಮಿನಲ್ಲಿ—ನಿರ್ದೇಶಕ ತತ್ವ ಎಂದು—ಈ ಮಾತನ್ನು ಹೇಳಿದೆ:—

"ಯೋಗ್ಯ ಕಾಯಿದೆಯಿಂದ ಇಲ್ಲವೆ ಆರ್ಥಿಕ ಸಂಘಟನೆಯಿಂದ ಇಲ್ಲವೆ ಬೇರೆ ಯಾವುದೆ ರೀತಿಯಿಂದ ಒಕ್ಕಲುತನದ ಇಲ್ಲವೆ ಔದ್ಯೋಗಿಕ ಇಲ್ಲವೆ ಬೇರೆ ಕೆಲಸಗಾರರಿಗೆ ಜೀವನದ ತಕ್ಕ ಮಟ್ಟನ್ನು ಮತ್ತು ವಿರಾಮಕ್ಕೆ ಪೂರ್ಣ ಅವಕಾಶವನ್ನು ಒದಗಿಸಲು........ಸರಕಾರವು ಯತ್ನಿಸತಕ್ಕದು."

ಇಂದಿನ ಕಾಲದ— ಎಂದರೆ ಸ್ವಾತಂತ್ರ್ಯೋತ್ತರ ಕಾಲದ— ಪ್ರವಾಸವನ್ನು ಸರಕಾರವು ಈ ನಿರ್ದೇಶಕ ತತ್ವದ ಮೇರೆಗೆಯೆ ಏರ್ಪಡಿಸಿದೆ ಎಂದು ನನ್ನ ಬಲವಾದ ಸಂಶಯ. ಯಾಕಂದರೆ, ಜೀವನದ ಮಟ್ಟನ್ನು ಎತ್ತರಿಸಲು ಇಂದು ರೈಲು ಪ್ರವಾಸವು ಒಂದು ತೀವ್ರ ಸಾಧನವಾಗಿದೆ. ಅನೇಕ ಸಲ ಸ್ವರ್ಗದ ವರೆಗೂ ಜೀವನವನ್ನು ಎತ್ತರಿಸುತ್ತಿದೆ. ಈಗಂತೂ ದಿನವೂ ಇಂತಹ ಒಂದಿಲ್ಲೊಂದು ಘಟನೆ (ತಿಳಿಯದವರು ಅದಕ್ಕೆ "ಅಪಘಾತ" ಎನ್ನುತ್ತಾರೆ) ಆಗಿಯೆ ತೀರತಕ್ಕದ್ದು. ಇದೇ ನಿಮಿತ್ತವಾಗಿ ಒಮ್ಮೊಮ್ಮೆ ನಾಗರಕರಿಗೆ ಪೂರ್ಣ ವಿರಾಮ ಕೂಡ ದೊರೆಯುವದು. ಆದ್ದರಿಂದ ಸಾಮಾನ್ಯವಾಗಿ ಕೂಡ ಇಂದಿನ ರೈಲುಯಾತ್ರೆಯು ನಮ್ಮೆಲ್ಲರಿಗೆ ವಿರಾಮ ಇಲ್ಲವೆ ವಿಶ್ರಾಂತಿಯನ್ನೇ ಕೊಡುವುದೆಂದು ಹೇಳಲು ಅಡ್ಡಿ ಏನು? ಮೇಲೆ ಸೂಚಿಸಿದ ಒಂದೇ ಪ್ರವಾಸದಲ್ಲಿ ಗಾಡಿಗಾಗಿ ಒಮ್ಮೆ ನಾಲ್ಕು ಗಂಟೆ, ಒಮ್ಮೆ ಒಂದು ಗಂಟೆ ಹೀಗೆ ಎರಡೂ ಸಲ ಸೇರಿಸಿ ಅಯ್ದು ಗಂಟೆಗಳ ವಿಶ್ರಾಂತಿಯನ್ನು ಪಡೆದಿದ್ದೇನೆ.

ಅಂತೂ ಹೊಸ ಘಟನೆಯ ನಿರ್ದೇಶಕ ತತ್ವಕ್ಕನುಸಾರವಾಗಿ, ನಮಗೆ ವಿಶ್ರಾಂತಿಯ ಸೌಕರ್ಯವನ್ನು ಒದಗಿಸುವುದಕ್ಕಾಗಿ ಗಾಡಿ ತಡಮಾಡಿಯೆ ಬಂದಿತೆಂದು ಈಗ ಅಭಿಮಾನದಿಂದ ಹೇಳಬಹುದಷ್ಟೇ. ಅದೇ ಅಭಿಮಾನದಿಂದ ಇನ್ನೂ ಒಂದು ಸಂಗತಿಯನ್ನು ಇಲ್ಲಿ ಒತ್ತಿ ಹೇಳಬಹುದಾಗಿದೆ. ಸ್ವಾತಂತ್ರ್ಯದ ತರುವಾಯ ಬದಲಾಯಿಸಿದ ವಾತಾವರಣದಲ್ಲಿ ಜಾತೀಯ ಭಾವನೆಯನ್ನು ಹೊಡೆದೋಡಿಸುವುದು ಮಹತ್ವದ್ದಾಗಿದೆ. ಜಾತೀಯ ಭಾವನೆಯಾದರೂ ಕ್ರಮೇಣ ಹೊರಬೀಳುತ್ತಲಿದೆ ಎಂದು ನಮ್ಮ ಮುಂದಾಳುಗಳೊಡನೆ ನಾವು ಆಶಾವಾದವನ್ನು ವ್ಯಕ್ತಮಾಡಬಹುದಾಗಿದೆ. ನಮ್ಮ ಚಹದ ಅಂಗಡಿಗಳಲ್ಲಿ ಒಳಗಿದ್ದ ಜಾತೀಯ ಭಾವನೆಯು ಈಗ ಹೊರಬಿದ್ದು

ದೇಶಭಕ್ತರ ಸಂತರ

ಹಾಗೂ

ಐತಿಹಾಸಿಕ ಮಹಾಪುರುಷರ

೧೨ ರಂಗಿನ ೧೪x೨೦ ಇಂಚ ಸ್ಯಾಜಿನ ನುಣುವಾದ
ದಪ್ಪ ಕಾಗದದ ಮೇಲೆ ಛಾಪಿಸಿದ ಫ್ರೇಮುದಲ್ಲಿ
ಹಾಕುವ ಯೋಗ್ಯ ಚಿತ್ರಗಳು.



೧ ಕ್ಕೆ ದರ ೧ ರೂಪಾಯಿ

ಥೋಕ ಖರೀದಿಯ ಬಗ್ಗೆ ಬರೆಯಿರಿ :—

ಮೊಡರ್ನ ಪಿಕ್ಚರ್ಸ ಪಬ್ಲಿಶರ್ಸ ಆಫ್ ಇಂಡಿಯಾ

ಗಿರಗಾಂವ, ಮುಂಬಯಿ- ೪-

ಗದಗಿನಲ್ಲಿ

ಅತ್ಯುತ್ತಮ ವಸತಿ ಹಾಗೂ
ಭೋಜನ ಸೌಕರ್ಯಕ್ಕಾಗಿ

ದುರ್ಗಾ ಲಾಜ



ಸಂದರ್ಶಿಸಿರಿ


ದೀಪಾವಳಿಯು ನಮ್ಮ ಎಲ್ಲ ಗ್ರಾಹಕರಿಗೂ
ಶುಭದಾಯಕವಾಗಲಿ

ಕೇವಲ ತಲೆಬಾಗಿಲಿನ ಮೇಲಿದ್ದ ಹಲಗೆಯಲ್ಲಿಯೇ ಉಳಿದಿಲ್ಲವೆ? ಆವರೆ ಪ್ರವಾಸವು ಮಾತ್ರ ಜಾತೀಯತೆಯನ್ನು ಪೂರ್ತಿಯಾಗಿ ಹೊಡೆದೋಡಿಸಿದೆ ಎಂದು ಹೇಳಬಹುದು. ಎಷ್ಟಾದರೂ ಪ್ರವಾಸವು ಸರಕಾರೀ "ಡಿಪಾರ್ಟಮೆಂಟು" ಅಲ್ಲವೆ? ತನ್ನ ತತ್ವಗಳ ಆಚರಣೆಯಲ್ಲಿ ತಾನೇ ಮುಂದಾಗಿ ಮಾದರಿಯನ್ನು ಹಾಕಿಕೊಡಬೇಕಲ್ಲವೆ ಸರಕಾರವು? ಸರಿ, ನಮ್ಮ ಇಂದಿನ ಸರಕಾರವು ಪ್ರವಾಸದ ಸ್ಥಿತಿಗತಿಗಳನ್ನು ಆ ದೃಷ್ಟಿಯಿಂದಲೆ ಸುಧಾರಿಸಿದೆ ಎಂದು ಹೇಳಬಹುದು. ಚಿಕ್ಕ-ಪುಟ್ಟ ಒಳಜಾತಿಗಳ ಭೇದವಂತೂ ದೂರವೆ ಉಳಿಯಿತು. ಮನುಷ್ಯಜಾತಿ ಎಂಬ ಭೇದವನ್ನು ಕೂಡ ರೈಲು ಆಡಳಿತವು ಪ್ರೋತ್ಸಾಹಿಸುವುದಿಲ್ಲ. ಭಾರತದ ಸ್ವತಂತ್ರ ನಾಗರಕರು ಡಬ್ಬಿಗಳಲ್ಲಿ ತುಂಬಿಕೊಂಡು ಕುಳಿತ ರೀತಿಯನ್ನೂ ಅವರಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದ ಪರಸ್ಪರ ಹೃದಯಸಾಮೀಪ್ಯವನ್ನೂ ಕಣ್ಣಾರೆ ಕಂಡು ಯಾರಿಗೆ ಆನಂದಬಾಷ್ಪಗಳು ತುಳುಕಲಿಕ್ಕಿಲ್ಲ? "ಮನುಷ್ಯ ಜಾತಿ" ಎಂದು ಹೇಳಿದೆನಲ್ಲವೆ? ಅದು ಕೂಡ ಸಮರ್ಪಕವಲ್ಲ. ನಮ್ಮ ಆಡಳಿತವು ಅದಕ್ಕೂ ಮುಂದೆ ಹೋಗಿ ಮನುಷ್ಯ-ಪ್ರಾಣಿ-ಕ್ರಿಮಿ ಎಂಬ ಜಾತಿಭೇದವನ್ನು ಕೂಡ ಮನ್ನಿಸುವದಿಲ್ಲ. ಸ್ಟೇಶನುಗಳಲ್ಲಿಯೂ ಉಪಾಹಾರ ಕಂಪಾರ್ಟಮೆಂಟುಗಳಲ್ಲೂ ಇಟ್ಟ ತಿನಿಸುಗಳ ದೃಶ್ಯವನ್ನು ನೋಡಿದರೆ ಇವರು ಮನುಷ್ಯರು, ಇವು ನೊಣಗಳು ಎಂಬ ಅಸತ್ಯ ಭೇದದೃಷ್ಟಿಯು ಮಾಯವಾಗುವುದು. ಹೊಸ ಘಟನೆಗನುಸಾರವಾಗಿ ಸರಿಸಮಾನತೆಯ ತತ್ತ್ವವು ಎಷ್ಟು ದೂರ ಹೋಗಿದೆ ಎಂಬುದನ್ನು ಒಂದೇ ಒಂದು ದೃಷ್ಟಾಂತದಿಂದ ಸ್ಪಷ್ಟಪಡಿಸಬಹುದು; ಗಾಡಿಯ ಒಳಗೆ, ಗಾಡಿಯ ಹೊರಗೆ ಎಂಬ ಸಮ-ವಿಷಮಗಳನ್ನೆಣಿಸದೆ ನಾಗರಕರು ಗಾಡಿಗಳನ್ನು ಪಯೋಗಿಸುತ್ತಾರೆ. ಜೊತೆಗೆ ನಮ್ಮ ಸ್ವಾತಂತ್ರ್ಯದ—ಎಂದರೆ ವೈಯಕ್ತಿಕ ಸ್ವಾತಂತ್ರ್ಯದ—ಮನ್ನಣೆಯೂ ಇದೆ. ಯಾಕಂದರೆ, ನಾವು ಏನು ತಿಂದರೂ ಹೇಗೆ ಪ್ರವಾಸ ಮಾಡಿದರೂ ನಮಗೆ ಅಡ್ಡಬರುವ ಇಲ್ಲವೆ ಅಡ್ಡಿಯನ್ನುಂಟುಮಾಡುವ ಅಧಿಕಾರಿಗಳೂ ಅವರ ದರ್ಪವೂ ಈಗ ಸದ್ದಿಲ್ಲದೆ ಅಡಗಿವೆ.

ವಿರಾಮ, ವಿಶ್ರಾಂತಿ, ಸರಿಸಮಾನತೆ, ವ್ಯಕ್ತಿಸ್ವಾತಂತ್ರ್ಯ—ಹೀಗೆ ಸ್ವಾತಂತ್ರ್ಯದ ಎಲ್ಲ ಸೌಕರ್ಯಗಳು ಇಂದಿನ ನಮ್ಮ ರೈಲು ಪ್ರವಾಸದ ವೈಶಿಷ್ಟ್ಯಗಳಾಗಿವೆ. ಮಿಕ್ಕ ಸ್ವತಂತ್ರ ದೇಶಗಳೊಡನೆ ಹೋಲಿಸಿ ನೋಡಿದರೆ ನಮ್ಮ ಮಟ್ಟಕ್ಕೆ ಯಾವೂ ಬಾರವೆಂದು ಧೈರ್ಯವಾಗಿ ಹೇಳಬಹುದು. ಕೆಲವು ದೇಶಗಳಲ್ಲಿ ಗಾಡಿಯ ವೇಳಾಪತ್ರಿಕೆಯು ನಾಗರಕರಿಗೆ ಅನುಕೂಲವಾಗುವಂತೆ ಕಾಣುವುದು; ಆದರೆ ಇದು ತೋರಿಕೆ ಮಾತ್ರ. ಯಾಕಂದರೆ ಎಲ್ಲ ನಾಗರಕರೂ ಸರಿಸಮಾನರೆನ್ನಿಸುವಾಗ ರೈಲಿನ ಕೆಲಸಗಾರರ ಅನುಕೂಲತೆಯನ್ನೂ ನೋಡಬೇಕಲ್ಲವೆ? ನಮ್ಮಲ್ಲಿ ಆ ತತ್ವವನ್ನು ಕೆಲವು ಮಾರ್ಗಗಳ ಮೇಲೆ ಪ್ರಾಯೋಗಿಕವಾಗಿ ಆಚರಿಸಲಾಗುತ್ತಿದೆ. ಡ್ರೈವರನಿಗೆ ಇಲ್ಲವೆ ಗಾರ್ಡನಿಗೆ ಅನುಕೂಲವೆನ್ನಿಸಿದಾಗಲೆ ಈ ಮಾರ್ಗಗಳಲ್ಲಿ ಗಾಡಿಗಳನ್ನು ಹೊರಡಿಸಲಾಗುತ್ತಿದೆ. ಅದು ಪ್ರವಾಸಿಗರಿಗೆ ಅನುಕೂಲವಲ್ಲ ಎನ್ನಲಾಗದು; ಯಾಕಂದರೆ, ಆ ನಿಮಿತ್ತದಿಂದ ಪ್ರವಾಸಿಗರಿಗೆ, ಘಟನೆಯ ನಿರ್ದೇಶಕ ತತ್ತ್ವದ ಮೇರೆಗೆ, ವಿರಾಮ ವಿಶ್ರಾಂತಿಗಳು ದೊರಕುತ್ತಿವೆ.

ನನ್ನ ಪ್ರವಾಸವೊಂದನ್ನು ಬಣ್ಣಿಸುವ ಸಂದರ್ಭದಲ್ಲಿ ಇದೆಲ್ಲ

ಹೊಸ ವರ್ಷವು ಮತ್ತು ದೀಪಾವಳಿಯೂ ನಮ್ಮ ಎಲ್ಲ ಹಿತಚಿಂತಕರಿಗೂ ಆಶ್ರಯದಾತರಿಗೂ ಸುಖವಾಗಲಿ!





ದೀಪಾವಳಿ
ಅಭಿನಂದನೆಗಳು


ರುಬಿ ಜನರಲ್ ವಿಮಾ
ಕಂಪನಿ ಲಿ.,

ಚೇಅರಮನ್—ಸೇಠ ಬಿ. ಎಂ. ಬಿರ್ಲಾ

ವಿಳಾಸ :—

ಲಾಯಿಫ ಬ್ರ್ಯಾಂಚ — ರಾಮದೇವಗಲ್ಲಿ, ಬೆಳಗಾವಿ

(ಕಟ್ಟಿ ಫೋಟೋ ಸ್ಟುಡಿಯೋದ ಎದುರು)



ಅಸಂಬದ್ಧ ಹರಟೆ ಏಕೆ ಎಂದು ತಾವು ಕೇಳುವುದಾದರೆ ನಾನು ಪ್ರತಿಭಟಿಸಲೇಬೇಕಾಗುವದು. ನನ್ನ ಈ ಮಾತುಗಳನ್ನು ತಾವು 'ಹರಟೆ' ಎಂದು ಸಂಬೋಧಿಸಿದರೆ ನನ್ನದೇನೂ ಆಕ್ಷೇಪವಿಲ್ಲ; ಯಾಕಂದರೆ, ತಲೆಹರಟೆಯು—ಎಂದರೆ ತಲೆಯಿಂದ ಸ್ಫೂರ್ತಿವೆತ್ತ ಇಂತಹ ಹರಟೆಯು—ಮಹತ್ತ್ವದ್ದೆಂಬುದನ್ನು ನೀವಾದರೂ ಒಪ್ಪೆ ಬಹುದಾಗಿದೆ. ಆದರೆ "ಅಸಂಬದ್ಧ" ಎಂಬುದಕ್ಕೆ ನನ್ನ ಆಕ್ಷೇಪ ವಿದೆ. ಮೂರು-ನಾಲ್ಕು ಗಂಟೆಗಳ ವರೆಗೆ ಗಾಡಿಯ ದಾರಿಯನ್ನು ಕಾಯುತ್ತ ಕುಳಿತಾಗ ಸಂದರ್ಭೋಚಿತವಾಗಿ ಬಂದ ವಿಚಾರಗಳು ಇವು. ಇಂತಹ ವಿಚಾರಗಳಿಂದ ನನ್ನ ತಲೆ ತುಂಬಿತ್ತೆಂದೇ ನಾನು ವರ್ಣಿಸಲಿದ್ದ ಪ್ರವಾಸವು ಅದ್ಭುತರಮ್ಯವಾಗಿ ಪರಿಣಮಿಸಿತು. ನಾನು ಮೇಲಿನ ವಿಚಾರಗಳ ಭಾರದಿಂದ ತೂಕಡಿಸುತ್ತಿರುವಾಗಲೆ ಗಾಡಿ ಬಂದಿತು. ನಾನೊಬ್ಬ ಉಚ್ಚ ವರ್ಗದ ಪ್ರವಾಸಿಗನಾದ್ದರಿಂದ ತುಸು ನಿಧಾನವಾಗಿಯೆ ತೂಕಡಿಕೆಯಿಂದ ಚೇತರಿಸಿಕೊಂಡೆದ್ದೆ, ನನ್ನ ಜಾಗೆಯನ್ನೂ ಶೋಧಿಸಿಕೊಂಡೆ ಮತ್ತು ನನ್ನ ಸುತ್ತಲಿನ ವಾತಾವರಣವನ್ನು ನೋಡಿದೊಡನೆಯೆ ತಟ್ಟನೆ ಮೊದಲಿನ ವಿಚಾರ ಗಳ ಭರದಲ್ಲಿ ಮೈಮರೆತೆ.

ಉಚ್ಚ-ನೀಚ ಭೇದವು ಸ್ವತಂತ್ರ ಭಾರತದಲ್ಲಿ ಇಲ್ಲವೆ ಇಲ್ಲ ಎಂಬ ವಿಚಾರವನ್ನು ಈ ಮೊದಲೆ ಹೇಳಿರುವೆನಲ್ಲವೆ? ಆದರೂ ಪರದಾಸ್ಯದ ಕಾಲದಿಂದ ನಡೆದು ಬಂದ ನಮ್ಮ ಮನೋವೃತ್ತಿ ಇನ್ನೂ ಬದಲಾಯಿಸಿಲ್ಲವಲ್ಲ? ಯಾಕಂದರೆ, ನಾನು ಉಚ್ಚ ವರ್ಗದ ಪ್ರವಾಸಿಗನೆಂದು ಮೆರೆಯಬೇಕೆಂದಿದ್ದೆ, ಆ ದುರಭಿಮಾನ ಸಮ್ಮೋಹ ಭರದಲ್ಲಿ ಟಿಕೆಟ್ಟಿಗಾಗಿ ಹೆಚ್ಚಿನ ಹಣವನ್ನೂ ಕೊಟ್ಟಿದ್ದೆ. ನನ್ನ ಹುಚ್ಚುತನಕ್ಕಾಗಿ ಸ್ವತಂತ್ರ ಭಾರತ ಮಾತೆಯು ಒಳಗಿಂದೊಳ ಗೆಯೆ ನಗುತ್ತಿದ್ದಳೇನೊ! ಯಾಕಂದರೆ, ನನ್ನ ಜಾಗೆಯನ್ನು ಕಂಡಾಕ್ಷಣ ನನ್ನ ಮೋಹ ನಷ್ಟವಾಯಿತು. ನನಗೆ ಸ್ಮೃತಿ ಬಂದಿತು, ಇಂದಿನ ಭಾರತದಲ್ಲಿ ಉಚ್ಚ-ನೀಚ ಎಂಬ ವರ್ಗ ಭೇದವಿಲ್ಲ, ಎಲ್ಲ ವರ್ಗಗಳೂ ಅಷ್ಟೆ ಹೊಲಸು—ಎಂದು! The State shall regard.... the improvement of public health as among its primary duties." ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ತನ್ನ ಆದ್ಯ ಕರ್ತವ್ಯಗಳಲ್ಲೊಂದು ಎಂದು ಸರಕಾರವು ತಿಳಿಯತಕ್ಕದ್ದು ಎಂದು ಘಟನೆಯ ಕಲಮು ೪೭ ರಲ್ಲಿ ನಿರ್ದೇಶಕ ತತ್ತ್ವವೆಂದು ಸಾರಲ್ಪ ಟ್ಟಿದೆ. ಸರಿ, ಈಗ ಅರ್ಥವಾಯಿತು. ಸಾರ್ವಜನಿಕರ ಆರೋಗ್ಯ ಸುಧಾರಿಸುವುದೆಂದರೆ, ಅವರು ಗಟ್ಟಿಗರಾಗುವುದು, ಎಂದರೆ ಬೇಕಾ ದ್ದನ್ನೆಲ್ಲ ತಡೆದುಕೊಳ್ಳುವ ಸಾಮರ್ಥ್ಯ ಅವರಲ್ಲಿ ಹುಟ್ಟುವುದು. ನಮ್ಮ ಗಾಡಿಗಳಲ್ಲಿದ್ದ ಹೊಲಸನ್ನು ತಡೆದುಕೊಳ್ಳುವ ಸಾಮರ್ಥ್ಯ ನಮ್ಮಲ್ಲಿ ಉಂಟಾದರೆ ನಾವು ಬೇಕಾದ್ದನ್ನು ಸಹಿಸಿ ದಕ್ಕಿಸಿಕೊಳ್ಳುವ ಗಟ್ಟಿಗರಾಗುವೆವು. ನಾಗರಕರಿಗಾಗಿ ಎಂತಹ ಹಿತಬುದ್ಧಿ! ಆದರೆ ನಾವು ನಾಗರಕರು, ಎಷ್ಟು ಜನ ಈ ಮಾತುಗಳನ್ನು ಸರಿಯಾಗಿ ತಿಳಿದುಕೊಂಡಿದ್ದೇವೆ? ಎಷ್ಟು ಜನ ಯಾಕೆ? ಮೊನ್ನಿನ ಪ್ರವಾಸದ ವರೆಗೆ ನನ್ನಂತಹ ಸುಶಿಕ್ಷಿತ, ಸುಸಂಸ್ಕೃತ (ಕ್ಷಮೆ ಇರಲಿ) ನಾಗರಕನಿಗೆ ಕೂಡ ಈ ರಹಸ್ಯ ಹೊಳೆದಿರಲಿಲ್ಲ! ಸತ್ಯದ ಬಟ್ಟಲನ್ನು ಕತ್ತಲಲ್ಲಿ ಮುಚ್ಚಿಟ್ಟಿದೆ ಎಂಬ ಮಾತು ಸುಳ್ಳಲ್ಲ.

ಹೀಗೆಯೆ ವಿಚಾರಗಳು ತಲೆಯಲ್ಲಿ ತಾಂಡವವನ್ನಾಡುತ್ತಿರು

ವಾಗ ಗಾಡಿ ಒಂದು ದೊಡ್ಡ ನಿಲ್ದಾಣಕ್ಕೆ ಬಂದಿತು. ಸ್ನೇಹಿತರ ಒತ್ತಾಯಕ್ಕಾಗಿ ಕೆಳಗಿಳಿದೆ; ಗಾಡಿ ಬಹಳೊತ್ತು ನಿಲ್ಲಬೇಕಿದ್ದ ನಿಲ್ದಾಣವಿದು. ಚಹವನ್ನಾದರೂ ಕುಡಿಯೋಣ ಎಂದೆವು. ಎಂತಹ ಹುಚ್ಚು ಪ್ರಾಣಿ ಮಾನವನು ! ಪರಕೀಯರ ಆಳಿಕೆ ಹೋದರೂ ಅವರ ಪ್ರಭಾವದ ದಾಸ್ಯ ಇನ್ನೂ ಅಳಿದಿಲ್ಲ. ನಮ್ಮನ್ನು ಸದ್ವರ್ತನದಲ್ಲಿರಿಸಬೇಕೆಂದು ನಮ್ಮ ಸರಕಾರವು ಹಗಲಿರುಳು ಕಾಯಿದೆಗಳನ್ನು ಮಾಡುತ್ತಿದ್ದುದರ ಪರಿವೆ ಇಲ್ಲದೆ ನಾವು—ಹಿಂದಿನ ಜನ್ಮದ ಪಾಪ ! —ಚಹವನ್ನು ಕುಡಿಯಬೇಕೆಂದಿದ್ದೇವೆ ! ನಮ್ಮ ವೃತ್ತಿ ಗಾಡಿಯ ಮನಸ್ಸಿಗೂ ಬರಲಿಲ್ಲವೇನೊ ! ನಮಗೆ ಸುಳಿವು ಕೂಡ ಕೊಡದೆ ಗಾಡಿ ಹೊರಟೇಬಿಟ್ಟಿತು !

ಇದು ಶಕ್ಯವೆ? — ಎಂದು ತಾವು ಕೇಳಬಹುದು. ಶಕ್ಯಾಶಕ್ಯತೆಯ ಪ್ರಶ್ನೆಯಾಕೆ ? ನಮ್ಮ ಕಣ್ಣೆದುರಿನಲ್ಲಿಯೆ ಘಟಿಸಿತು. ಅತ್ತ ಸಾಮಾನು ನಮ್ಮನ್ನು ಬಿಟ್ಟು ಹೋಯಿತು. ಇತ್ತ ಚಹವನ್ನು ಬಿಟ್ಟು ನಾವು ಓಡಿದೆವು. ಮುಂದೆ ನಮ್ಮನ್ನು ಬಿಟ್ಟು ಗಾಡಿ ಸಾಗಿತು !

ವಾಚಕರೆ, ಸ್ವತಂತ್ರ ಭಾರತದ ನಾಗರಕನು ತಲೆ ತುರಿಸಬೇಕಾಯಿತು. ಸದ್ಯದ ಅನನುಕೂಲತೆಗಳನ್ನು ಕಂಡು ತತ್ತ್ವಗಳನ್ನು ಬದಿಗಿಡಬೇಕಾಯಿತು. ಪ್ರಯಾಣಿಕನ ಬೆಲೆ ಎಷ್ಟು ? ಇಲ್ಲವೆ ಬೆಲೆಯೆ ಅವನಿಗೆ ಇಲ್ಲವೆ ಎಂದು ದಿಗಿಲುಬಿದ್ದಿತು. ಹಕ್ಕಿಗಾಗಿ ಹೊಡೆದಾಡಬೇಕಾಯಿತು. ಅಧಿಕಾರಿಗಳು ಧೈರ್ಯದಿಂದ ಸುಳ್ಳನ್ನು ಸಾಧಿಸುವಾಗ ದಂಗುಪಡಿಸಿ ನಿಲ್ಲಬೇಕಾಯಿತು. ಅವರು ಸತ್ಯವನ್ನು ಬಿಟ್ಟುದಕ್ಕಾಗಿ ನಾವು ಅಹಿಂಸೆಯನ್ನೂ ಬಿಡಬೇಕೆಂಬ ನಿರ್ಣಯ ಅನಿವಾರ್ಯವಾಯಿತು.

ಇಂತಹ ಸನ್ನದ್ಧ ಕುರುಕ್ಷೇತ್ರವನ್ನು ಸನ್ಮಾರ್ಗಕ್ಕೆ ಹಚ್ಚಿದ ಭಗವಂತನೆಂದರೆ ಮಾಲುಗಾಡಿ, ಎಂದರೆ "ಗುಡ್ಸ ಟ್ರೇನ್" . ಹಕ್ಕಿಗಾಗಿ ಕಡಿದಾಡುವ ನಾಗರಕರನ್ನೂ ಅಧಿಕಾರಗೌರವಕ್ಕಾಗಿ ಖಟಪಟಸುವ ಅಧಿಕಾರಿಗಳನ್ನೂ ಎಚ್ಚರಗೊಳಿಸಿ ವಿಶ್ವದಲ್ಲಿ ಶಾಂತಿಯನ್ನು ಪ್ರಸ್ಥಾಪಿಸಿದ್ದು ಮಾಲುಗಾಡಿ ! "ನಡೆಯಿರಿ ನಿಮ್ಮನ್ನು ಗುರಿಗೆ ಮುಟ್ಟಿಸುವೆ" ಎಂದಿತು.

ವಾಚಕರೆ, ನನಗೆ ಒಂದೇ ಒಂದು ಖೇದವಿದೆ. ಅದೆಂದರೆ ಎಲ್ಲರಿಗಾಗಿ ಭಾರವನ್ನು ಹೊತ್ತುಕೊಂಡು ತನ್ನ ಸುಖದುಃಖಗಳ ಪರಿವೆ ಇಲ್ಲದೆ, ಏಕಾಕಿಯಾಗಿ ಸಾಗುತ್ತಿರುವ ಈ ಮಾಲುಗಾಡಿಗೆ ಘಟನೆಯಲ್ಲೂ ಜಾಗೆ ಇಲ್ಲ. ಮಂತ್ರಿಮಂಡಳದಲ್ಲೂ ಜಾಗೆ ಇಲ್ಲ ! ತಾನುವೇಳೆಗೆ ಸರಿಯಾಗಿ ಹೊರಡದೆ ತನ್ನ ತಪ್ಪಿಗಾಗಿ ಇನ್ನೊಬ್ಬರನ್ನು ನಡುದಾರಿಯಲ್ಲಿ ಬಿಟ್ಟು ಹೋಗುವ ಪ್ಯಾಸೆಂಜರ ಟ್ರೇನಿನ ಮುಂದಾಳುತನ ಸಾಕು; ಇನ್ನು ನಮಗೆ ಸಿಳ್ಳು ಗಂಟೆಗಳ ಅಬ್ಬರವಿಲ್ಲದೆ ಸೇವೆಯನ್ನು ಸಲ್ಲಿಸುವ "ಗುಡ್ಸ ಟ್ರೇನೇ" ಬೇಕು.

Acclaimed by Everybody as one of the Finest in the District . . .

For its Excellent Tasty and Appetising Dishes

For its High Class Deliciously Fragrant

Coffee and Tea . . .

For its Up-to-date and Courteous Service in Well Furnished Rooms -

So - when at Chikmagalur, whether for business or pleasure .... It will pay you to VISIT —

CHIKMAGALUR CAFE

Brahmins' Premier Boarding & Lodging Home & Rest House-

Naidu Street . . . Chikmagalur.

Centrally & Ideally Situated in Calm & Quiet Surroundings :

Only a Minute's Walk from the Bus-stand, School, College, Hospital, Post-office. Court & Govt. Offices.

Our Catering is considered to be the Hall-mark of Perfection.

Proprietor : **M. Surendra Rao.**

ಸರ್ವರಿಂದಲೂ ಉತ್ಕೃಷ್ಟವೆಂದು ಆದರಿಸಲ್ಪಟ್ಟ . . . . .

ಶ್ರೇಷ್ಠತರಹ ರುಚಿಕರ ಹಾಗೂ ಆರೋಗ್ಯಕರ ಖಾದ್ಯ ಪದಾರ್ಥಗಳಿಗಾಗಿ . . . .

ಸುವಾಸನಾಯುತ, ಮನೋಲ್ಲಾಸಕ, ಉತ್ತಮ ತರಹ

ಕಾಫಿ ಮತ್ತು ಟೀ ಪಾನೀಯಗಳಿಗಾಗಿ

ಚಿಕ್ಕಮಗಳೂರಿನಲ್ಲಿ ಎಲ್ಲರ ಮೆಚ್ಚಿಗೆಗೆ ಪಾತ್ರವಾದ . . .

ಕೋರ್ಟ ಕಚೇರಿ, ಶಾಲಾ ಕಾಲೇಜು, ಪೋಸ್ಟಆಫೀಸು, ಆಸ್ಪತ್ರೆ, ಬಸ್ ಸ್ಟ್ಯಾಂಡುಗಳ ಸಮೀಪವಿರುವ . . .

ಚಿಕ್ಕಮಗಳೂರು ಕೆಫೆ

ಆಧುನಿಕ ವ್ಯವಸ್ಥೆಯ, ಮನೋರಂಜಕ ಕೊಠಡಿಗಳಿಂದ ಕೂಡಿರುವ ಬ್ರಾಹ್ಮಣರ ಊಟ ಉಪಹಾರ ಮತ್ತು ವಸತಿ ಗೃಹ.

ನಾಯಡು ರಸ್ತೆ . . . . ಚಿಕ್ಕಮಗಳೂರು

ಚಿಕ್ಕಮಗಳೂರಿನಲ್ಲಿಳಿದಾಗ ಸಂದರ್ಶಿಸಲು ಮರೆಯದಿರಿ

M. ಸುರೇಂದ್ರ ರಾವ್

ಮಾಲಕರು

ಇಂದಿನ ಕನ್ನಡ ಸಾಹಿತ್ಯ ಹುಲುಸಾಗಿ ಬೆಳೆಯುತ್ತಿರುವಂತೆ ತೋರುತ್ತದೆ. ಆದರೆ ಇದರಲ್ಲಿನ ಬಲಾಬಲಗಳೇನು ? ಎಷ್ಟು ಮಟ್ಟಿಗೆ ನಮ್ಮ ಸಾಹಿತ್ಯ ಪರಿಪೂರ್ಣವಾಗಿದೆ ? ಜ್ಞಾನಪಿಪಾಸೆಯುಳ್ಳವನನ್ನು ಅದೆಷ್ಟು ಮಟ್ಟಿಗೆ ತಣಿಸಬಲ್ಲುದು ? ಆಗದೆ ಉಳಿದ ಕೆಲಸವೇನು, ಎಷ್ಟು ?

ಲೇಖಕರು :

ಪ್ರೊ. ಕೆ. ವೆಂಕಟರಾಮಪ್ಪ, ತುಮಕೂರು

ಇಂದಿನ ಕನ್ನಡ ಸಾಹಿತ್ಯ: ಏನಿದೆ ? ಏನಿಲ್ಲ ?

ಈ ಅರ್ಧ ಶತಮಾನದಲ್ಲಿ ಕನ್ನಡ ಸಾಹಿತ್ಯದ ಬೆಳೆವಣಿಗೆ ಬಹಳ ಭರದಿಂದ ನಡೆದಿದೆ. ಇಂಗ್ಲಿಷ ಭಾಷಾ ಸಾಹಿತ್ಯಗಳ ಪರಿಚಯದ ದೆಸೆಯಿಂದ ಹಲವು ಹೊಸ ಕಾವ್ಯಜಾತಿಗಳು ರೂಪುಗೊಂಡಿವೆ. ವೃತ್ತಾಂತ ಪತ್ರಿಕೆಗಳು ಮಾಸ ಪತ್ರಿಕೆಗಳು ಮುಂತಾದವು ನಾವು ಇಂಗ್ಲಿಷಿನಿಂದ ಪಡೆದುವೇ. ಅಂದ ಮೇಲೆ ಅವುಗಳಲ್ಲಿ ಬರುವ ಸಂಪಾದಕೀಯ ಲೇಖನಗಳು, ವಾರವಾರವೂ ನಮ್ಮನ್ನು ಸಂತೋಷಗೊಳಿಸುವ ಸಣ್ಣ ಕತೆಗಳು, ಭಾವಗೀತೆಗಳು, ಹರಟೆಗಳು ಮುಂತಾದವೆಲ್ಲ ಇಂಗ್ಲಿಷ ಸರಸ್ವತಿಯ ಪ್ರಸಾದಗಳೆಂದು ಸ್ಪಷ್ಟವಾಗುತ್ತದೆ. ಇನ್ನು ಕಾದಂಬರಿಗಳು ಅವಕ್ಕೆ 'ಕಾದಂಬರಿ' ಎಂಬ ಹೆಸರೇಕೆ ಬಂದಿತೋ ನಾನರಿಯೆ— ನಮ್ಮ ಕನ್ನಡದಲ್ಲಿ ಹಿಂದೆ ಇರಲಿಲ್ಲ. ಬಂಗಾಳದ ಬಂಕಿಮ ಬಾಬುಗಳ ಕೃತಿಗಳ ಅನುವಾದಗಳು ಮೊದಲು ನಮ್ಮಲ್ಲಿ ಪ್ರಚಾರವಾದವು. ಮರಾಠಿಯ ಹಲವು ಕಾದಂಬರಿಗಳು ವೇ. ತಿ. ಗಳಗನಾಥರ ದಯೆಯಿಂದ ಕನ್ನಡಕ್ಕೆ ಬಂದವು. ಈಚೆಗೆ ಸ್ವತಂತ್ರವಾದ ಹಲವು ಕನ್ನಡ ಕಾದಂಬರಿಗಳೇ ಹುಟ್ಟಿ ಜನಪ್ರೀತಿಯನ್ನು ಗಳಿಸಿವೆ. ಇವಲ್ಲದೆ ಹಳೆಯ ಪದ್ಯಜಾತಿಗಳಿಂದ ಭಿನ್ನವಾದ ಅಷ್ಟಷಟ್ಪದಿ ಸರಳರಗಳೆ ಮುಂತಾದ ಹಲವು ಛಂದಸ್ಸುಗಳು ಈಗ ಬಳಕೆಯಾಗಿವೆ. ಹೊಸ ಕವನಗಳ ಬೆಳೆ ಬಹಳ ಹುಲುಸಾಗಿಯೇ ಬಂದಿದೆ ಎಂದು ಇಂದು ಹೇಳಬಹುದು. ಭಾವಗೀತೆಗಳು, ಕಥಾಕವನಗಳು, ಮಹಾಕಾವ್ಯಗಳು, ಎಲ್ಲವೂ ಪ್ರಕಾಶಕ್ಕೆ ಬಂದಿವೆ. ಗೀತ ನಾಟಕಗಳೂ ಬಳಕೆಗೆ ಬರುತ್ತಿವೆ. ಭಾಸ ಕಾಳಿದಾಸರ ಹಲವು ಕೃತಿಗಳನ್ನು ಈ ಹೊಸ ಕವಿತೆಯ ರೀತಿಯಲ್ಲಿ ಅನುವಾದ ಮಾಡುವ ಪ್ರಯತ್ನ ನಡೆಯುತ್ತಿದೆ. ರಾಮಾಯಣದ ಈ ಬಗೆಯ ಅನುವಾದವೊಂದು ಈಗ ತಾನೇ ಬಂದಿದೆ. ಗ್ರೀಕ್ ಸಾಹಿತ್ಯದ ಕೆಲವು ಕೃತಿಗಳು ಈ ರೀತಿಯಲ್ಲಿ ಅನುವಾದವಾಗಿ ಕನ್ನಡಕ್ಕೆ ಬಂದಿವೆ. ಹೆಸರಾಂತ ಹಿರಿಯ ಕವಿಗಳೇ ಅಲ್ಲದೆ ಹೊಸ ಕವಿಗಳು, ಚಿಕ್ಕವರು ಪುಟ್ಟವರು ಸುಂದರವಾದ ಕೃತಿಗಳನ್ನು ರಚಿಸುತ್ತಿದ್ದಾರೆ. ಶಿಶುಸಾಹಿತ್ಯ ಮೊದಲಾದ ಕೆಲವು ಹೊಸ ಪ್ರಯೋಗಗಳನ್ನು ಕಾಣುತ್ತಿದ್ದೇವೆ. ಹಳಗನ್ನಡದಲ್ಲಿ ಹೇಗೋ ಹಾಗೆಯೇ ಹೊಸಗನ್ನಡದಲ್ಲಿಯೂ ಪದ್ಯಕಾವ್ಯಗಳೇ ಅಧಿಕವಾಗಿವೆ. ರೇಡಿಯೋ ನಮ್ಮ ನಾಡಿಗೆ ಬಂದ ಮೇಲೆ ವಿಶ್ವವಿಸರಣ ಪದ್ಧತಿಗೆ ಹೊಂದುವಂಥ ನಾಟಕಗಳು ರಚಿತವಾಗಿ ಜನಪ್ರೀತಿಯನ್ನು ಗಳಿಸಿವೆ.

ಸಾಹಿತ್ಯವು ಕೇವಲ ರಾಜಸ್ಥಾನದ ಪಂಡಿತರ ಮಂಡಲಗಳಲ್ಲಿ ಮಾತ್ರ ನೆಲಸಿರತಕ್ಕದ್ದಲ್ಲವೆಂಬುದನ್ನು ನಾವು ಈಗ ಮನಗಂಡಿದ್ದೇವೆ. ಅದು ಪೇಟೆಯ ಅಂಗಡಿ ಮುಂಗಟ್ಟುಗಳಲ್ಲಿಯೂ ಬಡವರ ಗುಡಿಸಲುಗಳಲ್ಲಿಯೂ ನಲಿಯಬಹುದೆಂಬುದು ನಮಗೆ ವೇದ್ಯವಾಗಿದೆ. ಮಧುರ ಕವಿ ಹೇಳಿದ.

> "ಪಂಡಿತರುಂ ವಿವಿಧಕಳಾ
> ಮಂಡಿತರುಂ ಕೇಳತಕ್ಕ ಕೃತಿಯಕ್ಷರೆಯೊಳ್
> ಕಂಡರ್ ಕೇಳ್ದೊಡೆ ಗೊರವರ
> ಡುಂಡುಚಿಯೇ ಬೀದಿವರಿವ ಬೀರನ ಕತೆಯೇ

ಎಂಬ ಮಾತನ್ನು ನಾವು ಈಗ ದುರಹಂಕಾರದ ಮಾತೆಂದು ತಿಳಿಯುವೆವು. ಕಾವ್ಯವು ಕೆಲವರಿಗೆ ಮಾತ್ರ ಸಲ್ಲತಕ್ಕ ವಸ್ತುವಲ್ಲ. ಅದು ಜನಪ್ರಿಯವಾಗಬೇಕು. ಜನತೆಗಾಗಿ ಸಾಹಿತ್ಯವೇ ಹೊರತು ಸಾಹಿತ್ಯಕ್ಕಾಗಿ ಜನವಲ್ಲ. ಜನಜೀವನದ ಚಿತ್ರ ಸಾಹಿತ್ಯ. ಜೀವನ ವಿಮರ್ಶೆಯನ್ನೊಳಗೊಂಡು ಓದುಗರನ್ನು ಉದಾತ್ತತೆಯ ಕಡೆಗೆ ಕೊಂಡೊಯ್ಯುವಂಥಾದ್ದಾಗಬೇಕು ಸಾಹಿತ್ಯ. ಅದು ಕೇವಲ ಅಲಂಕಾರ ಸಾಮಗ್ರಿಯಲ್ಲ. ವಿಹಾರ ವಸ್ತುವೂ ಅಲ್ಲ. ಸಾಹಿತ್ಯವು ಜ್ಞಾನವಾಹಿನಿಯಾಗಬೇಕು. ಜನರನ್ನು ಕರ್ತವ್ಯಪರರನ್ನಾಗಿ ಮಾಡುವ ಪ್ರೇರಕಶಕ್ತಿಯಾಗಬೇಕೆನ್ನುವುದು ಇಂದಿನವರ ಆಶಯ. ಈ ಆಶಯವು ಈಡೇರಬೇಕಾದರೆ ಚಂಪೂ ಕಾವ್ಯಗಳಿಂದ ಆಗದು. ಪದ್ಯ ನಾಟಕಗಳಿಂದಲೂ ಆಗದು. ಅದಕ್ಕೆ ಗದ್ಯವೇ ಆಗಬೇಕು. ಅದರಲ್ಲಿ ಕವಿಗಳ ಮತ್ತು ಪಾಠಕರ ಪಾಂಡಿತ್ಯಕ್ಕೆ ಒರೆಗಲ್ಲಾಗುವಂಥ ಗದ್ಯವಾದರೆ ಫಲವೇನು ? ಪಾಠಕರಿಗೆ ಹೃದ್ಯವೆನಿಸುವ ಸುಲಭ ಶೈಲಿಯ ಗದ್ಯವೇ ಬೇಕು. ಸಾಹಿತ್ಯ ಪಾಂಡಿತ್ಯ ಪ್ರದರ್ಶನದ ಸಾಧನವಾಗಬಾರದು. ಗಹನ ವಿಚಾರಗಳನ್ನು ಸುಲಭವಾಗಿ ಹೇಳಿ ತತ್ವ ಪ್ರಚಾರ ಮಾಡಲು ಅನುಕೂಲಿಸಬೇಕು. ಹಾಗಾದಾಗಲೇ ಜನ ನಮ್ಮ ಇಂದಿನ ಸಾಹಿತ್ಯವನ್ನು ಮೆಚ್ಚಿಕೊಂಡು ಆದರಿಸುತ್ತಾರೆ. ಜನಜೀವನದ ಮೇಲೆ ಪ್ರಭಾವ ಬೀರಲಾರದಂಥ ಕಾವ್ಯಗಳು ಜನರ ಮನ್ನಣೆಗೆ ಹೇಗೆ ಪಾತ್ರವಾದವು?

ಈ ಕಥೆ ಕವನಗಳು ಸಾಹಿತ್ಯದ ಮುಖ್ಯ ಅಂಗಗಳು ನಿಜ. ಆದರೆ ಸಾಹಿತ್ಯವೆಲ್ಲ ಅಷ್ಟೇಯೆ? ಕನ್ನಡ ಬರಿಯ ಕವನ ಕಥೆ ಕಾದಂಬರಿ ಕಗ್ಗಗಳ ಭಾಷೆಯಾಗಬಾರದು. ಅಷ್ಟೇ ಆದರೆ ಅದು ಕನ್ನಡಿಗರ ಉದ್ಧಾರಸಾಧನವೆನಿಸಲಾರದು. ಕನ್ನಡದ ಮೂಲಕ ಕನ್ನಡಿಗರು ಪ್ರಪಂಚದ ವಿದ್ಯಮಾನಗಳನ್ನು ತಿಳಿಯುವುದಾಗಬೇಕು. ಜೀವನ ರಹಸ್ಯಗಳು ತಿಳಿಯಬೇಕು. ಪ್ರಕೃತಿಯ ರಮಣೀಯತೆಯನ್ನು ನೋಡಿ ಮೆಚ್ಚಿಕೊಂಡರೆ ಆಯಿತೆ? ಅದರ ರಹಸ್ಯಗಳನ್ನೆಲ್ಲ ಭೇದಿಸಿ ಕನ್ನಡ ಬಲ್ಲವರಿಗೆಲ್ಲ ತಿಳಿಯುವಂತೆ ಬಟ್ಟಬಯಲು ಮಾಡಬೇಕು. "ಇದು ಯಂತ್ರಯುಗ'' ಎಂದು ಸಾರಿಬಿಟ್ಟರೆ ಆಗಲಿಲ್ಲ. ಈ

ಯುಗದ ಯಂತ್ರಗಳ ತಂತ್ರಗಳನ್ನೆಲ್ಲ ಕನ್ನಡಿಗರು ಕನ್ನಡದಿಂದಲೆ ತಿಳಿದುಕೊಳ್ಳುವಂತಾಗಬೇಕು. ಯಂತ್ರಗಳ ತಂತ್ರಗಳನ್ನೇ ಅಲ್ಲದೆ ರಾಜಕಾರಣಿಗಳ ತಳ ತಂತ್ರಗಳನ್ನು ತಿಳಿಸುವ ಶಕ್ತಿಯಿರಬೇಕು ನಮ್ಮ ತಾಯಿನುಡಿಗೆ. ರಾಜ್ಯತತ್ವಗಳು ಪ್ರಜಾರಾಜ್ಯದ ಈ ದಿನಗಳಲ್ಲಿ ರಾಜ್ಯದ ನಿಜವಾದ ಸ್ವಾಮಿಗಳಾದ ಪ್ರಜೆಗಳಿಗೆಲ್ಲ ತಿಳಿಯಬೇಡವೆ?

'ಇವೆಲ್ಲ ಕನ್ನಡದಲ್ಲಿ ಇವೆಯೇ? ಕನ್ನಡದಲ್ಲಿ ಏನಿದೆ?' ಎಂಬ ಪ್ರಶ್ನೆಗಳು ಸಹಜವಾಗಿ ಕೇಳಬರುತ್ತಿವೆ. ಕನ್ನಡದ ಅಭಿಮಾನ, ಬರಿಯ ಅಭಿಮಾನ — ಬಹಳ ದೂರ ನಿಲ್ಲಲಾರದು. ಕನ್ನಡದ ಭಂಡಾರ ಬರಿದಾಗಿದ್ದರೆ ಅದರ ಮೇಲೆ ಮಮತೆ, ಅಭಿಮಾನ, ಭಕ್ತಿ, ಗೌರವಗಳು ಹೇಗೆ ಹುಟ್ಟಿಯಾವು ? ಈಗ ನಮ್ಮ ಕನ್ನಡದಲ್ಲಿ ಈ ಬಹುಮುಖವಾದ ವಿಜ್ಞಾನಭಾಂಡಾರವಿಲ್ಲವಾದರೆ ಕನ್ನಡಿಗರು ಪ್ರಯತ್ನಪೂರ್ವಕವಾಗಿ ಅದನ್ನು ತಂದು ತುಂಬಬೇಕು. ವಿಜ್ಞಾನ ಸರಸ್ವತಿಯ ಭಂಡಾರದ ಮುದ್ರೆಯನ್ನೊಡೆಯಬಲ್ಲ ವಿಜ್ಞಾನಿರತ್ನರು ಬೇಕು ಈಗ. ಪ್ರಜಾಧರ್ಮ, ರಾಜ್ಯಸ್ವರೂಪ, ಆಡಳಿತವಿಚಕ್ಷಣೆ ಮುಂತಾದ ಹಿರಿಯ ತತ್ವಗಳನ್ನು ಬಿಡಿಸಿ ಹೇಳಬಲ್ಲ ರಾಜ್ಯಶಾಸ್ತ್ರಿಗಳು ಬೇಕು.

ಅನೇಕ ಹೊಸ ಹೊಸ ವಿಜ್ಞಾನ ಶೋಧನೆ—ಸಿದ್ಧಿಗಳ ಫಲವಾಗಿ ಈ ಪ್ರಪಂಚ ಬಹಳ ಚಿಕ್ಕದಾಗಿದೆ. ವಿಶ್ವದ ಮೂಲೆಯಿಂದ ಮೂಲೆಗೆ ಕೆಲವೇ ಗಂಟೆಗಳಲ್ಲಿ ಜನ ಪ್ರಯಾಣ ಮಾಡಬಹುದಾಗಿದೆ ವಾರ್ತೆಗಳಂತೂ ಇನ್ನೂ ಬೇಗ ಹರಡಬಲ್ಲವು. ಇಂಥಾ ವೇಳೆಯಲ್ಲಿ ಜನತೆಗೆ ಜಗತ್ತಿನ ವಿವಿಧ ರಾಷ್ಟ್ರಗಳ ಸ್ವರೂಪಪರಿಚಯ, ಅಲ್ಲಿನ ಪ್ರಜಾವರ್ಗದ ಆಶೆ ಆಕಾಂಕ್ಷೆಗಳ, ಚಳವಳಿಗಳ ಸೂಕ್ಷ್ಮ ಪರಿಚಯ ಅತ್ಯಗತ್ಯ. ಕನ್ನಡಿಗರಿಗೆ ತಮ್ಮ ತಾಯಿಮಾತಿನಿಂದ ಇದೆಲ್ಲ ಶಕ್ಯವಾಗದಿದ್ದರೆ ಅವರು ಇಂಗ್ಲಿಷಿಗೋ ಬೇರೊಂದು ಭಾಷೆಗೋ ಶರಣಾಗತರಾಗಬೇಕಾಗುತ್ತದೆ. ಸಹಜವಾಗಿಯೇ ಅವರು ಕನ್ನಡವನ್ನು ಅನಾದರಣೆ ಮಾಡುತ್ತಾರೆ. ಈ ಅನಾದರಣೆ ಮಾಯವಾಗಬೇಕಾದರೆ ಕನ್ನಡದ ಮಮತೆಯುಳ್ಳ ವಿದ್ವಜ್ಜನ ಈ ಕೊರತೆಗಳನ್ನು ಹೋಗಲಾಡಿಸಲು ಹೆಣಗಬೇಕು.

ಇಂದಿನ ನಮ್ಮ ನಾಗರಿಕತೆಗೆ ತಳಹದಿ ನಮ್ಮ ಹಿಂದಿನವರ ಜೀವನದ ಸಾಧನೆಗಳು. ಅವುಗಳ ಸ್ವರೂಪವನ್ನು ನಾವು ಅರಿಯಬೇಕು. ನಮ್ಮ ಪೂರ್ವಜರ ಆಶೆ ಆಕಾಂಕ್ಷೆಗಳು, ಅವುಗಳನ್ನು ಸಾಧಿಸಿಕೊಳ್ಳಲು ಅವರು ಮಾಡಿದ ಸಾಹಸಗಳು, ಅವು ನೆರವೇರಿದುವೆ ? ಇಲ್ಲವಾದರೆ, ಏಕೆ ನೆರವೇರಲಿಲ್ಲ ? ಈ ಎಲ್ಲ ಸಂಗತಿಗಳನ್ನೂ ವಿಚಾರ ಮಾಡುವದೇ ಚರಿತ್ರೆಯ ವ್ಯಾಸಂಗವೆನಿಸಿಕೊಳ್ಳುವದು ಪೂರ್ವ ಚರಿತ್ರೆಯ ಅರಿವಿಲ್ಲದೆ ಇಂದಿನ ಮುಂದಿನ ಕಾರ್ಯಗಳನ್ನು ರೂಪಿಸಲು ತೊಡಗುವುದು "ಭಿತ್ತಿರ್ವಿನಾ ಚಿತ್ರರಚನೆ" ಯಾದೀತು. ಪ್ರಾಚೀನ ಕನ್ನಡ ಸಾಹಿತ್ಯದ ಪರಿಚಯವನ್ನು ಕನ್ನಡಿಗರಿಗೆ ನೀಡಲು ಹಲವರು ವಿದ್ವಾಂಸರು ಶ್ರಮಿಸಿ ಬಹಳ ಮಟ್ಟಿಗೆ ಕೃತಕಾರ್ಯರಾಗಿದ್ದಾರೆ. ಹಳಗನ್ನಡದ ಹಲವು ಕೃತಿಗಳನ್ನು ಸಂಶೋಧಿಸಿ, ಮುದ್ರಿಸಲಾಗಿದೆ. ಈ ಕೆಲಸ ಇನ್ನೂ ನಡೆಯುತ್ತಲೂ ಇದೆ. ಹುಳುಹಿಡಿದು ಹೋಗುತ್ತಿದ್ದ ಈ ಜ್ಞಾನಭಂಡಾರವನ್ನು ಉಳಿಸಿ ಬೆಳಕಿಗೆ ತಂದದ್ದು ಮಹತ್ಕಾರ್ಯ. ಅನೇಕ ವಿದ್ವಾಂಸರ ಕನ್ನಡದ ಮಮತೆಯ ಪ್ರತೀಕಗಳಾಗಿ ಹಲವು ಉದ್ಗ್ರಂಥಗಳು ಎಲ್ಲ ಪುಸ್ತಕ ಭಂಡಾರಗಳನ್ನು ಅಲಂಕರಿಸಿವೆ. ಯಾರೊ ಕೆಲವರು ಪಂಡಿತರು, ಕನ್ನಡ ಕಲಿತು ಕಲಿ

ತಾರವಿಳಾಸ "ಮಿಸ್ಕಿನ" ಫೋನ ನಂ. "೨೩"

ALWAYS USE
"T. MISKIN"
BRAND
DELICIOUS & FRESH
FLOUR FOR GOOD
TASTE.
GADAG-BETGERI.

ಸಂತೋಷದ ಸಮಾಚಾರ

ಮದ್ರಾಸ ಇಲಾಖೆ ಹೈದರಾಬಾದ ಸಂಸ್ಥಾನ ಮೈಸೂರ ಸಂಸ್ಥಾನಗಳ ಕಡಲೆ ಹಿಟ್ಟಿನ ವ್ಯಾಪಾರಿಗಳಿಗೆ ನಾವು ಈ ಮೂಲಕ ಜಾಹೀರ ಪಡಿಸುವದೇನಂದರೆ:— 'ಸರಕಾರದ ನಿಯಂತ್ರಣದ ಮೂಲಕ ಮೇಲ್ಕಾಣಿಸಿದ ಭಾಗಗಳಿಗೆ ನಮ್ಮಲ್ಲಿ ತಯಾರಾದ ಕಡಲೆ ಹಿಟ್ಟನ್ನು ಇಷ್ಟು ದಿನಗಳ ವರೆಗೆ ರವಾನಿಸುವದು ಸಾಧ್ಯವಿದ್ದಿಲ್ಲಾ. ಆದರೆ ಈಗ ಸರಕಾರವು ನಿಯಂತ್ರಣವನ್ನು ತಗೆದ ಮೂಲಕ ನಾವು ಬೇಕಾದ ಭಾಗಗಳಿಗೆ ರವಾನಾ ಮಾಡಬಲ್ಲೆವು. ನಾವು ಮಿಶ್ರರಹಿತ ಕಡಲೆಯಹಿಟ್ಟನ್ನು ತಯಾರಿಸುತ್ತಿದ್ದೇವೆ. ಮತ್ತು ಹೆಚ್ಚಿನ ಬೇಡಿಕೆಗಳ ಮೂಲಕ ನಮ್ಮಲ್ಲಿ ಸಂಗ್ರಹ ಉಳಿಯುವದಿಲ್ಲಾ. ಯಾವಾಗಲೂ ತಾಜಾ ಇದ್ದದ್ದೇ ಸಿಗುವದು.

ಒಂದು ಸಲ ನಮ್ಮ ಹಿಟ್ಟು ಕೊಂಡವರು ಬೇರೆ ಹಿಟ್ಟನ್ನೆಂದಿಗೂ ಬೇಡಲಾರರು.

ಇದನ್ನು ಒಂದು ಸಲ ತರಿಸಿ ಪ್ರಯೋಗಿಸಿದಲ್ಲಿ ತಾನೇ ಖಾತ್ರಿಯಾಗುವದು.

(ಅನುಭವದಂತಹ ಶಿಕ್ಷಕರಿಲ್ಲಾ)

ಯಾವಾಗಲೂ ಗ್ರಾಹಕರ ಸೇವೆಯಲ್ಲಿಯೇ ಇರುವ

ತಯಾರಕರು

ವಾಯ್. ಟಿ. ಮಿಸ್ಕಿನ,

ಗದಗ -- ಬೆಟಗೇರಿ

ಸುವುದೇ ಉದ್ಯೋಗವಾಗಿ ಉಳ್ಳವರು ಅವುಗಳನ್ನು ಓದುತ್ತಾರೆ! ಜನಸಾಮಾನ್ಯರಿಗೆ ಆ ಗ್ರಂಥಗಳಿರುವ ಸಂಗತಿಯೇ ತಿಳಿಯದು! ತಿಳಿದರೂ ಹಳಗನ್ನಡದ, ನಡುಗನ್ನಡದ, ಆ ಕೃತಿಗಳನ್ನು ಓದಿ ಸ್ವಾರಸ್ಯಾನುಭವ ಮಾಡುವ ಸಾಮರ್ಥ್ಯ ಸಾಲದು. ಕೋಶನಿರಪೇಕ್ಷ ವಾದ ಶೈಲಿಯಲ್ಲಿ ಆ ಗ್ರಂಥಗಳಿಗೆ ವ್ಯಾಖ್ಯಾನ ಬರೆದು ಪ್ರಚಾರ ಮಾಡಿದರೆ ಸಾಧಾರಣ ಜನರು ತಮ್ಮ ತಾಯಿನುಡಿಯ ಈ ಮಹಾ ಕಾವ್ಯಗಳ ಸವಿಯನ್ನು ಸವಿದು ಆನಂದಿಸಿಯಾರು. ಇಲ್ಲದಿದ್ದರೆ ಅವು ತಾಯಿನುಡಿಯಲ್ಲಿದ್ದರೂ ಕನ್ನಡಿಗರಲ್ಲಿ ಬಹುಜನಕ್ಕೆ ಕನ್ನಡಿಯ ಗಂಟಾಗಿಯೇ ಉಳಿಯುತ್ತವೆ! ಸಂಸ್ಕೃತದಲ್ಲಿ ಇಂಥಾ ವ್ಯಾಖ್ಯಾನ ಗಳು ಬೇಕಾದ ಹಾಗಿವೆ. ಅನೇಕ ವ್ಯಾಖ್ಯಾನಕಾರರು ಕವಿಗಳಷ್ಟೇ ಮಾನ್ಯರೂ ಆಗಿದ್ದಾರೆ. ನಮ್ಮ ನೆರೆಯ ನಾಡಿನವರಾದ ತೆಲಗರು ತಮ್ಮ ಭಾಷೆಯ ಹಿರಿಯ ಕಾವ್ಯಗಳಗೆ ವ್ಯಾಖ್ಯಾನಗಳನ್ನು ಬರೆದು ಮುದ್ರಿಸಿ ಪ್ರಚಾರ ಮಾಡಿದ್ದಾರೆ. ಮನುಚರಿತ್ರೆ, “ಆಮುಕ್ತಮಾಲ್ಯದ ಮುಂತಾದ ಅನೇಕ ತೆಲುಗು ಕಾವ್ಯಗಳಿಗೆ ತೆಲುಗಿನ ವ್ಯಾಖ್ಯಾನಗಳು ಲಭಿಸುತ್ತವೆ. ಕನ್ನಡದಲ್ಲಿ “ಜೈಮಿನಿ ಭಾರತ”ಕ್ಕೆ ರಾಜಶೇಖರ ವಿಲಾಸಕ್ಕೆ ಇಂಥಾ ಟೀಕೆಗಳಿವೆ. ಆದರೆ ಅದೇಕೋ ಆ ಪ್ರಯತ್ನ ಇತರ ಕಾವ್ಯಗಳ ವಿಚಾರದಲ್ಲಿ ನಡೆಯಲಿಲ್ಲ. ಪಂಪಭಾರತ, ಆದಿ ಪುರಾಣ,ಗದಾಯುದ್ಧ,ಕುಮಾರವ್ಯಾಸ ಭಾರತ ಮೊದಲಾದ ಹಿರಿಯ ಕೃತಿಗಳು ಕನ್ನಡನಾಡಿನ ಮನೆಮನೆಯಲ್ಲಿಯೂ ನಲಿಯುವಂತಾಗ ಬೇಕು. ಉದ್ಗ್ರಂಥಗಳನ್ನು ದೇವರ ಸಂಪುಟಗಳಂತೆ ಮನೆಯಲ್ಲಿಟ್ಟದ್ದರೆ ಸಾಲದು.ಅವು ಕನ್ನಡಿಗರ ನಿತ್ಯದ ಪಾರಾಯಣ ಪುಸ್ತಕಗಳಾಗ ಬೇಕು, ಜೀವನದ ಸಲಹೆಗಾರರಂತಾಗಬೇಕು. ಹಾಗಿಲ್ಲದೆ ಯಾರೋ ಕೆಲವರು ವಿದ್ವಾಂಸರು ಬಂದು ಸಂಜೆ ಈ ಗ್ರಂಥಗಳ ವಿಚಾರದಲ್ಲಿ ವ್ಯಾಖ್ಯಾನಮಾಡಿ ಅಲ್ಲೊಂದು, ಇಲ್ಲೊಂದು ಪದ್ಯವನ್ನು ಆರಿಸಿ ಕೊಂಡು ಓದಿ ಅರ್ಥಹೇಳಿ ಹೊರಟು ಹೋದರೆ ಜನ ಸರ್ಕಸ್ಸಿನಲ್ಲಿ ಅಪೂರ್ವ ಸಾಧನೆಗಳನ್ನು ನೋಡಿ ಸಂತೋಷಪಟ್ಟಂತಾಗುವುದೇ ಹೊರತು ಅವರಿಗೇನೂ ಅನುಕೂಲವಾಗುವದಿಲ್ಲ. ಅವರು ಗರುಡಿ ಸಾಧನೆಗೆ ಇಳಿಯುವಂತೆ ಪ್ರೇರಣೆಯೊದಗುವದಿಲ್ಲ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಿಂದೆ ಬಹಳ ಭಕ್ತಿ ಶ್ರದ್ಧೆ ಯಿಂದ ಕೃಷಿ ಮಾಡಿದವರು ಜೈನ, ವೀರಶೈವ ಮತ್ತು ವೈಷ್ಣವ ಮತಾವಲಂಬಿಗಳು. ಅವರ ಧರ್ಮಪ್ರಚಾರಕ್ಕಾಗಿ ಅವರು ಕನ್ನಡ ದಲ್ಲಿ ಕಾವ್ಯರಚನೆಗೆ ಕೈಹಾಕಿದರು. ಆದ್ದರಿಂದ ಅವರ ಕಾವ್ಯಗಳಲ್ಲಿ ಆಯಾ ಧರ್ಮದ ತತ್ವಗಳ ಪ್ರಸ್ತಾಪ ಬಹಳವಾಗಿರುತ್ತದೆ. ಆ ಮತಪ್ರಕ್ರಿಯೆ ತಿಳಿದಿದ್ದರೆ ಆ ಗ್ರಂಥಗಳ ವ್ಯಾಸಂಗ ಹೆಚ್ಚು ಸುಲಭವೂ ಫಲದಾಯಕವೂ ಆಗುತ್ತದೆ. ಆದ್ದರಿಂದ ಈ ಧರ್ಮ ಗಳ ಸ್ಥೂಲ ಪರಿಚಯವಾದರೂ ಬೇಕು. ಅಲ್ಲದೆ ಜಗತ್ತಿನ ಪ್ರಧಾನ ಧರ್ಮಪಂಥಗಳ ಪರಿಚಯದಿಂದ ಧರ್ಮಸಮನ್ವಯ ಬುದ್ಧಿ ಸಿದ್ಧಿಸೀತು. ನಮ್ಮ ನಾಡಿನಲ್ಲಿಯೇ ಹುಟ್ಟಿ ಬೆಳೆದು ಏಷ್ಯದ ಹಲವು ರಾಷ್ಟ್ರಗಳಲ್ಲಿ ಹರಡಿರುವ ಬೌದ್ಧಧರ್ಮದ ಗ್ರಂಥಗಳ ಪರಿಚಯ ಈಗ ತಕ್ಕ ಮಟ್ಟಿಗೆ ಕನ್ನಡದಿಂದಲೇ ಲಭಿಸಬಹುದಾಗಿದೆ. ಕ್ರೈಸ್ತ ಮಿಷನರಿಗಳು, ತಮ್ಮ ಮತಕ್ಕೆ ಸಂಬಂಧಿಸಿದ ಹಲವು ಗ್ರಂಥ ಗಳನ್ನು ಕನ್ನಡಿಸಿದ್ದಾರೆ. ಇಸ್ಲಾಂ ಧರ್ಮದ ಪರಿಚಾಯಕ ಗ್ರಂಥ

ನೇಮಾನಿ ಪ್ರಾಡಕ್ಟ್ಸ, ಸಾಂಗಲಿ

(M. S. M. R.)

ತಯಾರಕರು :-- ಶ್ರೇಷ್ಠ ತರಗತಿಯ ಟಾಫಿ ಮತ್ತು ಕನ್‌ಫೆಕ್ಶನರಿ

ಕೆಳಗಿನ ಕಂಪನಿಗಳ ಅವುಗಳ ಮುಂದೆಕೊಟ್ಟ ಕ್ಷೇತ್ರಗಳ ಏಜಂಟರು ಮತ್ತು ಹಂಚಿಕೆಗಾರರು ಇರುತ್ತೇವೆ

ಡೆಕ್ಕನ್ ಎಂಜಿನಿಯರಿಂಗ ಲಿ; (ಒಕ್ಕಲತನದ ಉಪಕರಣಗಳು)

ಹೈದರಾಬಾದ (ಉಸ್ಮಾನಾಬಾದ ಬಿಟ್ಟು) ಅಹ್ಮದನಗರ ಜಿಲ್ಹೆಗಳಿಗಾಗಿ

ವುಟಕೂರ & ಕಂ. (ಸೆಂಟ್ರಿ ಫ್ಯೂಗಲ್ ಪಂಪುಗಳು)

ಹೈದರಾಬಾದ, ಅಹ್ಮದನಗರ, ಸೊಲ್ಲಾಪೂರ ಜಿಲ್ಹೆಗಳಿಗಾಗಿ

ಪಂಕಜ ಸೇಲ್ಸ ಆ್ಯಂಡ ಆಯಿಲ್ ಮಿಲ್ಸ, ಕೋಚಿನ



(ಟಾಯಲೆಟ್ ಮತ್ತು ವಾಶಿಂಗ ಸಾಬೂಣಗಳು)

ವಿಜಾಪೂರ, ಸೊಲ್ಲಾಪೂರ, ಧಾರವಾಡ, ಕೊಲ್ಹಾಪೂರ, ಸಾಂಗಲಿ, ಸಾತಾರಾ ಜಿಲ್ಹೆಗಳಿಗಾಗಿ

★ ★ ★

ನಮ್ಮ ಗ್ರಾಹಕರಿಗೆ ನೂತನ ವರ್ಷವು ಸುಖದಾಯಕವಾಗಲಿ.

ಗಳು ಕನ್ನಡದಲ್ಲಿಲ್ಲ. ವಿಜ್ಞಾನ ಪ್ರಗತಿಯಾದ ಮಾತ್ರಕ್ಕೆ ಮತ ಧರ್ಮಗಳನ್ನು ಅಸಡ್ಡೆ ಮಾಡಬೇಕಾಗಿಲ್ಲ. ಆತ್ಮೋನ್ನತಿಗೆ, ಆತ್ಮೋದ್ಧಾರಕ್ಕೆ ನೆರವಾಗುವ ಧರ್ಮದ ತಿರುಳನ್ನು ನಾವು ಸಂಗ್ರಹಿಸಬೇಕು. ವೈಷ್ಣವ ಧರ್ಮಕ್ಕೆ ಮುಖ್ಯವಾದ ಭಗವದ್ಗೀತೆಯ ವ್ಯಾಖ್ಯಾನಗಳು, ಕನ್ನಡ ಅನುವಾದಗಳು ಹಲವಿವೆ. ವೀರಶೈವ ಧರ್ಮಸಂಬಂಧಿಯಾದ ಹಲವು ಗ್ರಂಥಗಳು ಹುಟ್ಟಿಬಂದಿವೆ. ಆದರೂ ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸ ಇನ್ನೂ ಬೇಕಾದ ಹಾಗಿದೆ.

ಭಾಷಾ ಸಾಹಿತ್ಯಗಳ ವ್ಯಾಸಂಗಕ್ಕೆ ಸಂಬಂಧಿಸಿದ ಹಲವು ಶಾಸ್ತ್ರಗಳು ಸಂಸ್ಕೃತದಲ್ಲಿ ಬಹಳವಾಗಿ ಬೆಳೆದಿವೆ. ರಸ ವಿವೇಕ, ಅಲಂಕಾರ, ಧ್ವನಿ ಮುಂತಾದವುಗಳನ್ನು ವಿವರಿಸುವ ಅನೇಕ ಪ್ರೌಢ ಗ್ರಂಥಗಳು ಆ ದೇವಭಾಷೆಯಲ್ಲಿವೆ. ಅವುಗಳನ್ನು ಕನ್ನಡಕ್ಕೆ ತರಬೇಕು. ಅಲ್ಲದೆ ಕಾವ್ಯಸ್ವರೂಪವನ್ನು ಇಂಗ್ಲಿಷರೇ ಮೊದಲಾದ ಪಾಶ್ಚಾತ್ಯರು ಹೇಗೆ ವಿವೇಚಿಸಿರುವರೆಂಬುದನ್ನೂ ನಾವು ತಿಳಿದುಕೊಳ್ಳಬೇಕು. ಪಾಶ್ಚಾತ್ಯ ಕಾವ್ಯಮೀಮಾಂಸೆಯ ಗ್ರಂಥಗಳ ಸಾರವನ್ನೂ ಕನ್ನಡಕ್ಕೆ ತರಬೇಕು. ಆಗ ಕನ್ನಡದ ಪರಿಚಯದಿಂದ ಜಗತ್ತಿನ ಸಮಸ್ತ ಸಾಹಿತ್ಯಗಳ ತಿರುಳನ್ನು ತಿಳಿಯಲು ಶಕ್ಯವಾಗುವದು. ಆಗ ಕನ್ನಡದಲ್ಲಿ ವಿದ್ಯಾರ್ಥಿಯು ಅನ್ಯಭಾಷೆಯನ್ನು ಆಶ್ರಯಿಸಬೇಕಾದ ಅಗತ್ಯ ತಪ್ಪಿ ಹೋಗುತ್ತದೆ; ಅವನ ಜ್ಞಾನ ಹೆಚ್ಚು ವಿಶಾಲವಾಗುತ್ತದೆ.


ಅಂತೂ ಕನ್ನಡದ ಸಾಹಿತ್ಯಕ್ಕೆ ಹೊರಗಿನಿಂದ ತರಬೇಕಾದದ್ದು ಬೇಕಾದ ಹಾಗಿದೆ. ಕನ್ನಡದಲ್ಲಿಯೇ ಇರುವ ಹಲವು ರತ್ನಗಳನ್ನು ಕಡೆದು ಸಿದ್ಧಮಾಡಬೇಕಾದ ಕೆಲಸವೂ ಇದೆ. ಬೆಳೆಯೇನೋ ಬೇಕಾದ ಹಾಗಿದೆ; ಕುಯ್ಯುವವರು ಕಡಿಮೆ. ಕನ್ನಡದಲ್ಲಿ ಏನಿದೆ? ಎಂದು ಕೇಳಿಬಿಡುವುದು ಸುಲಭ. ಈ ಪ್ರಶ್ನೆಯನ್ನು ತಿರಸ್ಕಾರಬುದ್ಧಿಯಿಂದ ಕೇಳುವವರೇ ಹೆಚ್ಚು. ಅದಕ್ಕೆ ಉತ್ತರವನ್ನು ಬಹಳ ಹೊತ್ತು ಹುಡುಕಬೇಕಾಗಿಲ್ಲ. ಕನ್ನಡಿಗರಲ್ಲಿರುವುದೆಲ್ಲ ಕನ್ನಡದಲ್ಲಿಯೂ ಇದೆ. ಕನ್ನಡಿಗರ ಉತ್ಸಾಹ, ಕರ್ಮಶ್ರದ್ಧೆ, ಭಾಷಾಭಿಮಾನ, ಎಲ್ಲಕ್ಕೂ ಅವರ ತಾಯಿನುಡಿಯಾದ ಕನ್ನಡದ ಇಂದಿನ ಸ್ಥಿತಿಯೇ ಸಾಕ್ಷಿ. ಕನ್ನಡಕ್ಕಾಗಿ ಕನ್ನಡಿಗರು ದುಡಿದರೆ ಕನ್ನಡ ಅವರನ್ನು ಬದುಕಿಸುತ್ತದೆ, ಅವರ ಬಾಳನ್ನು ಬೆಳಗುತ್ತದೆ.

ಕೂಪರ

ಆಯಿಲ್ ಎಂಜಿನ್‌ಗಳು

೮ ರಿಂದ ೬೪ ಎಚ್. ಪಿ. ವರೆಗೆ
ಸಂಗ್ರಹದಿಂದ ಲಭ್ಯ
ಕಾಣಿರಿ ಅಥವಾ ಬರೆಯಿರಿ.

ಏಜಂಟರು :—
ಎಸ್. ಎ. ಪಾಟೀಲ & ಕಂ.
ಶಾಹುಪುರಿ, ಕೊಲ್ಹಾಪೂರ



COOPER OIL ENGINES
8 To 64 HP. Available From Stock
Visit Or Write.
Agents
S. A. PATIL & Co.
Shahupuri Kolhapur.

ಅಜಂತಾ
ಆರ್ಟ ಪ್ರೆಸ್, ಲಿ.
ಧಾರವಾಡ

ಮುದ್ರಣವು ಎಲ್ಲರ ಮೆಚ್ಚಿಗೆ ಪಡೆಯಬೇಕಾದರೆ ಶ್ರೇಷ್ಠತರಗತಿಯ ಯಂತ್ರೋಪಕರಣ ಹಾಗೂ ಕಲೆಯ ಪರಿಪೂರ್ಣತೆ ಬೇಕು. ಮುಂದೊರಿಯುತ್ತಿರುವ ಈ ಯುಗದಲ್ಲಿ ಮುದ್ರಣಕಾರ್ಯ ಅನಿವಾರ್ಯವಾಗಿರುವುದು. ಕರ್ನಾಟಕದಲ್ಲಿ ಈ ಕಲೆಯನ್ನು ಯೋಗ್ಯ ತರಗತಿಯಲ್ಲಿ ಸಾಧಿಸಲು ಈ ಸಂಸ್ಥೆ ಹುಟ್ಟಿದ್ದು ಈಗಾಗಲೇ ಕುಶಲ ಜನರ ಸಹಕಾರದಿಂದ ಹೊಸ ಮಾದರಿಯ ಜರ್ಮನ್ ಯಂತ್ರೋಪಕರಣಗಳನ್ನು ತೆಗೆದುಕೊಳ್ಳಲಾಗಿದೆ.

ಈ ಸಂಸ್ಥೆಯ ಅಧಿಕೃತ ಬಂಡವಲವು ೧ ಲಕ್ಷ ರೂಪಾಯಿಗಳಿದ್ದು ಸಾಮಾನ್ಯ ಜನರಿಗೂ ಈ ಸಂಸ್ಥೆಯ ಪಾಲುದಾರರಾಗಬೇಕೆಂಬ ಉದ್ದೇಶದಿಂದ ಪ್ರತಿಯೊಂದು ಪಾಲಿನ ಹಣವನ್ನು ೧ ಶೇರಿಗೆ ೧೦ ರೂಪಾಯಿ ಇಡಲಾಗಿದೆ.

ಲಾಭದಾಯಕವಾಗಿರುವ ಈ ಉದ್ಯೋಗದ ಪಾಲುಗಳಲ್ಲಿ ನಿಮ್ಮಗಳ ಹಣವನ್ನು ತೊಡಗಿಸಿ ಈ ಸಂಸ್ಥೆಯನ್ನು ಆದರ್ಶ ಸಂಸ್ಥೆಯನ್ನಾಗಿ ಮಾಡಲು ಕನ್ನಡಿಗರು ಸಹಕರಿಸುವಿರಾಗಿ ನಂಬಿದ,

ಡೈರೆಕ್ಟರ ಮಂಡಲ

ಶ್ರೀ ಆರ್. ಜಿ. ದೇಶಪಾಂಡೆ, ಮುಂಬೈ (ಚೇರಮನ್)
ಡಾ. ಜಿ. ಎನ್. ವಾಳವೇಕರ, M.B.B.S. ಮುಂಬೈ
ಶ್ರೀ ಆರ್. ಆರ್. ಕಾಳಕುಂದ್ರಿ, ಬಿ.ಎ.ಎಲ್‌ಎಲ್.ಬಿ. ಬೆಳಗಾವಿ
ಶ್ರೀ ಎ. ಬಿ. ದೇಶಪಾಂಡೆ, ಚಂದೂರ
ಶ್ರೀ ಎಸ್. ಎನ್. ದೇಶಪಾಂಡೆ, ಧಾರವಾಡ
ಶ್ರೀ ಸತ್ಯಜ್ಞಾನ ಗುಡಿ, ಧಾರವಾಡ

ಮ್ಯಾನೇಜಿಂಗ ಏಜಂಟರು

ಮೆ. ದೇಶಪಾಂಡೆ ಗುಡಿ ಕಂಪನಿ,
ಸುಭಾಸ ರೋಡ, ಧಾರವಾಡ.



ವಿಚಾರ, ಕಲ್ಪನಾ ಮತ್ತು ಆದರ್ಶ

ಲೇಖಕರು :— ಶ್ರೀ ಶಂ. ಬಾ. ಜೋಶಿ

ವಿಚಾರವು ಆಚಾರಮೂಲವಾದದ್ದು, ಅರ್ಥಾತ್ ಅದು ವಾಸ್ತವ ಸತ್ಯದ ಪ್ರತಿಬಿಂಬವೇ ಆಗಿದೆ. ಈ ವಾಸ್ತವತೆಯಲ್ಲಿ ಬೇರುಬಿಟ್ಟ ವಿಚಾರದಿಂದ ಉದ್ಭೂತವಾಗಿ ಬೆಳೆದಿರುವುದನ್ನೇ ಆದರ್ಶವೆನ್ನಬೇಕಲ್ಲದೆ ಕೇವಲ ಯುಕ್ತಿವಾದದಿಂದ ನಿಷ್ಪನ್ನವಾದ ಅವಾಸ್ತವವಾದವನ್ನು ಆದರ್ಶವೆಂದು ಕರೆದು ಬೆನ್ನುಹತ್ತಿದರೆ ಭಾರತದ ಉದ್ಧಾರ ಸಾಧ್ಯವಿಲ್ಲ. ಆದರ್ಶ ಮತ್ತು ಕಲ್ಪನೆಗಳಲ್ಲಿರುವ ಅಂತರವನ್ನು ಕಾಣಲು ನಾವು ಮೊದಲು ಕಲಿಯಬೇಕು.

ಈಗ ದೊರೆತಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಅದನ್ನು ಮೈಗೂಡಿಸಿಕೊಳ್ಳಬೇಕಾಗದ್ದರೆ ನಮ್ಮ ಜನಗಳಲ್ಲಿ ಮಾನಸಿಕ ಕ್ರಾಂತಿಯು ಆಗಲೇಬೇಕಾದುದನ್ನು ಕುರಿತು ಭಿನ್ನಾಭಿಪ್ರಾಯಗಳಿಲ್ಲ. ಆದರೆ ಆ ಕ್ರಾಂತಿಯನ್ನುಂಟುಮಾಡುವ ಬಗೆಯಾವುದೆಂಬುದನ್ನು ಕುರಿತು ಮಾತ್ರ ಇನ್ನೂ ಸಾಕಷ್ಟು ವಿಚಾರ--ಚರ್ಚೆಗಳು ಆಗಿಲ್ಲ.

ಮಾನವನಿಗೆ ವಿಚಾರಗಳ ಮೂಲಕ ಕಾಣುವುದೆ ವಿನಾ ಯಾವ ಹೊರ ಬೆಳಕಿನಿಂದಲ್ಲ. ಆದುದರಿಂದಲೆ ವಿಚಾರಗಳಿಗೆ ಬೆಳಕಿನ ಉಪಮೆಯನ್ನು ಕೊಡುವುದು ವಾಡಿಕೆಯಾಗಿದೆ. ನಮ್ಮ ನಾಡಿನಲ್ಲಿ ಈಗ ರೂಢವಾಗಿರುವ ದೃಷ್ಟಿಕೋನದಿಂದ—ವಿಚಾರ ಪದ್ಧತಿಯಿಂದ ನಮ್ಮ ಇರುವಿನಲ್ಲಿ ಮೂಲಭೂತವಾದ ಬದಲಾವಣೆಯು ಆಗಲಾರದು. ನಮ್ಮಲ್ಲಿ ಈ ವರೆಗೆ ನಡೆದುಬಂದಿರುವ ವಿಚಾರಸರಣಿಯೊಳಗಿನ ತಪ್ಪು ಎಲ್ಲಿದೆ ಎಂಬ ಅಂಶವನ್ನು ಚೆನ್ನಾಗಿ ಗುರುತಿಸಿ ಅದನ್ನು ಧೈರ್ಯದಿಂದ ಹೊಡೆದು ಹಾಕಿದಲ್ಲದೆ ನಮ್ಮ ನಾಡಿಗೆ ಉಳಿಗಾಲವಿಲ್ಲ. ಆದುದರಿಂದ ನಮ್ಮ ವಿಚಾರದ ರೀತಿಯಲ್ಲಿ ದೋಷವೆಲ್ಲಿದೆ? ಎಂಬುದನ್ನು ಮೊತ್ತಮೊದಲು ಕೂಲಂಕಷವಾಗಿ ವಿಮರ್ಶಿಸಿ ನೋಡಿಕೊಳ್ಳುವುದು ಕರ್ತವ್ಯವಾಗಿದೆ. ನಮ್ಮ ದೃಷ್ಟಿ—(ಎಂದರೆ ವಿಚಾರ) ದೋಷವು ಎಲ್ಲಿದೆ ಎಂಬುದು ಸ್ಪಷ್ಟವಾಗಿ ಗೊತ್ತಾದರೆ ಆಗಲೆ ಮಾನಸಿಕ ಕ್ರಾಂತಿಗೆ ಆರಂಭವಾಗುವುದು ಶಕ್ಯವಿದೆ.

ವಿಚಾರದ ವಿಷಯಕ್ಕಿರುವ ದೃಷ್ಟಿದೋಷವು ಯಾವ ತೆರದಿಂದ ನಮ್ಮನ್ನು ಆವರಿಸಿದೆಯೆಂಬುದನ್ನು ಮೊದಲು ನೋಡುವ.

'ವಿಚಾರ' ಮತ್ತು 'ಆಚಾರ' ಇವೆರಡೂ ಮೂಲದಲ್ಲಿ ಅಭಿನ್ನವಾಗಿವೆ. ಆಚಾರಕ್ಕೆ ಬಾರದ್ದು, ಆಚರಿಸಲು ಆಗದ್ದು ವಿಚಾರವೇ ಅಲ್ಲ. ಆದಕಾರಣ ವ್ಯವಹಾರ್ಯವಾದುದೇ ವಿಚಾರ. ವಿಚಾರವು ವಾಸ್ತವ (ಸತ್ಯ).

ವ್ಯವಹಾರದ ಆಚೆಗೆ ಇರುವುದು ಕಲ್ಪನೆ. ಆದಕಾರಣ ಕಲ್ಪನೆಯು ವಾಸ್ತವವಲ್ಲ; — ಅವಾಸ್ತವ. ಅವ್ಯವಹಾರ್ಯ, ಅವಾಸ್ತವವೆಂದರೆ ಸುಳ್ಳು ಎಂಬರ್ಥವಲ್ಲ; ವ್ಯವಹಾರಲೋಕದಲ್ಲಿ ಇಲ್ಲದ್ದು ಎಂದು ಮಾತ್ರ ಅರ್ಥ. ಹಿಂದೆ ಒಂದು ಕಾಲಕ್ಕೆ ವ್ಯವಹಾರ್ಯವಾಗಿರಬಹುದು; ಇಂದು ವ್ಯವಹಾರದಿಂದ ದೂರವಾಗಿದ್ದರೂ ಅದು ಕಲ್ಪನೆಯೆ ಸರಿ. ನಾಳೆ ವಾಸ್ತವಸೃಷ್ಟಿಯಲ್ಲಿ ಕಾಣಿಸಬಹುದಾಗಿರುವಂತಹದೂ ಇಂದು ಕಲ್ಪನೆಯೇ.

ವಿಚಾರಕ್ಕೂ ಕಲ್ಪನೆಗೂ ಇರುವ ಈ ಅಭ್ಯಂತರವನ್ನು ಹಲರು ಗಮನಿಸಿಲ್ಲ. ಇವೆರಡನ್ನೂ ಪರ್ಯಾಯಪದಗಳಂತೆ ಸಮಾನಾರ್ಥಕವಾಗಿ ಬಳಸುವರು! ಅದರಿಂದ ವಿಚಾರದಲ್ಲಿ ಗೊಂದಲವಾಗಿ ದೃಷ್ಟಿಕೋನವು ದೂಷಿತವಾಗುತ್ತದೆ.

ವಿಚಾರವು ಇತಿಹಾಸಬದ್ಧವಾಗಿದೆಯೆಂಬ ಮಾತನ್ನು ದುರ್ಲಕ್ಷಿಸಿರುವುದರಿಂದ ಭಾರತೀಯರ ಮಾನಸಿಕ ಕ್ರಾಂತಿಯಾಗುವುದಕ್ಕೆ ತುಂಬ ತಡೆಯಾಗಿದೆ. ದೇಶ ಕಾಲ ಪರಿಸ್ಥಿತಿಯ ಹಿನ್ನೆಲೆಯಿಲ್ಲದೆ ಯಾವ ವಿಚಾರವೂ ತಲೆದೋರಿಲ್ಲ; ತಲೆದೋರುವುದೂ ಇಲ್ಲ. ಆದುದರಿಂದ ಪ್ರತಿಯೊಂದು ವಿಚಾರಕ್ಕೂ ಒಂದು ಇತಿಹಾಸವುಂಟು. ದೇಶ-ಕಾಲ-ಪರಿಸ್ಥಿತಿಯ ಮುದ್ರೆಬೀಳದ ವಿಚಾರವೇ ದೊರೆಯದು.

ದೇಶ-ಕಾಲ-ಪರಿಸ್ಥಿತಿಯ ಮುದ್ರೆಯ ಸ್ಪಷ್ಟತೆಯಿಲ್ಲದ ೨+೨=೪ ಅಥವಾ H_2O, ಇಲ್ಲವೆ (ಕ್ಷ+ಯ)(ಕ್ಷ-ಯ)=ಕ್ಷ^{೨}-ಯ^{೨} ಇಂತಹ ಸ್ವಲ್ಪ ಭಾಗವನ್ನು ಬಿಟ್ಟರೆ ಉಳಿದ ಎಲ್ಲ ಭಾಗದಲ್ಲಿಯೂ ವಿಚಾರವು ಇತಿಹಾಸದ ಮುದ್ರೆಯುಳ್ಳದ್ದಾಗಿದೆಯೆಂಬುದು ಸಾರ್ವಕಾಲಿಕ ಸತ್ಯವಾಗಿದೆ. ಆದರೆ ವಿಚಾರದ ಹುಟ್ಟು, ಬೆಳವಿಯ ಈ ಬಗೆಯನ್ನು ಅರಿಯದ ಕಾಲದಲ್ಲಿ, ತತ್ವಜ್ಞಾನಾದಿ ಶಾಸ್ತ್ರಗಳು ದೇವದತ್ತವಾಗಿ ಅಥವಾ ಯಾವುದೊಂದು ವ್ಯಕ್ತಿಯಿಂದ ಪರಿಪೂರ್ಣಸ್ಥಿತಿಯಲ್ಲಿ ಜನರಿಗೆ ದೊರೆತವೆಂಬ ಕಲ್ಪನೆಯು ರೂಢವಾಯ್ತು. ಇಂದಿಗೂ ಬಹುಜನರ ತಲೆಯೊಳಗೆ ಈ ಕಲ್ಪನೆಯು ಮನೆಮಾಡಿಕೊಂಡು ನಿಂತಿರುವುದರಿಂದ ಅಂತಹರಿಗೆ ಈ ಲೋಕವ್ಯವಹಾರದ-ವಾಸ್ತವ ಸತ್ಯದ ಸರಿಯಾದ ಅರ್ಥವಾಗುವುದು ಅಸಾಧ್ಯವಾಗಿದೆ. ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿಯೇ ತತ್ವಜ್ಞಾನಗಳು ಕೂಡ ಮೈತಾಳಿವೆ.

ವಿಚಾರಗಳು ಹೊರಹೊಮ್ಮುವುದಕ್ಕೆ ಐತಿಹಾಸಿಕ ಸಾಮಾಜಿಕ

ಪರಿಸ್ಥಿತಿಯ ಒತ್ತಾಯವೇ ಕಾರಣವಾಗುತ್ತದೆ. ಹಿಂದುಮುಂದಿನ ಸಂಬಂಧವಿಲ್ಲದ "ತೆರಹಿನಲ್ಲಿ" "ಬರಿಯ ಬಚ್ಚ ಬಯಲಲ್ಲಿ", "ಶೂನ್ಯ — ನಿಃಶೂನ್ಯದಲ್ಲಿ" ಯಾವ ತತ್ವಪ್ರಣಾಲಿಯೂ ಜನ್ಮ ತಾಳಿಲ್ಲ; ಅದು ಸಾಧ್ಯವೂ ಇಲ್ಲ. ಲೋಕವ್ಯವಹಾರದಲ್ಲಿ ಅನುಭವಿಸಿದ ಆಘಾತ—ಪ್ರತ್ಯಾಘಾತಗಳಿಂದ, ಕಲಿತ ಸಂಗತಿಗಳಿಂದ ಚಿತ್ತದಲ್ಲಿ ಉಂಟಾದ ಆಂದೋಲನವನ್ನು ಹಿಡಿತದಲ್ಲಿ ತಂದು ತನ್ನೊಳಗಿನ ವಿಚಾರ ಮತ್ತು ಕಲ್ಪನೆಗಳನ್ನು ಬೇರ್ಪಡಿಸಿಕೊಳ್ಳಲು ಕೆಲಕಾಲ ಏಕಾಂತವು ಅವಶ್ಯವೆಂಬುದು ನಿಜ. ಆದರೆ ಲೋಕದೊಡನೆ ಏನೂ ಸಂಬಂಧವೇ ಇಲ್ಲದೆ ಎಲ್ಲಿಯಾದರೂ ಕಟ್ಟೇಕಾಂತದಲ್ಲಿ ಹುದುಗಿಕೊಂಡಿದ್ದು ತನಗೆ ಅಂತರ್ಜ್ಞಾನವು ಪ್ರಾಪ್ತವಾಗಿ ಭೂತ-ಭವಿಷ್ಯತ್ತುಗಳೆಲ್ಲವೂ ಅಂಗೈನೆಲ್ಲಿಯಂತೆ ಸ್ಪಷ್ಟವಾಗಿ ಕಾಣುತ್ತಿರುವುವೆಂದು ಹೇಳುತ್ತಿದ್ದರೆ, ಅಥವಾ ಯಾರಾದರೂ ಹಾಗೆ ನೆಮ್ಮುತ್ತಿದ್ದರೆ ಅದು ಶುದ್ಧ ವಂಚನೆಯಾಗಿದೆ. ಈ ಬಗೆಯಾದ ಆತ್ಮವಂಚನೆ—ಪರವಂಚನೆಯಿಂದ ಭಾರತದೊಳಗಿನ ಜನಸಾಮಾನ್ಯರು ವಾಸ್ತವ ಸತ್ಯಕ್ಕೆ ವಂಚಿತರಾಗಿದ್ದಾರೆ; ತಿಳಿಗೇಡಿತನದಲ್ಲಿ ಮುಳುಗಿದ್ದಾರೆ.

ಆಚಾರದಿಂದ ವಿಚಾರದ ದರ್ಶನವಾಗಿದೆ. ತಾಗು-ಬಾಗುಗಳಿಂದ (Trial & error) ಮಾನವನಿಗೆ ಜ್ಞಾನವು ದೊರಿಕೊಂಡಿದೆ. ಫಕ್ಕನೆ ಎಲ್ಲಿಯಾದರೂ ಅಥವಾ ಯಾರಿಂದಲಾದರೂ ಜ್ಞಾನದ ನಿಧಿ-ನಿಕ್ಷೇಪವು ಕೈಗೆ ಬಂದಿಲ್ಲ. ಇಂದು ತಂದೆಯಿಂದ ಮಗನಿಗೆ ಸುವರ್ಣ-ನಿಧಿಯು ಪ್ರಾಪ್ತವಾಗಬಲ್ಲುದಾದರೂ ಮೂಲದಲ್ಲಿ ಬಂಗಾರವು ಬಂದುದು ಹೇಗೆ? ಕಣಕಣವಾಗಿ ಹೆಕ್ಕಿಕೊಂಡು ಅದಿರುಗಳಿಂದ ಸಂಗ್ರಹಿಸಿಕೊಂಡು ಒಂದೆಡೆಗೆ ಕೂಡಿಬಿದ್ದ ಬಂಗಾರದ ರಾಶಿ ಈ ಸಿದ್ಧ ಸ್ವರೂಪದಲ್ಲಿಯೇ ಮಾನವನ ಕೈಗೆ ಬಂದಿತೆಂದು ಬಗೆದರೆ ಅದು ತಿಳಿಗೇಡಿತನವಲ್ಲದೆ ಮತ್ತೇನು! ವಿಚಾರ ಅಥವಾ ಜ್ಞಾನದ ಮಾತು ಹೀಗೆಯೆ ಇದೆ. ವಸ್ತು ಮತ್ತು ವಿಚಾರ ಒಂದರೊಳಗೊಂದು ಬೆರೆತುಕೊಂಡಿರುತ್ತವೆ. ಆದರೆ ಮುಂದೆ—ಕೃತಿ ಅಥವಾ ಆಚಾರದಲ್ಲಿ ವಿಚಾರವು ಬೇರ್ಪಟ್ಟು ಅದರ ಸಾಕ್ಷಾತ್ಕಾರವಾಗುತ್ತದೆ. ಹಾಲಿನಲ್ಲಿ (ಹೆಪ್ಪಿನ ಮೊಸರಿನಲ್ಲಿ) ಅಳವಟ್ಟಿರುವ ಬೆಣ್ಣೆಯು ಮಥನಕ್ರಿಯೆಯಿಂದ ಹೊರಬರುವಂತೆ ಆಚಾರ-ಕ್ರಿಯೆಗಳ ಮೂಲಕವಾಗಿಯೇ ಮಾನವನಿಗೆ ಜ್ಞಾನವು ಸಿದ್ಧಿಸಿದೆ; ಹೊರತು ಯಾವುದಾದರೂ ಗಿರಿಗಹ್ವರದಲ್ಲಿ ಕುಳಿತು ನೆತ್ತಿಗೆ ಕಣ್ಣೇರಿಸುವುದರಿಂದಲ್ಲ.

ವಿಚಾರ ಶಬ್ದದ ಹುಟ್ಟನ್ನು ಬಗೆದು ಭಾವಿಸಿದರೂ ಇದೇ ಮಾತು ನಿದರ್ಶನಕ್ಕೆ ಬರುತ್ತದೆ. ಆ-ಚಾರ ಮತ್ತು ವಿ-ಚಾರ ಇವೆರಡೂ ಚರ್ ಎಂಬ ಒಂದೇ ಧಾತುವಿನಿಂದ ತಲೆದೋರಿವೆ. ಚರ್ ಎಂದರೆ ನಡೆ, ವರ್ತಿಸು, ಇರು. ಆದಕಾರಣ ಆ-ಚಾರ ಮತ್ತು ವಿ-ಚಾರ ಇವೆರಡೂ ಒಂದೇ ಬಳಗದ ನುಡಿಗಳು. ಇವುಗಳ ಅರ್ಥದಲ್ಲಿ ವಿಶೇಷ ವ್ಯತ್ಯಾಸವು ಮೂಲದಲ್ಲಿ ಇಲ್ಲ. ಕಾರ್ಯ, ಕೃತಿ ಎಂದೇ ಎರಡಕ್ಕೂ ಅರ್ಥ. ದೈಹಿಕ (ವಿ)ಚರ್ಯೆ ಅಥವಾ ನಡೆವಳಿಗೆ ಆಚಾರವೆಂದೂ,

Best Sale For Best Products

HINDUSTAN TRADING CORPORATION, Belgaum.

(Manufacturers' Representatives)

We are the Sole Distributors for the following companies' products for Maharashtra and Karnatak Districts :-

1. **The Union Oil Company of California,** (U. S. A.) All kinds of petroleum products and motor and lubricating oils and fuel oils.
2. **The Bangalore Soap Factory, Bangalore :** Washing soaps 333 famous bar and Mysore Dasara and 333 special cakes.
3. **The Bombay Oil Industries Ltd., Bombay:** Refined (Government Agamark) Oils, groundnut, Coconut and Til oils in 5 lbs. 9 lbs. and 35 lbs. packed tins.
4. **The Nilgiri Tea Estates Nilgiri :** Best quality of B. O. P. Fannings and Hotel Dust tea in quarter chests.
5. **Krupp German Factory, Germany:** All kinds of machinery and hard-ware.
6. **American Fluroscent Lanterns U. S. A:** These lanterns can run on small batteries and can be utilised in villages without current.
7. **" Bauscher "** German make engines of all kinds.
8. **" Star "** batteries. All kinds of Motor batteries. for 13- 15 and 17 plates.
9. **Stainless Steel Agencies Ltd., Bombay:** All sorts of wares.
10. Also we are the Chief Agents for " Sulphate of Ammonia " & Super Phosphate (Govt. Manure).

The interested parties and merchants should apply for Taluka and Depot agencies.

— For Hindustan Trading Corporation,
Ramdeo Galli, BELGAUM

ಮಾನಸಿಕ (ಆ)ಚರ್ಯೆ ಅಥವಾ ನಡೆವಳಿಗೆ ವಿಚಾರವೆಂದೂ ಹೇಳುವ ವಾಡಿಕೆಯಾಗಿದೆ. ಒಟ್ಟಿನಲ್ಲಿ ಇವೆರಡೂ ನಡೆವಳಿ ಎಂಬರ್ಥದ ಪದಗಳೇ. ಇಂದಿನ ಕೃತಿಗೆ ಹಿಂದಿನ ವಿಚಾರದ ಲಾಭವು ದೊರೆಯುವುದು ನಿಜ. ಆದರೂ ಮೊತ್ತಮೊದಲಲ್ಲಿ ಆಚಾರದಿಂದ ವಿಚಾರವು ಹೊಳೆದಿತಲ್ಲದೆ ವಿಚಾರದಿಂದ ಆಚಾರವಲ್ಲ. ಆದಕಾರಣ ಕೃತಿಯು ಜ್ಞಾನದ ತಾಯಿ.

ವಿಚಾರವು ಪ್ರಾಥಮಿಕ ಸ್ಥಿತಿಯಲ್ಲಿ ಸಗುಣ 'ಸಾಕಾರವಾಗಿತ್ತು; ಮೂರ್ತ ಸ್ವರೂಪದಲ್ಲಿತ್ತು. ವೈದಿಕ ಋಷಿಗಳಿಗೆ ಭಾಷೆಯು ಕಣ್ಣಿಗೆ ಕಾಣುತ್ತಿದ್ದಿತೆಂಬಂತೆ ಉಲ್ಲೇಖಗಳಿವೆ. (ದದರ್ಶ ವಾಚಮ್; ಋಕ್ ೧೦, ೭೧·೪) ಇದರ ಅರ್ಥವೇನು? ಋಷಿಗಳಿಗೆ ಅಂದಿನ ಕಾಲದಲ್ಲಿ ಈಗಿನವರಿಗಿಂತ ಬೇರೆ ಕಣ್ಣುಗಳಿದ್ದುವೆಂದಲ್ಲ. ಈಗಲು ಕೂಡ ಭಾಷೆಯು ಕಣ್ಣಿಗೆ ಕಾಣುತ್ತದೆ. ಆದರೆ ಅದರ ಅರಿವು ಮಾತ್ರ ಮಸುಳಿಸಿದೆ. 'ಮುಂಬೈ' ಎಂದೊಡನೆ ನಮ್ಮ ಕಣ್ಣೆದುರು ನಿಲ್ಲುವುದೇನು? ನಾವು ನೋಡಿದ ಊರಿನ ಕೆಲವೊಂದು ಭಾಗವೇ ಅಲ್ಲವೇ ? ಚಿಕ್ಕಮಕ್ಕಳಲ್ಲಿಯೂ ಭಾವುಕರಲ್ಲಿಯೂ ಈ ಶಕ್ತಿಯು ವಿಶೇಷ ಬಲಿಷ್ಠವಾಗಿರುತ್ತದೆ. ಇದೇ 'ಪಶ್ಯಂತಿವಾಣಿ' ಭಾಷೆಯು ವಿಚಾರದ ಪ್ರತೀಕ. ಆದುದರಿಂದ ಭಾಷೆಯಂತೆ ವಿಚಾರವು ಪ್ರಥಮಾವಸ್ಥೆಯಲ್ಲಿ ಸಾಕಾರ ಸಗುಣರೂಪದ ಮೂರ್ತ ಸ್ವರೂಪದ್ದಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಈ ಮಾತು ಮೇಲೆ ವಿವರಿಸಿದ 'ವಸ್ತು ಮತ್ತು ವಿಚಾರಗಳು ಒಂದರೊಳಗೊಂದು ಬೆರೆತುಕೊಂಡಿರುತ್ತವೆ' ಎಂಬ ವಾಕ್ಯವನ್ನೇ ಇನ್ನೊಂದು ಬಗೆಯಾಗಿ ಪುಷ್ಟೀಕರಿಸುತ್ತದೆ. ಆದಕಾರಣ ವಿಚಾರವು ಮೊದಲು ವಸ್ತುರೂಪವಾಗಿತ್ತು. ಅದು ಕೇವಲ ಅವ್ಯಕ್ತ, ಅಮೂರ್ತ, ನಿರ್ಗುಣ, ನಿರಾಕಾರ ಎಂದು ಮುಂತಾಗಿ ಹೇಳುವುದು ಸಂಪೂರ್ಣ ಸತ್ಯವಲ್ಲ.

ಭಾಷೆಯಂತೆ ವಿಚಾರವೂ ಒಬ್ಬನಿಂದ ಆಗಿಲ್ಲ. ಭಾಷೆಯ ನಿರ್ಮಾಣಕ್ಕೆ ಯಾರೊಬ್ಬರೇ ಹೊಣೆಗಾರರೆಂದು ಬಗೆವುದು ತೀರ ಅಸಂಬದ್ಧ. ತಮಿಳು ಅಗಸ್ತ್ಯನಿಂದಾಯ್ತು; ತೆಲುಗು ಕಣ್ವನಿಂದಾಯ್ತು ಎಂಬಲ್ಲಿ ಲಾಕ್ಷಣಿಕವಾದ ಬೇರೆ ಯಾವುದಾದರೊಂದು ಅರ್ಥವಿರಬಹುದೇ ಹೊರತು ಇಡಿ ಭಾಷೆಗೆ ಅವರೊಬ್ಬರೇ ಕಾರಣರೆಂಬುದು ವಿಚಾರವಿಹೀನ ಮಾತು. ಗುಂಪಿನವರ ಅಥವಾ ಸಮಾಜದ ಸಂಬಂಧ, ಸಂಪರ್ಕ, ಸಂಘರ್ಷಣೆಯ ಒಡನಾಟದ ಬಾಳಿನಲ್ಲಿ ಕ್ರಮವಾಗಿ ಭಾಷೆಯು ರೂಪಗೊಂಡಿದೆ. ಯಾರಾಗಲಿ ಏಕಾಂತದಲ್ಲಿ ಕುಳಿತು ಎಣಿಕೆಹಾಕಿ ಕಲ್ಪನಾಸೃಷ್ಟಿಯಲ್ಲಿ ರಚಿಸಿದ ವಸ್ತುವಲ್ಲ ಅದು. ಐತಿಹಾಸಿಕ-ಸಾಮಾಜಿಕ ಘಟನಾಪ್ರವಾಹದಲ್ಲಿ ಹುಟ್ಟಿದ ಮತ್ತು ಹುಟ್ಟುತ್ತಲಿರುವ ಅವಳಿ ಮಕ್ಕಳು. ದೇಹ ಒಂದೇ, ಮುಖಗಳು ಎರಡು.

ಆದಕಾರಣ, **ವಿಚಾರವು ಸಾಮಾಜಿಕ.** ಸಮಾಜದಿಂದ ವಿಚಾರ; ಸಮಾಜಕ್ಕಾಗಿ ವಿಚಾರ. ಇಂದು ವ್ಯಕ್ತಿಯ ಮೂಲಕವಾಗಿ ಸಮಾಜಕ್ಕೆ ವಿಚಾರವು ದೊರೆಯುತ್ತಿದೆ. ವ್ಯಕ್ತಿ ಸಮಾಜಕ್ಕಾಗಿ ಚಿಂತಿಸುತ್ತಿದೆ. ಆದರೂ ವ್ಯಕ್ತಿಯ ವಿಚಾರವು ಕೇವಲ ಕಲ್ಪನೆಯಾಗಿ ಉಳಿಯದೆ ಆಚಾರದಲ್ಲಿ ಬರಬೇಕಾಗಿದ್ದರೆ, ಎಂದರೆ 'ವಿಚಾರ'ವೆಂಬುದು ಸಾರ್ಥವಾಗಬೇಕಿದ್ದರೆ ಅದಕ್ಕೆ ಇನ್ನೂ ಹಲವರ ಅರ್ಥಾತ್ ಸಮಾಜದ ನೆರವು ಬೇಕೇಬೇಕು. ಇನ್ನೊಂದರ್ಥ

ಗಟ್ಟಿಮುಟ್ಟಾದ ಚಂದನ್ನ ಮನೆ ಕಟ್ಟಿದಿರಾ?

ಮನೆ ಕಟ್ಟುವಾಗ! ಗೋಡೆ ತೊಲೆ ಕಂಬ ಮುಂತಾದವನ್ನು ಕೆಂಜಿಗದ ಬಾಧೆಯಿಂದ ತಾಳುವಂಥ ಉಪಾಯದ ಕಡೆ ಲಕ್ಷ ಕೊಡದಿದ್ದರಿಂದ ಅನೇಕ ಗಟ್ಟಿಮುಟ್ಟಾದ ಚಂದವಾದ ಮನೆಗಳು ಕಟ್ಟಿದ ಸ್ವಲ್ಪ ದಿನಗಳಲ್ಲಿಯೇ ಇರಲಿಕ್ಕೆ ಬಾರದ ಹಾಗೆ ಆದ ಉದಾಹರಣೆಗಳು ಕಣ್ಣಿಗೆ ಬೀಳುವವು.

ಸಾವಿರಾರು ರೂಪಾಯಿ ಹಾಕಿ ಮನೆ ಕಟ್ಟುವುದಾದರೆ ನಮಗಾಗಿಯೂ ನಮ್ಮ ಮಕ್ಕಳು ಮೊಮ್ಮಕ್ಕಳಿಗಾಗಿಯೂ ತಾಳುವಂತೆ ಕಟ್ಟುವದು ನಮ್ಮ ಕರ್ತವ್ಯವಲ್ಲವೇ ?

ರಾಮಕೃಷ್ಣ ಭಗವಾನ ಇಂಡಸ್ಟ್ರೀಜದ


"ಆ್ಯಂಟವ್ಹಾಇಟ ಆ್ಯಂಟಿ ಸೋಲೂಶನ"

ಅಂದರೆ

ಕೆಂಜಿಗನಾಶಕ ಮಿಶ್ರಣ

ಮನೆಯಲ್ಲಿಯ ತೊಲೆ, ಕಂಬ, ಮೇಜು, ಕುರ್ಚಿ ಮೊದಲಾದವುಗಳಿಗೆ ಈ ಮಿಶ್ರಣ ಹಚ್ಚಬೇಕು. ಇಲ್ಲವೆ ಗೋಡೆಯ ಅತ್ತಿತ್ತ ನೆಲ ಅಗಿದು ಎರಡು ಅಡಿ ಅಗಲ ಈ ಮಿಶ್ರಣದ ಪಟ್ಟೀ ಹಾಕಬೇಕು ಅಂದರೆ ಮನೆಯಲ್ಲಿಯ ಎಲ್ಲ ಕಟ್ಟಿಗೆಯ ಸಾಮಾನುಗಳು ಕೆಂಜಿಗದ ಉಪದ್ರವದಿಂದ ಮುಕ್ತವಾಗುವವು. ಎಂಜಿನಿಯರರೂ ಮಿಲ್ಸ ಮಾಲಕರೂ ಮನೆವಂತರೂ ಉಪಯೋಗಿಸಿ ಒಪ್ಪಿಗೆ ಕೊಟ್ಟದ್ದು.

ಹೆಚ್ಚಿನ ಮಾಹಿತಿಗಾಗಿ ಬರೆಯಬೇಕು. ಇಲ್ಲವೆ ಬಂದು ಕಂಡುಕೊಳ್ಳಬೇಕು.



ರಾಮಕೃಷ್ಣ ಭಗವಾನ ಇಂಡಸ್ಟ್ರೀಜ

ಪರಮಾನಂದವಾಡಿ, ಠಾಕುರದ್ವಾರ ರೋಡ,
ಮುಂಬಯಿ. ೨.

ದೇಶವನ್ನು ನೋಡಿರಿ! ಧರ್ಮಕಾರ್ಯಮಾಡಿರಿ!! ಪುಣ್ಯಪಡೆಯಿರಿ!

ಶ್ರೀಗೌರಿಶಂಕರ ಕಂಪನಿ, ಹುಬ್ಬಳ್ಳಿ.

ಇವರ ಶ್ರೀಕಾಶಿ ರಾಮೇಶ್ವರ ಯಾತ್ರೆಗಳು

೨೦ನೇ ಯಾತ್ರೆಯು ಪ್ರಸಿದ್ಧಿಸಿದಂತೆ ತಾ. ೨೬—೧೦—೧೯೫೦ಕ್ಕೆ ಹುಬ್ಬಳ್ಳಿಯಿಂದ ಹೊರಟು ಸುಖರೂಪದಿಂದ ಪ್ರವಾಸ ನಡೆದಿದೆ.



೨೧ನೇ ಶ್ರೀಕಾಶಿ ಕಲಕತ್ತಾ ಮುಂತಾದ ೫೦ ಪುಣ್ಯಕ್ಷೇತ್ರಗಳ ಯಾತ್ರೆಯು ತಾ. ೧೬–೧೧–೧೯೫೦ಕ್ಕೆ ೩ನೇ ವರ್ಗ ೧೬೫ರೂ. ೫೦ದಿ·

೨೨ನೇ ಶ್ರೀರಾಮೇಶ್ವರ ತಿರುಪತಿ ಕನ್ಯಾಕುಮಾರಿ ಮುಂತಾದ ೪೦ ಪುಣ್ಯಕ್ಷೇತ್ರಗಳ ಯಾತ್ರೆ ತಾ. ೨೨–೧೧–೧೯೫೦ಕ್ಕೆ ಹೊರಡುವದು. ೩ನೇ ವರ್ಗ ೧೧೫ರೂ. ೨೬ ದಿವಸ.

ರಾತ್ರಿ ಟ್ರೇನಿನಲ್ಲಿ ಮಲಗಲಿಕ್ಕೆ ಸ್ಥಳವು ಸಿಗುವದು. ಇಂದೇ ಟೆಲಿಗ್ರಾಫದಿಂದ ೨೫ರೂ. ಅಡ್ವನ್ಸ ಕಳಿಸಿ ಸ್ಥಳ ರಿಝರ್ವ ಮಾಡಿಸಿಕೊಳ್ಳಿರಿ.



ಇದೇ ನವೆಂಬರದಿಂದ ಚೇನ ಟಾಯಿಪ್ ಟ್ರ್ಯಾಕ್ಟರರೆಂಟಿಯ ಕೆಲಸವು ಪ್ರಾರಂಭವಾಗುವದು ಕರಿಕೆ ಹೊಲ ಹಸನ ಮಾಡಿಸತಕ್ಕವರು ಕೂಡಲೇ ತಿಳಿಸತಕ್ಕದ್ದು.


ದಿಂದಲೂ ವಿಚಾರವು ಸಾಮಾಜಿಕ. ಯಾವುದೊಂದು ವ್ಯಕ್ತಿಯು ಇಂತಹ ತತ್ವದ ಪ್ರಣೇತಾರ, ಇವರು ಆದಿಕಾರಣರು, ಕಾರಣ ಪುರುಷರು ಎಂದು ಮುಂತಾಗಿ ಹೇಳುವಲ್ಲಿ ಕೆಲವೊಂದು ಅತಿಶಯೋಕ್ತಿಯಿದೆ. ಆದಿಕಾರಣ ಅಥವಾ ಕಾರಣಪುರುಷರೆಂಬ ಆ ಮಹಾವ್ಯಕ್ತಿಗಳ ಮೊದಲು ಅನೇಕಾನೇಕರ ಪ್ರಯತ್ನಗಳ ಮೂಲಕ ಕೆಲವೊಂದು ಪೂರ್ವಭೂಮಿಕೆಯು ಸಿದ್ಧವಾಗಿರುತ್ತದೆ. ಆ ತೆರನಾದ ಹಿನ್ನೆಲೆಯಿಲ್ಲದೆ ಇದ್ದರೆ ಎಂತಹ ಮಹಾಪುರುಷನಿದ್ದರೂ ಅವರಿಂದ ಮಹಾಕಾರ್ಯವಂತೂ ಹೋಗಲಿ, ಯಾವ ಕಾರ್ಯವೂ ಆಗುವುದು ಸಾಧ್ಯವಿದ್ದಿಲ್ಲ. ಭಗವಾನ್ ಬುದ್ಧನ ಮೊದಲು ಹಲವು ಉಪನಿಷತ್ಕಾರರೇ ಯಜ್ಞಯಾಗಾದಿಗಳ ಜೊಳ್ಳುತನವನ್ನು ಹೊರಗೆಡಹಿದ್ದರು. ಶ್ರೀ ಶಂಕರಾಚಾರ್ಯರಿಗೆ ಕುಮಾರಿಲ, ಗೌಡಪಾದರೆ ಮೊದಲಾದವರು ಸಿದ್ಧಪಡಿಸಿದ ಹಿನ್ನೆಲೆಯ ಲಾಭವು ದೊರೆತಿತು. ಇಂತು ಸಮಾಜವು ಉಳಿಸಿ ಬೆಳೆಸಿಕೊಂಡು ಬರುವ ಭಾಷೆ, ವಿಚಾರಾದಿಗಳ ನೆರವನ್ನೇನೂ ಪಡೆಯದೆ ಯಾವನಾದರೂ ಮಹರ್ಷಿ, ಮಹಾತ್ಮ, ಪ್ರವಾದಿ, ಶಕಕರ್ತೃವು ಆದುದುಂಟೆ? ಆಗುವುದು ಸಂಭಾವ್ಯವೆ?

ಮಾನವನು ಬೆಳೆದುಬಂದ ಬಗೆಯನ್ನು ನಿರೀಕ್ಷಿಸಿದರೂ ಇದೇ ಮಾತು ದೃಢಪಡುತ್ತದೆ. 'ವ್ಯಕ್ತಿತ್ವ' ಎಂಬುದು ಅತ್ಯಾಧುನಿಕ ಕಾಲದಲ್ಲಿ ಒಡಮೂಡುತ್ತಿರುವ ವಿಚಾರ. ತೀರ ಆರಂಭಕಾಲದಿಂದ ಗುಂಪು, ಪಂಗಡ, ತಂಡಗಳೇ ನಡೆದು ಬಂದುದು ಇತಿಹಾಸದಲ್ಲಿ ಕಂಡುಬರುತ್ತದೆ. ಈಗ ತೀರ ಸಂಕ್ಷಿಪ್ತ ರೂಪತಾಳುತ್ತಿರುವ ಹಿಂದಿನ ನಮ್ಮ ಸಂಯುಕ್ತ ಕುಟುಂಬ ಪದ್ಧತಿಯು ಆ ಗುಂಪಿನ ಕಾಲದ ಚಿಕ್ಕ ಪ್ರತಿಕೃತಿ ಅಥವಾ ಅವಶೇಷವಾಗಿದೆ. ಅಲ್ಲಿ ವೈಯಕ್ತಿಕ ಹಕ್ಕು-ಬಾಬುಗಳಿಗೆ ಮಹತ್ವವಿಲ್ಲ. ಕುಟುಂಬ, ಕುಲ ಅಥವಾ ತಂಡವೇ ಮಹತ್ವದ್ದು.

ಆ ಪ್ರಾಥಮಿಕ ಜೀವನದಲ್ಲಿ ಜೀವನಕ್ಕಾಗಿ ಹೋರಾಟವೆ ಮುಖ್ಯವಾದ ಕೃತಿಯಾಗಿತ್ತು. ಜೀವನಕ್ಕಾಗಿ ವಿಚಾರ; ವಿಚಾರಕ್ಕಾಗಿ ಜೀವನವನ್ನು ಆಗಿನವರು ಅರಿಯರು. ವ್ಯಕ್ತಿಗೆ ಅಲ್ಲಿ ಸ್ಥಾನವಿಲ್ಲ. 'ಮಂದಿ'; 'ಜನ'; ಅದು, ಅಖಂಡ ಸಾಮೂಹಿಕ ಶಬ್ದವು. Sheep ಎಂಬಲ್ಲಿ ಬಿಡಿಬಿಡಿ ಕುರಿಯ ಲೆಕ್ಕವಿಲ್ಲ. ಹಾಗೆ ಅಂದಿನ ಜೀವನದ ಬಗೆ. ಒಬ್ಬನಿಂದ ಒಂದು ಮಾತು ಬಂದರೆ ಇನ್ನುಳಿದನರು ಅದನ್ನು ಅನುಮತಿಸಿಯೊ ಅಥವಾ ಸ್ವಲ್ಪ ಮಾರ್ಪಡಿಸಿಯೊ ಹೇಳುವುದು. ಇಂತಹ ಹೇಳಿತಗಳಿಂದ ಇಡಿ ಗುಂಪಿನ ಒಂದು ವಿಚಾರವು, ನಿರ್ಣಯವು ಸಿದ್ಧವಾಗುತ್ತಿತ್ತು. ಈ ಕಾರಣದಿಂದಲೂ 'ವಿಚಾರ' ಎಂಬುದು ಸಾಮೂಹಿಕ-ಸಾಮಾಜಿಕ. ಈಗ ಶಾಸ್ತ್ರೀಯ ಸಂಶೋಧನಾದಿಗಳಲ್ಲಿ ಇದೇ ತೆರನಾಗಿ ವಿಚಾರವು ಬೆಳೆದು ಬರುತ್ತಿದೆ. ಒಬ್ಬನ ಸಂಶೋಧನಕ್ಕೆ ಇನ್ನೊಬ್ಬನು ತನ್ನದೊಂದು ಪರಿಶಿಷ್ಟ ಜೋಡಿಸುವನು; ಇಲ್ಲವೆ ಅದನ್ನು ಖಂಡಿಸಿ ಬೇರೊಂದು ಮತವನ್ನು ಪ್ರತಿಪಾದಿಸುವನು. ಇಂತಿವೆಲ್ಲ ಸಂಗತಿಗಳನ್ನು ಗಮನಿಸಿದರೆ ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ವಿಚಾರವು ಸಾಮಾಜಿಕವೆಂದು ಹೇಳಬೇಕಾಗುತ್ತದೆ.

ಕಲ್ಪನೆಯನ್ನು ವಿಚಾರವೆಂದು ಬಗೆವಲ್ಲಿ ಅಜ್ಞಾನ ಅಥವಾ ಮೋಸವು ಕಂಡುಬರುತ್ತದೆ. ವಿಚಾರವು ವಾಸ್ತವ, ಸತ್ಯ. ತಾವು ಅನುಸರಿಸುತ್ತಿರುವುದು 'ಕಲ್ಪನೆ', ವಾಸ್ತವ (ಸತ್ಯ)

ಗದಗ
ನರಸಿಂಗಸಾ ಛಾಪ ಬೀಡಿ



Registered Trade Mark
ರಜಿಸ್ಟರ್ಡ ಟ್ರೇಡ್ ಮಾರ್ಕ


ಗೋಲ ಮತ್ತು ಚಪ್ಪಿ ಬೀಡಿಗಳು
ನಮ್ಮ ಎಲ್ಲ ಕಾರಖಾನೆಗಳಲ್ಲಿ ಸಿಗುತ್ತವೆ
ನರಸಿಂಗಸಾ ಗಣೂಸಾ ಹಬೀಬ ಆ್ಯಂಡ ಸನ್ಸ
ಬೀಡಿ ಕಾರಖಾನೆ, ಗದಗ.
ಕೇಂದ್ರ: ಗದಗ, ಶಾಖೆಗಳು: ಹುಬ್ಬಳ್ಳಿ, ಗಜೇಂದ್ರಗಡ, ರಾಣಿಬೆನ್ನೂರ



ಗೋವಾ
ಮಲಾಮು
ಗಜಕರ್ಣ, ಹುರುಕು, ತದ್ದು
ಮುಂತಾದ ಚರ್ಮರೋಗಗಳ ಮೇಲೆ
ಅಪ್ರತಿಮ ಗುಣಕಾರಿ
ಸ್ಟಾರ ಕಂಪನಿ, ಬೆಳಗಾವಿ

ಔದ್ಯೋಗಿಕ ಅಭಿವೃದ್ಧಿಯಿಂದಲೇ
ರಾಷ್ಟ್ರದ ಪ್ರಗತಿ..........
ನಿಮಗೆ ಬೇಕಾದ
ಹೊಸ ಕ್ರೂಡಾಯಿಲ್
ಎಂಜಿನ್ನುಗಳಿಗೆ
ನಮ್ಮನ್ನು ವಿಚಾರಿಸಿರಿ:—
ನಮ್ಮ ಗ್ರಾಹಕರಿಗೆ
ದೀಪಾವಳಿಯ
ಶುಭಚಿಂತನೆಗಳು
ಸ್ಟ್ಯಾಂಡರ್ಡ ಎಂಜಿನಿಯರಿಂಗ
[ಇಂಡಿಯಾ] ಏಜನ್ಸೀಜ,
ಕೊಪ್ಪೀಕರ ರೋಡ .... ಹುಬ್ಬಳ್ಳಿ.

ನಮ್ರಸೇವೆ, ರುಚಿಕಟ್ಟಾದ ಊಟ, ತಿಂಡಿ ತಿನಿಸು,
ಉಳಿದುಕೊಳ್ಳಲು ಉತ್ತಮ ಕೋಣೆಗಳು
ಇವೆಲ್ಲವುಗಳಿಂದಲೂ ಜನಮನವನ್ನಾಕರ್ಷಿಸಿದ
ಶ್ರೀ ಪದ್ಮನಾಭ ಭವನ
ಬಾಗಲಕೋಟ
ಬೋರ್ಡಿಂಗ ಮತ್ತು ಲಾಜಿಂಗ,
(ಶ್ರೀ ಶಕ್ತಿ ಟಾಕೀಜದ ಹತ್ತಿರ)



ನಮ್ಮ ಗ್ರಾಹಕರಿಗೆ
ದೀಪಾವಳಿಯು ಸುಖಪ್ರದವಾಗಲಿ

ವಲ್ಲ; ಎಂದು ಮನವರಿಕೆಯಾದರೆ ಯಾರೂ ಅದರ ಬೆಂಬತ್ತಲಾರರು. ಆದರೆ ಹಲವೆಡೆಗಳಲ್ಲಿ ನಾವು ನೆರೆನೆಮ್ಮಿರುವುದು ಕೇವಲ ಕಲ್ಪನೆಯಾಗಿರುವುದಾದರೂ ಅದರ ಅರಿವು ನಮಗಿರುವುದಿಲ್ಲ. ಐತಿಹಾಸಿಕ ಘಟನೆಗಳ ಅಜ್ಞಾನದ ಮೂಲಕವಾಗಿ ಈ ಬಗೆಯ ತಿಳಿಗೇಡಿತನವು ವಾಸ್ತವ ಸತ್ಯವನ್ನು ಮರೆಮಾಡುತ್ತದೆ. ಉದಾಹರಣಾರ್ಥವಾಗಿ ಚಾತುರ್ವರ್ಣ್ಯದ ವಿಚಾರವನ್ನು ತಕ್ಕೊಳ್ಳಬಹುದು. ಚಾತುರ್ವರ್ಣ್ಯವು ಸ್ವಲ್ಪ ಹೆಚ್ಚುಕಡಿಮೆ ಮಾನದಿಂದ ಈಗಲೂ ಉಂಟೆಂದು ಬಗೆದವರು ಇದ್ದಾರೆ. ಅದು ಎಂದಿನಿಂದಲೂ ಜನ್ಮವನ್ನೇ ಅವಲಂಬಿಸಿ ಬಂದುದೆಂದೂ ದೃಢವಾದ ಭಾವನೆಯಿದ್ದವರು ಉಂಟು. ಗೀತೆಯಲ್ಲಿ "ಚಾತುರ್ವರ್ಣ್ಯಂ...ಗುಣ–ಕರ್ಮ ವಿಭಾಗಶಃ" (ಚಾತುರ್ವರ್ಣ್ಯವು ಗುಣ ಮತ್ತು ಕರ್ಮವನ್ನು ಅವಲಂಬಿಸಿರುತ್ತದೆ) ಎಂದು ನಿಃಸಂದಿಗ್ಧವಾದ ಶಬ್ದಗಳಲ್ಲಿ ಹೇಳಿರುವುದಾದರೂ ಅದು ಜನ್ಮದಿಂದ ಬರುವುದೆಂಬ ಅರ್ಥಹಚ್ಚುವ ಪ್ರಯತ್ನಪಟ್ಟಿದ್ದನ್ನು ಕಾಣಬಹುದು. ಮಹಾಮಹೋಪಾಧ್ಯಾಯ ಡಾಕ್ಟರ್ ಕಾಣೆ ಅವರು **History of Dharma Shastra** ಎಂಬ ತಮ್ಮ ಮಹಾಗ್ರಂಥದಲ್ಲಿ ವೇದಕಾಲಕ್ಕೆ ಆರಂಭದಲ್ಲಿ ತ್ರೈವರ್ಣಗಳು ಗುಣಕರ್ಮವನ್ನು ಅವಲಂಬಿಸಿದ್ದನ್ನು ಸಪ್ರಮಾಣವಾಗಿ ವಿವರಿಸಿದ್ದಾರೆ.

ಐತಿಹಾಸಿಕ ಘಟನೆ, ಪರಿವರ್ತನಗಳ ಜ್ಞಾನವಿಲ್ಲದವರ ಅಜ್ಞಾನವು ಪ್ರಾಮಾಣಿಕತನದ್ದಾಗಿದೆ. ಆದರೆ ಇನ್ನೊಂದು ಬಗೆಯ ಮೆಳ್ಳರಿದ್ದಾರೆ. ಅವರು ಕಂಡೂ ಕಾಣದಂತೆ ನಡೆಯುತ್ತಾರೆ. ಇವರಿಗೆ ಐತಿಹಾಸಿಕ ಸಾಮಾಜಿಕ ಮಾರ್ಪಾಟಗಳ ಅರಿವು ಇರುತ್ತದೆ. ಆದರೆ ಅದನ್ನು ವ್ಯವಹಾರದಲ್ಲಿ ಉಪಯೋಗಿಸಿಕೊಳ್ಳಲು ಸಿದ್ಧರಿರುವದಿಲ್ಲ. ಕಣ್ಣುಮುಚ್ಚಿಕೊಂಡು ಹಾಗೆಯೆ ಸಾಗುವ ಪ್ರವೃತ್ತಿಯವರಿರುತ್ತಾರೆ. ಮೂರನೆಯದೊಂದು ಇದಕ್ಕೂ ಭಯಂಕರ ಪ್ರಾಣಿಗಳ ವರ್ಗವಿದೆ. ಇವರಿಗೆ ಎಲ್ಲವೂ ಗೊತ್ತಿದ್ದರೂ ಸ್ವಾರ್ಥಕ್ಕಾಗಿ ತಮ್ಮ ಬುದ್ಧಿವಂತಿಕೆಯಿಂದ ಕಲ್ಪನೆಯನ್ನು ವಿಚಾರ (ವಾಸ್ತವಸತ್ಯ)ವೆಂದು ಸಿದ್ಧಪಡಿಸುವ ಜಿಹ್ವಾಚಾಪಲ್ಯವಿರುತ್ತದೆ. ಈ ತೆರನಾಗಿ ತೀರ ತಿಳಿಗೇಡಿಗಳಿಂದ ತೀರ ಪರವಂಚಕರಾದ ವ್ಯಭಿಚಾರೀ ಬುದ್ಧಿಯವರ ವರೆಗಿನ ಹಲವು ಪ್ರಕಾರದ ಕಲ್ಪನಾವಾದಿಗಳನ್ನು ಸಮಾಜದಲ್ಲಿ ಕಾಣಬಹುದಾಗಿದೆ.

ಒಂದು ಕಾಲದ ವಿಚಾರ (ವಾಸ್ತವ ಸತ್ಯ) ಇನ್ನೊಂದು ಕಾಲದಲ್ಲಿ ಬರಿ ಕಲ್ಪನೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಭಾಷೆಯೊಳಗಿನ ಶಬ್ದಗಳಿಗೆ ಹೊಸ ಅರ್ಥವು ಪ್ರಾಪ್ತವಾಗಿ ಹಳೆಯ ಅರ್ಥವು ಹಿಂದೆ ಬೀಳುವುದು. ಶಬ್ದಗಳಿಗೆ ಮೂಲಾರ್ಥವು ಹೋಗಿ ಲಕ್ಷಣಾರ್ಥವು ಪ್ರಾಪ್ತವಾದಲ್ಲಿ ಈ ಮಾತನ್ನು ಮನಗಾಣಬಹುದು. 'ಪಂಥೇರು' ಒಂದು ಕಾಲಕ್ಕೆ ೫ ಶೇರಿನದೇ ಇದ್ದಿತು. ಬಳಿಕ ೫||, ೬, ೬|| ಶೇರು ಆಗುತ್ತ ಆಗುತ್ತ ಈಗ ೭ ಶೇರಿಗೆ 'ಪಂಥೇರು'! ಆಯಾ ಬದಲಾವಣೆಗೆ ಆಗಿನ ಕಾಲದ ಘಟನೆಗಳ ಕಾರ್ಯ–ಕಾರಣ ಸಂಬಂಧವು ಇಲ್ಲದೆ ಈ ಬದಲಾವಣೆಗಳು ಆಗುತ್ತಿರುವುದಿಲ್ಲ. ೨೮ ಪೌಂಡಿನ ಕ್ವಾರ್ಟರ-ಹಂಡ್ರಡ್‌ವೇಟಗಳ ತೂಕಕ್ಕೆ ಸರಿಹೋಗಲು ಇಂದು ನಮ್ಮ ಪಂಥೇರಿನ ರೂಪ ಬದಲಾಯ್ತು. ಅದಂತಿರಲಿ. ಆದರೆ, ಈ ಬದಲಾವಣೆ ಗೊತ್ತಿಲ್ಲದ ಪಂಚ ಎಂಬ ಸಂಸ್ಕೃತ ಶಬ್ದಾರ್ಥವನ್ನು ಅರಿಯದ ಯಾರಾದರೂ ಪಂಚ ಎಂದರೆ ಏಳು ಎಂದು ಹಟಹಿಡಿದು ಆ ಬಗೆಯಾದ ವ್ಯುತ್ಪತ್ತಿಯನ್ನು ಪ್ರಸ್ಥಾಪಿಸಿ

ದರೆ! ಯಜ್ಞ ಶಬ್ದಕ್ಕೆ ಅಗ್ನಿಯ ಮೂಲಕ ಪಶುಬಲಿ ಕೊಟ್ಟು ಮಾಡುವ ಆರಾಧನೆಯೆಂಬುದು ಸ್ಪಷ್ಟವಿದ್ದು ಪಿಷ್ಟ ಪಶುವನ್ನು ಬಲಿಕೊಡುವುದೇ ವೇದಕಾಲದಿಂದಲೂ ರೂಢವಾಗಿದ್ದಿತೆಂಬ ಸಿದ್ಧಾಂತ ಮಾಡುವುದು ಕಂಡುಬರುತ್ತದೆ! ಬೌದ್ಧರಿಂದ, ಜೈನರಿಂದ ಯಜ್ಞದ ವಿಡಂಬನವು-ಪಶುಹತ್ಯೆಯ ನಿಂದೆಯು ಆರಂಭವಾದ ಬಳಿಕ ಯಜ್ಞವಿಧಾನದ ರೀತಿಯನ್ನು ಮಾರ್ಪಡಿಸಿಕೊಳ್ಳದೆ ಗತಿಯಿರಲಿಲ್ಲ. ಜ್ಞಾನಯಜ್ಞ, ದ್ರವ್ಯಯಜ್ಞ, ನಾಮಯಜ್ಞ ಎಂದು ಮುಂತಾಗಿ ಯಜ್ಞಶಬ್ದದ ಅರ್ಥಗಳು ಬದಲಾದುವು. 'ಲಿಂಗ' ಶಬ್ದದ ಕತೆಯೂ ಹೀಗೆಯೆ ಇದೆ.

ಹಳೆಯದನ್ನು ಇದ್ದಕಿದ್ದಂತೆಯೇ ಅನುಸರಿಸುತ್ತಿದ್ದೇವೆಂಬ 'ಸನಾತನ' ಅಭಿಮಾನಕ್ಕೆ ಬಾಧೆ ಬರಬಾರದೆಂದು ಕಲ್ಪನಾವಾದಕ್ಕೆ ವಾಸ್ತವ (ಸತ್ಯದ) ಭ್ರಾಂತಿಯನ್ನು ಉಂಟುಮಾಡುವ ಪ್ರಯತ್ನಗಳಾಗುತ್ತವೆ. ಇಂತಹ ಪ್ರಯತ್ನಗಳ ಸಾಫಲ್ಯಕ್ಕಾಗಿಯೇ ಪವಾಡ ಕತೆಗಳು, ಪುರಾಣಾದಿ ಅತಿರಂಜಿತ ವರ್ಣನೆಗಳು, ಸ್ವರ್ಗ, ನರಕಗಳ ಭೀತಿ-ಆಮಿಷಗಳು ಮುಂದೆ ಬರುತ್ತವೆ. ಇವುಗಳ ಆಧಾರವಿಲ್ಲದೆ ಕಲ್ಪನಾವಾದವು ಬಂದರೆ ನಿಮಿಷವಾದರೂ ಸಮಾಜದಲ್ಲಿ ಉಳಿಯಲಾರದು.

ಈ ಬಗೆಯ ಮಾಯಾಜಾಲದಿಂದ ಸಂಭ್ರಾಂತರಾದ ಜನರನ್ನು ಎಚ್ಚರಗೊಳಿಸಲು ವಾಸ್ತವ ವಿಚಾರವು ಯಾವುದು, ಕಲ್ಪನಾವಾದವು ಯಾವುದು ಎಂಬದನ್ನು ವಿಂಗಡಿಸಿ ಮನವರಿಕೆ ಮಾಡಿಕೊಡುವುದು ಅಗತ್ಯವಾಗಿದೆ.

ಆದರ್ಶವಾದವು ಕಲ್ಪನಾವಾದದಿಂದ ಬೇರೆಯಾಗಿದೆ. ಇವೆರಡರ ಸುಸ್ಪಷ್ಟವಾದ ತಾರತಮ್ಯವು ಜನರಿಗೆ ತಿಳಿಯದೆ ಇರುವುದರಿಂದ ಅನೇಕಾನೇಕ ಕಲ್ಪನಾವಾದಿಗಳಿಗೂ ತಾವು ಆದರ್ಶವಾದಿಗಳೆಂದು ಮೆರೆಯಲಿಕ್ಕೂ ಹಾಗೆ ಜನರಿಂದ ಪೂಜೆಗೊಳ್ಳಲಿಕ್ಕೂ ಇಂಬು ದೊರೆತಿದೆ. ತಾನು ಕಂಡು ಮನವರಿಕೆ ಮಾಡಿಕೊಂಡುದನ್ನು ಆಚರಣೆಯಲ್ಲಿ ತರಲು ಹೋರಾಡುವವನೇ ಆದರ್ಶವಾದಿ. ಆಚರಣೆಯಿಂದ ದೃಶ್ಯರೂಪದಲ್ಲಿ ತಾರದೆ ಇದ್ದುದು ಆದರ್ಶವಾಗಲಾರದು. ಅದು ಬರಿಯ ಕಲ್ಪನೆಯೆ ಆಗುವುದು. ಆದರ್ಶವಾದಿಯು ತನ್ನ ದರ್ಶನವನ್ನು ತಾನು ಅಚರಣೆಗೆ ತರುವನಲ್ಲದೆ ತನ್ನ ಸುತ್ತುಮುತ್ತಲಿನವರನ್ನೂ ತನ್ನ ವಿಚಾರಕ್ಕೆ ಒಲಿಸಿಕೊಂಡು ತನ್ನ ಬಳಗವನ್ನು ಬೆಳಸಿಕೊಳ್ಳುವನು.

'ದೇವರು ಇದ್ದಾನೆ' ಎಂದು ಬಾಯಿಂದ ಹೇಳಿ, ಅಥವಾ ಯಾಂತ್ರಿಕ ರೀತಿಯಿಂದ ತನ್ನ ಧಾರ್ಮಿಕ ವಿಧಾನಗಳನ್ನೊಮ್ಮೆ ಮುಗಿಸಿಕೊಂಡು ಹೊರಬರುತ್ತಲೆ ಯಾವ ಹೇಸಿ ಕೆಲಸಕ್ಕೂ ಹಿಂದೆಗೆಯದವರ ಪಾಲಿಗೆ ದೇವರ ವಿಚಾರವು ಕೇವಲ ಕಲ್ಪನಾವಾದವೇ ಸರಿ. ಇವರು ನಾಸ್ತಿಕರಿಗಿಂತಲೂ ಹೀನರು; ಅಧಮರು. "ಭಾರತದಲ್ಲಿ ದೇವರಲ್ಲಿ ಶ್ರದ್ಧೆಯುಳ್ಳವರುಂಟು", "ಯುರೋಪದಲ್ಲಿ ಧರ್ಮಗ್ಲಾನಿಯಾಗಿದೆ; ಭಾರತವು ಧರ್ಮಗಳ ತವರ್ಮನೆ" ಎಂದು ಮುಂತಾದ ಜಂಭದ ಮಾತುಗಳನ್ನಾಡುವಾಗ ವಿವೇಕವು ಜಾಗೃತವಿದ್ದರೆ ನಾಲಗೆಯು ತಡವರಿಸದೆ ಇರಲಾರದು. ಏಕೆಂದರೆ ಧರ್ಮಶ್ರದ್ಧೆಯ ಆಗರವಾದ ಆಸ್ತಿಕರ ಕೇಂದ್ರವೆನಿಸುವ ಸಾವಿರಾರು ಗುಡಿಗುಂಡಾರ,

ದೀಪಾವಳಿಯ ಉಡುಗರೆ—

ನಿಮ್ಮ ಹೆಂಡರು ಮಕ್ಕಳಿಗೂ ಹಾಗೂ ಅಕ್ಕತಂಗೆಂದಿರಿಗೂ
ಚಿರಕಾಲ ಆನಂದದಾಯಕವಾದ ಉಡುಗರೆ ಯಾವದು?

WILICO
STRONGHOLD OF PROTECTION

'ವೆಸ್ಟರ್ನ ಇಂಡಿಯಾ'ದ

ಚಿರಮುಳೆ ಪೆನ್‌ಶನ್ ಪಾಲಿಸಿ

ಉದಾ :— ೨೫ ವಯಸ್ಸಿನ ತರುಣನು ತನ್ನ ೫೫ನೆಯ ವಯಸ್ಸಿನ ವರೆಗೆ ಕೊಡತಕ್ಕ ವಾರ್ಷಿಕ ಕಂತು... ... ೨೧೦-೫-೦
೫೫ನೇ ವಯಸ್ಸಿನಿಂದ ಅವನ ಜೀವಮಾನದ ವರೆಗೆ ದೊರೆಯುವ ವಾರ್ಷಿಕ ಪೆನ್‌ಶನ್ ೫೦೦-೦.೦
ಪಾಲಿಸಿಯ ಅವಧಿಯು ಮುಗಿಯುವ ಪೂರ್ವದಲ್ಲಿಯೇ ಅಕಸ್ಮಾತ್ ಮರಣವೊದಗಿದರೆ, ಅವನ
ವಾರಸದಾರರಿಗೂ ೧೫ ವರ್ಷಗಳ ವರೆಗೆ ಅಷ್ಟೇ ಪೆನ್‌ಶನ್ ನಿಶ್ಚಿತ ದೊರೆಯುವದು.

ಈ ದೀಪಾವಳಿಯ ಉಡುಗರೆಯು ನಿಮ್ಮ ಪ್ರಿಯ ಜನರಿಗೆ ಬಹುಕಾಲದ ವರೆಗೆ ಸುಖಶಾಂತಿಯನ್ನು ಕೊಡುವಂತೆ ಮಾಡಿರಿ. ಮತ್ತು ನೀವೂ ನಿಮ್ಮ ಮುಪ್ಪಿನ ಕಾಲದಲ್ಲಿ ನಿಶ್ಚಿತ ಸೌಖ್ಯ ಅನುಭವಿಸಿರಿ.

ಸಂಪೂರ್ಣ ವಿವರಕ್ಕಾಗಿ ಈಗಲೇ ಬರೆಯಿರಿ ಅಥವಾ ಭೆಟ್ಟಿಯಾಗಿರಿ.

ವೆಸ್ಟರ್ನ ಇಂಡಿಯಾ ವಿಮಾ ಕಂ. ಲಿ. (ಸಾತಾರಾ)

ಬೆಳಗಾಂವ ಶಾಖೆ:—೧೭೨೩ ರಾಮದೇವರ ಬೀದಿ ◆ ಹುಬ್ಬಳ್ಳಿ ಶಾಖೆ:— ನವಲೆ ಬಿಲ್ಡಿಂಗ, ಕೊಪ್ಪೀಕರ ರೋಡ

ತೀರ್ಥಕ್ಷೇತ್ರಗಳಿಂದ ತುಂಬಿದ ಈ ಭರತಖಂಡದಲ್ಲಿಯೇ ಕಳ್ಳ ಸಂತೆಯ ಮಾಡಿ ಸಮಾಜದ ನೆತ್ತರ ಹೀರುವ ದೇಶದ್ರೋಹಿ ನರ ರಾಕ್ಷಸರು ಇದ್ದಾರೆ. ಲಂಚತಿಂದು, ಸುಳ್ಳು ವ್ಯವಹಾರ ಮಾಡಿ ಹಣ ಗಳಿಸಿ ಅನ್ನ ದಾನಿಗಳೆನಿಸುವ 'ಪುಣ್ಯ' (?)ವಂತರಿದ್ದಾರೆ.

ಆದರ್ಶವಾದದ ಶುದ್ಧರೂಪವೆಂದರೆ ಆಡಿದ್ದನ್ನು—ಆದರ್ಶವೆಂದು ಇಟ್ಟುಕೊಂಡಿದ್ದನ್ನು ಸಾಮಾಜಿಕ ಆಚರಣೆಯಲ್ಲಿ ತಂದು ತೋರುವುದಕ್ಕಾಗಿ ಆಜನ್ಮ ಸವೆಯುವುದು. ಈ ಬಗೆಯ ಉದ್ಯೋಗದಲ್ಲಿ ತನ್ಮಯರಾದವರಲ್ಲದೆ ಉಳಿದವರಾರಿಗೂ ಆದರ್ಶವಾದಿಗಳೆಂದು ಹೇಳುವುದು ತಪ್ಪು.

ಮಹಾತ್ಮಾಜಿಯವರ ಅನುಯಾಯಿಗಳೆಂದು ಹೇಳಿಕೊಳ್ಳುವುದರಿಂದ, ಕಾಂಗ್ರೆಸ ಪಕ್ಷದಲ್ಲಿ ಸೇರುವುದರಿಂದ ಲಾಭವಿರುವ ಅನೇಕಾನೇಕರು ಕಲ್ಪನಾವಾದಿಗಳೊ ಆದರ್ಶವಾದಿಗಳೊ ಎಂಬುದನ್ನು ಜನ ಒರೆಗೆ ಹಚ್ಚಿನೋಡಲು ಕಲಿತರೆ ಮಿಥ್ಯಾಚಾರಿಗಳು ಯಾರೆಂಬುದು ಬಯಲಿಗೆ ಬರುವುದು. ಸದಾಚಾರ ಸ್ಮೃತಿ ಮೊದಲಾದ ಪುರಾತನ ಗ್ರಂಥಗಳು ಆದರ್ಶವೆಂದು ಸಾರಿಸಾರಿ ಹೇಳಿ ಅದರಂತೆ ಒಂದೂ ಆಚರಣೆಯನ್ನಿಡದೆ ಇದ್ದರೆ ಅದೆಂತಹ ಆದರ್ಶವಾದ!

ವ್ಯಕ್ತಿಯ ಮನಃಪ್ರವೃತ್ತಿ, ಸಂಸ್ಕಾರಭೇದ, ದೇಶಕಾಲಗಳ ಭೇದದ ಮೂಲಕ ಎಲ್ಲರ ಆದರ್ಶಗಳೂ ಒಂದೇ ಬಗೆಯವಾಗಿರುವುದು ಶಕ್ಯವಿಲ್ಲ. ಅದರಿಂದ ಒಬ್ಬರ ಆದರ್ಶ ಇನ್ನೊಬ್ಬರಿಗೆ ಕಲ್ಪನೆಯೆನಿಸಬಹುದು. ಸತ್ಯದ ಅನಂತಸ್ವರೂಪವನ್ನು ನೆನೆದುಕೊಂಡರೆ ಈ ಬಗೆಯ ವೈವಿಧ್ಯವೂ ಅಗತ್ಯವಾಗಿದೆ. ಏಕೆಂದರೆ ಅದರಿಂದ ಸತ್ಯದ ಬಹುಮುಖದ ದರ್ಶನವು ಆಗಲು ನೆರವು ದೊರೆಯುವುದು.

ಸತ್ಯದ ಗುತ್ತಿಗೆಯು ಯಾರೊಬ್ಬರಿಗೇ ಇಲ್ಲದ್ದರಿಂದ ಆದರ್ಶವಾದಿಗಳಲ್ಲಿ ತಮ್ಮಿಂದ ಭಿನ್ನವಾದ ವಿಚಾರಗಳುಳ್ಳವರ ವಿಷಯಕ್ಕೆ ತಾಳ್ಮೆಯಿರುವುದು ಅವಶ್ಯವಾಗಿದೆ, ಮಹಾತ್ಮಾಜಿಯವರ ಭಾಷೆಯಲ್ಲಿ ಹೇಳುವುದಾದರೆ ಇದುವೆ 'ಅಹಿಂಸೆ', 'ತನ್ನದೇ ಸತ್ಯ'ವೆಂಬ ಈರ್ಷೆಗೆ ಒಳಗಾದ ತಲೆತಿರುಕರು ಇನ್ನೊಂದು ಪಕ್ಷವನ್ನು ಹೀಯಾಳಿಸುವುದಕ್ಕೆ ಪ್ರವೃತ್ತರಾಗುತ್ತಾರೆ. ಹಿಂಸೆಯಿಂದ ಎದುರಾಳಿಗಳನ್ನು ನಾಶಮಾಡುವುದು ಕರ್ತವ್ಯವೆಂದೂ ಬಗೆಯುತ್ತಾರೆ! ಮಾರ್ಕ್ಸವಾದದ ಆವೇಶದಿಂದ ತಲೆಕೆಡಿಸಿಕೊಂಡು ಕೆಲರು ಜನಸಾಮಾನ್ಯರಲ್ಲಿ ವರ್ಗಕಲಹದ ಬೀಜಗಳನ್ನು ಬಿತ್ತುವುದು, ದ್ವೇಷಾಸೂಯೆ, ಹೊಟ್ಟೆಕಿಚ್ಚು ಹೊತ್ತಿಸುವುದು ತಮ್ಮ ಜೀವಿತ ಕಾರ್ಯವೆಂದು ಭ್ರಮಿಸಿ ಅಡ್ಡಹಾದಿಗೆ ಬಿದ್ದುದುಂಟು! ಅತ್ಯಾಚಾರ, ಹಿಂಸಾಚಾರಗಳು ಕರ್ತವ್ಯವೆಂದು ಭಾವಿಸುವಷ್ಟು ಬುದ್ಧಿಯು ಕೆಡುವುದಕ್ಕೆ ಪಕ್ಷಾಂಧತೆಯೆ ಕಾರಣ. ಈ ತೆರನಾದ ಆದರ್ಶವಾದವು ದೇಶದಲ್ಲಿ ತಲೆಯೆತ್ತುವುದರಿಂದ ನಾಡಿಗೆ ಎಳ್ಳಷ್ಟೂ ಹಿತವಾಗಲಾರದು.

ತನ್ನ ಆದರ್ಶವು ವಾಸ್ತವ ಸತ್ಯವಾಗಿದ್ದರೆ ಅದನ್ನು ಭವಿಷ್ಯತ್ಕಾಲವು ನಿರ್ಧರಿಸಲಿ. **ಇನ್ನೊಂದು ಪಕ್ಷದವರ ವಿಷಯಕ್ಕೆ ಆದರವು ಇಲ್ಲದವರು ತಮ್ಮ ಹೃದಯದೊಳಗಿನ ಮನುಷ್ಯತ್ವವನ್ನೇ ಕಳೆದುಕೊಂಡಿರುತ್ತಾರೆಂಬಲ್ಲಿ** ಸಂದೇಹವಿಲ್ಲ. ತನ್ನ ಆದರ್ಶದಲ್ಲಿ ನೆಮ್ಮಿ ನೆಚ್ಚಿ ನಡೆವ ಹಕ್ಕು ತನಗೆ ಹೇಗೆ ಉಂಟೊ ಹಾಗೆಯೆ ಇನ್ನೊಬ್ಬರಿಗೂ ಅವರ ಆದರ್ಶವನ್ನು ಅನುಸರಿಸಿ ಹೋಗುವ ಹಕ್ಕು ಉಂಟೆಂದು ಒಪ್ಪಿಕೊಳ್ಳಲೇಬೇಕು. ತಮ್ಮ ಆಚಾರದಿಂದ ತಮ್ಮ ವಿಚಾರಗಳ ವಾಸ್ತವತೆಯನ್ನು ಸಿದ್ಧಮಾಡಿ ತೋರಿಸಬೇಕು. ಇದರಿಂದ ಮಾತ್ರ ಸತ್ಯದ ಬಹುಮುಖ ದರ್ಶನವಾದೀತು. ವಿಚಾರವು ಯಾವುದು, ಕಲ್ಪನೆಯಾವುದು, ಆದರ್ಶವಾವುದು ಎಂಬುದು ಒರೆಗೆ ಹತ್ತೀತು. ಒತ್ತಾಯ, ಹೊಡೆದಾಟ, ಹಿಂಸೆಗಳಿಂದ ಅಸತ್ಯಕ್ಕೂ ಸತ್ಯದ ಸ್ಥಾನವು ದೊರೆಯಬಹುದಾಗಿದೆ. **ಅಸತ್ಯಕ್ಕೆ ಸತ್ಯದ ಪಟ್ಟ ಕಟ್ಟುವ ಗಡಿಬಿಡಿಯಲ್ಲಿಯೇ ಹಿಂಸೆಯ ಸಾಹಾಯ್ಯವು ಅವಶ್ಯವಾಗುತ್ತದೆ.**

ನಮ್ಮ ನಾಡಿನ ಮಾನಸಿಕ ಕ್ರಾಂತಿಯಾಗಬೇಕಾಗಿದ್ದರೆ ಕಲ್ಪನಾವಾದಕ್ಕೆ ದೊರೆತಿರುವ ಆದರ್ಶವಾದದ ಸ್ಥಾನಮಾನಗಳನ್ನು ಕಸಿದುಕೊಳ್ಳಬೇಕು. **ವಿಚಾರವು ವ್ಯವಹಾರ್ಯ; ವಾಸ್ತವ ಸತ್ಯ ಎಂಬುದನ್ನು ಮರೆಯಲಾಗದು.** ವಾಸ್ತವದ ಒರೆಗೆ ನಿಲ್ಲದ ಆದರ್ಶವು, ವ್ಯವಹಾರದಲ್ಲಿ ಕಾಣಿಸಿಕೊಳ್ಳದೆ ಯಾವಾಗಲೂ ವಾಸ್ತವದ ಆಚೆಗೇ ಉಳಿಯುವಂತಹ ಆದರ್ಶವಾದವು ಕೇವಲ ಕಲ್ಪನಾವಾದವೇ ಸರಿ ಎಂದೆನ್ನುವ ಎದೆಗಾರಿಕೆಯು ನಮ್ಮ ನಾಡಿನ ವಿಚಾರವಂತರಲ್ಲಿ ಉಂಟಾಗಬೇಕು.

ಇಲ್ಲವಾದರೆ ಅವಾಸ್ತವವನ್ನು ವಾಸ್ತವವೆಂದು ಪ್ರತಿಪಾದಿಸುವ ಯುಕ್ತಿವಾದಕ್ಕೆ ವಾಗ್ವೈಖರಿಗೆ, ಕಾವ್ಯ ಪ್ರತಿಭೆಗೆ ಮನಸೋತು, ಕಲ್ಪನಾವಾದವನ್ನು ಆದರ್ಶವಾದವೆಂದು ಬಗೆವುದನ್ನು ಬಿಡಲಾರದೆ ಹೋದರೆ ನಮ್ಮ ನಾಡಿನಲ್ಲಿ ಮಾನಸಿಕ ಕ್ರಾಂತಿಯು ಎಂದೂ ತಲೆದೋರಲಾರದು.

"ಯೋ ಧ್ರುವಾಣಿ ಪರಿತ್ಯಜ್ಯ ಅಧ್ರುವಂ ಪರಿಷೇವತೇ।
ತಸ್ಯ ಧ್ರುವಾಣಿ ನಶ್ಯಂತಿ ಅಧ್ರುವಂ ನಷ್ಟಮೇವ ಚ।
— ಉಪನಿಷತ್

ಯಾವನು ಧ್ರುವ ಎಂದರೆ ನಿಶ್ಚಿತ—ವಾಸ್ತವ ವಿಚಾರವನ್ನು ಬಿಟ್ಟು ಅನಿಶ್ಚಿತ ಅವಾಸ್ತವದ ಬೆನ್ನು ಹತ್ತುತ್ತಾನೊ ಆತನು ವಸ್ತುಸ್ಥಿತಿಗೆ(ಧ್ರುವಕ್ಕೆ) ಎರವಾಗುತ್ತಾನಲ್ಲದೆ ಅವಾಸ್ತವ(ಅಧ್ರುವ)ವಂತೂ ಎಂದೊ ನಷ್ಟವಾಗಿರುತ್ತದೆ.

ಸಂತತೀ ಪ್ರತಿಬಂಧಕ ಚೂರ್ಣ

ಇದನ್ನು ಸ್ತ್ರೀಯರು ಮುಂಜಾನೆ ೧ ಚೀಟು, ಸಂಜೆಗೆ ೧ ಚೀಟು ಇದರಂತೆ ೫ ದಿವಸ ೧೦ ಚೀಟು ಸೇವಿಸಿದರೆ, ಜೀವಕ್ಕೆ ಯಾವದೇ ತರದ್ದೂ ಅಪಾಯವಾಗದೆ, ಮತ್ತು ಪ್ರತಿ ತಿಂಗಳೂ ಮುಟ್ಟಾಗುತ್ತ ಅದ್ದು ಇಡಿ ಆಯುಷ್ಯತುಂಬಾ ಸಂತತಿಯು ಬಂದಾಗುತ್ತದೆ. ಇದಕ್ಕೆ ಪಥ್ಯವಿಲ್ಲ. ಅನುಪಾನ ಪತ್ರಿಕೆ ಸಂಗಡ ಬೆಲೆ ರೂ. ೫. ಅಂಚೆ ವೆಚ್ಚ ಬೇರೆ.

ಮುಟ್ಟು ತಡೆದ ದೋಷಕ್ಕೆ

ಇದನ್ನು ಸ್ತ್ರೀಯರು ಮುಂಜಾನೆ ೧ ಚೀಟು, ಸಂಜೆಗೆ ೧ ಚೀಟು, ಇದರಂತೆ ಆರು ದಿವಸ ೧೨ ಚೀಟು ಸೇವಿಸಿದರೆ ಜೀವಕ್ಕೆ ಯಾವದೇ ತರದಿಂದಲೂ ಅಪಾಯವಾಗದೇ ನಾಲ್ಕಾರು ತಿಂಗಳಿಂದಲೂ ತಡೆದ ಮುಟ್ಟು ಕೂಡಲೇ ಚಾಲೂ ಆಗುತ್ತದೆ. ಗರ್ಭವತಿ ಸ್ತ್ರೀಯರು ಮಾತ್ರ ಸರ್ವಥಾ ತೆಗೆದುಕೊಳ್ಳಬಾರದು. ತಕ್ಕೊಂಡರೆ ಕೂಡಲೇ ಗರ್ಭಪತನವಾಗುತ್ತದೆ. ಇದಕ್ಕೆ ಪಥ್ಯವೂ ಇಲ್ಲ.

ಬೆಲೆ ರೂ. ೧೦. ಅಂಚೆ ವೆಚ್ಚ ಬೇರೆ

ವಿಳಾಸ :— **ಡಾ. ಬಿ. ಆರ್. ಗಡೇಕರ**
ಬ್ಯಾಂಕ ರೋಡ, ವ್ಯಾದಾರ ಓಣಿ, ಧಾರವಾಡ

ರಾಜ್ಯಕ್ಕೊಂದು ಮಂತ್ರಿಮಂಡಲ ಬೇಕೆಂದೂ ರಾಜನಾದವನು ಅದರ ಸಲಹೆಯ ಮೇರೆಗೇ ನಡೆದುಕೊಳ್ಳಬೇಕೆಂದೂ ಪ್ರಾಚೀನ ಭಾರತದ ರಾಜ್ಯಪದ್ಧತಿಯಲ್ಲಿ ವಿಧಿಸಲಾಗಿದ್ದಿತು. ಬೇರೆಬೇರೆ ಮಂತ್ರಿಗಳಿಗೆ ಬೇರೆಬೇರೆ ಶಾಖೆಗಳನ್ನೂ ಹಂಚಿಹಾಕಲಾಗುತ್ತಿತ್ತು. ಆಧುನಿಕ ಅರ್ಥದಲ್ಲಿ ಆ ಮಂತ್ರಿಮಂಡಲಗಳನ್ನು "ಪ್ರಜಾ ತಂತ್ರಾತ್ಮಕ" ಎನ್ನಲು ಆಧಾರವಿಲ್ಲದಿದ್ದರೂ ರಾಜನ ಅಧಿಕಾರಕ್ಕೊಂದು ಅಂಕುಶವಾಗಿ ಪ್ರಜೆಗಳ ಪ್ರತಿನಿಧಿಯಾಗಿಯೇ ಅವು ಇರುತ್ತಿದ್ದವೆಂಬಲ್ಲಿ ಸಂದೇಹವಿಲ್ಲ.

ಪ್ರಾಚೀನ ಭಾರತದಲ್ಲಿಯ ಮಂತ್ರಿಮಂಡಲ ಪದ್ಧತಿ

ಲೇಖಕರು : ಶ್ರೀ. ವೆಂಕಟರಾವ ಭೀ. ನಾಯಕ, ಎಂ. ಎ., ಎಲ್ಎಲ್. ಬಿ.



ರಾಜ್ಯಶಕಟವು ಸುಸೂತ್ರವಾಗಿ ಸಾಗಬೇಕಾದರೆ ಅರಸನಿಗೆ ಕಾಲಕಾಲಕ್ಕೆ ಯೋಗ್ಯ ಸಲಹೆ ಸೂಚನೆಗಳನ್ನು ಕೊಡಲು ಮಂತ್ರಿಗಳಿರುವದುಚಿತ ಮತ್ತು ಅವಶ್ಯ ಎಂಬುದನ್ನು ಪ್ರಾಚೀನ ಭಾರತೀಯ ರಾಜ್ಯಶಾಸ್ತ್ರಜ್ಞರು ಚೆನ್ನಾಗಿ ಅರಿತಿದ್ದರು. ಆದುದರಿಂದಲೇ ಅವರು ತಮ್ಮ ನೀತಿಗ್ರಂಥಗಳಲ್ಲಿ ಮಂತ್ರಿಗಳ ಅರ್ಹತೆಗಳಾವುವೆಂಬುದನ್ನು ಕುರಿತು ಸಾಕಷ್ಟು ವಿವರಪೂರ್ವಕವಾಗಿ ವಿವೇಚಿಸಿರುವರು. ಈ ವಿಧಾನದ ಸಮರ್ಥನೆಗಾಗಿ ಮನುಸ್ಮೃತಿ, ಮಹಾಭಾರತ, ಅರ್ಥಶಾಸ್ತ್ರ, ಶುಕ್ರನೀತಿ ಇವೇ ಮೊದಲಾದ ಅನೇಕ ಗ್ರಂಥಗಳಿಂದ ಪ್ರಮಾಣ ವಚನಗಳನ್ನು ಎತ್ತಿ ತೋರಿಸಬಹುದು. ಒಂದೆಡೆಯಲ್ಲಿ ಮಹಾಭಾರತದಲ್ಲಿ ಬ್ರಾಹ್ಮಣರು ವೇದಾವಲಂಬಿಗಳಿದ್ದಂತೆ ಹೆಂಗಸರು ಗಂಡಂದಿರನ್ನವಲಂಬಿಸಿರುವಂತೆ ಹಾಗೂ ಪ್ರಾಣಿಗಳು ಮೇಘ ರಾಜನನ್ನು ಅವಲಂಬಿಸಿದ್ದಂತೆ ಅರಸನು ಮಂತ್ರಿಗಳನ್ನವಲಂಬಿಸಿರುವನೆಂದು ಹೇಳಲಾಗಿದೆ. ಹಾಗೆಯೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ

ಸಹಾಯಸಾಧ್ಯಂ ರಾಜತ್ವಂ ಚಕ್ರಮೇಕಂ ನ ವರ್ತತೇ
ಕುರ್ವೀತ [ರಾಜಾ] ಸಚಿವಾಂಸ್ತೇಷಾಂ ಚ ಶೃಣುಯಾನ್ಮತಮ್॥

ಅಂದರೆ ರಾಜತ್ವವು, ಅರಸೊತ್ತಿಗೆಯು ಹೆರವರ ನೆರವಿನಿಂದಲೇ ಸಾಧ್ಯವಲ್ಲದೆ ಒಬ್ಬೊಂಟಿಗನಿಂದಾಗದ ಕೆಲಸ. ಒಂದೇ ಗಾಲಿಯಿಂದ ರಥವು ನಡೆಯಲಾರದು. ಆದುದರಿಂದ ಸಚಿವರನ್ನು ನಿಯಮಿಸಿಕೊಳ್ಳಬೇಕು ಮತ್ತು ಅವರ ಮತವನ್ನು ಕೇಳತಕ್ಕದ್ದು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಏಕಾಕಿಯಾಗಿ ಮಾಡಬೇಕಾದರೆ ಸಾಮಾನ್ಯ ಕಾರ್ಯವು ಸಹ ಅತ್ಯಂತ ಕಠಿಣವಾಗಿ ತೋರುತ್ತದೆ. ಅಂದ ಬಳಿಕ ಮಂತ್ರಿಗಳ ಸಹಾಯವಿಲ್ಲದೆ ರಾಜ್ಯದ ಆಡಳತೆಯನ್ನು ನಡೆಸುವ ಗಡುಸಾದ ಕಾರ್ಯವನ್ನೇಕೆ ಮತ್ತು ಹೇಗೆ ಒಪ್ಪಿಕೊಳ್ಳಬೇಕು ? ಎಂದು ಮನುವು ನುಡಿದಿದ್ದಾನೆ: ಶುಕ್ರನು—

ಪುರುಷೇ ಪುರುಷೇ ಭಿನ್ನಂ ದೃಶ್ಯತೇ ಬುದ್ಧಿವೈಭವಂ ।
ಆಪ್ತವಾಕ್ಯೈರನುಭವೈರಾಗಮೈರನುಮಾನತಃ ॥
ನ ಹಿ ತತ್ಸಕಲಂ ಜ್ಞಾತುಂ ನರೇಣೈಕೇನ ಶಕ್ಯತೇ ।
ಅತಃ ಸಹಾಯಾನ್ವರಯೇದ್ರಾಜಾ ರಾಜ್ಯಾಭಿವೃದ್ಧಯೇ ॥
ವಿನಾ ಪ್ರಕೃತಿಸಂಮಂತ್ರಾದ್ರಾಜ್ಯನಾಶೋ ಭವೇದ್ಧ್ರುವಂ
ರೋಧನಂ ನ ಭವೇತ್ ತಸ್ಮಾದ್ರಾಜ್ಞಸ್ತೇ ಸ್ಯುಃ ಸುಮಂತ್ರಿಣಃ ॥

ಎಂದು ವಿಧಿಸಿದ್ದಾನೆ. ಬೇರೆ ಬೇರೆ ವ್ಯಕ್ತಿಗಳಲ್ಲಿ ಬಗೆ ಬಗೆಯಾದ ಬುದ್ಧಿಸಂಪತ್ತಿರುತ್ತದೆ. ಅದೆಲ್ಲವನ್ನು ತಿಳಿದುಕೊಳ್ಳುವುದು ಒಬ್ಬನಿಂದಲೇ ಆಗದ ಹಾಗು ನೀಗದ ಕೆಲಸ. ಆದುದರಿಂದ ರಾಜನು ತನ್ನ ರಾಜ್ಯಾಭಿವೃದ್ಧಿಗಾಗಿ ಅಂದರೆ ಪ್ರಜಾಹಿತಕ್ಕಾಗಿ ಇತರರ ಸಹಾಯವನ್ನು ಬಯಸತಕ್ಕದ್ದು. ಪ್ರಜೆಗಳ ಆಪ್ತಾಲೋಚನೆಯಿಲ್ಲದಿದ್ದರೆ ರಾಜ್ಯನಾಶವಾಗುವದೇ ನಿಶ್ಚಿತ. ಆದುದರಿಂದ ಯೋಗ್ಯರಾದ ಮಂತ್ರಿಗಳು ರಾಜನಿಗೆ ಅವಶ್ಯ ಎಂಬುದೇ ಶುಕ್ರನೀತಿಯಿಂದ ಉದ್ಧರಿಸಿದ ಮೇಲಿನ ಶ್ಲೋಕಗಳ ಸಾರಾಂಶವಾಗಿದೆ. ಇದರಿಂದ ಪ್ರಾಚೀನ ಭಾರತೀಯ ರಾಜ್ಯಶಾಸ್ತ್ರಕಾರರು ಅರಸನಿಗೆ ಮಂತ್ರಿಗಳಿರುವದು ಅಪರಿಹಾರ್ಯವೆಂದು ಭಾವಿಸಿದ್ದುದು ಸ್ಪಷ್ಟವಾಗುತ್ತದೆ.

ಆದರೆ ಈ ನಿಯಮವನ್ನು ಪ್ರತ್ಯಕ್ಷವಾಗಿ ಬಳಕೆಯಲ್ಲಿ ತಂದಿದ್ದರೋ ಹೇಗೆ ಎಂಬುದನ್ನು ಪರಿಶೀಲಿಸದೆ ಬರೀ ತಾತ್ವಿಕ ನಿರ್ಬಂಧಗಳಿದ್ದುವೆಂದು ಹೇಳುವದರಿಂದ ನಮ್ಮ ಪೂರ್ವಿಕರ ರಾಜ್ಯಶಾಸ್ತ್ರಪರಿಜ್ಞಾನದ ವಿಮರ್ಶೆಯು ಪರಿಪೂರ್ಣವಾಗಲಾರದು. ಆದುದರಿಂದ ಆ ಬಗೆಗೆ ವಿವೇಚನೆಯನ್ನು ಮಾಡುವದು ಅಪ್ರಸ್ತುತವಾಗಲಾರದು. ವೇದಕಾಲದಲ್ಲಿ ಮಂತ್ರಿಗಳ ಸ್ಥಾನದಲ್ಲಿ ರತ್ನಿಗಳಿದ್ದರೆಂದು ಯಜುರ್ವೇದ ಸಂಹಿತೆ ಹಾಗು ಬ್ರಾಹ್ಮಣಗಳಿಂದ ತಿಳಿದುಬಂದಿದೆ. ಇಂತಹ ರತ್ನಿಗಳಲ್ಲಿ ಪುರೋಹಿತನಿಗೆ ಅಗ್ರಸ್ಥಾನವಿದ್ದಿತೆಂಬುದನ್ನು ಮರೆಯಲಾಗದು. ಅಲ್ಲದೆ ಸೇನಾನಿ, ಗ್ರಾಮಣಿ, ಸಂಗ್ರಹೀತಾ ಹಾಗು ಭಾಗಧುಕ್ ಎಂದು ಕೆಲ ಹೆಸರುಗಳು ಬಂದಿವೆ. ವೇದಕಾಲದ ರತ್ನಿಮಂಡಲದಲ್ಲಿ ರಾಜನ ಆಪ್ತಬಾಂಧವರು, ಪುರೋಹಿತ, ಅಕ್ಷಾವಾಪ, ಸೇನಾನಿ, ಗ್ರಾಮಣೀ, ತಕ್ಷಾ, ಸಂಗ್ರಹೀತಾ, ಭಾಗಧುಕ್ ಮೊದಲಾದವರಿದ್ದರೆಂದು ಹೇಳಬಹುದು. ಈ ರತ್ನಿಗಳ ಸ್ಥಾನಮಾಹಾತ್ಮ್ಯೆಯು ಬಹುವಾಗಿದ್ದಿತೆಂಬುದಕ್ಕೆ ವಾಜಪೇಯ ಯಾಗಕಾಲದಲ್ಲಿ ಅರಸನೇ ಅವರ ಮನೆಗೆ ಹೋಗಬೇಕಾಗುತ್ತಿತ್ತಲ್ಲದೆ ಅವರೇ ರಾಜ್ಯದಾತರೆಂದು ವರ್ಣಿಸಲ್ಪಟ್ಟಿರುವದು ಸಾಕ್ಷಿಯಾಗಿದೆ. ಸಭಾಸಮಿತಿಗಳು ವೇದಕಾಲದಲ್ಲಿ ಅತ್ಯಂತ ಬಲಿಷ್ಠ ಸಂಸ್ಥೆಗಳಾಗಿದ್ದವಲ್ಲದೆ ಬಹುಶಃ ರತ್ನಿಗಳನ್ನು ಈ ಸಮಿತಿಗಳ ಸದಸ್ಯರೊಳಗಿಂದಲೇ ಆರಿಸಲಾಗುತ್ತಿದ್ದಿತೆಂದು ಊಹಿಸಲು ಅವಕಾಶವಿದೆ.

ಧರ್ಮಶಾಸ್ತ್ರ ನೀತಿಶಾಸ್ತ್ರಗಳಲ್ಲಿ ಉಕ್ತವಾದ ಮಂತ್ರಿ, ಸಚಿವ, ಅಮಾತ್ಯ ಎಂಬ ಪದಗಳಿಂದ ಹೆಚ್ಚು ನಿಚ್ಚಳವಾದ ಕಲ್ಪನೆಯು ನಮಗೆ ಆಗುತ್ತದೆಂದು ಹೇಳಿದರೆ ತಪ್ಪಾಗದು. ಮೌರ್ಯರ ಹಾಗು ಸುಂಗರ ಕಾಲದಲ್ಲಿ ಮಂತ್ರಿಪರಿಷತ್ತೆಂಬ ಸಂಸ್ಥೆಯಿದ್ದುದು ಐತಿಹಾಸಿಕಆಧಾರ ಪ್ರಮಾಣಗಳಿಂದ ಸುವ್ಯಕ್ತವಾಗಿದೆ. ಸಚಿವ,ಅಮಾತ್ಯ ಮಂತ್ರಿ ಎಂಬ ಪದಗಳಲ್ಲಿಯು ಪರಸ್ಪರವಾಗಿರುವ ಸೂಕ್ಷ್ಮವಾದ ಅರ್ಥಭೇದವನ್ನು ಅತ್ಯಂತ ಪ್ರಾಚೀನತರವಾದ ಗ್ರಂಥಗಳಲ್ಲಿ ಹೆಚ್ಚಾಗಿ ನಾವು ಕಾಣುವದಿಲ್ಲ. ಆದರೆ ಮುಂದೆ ಬರಬರುತ್ತ ಧೀಸಚಿವನನ್ನು ಮಂತ್ರಿಯೆಂದೂ ಉಳಿದವರನ್ನು ಕರ್ಮಸಚಿವರೆಂದೂ ಕರೆಯುವದು ವಾಡಿಕೆಯಾಯ್ತು. ಇಂದಿನ ಪರಿಭಾಷೆಯಲ್ಲಿ ಮಾತಾಡುವದಾದರೆ ಕರ್ಮಸಚಿವರನ್ನು ಸೆಕ್ರೆಟರಿಗಳೆನ್ನಬಹುದು.

ಇನ್ನು ಈ ಮಂತ್ರಿಮಂಡಲದ ಸದಸ್ಯರ ಸಂಖ್ಯೆ ಎಷ್ಟಿರುತ್ತಿದ್ದಿತೆಂಬುದನ್ನು ನೋಡುವ. ಮನುಸ್ಮೃತಿಯ ಪ್ರಕಾರ ''ಸಚಿವಾನ್ ಸಪ್ತ ಚಾಷ್ಟೌ ವಾ ಕುರ್ವೀತ" ಅಂದರೆ ಏಳು ಇಲ್ಲವೆ ಎಂಟು ಜನರಿರಬೇಕೆಂದಿದ್ದಿತು. ಮಹಾಭಾರತದಲ್ಲಿ "ಅಷ್ಟಾನಾಂ ಮಂತ್ರಿಣಾಂ ಮಧ್ಯೇ ಮಂತ್ರಂ ರಾಜೋಪಧಾರಯೇತ್''ಎಂದುಹೇಳಿರುವದರಿಂದ ಎಂಟು ಜನ ಮಂತ್ರಿಗಳಿರುತ್ತಿದ್ದರೆಂದು ತರ್ಕಿಸಲಾಸ್ಪದವುಂಟು. ಕೌಟಲ್ಯನ ಅರ್ಥಶಾಸ್ತ್ರದಲ್ಲಿ ಬೇರೆ ಬೇರೆ ನೀತಿಶಾಸ್ತ್ರಕಾರರ ಮತಗಳನ್ನು ಅವತರಿಸುತ್ತ ಮನುಸ್ಮೃತಿಯ ಅನುಯಾಯಿಗಳು ಹನ್ನೆರಡು ಜನ ಮಂತ್ರಿಗಳಿರತಕ್ಕದ್ದೆಂದು ಹೇಳುತ್ತಿರುವರೆಂದೆನ್ನಲಾಗಿದೆ. ಹಾಗೆಯೆ ಬೃಹಸ್ಪತಿಯ ಅನುಯಾಯಿಗಳ ಪ್ರಕಾರ ಹದಿನಾರು ಜನರು; ಶುಕ್ರನ ಅನುಯಾಯಿಗಳ ಮತದಲ್ಲಿ ಇಪ್ಪತ್ತು; ಹೀಗೆಂದು ಹೇಳಿ ಕೊನೆಗೆ ಕೌಟಲ್ಯನು ''ಯಥಾ ಸಾಮರ್ಥ್ಯಂ'' ಅಂದರೆ ಅಗತ್ಯವಿದ್ದಷ್ಟು ಹಾಗು ಬೊಕ್ಕಸದ ಸಾಮರ್ಥ್ಯವಿದ್ದಷ್ಟು ಜನ ಮಂತ್ರಿಗಳನ್ನು ನಿಯಮಿಸಬಹುದೆಂದು ತನ್ನ ಅಭಿಪ್ರಾಯವನ್ನು ಪ್ರಕಟಿಸಿರುವನು. ಶುಕ್ರನೀತಿಯ ಪ್ರಕಾರ ಹತ್ತು ಜನ ಮಂತ್ರಿಗಳು ಸಾಕೆಂದಿದೆ.

ಮಂತ್ರಿಗಳ ಸಂಖ್ಯೆಯು ವಿಷಯದಲ್ಲಿ ಪ್ರಾಚೀನ ರಾಜ್ಯಶಾಸ್ತ್ರಕಾರರಲ್ಲಿ ಕಂಡುಬರುತ್ತಿರುವ ಅಭಿಪ್ರಾಯಭೇದವು ವಿಚಿತ್ರವೇನೂ ಅಲ್ಲ. ಯಾಕಂದರೆ ಆಯಾ ಕಾಲಮಾನ ಪರಿಸ್ಥಿತಿಗನುಸರಿಸಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ತಮ್ಮ ಮತವನ್ನು ವ್ಯಕ್ತಪಡಿಸಿರುವದು ಸಹಜ. ಆದುದರಿಂದ ಈ ಮತಭೇದಕ್ಕೆ ಬಹಳ ಮಹತ್ವವನ್ನು ಕೊಡುವ ಕಾರಣವಿಲ್ಲ. ಹೀಗಿದ್ದರೂ ಸಾಮಾನ್ಯವಾಗಿ ಕನಿಷ್ಠಪಕ್ಷ ಎಂಟು ಜನ ಮಂತ್ರಿಗಳಾದರೂ ಇರುವದೊಳಿತೆಂದು ಆಗಿನ ಕಾಲದ ರಾಜ್ಯಶಾಸ್ತ್ರಕಾರರ ಅಭಿಪ್ರಾಯವಾಗಿದ್ದಿತೆಂದೆನ್ನಲು ಯಾವ ಅಡ್ಡಿಯೂ ತೋರುವದಿಲ್ಲ. ಎಂಟು, ಹತ್ತು, ಹದಿನಾರು ಜನ ಮಂತ್ರಿಗಳಿದ್ದರೂ ರಾಜನು ತನ್ನದೊಂದು ಮಂತ್ರಿಸಂಪುಟವನ್ನು ಮಾಡಿಕೊಳ್ಳಬೇಕೆಂಬ ಆದೇಶವನ್ನು ಕೌಟಲ್ಯನು ಅರ್ಥಶಾಸ್ತ್ರದಲ್ಲಿ ಕೊಟ್ಟಿದ್ದಾನೆ. ''ಮಂತ್ರಿಭಿಸ್ತ್ರಿಭಿಶ್ಚತುರ್ಭಿರ್ವಾ ಸಹ ಮಂತ್ರಯೇತ" ಎಂದು ಹೇಳಿದ್ದಾನೆ.

ಮಂತ್ರಿಮಂಡಲದ ಕಾರ್ಯವ್ಯಾಪ್ತಿ

ಮಂತ್ರಿಮಂಡಲದ ಕಾರ್ಯವ್ಯಾಪ್ತಿಯು ಸಮಗ್ರ ರಾಜ್ಯಶಾಸನಕ್ಕೆ ಸಂಬಂಧಿಸಿದ್ದಿತು. ಹೊಸ ಧೋರಣ ಕಾರ್ಯಕ್ರಮಗಳನ್ನು ರೂಪಿಸುವ ಹಾಗು ಅವುಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವ ಮತ್ತು ದಾರಿಯಲ್ಲಿಯ ಅಡ್ಡಿ ಆತಂಕಗಳನ್ನು ನಿವಾರಿಸುವ ಕಾರ್ಯವು ಮಂತ್ರಿಮಂಡಲದ ಕಾರ್ಯವಾಗಿರುತ್ತಿದ್ದಿತು. ಅಲ್ಲದೆ ವಿದೇಶ ಧೋರಣ, ರಾಜಪುತ್ರರ ವಿದ್ಯಾಭ್ಯಾಸ, ಕರ, ತೆರಿಗೆಗಳನ್ನು ಹೇರುವದು ಹಾಗು ಸಂಗ್ರಹಿಸುವದು ಇವೇ ಮೊದಲಾದವುಗಳಲ್ಲಿಯೂ ಮಂತ್ರಿಮಂಡಲಕ್ಕೆ ವ್ಯಾಪಕವಾದ ಅಧಿಕಾರವಿದ್ದಿತು. ಅಂದಬಳಿಕ ಸ್ವಾಭಾವಿಕವಾಗಿ ಮಂತ್ರಿಮಂಡಲದ ಸದಸ್ಯರಾದ ಮಂತ್ರಿಗಳು ಬೇರೆ ಬೇರೆ ಶಾಖೆಗಳನ್ನು ತಮ್ಮೊಳಗೆ ಹಂಚಿಕೊಳ್ಳುತ್ತಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಶುಕ್ರನೀತಿಯಲ್ಲಿ ಈ ಬಗೆಯ ಶಾಖಾವ್ಯವಸ್ಥೆಯಾದುದರ ಉಲ್ಲೇಖವು ದೊರೆಯುತ್ತದೆ. ಆತನ ಅಭಿಪ್ರಾಯದ ಮೇರೆಗೆ ಹತ್ತು ಜನ ಮಂತ್ರಿಗಳಿರುತ್ತಿದ್ದರೆಂಬುದು ಹಿಂದೆಯೆ ಬಂದಿದೆ. ಪುರೋಹಿತ, ಪ್ರತಿನಿಧಿ, ಪ್ರಧಾನ, ಸಚಿವ, ಮಂತ್ರಿ, ಪ್ರಾಡ್ವಿವಾಕ, ಪಂಡಿತ, ಸುಮಂತ್ರ,ಅಮಾತ್ಯ ಮತ್ತು ದೂತ ಹೀಗೆ ಹತ್ತು ಜನ ಮಂತ್ರಿಗಳಿಗೆ ಬೇರೆ ಬೇರೆ ಪಾರಿಭಾಷಿಕ ನಾಮಧೇಯಗಳಿದ್ದವು. ಇವರು ಯಾವ ಯಾವ ಶಾಖೆಗಳನ್ನು ನೋಡಿಕೊಳ್ಳುತ್ತಿದ್ದರೆಂಬುದನ್ನು ಪ್ರಾಚೀನತಮ ರಾಜ್ಯಶಾಸ್ತ್ರಕಾರರು ಹೇಳದಿದ್ದರೂ ಸಾಮಾನ್ಯತಃ ಶುಕ್ರ ನೀತಿಯಲ್ಲಿ ಹೇಳಿದ ರೀತಿಯಲ್ಲಿಯೇ ವಿಭಾಗಗಳನ್ನು ಏರ್ಪಡಿಸಲಾಗುತ್ತಿದ್ದಿತೆಂದೆನ್ನಲಡ್ಡಿಯಿಲ್ಲ. ಯಾಕಂದರೆ ಶಿಲಾಶಾಸನಗಳಲ್ಲಿಯೂ ಸಾಧಾರಣತಃ ಈ ಹೆಸರುಗಳುಳ್ಳ ಮಂತ್ರಿಗಳು ಇದ್ದರೆಂಬುದು ಕಂಡುಬರುತ್ತಿದೆ.

ಇನ್ನು ಬೇರೆ ಬೇರೆ ಮಂತ್ರಿಗಳ ಕಾರ್ಯಕ್ಷೇತ್ರ ಅಧಿಕಾರ ಮೊದಲಾದವುಗಳೇನಿದ್ದವೆಂಬುದನ್ನು ವಿವೇಚಿಸುವ.

ಪುರೋಹಿತನು ವೇದಕಾಲದಿಂದಲೂ ಅತ್ಯಂತ ಶ್ರೇಷ್ಠ ಮಂತ್ರಿಯೆಂದು ಗಣಿಸಲ್ಪಟ್ಟ ವಿಷಯವು ವೇದಸಂಹಿತೆ ಬ್ರಾಹ್ಮಣಾದಿಗಳಿಂದ ಚೆನ್ನಾಗಿ ತಿಳಿದುಬಂದಿದೆ. ಅನೇಕ ಶತಮಾನಗಳವರೆಗೆ ಅವನು ಮಂತ್ರಿಮಂಡಲದ ಓರ್ವ ಸದಸ್ಯನಾಗಿದ್ದನೆಂಬುದಕ್ಕೆ ಬೇಕಾದಷ್ಟು ಆಧಾರಗಳುಂಟು. ಪುರೋಹಿತನು ರಾಜನ ಆಧ್ಯಾತ್ಮಿಕ ಗುರುಸ್ಥಾನದಲ್ಲಿದ್ದುದರಿಂದ ಕಾಲಕಾಲಕ್ಕೆ ಯೋಗ್ಯ ಸಲಹೆಯನ್ನು ಕೊಡುವದು ಆತನ ಮುಖ್ಯ ಕರ್ತವ್ಯವಾಗಿದ್ದಿತು. ಶತ್ರುಗಳು ಯೋಜಿಸಿದ ಯಾವುದೇ ಬಗೆಯ ಕಪಟ ಮಂತ್ರ ತಂತ್ರಗಳ ಬಾಧೆಯು ನಾಡಿಗಾಗದಂತೆ ಪ್ರತೀಕಾರವನ್ನು ತನ್ನ ಮಂತ್ರಸಾಮರ್ಥ್ಯದಿಂದ ಮಾಡುವದು ಪುರೋಹಿತನ ಕಾರ್ಯವಾಗಿದ್ದಿತು. ವೇದಕಾಲದಲ್ಲಿ ಅರಸರಿಗೆ ವಿಜಯವನ್ನು ಸಂಪಾದಿಸಿಕೊಡಲೋಸುಗ ಪ್ರಾರ್ಥನೆ ಯಜ್ಞಯಾಗಾದಿಗಳನ್ನು ನಡೆಸಲು ಪುರೋಹಿತರು ರಣಾಂಗಣದಲ್ಲಿಯೂ ಅರಸರ ಸಂಗಡ ಪ್ರತ್ಯಕ್ಷವಾಗಿರುತ್ತಿದ್ದರು. ಶಸ್ತ್ರಶಾಸ್ತ್ರಗಳೆರಡರಲ್ಲಿಯೂ ಅವರು ಪಾರಂಗತರಾಗಿರುತ್ತಿದ್ದರಲ್ಲದೆ ರಾಜನೀತಿನಿಪುಣರೂ ಆಗಿರುತ್ತಿದ್ದರು. ರಾಜರು ಯಜ್ಞದೀಕ್ಷಿತರಾಗಿ ರಾಜ್ಯಶಾಸನವನ್ನು ನಡೆಸಲು ಅಸಮರ್ಥರಾದಾಗ ಪುರೋಹಿತರು ಅವರ ಪ್ರತಿನಿಧಿಗಳಾಗಿ ರಾಜ್ಯಶಕಟವನ್ನು ನಡೆಸಿದ ಸಂದರ್ಭಗಳು ಹೇರಳವಾಗಿ ದೊರೆಯುತ್ತವೆ. ಸಿಂಹಾಸನವನ್ನೇರಲು ಯೋಗ್ಯ ದಾಯಾದನು ದೊರೆಯದಿದ್ದ ಸಂದರ್ಭದಲ್ಲಿ ಪುರೋಹಿತರೇ ರಾಜ್ಯಭಾರವನ್ನು ಹೊರುತ್ತಿದ್ದರೆಂಬುದಕ್ಕೆ ರಾಮಾಯಣದಲ್ಲಿ ವಸಿಷ್ಠರು ಆಡಳಿತೆಯನ್ನು ಕೆಲಕಾಲ ವಹಿಸಿಕೊಂಡಿದ್ದುದೇ ನಿದರ್ಶನವಾಗಿದೆ.

ವೇದಕಾಲದ ಯಜ್ಞಯಾಗಾದಿಗಳಲ್ಲಿಯ ಶ್ರದ್ಧೆಯು ಹೆಚ್ಚಾ-

ಗಿದ್ದಾಗ ಪುರೋಹಿತನ ಸ್ಥಾನಮಾನಗಳು ಅತ್ಯುನ್ನತವಾಗಿದ್ದವು. ಆದರೆ ಮುಂದೆ ಬರಬರುತ್ತ ಉಪನಿಷತ್ಕಾಲದಲ್ಲಿ ಹಾಗು ಜೈನ ಬೌದ್ಧಯುಗದಲ್ಲಿ ಯಜ್ಞಾದಿಗಳಲ್ಲಿಯ ನಂಬಿಕೆಯು ಕಡಿಮೆ ಯಾದಂತೆ ಪುರೋಹಿತನ ಸ್ಥಾನಕ್ಕೂ ಕೆಲಮಟ್ಟಿಗೆ ಚ್ಯುತಿಯುಂಟಾ ದಂತೆ ತೋರುತ್ತದೆ. ಯಾಕಂದರೆ ಗುಪ್ತಕಾಲದ ನಂತರ ಪುರೋ ಹಿತನು ಪ್ರತ್ಯಕ್ಷವಾಗಿ ಮಂತ್ರಿಮಂಡಲದ ಸದಸ್ಯನಾಗುಳಿಯಲಿಲ್ಲ. ಹೀಗಿದ್ದರೂ ಶುಕ್ರನೀತಿಯಲ್ಲಿ ಮಂತ್ರಿಮಂಡಲದ ಸದಸ್ಯನೆಂದು ಆತನ ಉಲ್ಲೇಖವಿದ್ದುದು ಏಕೆ ಎಂದು ಯಾರಾದರೂ ಕೇಳ ಬಹುದು. ಅದು ಕೇವಲ ಪ್ರಾಚೀನ ಸಂಪ್ರದಾಯಕ್ಕನುಸಾರ ವಾಗಿದ್ದ ನಿರ್ದೇಶವೇ ಹೊರತು ಆತನ ಕಾಲದ ವಸ್ತುಸ್ಥಿತಿಯ ನಿದ ರ್ಶನವಲ್ಲೆಂದು ಉತ್ತರಿಸಬಹುದು. ಪುರೋಹಿತನು ಶುಕ್ರನ ಕಾಲ ದಲ್ಲಿ ಪ್ರತ್ಯಕ್ಷ ಸದಸ್ಯನಾಗಿರದಿದ್ದರೂ ರಾಜನ ಮೇಲೆ ಅಪಾರವಾದ ವರ್ಚಸ್ಸುಳ್ಳವನಾಗಿರುತ್ತಿದ್ದನೆಂಬುದು ಮಾತ್ರ ನಿರ್ವಿವಾದ. ಯಾಕಂದರೆ ಶುಕ್ರನೀತಿಯಲ್ಲಿ ಆತನು ರಾಜನ ಮೇಲೆ ಬೀರುತ್ತಿದ್ದ ನೈತಿಕ ಪ್ರಭಾವದ ಉಲ್ಲೇಖವುಂಟು. "ಯತ್ಕೋಪಭೀತ್ಯಾ ರಾಜಾsಪಿ ಧರ್ಮನೀತಿನಿರತೋ ಭವೇತ್" ಅಂದರೆ "ಯಾವನ ಅಂದರೆ ಪುರೋಹಿತನ ಕೋಪಭೀತಿಯ ಮೂಲಕ ರಾಜನು ಕೂಡ ಧರ್ಮನೀತಿವಂತನಾಗಿರುತ್ತಿದ್ದನು" ಎಂದಿದೆ.

ಎರಡನೆಯ ಮಂತ್ರಿಯೆಂದರೆ ಪ್ರತಿನಿಧಿ. ರಾಜನು ಅಸ್ವಸ್ಥ ನಾಗಿದ್ದ ಪಕ್ಷದಲ್ಲಿ ಇಲ್ಲವೆ ದಿಗ್ವಿಜಯಕ್ಕೆ ಹೋದ ಸಂದರ್ಭದಲ್ಲಿ ಆತನ ಪ್ರತಿನಿಧಿಯಾಗಿ ರಾಜ್ಯನಿರ್ವಾಹವನ್ನು ಮಾಡುವದೇ ಪ್ರತಿ ನಿಧಿಯ ಕಾರ್ಯವಾಗಿದ್ದಿತು. ಅರ್ಥಾತ್ ರಾಜಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದುದರಿಂದ ಇವನಿಗೆ ಪ್ರತಿನಿಧಿಯೆಂಬ ಹೆಸರು ಅನ್ವರ್ಥಕವಾಗಿದ್ದಿತು. ಶುಕ್ರನೀತಿಯು ಮೇರೆಗೆ ಈ ಬಗೆಯಾಗಿ ವ್ಯವಸ್ಥೆಯಿದ್ದಿತೇನೊ ನಿಜ; ಆದರೆ ಮನುವಿಗೆ ಇದು ಒಪ್ಪಿಗೆಯಾಗಿ ದ್ದಿಲ್ಲ. ಮುಖ್ಯ ಮಂತ್ರಿಯೇ ರಾಜಪ್ರತಿನಿಧಿಯಾಗಿ ಕೆಲಸ ಮಾಡುವ ದುಚಿತವೆಂದು ಆತನ ಅಭಿಪ್ರಾಯವಾಗಿದ್ದಿತು.

ಮಂತ್ರಿಮಂಡಲದ ಅತಿ ಮುಖ್ಯ ಸದಸ್ಯನೆಂದರೆ ಪ್ರಧಾನ ಅಥವಾ ಮುಖ್ಯ ಮಂತ್ರಿ. ಶುಕ್ರನ ಅಭಿಮತದ ಪ್ರಕಾರ ಅವನು ಸರ್ವದರ್ಶಿಯೆಂದರೆ ಸಮಗ್ರ ಆಡಳಿತೆಯ ಮೇಲ್ವಿಚಾರಕನಾಗಿರು ತ್ತಿದ್ದನು. ಆದುದರಿಂದ ಸ್ವಾಭಾವಿಕವಾಗಿ ಪ್ರಧಾನನ ಸ್ಥಾನಮಾನ ಗಳು ಅತ್ಯುನ್ನತವಾಗಿದ್ದವು. ಇಂದಿನ ಕಾಲದಲ್ಲಿದ್ದಂತೆ ಮುಖ್ಯ ಮಂತ್ರಿಗಳು ಸರ್ವಸಾಮಾನ್ಯವಾದ ರಾಜ್ಯಭಾರದ ಮೇಲ್ವಿಚಾರ ಣೆಯ ಕಾರ್ಯದ ಜೊತೆಯಲ್ಲಿ ಒಂದು ವಿಶಿಷ್ಟವಾದ ಶಾಖೆಯ ಆಡಳಿತೆಯನ್ನೂ ವಹಿಸುತ್ತಿದ್ದರು.

ಮುಖ್ಯಮಂತ್ರಿಯ ನಂತರ ಮಹತ್ವದ ಸದಸ್ಯನೆಂದರೆ ಸಚಿವ ಅಥವಾ ಸೇನಾಪತಿ. ಶುಕ್ರನೀತಿಯಲ್ಲಿ ಯುದ್ಧಮಂತ್ರಿಗೆ ಸಚಿವ ನೆಂಬ ಹೆಸರು ಕೊಡಲಾಗಿದ್ದರೂ ಈ ಹೆಸರನ್ನೇ ಎಲ್ಲ ರಾಜ್ಯಶಾಸ್ತ್ರ ಕಾರರೂ ಒಪ್ಪಿರುವರೆಂದು ಹೇಳಲಾಗದು. ಮಹಾಬಲಾಧಿಕಾರಿ ಯೆಂದೂ ಮಹಾಪ್ರಚಂಡ ದಂಡನಾಯಕನೆಂದೂ ಯುದ್ಧ ಮಂತ್ರಿಗೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಹೆಸರುಗಳಿದ್ದವು. ಈತನು ಯುದ್ಧದ ತತ್ವತಂತ್ರಗಳಲ್ಲಿ ಅತ್ಯಂತ ನಿಷ್ಣಾತನಾಗಿರು ತ್ತಿದ್ದನು. ಸೇನೆಯನ್ನು ಅತ್ಯಂತ ಕಾರ್ಯಕ್ಷಮವಾಗಿಡುವದು ಈತನ ಕರ್ತವ್ಯವಾಗಿತ್ತಲ್ಲದೆ ಕೋಟೆ-ಕೊತ್ತಳಗಳನ್ನೆಲ್ಲ ಸುವ್ಯವ ಸ್ಥಿತವಾಗಿಡುವುದೂ ಅವನ ಮುಖ್ಯ ಕೆಲಸವಾಗಿದ್ದಿತು.

ಮಹಾಸಂಧಿವಿಗ್ರಹಿಕ ಅಥವಾ ವಿದೇಶಾಂಗ ಸಚಿವನ ಸ್ಥಾನವು ಮಂತ್ರಿಮಂಡಲದಲ್ಲಿ ಮಹತ್ವದ ಇನ್ನೊಂದು ಸ್ಥಳವೆಂದೆನ್ನ ಬಹುದು. ಭಾರತವು ಅನೇಕ ಚಿಕ್ಕಪುಟ್ಟ ಸಂಸ್ಥಾನಗಳಿಂದ ತುಂಬಿ ದ್ದರಿಂದ ಆ ಸಂಸ್ಥಾನಾಧಿಪತಿಗಳನ್ನು ನಿಯಂತ್ರಣದಲ್ಲಿಡಲು ಯಾವಾಗಲೂ ಮೈತುಂಬ ಕಣ್ಣುಗಳಿದ್ದವರಂತೆ ಎಚ್ಚರದಿಂದ ನಡೆ ಯುವದವಶ್ಯಕವಾಗಿದ್ದಿತು. ಆದುದರಿಂದ ಮಹಾಸಂಧಿವಿಗ್ರಹಿಕ ನಿಗೆ ಅತ್ಯಂತ ಶ್ರಮಸಾಧ್ಯವಾದ ಕಾರ್ಯಗಳನ್ನು ನಿರ್ವಹಿಸುವ ಪ್ರಸಂಗವಿರುತ್ತಿದ್ದಿತು. ಸಾಮ, ದಾನ, ಭೇದ, ದಂಡಗಳೆಂಬ ಉಪಾಯಚತುಷ್ಟಯದಲ್ಲಿ ಪಾರಂಗತನಾದವನೇ ಈ ಮಹತ್ಕಾರ್ಯ ವನ್ನು ನಿರ್ವಹಿಸಲು ಯೋಗ್ಯನೆಂಬ ಭಾವನೆಯು ಸಾಮಾನ್ಯವಾಗಿ ನಾಡಿಕೆಯಾಗಿದ್ದಿತು.

ಈತನ ನಂತರ ಮಹತ್ವದ ಮಂತ್ರಿಯೆಂದರೆ ಪ್ರಾಡ್ವಿವಾಕ. ಇವನ ಕೈಯಲ್ಲಿ ನ್ಯಾಯಶಾಖೆಯ ಆಡಳಿತೆಯಿರುತ್ತಿದ್ದಿತು. ಇವನೇ ಮುಖ್ಯ ನ್ಯಾಯಮೂರ್ತಿಯಾಗಿರುತ್ತಿದ್ದನು. ಸ್ಮೃತಿಶಾಸ್ತ್ರದಲ್ಲಿ ಹಾಗು ಪರಂಪರಾಗತ ರೂಢಿ ಸಂಪ್ರದಾಯ ಜ್ಞಾನದಲ್ಲಿ ಸಂಪೂರ್ಣ ಪರಿಣತನಾಗಿರುವದು ಅವನ ಅವಶ್ಯಕ ಅರ್ಹತೆಯಾಗಿದ್ದಿತು.

ಪಂಡಿತನೆಂಬ ಇನ್ನೊಬ್ಬ ಮಂತ್ರಿಯು ಧರ್ಮ ಹಾಗು ನೀತಿ ಇವುಗಳ ಸಂರಕ್ಷಣೆಯ ಭಾರವನ್ನು ಹೊತ್ತ ಅಧಿಕಾರಿಯಾಗಿದ್ದನು. ಇವನು ಧರ್ಮಶಾಸ್ತ್ರದಲ್ಲಿ ಪ್ರವೀಣನಾಗಿದ್ದು ಯಾವ ಯಾವ ರೂಢಿ ಸಂಪ್ರದಾಯಗಳು ಲುಪ್ತವಾಗಿವೆಯೆಂಬುದನ್ನು ಅರಿತು ರಾಜ ನಿಗೆ ಯೋಗ್ಯ ಸಲಹೆಯನ್ನು ಕೊಡುತ್ತಿದ್ದನು.

ಶುಕ್ರನೀತಿಯ ಪ್ರಕಾರ ಸುಮಂತ್ರನೆಂಬ ಮಂತ್ರಿಯು ಪಂಡಿ ತನ ತರುವಾಯ ಮಹತ್ವದ ಮಂತ್ರಿಯಾಗಿದ್ದನು. ಸಂಗ್ರಹೀತಾ, ಸಮಾಹರ್ತಾ ಎಂದೂ ಈತನಿಗೆ ಹೆಸರುಗಳಿದ್ದವು. ಇವನೇ ರಾಜ್ಯ ಕೋಶಾಧಿಕಾರಿಯೆಂದರೆ ತಪ್ಪಾಗದು. ಪ್ರತಿವರ್ಷ ಕೂಡಿಸಲಾದ ಕರ ತೆರಿಗೆಗಳಿಂದ ಬಂದ ಆದಾಯವೆಷ್ಟು, ಹಾಗು ಅದರಲ್ಲಿ ವ್ಯಯ ವಾದುದೆಷ್ಟು ಉಳಿದುದೆಷ್ಟು, ಎಂಬುದನ್ನೆಲ್ಲ ಸರಿಯಾಗಿ ರಾಜನಿಗೆ ತಿಳಿಸುವದು ಈತನ ಕರ್ತವ್ಯವಾಗಿದ್ದಿತು. ಆಗಿನ ಕಾಲದಲ್ಲಿ ಕರ ತೆರಿಗೆಗಳು ಬಹುತರವಾಗಿ ಧಾನ್ಯರೂಪದಲ್ಲಿರುತ್ತಿದ್ದುದರಿಂದ ಹಿಂದಿನ ವರ್ಷದ ಕಾಳುಕಡಿಗಳನ್ನು ಮಾರಿ ಹೊಸ ಧಾನ್ಯ ಸಂಗ್ರಹವನ್ನು ಮಾಡುವದೀತನ ಕಾರ್ಯವಾಗಿದ್ದಿತು. "ಕೋಶಪೂರ್ವಾಸ್ಸರ್ವಾ ರಂಭಾಃ" ಎಂದು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಹೇಳಿದ್ದನ್ನು ಗಮನಿಸಿದರೆ ಹಣಕಾಸಿನ ಮಂತ್ರಿಗೆ ಅಂದರೆ ಸುಮಂತ್ರನಿಗಿದ್ದ ಸ್ಥಾನಗೌರವದ ಕಲ್ಪನೆಯು ಸಹಜವಾಗಿ ಆಗುವದು. ಈತನ ತರುವಾಯದಲ್ಲಿ ಮಹತ್ವದ ಮಂತ್ರಿಯೆಂದರೆ ಅಮಾತ್ಯ ಅಥವಾ ಕಂದಾಯಮಂತ್ರಿ, ಗ್ರಾಮ, ನಗರ, ಖೇಟ, ಖರ್ವಟಗಳ ಹಾಗು ಅರಣ್ಯಗಳ ಸರಿಯಾದ ಗಣನೆಯನ್ನು ಮಾಡಿಡುವದು ಹಾಗು ಅವು ಗಳಿಂದ ಬರಬಹುದಾದ ಉತ್ಪನ್ನದ ಅಂದಾಜನ್ನು ಸಿದ್ಧಗೊಳಿಸಿಡು ವದು ಈತನ ಕರ್ತವ್ಯಗಳಾಗಿದ್ದವು.

ಮಂತ್ರಿಗಳ ಅರ್ಹತೆಗಳಾವುವು?

ಮಂತ್ರಿಗಳ ಅರ್ಹತೆಗಳಾವುವಿದ್ದವೆಂಬುವನ್ನು ಅರಿತುಕೊಳ್ಳು ವದು ಅಪ್ರಸ್ತುತವಾಗಲಾರದು. "ಶ್ರುತವಂತಂ ಉಪಧಾಶುದ್ಧಂ

ಮಂತ್ರಿಣಂ ಕುರ್ವೀತ" ಅಂದರೆ ವಿದ್ಯಾಸಂಪನ್ನ ಮತ್ತು ಯಾವುದೇ ಬಗೆಯ ಆಶೆ ಆಮಿಷಗಳಿಗೆ ಒಳಗಾಗದವನೆಂದು ಪರೀಕ್ಷೆಯ ನಂತರ ಸಿದ್ಧನಾದವನನ್ನೇ ಮಂತ್ರಿಯನ್ನಾಗಿ ಮಾಡಬೇಕೆಂದು ಚಾಣಕ್ಯ ಸೂತ್ರಗಳಲ್ಲಿ ಹೇಳಿದೆ. ವಿನಯಹೀನನಾದವನನ್ನು ಕೇವಲ ಮಿತ್ರತ್ವದ ಮೂಲಕ ಮಂತ್ರಿಯನ್ನಾಗಿ ಮಾಡಬಾರದೆಂದು ಸ್ಪಷ್ಟವಾಗಿ ಹೇಳಿದೆ.

'ಅರ್ಥಶಾಸ್ತ್ರ'ವೇ ಮೊದಲಾದ ರಾಜನೀತಿ ಗ್ರಂಥಗಳಲ್ಲಿ ಈ ಬಗೆಗೆ ಬಂದಿರುವ ಉಲ್ಲೇಖಗಳಲ್ಲಿ ಮತೈಕ್ಯವಿಲ್ಲದುದು ಕಂಡು ಬರುತ್ತದೆ. ಕೆಲ ನೀತಿ ಗ್ರಂಥಕಾರರು ಮಂತ್ರಿಯ ಯೋಗ್ಯತೆಗೆ ಪ್ರಾಧಾನ್ಯವನ್ನಿತ್ತಿದ್ದರೆ ಬೇರೆ ಕೆಲವರು ಆತನ ರಾಜನಿಷ್ಠೆಗೆ ಮಹತ್ವವನ್ನು ಕೊಟ್ಟಿರುವರು. ಕೆಲವರು ರಾಜನು ತನ್ನ ಸಹಾಧ್ಯಾಯಿಗಳೊಳಗಿಂದಲೇ ಮಂತ್ರಿಗಳನ್ನು ಆರಿಸಿಕೊಳ್ಳಬೇಕೆಂದು ಹೇಳಿದ್ದರೆ ಬೇರೆ ಕೆಲವರು ಪರಂಪರೆಯಾಗಿ ರಾಜನಿಷ್ಠೆಗಾಗಿ ಸುಪ್ರಸಿದ್ಧವಾದ ಕೆಲ ಮನೆತನಗಳೊಳಗಿಂದಲೇ ಮಂತ್ರಿಗಳನ್ನಾರಿಸಿಕೊಳ್ಳುವದೊಳಿತೆಂದಿರುವರು. ಕೌಟಿಲ್ಯನಾದರೋ ಈ ಎರಡೂ ಅಭಿಪ್ರಾಯಗಳಲ್ಲಿ ಕೆಲಮಟ್ಟಿಗೆ ತಥ್ಯಾಂಶವುಂಟೆಂದು ಹೇಳಿ ಶಕ್ಯವಿದ್ದಷ್ಟು ಮಟ್ಟಿಗೆ ಇಬ್ಬಗೆಯಲ್ಲಿಯೂ ಹೆಚ್ಚು ಅರ್ಹತೆಗಳುಳ್ಳವರನ್ನು ಮಂತ್ರಿಗಳನ್ನಾಗಿ ನಿಯಮಿಸಿಕೊಳ್ಳಬೇಕೆಂದಿರುವನು. ಆತನ ಅಭಿಪ್ರಾಯದ ಪ್ರಕಾರ ಆದರ್ಶ ಮಂತ್ರಿಯ ಲಕ್ಷಣಗಳು ಹೀಗಿವೆ.

'ಜಾನಪದೋಽಭಿಜಾತಃ ಸ್ವವಗ್ರಹಃ ಕೃತಶಿಲ್ಪಶ್ಚಕ್ಷುಷ್ಮಾನ್ ಪ್ರಾಜ್ಞೋ ಧಾರಯಿಷ್ಣುರ್ದಕ್ಷೋ ವಾಗ್ಮೀ ಪ್ರಗಲ್ಭಃ ಪ್ರತಿಪತ್ತಿಮಾನುತ್ಸಾಹಪ್ರಭಾವಯುಕ್ತಃ ಕ್ಲೇಶಸಹಶ್ಶುಚಿರ್ಮೈತ್ರೋ ದೃಢಭಕ್ತಿಶ್ಶೀಲಬಲಾರೋಗ್ಯಸತ್ವಸಂಯುಕ್ತಃ ಸ್ತಂಭಚಾಪಲ್ಯವರ್ಜಿತಸ್ಸಂಪ್ರಿಯೋ ವೈರಾಣಾಮಕರ್ತಾ ಇತ್ಯಮಾತ್ಯಸಂಪತ್ ॥

ಅಂದರೆ ಅದೇ ನಾಡಿನವನು, ಉತ್ತಮಕುಲಸಂಭೂತನು, ವರ್ಚಸ್ವಿಯು, ಕಲಾಪ್ರವೀಣನು, ಮುನ್ನೋಟವುಳ್ಳವನು, ಬುದ್ಧಿವಂತನು, ದಿಟ್ಟನು, ದಕ್ಷನು, ವಾಗ್ಮಿಯು, ಪ್ರಗಲ್ಭನು, ಕಷ್ಟಸಹಿಷ್ಣು, ಪ್ರತಿಪತ್ತಿವಂತನು, ಉತ್ಸಾಹಯುಕ್ತನು, ನಿಷ್ಠಾವಂತನು, ದೃಢಭಕ್ತಿಯುಳ್ಳವನು, ಶೀಲಬಲಆರೋಗ್ಯಗಳೇ ಮೊದಲಾದ ಸತ್ವವುಳ್ಳವನು, ಅಚಂಚಲನು, ದೃಢಮನಸ್ಸಿನವನು ದ್ವೇಷಬುದ್ಧಿಯಿಲ್ಲದವನು ಆಗಿರಬೇಕೆಂದು ಹೇಳಿದೆ. ಇತರ ನೀತಿ ಗ್ರಂಥಕಾರರೂ ಸಾಧಾರಣತಃ ಈ ಅರ್ಹತೆಗಳನ್ನೇ ಹೇಳಿರುವರು. ಆದರ್ಶ ಮಂತ್ರಿಯ ಈ ಗುಣಗಳು ಎಲ್ಲ ಮಂತ್ರಿಗಳಲ್ಲಿಯೂ ಎಲ್ಲ ಕಾಲದಲ್ಲಿ ದೊರೆಯಬಹುದೆಂದು ಹೇಳುವದು ಕಠಿನ. ಆದರೂ ಈ ಆದರ್ಶವನ್ನು ಮುಂದಿಟ್ಟುಕೊಂಡು ಸಾಧ್ಯವಿದ್ದಷ್ಟು ಹೆಚ್ಚು ಅರ್ಹತೆಗಳನ್ನುಳ್ಳ ಮಂತ್ರಿಗಳನ್ನಾರಿಸುವ ಪ್ರಾಮಾಣಿಕ ಪ್ರಯತ್ನವನ್ನು ನಡೆಸಬೇಕೆಂಬುದೇ ಇದರಲ್ಲಡಗಿದ ಸಾರವೆಂಬುದನ್ನು ಮರೆಯದಿರುವದು ಲೇಸು. ಶುಕ್ರನೀತಿಯಲ್ಲಿ ನಿರ್ದಿಷ್ಟವಾದ ಒಂದು ವಿಧಾನವು ಈ ಸಂದರ್ಭದಲ್ಲಿ ಅತ್ಯಂತ ಉದ್ಬೋಧಕವಾಗಿದೆ. ಮಂತ್ರಿಗಳನ್ನಾರಿಸುವಾಗ ಅವರ ಯೋಗ್ಯತೆಯನ್ನು ನೋಡಬೇಕಲ್ಲದೆ ಜಾತಿಯನ್ನಲ್ಲೆಂಬುದೇ ಅದು. "ಭೋಜನ ವಿವಾಹಾದಿಗಳಲ್ಲಿ ಜಾತಿಯ ವಿಚಾರವನ್ನು ಮಾಡಬಹುದಲ್ಲದೆ ಮಂತ್ರಿ ಪದಕ್ಕೆ ನಿಯಮಿಸುವಾಗಲ್ಲ" ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ನೈವ ಜಾತಿಂ ನ ಚ ಕುಲಂ ಕೇವಲಂ ಲಕ್ಷಯೇದಪಿ ।
ಕರ್ಮಶೀಲಗುಣಾಃ ಪೂಜ್ಯಾಸ್ತಥಾ ಜಾತಿಕುಲೇನ ಚ ॥
ನ ಜಾತ್ಯಾ ನ ಕುಲೇನೈವ ಶ್ರೇಷ್ಠತ್ವಂ ಪ್ರತಿಪದ್ಯತೇ ।
ವಿವಾಹೇ ಭೋಜನೇ ನಿತ್ಯಂ ಕುಲಜಾತಿವಿವೇಚನಂ ॥

ಎಂದು ಶುಕ್ರನೀತಿಯಲ್ಲಿ ಬಂದಿದೆ. ಅದರಲ್ಲಿಯೇ ಇನ್ನೊಂದೆಡೆಯಲ್ಲಿ

ಸ್ವಧರ್ಮನಿರತಾ ನಿತ್ಯಂ ಸ್ವಾಮಿಭಕ್ತಾ ರಿಪುದ್ವಿಷಃ
ಶೂದ್ರಾ ವಾ ಕ್ಷತ್ರಿಯಾ ವೈಶ್ಯಾ ಮ್ಲೇಚ್ಛಾಃ ಸಂಕರಸಂಭವಾಃ।
ಸೇನಾಧಿಪಾಃ ಸೈನಿಕಾಶ್ಚ ಕಾರ್ಯಾ ರಾಜ್ಞಾ ಜಯಾರ್ಥಿನಾ॥

ಅಂದರೆ ತಮ್ಮ ಕರ್ತವ್ಯದಲ್ಲಿ ನಿರತರಾದ ಸ್ವಾಮಿಭಕ್ತರೂ ಶತ್ರುದ್ವೇಷಿಗಳೂ ಆದ ಶೂದ್ರರನ್ನಾಗಲಿ ಕ್ಷತ್ರಿಯರನ್ನಾಗಲಿ ವೈಶ್ಯರನ್ನಾಗಲಿ ಮ್ಲೇಚ್ಛರನ್ನಾಗಲಿ ಇಲ್ಲವೆ ವರ್ಣಸಂಕರಜಾತರನ್ನಾಗಲಿ ಸೇನಾಧಿಪತಿಗಳನ್ನೂ ಸೈನಿಕರನ್ನೂ ಆಗಿ ಜಯಾಪೇಕ್ಷಿಯಾದ ಅರಸನು ಮಾಡಬಹುದೆಂದಿದೆ.

ರಾಜನೇ ಮಂತ್ರಿಗಳನ್ನು ನಿಯಮಿಸಿಕೊಳ್ಳುತ್ತಿದ್ದುದರಿಂದ ಸ್ವಾಭಾವಿಕವಾಗಿ ಅವರು ಆತನಿಗೇ ಹೊಣೆಗಾರರಾಗುತ್ತಿದ್ದರು. ಅದರಿಂದ ಕೆಲಮಟ್ಟಿಗೆ ನಿರ್ದಾಕ್ಷಿಣ್ಯದಿಂದ ಯೋಗ್ಯ ಸಲಹೆಯನ್ನು ಕೊಡುವ ಅವರ ಕರ್ತವ್ಯದಲ್ಲಿವಿಘ್ನಗಳುಂಟಾಗುತ್ತಿದ್ದವೆಂಬುದನ್ನು ಅಲ್ಲಗಳೆಯಲಾಗದು. ಯಾಕಂದರೆ ಪುರಾಣೇತಿಹಾಸಗಳಲ್ಲಿ ನಿಃಸ್ಪೃಹ ಸದುಪದೇಶವನ್ನು ರಾಜನಿಗೆ ಮಾಡಿದ್ದುದಕ್ಕಾಗಿ ಮಂತ್ರಿಗಳು ತಮ್ಮ ವಿತ್ತಜೀವಿತಗಳಿಗೆ ಎರವಾದ ಉದಾಹರಣೆಗಳು ಸಾಕಷ್ಟು ಸಿಕ್ಕುತ್ತವೆ. ಇದಕ್ಕೆ ಪ್ರತಿಯಾಗಿ ಅನೇಕ ಸಲ ಅಶಕ್ತನಾದ ಅರಸನನ್ನು ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡು ಸ್ವಚ್ಛಂದವಾಗಿ ನಿರಂಕುಶ ರೀತಿಯಲ್ಲಿ ರಾಜ್ಯಭಾರವನ್ನು ನಡೆಸಿದ್ದ ಮಂತ್ರಿಗಳ ದೃಷ್ಟಾಂತಗಳೂ ದೊರೆಯುತ್ತವೆ. ಆದರೆ ಇಂತಹ ಉದಾಹರಣೆಗಳು ಅಪವಾದಗಳೇ ಹೊರತು ಸಾಮಾನ್ಯ ನಿಯಮಗಳಾಗಿದ್ದಿಲ್ಲೆಂಬುದನ್ನು ನೆನಪಿನಲ್ಲಿಡಬೇಕು.

ಸಾಮಾನ್ಯತಃ ಮಂತ್ರಿಗಳನ್ನು ಅರಸರೂ ಪ್ರಜೆಗಳೂ ಆದರದಿಂದ ಕಾಣುತ್ತಿದ್ದರೆಂದೆನ್ನಲಡ್ಡಿಯಿಲ್ಲ. ಅರಸರು ತಮ್ಮ ಮಂತ್ರಿಗಳನ್ನು "ಯೋ ರಾಜ್ಞೋ ದಕ್ಷಿಣಃ ಕರಃ" ಅಂದರೆ ತಮ್ಮ ಬಲಗೈಯೆಂದು ಭಾವಿಸುತಿದರು. ಆದುದರಿಂದ ಮಂತ್ರಿಗಳ ಹಾಗು ಅರಸರ ಪರಸ್ಪರ ಸಂಬಂಧವು ಅತ್ಯಂತ ಸೌಹಾರ್ದಮಯವಾಗಿರುತ್ತಿದ್ದಿತೆಂದು ಹೇಳಲು ಯಾವ ಸಂಕೋಚವೂ ಇಲ್ಲ.

ಪೂರ್ಣ

ಗಂಡಿಗಿರುವುದೆರಡು ಕಾಲು
ಹೆಣ್ಣಿಗೆ ಸಹ ಎರಡೆ ಕಾಲು
ಇಲ್ಲ ಇದಕೆ ವಾದವು
ಇವರು ಅರ್ಧ—ಹೋಳು ಹೋಳು
ಕೂಟದಿಂದ ಮಾತ್ರ ಬಾಳು
ಪೂರ್ಣವೆಂದು ವೇದವು
ಸಾರುತಿರಲು ಕೇಳಿ "ಹಹಾ!
ಪೂರ್ಣ ಪೂರ್ಣ ನಾನು ಸಹಾ
ನನಗೆ ನಾಲ್ಕು ಕಾಲು!" ಎಂದು
ವೇದಗಳನು ಮೂಸಿ, ಮೆಂದು
ಬಂತು ಚತುಷ್ಪಾದವು!

—ವಿಜಯ

★ ಕೈಮಗ್ಗ ದೇಶದ ಮುಖ್ಯ ಉದ್ದಿಮೆಗಳಲ್ಲೊಂದು. ಅದರ ಗತವೈಭವ ಇಂದು ಹಳೆಯ ಮಾತಾಗಿ ಅದರಲ್ಲಿ ದುಡಿಯುವವರು ವಿಪನ್ನಾವಸ್ಥೆಗೆ ಈಡಾಗಿದ್ದಾರೆ. ಅವರ ಸ್ಥಿತಿಯನ್ನು ಸುಧಾರಿಸಲು ಕೆಲ ಉಪಾಯಗಳನ್ನು ಇಲ್ಲಿ ಸೂಚಿಸಿದೆ.

ಕೈಮಗ್ಗದ ನೇಕಾರರು:

ಅವರ ಇಂದಿನ ಸ್ಥಿತಿ ಮತ್ತು ಅದರ ಸುಧಾರಣೋಪಾಯ

ಲೇಖಕರು : ಪ್ರೊ. ಪಿ. ಎನ್. ನರಸಿಂಗರಾವ್, ಎಂ. ಎ., ಬೆಳಗಾವಿ.

ಅನೇಕ ಶತಮಾನಗಳ ವರೆಗೆ ಕೈಮಗ್ಗದ ಉದ್ದಿಮೆಯು ಭಾರತದಲ್ಲಿ ಎಲ್ಲಕ್ಕೂ ದೊಡ್ಡ ಮತ್ತು ಎಲ್ಲಕ್ಕೂ ಮಹತ್ವದ ಉದ್ದಿಮೆಯಾಗಿತ್ತು. ಅದು ಪ್ರಾಚೀನ ಮತ್ತು ಮಧ್ಯಯುಗೀನ ಭಾರತದ ವೈಭವದ ಕಲಶವಾಗಿತ್ತು. ಭಾರತದ ನೇಕಾರರ ಕಲಾಕೌಶಲದ ಹಿರಿಮೆಯನ್ನು ಬಣ್ಣಿಸುವುದು ಅಸದಳ. ಈ ದೇಶದಲ್ಲಿ ನೇಯುತ್ತಿದ್ದ ಜಿನುಗಾದ ಮಸಲಿನ್ ಬಟ್ಟೆಯ ಕೀರ್ತಿಯನ್ನು ಕೇಳದವರಾರು? ಭಾರತದ ಬಟ್ಟೆ ಜಗತ್ತಿನ ಎಲ್ಲ ದೊಡ್ಡ ದೊಡ್ಡ ಪೇಟೆಗಳಲ್ಲಿಯೂ ಮಾರುತ್ತಿತ್ತು. ೧೮ನೇ ಶತಮಾನದ ಕೊನೆಯ ವರೆಗೂ ಇಂಗ್ಲಂಡ್ ಮೊದಲುಮಾಡಿ ಅನೇಕ ವಿದೇಶಗಳಿಗೆ ಇಲ್ಲಿನ ಅತಿ ನವಿರಾದ ಬಟ್ಟೆ ನಿರ್ಯಾತವಾಗುತ್ತಿತ್ತು. ಇದೆಲ್ಲ ಸರ್ವವಿದಿತವಾದ ಸಂಗತಿ. ಆದರೆ ಇಂದಿಗೂ ಕೈಮಗ್ಗದ ಉದ್ದಿಮೆ ನಮ್ಮ ದೇಶದ ಮುಖ್ಯ ಉದ್ದಿಮೆಗಳಲ್ಲಿ ಒಂದೆಂಬುದು ಮಾತ್ರ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಈ ದೇಶದಲ್ಲಿ ಉಪಯೋಗಿಸುತ್ತಿರುವ ಬಟ್ಟೆಯಲ್ಲಿ ಕಾಲಂಶದಿಂದ ಮೂರರಲ್ಲೊಂದಂಶದ ವರೆಗೂ ಕೈಮಗ್ಗದಿಂದಲೇ ಬರುತ್ತಿದೆ. ಲಕ್ಷಗಟ್ಟಳೆ ನೇಕಾರರಿಗೂ ಅವರ ಕುಟುಂಬಗಳಿಗೂ ಜೀವನಾಧಾರವಾಗಿ ಇಂದಿಗೂ ಲಕ್ಷಾಂತರ ಕೈಮಗ್ಗಗಳು ಇವೆ. ಮುಂಬಯಿಕರ್ನಾಟಕದಂಥ ಚಿಕ್ಕ ಪ್ರದೇಶದಲ್ಲಿಯೂ ಕೈಮಗ್ಗಗಳೂ ಕೈಮಗ್ಗದ ನೇಕಾರರೂ ಅನೇಕಾನೇಕ ಸ್ಥಳಗಳಲ್ಲಿ ಕಾಣಸಿಗುತ್ತಾರೆ. ಸೊಲ್ಲಾಪುರ, ಹುಬ್ಬಳ್ಳಿ, ಇಳಕಲ್ಲ, ಗೋಕಾಕ, ರಬಕವಿ ಮೊದಲಾದುವು ಇಂದಿಗೂ ಕೈಮಗ್ಗದ ಉದ್ದಿಮೆಯ ಕೇಂದ್ರಗಳಾಗಿವೆ. ಈ ಉದ್ದಿಮೆ ಕೆಲವು ಕಡೆಗಳಲ್ಲಿ ಅಧೋಗತಿಯಲ್ಲಿರಬಹುದು. ಆದರೆ ಅದು ಅವನತಿಯನ್ನು ಕಂಡದ್ದು ಆಶ್ಚರ್ಯವಲ್ಲ; ಅದಿನ್ನೂ ಬದುಕಿರುವುದೇ ಆಶ್ಚರ್ಯ. ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಅದು ಲೆಂಕೇಶಾಯರಿನಿಂದ ಸ್ಪರ್ಧೆಯನ್ನು ಎದುರಿಸಬೇಕಾಯಿತು; ಇಪ್ಪತ್ತನೇ ಶತಮಾನದ ಆರಂಭದಿಂದ ಅದು ಭಾರತೀಯ ಜವಳಿ ಗಿರಣಿಗಳಿಂದಲೂ ಮೇಲಾಟವನ್ನು ಸಹಿಸಬೇಕಾಗಿದೆ. ಈ ಮೇಲಾಟವನ್ನು ತಾಳಿಕೊಂಡೂ ಅದು ಬಾಳಿದೆ.

ಈ ಪ್ರಾಚೀನ ಉದ್ದಿಮೆಯನ್ನು ರಕ್ಷಿಸಿ ಬೆಳೆಸುವುದು ಅವಶ್ಯ— ಅದು ಪುರಾತನದಿಂದ ಬಂದ ಪಿತ್ರಾರ್ಜಿತವೆಂಬೊಂದೇ ಕಾರಣಕ್ಕಾಗಿ ಅಲ್ಲ, ಆದರೆ ಅದು ಲಕ್ಷಾಂತರ ಜನರಿಗೆ ಉದ್ಯೋಗವನ್ನು ಒದಗಿಸಿಕೊಡುವ ಆಧರ್ಯ ಮನೆಕೈಗಾರಿಕೆಯೂ ಆಗಿರುವುದರಿಂದಲೂ. ಆದರೆ ಕೈಮಗ್ಗದ ಉದ್ದಿಮೆಗಿಂತಲೂ ಕೈಮಗ್ಗದ ನೇಕಾರರು ನಮಗೆ ಮುಖ್ಯ. ಅವರ ಸ್ಥಿತಿಗತಿಯನ್ನು ನಾವು ಅರಿತುಕೊಳ್ಳಬೇಕು. ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಅಭ್ಯಸಿಸದವರಿಗೆ ತಪ್ಪು ಕಲ್ಪನೆಯಿರುವ ಸಂಭವವಿದೆ. ಎಲ್ಲ ನೇಕಾರರೂ ತಮ್ಮ ಸ್ವಂತ ಮನೆಗಳಲ್ಲಿ ಸ್ವಂತ ಮಗ್ಗಗಳನಿಟ್ಟುಕೊಂಡು ಹೆಂಡತಿ ಮಕ್ಕಳ ಸಹಾಯದಿಂದ ದುಡಿಯುವ ಸ್ವತಂತ್ರ ವ್ಯವಸಾಯಿಗಳೆಂದು ಅವರು ಬಗೆಯುತ್ತಾರೆ. ಅನೇಕ ನೇಕಾರರ ವಿಷಯದಲ್ಲಿ ಇದು ನಿಜವಾಗಿರಬಹುದು. ಆದರೆ ಅನೇಕ ಸ್ಥಳಗಳಲ್ಲಿ ಕೈಮಗ್ಗದ ಉದ್ದಿಮೆ ಬೇರೆಯೇ ರೀತಿಯಲ್ಲಿ ಸಂಘಟಿಸಲ್ಪಟ್ಟದೆ; ಅಲ್ಲಿ ಅದು ಹೆಸರಿಗೆ ಮಾತ್ರ ಮನೆಕೈಗಾರಿಕೆಯಾಗಿದೆ. ಸೊಲ್ಲಾಪುರ ನಗರದಲ್ಲಿ ೬,೦೦೦ಕ್ಕಿಂತಲೂ ಹೆಚ್ಚು ಮಗ್ಗಗಳುಂಟು. ಹೆಚ್ಚುಕಡಿಮೆ ಎಲ್ಲ ನೇಕಾರರೂ 'ಆಸಾಮಿ'ಗಳೆಂಬ ದಲಾಲರಿಗೋಸ್ಕರ ದುಡಿಯುವ ಬರಿ ದಿನಗೂಲಿಯವರು. ಆಸಾಮಿಗಳು ಅವರಿಗೆ ನೂಲನ್ನೊದಗಿಸುತ್ತಾರೆ, ಅವಶ್ಯ ಸಲಕರಣೆಗಳನ್ನು ಕೊಡುತ್ತಾರೆ, ಅವರ ಕೆಲಸದ ಮೇಲ್ವಿಚಾರಣೆಯನ್ನೂ ನಡೆಸುತ್ತಾರೆ. ನೇಕಾರರ ಪಾಲಿಗೆ ಆಸಾಮಿಗಳೇ ಯಜಮಾನರು. ನೇಕಾರರು ಬರಿ ದಿನಗೂಲಿಯವರ ಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.

ಈಗ ನೇಕಾರರ ಕೆಲಸದ ಮತ್ತು ಬಾಳಿನ ಅವಸ್ಥೆಯನ್ನಷ್ಟು ವಿಚಾರಿಸೋಣ. ಅವರು ಚಿಕ್ಕಪುಟ್ಟ 'ಕಾರಖಾನೆ'ಗಳಲ್ಲಿ ಕೆಲಸ ಮಾಡುತ್ತಾರೆ. ಒಂದು ಕಾರಖಾನೆಯಲ್ಲಿ ಅನೇಕ ನೇಕಾರರು ದುಡಿಯುತ್ತಿರಬಹುದು. ಅವರಿಗೆ ದುಡಿತದಲ್ಲಿ ಅವರ ಹೆಂಡತಿ ಮಕ್ಕಳು ನೆರವಾಗುತ್ತಾರೆ. ಗಂಡಸರೂ ಹೆಂಗಸರೂ ಮಕ್ಕಳೂ ಸೇರಿಯೇ ದುಡಿಯುವುದನ್ನು ಕಾಣುತ್ತೇವೆ ಎಂದಾದರೊಮ್ಮೆ ಹೋದವರಿಗೆ ಕೂಡ ಅವರ ದುಡಿತದ ಸ್ಥಿತಿ ಅಸಹ್ಯವಾಗಿದೆಯೆಂಬುದು ಗೋಚರಕ್ಕೆ ಬಾರದಿರದು. 'ಕಾರಖಾನೆ'ಗಳಲ್ಲಿ, ಗಾಳಿ ಬೆಳಕುಗಳ ಪ್ರವೇಶಕ್ಕೆ ವ್ಯವಸ್ಥೆ ತೀರ ಕಡಿಮೆ. ಕೆಲಸವ ತಾಸುಗಳ ನಿಷ್ಕರ್ಷೆಯೂ ಇಲ್ಲ. ಸಾಮಾನ್ಯವಾಗಿ ಬಹಳ ಹೆಚ್ಚು ಹೊತ್ತು ದುಡಿಸಲಾಗುತ್ತದೆ. ಯಜಮಾನನು ಅವರನ್ನು ಶಕ್ತಿಮೀರಿ, ಸಾಧ್ಯವಿದ್ದಷ್ಟು ದುಡಿಸಲು ನೋಡುತ್ತಾನೆ. ಕೈಮಗ್ಗದ ಕಾರಖಾನೆಗೆ ಭೆಟ್ಟಿಕೊಟ್ಟು ನೇಕಾರರು ಕೆಲಸ ಮಾಡುತ್ತಿರುವುದನ್ನು ಕಂಡವರಾರೂ ಅವರ ಬತ್ತಿದ ಬಿಳಿಚಿದ ಮುಖಗಳನ್ನೂ ಅವರ ಕಣ್ಣಲ್ಲಿರುವ ನಿರ್ವಿಣ್ಣತೆಯನ್ನೂ ಅವರ ನಿಸ್ತೇಜ ಸ್ವರೂಪವನ್ನೂ ಎಂದೂ ಮರೆಯಲಾರರು.

ದುಡಿತದ ಸ್ಥಿತಿಗತಿಯೇ ಕೆಟ್ಟ, ಅವರ ಜೀವನದ ಅವಸ್ಥೆಯಂತೂ ಭಯಾನಕವಾಗಿದೆ. ತಾನು ಕೆಲಸಕ್ಕೆ ಇಟ್ಟುಕೊಂಡ ನೇಕಾರರಿಗೆ ವಸತಿಸೌಕರ್ಯವನ್ನೊದಗಿಸುವ ಕರ್ತವ್ಯ ಯಜಮಾನನದೆಂದು ಭಾವಿಸಲಾಗಿದೆ. ವಸತಿಗಳ ಅಭಾವದ ಇಂದಿನ ಕಷ್ಟಕಾಲದಲ್ಲಿ ಯಜಮಾನರು ಹೇಗೆ ಇವರಿಗೆ ವಸತಿಯನ್ನೇರ್ಪಡಿಸಲಾಪರೆಂದು ಓದುಗರು ಕೌತುಕಪಡಬಹುದು· ಆದರೆ ಇದು ತೀರ ಸರಳ. ನೇಕಾರರಿಗೆ ವಸತಿಯನ್ನು ಬೇರೆ ಕಟ್ಟಡಗಳಲ್ಲೇನೂ ಏರ್ಪಡಿಸಿರುವುದಿಲ್ಲ. ಅದೇ ಅವರ ಕಾರಖಾನೆ, ಅದೇ ಅವರ ಮನೆ. ಅಲ್ಲೇ ದುಡಿಮೆ, ಅಡಿಗೆ, ಊಟ, ನಿದ್ದೆ. ಏಕಾಂತವೆಂಬುದೇ ಅಲ್ಲಿ ಇಲ್ಲ. ಯಾವ ಬಗೆಯ ಸೌಕರ್ಯಗಳ ಏರ್ಪಾಡೂ ಇಲ್ಲ. ಗಂಡಸರೂ ಹೆಂಗಸರೂ ಮಕ್ಕಳೂ ಒಟ್ಟಿಗೆ ಬಿದ್ದಿರುತ್ತಾರೆ. ಇದಕ್ಕಿಂತ ಕೆಟ್ಟ ಜೀವನದ ಸ್ಥಿತಿಗತಿ ಇರಬಲ್ಲುದೆ?

ಆದರೆ ‘ ಆಸಾಮಿ ’ಗೂ ನಾವು ಅನ್ಯಾಯ ಮಾಡಬಾರದು. ಅವನೇನೂ ದೊಡ್ಡ ಬಂಡವಳಗಾರನಲ್ಲ. ಎಷ್ಟೋ ವೇಳೆ ಅವನೂ ಬೇರೊಬ್ಬ ದಲಾಲನಿಗಾಗಿ–ಸಾವುಕಾರ--ನೇಕಾರನಿಗಾಗಿ--ದುಡಿಯುವವನು. ಸಾವುಕಾರ ಯಜಮಾನನು ಅವನಿಗೆ ಡಿಜೈನುಗಳನ್ನೂ ನೂಲನ್ನೂ ರಂಗುಗಳನ್ನೂ ಒದಗಿಸುತ್ತಾನೆ. ಅವಶ್ಯವಿದ್ದಲ್ಲಿ ಹಣವನ್ನು ಕೂಡ ಮುಂಗಡ ಕೊಡುತ್ತಾನೆ. ಈ ಪ್ರಕಾರ ನೇಕಾರರನ್ನು ಕೆಲಸಕ್ಕಿಟ್ಟುಕೊಂಡವನೂ ಈ ಸಾವುಕಾರ-ನೇಕಾರನ ಏಜಂಟನಿದ್ದಂತೆಯೇ. ಸಾವುಕಾರ ನೇಕಾರನು ಅವನಿಂದ ಎಲ್ಲ ಬಟ್ಟೆಯನ್ನೂ ಮೊದಲೇ ಗೊತ್ತಾದ ಬೆಲೆಗೆ ಕೊಳ್ಳುತ್ತಾನೆ. ನೇಕಾರರನ್ನು ಕೆಲಸಕ್ಕಿಟ್ಟುಕೊಂಡ ಆಸಾಮಿ ಎಷ್ಟೋ ವೇಳೆ ತಾನೂ ನೇಕಾರನೇ ಆಗಿರುತ್ತಾನೆ. ಅವನು ನಿಷ್ಠುರವಾಗಿ ಅವರನ್ನು ದುಡಿಸಿಕೊಳ್ಳಲೇಬೇಕಾಗುತ್ತದೆ. ಅವರು ತನಗಾಗಿ ದುಡಿಯಬೇಕೆಂಬ ಕರಾರಿನಿಂದ ಅವನು ಅವರಿಗೆ ಹಣವನ್ನೂ ಮುಂಗಡ ಕೊಟ್ಟಿರುತ್ತಾನೆ. ಕೂಲಿಯ ಪದ್ಧತಿಯನ್ನು ಕುರಿತು ಇಲ್ಲೊಂದು ಮಾತು ಹೇಳಬೇಕಾಗಿದೆ. ನೇಕಾರರಿಗೆ ನಿಶ್ಚಿತವಾದ ದಿನಗೂಲಿಯಿಲ್ಲ. ಆಯಾ ಕೆಲಸದ ಮೇಲೆ ಅವರಿಗೆ ಸಂಬಳ ಸಿಗುತ್ತದೆ. ಅವರಿಗೆ ವಾರಕ್ಕೆ ಇಂತಿಷ್ಟು ಅಥವಾ ತಿಂಗಳಿಗೆ ಇಂತಿಷ್ಟು ಎಂದು ಸಂಬಳ ಸಲ್ಲದೆ ಒಂದು ಧೋತರಕ್ಕೆ ಇಷ್ಟು ಒಂದು ಸೀರೆಗೆ ಇಷ್ಟು ಎಂದು ಕೂಲಿ ಕೊಡಲಾಗುತ್ತದೆ ಆದರೆ ನೇಕಾರರಲ್ಲಿ ಬಹಳ ಜನರಿಗೆ ಜೀವನದಲ್ಲಿ ಮಹತ್ವಾಕಾಂಕ್ಷೆಯಿರುವುದಿಲ್ಲ; ಅವರ ಪಾಡಿಗೆ ಅವರನ್ನು ಬಿಟ್ಟರೆ ಅವರು ಆದಷ್ಟು ಕಡಿಮೆ ದುಡಿಯುತ್ತಾರೆ. ಆದುದರಿಂದ ‘ಆಸಾಮಿ’ ಅಥವಾ ಯಜಮಾನನು ಅವರನ್ನು ಒತ್ತಾಯದಿಂದ ದುಡಿಸಬೇಕಾಗುತ್ತದೆ. ಪದ್ಧತಿಯೇ ಅಂಥದು—ಅದರಲ್ಲಿ ನೇಕಾರರು ಹೆಚ್ಚುಕಡಿಮೆ ಜೀತದಾಳುಗಳೇ.

ಇದಕ್ಕೆ ಪರಿಹಾರವೇನು? ಇಡೀ ಉದ್ದಿಮೆಯನ್ನು ಸಹಕಾರಿ ಪದ್ಧತಿಯಲ್ಲಿ ಪುನರ್ಘಟಿಸಿ ನೇಕಾರರನ್ನು ಸ್ವತಂತ್ರಗೊಳಿಸಿಬಿಡಬೇಕೆಂದು ಸೂಚಿಸಲಾಗಿದೆ. ಮಧ್ಯಸ್ಥರು ಅಥವಾ ದಲಾಲರು ಇರತಕ್ಕದ್ದಲ್ಲ. ಆದರೆ ಇದು ಹೇಳಲು ಸುಲಭ, ಮಾಡಲು ಕಷ್ಟ. ಈಗ ಬೇರೆಯವರಿಗಾಗಿ ದುಡಿಯುತ್ತಿರುವ ನೇಕಾರರ ಹತ್ತಿರ ಬಂಡವಳವಿಲ್ಲ; ಅವರಲ್ಲಿ ಸಾಹಸವೂ ಇಲ್ಲ; ಪ್ರಯತ್ನಬುದ್ಧಿಯೂ ಇಲ್ಲ. ಅವರಿಗೆ ಮಗ್ಗಗಳನ್ನು ಯಾರು ಒದಗಿಸಬೇಕು ? ನೂಲು ರಂಗುಗಳನ್ನೂ ಡಿಜೈನುಗಳನ್ನೂ ಯಾರು ಕೊಡಬೇಕು ? ನಾವು ಈ ಸಮಸ್ಯೆಯನ್ನು ವ್ಯವಹಾರ ಬುದ್ಧಿಯಿಂದ ನೋಡುವದವಶ್ಯ. ಈ ಉದ್ದಿಮೆಯನ್ನು ಪುನರ್ಘಟಿಸಬೇಕೇನೋ ನಿಜ; ಆದರೆ ಅದಕ್ಕೆ ವರ್ಷಗಟ್ಟಳೆ ಸಮಯಹಿಡಿದೀತು. ಈ ನಡುವೆ ನಾವು ಇದ್ದದ್ದರಲ್ಲಿಯೇ ಆದಷ್ಟು ಸುಧಾರಿಸಬೇಕು.

ಮೊಟ್ಟಮೊದಲು ನಾವು ಕೈಮಗ್ಗದ ಕಾರಖಾನೆಗಳಲ್ಲಿನ ದುಡಿಮೆಯ ಸ್ಥಿತಿಯನ್ನು ಸುಧಾರಿಸಬೇಕು- ಇದೀಗ ಜಾರಿಗೆ ಬಂದಿರುವ ಫ್ಯಾಕ್ಟರಿ ಕಾಯದೆಯನ್ನು ಕೈಮಗ್ಗದ ಕಾರಖಾನೆಗಳಿಗೂ ಅನ್ವಯಿಸಬೇಕೆಂಬ ಸೂಚನೆ ಬಂದಿದೆ. ಆದರೆ ಈ ಕಾರಖಾನೆಗಳಲ್ಲಿರುವ ಸ್ಥಿತಿಗತಿಯೇ ಬೇರೆ, ಇತರ ಔದ್ಯಮಿಕ ಕಾರಖಾನೆಗಳಲ್ಲಿರುವುದೇ ಬೇರೆ. ಬಹುಶಃ ಇದಕ್ಕಾಗಿ ಪ್ರತ್ಯೇಕ ಕಾಯದೆಯೋ ಬೇಕಾದೀತು. ಕೆಲಸದ ತಾಸುಗಳನ್ನು ನಿರ್ದಿಷ್ಟಪಡಿಸತಕ್ಕದ್ದು· ವಾರಕ್ಕೊಂದು ರಜೆಗೆ ವ್ಯವಸ್ಥೆಯಾಗಬೇಕು. ನೇಕಾರರಿಗೆ ವಿಶಿಷ್ಟ ಕೆಲಸಕ್ಕೆ ವಿಶಿಷ್ಟ ಕೂಲಿ ಕೊಡಲಾಗುತ್ತಿದೆ. ಯೇನೋ ಸರಿ. ಆದರೆ ಅವರಿಗೆ ಸ್ವಂತ ಮೌಢ್ಯದ ವಿರುದ್ಧವಾಗಿಯೂ ಅವರನ್ನು ಒತ್ತಾಯದಿಂದ ದುಡಿಸುವವರ ವಿರುದ್ಧವಾಗಿಯೂ ರಕ್ಷಣೆಯನ್ನೊದಗಿಸುವುದು ಅಗತ್ಯ, ಅಲ್ಲದೆ ನೇಕಾರರೊಡನೆಯೇ ಇದ್ದು ಒಡನೆಯೇ ದುಡಿಯುವ ಅವರ ಹೆಂಡತಿ ಮಕ್ಕಳಿಗೂ ರಕ್ಷಣೆ ಅವಶ್ಯ. ಕೈಮಗ್ಗದ ಕಾರಖಾನೆಗಳನ್ನು ಲೈಸನ್ಸಿಗೆ ಒಳಪಡಿಸಬೇಕು. ಕೆಲಸಗಾರರಿಗೆ ದುಡಿಯಲು ಸಾಕಷ್ಟು ಸ್ಥಳವೂ ಗಾಳಿಬೆಳಕುಗಳಿಗೆ ಸರಿಯಾದ ಅವಕಾಶವೂ ಇದ್ದರೆ ಮಾತ್ರವೇ ಲೈಸನ್ಸ ಕೊಡಬೇಕು. ನೇಕಾರರಿಗೂ ಅವರ ಕುಟುಂಬಗಳಿಗೂ ವಸತಿ ಸೌಕರ್ಯವನ್ನೊದಗಿಸುವುದು ಕಾರಖಾನೆದಾರರ ಕರ್ತವ್ಯವೆಂದು ವಿಧಿಸಬೇಕು. ಈಗಿನ ವ್ಯವಸ್ಥೆಗಳು ಅಬದ್ಧವಾಗಿವೆ. ಪ್ರತಿಯೊಬ್ಬ ನೇಕಾರನಿಗೂ ಅವನ ಕುಟುಂಬಕ್ಕೂ ಇರಲಿಕ್ಕೆ ಒಂದು ಕೋಣೆಯನ್ನಾದರೂ ಏರ್ಪಡಿಸಬೇಕು. ಈಗಿನಂತೆ ಕಾರಖಾನೆಯಲ್ಲೇ ವಾಸಿಸಲು ಅವರನ್ನು ನಿರ್ಬಂಧಿಸಕೂಡದು. ಅನೇಕ ಕೋಣೆಗಳ ಒಂದು ಚಿಕ್ಕ ಕಟ್ಟಡ ಕಟ್ಟಿಸಿ ಅವರಿಗೆ ಕೊಡಬಹುದು. ಅದನ್ನು ವಸತಿಯೆಂದು ಕರೆಯುವುದು ಅಪಹಾಸ್ಯವೆನಿಸಬಹುದಾದರೂ ಸದ್ಯಕ್ಕೆ ಅದಕ್ಕೂ ಹೆಚ್ಚೇನನ್ನೂ ನಿರೀಕ್ಷಿಸಲು ಎಡೆಯಿಲ್ಲ.

ಯಜಮಾನನಿಗೆ ಈ ರೀತಿ ವಸತಿಸೌಕರ್ಯವೊದಗಿಸಲು ಸಾಧ್ಯವುಂಟೆ? ಸರಕಾರದ ಸಹಾಯವಿದ್ದರೆ ಸಾಧ್ಯವುಂಟು. ಮನೆ ಕಟ್ಟಿಸಲು ಸ್ಥಳವನ್ನೂ ಸಾಲಗಳನ್ನೂ ಒದಗಿಸಿ ಸರಕಾರ ಅವನಿಗೆ ಸಹಾಯ ಮಾಡಬಹುದು.

ನೇಕಾರರ ಆರ್ಥಿಕ ಸ್ಥಿತಿಗತಿ ಅವರ ಕೆಲಸದ ಮತ್ತು ಜೀವನದ ಸ್ಥಿತಿಗತಿಯಷ್ಟೇ ಮುಖ್ಯವಾದುದು. ನೇಕಾರರಿಗೆ ಕೆಲಸದ ತಾಸು ಮತ್ತು ವಸತಿಸೌಕರ್ಯಗಳಿಗಿಂತಲೂ ಕೂಲಿಯ ಪ್ರಶ್ನೆ ಮಹತ್ವದ್ದು. ಕೂಲಿಯ ಪದ್ಧತಿಯನ್ನು ಈಗಾಗಲೆ ವಿವರಿಸಲಾಗಿದೆ. ಬೇರೆಯವರಿಗಾಗಿ ದುಡಿದು ಕೂಲಿಗಳಿಸುವ ನೇಕಾರರಿಗೆ ನಿಶ್ಚಿತ ಕೂಲಿ ದರಗಳಿಲ್ಲ. ಅವರಿಗೆಷ್ಟು ಸಿಗುವುದೆಂಬುದು ಅವರು ಮಾಡುವ ಕೆಲಸದ ಪರಿಮಾಣವನ್ನು ಹೊಂದಿಕೊಂಡಿದೆ. ಈ ಪದ್ಧತಿಯಲ್ಲಿ ಸಾಧಕ ಬಾಧಕಗಳೆರಡೂ ಇವೆ. ನೇಕಾರರು ಪ್ರಯತ್ನಪೂರ್ವಕವಾಗಿ ದುಡಿದು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ವಸ್ತುತಃ ಎರಡನೇ ಮಹಾಯುದ್ಧ ಕಾಲದಲ್ಲಿ ಅನೇಕ ನೇಕಾರರು


ತುಂಬ ಸುಖವಾಗಿದ್ದರು. ೧೯೩೯ ರಿಂದ ೧೯೪೬—೪೭ ರ ವರೆಗೂ ಕೈಮಗ್ಗದ ಉದ್ದಿಮೆ ಉಚ್ಛ್ರಾಯ ಸ್ಥಿತಿಗೇರಿತು. ಕೈಮಗ್ಗದ ಬಟ್ಟೆಗೆ ತುಂಬ ಬೇಡಿಕೆಯಿತ್ತು. ಭಾರತದ ನೇಕಾರರು ತಯಾರಿಸಿದ ಬಟ್ಟೆ ಆಸ್ಟ್ರೇಲಿಯದಂಥ ದೂರದೂರದ ದೇಶಗಳಲ್ಲಿಯೂ ಮಾರುತ್ತಿತ್ತು. ಕೈಮಗ್ಗದ ಉದ್ದಿಮೆಯಲ್ಲಿ ಕೂಲಿಯ ದರ ತಕ್ಕ ಮಟ್ಟಗೆ ಏರಿಕೆಯಲ್ಲಿಯೇ ಇತ್ತು. ಕುಟುಂಬಸಹಿತವಾಗಿ ದುಡಿಯುವ ನೇಕಾರರಿಗೆ ತಿಂಗಳಿಗೆ ಸರಾಸರಿ ರೂ. ೧೨೦ ರ ವರೆಗೆ ದೊರೆಯುತ್ತಿತ್ತು. ಇದು ಪಾಶ್ಚಾತ್ಯ ಮಾನದಿಂದ ಹೆಚ್ಚಲ್ಲದಿದ್ದರೂ ನಮ್ಮಂಥ ಬಡ ದೇಶದ ಮಟ್ಟಗೆ ಒಳ್ಳೇ ಕೂಲಿಯೆಂದು ಹೇಳಬೇಕು. ಆದುದರಿಂದ ಕೈಮಗ್ಗದ ಸರಕುಗಳಿಗೆ ಒಳ್ಳೆಯ ಮತ್ತು ಏಕಪ್ರಕಾರವಾದ ಬೇಡಿಕೆಯಿದ್ದರೆ ನೇಕಾರರು ಉತ್ತಮ ಕೂಲಿಯನ್ನು ನಿರೀಕ್ಷಿಸಬಹುದಾಗಿದೆ. ಆದರೆ ಅವರಿಗೆ ಯಜಮಾನರಿಂದ ಯಾವಾಗಲೂ ನ್ಯಾಯ ದೊರಕುವದೆಂದು ಹೇಳಬರುವದಿಲ್ಲ. ನೇಕಾರರು ಹೆಚ್ಚು ದುಡಿದು ಹೆಚ್ಚು ಕೂಲಿ ಸಂಪಾದಿಸತೊಡಗಿದರೆ ಯಜಮಾನರು ಕೂಲಿಯ ದರವನ್ನು ಕಡಿಮೆ ಮಾಡಬಹುದು. ಅಥವಾ ಅವರು ಕೂಲಿಯಿಂದ ಅನಧಿಕೃತ ಕಾರಣಗಳಿಗಾಗಿ ಹಣವನ್ನು ಮುರಿದುಕೊಳ್ಳಬಹುದು. ನೇಕಾರರು ನೇಯ್ದ ಬಟ್ಟೆಯಲ್ಲಿ ಏನಾದರೊಂದು ಕುಂದುಕೊರತೆಯನ್ನು ಹುಡುಕಿ ಅವರಿಗೆ ಸಲ್ಲಬೇಕಾದ ಹಣದಲ್ಲಿ ಒಂದು ಭಾಗವನ್ನು ಹಿಡಿದುಕೊಳ್ಳಬಹುದು. ಎಲ್ಲ ಯಜಮಾನರೂ ಮೋಸಗಾರರೆಂದು ನಮ್ಮ ಆರೋಪವಲ್ಲ ಆದರೆ ಸದ್ಯದ ಕೂಲಿಯ ಪದ್ಧತಿಯಲ್ಲಿ ದುರಾಚಾರಕ್ಕೆ ಅವಕಾಶವಿದೆ.

ಹೀಗೆ ಕೂಲಿಯನ್ನು ಕ್ರಮಗೊಳಿಸುವ ಅವಶ್ಯಕತೆಯುಂಟು. ಪ್ರತಿಯೊಂದು ರಾಜ್ಯದಲ್ಲಿಯೂಕೈಮಗ್ಗದ ಉದ್ಯಮದಲ್ಲಿನ ಕೂಲಿಯ ದರಗಳನ್ನು ನಿರ್ಣಯಿಸುವ ಸರಕಾರಿ ವ್ಯವಸ್ಥೆಯಿರಬೇಕು. ಕೂಲಿಯ ದರಗಳು ತಯಾರಿಸಿದ ಬಟ್ಟೆಯ ಪರಿಮಾಣವನ್ನು ಮಾತ್ರವೇ ಅವಲಂಬಿಸಿರದೆ, ತಯಾರಿಸಿದ ಬಟ್ಟೆಯ ಒರಟುತನ-ನವಿರುತನವನ್ನೂ ಅವಲಂಬಿಸಿವೆ. ಬೇರೆ ಬೇರೆ ವರ್ಗದ ಬಟ್ಟೆಯ ನೇಯ್ಗೆಗೆ ಕನಿಷ್ಠ ಕೂಲಿಯ ದರವನ್ನು ಆಗಿಂದಾಗ್ಗೆ ಗೊತ್ತುಪಡಿಸಿ, ದುರ್ವ್ಯಾಪಾರಗಳು ನಡೆಯದಂತೆ ನೋಡಿಕೊಳ್ಳಬೇಕಾಗಿದೆ.

ನೇಕಾರರಿಗೆ ಪೂರ್ಣ ಉದ್ಯೋಗವಿದ್ದರೆ ಮಾತ್ರ ಒಳ್ಳೆ ಕೂಲಿ ಸಂಪಾದನೆಯಾಗುವುದು. ನಿರಂತರವಾಗಿ ಸಾಕಷ್ಟು ನೂಲು ದೊರೆಯುತ್ತಿದ್ದರೇನೇ ಅವರಿಗೆ ಪೂರ್ಣ ಉದ್ಯೋಗವಿರುವುದು. ಇಂದು ದೇಶದ ಅನೇಕ ಭಾಗಗಳಲ್ಲಿ ಕೈಮಗ್ಗದ ಉದ್ಯೋಗಕ್ಕೆ ಬಿಕ್ಕಟ್ಟು ಎದುರಾಗಿದೆ. ಅನೇಕ ಕಾರಖಾನೆಗಳಲ್ಲಿಯೂ ಮನೆಗಳಲ್ಲಿಯೂ ಮಗ್ಗಗಳು ಇಂದು ಕೆಲಸವಿಲ್ಲದೆ ಬಿದ್ದಿದೆ. ಇದಕ್ಕೆ ಯಾರನ್ನು ದೂರಬೇಕು ? ಸರಕಾರ ಗಿರಣಿ ಮಾಲಿಕರನ್ನು ದೂರುತ್ತದೆ. ಗಿರಣಿಯವರು ಆಗಾಗ್ಗೆ ಸಂಪುಹೂಡಿ ಉತ್ಪಾದನೆಗೆ ಆತಂಕ ಉಂಟು ಮಾಡುತ್ತಾರೆಂದು ಕೂಲಿಕಾರರನ್ನು ದೂರುತ್ತಾರೆ. ಗಿರಣಿ ಮಾಲಿಕರು ನ್ಯಾಯ್ಯವಾದ ಕೂಲಿಕೊಡುವುದಿಲ್ಲೆಂದು ಕೂಲಿಕಾರರು ದೂರುತ್ತಾರೆ ಸರಕಾರದವರು ಹಾಕಿದ ನಿಯಂತ್ರಣಗಳು ಎಷ್ಟೋ ವೇಳೆ ಮತ್ತಷ್ಟು ದುರವಸ್ಥೆಗೆ ಕಾರಣವಾಗಿವೆ. ದೇಶದಿಂದ ನೂಲು ನಿರ್ಯಾತವಾದುದರಿಂದ ನೂಲಿನ ತುಟಾಗ್ರತೆಯುಂಟಾಗಿದೆಯಂತೆ. ಅಂತೂ ಎಲ್ಲಿಯೋ ಏನೋ ತಾಳತಪ್ಪಿದೆ; ಅದರಿಂದ ನೇಕಾರರು ನಿರಂತರವಾಗಿ ಕಷ್ಟಪಡಬೇಕಾಗಿದೆ. ನೇಕಾರರ ವಿಷಯದಲ್ಲಿ ಸರಕಾರಕ್ಕೊಂದು ನೈತಿಕ ಕರ್ತವ್ಯವಿದೆ ಅದು ಕೈಮಗ್ಗದ ನೇಕಾರರಿಗೆ ಸಾಕಷ್ಟು ನೂಲು ಪೂರೈಸಬೇಕು. ಅವರ ಸುಖಸಂಪತ್ತು ನೂಲಿನ ಪೂರೈಕೆಯನ್ನೇ ಅವಲಂಬಿಸಿದೆ.

ಎರಡನೆಯವರಿಗಾಗಿ ದುಡಿಯುವ ನೇಕಾರರ ಬಗ್ಗೆ ಇಷ್ಟು ಹೇಳಿದ್ದಾಯಿತು. ಸ್ವಂತಹೊಣೆಯಿಂದ ಬಟ್ಟೆನೇಯುವವರ ವಿಚಾರ ಇನ್ನು ನೋಡೋಣ. ಅವರ ಸ್ಥಿತಿ ಈಗ ಹೇಗಿದೆ? ಕೆಲ ಅಂಶಗಳಲ್ಲಿ ಕೈ-ಮಗ್ಗದ ಕಾರಖಾನೆಗಳಲ್ಲಿ ದುಡಿಯುವವರಿಗಿಂತ ಇವರ ಸ್ಥಿತಿ ವಾಸಿ. ಮೊದಲನೆಯದಾಗಿ ಇವರು ಸ್ವತಂತ್ರರು. ತಮಗೆ ತಾವೇ ಹೊಣೆಗಾರರು. ಮನಸು ಬಂದಾಗ ಮಾತ್ರ ಅವರು ದುಡಿಯುವರು. ಅವರು ಕೆಲಸ ಮಾಡುವುದೂ ಸ್ವಂತ ಮನೆಯಲ್ಲಿಯೇ. ಹೆಂಡತಿ ಮಕ್ಕಳು ಮನಸಾ ಅವರಿಗೆ ನೆರವಾಗುತ್ತಾರೆ. ಅವರ ಕೆಲಸದ ಆಗುಹೋಗುಗಳು ಆದರ್ಶವಾಗಿವೆಯೆನ್ನಬೇಕು. ಜೀವನದ ಸ್ಥಿತಿಯಾದರೂ ತೀರ ಕೀಳಾಗಿಲ್ಲ. ಆದರೆ ಇದು ಒತ್ತಟ್ಟಿನ ಕತೆಯಾಯಿತು. ಇನ್ನರ್ಧ ಕತೆ ಬೇರೆಯೆ ಇದೆ. ಸ್ವಂತ ಮನೆಯಲ್ಲಿ ದುಡಿಯುವ ನೇಕಾರನಿಗೆ ಸ್ವಾತಂತ್ರ್ಯವಿದೆ, ಹೊರತು ಸುರಕ್ಷಿತತೆಯಿಲ್ಲ. ಅವನ ಆರ್ಥಿಕ ಸ್ಥಿತಿ ಎಷ್ಟೋ ವೇಳೆ ತೀರ ನಿಕೃಷ್ಟವಾಗಿರುತ್ತದೆ. ಅವನಲ್ಲಿರುವ ಬಂಡವಳ ಕಡಿಮೆ, ಆದರೂ ತಾನೇ ತನಗೆ ಬೇಕಾದ ನೂಲು ರಂಗುಗಳನ್ನು ಸಂಗ್ರಹಿಸಿಡಬೇಕು ಅವನು. ಅವನಿಗೆ ಅತ್ಯಾಧುನಿಕ ತಂತ್ರಗಳಾಗಲಿ ಅತ್ಯಾಧುನಿಕ ಮಾದರಿಯ ಡಿಜೈನುಗಳಾಗಲಿ

ಹೊಸ ಸುಧಾರಣೆಗಳಿಂದ ಕೂಡಿದ ಒಂದೇ ಒಂದಾದ
ಹೊಲಿಗೆ ಯಂತ್ರ
ಝೆಕೊಸ್ಲೋವಾಕಿಯಾದಲ್ಲಿ ತಯಾರಾದ
ಹಾಯ್ ಸ್ಪೀಡ ಝಿಟಿನಾ



ಚೇನ ಟಾಯಿಪ್ ಮಶಿನ್
ಕಿಮ್ಮತ್ತು, ಸೇಲ್ಸ ಟ್ಯಾಕ್ಸ ಕೂಡಿ, ರೂ. ೫೫೧-೧೨-೬
ಡಿಸ್ಟ್ರಿಬ್ಯೂಟರರು :-
ಎಸ್. ಎಸ್. ಉಜ್ಜಣ್ಣವರ ಮತ್ತು ಕಂಪನಿ,
ಕೋಯಿನ್ ರೋಡ್, ... ಹುಬ್ಬಳ್ಳಿ.

ಗೊತ್ತಿಲ್ಲ; ಪೇಟೆಯ ಸ್ಥಿತಿಗತಿಯನ್ನೂ ಅವನು ಅರಿಯನು. ಒಂದು ಮಾದರಿಯಲ್ಲಿ ಒಂದು ಬಟ್ಟೆಯನ್ನು ನೇಯ್ದು ಆಮೇಲೆ ಅದನ್ನು ಯಾರೂ ಕೇಳುವುದಿಲ್ಲವೆಂದು ಕಂಡುಬರಬಹುದು; ಆಗ ಸಿಕ್ಕಿದ ಬೆಲೆಗೆ ಅದನ್ನು ಮಾರಬೇಕಾಗುವುದು. ಮಾರಾಟವು ಅವನ ಅತಿ ದೊಡ್ಡ ಸಮಸ್ಯೆ.

ಸ್ವತಂತ್ರ ನೇಕಾರನು ನಾನಾ ಅನನುಕೂಲತೆಗಳಿಗೊಳಗಾಗುತ್ತಾನೆ. ಸಹಕಾರವೊಂದೇ ಅವನಿಗೆ ತರಣೋಪಾಯ. ಹೊಸ ಹುರುಪಿನ ಸಹಕಾರವಾದಿಗಳು ಎಲ್ಲ ಆರ್ಥಿಕ ಪೀಡೆಗಳಿಗೂ ಸಹಕಾರವೊಂದು ಮಂತ್ರೌಷಧವೆಂದು ನಂಬಿದಂತೆ ಕಾಣುತ್ತದೆ. ಸಹಕಾರಕ್ಕೆ ಅದರದೇ ಮಿತಿಮೇರೆಗಳಿವೆ. ಆದರೂ ಸಹಕಾರದಿಂದ ಕೈಮಗ್ಗದ ನೇಕಾರರಿಗೆ ತುಂಬ ಹಿತವಾಗುವುದೆಂಬಲ್ಲಿ ಸಂದೇಹವಿಲ್ಲ. ಎಲ್ಲ ಕೇಂದ್ರಗಳಲ್ಲಿಯೂ ಕೈಮಗ್ಗದ ನೇಕಾರರ ಸಹಕಾರಿ ಸಂಘ ಸ್ಥಾಪಿಸಿ ಸ್ವತಂತ್ರ ನೇಕಾರರನ್ನು ಅದರಲ್ಲಿ ಸೇರುವಂತೆ ಮನವೊಲಿಸಬೇಕು. ಅಂಥ ಸಹಕಾರಿ ಸಂಘಗಳು ನೇಕಾರರಿಗಾಗಿ ಏನು ಮಾಡಬಲ್ಲವೆಂದು ನೋಡೋಣ. ಅವು ನೂಲು ರಂಗುಗಳನ್ನು ಕೊಂಡು ನೇಕಾರರಿಗೆ ಹಂಚುವುವು. ನೂಲು ರಂಗುಗಳನ್ನು ಠೋಕ ಕೊಂಡರೆ ಕಡಿಮೆ ಬೆಲೆ ಬೀಳುತ್ತದೆ. ಅವಶ್ಯವಿದ್ದಲ್ಲಿ ಅವು ಸಾಲವನ್ನೂ ಕೊಡಬಹುದು. ಅವು ನೇಕಾರರಿಗೆ ಅತ್ಯಾಧುನಿಕ ಮಾದರಿ-ಡಿಜೈನುಗಳನ್ನು ಒದಗಿಸಿಕೊಡುವವು. ಇದು ಎಷ್ಟು ಹಿತಕರ! ಕೊನೆಯದಾಗಿ, ಅವು ಕೈಮಗ್ಗದ ಮಾಲುಗಳನ್ನು ಮಾರುವ ವ್ಯವಸ್ಥೆ ಮಾಡುವುವು: ಇದಂತೂ ಅವು ನೇಕಾರರಿಗೆ ಮಾಡುವ ಪರಮೋಪಕಾರ.

ಸುದೈವದಿಂದ ದೇಶದ ಎಷ್ಟೋ ಭಾಗಗಳಲ್ಲಿ ನೇಕಾರರ ಸಹಕಾರಿ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಮದ್ರಾಸಿನಲ್ಲಿ ಸಹಕಾರಿ ಪದ್ಧತಿ ಎಲ್ಲಕ್ಕೂ ಚೆನ್ನಾಗಿ ಮುಂದುವರಿದಂತೆ ಕಾಣುತ್ತದೆ. ಎಲ್ಲ ಮುಖ್ಯ ಕೇಂದ್ರಗಳಲ್ಲಿಯೂ ನೇಕಾರರ ಸಹಕಾರಿ ಸಂಘಗಳನ್ನು ಮಾಡಿ ಅವನ್ನು ಜೋಡಿಸಿ ಒಂದು ಮಹಾಮಂಡಲವನ್ನು ರಚಿಸಲಾಗಿದೆ. ಇದೇ ಪ್ರಾಂತಿಕ ಕೈಮಗ್ಗದ ನೇಕಾರರ ಸಂಘ.

'ಕಾರಖಾನೆ'ಗಳಲ್ಲಿ ಅನ್ಯರಿಗೆ ಅಡಿಯಾಳಾಗಿ ನೇಕಾರರು ದುಡಿಯಬೇಕಾದ ಕಾರಣವೇನೂ ಇಲ್ಲ. ಹೀಗೆ ಕೂಲಿಗಾಗಿ ದುಡಿಯುವ ನೇಕಾರರು ಸಹಕಾರದಿಂದ ಸ್ವತಂತ್ರರಾಗಬಲ್ಲರು. ಆದರೆ ಇಂದು ಇದಿನ್ನೂ ದೂರದ ಆದರ್ಶ. ಇನ್ನು ಕೆಲ ಕಾಲದ ವರೆಗೆ ನೇಕಾರರ ಸಹಕಾರಿ ಸಂಘಗಳು ಸ್ವಂತ ಮನೆಯಲ್ಲೇ ದುಡಿಯುವವರಿಗೆ ಮಾತ್ರ ಸಹಾಯ ನೀಡುವುವು. ಇಂದು ಪರಕೀಯರಿಗಾಗಿ ದುಡಿಯುವವರು ತಮ್ಮ ಸ್ಥಿತಿಗತಿ ಸುಧಾರಿಸಿ, ಸ್ವತಂತ್ರರಾಗಲು ಸಮರ್ಥರಾದ ಮೇಲೆ, ಸೇರುವರು. ಆವರೆಗೆ ನಾವು ಕೈಲಾದಷ್ಟು ಅವರ ಸ್ಥಿತಿಯನ್ನು ಸುಧಾರಿಸಲು ಯತ್ನಿಸಬೇಕು.

ಹಿಂದೀ ಪ್ರೇಮಿಗಳಿಗೆ ದೀಪಾವಳಿ ಕಾಣಿಕೆ !!

(ಹೊಸ ಮಾದರಿ ಹೊಸ ಆದರ್ಶ)

ಹಿಂದೀ--ಹಿಂದೀ--ಕನ್ನಡ ರತ್ನಕೋಶ

हिंदी–हिंदी–कन्नड़ रत्न कोश

ಸಂಪಾದಕರು : ಶ್ರೀ ಜೆ. ಡಿ. ವೈಸಾಳೆ ರಾಷ್ಟ್ರಭಾಷಾ ಕೋವಿದ, ಶಿಕ್ಷಕ ಸನದ

ದೀಪಾವಳಿ ಶುಭ ಮುಹೂರ್ತದಲ್ಲಿ ಪ್ರಕಟವಾಗುವದು !

ಬೆಲೆ ೮—೧೨—೦ .... ಅಂಚೆ ವೆಚ್ಚ ಪ್ರತ್ಯೇಕ

ಸುಮಾರು ೧೨೦೦ ಪುಟಗಳು—೩೫೦೦೦ ಶಬ್ದ ಸಂಗ್ರಹ—೩ ಲಕ್ಷ ಹಿಂದೀ ಹಾಗೂ ಕನ್ನಡ ಅರ್ಥವಿವರಣೆಗಳು—ಪಡೆನುಡಿಗಳು—ಗಾದೆಯ ಮಾತುಗಳು—ರಾಜಕೀಯ, ನ್ಯಾಯ ವಿಧಾಯಕ, ತಾರ, ರೇಡಿಯೋ ಹಾಗೂ ಭಾರತ ಶಾಸನ ಶಬ್ದಾವಲೀ ಅಲ್ಲದೆ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಲೇಖಕರಿಗೆ, ಸಂಪಾದಕರಿಗೆ ಉಪಯುಕ್ತವಾದ ಅನೇಕಾನೇಕ ನೂತನ ವಿಷಯಗಳ ಶಬ್ದ ಸಂಗ್ರಹವನ್ನು ಕೊನೆಯಲ್ಲಿ ಸೇರಿಸಲಾಗಿದೆ.

ಪ್ರತಿಯೊಂದು ಹಿಂದೀ ಶಬ್ದದ ಕೇವಲ ಕನ್ನಡ ಅರ್ಥವಲ್ಲದೆ ಹಿಂದೀ ಅರ್ಥವನ್ನೂ ಜೋಡಿಸಿರುವುದೇ ಈ "ರತ್ನಕೋಶ" ದ ಹೆಚ್ಚಿನ ಆದರ್ಶ! ಎರಡೂ ಭಾಷೆಗಳ ಶಬ್ದ-ಸಂಪತ್ತಿಯನ್ನು ಬೆಳೆಸಲು ಇದೊಂದೇ ತಕ್ಕ ಸಾಧನ !!

ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೊ, ಧಾರವಾಡ.

ಚಲಚ್ಚಿತ್ರ ಸಿಂಹಾವಲೋಕನ

೧೯೪೯-೫೦ ರ ಚಿತ್ರಪ್ರಪಂಚದ ಒಂದು ವಿಮರ್ಶೆ

ಬರೆದವರು : 'ಅಚ್ಯುತ' ಧಾರವಾಡ

ಭಾರತೀಯ ಚಲಚ್ಚಿತ್ರ ರಂಗದಲ್ಲಿ ಪ್ರತಿ ವರ್ಷ ಸುಮಾರು ೨೫೦ ಚಿತ್ರಗಳು ತಯಾರಾಗಿ ಪ್ರದರ್ಶನಕ್ಕೆ ಬರುತ್ತಿವೆಯೆಂದು ಅಂದಾಜಿದೆ. ಈ ವರ್ಷವೂ ಸಾಧಾರಣವಾಗಿ ಇಷ್ಟೇ ಚಿತ್ರಗಳು ತಯಾರಾಗಿದ್ದು ಅವುಗಳಲ್ಲಿ ಹಿಂದೀ ಚಿತ್ರಗಳ ಸಂಖ್ಯೆ ಸುಮಾರು ೧೫೦ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಿರಬಹುದು. ಹಿಂದೀ ಭಾಷೆಯ ನಂತರ ತಮಿಳು, ತೆಲುಗು, ಬಂಗಾಲಿ, ಮರಾಠಿ, ಗುಜರಾತಿ ಭಾಷೆಗಳಲ್ಲಿ ಹೆಚ್ಚಾಗಿ ಚಿತ್ರಗಳು ತಯಾರಾಗುತ್ತಿವೆ. ಕನ್ನಡದಲ್ಲಿಯಾದರೂ ಚಲಚ್ಚಿತ್ರಗಳು ತಯಾರಾಗುತ್ತಿವೆ. ಆದರೆ ಅವುಗಳ ಸಂಖ್ಯೆ ತೀರ ಕಡಿಮೆಯಾಗಿರುವದು. ವರ್ಷದಲ್ಲಿ ೪-೫ ಚಿತ್ರಗಳು ತಯಾರಾದರೆ ಅತಿ ಹೆಚ್ಚೆಂದು ಹೇಳಬಹುದು.

ಅಧಿಕ ಸಂಖ್ಯೆಯಲ್ಲಿ ಹಿಂದಿ ಚಿತ್ರಗಳು ತಯಾರಾಗುತ್ತಿದ್ದರೂ ದಿಗ್ದರ್ಶನ, ಪಾತ್ರವರ್ಗ ಕಥಾವಸ್ತು, ತಂತ್ರ ಇವೆಲ್ಲವುಗಳಲ್ಲಿ ಸಮರ್ಪಕವೆನಿಸುವ ಚಿತ್ರಗಳ ಸಂಖ್ಯೆ ಬಹಳ ಕಡಿಮೆಯಿದೆ. ಆದರೆ ಸಾಧಾರಣವಾಗಿ ಈ ಒಂದೊಂದು ಗುಣವನ್ನೊಳಗೊಂಡ ಕೆಲ ಉತ್ತಮ ಚಿತ್ರಗಳು ಈ ವರುಷದಲ್ಲಿ ಪ್ರದರ್ಶನಕ್ಕೆ ಬಂದಿವೆ. ಅದರಲ್ಲಿಯೂ ಮನೋರಂಜಕ ಚಿತ್ರಗಳೇ ಹೆಚ್ಚಾಗಿರುವವು. ಈ ವರುಷದ ಒಂದು ವೈಶಿಷ್ಟ್ಯವೆಂದರೆ ಕೆಲ ಉತ್ತಮ ಪೌರಾಣಿಕ ಚಿತ್ರಗಳು ತಯಾರಾಗಿರುವದು. ನರಸಿಂಹ ಅವತಾರ, ಹರ ಹರ ಮಹಾದೇವ, ಮಾಯಾ ಬಾಜಾರ, ಅಲಕ ನಿರಂಜನ, ಭೀಷ್ಮ ಪ್ರತಿಜ್ಞಾ, ಗಣೇಶ ಮಹಿಮಾ ಈ ಮೊದಲಾದ ಚಿತ್ರಗಳು ಪಾತ್ರವರ್ಗ, ಅಭಿನಯ ಹಾಗೂ ದಿಗ್ದರ್ಶನಗಳ ದೃಷ್ಟಿಯಿಂದ ಉತ್ತಮವಾದ ಚಿತ್ರಗಳೆಂದು ಹೇಳಲಾಗುತ್ತದೆ.

ಕಥಾವಸ್ತುವಿನ ದೃಷ್ಟಿಯಿಂದ ಫಿಲ್ಮಿಸ್ತಾನದವರ 'ಸಮಾಧಿ' ಹಿಂದುಸ್ತಾನ ಚಿತ್ರದವರ 'ಹಮರಾ ಘರ' ರಾಜಕಮಲ ಚಿತ್ರಮಂದಿರದವರ 'ದಹೇಜ' ಶಾಂತಿಲೋಕ ಚಿತ್ರದವರ 'ಗೋಪೀನಾಥ' ನ್ಯೂ ಥಿಯೇಟರ್ಸದವರ 'ಪಹಲಾ ಆದಮಿ' ಮಿನರ್ವಾ ಮುವಿಟೋನದವರ 'ಶೀಷಮಹಲ' ಕುಲದೀಪ ಪಿಕ್ಚರ್ಸ ಲಿ. ಅವರ 'ಆಧಿ ರಾತ' ನವಕೇತನದವರ 'ಅಫಸರ' ರಾಜಕೀರ್ತಿಯವರ 'ಜೀತ' ಈ ಚಿತ್ರಗಳು ಉತ್ತಮವಾದವುಗಳೆಂದು ಕಂಡುಬಂದಿದೆ.

ಇದಲ್ಲದೇ ಗರೀಬಿ, ಬೇಕಸೂರ, ಪುತಳಿ, ರಾಜಮುಕುಟ, ಪಾರಸ ಈ ಚಿತ್ರಗಳಾದರೂ ಉತ್ತಮವಾದವುಗಳಾಗಿರುವವು. ಆದರೆ ಇವೆಲ್ಲವುಗಳೂ ದಿಗ್ದರ್ಶನ, ಅಭಿನಯ, ಹಾಗೂ ತಂತ್ರಗಳ ದೃಷ್ಟಿಯಿಂದ ಸಮರ್ಪಕವಾದವುಗಳೆಂದು ಹೇಳಬರುವದಿಲ್ಲ.

"ಹಮಾರಾ ಘರ" ಉತ್ತಮ ಅಭಿನಯದಿಂದ ಯುಕ್ತವಾಗಿದ್ದರೂ ಅಸಮರ್ಪಕ ದಿಗ್ದರ್ಶನದಿಂದ ಚಿತ್ರವು ನಿರ್ಜೀವವಾಗಿದೆ. ಅದು ಎಷ್ಟು ಪರಿಣಾಮಕಾರಿಯಾಗಬೇಕಿತ್ತೋ ಅಷ್ಟಿರುವದಿಲ್ಲ. ನವಕೇತನದವರ 'ಅಫಸರ' ಲಂಚಗುಳಿತನದ ಒಂದು ಸುಂದರ ಚಿತ್ರವಾಗಿದ್ದರೂ ಸ್ಪಷ್ಟನಿರೂಪಣೆಯಿಲ್ಲದ್ದರಿಂದ, ತಂತ್ರದಲ್ಲಿ ನಾವೀನ್ಯವಿಲ್ಲದಿರುವದರಿಂದ, ಪ್ರೇಮದ ವಿರೂಪದರ್ಶನದ ಚಿತ್ರಣದಿಂದ ಅಯಶಸ್ವಿಯಾಗಿದೆ. ಗ್ರಾಮಸುಧಾರಣೆಯ ಚಿತ್ರಣವೀಯುವ 'ರಾಜಮುಕುಟ' ಮತ್ತು ಜೀತ ಚಿತ್ರಗಳು ಕಥೆಯ ಉದ್ದೇಶಕ್ಕೆ ಮಹತ್ವ ಕೊಡದೆ ಪ್ರೇಮಿಗಳ ಪ್ರೇಮಾಲಾಪಕ್ಕೆ ಮಹತ್ವವಿತ್ತಿರುವದರಿಂದ ಪರಿಣಾಮಕಾರಿಯಾಗುವದಿಲ್ಲ. ಆಜಾದಹಿಂದ ಸೈನಿಕರ ಕಥಾವಸ್ತುವನ್ನು ಒಳಗೊಂಡ 'ಸಮಾಧಿ' ಈ ಎಲ್ಲ ಚಿತ್ರಗಳಿಗಿಂತ ಶ್ರೇಷ್ಠವಾದುದೆಂದು ಹೇಳಬಹುದು. ದಿಗ್ದರ್ಶನ, ಅಭಿನಯ, ಪಾತ್ರವರ್ಗ ಸಮರ್ಪಕ



ಫಿಲ್ಮಿಸ್ತಾನದವರಿಗಾಗಿ ಶ್ರೀ ಎಸ್. ಮುಕರ್ಜಿಯವರು [illegible] "ಸಮಾಧಿ"ಯಲ್ಲಿ [illegible]

ವಾಗಿದೆ. ಅದನ್ನು ಇನ್ನೂ ಉತ್ತಮವಾದ ಚಿತ್ರವನ್ನಾಗಿ ಮಾಡಲು ನಿರ್ಮಾಪಕರಿಗೆ ಸಾಧ್ಯವಿತ್ತು. ನ್ಯೂಥಿಯೇಟರ್ಸದವರ 'ಪಹಲಾ ಆದಮಿ' ಇದೇ ಬಗೆಯ ಕಥಾವಸ್ತುವಿನಿಂದ ಕೂಡಿದ್ದು "ಸಮಾಧಿ"ಗಿಂತ ಹೆಚ್ಚು ಪರಿಣಾಮಕಾರಿಯಾಗಿ ಚಿತ್ರಿತವಾಗಿದೆಯೆಂದು ಹೇಳಲಾಗುತ್ತಿದೆ. ಕುಲದೀಪ ಪಿಕ್ಚರ್ಸದವರ "ಆಧಿ ರಾತ" ಮದ್ಯಪಾನ ಪ್ರತಿಬಂಧಕ್ಕನುಕೂಲವಾದ ಚಿತ್ರಣವನ್ನೊಳಗೊಂಡಿದ್ದು ಉತ್ತಮ ಪಾತ್ರವರ್ಗದಿಂದ ಕೂಡಿದ್ದಾಗಿದೆ. ರಾಜಕಮಲದವರ "ದಹೇಜ" ವರದಕ್ಷಿಣೆಯ ಪರಿಣಾಮವಾಗಿ 'ವಧು' ಅನುಭವಿಸಬೇಕಾದ ಸಂಕಷ್ಟಗಳನ್ನು ನಿರೂಪಿಸುವ ಕಥಾವಸ್ತುವನ್ನೊಳಗೊಂಡಿದ್ದು ಅಭಿನಯ ದೃಷ್ಟಿಯಿಂದ ಸಪ್ಪೆಯಾಗಿದೆಯೆಂದು ಹೇಳಲಾಗುತ್ತಿದೆ. ಪೃಥ್ವಿರಾಜನ ಅಭಿನಯದಿಂದ ಮಾತ್ರ ಈ ಚಿತ್ರ ಜೀವಧಾರಣ ಮಾಡಿದೆ. "ಅಂದಾಜ" ಚಿತ್ರವು ತಂತ್ರಕಲೆಯಿಂದ ಉತ್ತಮವಾಗಿದ್ದು ಕಥಾವಸ್ತುವೂ ಉತ್ತಮವಾಗಿದೆ. ರಾಜಕಪೂರನ ಮಕ್ಕಳಾಟದ ಅಭಿನಯವಿಲ್ಲದಿದ್ದರೆ ಅದು ಶ್ರೇಷ್ಠವಾದ ಚಿತ್ರವಾಗಬಹುದಿತ್ತು.


ಕಥಾವಸ್ತುವು ಮುಖ್ಯವಾಗಿಲ್ಲದೇ ಕೇವಲ ಮನೋರಂಜನೆಗಾಗಿ ತಯಾರಿಸಿದ್ದರೂ ಕೆಲ ಚಿತ್ರಗಳು ಉತ್ತಮವಾಗಿರುವವು. ಫೇಮಸ್ ಪಿಕ್ಚರ್ಸದವರ "ಹಮಾರಿ ಮಂಝಿಲ" ಹಿಂದುಸ್ತಾನ ಚಿತ್ರದವರ "ರಿಮ್‌ಝಿಮ್" ಶೋರಿ ಫಿಲ್ಮದವರ "ಏಕಥೀ ಲಡಕಿ" ಪಾಂಚೋಲಿಯವರ "ಮೀನಾಬಝಾರ" ಫಿಲ್ಮಿಸ್ತಾನದವರ "ಶಬನಮ್" ಇವು ಯಾವದೇ ಉದ್ದೇಶವಿಟ್ಟುಕೊಳ್ಳದೇ ಮನೋರಂಜನೆಯನ್ನು ಮುಖ್ಯವಾಗಿಟ್ಟುಕೊಂಡಿರುವ ಚಿತ್ರಗಳು. "ಚಾರ ದಿನ" ಮನೋರಂಜಕ ಚಿತ್ರವಾಗಿದ್ದರೂ ಕಥಾವಸ್ತುವು ಒಂದುಉದ್ದೇಶವನ್ನಿಟ್ಟುಕೊಂಡದ್ದಾಗಿದೆ. ಆದರೆ ಕಥೆಯ ಉದ್ದೇಶವು ಪ್ರೇಮಿಗಳ ಪ್ರೇಮಾಲಾಪದಲ್ಲಿ ಮರೆಯಾಗಿರುವದರಿಂದ, ತಂತ್ರದ ಲೋಪದೋಷಗಳಿಂದ, ಸಮರ್ಪಕವಾಗಿರುವದಿಲ್ಲ. ಜೆಮಿನಿಯವರ 'ನಿಶಾನ' ಕೂಡ ಒಂದು ಉತ್ತಮವಾದ ಮನೋರಂಜಕ ಚಿತ್ರ. ಈ ಚಿತ್ರದ ಸಂಗೀತ, ದಿಗ್ದರ್ಶನ, ನೃತ್ಯಗಳಲ್ಲಿ ನವೀನತೆಯನ್ನು ಕಾಣಬಹುದಾದರೂ ಕಥೆಯಲ್ಲಿಯ ಲೋಪದೋಷಗಳಿಂದ ಅದು ಕೇವಲ ಮನೋರಂಜಕ ಚಿತ್ರವಾಗಿಯೇ ಉಳಿದಿದೆ.

ಇನ್ನು ಈ ಎರಡೂ ವರ್ಗಕ್ಕೆ ಸೇರದ ಕೆಲ ಚಿತ್ರಗಳೂ ಇವೆ. ಅವು ಉತ್ತಮ ಕಥಾವಸ್ತುವನ್ನೊಳಗೊಂಡಿರದಿದ್ದರೂ ಸುಖ–ದುಃಖಗಳ ಮಿಶ್ರಣದಿಂದ ಒಂದು ಹೊಸ ನೋಟವನ್ನೊದಗಿಸುತ್ತವೆ. ಆರ್. ಕೆ. ಫಿಲ್ಮ್ಸದವರ 'ಬರಸಾತ' ಈ ಜಾತಿಗೆ ಸೇರಿದ ಚಿತ್ರವಾಗಿದೆ. ಈ ಚಿತ್ರದಲ್ಲಿ ಕಥೆಯು ಮುಖ್ಯವಾಗಿರುವದಿಲ್ಲ. ಆದರೆ ದಿಗ್ದರ್ಶನ ಉತ್ತಮವಿದೆಯೆಂದು ತಿಳಿಯುತ್ತಿದೆ. ಎಂ. ಟಿ. ಫಿಲ್ಮ್ಸದವರ 'ನಮೂನಾ', ಫೇಮಸ್ ಪಿಕ್ಚರ್ಸದವರ 'ಕಮಲಕೆ ಫೂಲ', ಮಧುಬಾನ ಮೂವಿ ಮೇಕರ್ಸದವರ 'ಬೇಕಸೂರ', ಫಿಲ್ಮಕಾರಲಿ. ರವರ 'ಛೋಟಿ ಭಾಬಿ', ರಣಜಿತದವರ 'ಜೋಗನ್' ಈ ಚಿತ್ರಗಳಾದರೂ ಈ ಜಾತಿಗೆ ಸೇರಿದವುಗಳಾಗಿವೆ. ಇದಲ್ಲದೆ ಹಲ್ದಿಯಾನಂದಾ ಪ್ರೊಡಕ್ಶನದ 'ಸಿಂಗಾರ', ಇಂಡಿಯಾ ಫಿಲ್ಮ್ಸದವರು ತಯಾರಿಸಿದ 'ಅರಜು', ನ್ಯೂಥಿಯೇಟರ್ಸದವರ 'ಮಂಜೂರ' ಈ ಚಿತ್ರಗಳಾದರೂ ಸಾಧಾರಣವಾಗಿ ಉತ್ತಮವಾದ ಚಿತ್ರಗಳು.

ಆ್ಯಂಬಿಶಸ್ ಪಿಕ್ಚರ್ಸದವರ 'ಬವರೆ ನೈನಾ', ಹಿಂದುಸ್ತಾನ ಚಿತ್ರದವರ 'ಬಿಜಲಿ', ನ್ಯೂಥಿಯೇಟರ್ಸದವರ 'ಸುಧಾರ ಪ್ರೇಮ' ಇದೀಗ ಪ್ರದರ್ಶನಕ್ಕೆ ಬಂದಿರುವವು. ಈ ಚಿತ್ರಗಳ ದಿಗ್ದರ್ಶಕರು ಉತ್ತಮ ದಿಗ್ದರ್ಶಕರಿರುವದರಿಂದ ಚಿತ್ರಗಳು ಉತ್ತಮವಾಗಿರಬೇಕೆಂದು ಹೇಳಬಹುದು. ರಾಷ್ಟ್ರೀಯ ಅಂದೋಲನದ ಚಿತ್ರಣ ಕೊಡುವ 'ಅವರ ಸ್ಟಗಲ್' 'ಹಿಂದುಸ್ತಾನ ಹಮಾರಾ' ಚಿತ್ರಗಳು ಬೇಗನೆ ಪ್ರದರ್ಶನಕ್ಕೆ ಬರಲಿರುವವು. 'ಅಜಿತ'ವೊಂದೇ ಈ ವರ್ಷದಲ್ಲಿಯ ವರ್ಣಚಿತ್ರವಾಗಿದೆ.

ಬರಸಾತ ಹಾಗೂ ಹರಹರ ಮಹಾದೇವ ಚಿತ್ರಗಳು ಹೆಚ್ಚು ಹಣಗಳಿಸತೊಡಗಿವೆ. ನಿಶಾನ ಸಮಾಧಿ, ಶೀಷಮಹಲ, ಇವು ಸಾಧಾರಣ ಹಣಗಳಿಸುತ್ತಿರುವ ಚಿತ್ರಗಳಾಗಿವೆ. ಹಮಾರಾ ಘ' ಕನೀಜ, ಪಾರಸ, ಏಕಥೀ ಲಡಕಿ, ದಿ ಜೋಗನ, ಸಬಕ, ಪತಂಗ ಇವಾದರೂ ಮಟ್ಟಿಗೆ ಗಳಿಕೆಯ ಚಿತ್ರಗಳಾಗಿವೆ. ಆದರೆ ಉತ್ತಮ ಅಂಶಗಳಿಂದ ಕೂಡಿದ್ದರೂ ಅರಜೂ, ಖಿಲಾಡಿ, ನಜಾರೆ, ಗೋಪಿನಾಥ, ಅಜಿತ, ಕಮಲಕೆ ಫೂಲ, ಗರೀಬಿ, ನಾಟಕ, ರಿಮ್‌ಝಿಮ್, ನಮೂನಾ ಈ ಚಿತ್ರಗಳಿಗೆ ಹಣವೇ ದೊರೆಯುತ್ತಿರುವದಿಲ್ಲ. ಭೇಡಿ ಬಂಗ್ಲಾ, ದಹೇಜ, ರಾಜಮುಕುಟ, ಗಣೇಶಮಹಿಮಾ, ಮಾಯಾ ಬಝಾರ, ಅಲಕ ನಿರಂಜನ ಚಿತ್ರಗಳಲ್ಲಿಯ ಗುಣದೋಷಗಳೇನೆ ಇರಲಿ ಕೆಲಮ' ಗಾದರೂ ಹಣ ದೊರೆಯುತ್ತಿರುವದು.

ನಮ್ಮಲ್ಲಿ ಚಿತ್ರ ತಯಾರಿಕೆಯ ವೆಚ್ಚವಾದರೂ ಈಗ ಮಿತಿಮೀರಿ ಬೆಳೆಯುತ್ತಿದೆ. ಸಾಧಾರಣವಾಗಿ ಒಂದು ಚಿತ್ರವು ತಯಾರಾಗಲು ೧॥ ಲಕ್ಷ ರೂ.ಗಳ ವರೆಗೆ ವೆಚ್ಚ ಮಾಡುತ್ತಿರುವದುಂಟು. ಇಷ್ಟು ಹಣ ವೆಚ್ಚಮಾಡಿ ತಯಾರಿಸಿದರು ಸಹ ನಮ್ಮ ಚಲಚ್ಚಿತ್ರಗಳು ಪ್ರಗತಿಪರವಾಗಿರುವದಿಲ್ಲ. ಇದಕ್ಕೆ ಅನೇಕ ಕಾರಣಗಳುಂಟು. ಆದರೆ ಸರಿಯಾದ ಪಾತ್ರವರ್ಗವಿಲ್ಲದಿರುವದು, ಹೊಸ ತಾರಾಗಣವು ಬರದಿರುವದು, ಚಿತ್ರಪ್ರಪಂಚದಲ್ಲಿಯ ನೈತಿಕ ಅಧಃಪತನ, ಇದ್ದ ಕೆಲ ತಾರೆಯರು ಬೇಸರಬರುವಷ್ಟು ಚಿತ್ರಗಳಲ್ಲಿ ಅಭಿನಯಿಸುವದು, ಧನಸಹಾಯ ನೀಡುವವರು ಕೇವಲ ಲಾಭದ ದೃಷ್ಟಿಯಿಂದ ಧನಸಹಾಯ ನೀಡುವದು, ಅನನುಭವಿಗಳೂ ಅಸಮರ್ಥರೂ ದಿಗ್ದರ್ಶಕರಾಗುವದು ಇವು ಮುಖ್ಯವಾದ ಕಾರಣಗಳು. ಸು ರ ಯ್ಯಾ ಅಭಿನಯಿಸಿದ ಏಳು ಚಿತ್ರಗಳು ಮುಂಬಯಿಯಲ್ಲಿ ಏಕಕಾಲಕ್ಕೆ ಪ್ರದರ್ಶನಕ್ಕೆ ಬಂದಿದ್ದವಂತೆ. ಇದ್ದರಿಂದ ಪ್ರೇಕ್ಷಕರಿಗೆ ಒಂದು ಬಗೆಯ ಜುಗುಪ್ಸೆಯುಂಟಾಗಲು ಕಾರಣವಾಗುವದು. ಇತ್ತೀಚೆಗಂತೂ ಒಂದು ಚಿತ್ರದಲ್ಲಿ ಯಶಸ್ವಿಯಾಗಿ ಅಭಿನಯಿಸಿದ ತಾರೆಗೆ ಹಲವಾರು ಚಿತ್ರನಿರ್ಮಾಪಕರು ಮುಗಿಬಿದ್ದು ತಮ್ಮ ಚಿತ್ರಗಳಲ್ಲಿ ಅಭಿನಯಿಸುವ ಕರಾರು ಮಾಡಿಕೊಳ್ಳುತ್ತಿರುವರು. ತಮ್ಮ ಕಥಾವಸ್ತುವಿಗೆ ಮತ್ತು ಅದರಲ್ಲಿಯ ನಾಯಕಿಯ ಅಥವಾ ನಾಯಕನ ಪಾತ್ರಕ್ಕೆ ಆ ನಟನಟಿಯರು ಯೋಗ್ಯವಾಗಬಹುವೆ ಎಂಬುದನ್ನು ಸಹ ನಮ್ಮ ಚಿತ್ರ ನಿರ್ಮಾಪಕರು ವಿಚಾರಿಸುವ




ಹಿಂದುಸ್ತಾನ ಚಿತ್ರದವರ "ಬಿಜ್ಲಿ"ಯಲ್ಲಿ ರಮೇಶಗುಪ್ತ ಮತ್ತು ರೆಹಾನಾ

ಗೋಜಿಗೆ ಹೋಗುವದಿಲ್ಲ. ಕಲಕತ್ತೆಯ ನ್ಯೂಥಿಯೇಟರ್ಸದವರು ಮಾತ್ರ ಈ ಪದ್ಧತಿಯನ್ನು ಅನುಸರಿಸದೆ ಸರಿಯಾದ ನಟರನ್ನೂ ಆದಷ್ಟು ಮಟ್ಟಿಗೆ ಹೊಸ ತಾರೆಯರನ್ನೂ ಆಯ್ದುಕೊಳ್ಳುವರು. ಅವರ ಚಿತ್ರಗಳ ಯಶಸ್ಸಿಗೆ ಇದೇ ಬಹುಮಟ್ಟಿಗೆ ಕಾರಣವಾಗಿದೆ. ಇದಲ್ಲದೆ ನ್ಯೂಥಿಯೇಟರ್ಸಿನ ದಿಗ್ದರ್ಶಕರು ನುರಿತವರಿರುವರು. ಅಲ್ಲಿ ಸಹಾಯಕ ದಿಗ್ದರ್ಶಕರಾಗಿ ತರಬೇತಿಹೊಂದಿದ ಅನೇಕರು ಇಂದು ಸ್ವತಂತ್ರವಾಗಿ ದಿಗ್ದರ್ಶನ ವೃತ್ತಿಯನ್ನು ಕೈಕೊಳ್ಳಲು ಸಮರ್ಥರಾಗಿರುವರು.

ವಿದೇಶೀ (ಮತ್ತು ಆಗಾಗ್ಗೆ ಸ್ವದೇಶಿ ಜನಪ್ರಿಯ) ಚಿತ್ರಗಳ ಕತೆಗಳ ಚೌರ್ಯವೂ ನಮ್ಮ ಚಲಚ್ಚಿತ್ರಗಳು ಪ್ರಗತಿಗೊಳ್ಳದಿರಲು ಕಾರಣವಾಗಿದೆ. ಪಗರಿ, ನಿಶಾನ, ಪಾರಸ ಈ ಚಿತ್ರಗಳನ್ನು ಇಲ್ಲಿ ನಿದರ್ಶನವಾಗಿ ಕೊಡಬಹುದು. ವಿದೇಶಿ ಕಥಾವಸ್ತುಗಳು ನಮ್ಮಲ್ಲಿಯ ಜೀವನವನ್ನು ಚಿತ್ರಿಸುವದು ಸಾಧ್ಯವಿರುವದೆ? ನಮ್ಮ ಸಂಸ್ಕೃತಿ, ನಮ್ಮ ಸಾಮಾಜಿಕ ರೀತಿನೀತಿಗಳು ಈ ಬಗೆಯ ಚಿತ್ರಗಳಲ್ಲಿ ಕಾಣಬರುವದಿಲ್ಲ. ಬದಲಾಗಿ ನಮ್ಮ ಸಮಾಜದಲ್ಲಿಎಲ್ಲಿಯೂ ಕಾಣಬರದ ವಿಚಿತ್ರ ಪ್ರೇಮಪದ್ಧತಿಯನ್ನು ಕಾಣುತ್ತೇವೆ. ನ್ಯೂಥಿಯೇಟರ್ಸಿನವರಂತೆ ಸುಪ್ರಸಿದ್ಧ ಬರೆಹಗಾರರ ಕಥಾವಸ್ತುಗಳನ್ನು ಆಯ್ದುಕೊಂಡರೆ ಈ ತೊಂದರೆಯೇ ತಪ್ಪುವದು. ಚೋರತನದಿಂದ ತಾರಾಗಣದಲ್ಲಿಯ ಉತ್ಸಾಹ ಪ್ರೇರಣೆಗಳು ನಾಶವಾಗುವ ಭೀತಿಯಿರುವದು.

ತಂತ್ರದೃಷ್ಟಿಯಿಂದ ಈ ಸಲದ ಚಿತ್ರಗಳಲ್ಲಿ 'ಅಂದಾಜ' ಚಿತ್ರವೇ ಶ್ರೇಷ್ಠವಾದದ್ದು ಶಾಂತಾರಾಮರ 'ದಹೇಜ' ಚಿತ್ರವು ಅಭಿನಯದ ದೃಷ್ಟಿಯಿಂದ ಸಪ್ಪೆಯಾಗಿದ್ದರೂ ತಂತ್ರದ ದೃಷ್ಟಿಯಿಂದ ಉತ್ತಮ ಚಿತ್ರವಾಗಿದೆಯೆಂದೂ ಅಭಿನಯವು ಉತ್ತಮವಾಗಿದ್ದರೆ ಅದು ಸಹ ಶ್ರೇಷ್ಠ ಚಿತ್ರವಾಗಬಹುದಿತ್ತೆಂದೂ ಹೇಳಲಾಗುತ್ತಿದೆ. ಮುಂಬಯಿಯ ವಾರ ಪತ್ರಿಕೆಯೊಂದು ನ್ಯೂಥಿಯೇಟರ್ಸದವರ 'ಪಹಿಲಾ ಆದಮಿ' ಚಿತ್ರವು ಸರ್ವ ದೃಷ್ಟಿಯಿಂದಲೂ ಈ ವರುಷದಲ್ಲಿ ಪ್ರಥಮ ಸ್ಥಾನದ ಚಿತ್ರವಾಗಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಹೀಗೆ ನಮ್ಮಲ್ಲಿಯ ಅನೇಕ ಚಲಚ್ಚಿತ್ರಗಳು ತಂತ್ರದ ಹಿಂದುಳಿಯುತ್ತಿರುವದು ಚಿತ್ರಪ್ರಪಂಚದ ಪ್ರಗತಿಯ ದೃಷ್ಟಿಯಿಂದ ಉತ್ತಮವಾದ ಲಕ್ಷಣವಲ್ಲ. ಚಿಕ್ಕಪುಟ್ಟ ಲೋಪದೋಷಗಳಿಗೂ ನಮ್ಮ ದಿಗ್ದರ್ಶಕರು ಲಕ್ಷ್ಯ ಹಾಕುತ್ತಿರುವದಿಲ್ಲ. ಅಳುವಾಗ ಒಂದೇ ಕಣ್ಣಿನಿಂದ ನೀರು ಬರುವದು; ಸುಖದುಃಖಗಳ ಸಮಯದಲ್ಲಿ ಮುಖಭಂಗಿಯಲ್ಲಿ ವ್ಯತ್ಯಾಸವಾಗದಿರುವದು. 'ಬನಜಾರೆ' ನಾಯಕನ ಮದುವೆಯು ಅರಣ್ಯದಲ್ಲಿ ನಡೆದಾಗ ತೋರಿಸುವ ನೃತ್ಯವನ್ನು ನೋಡಲು ನಾಗರಿಕರೂ ನೆರೆದಿದ್ದರೆಂದು ತೋರಿಸುವದು; ಹೀಗೆಲ್ಲ ಲೋಪದೋಷಗಳಿಗೆ ಎಡೆ ಕೊಡುತ್ತಿರುವಾಗ ತಂತ್ರದಲ್ಲಿ ಪ್ರಗತಿಯಾಗುವದಾದರೂ ಎಂತು?



"ಕುಲದೀಪ" ಚಿತ್ರದವರ "ಆಧಿರಾತ" ಚಿತ್ರದಲ್ಲಿ ಅಶೋಕ ಕುಮಾರ ಸಗೀರರು

ಈ ವರ್ಷದ ಚಿತ್ರಗಳಲ್ಲಿ ಅರ್ಧಕ್ಕಿಂತ ಹೆಚ್ಚು ಚಿತ್ರಗಳು ಛಾಯಾಗ್ರಹಣ ಮತ್ತು ಧ್ವನಿಯ ದೃಷ್ಟಿಯಿಂದ ಸುಧಾರಣೆಗೊಂಡಿರುವವು. ಆದರೆ ನೃತ್ಯ ಮತ್ತು ಸಂಗೀತಗಳು ಮಾತ್ರ ಯಥಾಪ್ರಕಾರ ಹಾಗೆಯೇ ಇವೆ. ಶಾಸ್ತ್ರೀಯ ನೃತ್ಯಕ್ಕಂತೂ ಚಲಚ್ಚಿತ್ರಗಳಲ್ಲಿ ಸ್ಥಾನವೇ ಇಲ್ಲದಾಗಿದೆ. ಸಂಗೀತದ ಹಣೆಬರಹವೂ ಅಷ್ಟೇ. ಇಷ್ಟೆ ಅಲ್ಲ, ಈಗೀಗ ಗೀತಗಳ ಸಂಖ್ಯೆ ಸಹ ಹೆಚ್ಚತೊಡಗಿದೆ. ಒಂದು ಚಲಚ್ಚಿತ್ರದಲ್ಲಿ ೧೫—೧೬ ಗೀತಗಳನ್ನು ಸೇರಿಸುವದೆಂದರೆ ಹೇಗೆ ಸರಿಯಾದೀತು? ಅಲ್ಲದೆ ಈ ಗೀತಗಳು ಅನವಶ್ಯಕವಾಗಿ ಸೇರ್ಪಡೆಯಾಗಿರುತ್ತವೆ. ನಮ್ಮ ಅನೇಕ ತಾರೆಯರಿಗೆ ಸುಶ್ರಾವ್ಯವಾಗಿ ಹಾಡಲು ಬಾರದ್ದರಿಂದ ಅವರಿಗೆ ಹಿನ್ನೆಲೆಯ ಸಂಗೀತವನ್ನೊದಗಿಸಲಾಗುತ್ತಿದೆ. ಇದರಿಂದ ಗೀತ ಹಾಡುವಾಗ ಒಂದು ಧ್ವನಿ, ಮಾತನಾಡುವಾಗ ಒಂದು ಧ್ವನಿ ಪ್ರತ್ಯೇಕವಾಗಿರುವದು ಕಂಡು ಬಂದು ತಾರೆಯರ ಪ್ರತಿಷ್ಠೆಗೆ ಒಂದು ಬಗೆಯ ಕುಂದುಂಟಾಗುವದು.

ಅಭಿನಯದ ದೃಷ್ಟಿಯಿಂದ ಕೆಲ ತಾರೆಯರು ಪ್ರಗತಿಗೊಂಡಿದ್ದಾರೆ. ಇದಲ್ಲದೆ ಕೆಲ ಹಳೆಯ ತಾರೆಯರು ಚಿತ್ರರಂಗದಲ್ಲಿ ಪುನಃ ಪ್ರವೇಶಿಸಿದ್ದಾರೆ. ಬೇಗಮ ಪಾರಾ, ನಲಿನಿ ಜಯವಂತ ಮೊದಲಾದವರು ಚಿತ್ರರಂಗಕ್ಕೆ ಪುನಃ ಪ್ರವೇ



ಹಿಂದುಸ್ತಾನ ಚಿತ್ರದವರ "ರಿಮ್ ಝಿಮ್" ಚಿತ್ರದಲ್ಲಿ ಕಿಶೋರಶಾಹು ರಮೋಲರು

ಶಿಸಿದ್ದು ಚಿತ್ರಪ್ರಪಂಚದ ದೃಷ್ಟಿಯಿಂದ ಪ್ರಗತಿಯ ಲಕ್ಷಣವಾಗಿದೆ. ಹೊಸ ತಾರೆಯರು ಕೆಲವರು ಪ್ರವೇಶಿಸಿದ್ದಾರೆ. ಬರಸಾತದಲ್ಲಿಯ "ನಿಮ್ಮಿ"ಯ ಅಭಿನಯ ಉತ್ತಮವಾಗಿದೆಯಂತೆ. ಅವಳು ಚಿತ್ರರಂಗದಲ್ಲಿ ಇದೇ ಮೊದಲನೆಯದಾಗಿ ಕಾಲಿಟ್ಟಿದ್ದರೂ ಬರಸಾತ ಚಿತ್ರದ ನಂತರ ಅನೇಕ ಚಿತ್ರಗಳಲ್ಲಿ ಅಭಿನಯಿಸಲು ಅವಳಿಗೆ ಈಗಾಗಲೇ ಕೇಳಲಾಗುತ್ತಿದೆ. 'ಬೇಕಸೂರ'ದಲ್ಲಿ ಅಭಿನಯಿಸಿದ ಅಜಿತ ಸಹ ಈ ವರ್ಷದಲ್ಲಿಯ ಹೊಸ ತಾರೆ. "ಅವರ ಸ್ವಗಲ" ಚಿತ್ರದಲ್ಲಿ ಎಲ್ಲರೂ ಹೊಸ ತಾರೆಯರಿರುವರಂತೆ. ಅದು ಭರದಿಂದ ತಯಾರಾಗುತ್ತಿದ್ದು ಬೇಗನೆ ಪ್ರದರ್ಶನಕ್ಕೆ ಬರಲಿದೆ. ಕೇದಾರ ಶರ್ಮರು ದಿಗ್ದರ್ಶಿಸಿದ "ಬವರೆ ನೈನಾ" ಚಿತ್ರದಲ್ಲಿಯೂ ಓರ್ವ ಹೊಸ ತಾರೆ ಅಭಿನಯಿಸಿದ್ದು ವಿಜಯಲಕ್ಷ್ಮಿಯೆಂದು ಅವಳ ಹೆಸರಿರುವದು. ಅವಳು ತನ್ನ ಹೆಸರಿಗೆ ತಕ್ಕಂತೆ ವಿಜಯ ಗಳಿಸಬಹುದೇನೆಂಬುದನ್ನು ಇನ್ನು ನೋಡಬೇಕಾಗಿದೆ.

ಹೊಸ ದಿಗ್ದರ್ಶಕರು ಈ ವರ್ಷದಲ್ಲಿ ಮುಂದೆ ಬಂದಿರುವದಿಲ್ಲ. ಹಳೆಯ ದಿಗ್ದರ್ಶಕರಲ್ಲಿಯೇ ಕೆಲವರು ಹೊಸ ಸಂವಿಧಾನಗಳನ್ನು ನಿಯೋಜಿಸಿ ಚಿತ್ರಪ್ರಪಂಚವು ಪ್ರಗತಿಪರವಾಗುವಂತೆ ಮಾಡುತ್ತಿರುವದು ಸಮಾಧಾನದ ಸಂಗತಿ. "ದೇದರ" ಚಿತ್ರವನ್ನು ದಿಗ್ದರ್ಶಿಸುತ್ತಿರುವ ನಿತಿನಬೋಸ ಅದನ್ನು ಶ್ರೇಷ್ಠ ಚಿತ್ರವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ತಿಳಿದಿದೆ. ಕೇದಾರ ಶರ್ಮರು ಸಹ "ಬವರೆ ನೈನಾ" ಚಿತ್ರವು ಸರ್ವದೃಷ್ಟಿಯಿಂದಲೂ ಯೋಗ್ಯವಾಗುವಂತೆ ದುಡಿದಿದ್ದಾರೆಂದು ಹೇಳಲಾಗುತ್ತಿದೆ.

ಇನ್ನು ಈ ವರ್ಷದಲ್ಲಿ ಪ್ರದರ್ಶನಕ್ಕೆ ಬಂದ ಕನ್ನಡ ಚಿತ್ರಗಳೆಂದರೆ ಭಾರತಿ, ಕಲಾವಿದ, ನಾಗಕನ್ನಿಕಾ ಶಿವಪಾರ್ವತಿ. ಇನ್ನು ಹಲವಾರು ಚಿತ್ರಗಳು ತಯಾರಿಕೆಯಲ್ಲಿವೆಯೆಂದು ತಿಳಿದುಬಂದಿದೆ. ಈ ಹಿಂದೆ ತಯಾರಾದ ಚಿತ್ರಗಳಿಗಿಂತಲೂ ಕೆಳಮಟ್ಟದ ಚಿತ್ರಗಳು ಇವು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕಥೆಯ ದೃಷ್ಟಿಯಿಂದ ಮತ್ತು ಅಭಿನಯದ ದೃಷ್ಟಿಯಿಂದ ಭಾರತಿ ಇದ್ದುದರಲ್ಲಿಯೇ ಉತ್ತಮ ಚಿತ್ರವಾಗಿದೆ. 'ನಾಗಕನ್ನಿಕಾ' ತಮಿಳು ಚಿತ್ರಗಳ ಭಾಗಗಳನ್ನು ಜೋಡಿಸಿಕೊಂಡ ಅಡುಗೂಲಜ್ಜಿ ಕಥೆಯಾಗಿರುವದು. 'ಕಲಾವಿದ' ಚಿತ್ರವು ಹೆಸರಿಗೆ ತಕ್ಕಂತೆ ರಚಿತವಾಗಿಲ್ಲವೆಂದೂ ಎಲ್ಲ ದೃಷ್ಟಿಗಳಿಂದಲೂ ಹಿಂದುಳಿದಿದೆಯೆಂದೂ ತಿಳಿದು ಬಂದಿದೆ. ಈಗ ಕೆಲ ದಿನಗಳಿಂದ ಕೇಳ ಬರುತ್ತಿದ್ದ ಹುರುಪಿನ ಮಾತು ಸಹ ಈಗ ಕನ್ನಡ ಚಿತ್ರರಂಗದ ಬಗ್ಗೆ ಕೇಳದಿರುವದು ವಿಷಾದಕರವಾಗಿದೆ.

ಕೇಂದ್ರ ಸರಕಾರದವರು 'ಚಲಚ್ಚಿತ್ರ ವಿಚಾರಣಾ ಸಮಿತಿ'ಯನ್ನು ನೇಮಿಸಿದ್ದು ಚಲಚ್ಚಿತ್ರ ಪ್ರಪಂಚದಲ್ಲಿಯ ಒಂದು ವಿಶಿಷ್ಟ ಘಟನೆಯಾಗಿರುವದು. ಶ್ರೀ ಎಸ್. ಕೆ. ಪಾಟೀಲರು ಈ ಸಮಿತಿಯ ಅಧ್ಯಕ್ಷರಿದ್ದು ರಾಜಕಮಲ ಚಿತ್ರ ಮಂದಿರದ ಶಾಂತಾರಾಮ, ನ್ಯೂಥಿಯೇಟರ್ಸಿನ ಶ್ರೀ ಸರಕಾರ ಅವರು ಹಾಗೂ ಬೇರೆ ಮೂರು ನಾಲ್ಕು ಜನರು ಈ ಸಮಿತಿಯ ಸದಸ್ಯರಿರುವರು. ಸಮಿತಿಯು ಚಲಚ್ಚಿತ್ರದಲ್ಲಿದ್ದವರ ಸಾಕ್ಷಿಗಳನ್ನು ಈಗಾಗಲೇ ಕೇಳಿಕೊಳ್ಳತೊಡಗಿದ್ದು ಶಿಕ್ಷಣಜ್ಞರ ಸಾಕ್ಷಿಗಳನ್ನೂ ಅದು ಕೇಳಿಕೊಳ್ಳುತ್ತಿರುವದು. ನಮ್ಮ ಚಲಚ್ಚಿತ್ರಗಳು ಪ್ರಗತಿಗೊಳ್ಳುವ ಬಗ್ಗೆ ಈ ಸಮಿತಿಯು ಮಾಡುವ ಸೂಚನೆಗಳು ಸಹಾಯಕವಾಗಬಹುದೆಂದು ಭಾವಿಸಲಾಗಿದೆ.

- ಕನ್ನಡ ಮಕ್ಕಳ ಜ್ಞಾನದ ಅಭಿವೃದ್ಧಿಗಾಗಿ ಸಂಗ್ರಹಿಸಿರಿ -

ಚಿ. ಶ್ರೀ. ಕುಲಕರ್ಣಿ ಕಥೆಯ ಪುಸ್ತಕಗಳು

ಕನ್ನಡ ಮಕ್ಕಳಿಗಾಗಿ ಮುದ್ದು ಕಥೆಗಳು !

೧ ಭಕ್ತ ಧೃವ	೦	೨	೦
೨ ಭಕ್ತ ಪ್ರಲ್ಹಾದ	೦	೨	೦
೩ ಶನಿ ಮಹಾತ್ಮೆ	೦	೨	೦
೪ ಗಜೇಂದ್ರ ಮೋಕ್ಷ	೦	೨	೦
೫ ಮೊದಲನೇ ತರಗತಿಯ ಕಥೆ	೦	೩	೦
೬ ಎರಡನೇ ತರಗತಿಯ ಕಥೆ	೦	೪	೦
೭ ಸುದಾಮ ಚರಿತ್ರೆ	೦	೪	೦
೮ ಮೂರನೇ ತರಗತಿಯ ಕಥೆ	೦	೫	೦
೯ ಮಹಾತ್ಮಾ ಗಾಂಧಿ	೦	೪	೦
೧೦ ಜವಾಹರಲಾಲ ನೆಹರು	೦	೪	೦
೧೧ ಸುಭಾಸ ಚಂದ್ರ ಬೋಸ	೦	೪	೯
೧೨ ಶ್ರೀ. ರಾಮರಕ್ಷೆ	೦	೫	೦
೧೩ ಕುಮಾರ ರಾಮಣ್ಣ	೦	೬	೦
೧೪ ಕುಮಾರ ಕಿಟ್ಟಣ್ಣ	೦	೪	೦
೧೫ ಭಕ್ತ ಹನುಮಾನ	೦	೬.	೦
೧೬ ರಾಮಕೃಷ್ಣ ನೀತಿಯ ಕಥೆ	೦	೬	೦
೧೭ ಶ್ರೀ ಕೃಷ್ಣ ಚರಿತ್ರೆ	೦	೮	೦
೧೮ ಪುರಂದರ ಪದಗಳು	೦	೮	೦
೧೯ ಬದರೀ ಯಾತ್ರೆ	೦	೮	೦
೨೦ ಸತ್ಯವಾನ ಸಾವಿತ್ರಿ	೦	೮	೦
೨೧ ೪ ನೇ ತರಗತಿ ಕಥೆ	೦	೬	೦
೨೨ ರಾಷ್ಟ್ರೀಯ ಮಹಾಪುರುಷರು	೦	೧೦	೦
೨೩ ಸಂಧ್ಯಾವಂದನೆ	೦	೩	೦
೨೪ ಶಂಕರಾಚಾರ್ಯ	೦	೬	೦
೨೫ ಚಿತ್ತೂರ ಪದ್ಮಿನಿ	೦	೩	೦
೨೬ ಶಿವಾಜಿ ಚರಿತ್ರೆ	೦	೫	೦
೨೭ ಅಕಬರ ಬೀರಬಲ್ಲರ ವಿನೋದ ಕಥೆಗಳು	೦	೬	೦
೨೮ ವೆಂಕಟೇಶ ಸ್ತೋತ್ರ	೦	೫	೦
೨೯ ಜೈ ಬಲಭೀಮ	೦	೮	೦
೩೦ ಭಗವಾನ್ ಕೃಷ್ಣ (ಅಚ್ಚಿನಲ್ಲಿ)			

ನಮ್ಮ
ಎಲ್ಲ ಗ್ರಾಹಕರಿಗೂ
ದೀಪಾವಳಿಯು
ಸುಖ ಸಮೃದ್ಧಿ
ಶಾಂತಿಯನ್ನೀಯಲಿ

೧ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾಗುವದಿಲ್ಲ.

ಇದಲ್ಲದೇ ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳೂ ಸ್ಟೇಶನರೀ ಸಾಮಾನುಗಳೂ ಇತ್ಯಾದಿ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್ ಡಿಪೋ, ಹುಬ್ಬಳ್ಳಿ

ದಿ ಹಿಂದುಸ್ಥಾನ ಚಿತ್ರಮಂದಿರ, ಲಿಮಿಟೆಡ್.,

೧೦೧, ಶಿವಾಜಿನಗರ, ... ಪುಣೆ, ೫

ಡೈರೆಕ್ಟರ ಮಂಡಲ

ಶ್ರೀ. ಪಿ. ಜಿ. ಗಣಪುಲೆ, ಬರೋಡಾ (ಚೇರಮನ್)

೨. ದಿ. ಬ. ಎನ್. ಸಿ. ಲಿಮಯೇ, ಸೊಲ್ಲಾಪೂರ

೩. ಶ್ರೀ. ಎಲ್. ಎಲ್. ರಾಥಿ, ಸೊಲ್ಲಾಪೂರ

೪. ಶ್ರೀ. ಆರ್. ಪಿ. ದಾಮೋದರೇ, ಬಾರಾಮತಿ

೫. ಶ್ರೀ. ಬಿ. ಕೆ. ಹರಿಹರ, ಬೆಳಗಾವಿ

೬. ಶ್ರೀ. ಎಂ. ಎಸ್. ಕರಂದೀಕರ, ಪುಣೆ

೭. ಶ್ರೀ. ವ್ಹಿ. ಎಸ್. ಕರಂದೀಕರ, ಪುಣೆ

೮. ಶ್ರೀ. ವ್ಹಿ. ವಿ. ಮುಧೋಳಕರ, ಬೆಳಗಾವಿ

೯. ಶ್ರೀ. ಕೆ. ಎಚ್. ಹರಿಹರ, ಬೆಳಗಾವಿ

ಮ್ಯಾನೇಜಿಂಗ ಏಜಂಟರು :

ಮೆ. ಕರಂದೀಕರ ಮತ್ತು ಕಂಪನಿ, ಲಿಮಿಟೆಡ್, ಪುಣೆ.

ಸ್ವತಂತ್ರ ಹಿಂದುಸ್ಥಾನದಲ್ಲಿ ಚಲಚಿತ್ರಗಳಿಗೆ ಉಜ್ವಲ ಭವಿಷ್ಯವಿದೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಅಲ್ಲಲ್ಲಿ ಚಿತ್ರಮಂದಿರಗಳು ಹೊರಡತಕ್ಕವು ಇವೆ. ಕಳೆದ ೨೦ ವರ್ಷಗಳಿಂದ ಚಲಚಿತ್ರ ವಿತರಣ ಹಾಗೂ ಪ್ರದರ್ಶನ ವ್ಯವಸಾಯದಲ್ಲಿ ನುರಿತ ಜನರು ಈ ಸಂಸ್ಥೆಯ ಮ್ಯಾನೇಜಿಂಗ ಏಜಂಟರಾಗಿರುತ್ತಾರೆ. ಅಲ್ಲದೇ ಡೈರೆಕ್ಟರ ಮಂಡಲದಲ್ಲಿಯ ಇತರ ಜನರು ವ್ಯಾಪಾರ ಉದ್ಯೋಗದಲ್ಲಿ ಯಶಸ್ಸು ಪಡೆದವರಿರುತ್ತಾರೆ. ಮೆ. ಕರಂದೀಕರ ಮತ್ತು ಕಂ. ಲಿ. ಅವರು ಈಗಾಗಲೇ ಇಪ್ಪತ್ತಕ್ಕೆ ಮೇಲ್ಪಟ್ಟು ಚಲಚಿತ್ರ ಪ್ರದರ್ಶನ ಮಂದಿರಗಳನ್ನು ಲಾಭದಾಯಕ ರೀತಿಯಿಂದ ನಡೆಸಿದವರಿದ್ದು ಅವರ ಎಲ್ಲ ಮಂದಿರಗಳು ಈ ಸಂಸ್ಥೆಯಲ್ಲಿ ಸೇರಿರುವುದರಿಂದ ಸಂಸ್ಥೆಯು ಪ್ರಾರಂಭದ ವರುಷದಿಂದಲೇ ಪಾಲು ಬಂಡವಲದ ಮೇಲೆ ಡಿವ್ಹಿಡೆಂಡನ್ನು ಕೊಡುವ ಭರವಸೆಯಿದೆ. ಈಗ ಈ ಸಂಸ್ಥೆಯ ಚಲಚಿತ್ರ ಮಂದಿರಗಳು ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಾಂತದ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಚಲಚಿತ್ರ ಪ್ರದರ್ಶನವನ್ನು ನಡೆಸುತ್ತಿರುವುದು ಸಂತೋಷದ ಸಂಗತಿ. ಕಾರಣ ಈ ಸಂಸ್ಥೆಯಲ್ಲಿ ಹಣವನ್ನು ಪಾಲು ಬಂಡವಲದಲ್ಲಿ ತೊಡಗಿಸಿ ಯೋಗ್ಯ ಡಿವ್ಹಿಡೆಂಡನ್ನು ಪಡೆಯಬಹುದು.

ಅಧಿಕೃತ ಬಂಡವಲು : ರೂ. ೨೫,೦೦,೦೦೦ ಮಾರಾಟಕ್ಕೆ ತೆಗೆದ ಬಂಡವಲು ರೂ. ೫,೦೦,೦೦೦
ರೂ. ೧೦೦ ಗಳ ೩೦೦೦ ಸಾಮಾನ್ಯ ಶೇರುಗಳು, ರೂ. ೧೦೦ ಗಳ ೨೦೦೦ ಪ್ರಿಫರನ್ಸ ಶೇರುಗಳು.

ಪ್ರಿಫರನ್ಸ ಶೇರುಗಳಿಗೆ ನೂರಕ್ಕೆ ೫ ರಂತೆ ಡಿವ್ಹಿಡೆಂಡ ನಿಶ್ಚಿತವಿದೆ. ಅಲ್ಲದೆ ಸಾಮಾನ್ಯ ಶೇರುಗಳಿಗೆ ನೂರಕ್ಕೆ ೬ ರ ಮೇಲ್ಪಟ್ಟು ಡಿವ್ಹಿಡೆಂಡು ದೊರೆತಲ್ಲಿ ಹೆಚ್ಚಿಗೆ ದೊರೆತ ಪ್ರಮಾಣದಲ್ಲಿಯೂ ಪ್ರಿಫರೆನ್ಸ ಶೇರುದಾರರಿಗೂ ಪಾಲು ಸಿಗುವುದು.

ಈ ಸಂಸ್ಥೆಯು ಮುದ್ದತ್ತಿನ ಠೇವುಗಳನ್ನು ಸ್ವೀಕರಿಸುವುದು. ಒಂದು ವರುಷ ಅವಧಿಯ ಠೇವಿಗೆ ನೂರಕ್ಕೆ ೫ ರಂತೆ, ೨ ವರುಷ ಅವಧಿಯ ಠೇವಿಗೆ ನೂರಕ್ಕೆ ೬ ರಂತೆ ಬಡ್ಡಿಯನ್ನು ಕೊಡುವುದು.

ಪಾಲು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗೆ ಬರೆಯಿರಿ :

M/s. KARANDIKAR & COMPANY, LTD.

Managing Agents

THE HINDUSTHAN CHITRAMANDIR, LIMITED.,

101, Shivaji Nagar :: POONA. 5.

ಆಹಾರಧಾನ್ಯ ಬೆಳೆಯುವದೇ ನಿಜವಾದ ರಾಷ್ಟ್ರಕಾರ್ಯ !

ಫರ್ಗ್ಯುಸನ್ ಪದ್ಧತಿಯಿಂದ ನಿಮ್ಮ ಭೂಮಿಯಲ್ಲಿ ಹೆಚ್ಚು ಧಾನ್ಯವನ್ನು ಬೆಳೆದು ದೇಶದ ಆಹಾರ ಕೊರತೆಯನ್ನು ನೀಗಿಸಿರಿ

ಕೆಲವು ವೈಶಿಷ್ಟ್ಯಗಳು

(೧) ೨೪ ಅಶ್ವಶಕ್ತಿಯುಳ್ಳ, ಪಾವರಿನ್ನಿನ ಮೇಲೆ ನಡೆಯುವ ಇದರ ಬೆಲೆ ಕೇವಲ ೬೫೦೦-೦-೦. ಇದರ ಉಪಕರಣಗಳ ಬೆಲೆಯೂ ತೀರ ಕಡಿಮೆ.

(೨) ಇದರಿಂದ ಒಕ್ಕಲತನದ ಪ್ರತಿಯೊಂದು ಕೆಲಸವನ್ನು ಸುಲಭರೀತಿಯಿಂದ ಕಡಿಮೆ ಖರ್ಚಿನಲ್ಲಿ ಯಶಸ್ವಿಯಾಗಿ ಮಾಡಬಹುದಲ್ಲದೆ, ವಿಶೇಷ ತಾಂತ್ರಿಕ ಜ್ಞಾನದ ಅವಶ್ಯಕತೆಯೂ ಬೇಕಾಗಿಲ್ಲ.

(೩) ಗೈರಹಂಗಾಮಿನಲ್ಲಿಯೂ ಸಹ ಇದಕ್ಕೆ 'ಬೆಲ್ಟಪುಲಿ' ಮುತ್ತು ಟ್ರೇಲರ ಮುಂತಾದವುಗಳ ಜೋಡಣೆಯಿಂದ, ಅನೇಕ ಪ್ರಕಾರದ ಕಾರ್ಯಗಳನ್ನು ನಡೆಯಿಸಬಹುದಲ್ಲದೆ ಇಡೀ ವರ್ಷ ಸತತವಾಗಿ ಈ ಟ್ರಾಕ್ಟರದಿಂದ ಲಾಭ ತೆಗೆದುಕೊಳ್ಳಲು ಬರುವದು.

(೪) ಇದನ್ನು ಕೊಂಡವರಿಗೆ ೬ ತಿಂಗಳ ಗ್ಯಾರಂಟ ಕೊಡುವೆವಲ್ಲದೆ ಅವಶ್ಯವೆನಿಸಿದರೆ ನಮ್ಮ ತಜ್ಞ ಎಂಜಿನಿಯರರಿಂದ ಶಿಕ್ಷಣವನ್ನು ಕೊಡಲಾಗುವದು.

ಫರ್ಗ್ಯುಸನ್ ಟ್ರ್ಯಾಕ್ಟರನ್ನೇ ಏಕೆ ಉಪಯೋಗಿಸಬೇಕು ?

ಹೆಚ್ಚಿನ ವಿವರಗಳಿಗೆ ಬರೆಯಿರಿ ಇಲ್ಲವೆ ಭೆಟ್ಟಿಯಾಗಿರಿ

ಫರ್ಗ್ಯುಸನ್ ಟ್ರ್ಯಾಕ್ಟರ



Telegrams : DESAICO
Telephone No: 89

DESAI & COMPANY

HUBLI

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ "ಲೋಕಶಿಕ್ಷಣ ...